ಕರ್ನಾಟಕ ಸರಕಾರ

ಸಂಕೀರ್ಣ

ಲಲಿತ ಪ್ರಬಂಧಗಳು

ಅ.ರಾ.ಮಿತ್ರ

033.3NM1,1
M3

ಪ್ರಥಮ ವಿಶ್ವ ಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ 104

033,3NMI,1 885
M3
Mitra, A.R.
Lalitha prabandhagalu.

033,3NMI,1
M3

885

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

*****

Please return this volume on or before the date last stamped.
Overdue volume will be charged ten paise per day.

ಲಲಿತ ಪ್ರಬಂಧಗಳು

ಆ. ರಾ. ಮಿತ್ರ

ವಿಶ್ವ ಕನ್ನಡ ಸಮ್ಮೇಳನ
14/3ಎ, ನೃಪತುಂಗ ರಸ್ತೆ
ಬೆಂಗಳೂರು – 560 002

Lalitha Prabandhagalu—a collection by Sri A. R. Mitra, published by Sri K. Jayacharya, K.A.S., Additional Director, Directorate of Kannada and Culture (Viswa Kannada Sammelana, 14/3A, Nrupathunga Road, Bangalore-560 002. Pages XXIV—308.

033.3N mI,1
M3

© ಆಯಾಯ ಲೇಖಕರದು

First Edition
5000 Copies

ಶ್ರೀ ಕಾಶೀ ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನದ
ಜ್ಞಾನ ಮಂದಿರಕ್ಕೆ ದಾವಣಗೆರೆ ಪೇಟೆ ಬಿ. ಎಂ. ಚನ್ನಬಸಯ್ಯನವರು
ಸಮರ್ಪಿಸಿದುದು.
ತಾ. 20-1-1988 ನೇ ಬುಧವಾರ

SRI JAGADGURU VISHWARADHYA
JNANA SIMHASAN JNANAMANDIR
LIBRARY,
Jangamwadi Math, VARANASI.
Acc. No. ... 885

ಮು.
ಲೋಟಸ್ ಪ್ರಿಂಟರ್ಸ್, 4ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560010

ಆರ್. ಗುಂಡೂರಾವ್
ಮುಖ್ಯ ಮಂತ್ರಿ

ಕರ್ನಾಟಕ ಸರ್ಕಾರ

ವಿಧಾನ ಸೌಧ
ಬೆಂಗಳೂರು

ದಿನಾಂಕ ೧೮-೯-೧೯೮೨

ಸಂಕಲ್ಪ....ಸಿದ್ಧಿ

ಸುಮಾರು ಎರಡು ಸಾವಿರ ವರ್ಷಗಳಿಗೂ ಹೆಚ್ಚು ದೀರ್ಘವಾದ ಐತಿಹಾಸಿಕ ಪರಂಪರೆ ಕನ್ನಡ ನಾಡಿನದು. ಈ ಅವಧಿಯಲ್ಲಿ ಕನ ಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿಗಳು ಸಮೃದ್ಧವಾಗಿ, ಶ್ರೀಮಂತವಾಗಿ ಬೆಳೆದು, ಈ ನಾಡಿನ ಇತಿಹಾಸವನ್ನು ಭವ್ಯವಾಗಿಸಿವೆ.

ಒಂದು ನಾಡಿನ ಅಂತಃಸತ್ವ ಅಡಕವಾಗಿರುವುದೇ ಅದರ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ. ಈ ನೆಲೆಗಟ್ಟು ಭದ್ರವಾಗಿರಬೇಕಾದರೆ ಸಾಂಸ್ಕೃತಿಕ ಪರಂಪರೆ ಉತ್ಕರ್ಷಕ್ಕೆ ಏರಲು, ಔನ್ನತ್ಯ ಸಾಧಿಸಲು ನಿರಂತರವಾಗಿ ಪ್ರಯತ್ನಗಳು ನಡೆಯಬೇಕು.

ಭಾರತೀಯ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಬೆಸೆದುಕೊಂಡಿದ್ದರೂ ಕನ್ನಡ ತನ್ನದೇ ಆದ ವಿಶಿಷ್ಟ ಸಂಸ್ಕಾರಗಳನ್ನು, ಸಂಸ್ಕೃತಿಯನ್ನು ಹೊಂದಿದೆ.

ಕನ್ನಡ ನಾಡಿನ ಭವ್ಯ ಪರಂಪರೆಯನ್ನು ಜಾಗತಿಕ ಹಿನ್ನೆಲೆಯಲ್ಲಿ ಚಿತ್ರಿಸಿ, ವಿಶ್ವಕ್ಕೆ ಕನ್ನಡ ಸಂಸ್ಕೃತಿಯ ಹಿರಿಮೆಯನ್ನು ಸಾರುವ ಸದುದ್ದೇಶದಿಂದ ಪ್ರಥಮ ವಿಶ್ವ ಕನ್ನಡ ಸಮ್ಮೇಳನವನ್ನು ಕರ್ನಾಟಕದ ಪ್ರಮುಖ ಸಾಂಸ್ಕೃತಿಕ ಕೇಂದ್ರವಾದ ಮೈಸೂರಿನಲ್ಲಿ ಏರ್ಪಡಿಸಿದ್ದೇವೆ. ಇದೊಂದು ಚರಿತ್ರಾರ್ಹವಾದ ಸಂದರ್ಭವೆಂದು ನನ್ನ ನಂಬಿಕೆ. ಈ ಚರಿತ್ರಾರ್ಹ ಸಮ್ಮೇಳನ ಸಾರ್ಥಕವಾಗಲು ಮತ್ತು ಬಹುಕಾಲ ಇದರ ಸವಿ ನೆನಪು ಉಳಿಯಲು ಹಲವು ಯೋಜನೆಗಳನ್ನು ರೂಪಿಸಿದ್ದೇವೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ ಸುಲಭ ಬೆಲೆಗೆ

ಒದಗಿಸುವುದು ಈ ಯೋಜನೆಗಳಲ್ಲಿ ಒಂದು. ಇದರಂತೆ ಒಂದುನೂರಾ ಎರಡು ಕೃತಿಗಳನ್ನು, ಹದಿನೇಳು ಸಂಕಲನಗಳನ್ನು ಆಯ್ಕೆ ಮಾಡಿ ಪ್ರಕಟಿಸುತ್ತಿದ್ದೇವೆ. ಈ ಸಾಹಿತ್ಯ ಮಾಲಿಕೆಯಲ್ಲಿ ಕವನ, ಕಾದಂಬರಿ, ನಾಟಕ, ವಿಚಾರ ಸಾಹಿತ್ಯದ ಕೃತಿಗಳಲ್ಲದೆ ಕನ್ನಡ ಸಾಹಿತ್ಯದ ಸತ್ವವನ್ನು, ವೈವಿಧ್ಯವನ್ನು ಪ್ರತಿಫಲಿಸುವ ವಿವಿಧ ಬಗೆಯ ಸಂಕಲನಗಳು ಇವೆ. ಅನ್ಯ ಭಾಷಿಕರಿಗೆ ಕನ್ನಡ ಸಾಹಿತ್ಯದ ಕಂಪು ಬೀರುವಂತೆ ಕೆಲವು ಆಯ್ದ ಕೃತಿಗಳ ಇಂಗ್ಲಿಷ್ ಭಾಷಾಂತರವನ್ನು ಕೂಡ ಪ್ರಕಟಿಸುತ್ತಿದ್ದೇವೆ. ಸಾಹಿತ್ಯ ಮಾಲೆಯ ಈ ಕೃತಿರತ್ನಗಳನ್ನು ಸಹೃದಯವಾಚಕರು ಓದಿ ಆಸ್ವಾದಿಸಿದರೆ ನಮ್ಮ ಶ್ರಮ ಸಾರ್ಥಕ ; ಸಮ್ಮೇಳನ ಅರ್ಥಪೂರ್ಣವಾಗುವುದೆಂದು ನನ್ನ ಅಭಿಲಾಷೆ.

ಈ ಕೃತಿಗಳನ್ನು ಆಯ್ಕೆಮಾಡುವಲ್ಲಿ ಸಾಹಿತ್ಯ ಸಮಿತಿಯ ಪರಿಣತ ಸದಸ್ಯರು ಸಾಕಷ್ಟು ಶ್ರಮಿಸಿದ್ದಾರೆ. ಸುದೈವದಿಂದ ಕನ್ನಡದಲ್ಲಿ ಪ್ರತಿಭಾವಂತ ಲೇಖಕರ ಅಮೂಲ್ಯ ಕೃತಿಗಳಿಗೆ ಕೊರತೆ ಇಲ್ಲ. ಈ ಹಿನ್ನೆಲೆಯಲ್ಲಿ ನಿಶ್ಚಿತ ಸಂಖ್ಯೆಯಲ್ಲಿ ಸಾಹಿತ್ಯ ಕೃತಿಗಳನ್ನು ಆಯ್ಕೆ ಮಾಡುವುದು ಸುಲಭದ ಕೆಲಸವಲ್ಲ. ಆದರೂ ಬಹುಜನರಿಗೆ ಒಪ್ಪಿಗೆಯಾಗುವಂತೆ ಸಾಹಿತ್ಯ ಸಮಿತಿ ತನ್ನ ಕರ್ತವ್ಯ ನಿರ್ವಹಿಸಿದೆಯೆಂದು ಭಾವಿಸುತ್ತೇನೆ. ಈ ಸಮಿತಿಗೆ ಕೃತಜ್ಞತೆಗಳನ್ನು ಅರ್ಪಿಸುವುದು ನನ್ನ ಕರ್ತವ್ಯ. ಈ ಕೃತಿಗಳನ್ನು ಪ್ರಕಟಿಸಲು ಅನುಮತಿ ನೀಡಿ, ಲೇಖಕರು ಉಪಕರಿಸಿದ್ದಾರೆ. ಅವರ ಉದಾರ ಉಪಕಾರವನ್ನು ಈ ಸಂದರ್ಭದಲ್ಲಿ ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇನೆ.

ಈ ಗ್ರಂಥಮಾಲೆ ಕನ್ನಡಿಗರ ಮನಸ್ಸನ್ನು ತಟ್ಟಿ, ಹೃದಯಸ್ಪಂದನ ಮಾಡಿದರೆ ನಮ್ಮ ಸಂಕಲ್ಪಕ್ಕೆ ಸಿದ್ಧಿ ದೊರಕಿದಂತೆ. ಈ ಪ್ರಯತ್ನ 'ನಭೂತೋ' ಎಂದು ಹೆಮ್ಮೆಯಿಂದ ಹೇಳಬಲ್ಲೆ. ತಾಯಿ ಭುವನೇಶ್ವರಿ ಈ ಪ್ರಯತ್ನವನ್ನು ಹರಸಿ, ಮಂಗಳವುಂಟುಮಾಡಲೆಂದು ವಿನೀತ ಪ್ರಾರ್ಥನೆ ಸಲ್ಲಿಸುತ್ತೇನೆ.

ರಾ. ಗುಂಡೂರಾವ್

ಮುಖ್ಯ ಮಂತ್ರಿಗಳು

ಪ್ರಸ್ತಾವನೆ

ಲಲಿತ ಪ್ರಬಂಧಗಳನ್ನು ಮಂದಶ್ರುತಿಯ ಭಾವಗೀತೆಗಳು ಎಂದು ತೀ ನಂ ಶ್ರೀ. ಯವರು ಸೂಕ್ತವಾಗಿ ಕರೆದಿದ್ದಾರೆ. ಪ್ರಬಂಧಗಳಲ್ಲಿ ಬರಹಗಾರನ ವ್ಯಕ್ತಿತ್ವದ ಮುದ್ರೆಯಿರುತ್ತದೆ. ಆತನ ಅನಿಸಿಕೆ, ಆಲೋಚನೆ, ಚಿಂತನೆ, ಲಹರಿಗಳು ಮತ್ತು ಅಭಿಪ್ರಾಯಗಳು ಪ್ರಬಂಧದಲ್ಲಿ ರೂಪ ಪಡೆದಿರುತ್ತವೆ. ಸಾಮಾನ್ಯವಾಗಿ ಹೇಳುವುದಾದರೆ ಲಲಿತ ಪ್ರಬಂಧ ಸಂಕ್ಷೇಪಾಪೇಕ್ಷಿಯಾದ, ಕಥಾತ್ಮಕವಲ್ಲದ ಗದ್ಯಖಂಡ. ಪ್ರಬಂಧಕಾರ ವಿವರಣಕಾರನಲ್ಲ. ಸಮಾಜ ತತ್ವಚಿಂತಕ, ವಿಮರ್ಶಕ ಮತ್ತು ಟಿಪ್ಪಣಿಕಾರ. ತನ್ನ ಜರಡಿಯಲ್ಲಿ ಚಿನ್ನದ ಕಣಗಳು ಮಾತ್ರ ಉಳಿದುಕೊಳ್ಳುವ ತನಕ ಜರಡಿಯಾಡುತ್ತಲೇ ಹೋಗುವ ಸ್ವರ್ಣಶೋಧಕನಂತೆ ಪ್ರಬಂಧಕಾರ ವಿಚಾರಗಳೊಂದಿಗೆ ಆಟವಾಡುತ್ತ ಹೋಗುತ್ತಾನೆ. ಈತ ಎಲ್ಲರಿಗಾಗಿ ಬರೆಯುವುದಿಲ್ಲ. ಸಮಾನ ಅಭಿರುಚಿ, ಸಂಸ್ಕಾರಗಳುಳ್ಳ ವರ್ಗಕ್ಕೆ ಮಾತ್ರ ಈತನ ಬರಹ ರುಚಿಸುತ್ತದೆ. ಆದ್ದರಿಂದ ಈತನ ಬಳಗದ ಸದಸ್ಯರು ಜನಪ್ರಿಯ ವರ್ಗದವರಲ್ಲದಿದ್ದರೂ ಸಂಭಾವಿತ ವರ್ಗದವರು. ಕನ್ನಡ ಲಲಿತ ಪ್ರಬಂಧಕಾರರು ಯಾವುದೇ ರೀತಿಯಲ್ಲಿ ಬರೆದಿರಲಿ ಅವರ ಚಿಂತನೆಗಳಲ್ಲಿ ಒಂದು ಒಳಸೂತ್ರ ಇದೆ. ಒಂದು ತಾತ್ವಿಕ ನಿಲುವು ಇದೆ. ಅದು ಕೆಲವೆಡೆ ತಟಕ್ಕನೆ ಗೋಚರವಾಗದಿರಬಹುದು. ಕೆಲವೆಡೆ ಹಾಸ್ಯ ವ್ಯಂಗ್ಯಗಳ ಮುಖವಾಡದಿಂದ ಬೆಳಗಿರಬಹುದು. ಕೆಲವೆಡೆ ವಾಗ್ವೈಭವದಿಂದ ಬೀಗಿರಬಹುದು. ಆದರೆ ಬರಿಯ ಮನರಂಜನೆಗೆ ಮಾತ್ರ ಇವರು ಬರೆಯುವುದಿಲ್ಲ. ಒಂದು ಗಂಭೀರವಾದ ನೈತಿಕ ಉದ್ದೇಶ ಇವರನ್ನು ಬರೆಯಲು ತೊಡಗಿಸಿದೆ ಎಂಬುದನ್ನು ಮರೆಯಬಾರದು. ಚಳಿಯಲ್ಲಿ ಅಗ್ನಿಷ್ಟಿಕೆಯ ಬದಿಯಲ್ಲಿ ಮೈಕಾಯಿಸಿಕೊಳ್ಳುತ್ತ ಹರಟೆಗೆ ಕುಳಿತವರ ಮಾತಿನಂತೆ ಲಲಿತ ಪ್ರಬಂಧಕಾರನ ಬರಹಗಳಲ್ಲಿ ಒಂದು ಬಗೆಯ ಸ್ನೇಹವಲಯ ಮತ್ತು ಆತ್ಮೀಯತೆ ಇರುತ್ತದೆ. ಈ ಪ್ರಬಂಧಗಳ ವೈವಿಧ್ಯ ಬೆರಗುಗೊಳಿಸುವಂಥದು. ಪ್ರಬಂಧಕಾರ ತನಗೆ ರುಚಿಸಿದ್ದನ್ನು ಪ್ರಾಮಾಣಿಕವಾಗಿ ಬರೆಯಲು ತೊಡಗುವುದರಿಂದ ಆ ಬರಹಗಳ ವಸ್ತು, ಶೈಲಿ ಮತ್ತು ನಿರ್ವಹಣೆಗಳಲ್ಲಿ ವೈವಿಧ್ಯ

ತರುವುದು ಆತನ ವ್ಯಕ್ತಿತ್ವದಿಂದಾಗಿ ಸಾಧ್ಯವಾಗುತ್ತದೆ. ಈತನ ಶೈಲಿ ತುಸು ಚಿಂತನ ದೀಪ್ತಿಪಡೆದು ತುಸು ಆತ್ಮೀಯ ಸಂಭಾಷಣೆಯ ಮೆರುಗಿನಿಂದ ಕೂಡಿರುವುದರಿಂದ ಮನಸ್ಸನ್ನು ಆಕರ್ಷಿಸುತ್ತದೆ ಒಂದು ಲಲಿತ ಪ್ರಬಂಧ ವನ್ನು ಓದುವುದೆಂದರೆ ಒಬ್ಬ ಬಹುಶ್ರುತನಾದ, ಲೋಕ ಸಂಸ್ಕಾರ ಪಡೆದ ವ್ಯಕ್ತಿಯೊಂದಿಗೆ ಹರಟೆಯಲ್ಲಿ ಭಾಗವಹಿಸಿದಂತೆ. ಹೃದಯ ಸಂವಾದವನ್ನು ಸ್ಥಾಪಿಸಬಲ್ಲ ಶೈಲಿ, ನೇರ ಸಂಕ್ಷಿಪ್ತ ನುಡಿಗಾರಿಕೆ, ಗಾದೆ, ಪಡೆಮಾತು ಅನ್ಯಕವಿ ಸೂಕ್ತಿ ಆತ್ಮೀಯ ಉಪಮೆ, ಸೂಕ್ತಕಥಾಂಗಗಳಿಂದ ಇಡಿಕಿರಿದ ವಾಕ್ಯಮಾಲೆ—ಇವುಗಳಿಂದಾಗಿ ಪ್ರಬಂಧ ಬರಹಗಳು ಆಸಕ್ತಿಯನ್ನು ಕೆರಳಿಸು ತ್ತವೆ. ಪ್ರಬಂಧದಲ್ಲಿ ಉಪದೇಶವಿರುತ್ತದೆ. ಆದರೆ ಅದು 'ಸದ್ಬೋಧವಚನಾ ಮೃತ' ವಾಗಬಾರದು. ಓದಲು ಸುಗಮವಾಗಿರಬೇಕು, ಉಲ್ಲಾಸದಾಯಕ ವಾಗಿರಬೇಕು, ನೆನಪಿನಲ್ಲಿ ಉಳಿಯುವಷ್ಟು ಸರಾಗವಾಗಿರಬೇಕು ಎಂಬ ನಿಯಮ ಗಳಿಂದ ಯಾವ ಪ್ರಬಂಧವೂ ವಂಚಿತವಾಗಿರಕೂಡದು. ಎರ್ನೆಸ್ಟ್ ರೈಸ್ ಹೇಳುವಂತೆ ಲಲಿತ ಪ್ರಬಂಧಕಾರರು ಡೈಲ್ಯೂಟ್ ಲಿರಿಸ್ಟ್ (Dilute Lyrists) ಎನ್ನಿಸಿಕೊಂಡು ಮಾತು ಬರಹಗಳ ಮಧ್ಯದ ಒಂದು ನಿಲುವಿನ ಶೈಲಿಯನ್ನು ಪಳಗಿಸಿಕೊಂಡವರಾಗಿರುತ್ತಾರೆ. "It is myself I portray" ಎಂದು ಫ್ರಾನ್ಸಿಸ್ ಬೇಕನ್ ಸ್ಪಷ್ಟವಾಗಿ ಸಾರಿದ. ಉಳಿದ ಎಲ್ಲ ಪ್ರಬಂಧಕಾರರೂ ಪ್ರಜ್ಞಾ ಪೂರ್ವಕವಾಗಿಯೋ ಅಥವಾ ಅಪ್ರಜ್ಞಾಪೂರ್ವಕವಾಗಿಯೋ ಅದೇ ನಿಲುವನ್ನು ತಾಳಿದ್ದಾರೆ, ಅವರ ಆತ್ಮಾಭಿವ್ಯಕ್ತಿಯ ರೀತಿಗಳು ಅವರು ಕಾಣಿಸಿರುವ ವ್ಯಕ್ತಿತ್ವದರ್ಶನಗಳಷ್ಟೇ ವೈವಿಧ್ಯಮಯವಾಗಿವೆ. ಈ ಕಾರಣ ದಿಂದಲೇ ಇಂಥ ಪ್ರಬಂಧಗಳನ್ನು "Leisurely revelations of a vivid personality (ಸಿ. ಹೆನ್ರಿ ವಾರೆನ್) ಎನ್ನಲಾಗಿದೆ. ಪ್ರದರ್ಶನಗಾರಿಕೆಯ ಸೋಗು ಕೂಡ ಹಾಕದೆ, ಓದುಗರನ್ನು ವಿಶ್ವಾಸಕ್ಕೆ ತೆಗೆದುಕೊಂಡು ತನ್ನ ವ್ಯಕ್ತಿತ್ವದ ಸುಳುಹುಗಳನ್ನು ಅಭಿವ್ಯಕ್ತಿಗೊಳಿಸುವ ಕೌಶಲ ಪ್ರಬಂಧಕಾರನದು.

ಲಲಿತಪ್ರಬಂಧಕಾರ ಯಾವ ವಸ್ತುವನ್ನೇ ತೆಗೆದುಕೊಳ್ಳಲಿ ಅದನ್ನು ಆತ್ಮೀಯವಾದ, ಲೋಕಾಭಿರಾಮವಾದ ಸೋಗಿಲ್ಲದ, ಜೀವಂತಿಕೆಯಿಂದ ನಿರ್ವಹಿಸುತ್ತಾನೆ. ವ್ಯವಸ್ಥೆ ಒಪ್ಪ ಓರಣಗಳಿಗಿಂತ ಹೆಚ್ಚಾಗಿ ಅವನ ಬಂಧದಲ್ಲಿ ಚೆಲ್ಲಾಟದ ವಿಷಯಾಂತರದ ಸಡಿಲವಾದ ದಾರಗಳೇ ಇರುತ್ತವೆ. ಓದುಗನನ್ನು

ಗೆಲ್ಲುವ ಅಥವಾ ಮಂತ್ರಮುಗ್ಧನನ್ನಾಗಿ ಮಾಡುವ ಬಯಕೆಗಿಂತ ಹೆಚ್ಚಾಗಿ ತನ್ನ ಅಲೆಮಾರಿ ಚಿಂತನಗಳೊಂದಿಗೆ ಓದುಗನನ್ನು ಸಹ ಪ್ರಯಾಣಿಕನನ್ನಾಗಿ ಮಾಡಿಕೊಳ್ಳುವ ಕಾತರ ಇರುತ್ತದೆ. 'ಉಯ್ಯಾಲೆಯಲ್ಲಿ ತೂಗಿಕೊಳ್ಳ ಬಯಸುವ ತತ್ವಜ್ಞಾನಿ' ಎಂಬ ಖ್ಯಾತಿಗೆ ಗುರಿಯಾಗಿರುವ ಪ್ರಬಂಧಕಾರ ಗಂಭೀರ ಚಿಂತನೆಯಲ್ಲಿ ಓದುಗರನ್ನು ದಿಕ್ಕುಗೆಡಿಸುವುದಿಲ್ಲ. "ಸಂಭಾವಿತನಾಗಿ ಬರೆಯಲು ಹೊರಟಾಗ ಎಷ್ಟು ಗಾಂಭೀರ್ಯ ತರಬಹುದೋ, ಲೋಕಾಭಿ ರಾಮವಾಗಿ ಹರಟಲು ಹೊರಟಾಗ ಅದಕ್ಕಿಂತ ಹೆಚ್ಚು ಗಾಂಭೀರ್ಯ ತರುವುದು ನನಗೆ ಸಾಧ್ಯವಾಗಿದೆ" ಎಂಬ ಡ್ರೈಡನ್‌ನ ಮಾತು ಪ್ರಬಂಧದ ಬರವಣಿಗೆಗೆ ಒಂದು ದಿಕ್ಸೂಚಿಯಾಗಿದೆ. ಅನೇಕ ಕನ್ನಡ ಪ್ರಬಂಧಕಾರರು ಈ ಒಂದು ಕಲಾ ಪ್ರಕಾರಕ್ಕೆ ತಮ್ಮೆಲ್ಲ ಸಾಧನ ಸಂಪತ್ತುಗಳನ್ನು ಧಾರೆಯೆರೆದಿದ್ದಾರೆ, ತಮ್ಮ ಬೌದ್ಧಿಕತೆ, ಹಾಸ್ಯ ಮೆರುಗು ಕೌಶಲಗಳ ಪುಷ್ಟಿ ನೀಡಿದ್ದಾರೆ.

'ಲಲಿತ ಪ್ರಬಂಧ', ನಮ್ಮ ಇತರ ಅನೇಕ ಬರಹಗಳ ಪ್ರಕಾರಗಳಂತೆ ಇಂಗ್ಲೀಷಿನಿಂದ ಬಂದದ್ದು. 1603 ರಲ್ಲಿ ಮಾನ್‌ತೇನನ ಫ್ರೆಂಚ್ ಪ್ರಬಂಧ ಗಳನ್ನು ಫ್ಲೋರಿಯೋ ಎಂಬಾತ ಇಂಗ್ಲಿಷಿಗೆ ಅನುವಾದಿಸಿ ಪ್ರಕಟಿಸಿದಾಗ ಈ ಬಗೆಯ ವಿಶಿಷ್ಟ ಪ್ರಕಾರ ಆರಂಭವಾಯಿತು ಎನ್ನಬಹುದು. ಮಾನ್‌ತೇನ ನನ್ನು ಅನುಸರಿಸಿ ಹಲವಾರು ಪ್ರಬಂಧಗಳನ್ನು ಬರೆದ ಫ್ರಾನ್ಸಿಸ್ ಬೇಕನ್ ನನ್ನು ಈ ಕಲಾಪ್ರಕಾರದ ಜನಕ ಎನ್ನುತ್ತಾರೆ. ಮುಂದೆ 1950 ರ ವರೆಗೆ ಈ ಬಗೆಯ ಬರೆಹ ಎಡವುತ್ತ ಕುಂಟುತ್ತ ಅದ್ಭುತ ಬೆಳವಣಿಗೆಯನ್ನು ಪಡೆದು ಸಾಗಿತು. ಜಾನ್‌ಸನ್, ಗೋಲ್ಡ್‌ಸ್ಮಿತ್, ಹ್ಯಾಸ್‌ಲಿಟ್, ಛಾರಲ್ಸ್‌ಲ್ಯಾಮ್, ಅಡಿಸನ್, ಸ್ಟೀಲ್, ಅಬ್ರಹಾಂಕೌಲಿ, ಪೋಪ್, ಸ್ವಿಫ್ಟ್, ಮೇರಿ ರಸೆಲ್ ಮಿಟ್‌ಫೋರ್ಡ್, ಕೋಲ್‌ರಿಜ್, ಡಿಕ್ವಿನ್ಸಿ, ಲೀಹಂಟ್, ಕಾರ್ಲೈಲ್, ಆಸ್ಟಿನ್‌ಡಾಬ್‌ಸನ್, ಚೆಸ್ಟರ್‌ಟನ್, ಇ. ವಿ. ಲ್ಯೂಕಾಸ್, ಗ್ರೇಸ್‌ರ್ಹೈಸ್, ಹಿಲಾರಿ ಬೆಲಕ್ ಮೊದಲಾದವರು ತಮ್ಮೆಲ್ಲ ಮಾತುಗಾರಿಕೆ ಬಣ್ಣಗಾರಿಕೆ ಗಳಿಂದ ಲಲಿತ ಪ್ರಬಂಧವನ್ನು ವೈವಿಧ್ಯಮಯವಾಗಿ ಸುಪುಷ್ಟವಾಗಿ ಬೆಳಸಿದರು.

ಕನ್ನಡದ ಮೊದಲ ಪ್ರಬಂಧಕಾರರುಗಳೆಂದರೆ ಮುದ್ದಣ ಮತ್ತು ಪಂಜೆ ಮಂಗೇಶರಾಯರು. ಅಲ್ಲೊಂದು ಇಲ್ಲೊಂದು ಎಂಬಂತೆ ಬಿಡಿ ಬರಹಗಳಾಗಿ

ಕಾಣಿಸಿಕೊಂಡ ಪ್ರಬಂಧ ಪರಂಪರೆ ವಿ. ಸೀ. ಎ ಎನ್ ಮೂರ್ತಿರಾವ್ ಮತ್ತು ಅವರ ಸಮಕಾಲೀನರ ಬರಹಗಳಿಂದ ಶ್ರೀಮಂತಿಕೆಯನ್ನು ಪಡೆಯಿತು.

ಈ ಸಂಕಲನದಲ್ಲಿ ಶುದ್ಧ ಭಾವ ಪ್ರಬಂಧಗಳು ಅಥವಾ ಲಲಿತ ಪ್ರಬಂಧಗಳು ಎಂದು ನಿರ್ದೇಶಿಸಬಹುದಾದ ಕೃತಿಗಳನ್ನು ಮಾತ್ರ ಆರಿಸಲಾಗಿದೆ. ಹರಟೆ, ಪ್ರಬಂಧ ಎರಡೂ ಒಂದರ ಗಡಿಯಲ್ಲಿ ಇನ್ನೊಂದು ನುಸುಳಬಲ್ಲ ಸಾಮರ್ಥ್ಯ ಹೊಂದಿರುವುದರಿಂದ ಮತ್ತು ಹರಟೆಯ ಸಂಕಲನಗಳಲ್ಲೂ ಲಲಿತ ಪ್ರಬಂಧಗಳಿರುವುದು ಕಂಡು ಬಂದದ್ದರಿಂದ ಈ ಮುನ್ನುಡಿಯಲ್ಲಿ ಎರಡೂ ಪ್ರಕಾರಗಳು ನಮ್ಮಲ್ಲಿ ಬೆಳೆದು ಬಂದ ಬಗೆಯನ್ನು ಸಿಂಹಾವಲೋಕನ ಮಾಡಲಾಗಿದೆ.

ಹರಟೆ–ಪ್ರಬಂಧಗಳು ಕನ್ನಡದಲ್ಲಿ ಹತ್ತಾರು ಉತ್ತಮ ಬರೆಹಗಾರರನ್ನು ಸೆಳೆದು ತಂದ ಬರಹದ ಮಾಧ್ಯಮಗಳಾಗಿವೆ. ಪ್ರಬುದ್ಧ ಕರ್ಣಾಟಕ, ಜಯಕರ್ನಾಟಕ, ಜಯಂತಿ, ಕೊರವಂಜಿ, ವಿನೋದ, ವಿಕಟವಿನೋದಿನಿ, ನಗುವನಂದ ಮೊದಲಾದ ಪತ್ರಿಕೆಗಳು ಮತ್ತು ಕನ್ನಡದಲ್ಲಿ ವಿಶಿಷ್ಟವಾದ ವಾರ್ಷಿಕೋತ್ಸವಗಳನ್ನು ಸಾಹಿತ್ಯ ಪುರವಣಿ, ವಿಶೇಷ ಸಂಚಿಕೆಗಳ ರೂಪದಲ್ಲಿ ಆಚರಿಸುವ ಪತ್ರಿಕೆಗಳು, ನಿಯತಕಾಲಿಕೆಗಳು ಹರಟೆ–ಪ್ರಬಂಧಗಳ ಚಾಲನೆಗೆ ತುಂಬ ಸಹಕಾರ ನೀಡಿವೆ. ಹೀಗಾಗಿ ಲಲಿತ ಪ್ರಬಂಧಗಳು, ಹರಟೆಗಳು ಬಹಳ ಬೇಗ ಓದುಗರನ್ನು ಆಕರ್ಷಿಸುತ್ತ ಹೊಸಹೊಸ ದಾರಿಗಳನ್ನು ಹುಡುಕಿಕೊಂಡು ವೈವಿಧ್ಯಮಯವಾಗುತ್ತ ಮುನ್ನಡೆದವು. ಈ ಕಲಾಪ್ರಕಾರದ ಲಕ್ಷಣಗಳ ವಿವರಣೆ ಕನ್ನಡದಲ್ಲಿ ಅಗಾಧ ಪ್ರಮಾಣದಲ್ಲಿ ಸಾಗಿರುವುದು ಮೆಚ್ಚತಕ್ಕ ವಿಷಯವಾಗಿದೆ. ಮುನ್ನುಡಿಗಳ ರೂಪದಲ್ಲಿ ಬಹುಮಟ್ಟಿಗೆ ಎಲ್ಲ ಪ್ರಸಿದ್ಧ ಸಾಹಿತಿಗಳೂ ಈ ಸಾಹಿತ್ಯ ಪ್ರಕಾರಗಳ ಸ್ವರೂಪವನ್ನು ಕುರಿತು ಪ್ರಾಸಂಗಿಕವಾಗಿ ಚರ್ಚೆ ಮಾಡಿರುವುದು ಒಂದು ವಿಶೇಷ ಸಂಗತಿಯಾಗಿದೆ. 'ಸುಳವು–ಹೊಳವು', 'ಹೊಸಗನ್ನಡ ಪ್ರಬಂಧ ಸಂಕಲನ', 'ಮುತ್ತು ಹವಳ', 'ಹರಟೆಗಳು' (ಜಯಕರ್ನಾಟಕ ಗ್ರಂಥಮಾಲೆ), 'ನಗೆ ದಿಗಂತ', 'ಬಾಲ ಸರಸ್ವತಿ', 'ಪಂಚಾಮೃತ', 'ಹಾಸ್ಯ ಪ್ರಬಂಧಗಳು' ಮುಂತಾದ ಹಲವಾರು ಪ್ರಬಂಧ–ಹರಟೆಗಳ ಸಂಕಲನ ಗ್ರಂಥಗಳು ಹೊರಬಿದ್ದಿವೆ. 'ಸಮರ್ಪಣೆ' ಎಂಬ ನೆನಪಿನ ಹೊತ್ತಗೆಯಲ್ಲಿ ಕಡಂಗೋಡ್ಲು ಶಂಕರಭಟ್ಟರು 'ಕನ್ನಡದಲ್ಲಿ

ಪ್ರಬಂಧ ವ್ಯವಸಾಯ'ದ ಬಗೆಗೆ ಬರೆಯುತ್ತಾ ಈ ಪ್ರಕಾರದ ಬರಹಗಳ ಬಗೆಗೆ ನಾಲ್ಕು ಮಾತು ಹೇಳಿದ್ದಾರೆ. ಮಿರ್ಜಿ ಅಣ್ಣಾರಾಯರು (ಲೇಖನ ಕಲೆ) ಧಾರವಾಡಕರರು (ಸಾಹಿತ್ಯ ಸಮೀಕ್ಷೆ), ಬಿ. ಎಚ್. ಶ್ರೀಧರ ಮತ್ತು ಹಂ. ಪ. ನಾಗರಾಜಯ್ಯ (ಕನ್ನಡ ನುಡಿ–ಬೆಳ್ಳಿಯ ಸಂಚಿಕೆ) ಮೊದಲಾದವರು ಈ ಬರೆಹಗಳ ಐತಿಹಾಸಿಕ ಬೆಳವಣಿಗೆಯನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ವರದರಾಜ ಹುಯಿಲಗೋಳರು 'ಲಲಿತ ಪ್ರಬಂಧಗಳು' ಎಂಬ ಸಣ್ಣ ಹೊತ್ತಗೆಯನ್ನು ಪ್ರಕಟಿಸಿ ಈ ಸಾಹಿತ್ಯ ವಿಭಾಗದಲ್ಲಿ ನಡೆದಿರುವ ಕೃಷಿಯ ಪರಿಚಯ ಮಾಡಿಕೊಟ್ಟಿದ್ದಾರೆ. ವೀರೇಂದ್ರ ಸಿಂಪಿ ಮತ್ತು ವಸಂತ ಕುಮಾರ್ ಇವರುಗಳು ಪ್ರಬಂಧ ಸಾಹಿತ್ಯದ ಬಗೆಗೆ ಉತ್ತಮ ಗ್ರಂಥಗಳನ್ನು ಬರೆದಿದ್ದಾರೆ. ಕನ್ನಡದ ಎಲ್ಲ ಪ್ರಸಿದ್ಧ ಪ್ರಬಂಧಕಾರರೂ, ಸಾಹಿತ್ಯ ವಿಮರ್ಶಕರೂ ತಮ್ಮ ಅಥವಾ ಬೇರೆಯವರ ಪ್ರಬಂಧಗಳಿಗೆ ಮುನ್ನುಡಿಯ ರೂಪದಲ್ಲಿ ತಮ್ಮ ಚಿಂತನವನ್ನು ಹರಿಯಬಿಟ್ಟಿದ್ದಾರೆ. ರಾ. ಕು. ಅವರ 'ಗಾಳಿಪಟ' ಮತ್ತು ಪಡುಕೋಣೆ ರಮಾನಂದರಾಯರ 'ಹುಚ್ಚು ಬೆಳುದಿಂಗಳಿನ ಹೂ ಬಾಣಗಳು' ಇವಕ್ಕೆ ಬೇಂದ್ರೆಯವರು ಬರೆದಿರುವ ಮುನ್ನುಡಿ ಗಮನಾರ್ಹವಾಗಿದೆ. ಎ. ಎನ್. ಮೂರ್ತಿರಾವ್ ('ಪುರಸೊತ್ತಿನ ಹವ್ಯಾಸಗಳು') ವಿ. ಸೀತಾರಾಮಯ್ಯ ('ಸುಳಿಗಾಳಿ'), ವಿ. ಕೃ. ಗೋಕಾಕ ('ಕೋದಂಡನ ಉಪನ್ಯಾಸಗಳು'), ಕೆ. ವಿ. ಕೃಷ್ಣಭಟ್ಟ (ಒಗ್ಗರಣೆ'), ಜಿ. ವೆಂಕಟ ಸುಬ್ಬಯ್ಯ ('ಧೂಮಲೀಲೆ ಮತ್ತು ಮುಗಿಲುಗಳು', 'ಬಾಲ್ಕನಿಯ ಬಂಧುಗಳು') —ಇವರುಗಳ ಮುನ್ನುಡಿಗಳು ಆಯಾ ಲೇಖಕರ ಹಾಗೂ ಈ ಬರೆಹದ ಜಾತಿಯ ಸಾಧನೆ ಸ್ವರೂಪಗಳನ್ನು ಗೊತ್ತುಪಡಿಸಲು ಪ್ರಯತ್ನಿಸಿವೆ. ಅಲ್ಲದೆ ಕೀರ್ತಿನಾಥ ಕುರ್ತಕೋಟಿ ('ಸಾವಧಾನ'), ರಾಶಿ ('ಸುಳಿನಗು' ಕು. ಶಿ. ಹರಿದಾಸಭಟ್ಟ ('ಚಾರುಚಯನ'), ಕೆ. ಎಸ್. ನರಸಿಂಹಸ್ವಾಮಿ ('ಮರೆಯದ ನೆನಹುಗಳು'), ಕೆ. ಆರ್. ಮಹಿಷಿ ('ನಿರಾಭರಣ ಸುಂದರಿ'), ಪು.ತಿ.ನ. ('ನಮ್ಮ ಮನೆಯ ದೀಪ') ಮೊದಲಾದವರು ಮುನ್ನುಡಿಗಳ ನೆಪದಿಂದ ಈ ಸಾಹಿತ್ಯ ಪ್ರಕಾರದ ಪ್ರಗತಿಯನ್ನು ಗುರುತಿಸಿದ್ದಾರೆ. ಎಸ್. ವಿ. ಪರಮೇಶ್ವರ ಭಟ್ಟರ ಇಂಗ್ಲಿಷ್ ಪ್ರಬಂಧಗಳಿಗೆ ಪೋಷಕವಾಗಿ ಶಾಮರಾಯರು ಬರೆದಿರುವ 'ಪ್ರೌಢ ಪ್ರಬಂಧ', ಆರಯ್ಯ, ಎಂ. ರಾಮರಾವ್, ಎಸ್. ಮಂಜನಾಥ್

ಇವರುಗಳ 'ಪ್ರಬಂಧ ಜಿಜ್ಞಾಸೆ' ಉಪಯುಕ್ತ ಮಾಹಿತಿಯನ್ನೊದಗಿಸಿವೆ. ಎ. ಎನ್. ಮೂರ್ತಿರಾಯರ 'ಹರಟೆ ಮಲ್ಲ', 'ಹರಟೆ ಮತ್ತು ಪ್ರಬಂಧ' ಎಂಬ ಎರಡು ಲೇಖನಗಳು, ಎಚ್ಚೆಸ್ಕೆಯವರ 'ಕನ್ನಡದಲ್ಲಿ ಹರಟೆಯ ಸ್ಥಾನ' ಬೇಂದ್ರೆಯವರ 'ಹರಟೆಗೆ ಮುಂಚೆ ಹರಟೆ' ಎಂಬ ವಿಶೇಷ ಲೇಖನಗಳು ಓದುಗರಿಗೆ ನೆರವಾಗುತ್ತವೆ.

ಹರಟೆ, ಪ್ರಬಂಧಗಳು ಬಲುಮಟ್ಟಿಗೆ ಗದ್ಯರಚನೆಗಳು. ಹರಟೆಯಲ್ಲಿ ಮಾತುಗಾರಿಕೆ ವಾಚಾಳತ್ವದ ಮಟ್ಟವನ್ನು ಮುಟ್ಟಿದರೆ ಪ್ರಬಂಧದಲ್ಲಿ ವಾಗ್ಮಿತೆಯ ಸೀಮೆಯಲ್ಲಿ ನಿಲ್ಲುತ್ತದೆ. ಹರಟೆಯನ್ನು ಯೌವನದಿಂದ ತುಂಬಿ ತುಳುಕುವ ಮುಗ್ಧೆಯ ಕಣ್ಣಿಗೆ ಎ.ಎನ್. ಮೂರ್ತಿರಾಯರು ಹೋಲಿಸಿದ್ದಾರೆ. "ಪೂರ್ವಾನುಭವಗಳೆಂಬ ಸ್ವಪ್ನಾವರಣದಲ್ಲಿ ಪೋಲಿಪೋಲಿಯಾಗಿ ತಿರುಗುವುದೇ ಹರಟೆ" ಎಂದು ಕುವೆಂಪು ಹೇಳುತ್ತಾರೆ. ಇದು ಹರಟೆಯ ಸ್ವರೂಪವಾದರೆ ಪ್ರಬಂಧ ಎಂದರೆ "ಲೇಖಕನು ವಾಚಕನೊಂದಿಗೆ ನಿಸ್ಸಂಕೋಚವಾಗಿ ಆತ್ಮೀಯಭಾವದಿಂದ ನಡೆಸುವ ಬರಹ ರೂಪದ ಸಂಭಾಷಣೆ" ಎಂದು ಗೊರೂರ್ ಹೇಳುತ್ತಾರೆ. ಪ್ರಬಂಧ ರಚನೆ 'ಮನಸ್ಸಿನ ಒಲವು, ಓಟ, ಆಕಾಂಕ್ಷೆಗಳನ್ನು ನೇಯುವ ಒಂದು ಕ್ರಮ' ಎಂದು ವಿ.ಸೀ. ಸೂಚಿಸಿದ್ದಾರೆ. ಪ್ರಬಂಧಕಾರರು ಸಾಮಾಜಿಕ ಚಿಂತನದೊಂದಿಗೆ ಆತ್ಮವೃತ್ತದ ಮಧುರಸ್ಮೃತಿಗಳನ್ನು ಬೆರಸುವ ಬಗೆ ಕೆಲವರು ವಿಮರ್ಶಕರ ಮನಸ್ಸನ್ನು ಸೆಳೆದಿದೆ. ಒಟ್ಟಿನಲ್ಲಿ ಪ್ರಬಂಧ ಒಂದು ವ್ಯಕ್ತಿಗತ ಆತ್ಮಾನುಭವ. ಪ್ರಬಂಧಕಾರನು ಇಂಥ ಜೀವಂತ ಅನುಭವವನ್ನು ನೀಡಿ ಅಂತಃಕರಣವನ್ನು ಜಾಗೃತಗೊಳಿಸುತ್ತಾನೆ.

ಹರಟೆಗಾರರ ಗುಂಪು ದೊಡ್ಡದು. ನಾ. ಕಸ್ತೂರಿ, ಗೊರೂರ್, ಸಿದ್ದವನಹಳ್ಳಿ ಕೃಷ್ಣಶರ್ಮ, ಬೇಂದ್ರೆ, ಆನಂದಕಂದ, ಶ್ರೀರಂಗ, ಕಾರಂತ, ರಾಶಿ, ನಾಡಿಗೇರ ಕೃಷ್ಣರಾಯ, ಬೀಚಿ, ಜಿ. ಪಿ. ರಾಜರತ್ನಂ, ಅ.ರಾ.ಸೇ., ದಾಶರಥಿ ದೀಕ್ಷಿತ್, ನಾಡಿಗೇರ ಗೋವಿಂದರಾಯ, ಭಾರತೀಪ್ರಿಯ, ಎನ್.ಕೆ., ಅಷ್ಟಾವಕ್ರ, ವಿ. ಕೆ. ದೊರೆಸ್ವಾಮಿ, ಹಾ.ರಾ., ಎಂ. ಎಸ್. ನರಸಿಂಹಮೂರ್ತಿ, ಎಚ್. ಎಲ್. ಕೇಶವಮೂರ್ತಿ, ಎನ್. ವಿ. ರಾವ್ ಮುಂತಾದವರ ಹೆಸರುಗಳನ್ನು ಅವಶ್ಯವಾಗಿ ನೆನೆಯಬೇಕು.

ಉಪಾಯ ವೇದಾಂತ, ಅಲ್ಲೋಲಕಲ್ಲೋಲ ಮೊದಲಾದ ಹರಟೆಗಳ ಮೂಲಕ ಕನ್ನಡ ವಾಚಕರಿಗೆ ಹಾಸ್ಯಲೋಕದ ಬಣ್ಣಬಣ್ಣದ ಚಿಲುಮೆಗಳ ದರ್ಶನ ಮಾಡಿಸಿದ ಕೀರ್ತಿ ನಾ. ಕಸ್ತೂರಿಯವರಿಗೆ ಸಲ್ಲಬೇಕು. ಕಥನ ಸತ್ವವನ್ನು ತುಂಬಿ ವಿರೋಧಾಭಾಸಗಳಿಂದ ಕೂಡಿದ ಹುಚ್ಚುವಿನೋದವೇ ಪ್ರಮುಖವಾದ ಸುಂದರ ಲಘು ಬರಹಗಳನ್ನು ನಾ. ಕಸ್ತೂರಿ ನೀಡಿದ್ದಾರೆ. ಅವರ ಹರಟೆಗಳಲ್ಲಿ ಕನ್ನಡ ಭಾಷೆಯ ವಿಶಿಷ್ಟ ಅರ್ಥವ್ಯಕ್ತಿ ; ಕವಿಗಳ, ಜನರ ವ್ಯವಹಾರದ ಮಾದರಿ ; ಸಮಾಜದ ಸ್ತಂಭಗಳಂತೆ ನಟಿಸುವ ವ್ಯಕ್ತಿಗಳ ಒಳ ಟೊಳ್ಳು—ಇವನ್ನೆಲ್ಲಾ ಕಿಡಿಗೇಡಿ ದೃಷ್ಟಿಯಿಂದ ಕಂಡು ನಗೆಯ ಬುಗ್ಗೆಯನ್ನೆ ಬ್ಬಿಸುವ ಟೀಕಾದೃಷ್ಟಿಯಿದೆ. ಗೊರೂರರ 'ಬೈಲಹಳ್ಳಿಯ ಸರ್ವೆ', 'ಗರುಡ ಗಂಬದ ದಾಸಯ್ಯ' ಮೊದಲಾದ ಸಂಕಲನಗಳಲ್ಲಿ ಹರಟೆಗೆ ಕಳೆ ತರಲು ಪ್ರಕೃತಿಯ ಎಲ್ಲ ಅಂಗಗಳನ್ನೂ ಎಬ್ಬಿಸಿ ಹದಗೊಳಿಸಿರುವ ಜಾಣ್ಮೆಯನ್ನು ಕಾಣಬಹುದಾಗಿದೆ ಹಳ್ಳಿಯ ಬದುಕಿನ ಸಮಸ್ತ ವಿವರವೂ ಇವರ ಹರಟೆ ಗಳಲ್ಲಿ ಪ್ರಕಾಶಗೊಳ್ಳುತ್ತದೆ. ಹಳ್ಳಿಯ ಜನ ಅಧಿಕಾರ ವೃಂದ, ನದಿ, ನಾಟಕಶಾಲೆ, ಪಾಕಶಾಲೆ, ಜಾತ್ರೆಗಳು, ಬೆಟ್ಟ, ಮೋಡ—ಇಂಥ ವಾಸ್ತವಿಕ ವಾದ ಉಸಿರಾಡುವ ಪ್ರತಿಮೆಗಳಿಂದ ಇವರ ಹರಟೆಗಳು ಪ್ರೇರಣೆ ಪಡೆದಿವೆ. ಭಾಷೆಯ ಸಾಧನೆಗಿಂತ ಹೆಚ್ಚಾಗಿ ಪ್ರಸಂಗಗಳ ಸತ್ತ್ವದಿಂದ ಇವರ ಚಿತ್ರಗಳು ಸಂಭಾವ್ಯತೆಯನ್ನು ಪಡೆದು ನಿಲ್ಲುತ್ತವೆ.

ಶ್ರೀರಂಗ ಮತ್ತು ಕಾರಂತರಿಬ್ಬರೂ ಹರಟೆಗಳ ರಚನೆಯಲ್ಲಿ ಬಹುಶಃ ಸಮಾನಧರ್ಮಿಗಳು ಎನ್ನಬಹುದು. ಶ್ರೀರಂಗರ 'ಸ್ವಲ್ಪದ್ರಲ್ಲಿ ಸ್ವಾರಸ್ಯ' ಮತ್ತು ಇತರ ಹರಟೆಗಳು, ಕಾರಂತರ 'ಮೈಲಿಗಲ್ಲಿನೊಡನೆ ಮಾತುಕತೆಗಳು', 'ಪ್ರಾಣಿಕತೆಗಳು' ಮುಖ್ಯವಾಗಿ ಗಮನಿಸಬೇಕಾದ ಹರಟೆಗಳಾಗಿವೆ. "ನನ್ನ ಹರಟೆಗಳ ಹಿನ್ನೆಲೆಯಲ್ಲಿ ವಿಚಾರಗಳ ಬೆಟ್ಟವೆ ನಿಂತಿದೆ" ಎಂಬ ಶ್ರೀರಂಗರ ಹೇಳಿಕೆ ಇವರಿಬ್ಬರ ಹರಟೆಗಳಿಗೂ ಅನ್ವಯಿಸುತ್ತದೆ. ಇಬ್ಬರೂ ವಿಡಂಬನೆಯ ಕೊಕ್ಕನ್ನು ಚಾಚಿ ಸಮಾಜ ಜೀವನಾಕಾಶದಲ್ಲಿ ಹದ್ದುಗಳಂತೆ ಹಾರಾಡಿದ್ದಾರೆ. ವ್ಯಂಗ್ಯಶೈಲಿ, ಮನೋರಂಜಕತೆ, ಚಿತ್ರರೂಪಕತೆ ಇವರ ಬರಹಗಳ ಮುಖ್ಯ ದಿಕ್ಕುಗಳಾಗಿವೆ.

ಬೀಚಿಯವರ 'ಹುಚ್ಚುಹುರುಳು', 'ಗಾಳಿಮಾತು', 'ಆಗಷ್ಟು–ಈಗಿಷ್ಟು', 'ತಿಂಮನ ತಲೆ' ಮುಂತಾದ ಅಸಂಖ್ಯಾತ ಹರಟೆಯ ಪುಸ್ತಕಗಳು ಹಾಸ್ಯ ವಿಡಂಬನ ಕ್ಷೇತ್ರದಲ್ಲಿ ಹೆಸರಾಗಿವೆ. ಎಂತಹ ವಿಚಾರವನ್ನೂ ವಾಚೋ ವಿಧೇಯವಾಗಿ ಮಾಡಿಕೊಳ್ಳುವ ಕಲೆ ಬೀಚಿಯರಿಗೆ ಸಾಧಿಸಿದೆ. ಜನರ ಒಳ ಹೊರ ಜಗತ್ತುಗಳ ಭಾವನೆಗಳ ವೈಷಮ್ಯದರ್ಶನ ಬೀಚಿಯವರ ಹರಟೆಗಳ ಮೂಲದೃಷ್ಟಿಯಾಗಿದೆ. ಆಸೆ ಅನ್ನಿಸಿಕೆಗಳ ನೂರಾರು ಕವಲುದಾರಿಗಳನ್ನು ಗುರುತಿಸಿ ಅವುಗಳ ದಾರಿಯಿಂದ ವ್ಯಕ್ತಿಗಳನ್ನು ತಲಪುವ, ಅವರ ಮೇಲ್ಮೈ ಒಳಮೈ ಲಕ್ಷಣಗಳೆರಡನ್ನೂ ಸ್ವಂತ ಟೀಕೆ ಟಿಪ್ಪಣಿಗಳ ಉರಿಬೆಳಕಿನಲ್ಲಿ ಕಾಣಿಸಿ ಕೊಡುವ ಪ್ರಯತ್ನ ಬೀಚಿಯವರ ಹರಟೆಗಳಲ್ಲಿ ಕಂಡುಬರುತ್ತದೆ.

ನಾಡಿಗೇರ ಕೃಷ್ಣರಾಯರ 'ಮೆಲ್ಲೋಗರ', 'ಹರಕು ಮುರುಕು', 'ಅಡ್ಡಾದಿಡ್ಡಿ', 'ಕಸದ ಬುಟ್ಟಿ', 'ತಲೆಹರಟೆ' ಮುಂತಾದುವು ಜನರಿಗೆ ಶುದ್ಧವಾದ (ಯಾವ ವೈಚಾರಿಕ ಗೊಂದಲದಿಂದಲೂ ಕ್ಷೋಭೆಗೊಳ್ಳದ) ಹಾಸ್ಯ ದೃಷ್ಟಿಯುಳ್ಳ ಬರಹಗಳಾಗಿವೆ. ನಾಡಿಗೇರರು ವ್ಯವಹಾರ ಲೋಕದ ನೂರಾರು ಬಹಿರಂಗ ಚರ್ಯೆಗಳಿಗೆ ಹಾಸ್ಯದ ಲೇಪ ಕೊಟ್ಟು ಒಕ್ಕಣಿಸುವ ಪ್ರಯತ್ನ ಮಾಡುತ್ತಾರೆ. ಮನುಷ್ಯ ಸ್ವಭಾವದ ಕೊರಕಲು ಜಾಗಗಳ ಸಚಿತ್ರ ವರದಿಗಳನ್ನು ಕೊಟ್ಟು ನಗೆಬುಗ್ಗೆಯೆಬ್ಬಿಸುವುದೇ ಇವರ ಹರಟೆಗಳ ಮೂಲ ಉದ್ದೇಶವಾಗಿದೆ.

ಕನ್ನಡದಲ್ಲಿ ಹರಟೆಯ ಕ್ಷೇತ್ರವನ್ನು ಕುರಿತು ಬರೆಯುವಾಗ 'ಕೊರವಂಜಿ' ಮಾಸಪತ್ರಿಕೆ, ಅದರ ಸಂಪಾದಕ 'ರಾಶಿ' ಮತ್ತು ಅದರ ಬಳಗದ ಸದಸ್ಯರು ಗಳನ್ನು ಮರೆಯಲು ಸಾಧ್ಯವೇ ಇಲ್ಲ. 'ತುಟಿ ಮೀರಿದುದು' ಗ್ರಂಥದ ಕರ್ತೃ ರಾಶಿಯವರ ಹಾಸ್ಯದೃಷ್ಟಿ ವ್ಯಾಪಕವಾದದ್ದು. ಬಳಸು ಮಾತು, ನಿರ್ಬಂಧ ರಹಿತ ಸಲ್ಲಾಪ, ಚುರುಕಿನ ವ್ಯಾಖ್ಯಾನ ಚಮತ್ಕಾರ–ಈ ಎಲ್ಲ ಗುಣಗಳೂ ರಾಶಿಯವರ ಹರಟೆಗಳಲ್ಲಿವೆ. ಇಂಗ್ಲಿಷ್ ಮೂಲಗಳಿಂದ ಎರವಲು ತಂದ ಹಾಸ್ಯ ಪ್ರಸಂಗಗಳನ್ನೂ ರಾಶಿ ಕನ್ನಡಕ್ಕೆ ಸಹಜವಾದ ವಸ್ತುರೂಪದಲ್ಲಿ ಜೋಡಿ ಸುತ್ತಾರೆ. ಸಿದ್ಧ ಸಂಕೇತಗಳನ್ನು ಬಳಸಿ ವ್ಯಕ್ತಿ, ಸ್ಥಳ, ಸಮಾಜಗಳ ಪೊಳ್ಳು ಗಳನ್ನು ಬಯಲಿಗೆಳೆಯುವ 'ರಾಶಿ ಪದ್ಧತಿ' ಮೆಚ್ಚಬೇಕಾದದ್ದೆ. ರಾಶಿಯವರ ಬಳಗ ಕನ್ನಡ ಲೋಕಕ್ಕೆ ನೀಡಿರುವ ಹರಟೆಗಳ ಸಂಖ್ಯೆ ಬೆರಗುಗೊಳಿಸುವಷ್ಟಿವೆ.

ಜಿ. ಪಿ. ರಾಜರತ್ನಂ ಅವರ 'ರಾಘವಾಂಕನ ಹಲ್ಲು', 'ಪರಗತಿ ಪಕ್ಷಿ' ಗಳಲ್ಲಿ ಬರುವ ಹರಟೆಯ ಮೊನೆಯನ್ನಷ್ಟು ನೋಡಬೇಕು. ಅ. ರಾ. ಸೇ. ಅವರ 'ಸುಳಿನಗು' ಒಂದು ಪ್ರಬುದ್ಧ ಹರಟೆಗಳ ಸಂಗ್ರಹ ಯೋಗ್ಯವಾದ ಸಂಗ್ರಹವಾಗಿದೆ. ಅ.ರಾ.ಸೇ. ಅವರ ನಿಜವಾದ ಯಶಸ್ಸು ಇರುವುದು ವ್ಯಂಗ್ಯ ಮುಖಿಯಾದ ನಿರೂಪಣ ಪದ್ಧತಿಯಲ್ಲಿ. ಗ್ರಾಮ್ಯ ಸಂಪತ್ತುಗಳಾದ ರೂಕ್ಷತೆ, ಹಸಿತನ, ಡೌಲು ಅವರ ಪ್ರಬಂಧಗಳಲ್ಲಿ ದಟ್ಟವಾಗಿ ಮೂಡಿಬಂದಿವೆ. ದಾಶರಥಿ ದೀಕ್ಷಿತರ 'ಗಾಂಪಹರಟೆಗಳು', ಹಾ.ರಾ. ಅವರ 'ಕಬ್ಬು ಕುಡುಗೋಲು', 'ನಗೆನಾಣ್ಯ' ಜನಾದರಣೀಯವಾಗಿವೆ. ಅಷ್ಟಾವಕ್ರರ 'ಹಾಸ್ಯೋಲ್ಲಾಸ', 'ಸರಸ-ಸಲ್ಲಾಪ', 'ಜೇನು-ನಾಲಗೆ'ಗಳು, ಎನ್ಕೆ ಅವರ 'ಮುಂಗಾಲ್ ಪುಟಿಗೆ', 'ಎನ್ಕೆ ಬರಹಗಳು' ವಿಷಯ ವೈವಿಧ್ಯದಿಂದ, ಸಮಕಾಲೀನತೆಯ ಸೊಗಡಿನಿಂದ ತುಂಬಿಕೊಂಡಿವೆ.

ನಾಡಿಗೇರ ಗೋವಿಂದರಾಯರ 'ನಗೆ ಬರಹಗಳು' ಉತ್ತಮ ಮಾದರಿಯ ಪ್ರೌಢರ ಅಭಿರುಚಿ ಹೆಚ್ಚಿಸುವ ಕೆಲವು ವ್ಯಂಗ್ಯ ಹರಟೆಗಳಿಂದ ಕೂಡಿದೆ. ಕುಡ್ಪಿ ವಾಸುದೇವ ಶೆಣೈ ಅವರ 'ಕಸದ ಡಬ್ಬಿಗಳು', ವೆಂ. ತ. ಪಪ್ಪು ಅವರ 'ಪೂಕಟಿಗರ ಕೈಪಿಡಿ', ಎಂ. ಜಿ. ವೆಂಕಟೇಶಯ್ಯನವರ 'ಪುಲ್ಲಯ್ಯನ ಪ್ರಬಂಧ ಗಳು', ಕೌಜಲಗಿ ಹಣಮಂತರಾಯರ 'ಹಾಸ್ಯ ಪ್ರಬಂಧಗಳು', ಎನ್. ವಿ. ರಾವ್ ಅವರ 'ಟೈರ್ ಪ್ರಶಸ್ತಿ ವಿಜೇತ', ರಾಮಕೃಷ್ಣ ಉಡುಪರ 'ನಾಮದ ಬಲ' ಇವು ಹೆಸರಿಸಬಹುದಾದ ಇತರ ಉತ್ತಮ ಹರಟೆಯ ಸಂಗ್ರಹಗಳಾಗಿವೆ.

ಎ. ಎನ್. ಮೂರ್ತಿರಾಯರು ಕನ್ನಡದ ಪ್ರಸಿದ್ಧ ಪ್ರಬಂಧ ಲೇಖಕರಲ್ಲಿ ಒಬ್ಬರಾಗಿದ್ದಾರೆ. 'ಹಗಲುಗನಸುಗಳು', 'ಅಲೆಯುವ ಮನ', 'ಮಿನುಗು ಮಿಂಚು'ಗಳ ಕೆಲವು ಪ್ರಬಂಧಗಳ ಲಲಿತ ಮಾಧುರ್ಯವನ್ನು ಗಮನಿಸಿದರೆ 'ಲಲಿತ ಪ್ರಬಂಧ' ಎಂಬ ಜಾತಿಯ ಬರವಣಿಗೆಗೆ ಇವರು ಹೇಗೆ ಆಚಾರ್ಯ ರಾದರು ಎಂಬ ಅಂಶ ಸ್ಪಷ್ಟವಾಗುತ್ತದೆ. ಲಲಿತವಾದ ಬರವಣಿಗೆ, ಉದ್ದಕ್ಕೂ ಚಿಮ್ಮುವ ತಿಳಿ ಹಾಸ್ಯ ವಾಹಿನಿ, ನವ ಪ್ರಣಯಿಗಳ ಮನೋವ್ಯಾಪಾರದ ಸೂಕ್ಷ್ಮ ವಿಶ್ಲೇಷಣೆ, ಗಂಭೀರ ವಿಷಯಗಳನ್ನೆತ್ತಿಕೊಂಡು ಹಗುರವಾದ ಶೈಲಿಯಲ್ಲೇ ನಡೆಸುವ ಮಾರ್ಮಿಕ ಹೃದ್ಬೋಧಕ ವಿಮರ್ಶೆ, ಎಲ್ಲ ಮಗ್ಗುಲು ಗಳನ್ನೂ ಕಾಣಿಸುತ್ತ ಸಾಗುವ ವಿಚಾರದ ಪುಷ್ಟಿ, ನಿರ್ಜೀವ ವಸ್ತುಗಳ ವಿವರಣೆ

ಯಲ್ಲಿಯೂ ಕಂಡುಬರುವ ನಾಟ್ಯಶಕ್ತಿ—ಇಂತಹ ಹಲವು ಗುಣಗಳು ಇವರ ಪ್ರಬಂಧಗಳಿಗೆ ವಿಶಿಷ್ಟತೆಯನ್ನು ತಂದುಕೊಟ್ಟಿವೆ. ಲೇಖಕನ ಆತ್ಮದ ವಿಶೇಷ ಲಕ್ಷಣಗಳನ್ನು ಪೃಥಕ್ಕಾಗಿ ತೋರಿಸುವಲ್ಲಿ ಇವರ ಪ್ರಬಂಧಗಳು ತುಂಬ ಸಹಾಯಕವಾಗಿವೆ. ಕನ್ನಡದಲ್ಲಿ ಪ್ರಬಂಧ ಪ್ರಕಾರಕ್ಕೆ ಮರ್ಯಾದೆ ದೊರಕಿಸಿ ಕೊಟ್ಟವರು ಎ. ಎನ್. ಮೂರ್ತಿರಾಯರು. ತಮ್ಮ ಪ್ರಬಂಧಗಳನ್ನು 'ಅಲೆಯುವ ಮನ' 'ಮಿನುಗು ಮಿಂಚು' ಎಂದು ಕರೆದು ಈ ಜಾತಿಯ ಬರಹಗಳ ಸ್ವರೂಪವನ್ನು ಲಕ್ಷಣಿಸಿದ್ದಾರೆ. ಗೋಲ್ಡ್‌ಸ್ಮಿತ್‌ನಂತೆ "ಅಲೆಗಾರಿಕೆ" ಅವರ ಲೋಕ ಶಿಕ್ಷಣದ ಒಂದು ಮುಖ್ಯ ಭಾಗವಾಗಿದೆ. ಅದು ಅವರ ಅನುಭೂತಿ ಗಳನ್ನು ವಿಸ್ತರಿಸಿ, ಹಾಸ್ಯ ಪ್ರಜ್ಞೆಯನ್ನು ಚುರುಕುಗೊಳಿಸಿದೆ.

ಎಸ್. ಆರ್. ಚಂದ್ರರ 'ಒಗ್ಗರಣೆ'ಯ ಒಂಬತ್ತು ಪ್ರಬಂಧಗಳೂ ಪ್ರಬಂಧ ಸತ್ತ್ವವನ್ನು ಚೆನ್ನಾಗಿ ಹೀರಿಕೊಂಡ ಮಾದರಿಯ ರಚನೆಗಳಾಗಿವೆ. ಭಾಷಾ ಪ್ರೌಢಿಮೆ, ತುಂಬ ಆತ್ಮೀಯವಾದ, ವ್ಯಂಗಧೋರಣೆ ಬೆರೆತ, ಸರಸ ಸಂಭಾಷಣೆ, ಯಕ್ಷಗಾನ ಲೋಕದ ಸಜೀವ ಕಲ್ಪನಾರಮ್ಯತೆ, ನಾಟ್ಯಪರತೆ, ಬೆಡಗು, ಘೋಷಣೆಯ ಜೋರು ಈ ಗುಣಗಳೆಲ್ಲ ಇವರ ಪ್ರಬಂಧಗಳಲ್ಲಿ ಕಂಡು ಬರುತ್ತವೆ. ಸಿ. ಸೀತಾರಾಮಯ್ಯನವರ 'ಬೆಳದಿಂಗಳು' ಸಂಕಲನದ ಕೆಲವು ಪ್ರಬಂಧಗಳು ಸ್ವಚ್ಛವಾದ, ರುಚಿ ಶುದ್ಧಿಯುಳ್ಳ, ಭಾವುಕ ಹೃದಯದ ವಿಚಾರ ತರಂಗಗಳನ್ನು ನಿರ್ಮಲವಾಗಿ ಪಡಿಮೂಡಿಸುವ ಪ್ರಯತ್ನದಲ್ಲಿ ತೊಡಗುತ್ತವೆ. ಪು. ತಿ. ನ. ಅವರ 'ಈಚಲಮರದ ಕೆಳಗೆ', 'ಧೇನುಕ ಪುರಾಣ'ಗಳ ಪ್ರಬಂಧ ಗಳು ಕನ್ನಡದಲ್ಲಿ ಅನನ್ಯ ಪಂಥದ ಬರಹಗಳು ಎಂದು ಹೇಳಬೇಕಾಗುತ್ತದೆ. ಬೆರಗುಗಣ್ಣಿನ ಶಿಶು ಮುಗ್ಧತೆಯಿಂದ ಪು. ತಿ. ನ. ವಸ್ತುಗಳನ್ನು ನೋಡು ತ್ತಾರೆ. ಸರ್ವೇಂದ್ರಿಯಗಳ ಮೂಲಕ ಅದರ ಸ್ವರೂಪವನ್ನು ಒಗ್ಗಿಸಿಕೊಳ್ಳು ತ್ತಾರೆ. ಆದರೆ ಮುಂದೆ ವಿಚಾರದ ಹಾಯಿಪಟವನ್ನೇರಿಸಿ ವಿವರಣೆಯ ಪ್ರವಾಸ ಸಾಗಿಸುತ್ತಾರೆ. ಇತಿಹಾಸ ಪುರಾಣ ಕಾವ್ಯ ಜಗತ್ತಿನಿಂದ ಹೇರಳ ವಾಗಿ ನಿದರ್ಶನಗಳನ್ನೆತ್ತಿಕೊಂಡು ಹಸನುಗೊಳಿಸಿ ತಮ್ಮ ವಿಚಾರಗಳಿಗೆ ರೂಪು ಕೊಡುತ್ತಾರೆ. ಕಂಡ ವಸ್ತುವಿನ ಮೇಲೆ ಅವರು ಹೊರಿಸುವ ವಿಚಾರದ ಹೊರೆ ಅನಿರೀಕ್ಷಿತ, ಅಪಾರ. ದಿಕ್ಕು, ದೆಸೆ ಏನೊಂದೂ ಪೂರ್ವ ನಿಶ್ಚಿತವಲ್ಲದ ಸೈನಿಕ ಪಡೆಯಂತೆ ಅವರ ಪ್ರಬಂಧ ವಿಚಾರಗಳು ಅನೇಕ ತಿರುವು ತೆವರು ಬಯಲುಗಳಲ್ಲಿ

ಸಾಗುತ್ತವೆ. ಜಿಜ್ಞಾಸೆಯ ಸಮವಸ್ತ್ರ ಹೊತ್ತು ನಿಲ್ಲುತ್ತವೆ. 'ಪದ್ಯದಲ್ಲಿ ವಾಸ್ತವ ಹುಚ್ಚಿಗೇರಬೇಕು, ಗದ್ಯದಲ್ಲಿ ಹುಚ್ಚು ವಾಸ್ತವಕ್ಕಿಳಿಯಬೇಕು' ಎಂದು ಪು. ತಿ. ನ. ಗದ್ಯ–ಪದ್ಯಗಳ ಇತಿಮಿತಿಗಳನ್ನು ವರ್ಣಿಸಿದ್ದಾರೆ. ಆದರೂ ಅವರ ಪ್ರಬಂಧಗಳಲ್ಲಿ ಹುಚ್ಚಿಗೇರುವ ಸ್ವಭಾವವನ್ನೇ ವಾಸ್ತವವಾಗಿ ವಿಚಾರಗಳು ಬಯಸುತ್ತವೆ.

ಹಿರೇಮಲ್ಲೂರು ಈಶ್ವರನ್ ಅವರ 'ಶಿವನ ಬುಟ್ಟಿ' ಮಾನ್‌ತೇನನ ಪ್ರಬಂಧಗಳ ಹೆಜ್ಜೆ ಗತಿಯನ್ನನುಸರಿಸಿ ಬರೆದ ಕನ್ನಡ ಪ್ರಬಂಧಗಳಲ್ಲಿ ಉತ್ತಮ ಸ್ಥಾನ ಪಡೆಯುತ್ತದೆ. ಒಂದು ಸಾಮಾಜಿಕ ವರ್ತನೆಯ ಬಗೆಗೆ ಚಿಂತನೆ ನಡೆಸಿ ಸೂತ್ರಬದ್ಧವಾದ ಲಕ್ಷಣ ನಿರ್ದೇಶನ ಮಾಡಬಲ್ಲ ಸಂಯಮ ಶೀಲ ಶೈಲಿಯನ್ನು ಇವರು ರೂಢಿಸಿಕೊಂಡಿದ್ದಾರೆ. ಶೀಲನಿರ್ಮಾಣ ಸದಭಿರುಚಿಯಿಂದ ಪ್ರೇರಿತವಾದ ಪ್ರಬಂಧಗಳು ಇವು. ನರಸಿಂಗ ಮಾನ್ವಿ ಅವರ 'ಸಂಸಾರ ನೀತಿ', ಸಚ್ಚಿದಾನಂದಶಿರೋಡಕರರ 'ವಿಚಾರ ವಲಯಗಳು' ಈ ಜಾತಿಯ ಬರವಣಿಗೆಗಳೇ. ಖಚಿತ ವಿಷಯವನ್ನು ಭಾವಾವೇಶಕ್ಕೆ ಒಳಗಾಗದ ತಾಳ್ಮೆಯಿಂದ ವಿವೇಚನಾಯುತವಾಗಿ ನಡೆಸಿಕೊಂಡು ಹೋಗುವ ಇಂಥ ಪ್ರಬಂಧಗಳಲ್ಲಿ ಆತ್ಮೀಯ ಬಂಧದ ಸ್ವಚ್ಛಂದತೆ ಮಾಯವಾಗಿರುತ್ತದೆ. ಸೂಕ್ತಿ ರೂಪದ ಶಬ್ದರಚನೆ, ಶುದ್ಧ ಭಾವನೆಗಳಷ್ಟನ್ನೇ ಆರಿಸಿಕೊಳ್ಳುವ ರುಚಿ ಶುದ್ಧಿ, ಆಳವಾಗಿ ವಸ್ತುವಿನ ಒಳನುಗ್ಗುವ ಕಾವ್ಯಲಾಲಸೆ, ಉಪದೇಶದ ಮನೋಧರ್ಮ ಈ ಗುಣಗಳು ಇಂಥ ಪ್ರಬಂಧಗಳಲ್ಲಿ ಹೆಚ್ಚಾಗಿ ಕಾಣಿಸಿಕೊಂಡಿವೆ. 'ನಂಟರು' ಪ್ರಬಂಧ ಸಂಕಲನವನ್ನು ಹೊರತಂದಿರುವ ತೀ.ನಂ ಶ್ರೀ. ಯವರಿಗೆ ವಿಚಾರಗಳನ್ನು ಸ್ಪಷ್ಟವಾಗಿ, ಸ್ವಲ್ಪ ಗಂಭೀರವಾಗಿ ಹೇಳುವ ಕಲೆ ಸಿದ್ಧಿಸಿದೆ. ಚೆನ್ನಾಗಿ ಮೈತೊಳಸಿ ಒಳ್ಳೆಯ ಬಟ್ಟೆ ಹಾಕಿ ಮಕ್ಕಳನ್ನು ಆಡಲು ಹೊರಕ್ಕೆ ಕಳಿಸುವ ಗೃಹಿಣಿಯಂತೆ ತೀ. ನಂ. ಶ್ರೀ. ವಿಚಾರಲಹರಿಗಳಿಗೆ ಭಾಷೆಯ ನಡವಳಿಕೆಯ ಶಿಸ್ತನ್ನು ಹೊರಿಸಿ ರೂಪಿಸುತ್ತಾರೆ. ಅಚ್ಚುಕಟ್ಟು, ಭಾವಗಳ ನಯಗಾರಿಕೆ, ಹಾಸ್ಯದ ಲೇಪ ಪಡೆದ ನುಡಿಯ ಬೆರಗು ಅವರ ಪ್ರಬಂಧಗಳ ವೈಶಿಷ್ಟ್ಯವೆಂದು ಹೇಳಬಹುದು.

ರಾ. ಕು. ಹೆಸರಿಸಲೇಬೇಕಾದ ಮುಖ್ಯ ಭಾವಪ್ರಬಂಧಕಾರರು. ಅವರ 'ಗಾಳಿಪಟ', 'ದೇವಕನ್ಯೆ' ಎಂಬ ಎರಡು ಪ್ರಬಂಧ ಸಂಗ್ರಹಗಳು ಪ್ರಬಂಧ

ಸಾಹಿತ್ಯಕ್ಕೆ ಮೌಲಿಕ ಕೊಡುಗೆಗಳಾಗಿವೆ. ರಾ. ಕು. ಆರಿಸಿಕೊಂಡು ವಿಷಯ ಕ್ಕಿಂತ ಹೆಚ್ಚಾಗಿ ಅದರ ಭಾವ ವಲಯವನ್ನು ಶೋಧಿಸುತ್ತ ಹೋಗುತ್ತಾರೆ. ಆದ್ದರಿಂದ ಅವರ ಬರವಣಿಗೆ ಭಾವಗೀತೆಯ ತೀವ್ರತೆಯನ್ನು ಪಡೆದುಕೊಳ್ಳು ತ್ತದೆ. ಅವರಿಗೆ ವಿಷಯ ಕೇವಲ ನೆಪಕ್ಕೆ ಹಿಡಿದ ಹಿಡಿಗೋಲು. ಆ ಮಂತ್ರ ದಂಡ ಹಿಡಿದು ತರ್ಕಾತೀತವಾದ ಲಕ್ಷಣಾತೀತವಾದ ವಿಚಾರವಲಯಕ್ಕೆ ಓದು ಗರನ್ನು ಎಳೆದುಕೊಂಡು ಹೋಗುತ್ತಾರೆ. ಗೊರೂರರ ಹಾಸ್ಯಬಂಧಗಳಲ್ಲಿ ಭಾಷೆಗಿಂತ ವಸ್ತುವಿನ ಗಟ್ಟಿತನ ಪ್ರಮುಖವಾಗಿದ್ದು ನಗೆಬುಗ್ಗೆಯನ್ನೆಬ್ಬಿಸಿದರೆ, ಎ. ಎನ್. ಮೂರ್ತಿರಾಯರಲ್ಲಿ ಭಾಷೆ–ವಸ್ತು ಎರಡರ ಸಮ ಸಂಯಮವಿದ್ದರೆ, ರಾ. ಕು. ಅವರಲ್ಲಿ ಎರಡೂ ಕಣ್ಣಿಗೆ ಬಡಿಯುವಷ್ಟು ವರ್ಣವೈವಿಧ್ಯದಿಂದ ಆವೇಶದಿಂದ ತುಂಬಿ ಹರಿಯುತ್ತವೆ. ಭಾಷೆಯನ್ನು ಫಲವತ್ತಾಗಿ ಮಾಡಲು ರಾ. ಕು. ಹಳೆಯ–ಹೊಸ ಕವಿವಾಣಿ, ಜನರ ಪ್ರಚಲಿತ ರೂಢಭಾವಗಳು, ಸಾಮಾನ್ಯ ವಿಚಾರಸರಣಿ–ಇವೆಲ್ಲವನ್ನೂ ಒಂದು ವಿಚಿತ್ರ ಮಿಶ್ರಣದಲ್ಲಿ ವಿರುದ್ಧ ದಿಕ್ಕಿನಲ್ಲಿ ಬಳಸುತ್ತಾರೆ. ವಿಮರ್ಶೆ ಅನುಕಂಪೆ, ಅಸಡ್ಡೆ, ಅತ್ಯುಕ್ತಿ ಎಲ್ಲ ಸ್ತರಗಳಲ್ಲಿ ವಿಚಾರದ ಕೊಂಡಿಯನ್ನೂರಿ ವಿಷಯ ಪ್ರತಿಪಾದನೆ ಮಾಡುತ್ತಾರೆ. ಇಂಥದೊಂದು ಸಂಕೀರ್ಣ ಭಾಷೆಯ ಸೃಷ್ಟಿ ರಾ. ಕು. ಅವರ ವೈಯಕ್ತಿಕ ಸಾಧನೆ ಎನ್ನಬಹುದು. ಒಮ್ಮೊಮ್ಮೆ ಸಂಯಮದ ಕಟ್ಟನ್ನು ಮೀರುವ ವಿಸ್ತಾರ; (ಬಹುಶಃ ಶ್ರೀರಂಗರ ಹರಟೆಗಳಿಂದ ಪ್ರಭಾವಿತರಾಗಿ) ಪ್ರಬಂಧ ಗಳಲ್ಲಿ ತಾವು ಎತ್ತುವ ಸಮಸ್ಯೆಗಳಿಗೆ ತಮ್ಮದೇ ಸಲಹೆಗಳನ್ನು ಪಟ್ಟಮಾಡಿ ಕೊಡುವ ಆವಾಹಕ–ವಿಸರ್ಜಕ ತಂತ್ರಗಳ ಬಳಕೆ—ಈ ಎರಡು ಲೋಪಗಳನ್ನು ಮೀರಿಯೂ ಇವರ ಪ್ರಬಂಧಗಳು ಮನ ಸೆಳೆಯುತ್ತವೆ. ಗಟ್ಟಿಯಾದ ವ್ಯವಹಾರಜ್ಞಾನ, ವಂಗ್ಯಪರತೆ, ವಚನಕಾವ್ಯಮಯತೆ, ಆಳವಾದ ಭಾಷಾ ಜ್ಞಾನ, ವಿರೋಧಗಳನ್ನು ಅರಗಿಸಿಕೊಳ್ಳುವ ಪ್ರವೃತ್ತಿ, ಇವೆಲ್ಲಕ್ಕಿಂತ ಹೆಚ್ಚಾಗಿ ಪುಟಿದೇಳುವ ಉತ್ಸಾಹ ಈ ಗುಣಗಳಿಂದ ತುಂಬಿಕೊಂಡ ಇವರ ಪ್ರಬಂಧಗಳು ಕನ್ನಡ ಪ್ರಬಂಧ ವಲಯಕ್ಕೆ ಒಂದು ಹೊಸಗಾಳಿಯನ್ನು ಚಮರಿಸಿವೆ.

ಕಲ್ಯಾಣಸುಂದರರ 'ಸ್ನೇಹದೃಷ್ಟಿ' ಒಂದು ಸುಂದರ ಭಾವ ಪ್ರಬಂಧಗಳ ಸಂಕಲನ. ಅವರ 'ಅಲೆಬುರುಕರು' ಎಂಬ ಪ್ರಬಂಧ, ಕನ್ನಡದ 'ಮೈಸೂರು ರುಮಾಲು, ತಗುಣೆ, ಹಸ್ತಪತ್ರಿಕೆ, ದಿವಾನಖಾನೆಯ ಅಂದ ಚೆಂದ, ಧೂಮ

ಲೀಲೆ, ರಥ ರಥಿಕ, ಕಾಲದ ಸೆರೆ, ಹೊಕ್ಕಳು' ಮೊದಲಾದ ಉತ್ತಮ ಪ್ರಬಂಧಗಳ ಸಾಲಿನಲ್ಲಿ ನಿಲ್ಲುವಂಥದು. 'ಗುಬ್ಬಚ್ಚಿ ಮರಿ' ಎಂಬ ಇನ್ನೊಂದು ಪ್ರಬಂಧದ ರಚನಾಸೌಷ್ಠವ, ಭಾಷಾ ಗಾಂಭೀರ್ಯ, ವಿಚಾರದ ಮೈಕಟ್ಟು ಮೆಚ್ಚುವಂಥದ್ದಾಗಿದೆ. ಈ ಸಂಕಲನದ ಉಳಿದ ಬಂಧಗಳು ಕಥೆ-ಭಾವಬಂಧಗಳ ಸೀಮೆಯಲ್ಲಿ ಉಯ್ಯಲಾಡುತ್ತವಾದರೂ ತುಂಬ ರಮ್ಯವಾದ ಭಾವುಕ ಸನ್ನಿವೇಶಗಳಿಂದ ಕೂಡಿವೆ. ಆನಂದರ 'ಆನಂದ ಲಹರಿ'ಯಲ್ಲಿ ಎರಡು ಸ್ವತಂತ್ರ ಬಂಧಗಳು ಗಮನಾರ್ಹವಾಗಿವೆ. 'ಷಾಪಸಂದ್ ನಾಮಾ' ಎಂಬ ಆನಂದರ ಪ್ರಬಂಧ ಒಂದು ರೂಢವಾದ ಕಾವ್ಯಪದ್ಧತಿಗೆ ವಿರುದ್ಧ ಭಾವದ ಉಗ್ರ ವೈಯಕ್ತಿಕ ಪ್ರತಿಕ್ರಿಯೆಯಾಗಿದೆ. ತಮ್ಮ ಧೋರಣೆಯನ್ನು ಪ್ರತಿಪಾದಿಸುವಲ್ಲಿ ಆವೇಶ ಹೆಚ್ಚಾಗಿದೆ, ಗೋಪಾಲಕೃಷ್ಣ ಅಡಿಗರ 'ರಾಕ್ಷಸರು' ಪ್ರಬಂಧದಂತೆ ಅತ್ಯುಗ್ರ ಆವೇಶಕ್ಕೆ ಭಾಷೆಯ ಕವಚ ತೊಡಿಸುವ ಪ್ರಯತ್ನವನ್ನು ಇಲ್ಲಿ ಕಾಣಬಹುದಾಗಿದೆ.

ಎಂ. ವೀ. ಸೀತಾರಾಮಯ್ಯ ಅವರ 'ಧೂಮಲೀಲೆ ಮತ್ತು ಮುಗಿಲುಗಳು, ಪ್ರಬಂಧಗಳಲ್ಲಿ ಹಾಗೂ ಸಂಕೀರ್ಣ ರಚನೆಗಳಲ್ಲಿ ಬರುವ ಒಂದೆರಡು ಪ್ರಬಂಧಗಳಲ್ಲಿ ವ್ಯಕ್ತವಾಗುವ ಸನ್ನಿವೇಶ ರಚನೆಯ ಸತ್ತ್ವ, ಕಲಾವಂತಿಕೆಗಳು ಗಮನಾರ್ಹವಾಗಿವೆ. ಹದವಾದ ಗದ್ಯಶಿಲ್ಪದಲ್ಲಿ ಮೂಡಿಬಂದಿರುವ ಚಿತ್ರವಿನ್ಯಾಸ, ಜಿಜ್ಞಾಸೆಯ ಬಲೆಯನ್ನು ಹೆಣೆಯುವ ಕ್ರಮಗಳು ಚೇತೋಹಾರಿಯಾಗಿವೆ. ದ.ಬಾ.ಕು. ಅವರ 'ಸಾವಧಾನ'ದಲ್ಲಿ ಮತ್ತು 'ದ.ಬಾ.ಕು. ಬದುಕಿನ ಬಾಳು' ಗ್ರಂಥದಲ್ಲಿರುವ ಅವರ ಕೆಲವು ಪ್ರಬಂಧಗಳಲ್ಲಿ ಒರಸಿಟ್ಟ ಕನ್ನಡಿಯಂಥ ನಿರ್ಮಲವಾದ ಭಾಷೆಯನ್ನೂ, ಪರಿಪಕ್ವಗೊಂಡ ಆತ್ಮದ ಸೋಂಕಿನಿಂದ ತಾಪಗಳನ್ನು ದೂರಮಾಡುವ ದೃಷ್ಟಿಕೋನವನ್ನೂ ಕಾಣಬಹುದಾಗಿದೆ. 'ಕೋದಂಡನ ಉಪನ್ಯಾಸ'ಗಳು (ಎರಡು ಭಾಗಗಳಲ್ಲಿ) ಮಂಗಳೂರಿನ ಪ್ರಾದೇಶಿಕ ವೈಶಿಷ್ಟ್ಯಗಳ ಒಂದು ಸ್ವಪ್ನ ರೇಖಾಚಿತ್ರ ಎನ್ನಬಹುದು. ಎನ್. ಪ್ರಹ್ಲಾದರಾಯರ 'ರಥ-ರಥಿಕ', 'ಮಧುವ್ರತ', 'ಮುತ್ತಿನ ಹಾರ' ಪ್ರಬಂಧ ಸಂಕಲನಗಳಲ್ಲಿ ಪ್ರಬಂಧಕಾರರ ಆತ್ಮನಿಷ್ಠತೆಯನ್ನು ಪ್ರಕಾಶಗೊಳಿಸುವ ಭಾವನಾ ಚಿತ್ರಗಳು ಹಲವಾರಿವೆ. ಕೆಲವು ಪ್ರಬಂಧಗಳು ಶಾಲಾ ಕೋಣೆಯ

ಪ್ರಬಂಧಗಳಂತೆ ವಿವರಣ ಶೀಲತೆ, ಉಪನ್ಯಾಸ ಪ್ರಿಯತೆ, ಸುದ್ದಿಸಂಗ್ರಹ ದೃಷ್ಟಿಗಳಿಂದ ಕೂಡಿದ್ದು ಪ್ರಬಂಧದ ಆರೋಗ್ಯಕ್ಕೆ ಥಕ್ಕೆ ತರುವಂತಿವೆ.

ಲಾಂಗೂಲಾಚಾರ್ಯರ 'ಪ್ರಹಾರ', ಪಡುಕೋಣೆ ರಮಾನಂದರ 'ಹುಚ್ಚುಬೆಳದಿಂಗಳಿನ ಹೂಬಾಣಗಳು', ಎಚ್. ಕೆ. ರಂಗನಾಥರ 'ವೈದ್ಯನಲ್ಲದ ಡಾಕ್ಟರು', ಎಸ್. ಅನಂತನಾರಾಯಣರ 'ಇಂಥವರೂ ಇದಾರೆ' ಪ್ರಬಂಧ ಸಂಕಲನಗಳಲ್ಲಿ ವಿಕಟದೃಷ್ಟಿಯ ಮಹಾಪೂರ ಕೊಚ್ಚಿಬಂದಿರುವುದನ್ನು ಕಾಣಬಹುದಾಗಿದೆ. ಸಮಸಾಮಯಿಕ ಪ್ರಸಂಗಗಳ ಜೀವಂತ ವ್ಯಾಖ್ಯಾನ ಮಾಡುತ್ತ, ಚೇಷ್ಟೆ ಮಾಡುತ್ತ ಸಾಗುವ ಹಾದಿಯಲ್ಲಿ ಅತಿರೇಕಪ್ರಿಯವಾದ ಬಂಧಗಳಿಂದ 'ವಿನೋದ ಕ್ರೀಡೆ'ಯಾಡುವ ಹುಮ್ಮಸ್ಸಿನಿಂದ ಈ ಪ್ರಬಂಧಕಾರರು ಮುನ್ನುಗ್ಗುತ್ತಾರೆ. ಎನ್. ಎಸ್. ಗದಗಕರರ 'ಆಸೆ-ನಿರಾಸೆ', 'ಒಡೆದ ಕನ್ನಡಿ' ಮತ್ತು ಬಿ. ಆರ್. ವಾಡಪ್ಪಿಯವರ 'ತಾರಕಂಬಗಳು', 'ಸುಳಿಗಾಳಿ', 'ಗಾಳಿಗುದುರಿ'—ಈ ಸಂಕಲನಗಳಲ್ಲಿ ವಸ್ತು ಸಮೃದ್ಧಿಯಿದೆ. ಇಬ್ಬರು ಪ್ರಬಂಧಕಾರರಿಗೂ ಒಳ್ಳೆಯ ವಸ್ತುದೃಷ್ಟಿಯಿದ್ದರೂ ವಿಚಾರಗಳು ಶಬ್ದಶರೀರದಲ್ಲಿ ಸರಿಯಾಗಿ ಬಿಂಬಿತವಾಗದೆ ವಿವರಣೆಯ ಖಂಡಗಳಿಗೆ ಬಲ ಸಾಲದೆ ಸೊರಗುತ್ತವೆ. ಎಚ್ಚೆಸ್ಕೆ ಅವರ 'ಕಳ್ಳ ಹೊಕ್ಕ ಮನೆ', 'ಜೇಡನ ಬಲೆ'ಗಳಲ್ಲಿ ಕಂಡುಬರುವ ಆತ್ಮೀಯತೆ, ಮತ್ತು ನವುರಾದ ಭಾಷೆಯಲ್ಲಿ ಮೈತಾಳುವ ವಿಷಯ ವಿವರ ಮೆಚ್ಚತಕ್ಕವಾಗಿವೆ. ಎಂ. ರಾಮರಾಯರ 'ನಮ್ಮ ಅರಣ್ಯಯಾತ್ರೆ' ಮತ್ತು ಅಶ್ವತ್ಥರ 'ಮೂಗು' ಪ್ರಬಂಧಗಳಲ್ಲಿ ಸುಶಿಕ್ಷಿತವಾದ ಮನಸ್ಸಿನ ವಿಸ್ತೃತವಾದ ವಾಖ್ಯಾನರೂಪದ ವಿವರಣೆಗಳು ಹದಮೀರಿ ಬೆಳೆಯುತ್ತ ಹೋಗುತ್ತವೆ.

ಮಕ್ಕಳ ಜಗತ್ತಿನ ವ್ಯವಹಾರದ ರಮ್ಯತೆಯನ್ನು ಮನಗಾಣಿಸುವ ಹಾ. ಮಾ. ನಾಯಕರ 'ನಮ್ಮ ಮನೆಯ ದೀಪ', ತೆಳುವಾಗಿ ಸ್ಪಷ್ಟವಾಗಿ ವಿಷಯದ ಸುತ್ತ ಹರಡಿಕೊಳ್ಳುತ್ತ ಸಾಗುವ ಆ.ನ.ಕೃ. ಅವರ 'ಪೊರಕೆ', ಕಥನ ಬಂಧಗಳ ವಿಲಾಸದಿಂದ ಕೂಡಿದ ಕು. ಗೋ. ಅವರ 'ಅಕ್ಕನ ಮದುವೆ', ಡಿ. ಎಸ್. ಕರ್ಕಿ ಅವರ 'ನಾಲ್ದೆಸೆಯ ನೋಟ', ಕೆ. ಗೋಪಾಲಕೃಷ್ಣರಾಯರ 'ಕೆನ್‌ಸಿಂಗ್‌ಟನ್ ಪಾರ್ಕ್', ಮ. ಶ್ರೀಧರಮೂರ್ತಿ ಅವರ 'ಲಂಚಪ್ರಪಂಚ'. ಎಂ. ಎಸ್. ಸುಂಕಾಪುರ ಅವರ 'ಗಪ್-ಚಿಪ್', ಎ. ಎಸ್. ರಾಮಕೃಷ್ಣರ

'ಹುಟ್ಟೂರಿನ ಮೋಹ', ಜಿ. ಎ. ರೆಡ್ಡಿ ಅವರ 'ಮಾತಿನ ಬಳ್ಳಿ' ಈ ಪ್ರಬಂಧ ಕೃತಿಗಳು ವಾಚನಾರ್ಹವಾಗಿವೆ. 'ಅಸಲಿ ನಕಲಿ', 'ಚಾರುಚಯನ', 'ಅನಿರೀಕ್ಷಿತ ಭೇಟಿ' ಇಂಥ ಹತ್ತಾರು ಸಾಮಾನ್ಯ ದರ್ಜೆಯ ಪ್ರಬಂಧ ಗ್ರಂಥಗಳ ಸಂಖ್ಯೆಯೂ ಬಹಳಷ್ಟಿದೆ. ಉಮಾಪತಿಯವರ 'ಅಡಿಗೆ ಮನೆ', ಎ. ಎಸ್. ವೇಣುಗೋಪಾಲರಾಯರ, 'ಆತ್ಮೀಯ' 'ಬಾಳು ಬಂಗಾರ'ಗಳ ವ್ಯಂಗ್ಯಧೋರಣೆಯ ವಿಶಿಷ್ಟ ಬರಹಗಳೂ ಸ್ವಾಗತಾರ್ಹವಾಗಿವೆ ಮನೋಹರ ಚಂದ್ರ, ಸುನಂದಾ ಬೆಳಗಾವಕರ, ಅನಂತಕಲ್ಲೋಳ, ಅ.ರಾ. ಆನಂದ, ಹಂಪ ನಾಗರಾಜಯ್ಯ, ಸಿ. ಕೆ. ಎನ್. ರಾಜ, ಮಣಿ, ಕರಾ. ಮೋಹನ್, ಗರುಡನಗಿರಿ ನಾಗರಾಜ್, ಜಿ. ಬಿ. ಜೋಶಿ, ಪಂಕಜ, ನರಸಿಂಹಮೂರ್ತಿ, ಎಚ್. ಎಲ್. ಕೇಶವ ಮೂರ್ತಿ ಅ. ರಾ. ಮಿತ್ರ ಮೊದಲಾದ ಹತ್ತಾರು ಹಾಸ್ಯ ಪ್ರಬಂಧಕಾರರು ಈ ಕಲಾ ಪ್ರಕಾರಕ್ಕೆ ಹೊಸ ಮೆರುಗನ್ನು ಕೊಡುತ್ತಿದ್ದಾರೆ. ಗೋವಿಂದ ಪೈ ಅವರಿಂದ ಹಿಡಿದು ಎಚ್. ಎಲ್. ಕೇಶವಮೂರ್ತಿ ಅವರವರೆಗೆ ಬಂದಿರುವ ಲಲಿತ ಪ್ರಬಂಧಗಳ ಜಾಡು ಹಿಡಿದು ಕನ್ನಡ ಪ್ರಬಂಧ ಲೋಕದ ಕಡೆ ದೃಷ್ಟಿ ಹಾಯಿಸಿ ದಪ್ಪ ಹೆಜ್ಜೆಗಳನ್ನಷ್ಟೆ ಗುರುತಿಸಿದರೂ ಈ ಸಣ್ಣ ಕ್ಷೇತ್ರದಲ್ಲಿ ಬಂದಿರುವ ಫಸಲು ನಮ್ಮನ್ನು ವಿಸ್ಮಯ ಮೂಕರನ್ನಾಗಿ ಮಾಡುತ್ತದೆ. ಮೂರು ತಲೆಮಾರುಗಳ ಅಂತರದಲ್ಲಿ ಭಾಷೆ, ದೃಷ್ಟಿ, ನಿರೂಪಣ ಕ್ರಮಗಳ ಕೋನದಿಂದ ವ್ಯತ್ಯಾಸವನ್ನು ಗುರುತಿಸಬಹುದಾದರೂ ಉತ್ತಮ ಭಾವ-ಪ್ರಬಂಧದ ಸಾರ್ವತ್ರಿಕ ಲಕ್ಷಣಗಳು ಒಂದೇ ಆಗಿವೆ. ಎಲ್ಲ ಬಗೆಯ ಪ್ರಬಂಧಗಳಲ್ಲಿಯೂ ಈ ಒಳಸೂತ್ರ ಕಂಡುಬರುತ್ತದೆ.

ವಿಷಯ ನಿರೂಪಣ ಸ್ಪಷ್ಟತೆ, ಮರ್ಯಾದೆ ಮೀರದ ಹಾಸ್ಯ, ಭಾಷಾ ಸೌಷ್ಠವ, ಆತ್ಮನಿಷ್ಠತೆ. ಕೃತಕವಲ್ಲದ ಚಮತ್ಕಾರ, ವಾಚಕನೊಂದಿಗೆ ಸಾಮೀಪ್ಯಬಂಧನ, "ಒಂದು ದೃಷ್ಟಿಕೋನದಿಂದ ವಸ್ತುವನ್ನು ಕಣಕಿ ಮತ್ತೊಂದು ದೃಷ್ಟಿಕೇಂದ್ರವನ್ನು ನಿರ್ಮಾಣ ಮಾಡುವ ಚಾತುರ್ಯ", ಒಳ್ಳೆಯ ಅಂತಃಕರಣ, ವರ್ತಮಾನವನ್ನು ಹಳಿಯದೆ ಭವಿಷ್ಯತ್ತು-ಭೂತ ಗಳೊಡನೆ ನಡೆಸುವ ಚೆಲ್ಲಾಟ, ಗಟ್ಟಿಯಾದ ವ್ಯಾವಹಾರಿಕ ನೆಲೆಯಲ್ಲಿ ಡೇರೆ ಹೂಡುವ ಅಂತಃಕರಣ-ಈ ಎಲ್ಲ ಉತ್ತಮ ಪ್ರಬಂಧ ಲಕ್ಷಣಗಳನ್ನೂ ನಮ್ಮ ಪ್ರಬಂಧ ಸಾಹಿತ್ಯದಲ್ಲಿ ಕಾಣಬಹುದಾಗಿದೆ. ಈ ಪ್ರಬಂಧ ಇಂಗ್ಲಿಷಿನ ಮೂಲ

ಪ್ರಬಂಧದ ಪ್ರೇರಣೆ ಪಡೆದಿದ್ದರೂ ಮಣ್ಣಿನ ಮಗಳೇ ಆಗಿ ಬೆಳೆದಿರುವುದು ಮೆಚ್ಚತಕ್ಕ ವಿಷಯ. ಕನ್ನಡಿಗರ ರಸಿಕತೆ, ವಿನೋದಶೀಲತೆ, ಸಾರಗ್ರಹಣ ಕೌಶಲ, ಸಹೃದಯತೆ, ಭಾಷೆಯೊಂದಿಗೆ ಆಡುವ ಚೆಲ್ಲಾಟ ಈ ಗುಣಗಳೆಲ್ಲ ನಮ್ಮ ಪ್ರಬಂಧಕಾರರಲ್ಲಿ ಮೇಳವಿಸಿವೆ.

ನಮ್ಮ ಪ್ರಬಂಧಕಾರರನ್ನೆಲ್ಲ ವಿಸ್ತಾರವಾದ ವಿಮರ್ಶೆಗೆ ಒಳಪಡಿಸಿ ಅವರ ಹಿರಿಮೆ ವೈಶಿಷ್ಟ್ಯಗಳನ್ನು ಗುರುತಿಸುವುದು ತುಂಬ ಪ್ರಯೋಜನಕಾರಿಯಾದ ಕೆಲಸವಾದರೂ ಈ ಮುನ್ನುಡಿಯ ಮಿತ ಚೌಕಟ್ಟಿನಲ್ಲಿ ಸಾಧ್ಯವಲ್ಲದ ಕಾರಣದಿಂದ ಪ್ರಬಂಧ ಲೋಕದ ಮೇಲ್ಮೈ ಲಕ್ಷಣಗಳನ್ನಷ್ಟೆ ಗುರುತಿಸಿ ಸಾಗಿದ್ದೇನೆ. ಇನ್ನೊಂದು ಮಿತಿಯನ್ನು ಇಲ್ಲಿ ಹೇಳಿಕೊಳ್ಳಬೇಕಾಗಿದೆ. ಸುಮಾರು ಎರಡು ಸಾವಿರದಷ್ಟು ಪ್ರಬಂಧಗಳು ರಚನೆಯಾಗಿರುವಾಗ ಇಲ್ಲಿ ಕೇವಲ ಬೆರಳೆಣಿಕೆಯ ಪ್ರಬಂಧಗಳನ್ನು ಮಾತ್ರ ಆಯ್ಕೆ ಮಾಡಲಾಗಿದೆ. ವೈವಿಧ್ಯವನ್ನು ದೃಷ್ಟಿಯಲ್ಲಿರಿಸಿಕೊಂಡಿರುವುದರಿಂದ ಎಷ್ಟೋ ಪ್ರಬಂಧಕಾರರ ಉತ್ತಮ ಪ್ರಬಂಧ ಇಲ್ಲಿ ಬಾರದಿರುವ ಸಂಭವವೂ ಉಂಟು. ಸಂಪಾದಕನ ಓದಿನ ಮಿತಿ, ಗ್ರಹಿಕೆಯ ಮಿತಿ, ಅಭಿರುಚಿಯ ಮಿತಿಗಳಿಗೆ ಬದ್ಧವಾಗಿರುವ ಈ ಸಂಗ್ರಹದ ಉದ್ದೇಶ ಕನ್ನಡ ಪ್ರಬಂಧಲೋಕದ ಬಹು ಮುಖವನ್ನು ಪರಿಚಯ ಮಾಡಿಕೊಡುವುದಷ್ಟೇ ಆಗಿರುವುದರಿಂದ ಉಳಿದೆಲ್ಲ ಮಿತಿಗಳನ್ನು ಲಕ್ಷ್ಯಕ್ಕೆ ತಾರದೆ ಈ ಸಂಕಲನವನ್ನು ಸ್ವಾಗತಿಸಬೇಕೆಂದು ವಿನಯದಿಂದ ವಾಚಕರನ್ನು ಕೋರುತ್ತೇನೆ. ಇಂಥ ಇನ್ನೂ ಹತ್ತಾರು ಸಂಗ್ರಹಗಳನ್ನು ತರಬಲ್ಲಷ್ಟು ಸಾಮಗ್ರಿ ನಮ್ಮ ಪ್ರಬಂಧ ಸಾಹಿತ್ಯದಲ್ಲಿದೆ ಎಂದರೆ ಅದು ನಮಗೆ ಹೆಮ್ಮೆ ತರುವ ವಿಷಯ.

ಆರಿಸಿಕೊಳ್ಳಲಾಗಿರುವ ಪ್ರಬಂಧಗಳ ಕರ್ತೃಗಳಿಗೂ ಇಂಥದೊಂದು ಸಂಕಲನವನ್ನು ಸಿದ್ಧಪಡಿಸಿಕೊಡಬೇಕೆಂದು ಕೋರಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕ ನಿರ್ದೇಶಕರಿಗೂ ಒಪ್ಪವಾಗಿ ಮುದ್ರಿಸಿ ಕೊಟ್ಟಿರುವ ಲೋಟಸ್ ಮುದ್ರಣಾಲಯದ ಶ್ರೀ ಪಾಟೀಲರಿಗೂ ನನ್ನ ಹಾರ್ದಿಕ ಕೃತಜ್ಞತೆಗಳು.

ಅ. ರಾ. ಮಿತ್ರ

ಪರಿವಿಡಿ

1.	ಮೂರನೆಯ ವರ್ಗದ ಪ್ರಯಾಣ	ಬೆಟಗೇರಿ ಕೃಷ್ಣಶರ್ಮ	1
2.	ಪೆಡ್ಡಾ ಅಳಿಯ	ರಾ. ಶಿ.	20
3.	ಕೊಡೆಯ ವಿಚಾರ	ಪ. ರಮಾನಂದ ರಾಯರು	23
4.	ನನ್ನ ಬೆನ್ನು	ನಾ. ಕಸ್ತೂರಿ	30
5.	ತಾಳಮದ್ದಲೆ	ಎಸ್. ಆರ್. ಚಂದ್ರ	35
6.	ಅಜ್ಜಯ್ಯನ ಅಭ್ಯಂಜನ	ಕುವೆಂಪು	45
7.	ಚಟ	ಹಿರೇಮಲ್ಲೂರ ಈಶ್ವರನ್	54
8.	ಸೋಮಾರಿತನ ಎಂಬ ಸದ್ಗುಣ	ದ. ರಾ. ಬೇಂದ್ರೆ	58
9.	ನಂಟರು	ತೀ. ನಂ. ಶ್ರೀಕಂಠಯ್ಯ	65
10.	ನನ್ನ ಜೀವನ ದರ್ಶನ	ವಿ. ಸೀ.	70

11.	ಸಂಗೀತ ಸಭೆಯ ಸ್ವಾರಸ್ಯ	ಎಂ. ವಿ. ಸೀತಾರಾಮಯ್ಯ	79
12.	ವೈಜ್ಞಾನಿಕ ವಿಕ್ರಮಗಳು	ಎನ್ಕೆ	82
13.	ಭೀತಿವಿಮೋಚನೆ	ಪು. ತಿ. ನರಸಿಂಹಾಚಾರ್	88
14.	ಗೊಣಗುವ ಚಟ	ಎ. ಎಸ್. ಮೂರ್ತಿರಾವ್	92
15.	ನನ್ನ ಪ್ರಯಾಣ ಸಖಿ	ಆನಂದ	99
16.	ಸಾವಧಾನ	ದ. ಬಾ. ಕುಲಕರ್ಣಿ	110
17.	ಮಹಾಮಾರಿ	ಕೆ. ವೆಂಕಟರಾಮಪ್ಪ	117
18.	ನಮ್ಮ ಎಮ್ಮೆಗೆ ಮಾತು ತಿಳಿಯುವುದೆ ?	ಗೊರೂರು ರಾಮಸ್ವಾಮಿ ಐಯಂಗಾರ್	124
19.	ಗಂಟುಗ	ಎನ್. ಪ್ರಹ್ಲಾದರಾವ್	136
20.	ಕುರುಡು ಕಾಂಚಾಣ	ರಾ. ಕು.	139
20.	ಹಲ್ಲು !	ಡಾ॥ ಹೆಚ್. ಕೆ. ರಂಗನಾಥ್	150
21.	ಸಾಗರ	ಎ. ಎಸ್. ವೇಣುಗೋಪಾಲರಾವ್	161
22.	ನಿಶಾಚರಗಳು	ಕು. ಶಿ. ಹರಿದಾಸ ಭಟ್ಟ	165
23.	ಮಾತು–ಅರ್ಥ	ಬೀಚಿ	171
24.	ಕನಸುಗಾರರು	ಎಸ್. ಅನಂತನಾರಾಯಣ	183
25.	ಕಾಲುಹಾದಿಹೋಕರು	ಹಾ. ಮಾ. ನಾಯಕ	189
26.	ಮನೆಕಟ್ಟಿನೋಡಿ	ಎಚ್ಚೆಸ್ಕೆ	192
27.	ಪರಿಹಾಸ	ಎಂ. ಎಸ್. ಸುಂಕಾಪುರ	203
28.	ಆಸ್ತಾ–ಅರ್ಧಷಷ್ಟ್ಯಬ್ದಿ	ಲಾಂಗೂಲಾಚಾರ್ಯ	209
29.	ನಾರದಾವತಾರ	ಟಿ. ಸುನಂದಮ್ಮ	214
30.	ಬೆಕ್ಕು	ಎನ್. ಎಸ್. ಗದಗಕರ	220
31.	ಮಾತಿಗೆ ರೇಷನಿಂಗ್ ಬಂದರೆ ?	ಎಂ. ರಾಮರಾವ್	225
32.	ಪಂಡಿತನ ಸಂಕಟ	ಅ. ರಾ. ಮಿತ್ರ	233
33.	ಚಳವಳಿ	ಅ. ರಾ. ಸೇ	238
34.	ರಿಪೇರಿ	ಹಂ. ಪ. ನಾಗರಾಜಯ್ಯ	243
35.	ಸ್ಟೈಪ್ಸ್	ಎಂ. ಎಸ್. ನರಸಿಂಹಮೂರ್ತಿ	252
36.	ಸುಖದ ಅನ್ವೇಷಣೆ	ಅನಂತ ಕಲ್ಲೋಳ	256
37.	ಪುಸ್ತಕಗಳು	ಗಿರಡ್ಡಿ ಗೋವಿಂದರಾಜ	260
38.	ರುಚಿ	ಸುನಂದ ಬೆಳಗಾಂವಕರ	271
39.	ಕಾಂಕ್ರೀಟ್ ವ್ರತ ವ.ಹಾತ್ಮ	ಎಂ. ಪಿ. ಮನೋಹರ ಚಂದ್ರನ್	283
40.	ದೋಣಿಹರಿಗೋಲುಗಳಲ್ಲಿ	ಶಿವರಾಮ ಕಾರಂತ	289
41.	ಪರೀಕ್ಷೆಯ ಕಾಲ	ಎಸ್. ಮಂಜನಾಥ್	297

ಲಲಿತ ಪ್ರಬಂಧಗಳು

ಮೂರನೆಯ ವರ್ಗದ ಪ್ರಯಾಣ

ಬೆಟಗೇರಿ ಕೃಷ್ಣಶರ್ಮ

ನಮ್ಮ ಟಾಂಗ, ನಿಲ್ದಾಣದ ಮುಂಬದಿಯಲ್ಲಿ ಬಂದು ನಿಲ್ಲುವುದರಲ್ಲಿಯೇ 'ಢಣ್ ಢಣ್' ಎಂದು ಗಾಡಿಯು ಬಿಡುವ ಗಂಟೆಯೆ ಆಯಿತು. ಚಿಕ್ಕ ಕೈಚೀಲದ ಹೊರತು ಹೆಚ್ಚಿನ ಸಾಮಾನುಗಳೇನೂ ಇರಲಿಲ್ಲ. ಅವಸರದಿಂದ ಟಾಂಗೆಯನ್ನು ಬಿಟ್ಟು ಕೆಳಗಿಳಿದೆ. ಟಿಕೇಟು ತೆಗೆದುಕೊಳ್ಳುವಷ್ಟು ಅವಕಾಶ ಉಳಿದಿರಲೇ ಇಲ್ಲ. ಹಾಗೆಯೇ ಹೋಗಿ ಕುಳಿತು, ಮುಂದಿನ ಸ್ಟೇಶನ್ನಿನಲ್ಲಿ ಗಾರ್ಡನನ್ನು ಕಂಡು ಹೇಳಿದರಾಯಿತೆಂದು ಯೋಚಿಸಿ ಮುಂದುವರಿದೆ. ಗಾಡಿಯು 'ಕೊಂಯ್' ಎಂದು ಕೂಗಿಯೇ ಬಿಟ್ಟಿತು. ಮುಖಪರಿಚಯವಿದ್ದ ಟಿಕೆಟ್ ಕಲೆಕ್ಟರ್, ನನ್ನ ಗಡಿಬಿಡಿಯನ್ನು ಕಂಡು ಹಾಗೆಯೇ ಹೋಗಗೊಟ್ಟ. ಗಾಡಿಯು 'ಬಫ್ ಬಫ್' ಎಂದು ಹೊಗೆಯುಗುಳುತ್ತ ಹೊರಟೇಬಿಟ್ಟಿತು. ಓಡಿಹೋಗಿ ನಾನು, ಒಂದು ಥರ್ಡಕ್ಲಾಸ್ ಕಂಪಾರ್ಟ್‌ಮೆಂಟಿನ ತೆರೆದ ಬಾಗಿಲನ್ನು ಕಂಡು ಒಳನುಗ್ಗಿದೆ, ಇಂಟರ್ ಕಂಪಾರ್ಟ್‌ಮೆಂಟನ್ನು ಹಿಡಿಯುವಷ್ಟು ಆಗ ಅವಕಾಶವೆಲ್ಲಿದ್ದಿತು ?

ನಾನು ಸೇರಿದ ಕಂಪಾರ್ಟ್‌ಮೆಂಟು ಸಾಕಷ್ಟು ದೊಡ್ಡದಿದ್ದಿತು. "೩೪ ಜನರು ಕುಳಿತುಕೊಳ್ಳುವುದು" ಎಂದು ಬರೆದ ಹಲಗೆ ಅಲ್ಲಿ ಕಾಣುತ್ತಿದ್ದರೂ, ರೇಲ್ವೆಯ ನಿಯಮಭಂಗವನ್ನು ಮಾಡಿ, ಸುಮಾರು ೬೦–೬೫ ರಷ್ಟು ಜನರು ಕುಳಿತಿದ್ದರು; ೨೦–೩೦ ಜನರು ಎದ್ದು ನಿಂತುಕೊಂಡಿದ್ದರು. ನಾನು ಒಳಗೆ ಸೇರಿದ ಮೇಲೆ ಎದ್ದು ನಿಂತುಕೊಳ್ಳಬೇಕಾದವರ ಸಂಖ್ಯೆ ಇನ್ನೂ ಒಂದು ಹೆಚ್ಚಿದಂತಾಯಿತು. ಕಂಪಾರ್ಟ್‌ಮೆಂಟಿನ ತುಂಬ ವಿವಿಧ ದುರ್ವಾಸನೆಗಳ ಮಿಶ್ರಗಂಧ ಹರಡಿಕೊಂಡಿತ್ತು. ನಿಂತುಕೊಳ್ಳಬೇಕಾದ ಸ್ಥಳದಲ್ಲೆಲ್ಲ ನೆಲ ಗಡಲೆಯ ಸೊಪ್ಪು, ಬಾಳೆಹಣ್ಣಿನ ಸಿಪ್ಪೆ, ಎಣ್ಣೆ–ಕಾರಗಳು ಹತ್ತಿದ ಕಾಗದದ ಚೂರು ಇವೆಲ್ಲ ಬಿದ್ದುಕೊಂಡಿದ್ದುವು. ಬೀಡಿ–ಸಿಗರೇಟುಗಳ ಹೊಗೆ ಎಲ್ಲಿ ನೋಡಿದಲ್ಲಿ ತೇಲಾಡುತ್ತಿತ್ತು.

ನಾನು ಯಾವಾಗಲೂ ರೈಲು ಪ್ರವಾಸವನ್ನು ಇಂಟರ್ ತರಗತಿಯಲ್ಲಿ ಮಾಡುವುದಕ್ಕೆ ಕಾರಣವೆಂದರೆ, ನನಗೆ ಹಣವು ಹೆಚ್ಚಾಗಿದೆಯೆಂದಲ್ಲ. ಈ ಬಗೆಯ ಕಸ, ಕೊಳೆ, ದುರ್ವಾಸನೆಗಳನ್ನು ನನ್ನಿಂದ ಸಹಿಸಲಿಕ್ಕೆ ಆಗುವುದಿಲ್ಲ. ಬೀಡಿ ಸಿಗರೇಟುಗಳ ಹೊಗೆಯು ಎಲ್ಲ ಕಡೆಗೂ ಸಾಮಾನ್ಯವೇ ಆದರೂ ಇಂಟರ್ ತರಗತಿಯಲ್ಲಿ ಕುಳಿತವರು ಇದ್ದುದರಲ್ಲಿಯೇ ಸ್ವಲ್ಪ ಓರಣವಂತರಿರುವರು. ನೆರೆಹೊರೆಯವರ ನಿಷ್ಟಾನಿಷ್ಟಗಳ ಕಡೆಗೆ ಗಮನ ಕೊಡುವ ಸಂಸ್ಕೃತಿಯುಳ್ಳವರಾಗಿರುವರು. ಕುಳಿತೆಡೆಯಲ್ಲಿಯೇ ಪಿಚಕ್ಕೆಂದು ಉಗುಳುವಂತಹ ಧೈರ್ಯವನ್ನು ಅಲ್ಲಿ ಯಾರೂ ಮಾಡರು. 'ಹೀಗೆ ಮಾಡುವುದು ಒಳ್ಳೆಯದಲ್ಲ' ಎಂದು ಯಾವನಾದರೂ ಸಮಾಜಸೇವಕನು ಬುದ್ಧಿ ಹೇಳುವುದಕ್ಕೆ ಬಂದರೆ, ಮೂರನೆ ತರಗತಿಯ ಪ್ರವಾಸಿಕರಂತೆ ಗುದ್ದಾಟಕ್ಕೆ ಏಳುವ ಬುದ್ಧವಂತಿಕೆಯನ್ನು ತೋರಿಸರು. ಈ ನಾಯಿ ಬಾಲದ ಡೊಂಕನ್ನು ತಿದ್ದಲಿಕ್ಕೆ ಸಾಧ್ಯವಿಲ್ಲದೆ, ಸಹಿಸಲಿಕ್ಕೆ ಶಕ್ತಿಯಿಲ್ಲದೆ, ಇದರಿಂದ ದೂರವಿದ್ದು ಬಿಡುವುದೇ ಒಳ್ಳೆಯದೆಂದು ಭಾವಿಸಿ, ಮಿಕ್ಕವೆಚ್ಚಗಳನ್ನೆಲ್ಲ ಕಡಿಮೆ ಮಾಡಿಕೊಂಡು ನಾನು ಗಟ್ಟಿಮನಸ್ಸು ಮಾಡಿ ಇಂಟರ್ ಟಿಕೀಟನ್ನೇ ಯಾವಾಗಲೂ ಪಡೆಯುತ್ತಿರುವೆನು; ಈ ಮೂರನೆಯ ತರಗತಿಯ ಕಂಪಾರ್ಟ್‌ಮೆಂಟಿನ ನರಕದ ಮಾದರಿಯಿಂದ ತಪ್ಪಿಸಿಕೊಳ್ಳುತ್ತಿರುವೆನು. ಈ ನನ್ನ ನಡೆವಳಿಯನ್ನು ಕಂಡು ನನ್ನನ್ನು 'ಪಲಾಯನವಾದಿ' 'ಬೂರ್ಜ್ವಾ' ಎಂದು ಬೈಯುವವರು ಬೈದುಕೊಳ್ಳಲೊಲ್ಲರೇಕೆ ? ಹೀಗೆ ಬೈಯುತ್ತಿರುವವರಂತೆಯೇ ನಾನೂ ಜೀವನವಾದಿ–ಅನುಕೂಲತಾವಾದಿ. ಅವರು ಬೈಯುತ್ತಲೇ–ನಾನೂ ಮಾಡಿದಂತೆ ಮಾಡುವರು ; ನಾನು ಯಾರನ್ನೂ ಬೈಯದೆ ಅವರಂತೆಯೇ ಮಾಡುವೆನು. 'ಪಲಾಯನವಾದಿ' 'ಬೂರ್ಜ್ವಾ' ಎಂದು ನಿರುಪದ್ರವಿಗಳಾದ ಸುಶಿಕ್ಷಿತರನ್ನು ಬೈದಂತೆ ಆ ಸಮಾಜ ಸೇವಕರು, ಮೂರನೆಯ ವರ್ಗದ ಪ್ರವಾಸಿಕರನ್ನು 'ಅಸಂಸ್ಕೃತರು' 'ಕೊಳಕರು' ಎಂದು ಬೈದು ನೋಡಲಿ ; ಅವರ ತಲೆ ತೂತಾಗದೆ ಉಳಿಯುವುದೇ ?– ಎಂಬುದು ಸಂದೇಹದ ವಿಷಯ. ಬೈಯುವುದನ್ನು ಬಿಟ್ಟು ಮೂರನೆಯ ವರ್ಗದ ಪ್ರವಾಸಿಕರ ಡಬ್ಬಿಯಲ್ಲಿ ಶುಚಿತ್ವದ ಸೇವಾ ಕಾರ್ಯವನ್ನು ಕೈಕೊಂಡರೆ, ಎಷ್ಟೋ ಒಳ್ಳೆಯದಾದೀತು ;

ಆದರೆ ಅದನ್ನು ಮಾಡುತ್ತ ಕುಳಿತರೆ, ಸುಸಂಸ್ಕೃತ ಸಭ್ಯಗೃಹಸ್ಥರನ್ನು ಬೈಯಲಿಕ್ಕೆ ಈ ಜನರಿಗೆ ಅವಕಾಶ ಹೇಗೆ ಸಿಕ್ಕಬೇಕು ?

ನಾನು ಪ್ರವೇಶಿಸಿದ ಕಂಪಾರ್ಟ್‌ಮೆಂಟನಲ್ಲಿ ಟಿಕೇಟಿಲ್ಲದೆ ಪ್ರಯಾಣ ಮಾಡುವವರೇ ಹೆಚ್ಚಾಗಿದ್ದಂತೆ ಕಂಡಿತು. ಬೆಂಚಿನ ಮೇಲೆ ಹಾಯಾಗಿ ಕುಳಿತುಕೊಂಡವರು–ಹೆಚ್ಚಾಗಿ ಪುಕ್ಕಟೆ ಪ್ರವಾಸಿಕರೆ. ಅವರೆಲ್ಲ ಮದರಾಸ್ ಪ್ರಾಂತದಿಂದ ಹೊರಬಿದ್ದ ತಿರುಕರ ತಂಡದವರು. ಎಣ್ಣೆ ಕಾಣದಿದ್ದರೂ ಅವರ ತಲೆಯ ಮೇಲೆ ಕೂದಲು ಬೆಳೆಗೇನೂ ಕೊರತೆಯಿರಲಿಲ್ಲ. ಹೆಂಗುಸರೇ ಆಗಲಿ, ಗಂಡಸರೇ ಆಗಲಿ, ತಲೆಗೂದಲಿಗಾಗಿ ಹಣಿಗೆಯ ಉಪಯೋಗ ವನ್ನು ಮಾಡಬೇಕೆಂಬುದು ಅವರಿಗೆ ಗೊತ್ತೇ ಇರಲಿಲ್ಲವೆಂದು ತೋರುವುದು. ಮಳೆರಾಯನ ಒತ್ತಾಯದಿಂದಲೇ ಅವರು ಎಂದಾದರೂ ಮೈಯನ್ನು ತೊಳೆದು ಅಲ್ಲಲ್ಲಿ ತೋಯಿಸಿಕೊಂಡಿರಬಹುದು. ಮೈಮೇಲೆಲ್ಲ ಜಿಡ್ಡುಗಟ್ಟಿದ ಬಟ್ಟೆ–ಬರೆಗಳಾದರೂ, ಹೆಂಗುಸರೆನಿಸಿಕೊಳ್ಳುವವರ ಮೂಗು – ಕಿವಿಗಳಲ್ಲಿ ಎಂತೆಂತವೋ–ಭೀಕರಾಕಾರದ–ಅಲಂಕಾರಗಳು. ಬಾಯಲ್ಲಿ ಹಿಡಿದ ತಂಬಾಕು–ತಂಬುಲಗಳು ಅವರ ಕಪ್ಪುಬಣ್ಣದ ಗಲ್ಲಗಳನ್ನು ಉಬ್ಬಿಸಿರುವುವು. ಕರಿಯ ಮರದ ಗೊಂಬೆಗಳಂತಹ ಕೂಸುಗಳು ಅನೇಕ ಜನ ತಾಯಂದಿರ ತೊಡೆ ಗಳನ್ನು ಅಲಂಕರಿಸಿದ್ದುವು. ನಿಂತುಕೊಂಡಿದ್ದವರಲ್ಲಿ ಬಹಳ ಜನರು ಹಣ ಕೊಟ್ಟು ಟಿಕೇಟನ್ನು ಪಡೆದವರು. ಆದರೆ ಅವರ ಗೋಳನ್ನು ಇಲ್ಲಿ ಯಾರು ಕೇಳಬೇಕು ?

ನಾನೂ ಹೋಗಿ ನಿಂತುಕೊಂಡೆ. ನನ್ನ ಬಟ್ಟೆ–ಬರೆಗಳನ್ನು ನೋಡಿಯೋ, ಮುಖ ಲಕ್ಷಣವನ್ನು ನೋಡಿಯೋ, ಸ್ಥಳಹಿಡಿದು ಕುಳಿತ ಒಬ್ಬಿಬ್ಬರು ಸಹಾನುಭೂತಿಯ ದೃಷ್ಟಿಗಳಿಂದ ನನ್ನ ಕಡೆಗೆ ನೋಡಿದರು ; ಆ ಮೇಲೆ ತಮ್ಮ ಎಡಕ್ಕೆ ಬಲಕ್ಕೆ ನೋಡಿ, ನಿರುಪಾಯಭಾವವನ್ನು ಮುಖದ ಮೇಲೆ ಮೂಡಿಸಿಕೊಂಡು ಕುಳಿತರು. ಗಾಡಿಯು ನಿಲ್ದಾಣದ ಸೀಮೆಯನ್ನು ದಾಟಿ ತನ್ನ ವೇಗವನ್ನು ಹೆಚ್ಚಿಸಿ ಓಡತೊಡಗಿತು : "ಖಸ್ಸಟ, ಘಸ್ಸಟ....ಖಸ್ಸಟ....ಘಸ್ಸಟ—"

ದೂರದ ಬೆಂಚಿನ ಮೇಲೆ ಕುಳಿತ ಮುದುಕ ರೈತನೊಬ್ಬ ಮೆಲ್ಲಗೆ ಎದ್ದು ನನ್ನ ಬಳಿಗೆ ಬಂದ. ಅವನು ಶೌಚಕೂಪದ ಕಡೆಗೆ ಹೋಗಲಿರುವನೇನೋ

ಎಂದು ನಾನು ಭಾವಿಸಿದೆ. 'ಈ ಗದ್ದಲದಲ್ಲಿ ಸ್ವಲ್ಪ ತಡೆದುಕೊಂಡು ಕುಳಿತ ರಾಗದೆ?' ಎಂದು ಆತನ ವಿಷಯದಲ್ಲಿ ಮನದೊಳಗೇ ಬೇಸರಪಟ್ಟುಕೊಂಡೆ. ಆತನು ನನ್ನ ಬಳಿಗೆ ಬಂದು ವಿನಯದಿಂದ ನುಡಿದನು :

"ರಾಯರs ನೀವು ಅಲ್ಲೆ ನಾ ಕುಂತಲ್ಲೆ ಕುಂತಗೋ ಹೋಗರಿ ; ನಾನು ಮುಂದಿನ ಟೀಸನಿಗೇ ಇಳಿದು ಬಿಡಾಂವ ಅದೀನು !"

ನಾನು ಒಮ್ಮೆಲೆ ಕೃತಜ್ಞತೆಯು ತುಂಬಿದ ಕಣ್ಣುಗಳಿಂದ ಅವನನ್ನು ನೋಡಿದೆ ; ಬಳಿಕ ಮಾತನಾಡಿದೆ :

"ಛೇ ಛೇ ! ನೀವು ಕೂತಗೊಳ್ರಿ ! ನಾನು ಇಲ್ಲೆ ನಿಂತುಗೋತೀನಿ !"

ಆ ಮುದುಕ ಒತ್ತಾಯದ ಧ್ವನಿಯಲ್ಲಿ ಹೇಳಿದ :

"ನಮ್ಮ ಟೀಸನ್ ಇನ್ನೇನೂ ದೂರ ಇಲ್ಲರೀ ! ಈಗ ಬಂದs ಬಿಡತೈತಿ ! ನಾ ಹೇಳತೀನಿ, ಸುಮಾಕs ಹೋಗಿ ನೀವು ಕುಂತಗೊಳ್ರಿ !"

ನಾನು, ನನ್ನಂತೆಯೇ ನಿಂತುಕೊಂಡಿರುವ ಜನರ ಮುಖಗಳನ್ನು ನೋಡಿದೆ. ಎಲ್ಲಿಯೂ ಅಸಹನೆ—ಅಸಮ್ಮತಿಗಳು ಕಾಣಲಿಲ್ಲ. 'ಸರಿ! ಒಳ್ಳೆಯ ಪುಣ್ಯವಂತರಪ್ಪಾ ನೀವು !' ಎಂದು ಆ ಮುದುಕನನ್ನು ಕುರಿತು ನುಡಿದು, ಪ್ರಯತ್ನಪೂರ್ವಕವಾಗಿಯೇ ಮುಂದುವರಿದು, ಆ ಸ್ಥಳವನ್ನು ಹಿಡಿದು ಕುಳಿತೆ. ಗಾಡಿಯು ತನ್ನ ಸಂಪೂರ್ಣವೇಗದಿಂದ ಓಡುತ್ತಿದ್ದಿತು. ಸ್ಥಳಹಿಡಿದು ಕುಳಿತುಕೊಂಡಮೇಲೆ, ನನಗೆ ಅನುಕೂಲತೆ ಮಾಡಿಕೊಟ್ಟ ಮುದುಕನತ್ತ ನೋಡಿದೆ. ಅವನು ಬಾಗಿಲಬಳಿ ನಿಂತುಕೊಂಡು, ನಾನು ಕುಳಿತುಕೊಂಡುದನ್ನು ತೃಪ್ತಿಯ ಮೆಲುನಗೆಮೊಗದಿಂದ ನೋಡುತ್ತಲಿದ್ದ. ಕೊಳಚೆಯಲ್ಲಿ ಅರಳಿನಿಂತ ಗುಲಾಬಿ ಹೂವೊಂದರ ಚಿತ್ರ ನನ್ನ ಮನದಮೇಲೆ ಮೂಡಿ ನಿಂತಿತು. ಮುದುಕ ನನಗೆ ಪರಿಚಿತನೇನೂ ಅಲ್ಲ. ಇಷ್ಟೆಲ್ಲ ಜನರು ನಿಂತಿರುವಾಗ, ನನ್ನನ್ನು ತನ್ನ ಸ್ಥಳದಲ್ಲಿ ಕುಳಿತುಕೊಳ್ಳುವಂತೆ ಅನುಕೂಲತೆ ಮಾಡಿಕೊಡುವುದಕ್ಕೆ ಕಾರಣವೇನು ? 'ಅಂತರಃ ಕೋಪಿ ಹೇತುಃ' ಎಂಬ ಕವಿ ಭವಭೂತಿಯ ವಚನವೇ ಇದಕ್ಕೆ ಉತ್ತರ.

ನನ್ನ ಎದುರುಬದಿಯ ಮಂಚದಮೇಲೆ ಮೂವರು ತರಣರು ಕುಳಿತು ಕೊಂಡಿದ್ದರು. ಅವರ ವೇಷ-ಭೂಷಣಗಳ ಮೇಲಿಂದ ಅವರು ಸುಶಿಕ್ಷಿತ ರೆಂಬಂತೆ ತೋರುತ್ತಿದ್ದರು. ಅವರವರಲ್ಲಿ ಎಡೆಬಿಡದೆ ಚರ್ಚೆ-ವಿಚರ್ಚೆಗಳು

ನಡೆದಿದ್ದುವು. ದೂರದಲ್ಲಿ ನಿಂತುಕೊಂಡಿದ್ದಾಗ ನನಗವರ ಮಾತುಗಳು ಕೇಳುತ್ತಿರಲಿಲ್ಲ; ಈಗ ಹತ್ತಿರ ಬಂದುದರಿಂದ ಅವೆಲ್ಲ ಕೇಳತೊಡಗಿದುವು. ಖಾದಿಯ ವೇಷಭೂಷಣದಲ್ಲಿದ್ದ ತರುಣ ಹೇಳಲು ತೊಡಗಿದ;

"ಮಹಾತ್ಮಾಜಿಯವರು ಸಿರಿವಂತಿಕೆಯನ್ನು ಎಂದೂ ಬೈಯುತ್ತಿರಲಿಲ್ಲ. ಸಿರಿವಂತಿಕೆಯ ಸದುಪಯೋಗವು ಸಮಾಜಕ್ಕೆ ಆಗಬೇಕೆಂದು ಅವರು ಹೇಳುತ್ತಿದ್ದರು!"

ಇನ್ನೊಬ್ಬ ತರುಣ–ಸಡಿಲು ಪಾಯಜಾಮೆ–ಶರ್ಟುಗಳನ್ನು ತೊಟ್ಟು, ಉದ್ದವಾಗಿ ತಲೆಗೂದಲನ್ನು ಬಿಟ್ಟವ–ಸಿಡಿ ನುಡಿಗಳಲ್ಲಿಯೇ ಹೇಳತೊಡಗಿದ!

"ಅಹಹ! ಸಿರಿವಂತಿಕೆ!.... ಸಮಾಜಕ್ಕೆ ಅದರ ಸದುಪಯೋಗ!. ಬೆಕ್ಕು–ಇಲಿಗಳ ಗೆಳೆತನದಂತಹ ಅಸಂಭವ ಸಂಗತಿಯಿದು! ಸಿರಿವಂತರೆಂದರೆ ಸಮಾಜದಲ್ಲಿಯ ಬಡಜನರ ರಕ್ತವನ್ನು ಸೀಟುವವರು! ಬಡಜನರು ಸುಖದಿಂದ ಬದುಕಬೇಕಾದರೆ ಸಿರಿವಂತರೆಲ್ಲ ಹುಡಿಗೂಡಿ ಹೋಗಲಿಕ್ಕೇ ಬೇಕು!"

ಖಾದಿಧಾರಿಯಾದ ತರುಣ ಮತ್ತೆ ಬಾಯಿಬಿಟ್ಟ:

"ಇದು ಮಾನವತೆಯ ಬೆಲೆಯನ್ನೇ ಅರಿಯದವರು ಆಡುವ ಮಾತು! ನಿಮ್ಮ ಮಾತಿನಂತೆ ಹೋದರೆ ಲೋಕದಲ್ಲಿ ದಯೆ, ದಾಕ್ಷಿಣ್ಯ, ಸ್ನೇಹ, ಪ್ರೀತಿ, ಸಹಕಾರ, ಸಹಾನುಭೂತಿ—ಇವುಗಳಿಗೆ ಎಡೆಯೆ ಇಲ್ಲದೆ ಹೋದೀತು! ಮಾನವರೆಂದರೆ ಗುಂಪುಗೂಡಿ ಹುಲ್ಲುಗಾವಲಿನಲ್ಲಿ ಮೇಯುವ ಪಶುಗಳಲ್ಲ.

ಸಡಿಲು ಪಾಯಜಾಮೆಯ ತರುಣ ಕಿನಿಸನ್ನು ಕಾರತೊಡಗಿದ:

"ಗುಂಪುಗೂಡಿ ಮೇಯುವ ಪಶುಗಳಲ್ಲ; ಗುಂಪುಗೂಡಿ ಹಸಿದು ಸಾಯುವ ಪಶುಗಳು! ಸಿರಿವಂತರೆಂದರೆ ಬಡವರನ್ನು, ತಮ್ಮ ಸುಖಕ್ಕಾಗಿ ದುಡಿಯುವ ಪಶುಗಳೆಂದೇ ಭಾವಿಸಿದ್ದಾರೆ! ಈಗ ಜಾಗೃತಿಯ ಕಾಲ! ಬಡವರಲ್ಲಿ ತಾವೂ ಮನುಷ್ಯರೆಂಬ ಜಾಗೃತಿ ಮೂಡಿದೆ. ಈ ಜಾಗೃತಿಯು ನಮ್ಮ ದೇಶದಲ್ಲಿ ಮಹಾಕ್ರಾಂತಿಯನ್ನು ಎಬ್ಬಿಸದೆ ಇರಲಾರದು! ದುಡಿಯುವವನು ಆಳಾಗಬೇಕು; ದುಡಿಯದವನು ಆಳುವವನಾಗಿ ಸುಖಪಡಬೇಕು! ಇದು ಎಂಥ ನೀತಿ?"

ಮೂರನೆಯ—ಕೋಟು–ಪ್ಯಾಂಟಿನ ತರುಣ, ಮಾತನಾಡತೊಡಗಿದ:

"ನಿಮ್ಮ ಮಾತು ಸರಿಯಾದದ್ದು ನೋಡ್ರಿ ! ದುಡಿಯುವ ಜನರೇ ಇನ್ನಮ್ಯಾಲ ಆಳುವ ಅರಸರಾಗಬೇಕು. ಅಂದರ, ನಮ್ಮ ಹಳ್ಳಿಗಳಾದರೂ ಸುಧಾರಿಸಬಹುದು. ಈಗ ನಮ್ಮ ಹಳ್ಳಿಗರ ಕಡೆಗೆ ಯಾರೂ ನೋಡುವವರೇ ಇಲ್ಲ ! ಏನು ಅವರ ಅಸ್ವಚ್ಛತೆ, ಏನವರ ಅನಾರೋಗ್ಯ ! ಪಿಡುಗು ಬಂದು ಬಿಟ್ಟರ ಅಂತೂ—ಪಟಪಟ ನೊಣಾ–ನುಸಿ ಸತ್ತ್ಹಾಂಗ ಸಾಯುತಾರ...."

"ಅ....ಮ್ಮಾ....!" ಎಂಬ ದೈನ್ಯ ಧ್ವನಿಯ ನರಳಿಕೆಯೊಂದು ಕೇಳಿಸಿತು. ನಾನು ಮೆಟ್ಟಿಬಿದ್ದವನಾಗಿ ಆ ಕಡೆಗೆ ನೋಡಲು ತೊಡಗಿದೆ. ಆ ತರುಣರು ಕುಳಿತ ಬೆಂಚಿನ ಹಿಂಗಡೆಯ ಬೆಂಚಿನಮೇಲೆ ಒಬ್ಬ ಮನುಷ್ಯ ಮುದ್ದೆಯಾಗಿ ಬಿದ್ದುಕೊಂಡಿದ್ದಾನೆ. ಸುಕ್ಕಿ ಸೊರಗಿಹೋದ ದೇಹ. ಮೈಮೇಲೆ ಕಾವಿಯ ಬಟ್ಟೆಯೊಂದನ್ನು ಹೊದ್ದುಕೊಂಡಿದ್ದಾನೆ. ನಾನು ಕುಳಿತಲ್ಲಿಂದ ಆತನ ಮುಖವು ಕಾಣಲಿಲ್ಲವಾದುದರಿಂದ, ಎದ್ದುನಿಂತು ನಿಲುಕಿ ನಿಲುಕಿ ನೋಡಿದೆ. ತಲೆಯ ಮೇಲೆ ಬೆಳೆದ ಜಡೆಯಿದೆ. ಕಪ್ಪಗಿನವೇ ಆದ ಗಡ್ಡ ಮೀಸೆಗಳು ಮುಖವನ್ನೆಲ್ಲ ಮುಚ್ಚಿಕೊಂಡಿವೆ. ಮತ್ತೆ ಮೊದಲಿನಂತೆಯೆ ನರಳಿದ ಮೆಲುದನಿ : "ಅ....ಮ್ಮಾ....! ಹ....ಯ್ಯೊ....!"

"ಯಾರವರು ? ಅದೇಕೋ ನರಳುತ್ತಿದ್ದಂತೆ ಇದೆಯಲ್ಲ !" ನಾನು ಕುತೂಹಲಿಯಾಗಿ ಕೇಳಿದೆ. ಖಾದೀಧಾರಿ ತರುಣನು ಹೇಳಿದ :

"ನಾನು ಹರಿಹರ ಸ್ಟೇಷನಿನಲ್ಲಿ ಗಾಡಿಯನ್ನು ಹತ್ತಿದೆ. ಅಲ್ಲಿಂದಲೂ ಅವನ ನರಳಾಟ ನಡೆದೇ ಇದೆ. ಯಾವನೋ ಬಾವಾಜೀ ಇರಬಹುದು !"

ಸಡಿಲು ಪಾಯಜಾಮೆಯವನು ಹೇಳತೊಡಗಿದ :

"ನಮ್ಮ ಹಿಂದುಸ್ತಾನದೊಳಗ ಬಾವಾಜಿಗಳಿಗೇನು ಕಡಿಮಿ ? ಒಂದೊಂದು ಧರ್ಮಕ್ಕ ಒಂದೊಂದು ಪ್ರಕಾರದ ಬಾವಾಜಿಗಳು ! ಸಿರಿವಂತರ ದುಡ್ಡು ಏನಾದರೂ ವೆಚ್ಚ ಆಗತಿದ್ದರ, ಅದು ಇಂಥಾ ನಿರುದ್ಯೋಗೀ ಬಾವಾಜಿಗಳ ಸಲುವಾಗಿ ! ಮತ್ತೆ ಸರಕಾರ ಸಹಿತ ತನ್ನ ರೈಲ್ವೆಯೊಳಗ ಬಡ–ಬಗ್ಗರಿಗೆ ಯಾವ ಪ್ರಕಾರದ ಸವಲತ್ತೂ ಕೊಡುವುದಿಲ್ಲ ! ಇಂಥಾ ದುಡಿಯಲಾರದ ಬಾವಾಜಿಗಳಿಗೆ ಮಾತ್ರ ಪುಕ್ಕಟೆ ಪ್ರವಾಸದ ಅನುಕೂಲತಾ ಇರತ್ಯದ !"

ಕೋಟು–ಪ್ಯಾಂಟಿನ ತರುಣ ತಿರಸ್ಕಾರದಿಂದ ನುಡಿದ :

"ನೋಡಿದಿರಾ ಅವನ ಅಧಿಕಾರಾನ ? ಇಷ್ಟು ಮಂದಿಯೆಲ್ಲಾ ಸ್ಥಳ ಇಲ್ಲದ್ದಕ್ಕಾಗಿ ನಿಂತುಕೊಂಡುಬಿಟ್ಟಾರ ! ಆ ಭೂಪ ಕಾಲುಚಾಚಿ ಮಲಗಿ ಕೊಂಡಾನ ಹ್ಯಾಂಗ ನೋಡ್ರಿ !"

'ಅಂ....ಅಂ....ಮ್ಯಾ....!' ಎಂಬ ನರಳಾಟ ಮತ್ತೆ ಕಿವಿಗೆ ಬಿತ್ತು. ಅವನ ಬಳಿಯಲ್ಲಿಯೆ ನಿಂತುಕೊಂಡವನೊಬ್ಬ ಹೇಳಿದ :

"ಪಾಪ, ಬಾವಾಜೀಗೆ ಜ್ವರ ಬಂದ್ಹಾಂಗ ಕಾಣಿಸತದರಿ ! ಮೈಮ್ಯಾಲ ಎಚ್ಚರ ಇದ್ಹಾಂಗಽ ಇಲ್ಲ !"

ಕೋಟು–ಪ್ಯಾಂಟಿನವ ತಟ್ಟನೆ ನುಡಿದ :

"ಭಂಗೀ ಸೇದಿ ಮಲಗಿದ ಮ್ಯಾಲ, ಮೈಮ್ಯಾಲ ಎಚ್ಚರ ಉಳೀತಽದ ಯಾಕ ?"

ಖಾದೀಧಾರಿ, ಪಾಯಜಮಾಧಾರಿ ಇಬ್ಬರೂ ಗಟ್ಟಿಯಾಗಿ ನಕ್ಕರು. ನನ್ನ ಕರುಳಿಗೇಕೋ ಇರುವೆ ಕಚ್ಚಿದಂತಾಯಿತು. ತಟ್ಟನೆ ಎದ್ದು ಆ ಬಾವಾಜಿ ಮಲಗಿದಲ್ಲಿಗೆ ಹೋದೆ. ಅವನ ಮೈ ಕೈಗಳನ್ನು ಹಿಡಿದು ನೋಡಿದೆ. ಜ್ವರವೇನೂ ಹೆಚ್ಚಿಗೆ ಇರಲಿಲ್ಲವಾದರೂ, ತುಂಬ ಬಲಹೀನತೆ ಅವನನ್ನು ಆವರಿಸಿಕೊಂಡಿದ್ದಿತು. ನಾನು ಬಳಿಯಲ್ಲಿಯೇ ಕುಳಿತು ಆತನ ಮೈಮೇಲೆ ಕೈಯಾಡಿಸತೊಡಗಿದೆ. ಬಾವಾಜಿಯ ಕಳೆಯಿಲ್ಲದ ಕಣ್ಣುಗಳು ನನ್ನ ಕಡೆಗೆ ತಿರುಗಿದುವು. ಎರಡೂ ಕಂಗಳಲ್ಲಿ ಒಂದೊಂದೇ ಹನಿ ಕಣ್ಣೀರು ಕಂಡುವು. ಬಹುಶಃ ಅವು ನನ್ನ ವಿಷಯವಾಗಿ ಕೃತಜ್ಞತೆಯನ್ನು ಸೂಚಿಸುವುವು ಆಗಿರ ಬೇಕು. ತರುಣರ ರಾಜಕೀಯ—ಸಾಮಾಜಿಕ ಚರ್ಚೆ ಹಾಗೆಯೆ ಸಾಗಿದ್ದಿತು. ಗಾಡಿಯೂ ಓಡುತ್ತಿದ್ದಿತು. ಬಾವಾಜಿಯ ತುಟಿಗಳು ಒಣಗಿಹೋಗಿದ್ದುವು. ಬಾಯಿಕೂಡ ಒಣಗಿ ಅಂಟು—ಅಂಟಾಗಿದ್ದಿತು. ಬಾವಾಜಿಯ ಬಳಿಯಲ್ಲಿ ಕಮಂಡಲ ಇದ್ದಿತಾದರೂ ಅದರಲ್ಲಿ ನೀರು ಇರಲಿಲ್ಲ. ಪ್ರವಾಸಿಕರೊಬ್ಬರ ತಂಬಿಗೆಯಲ್ಲಿ ನೀರಿದ್ದಿತು. ಕೇಳಿ ತೆಗೆದುಕೊಂಡೆ ; ಹನಿ—ಹನಿಯಾಗಿ ಬಾವಾಜಿಯ ಬಾಯಲ್ಲಿ ಹಾಕತೊಡಗಿದೆ. ತುಟಿಗಳು ಒದ್ದೆಯಾದುವು. ಒಣಗಿದ ಬಾಯಿ ಹಸಿಯಾಯಿತು. ಸ್ವಲ್ಪಹೊತ್ತಿನಲ್ಲಿಯೆ ಬಾವಾಜಿ, ನೀರನ್ನು ಮೆಲ್ಲಗೆ ಗುಟುಕರಿಸಿದಂತೆ ಕೇಳಿಸಿತು. ನನಗೆ ಸ್ವಲ್ಪ ಧೈರ್ಯ ಬಂದಂತಾಯಿತು. ಬಾಯಲ್ಲಿ ಬಿಡುವ ನೀರ ಹನಿಗಳ ಪ್ರಮಾಣವನ್ನು ಮೆಲ್ಲಗೆ

ಹೆಚ್ಚಿಸತೊಡಗಿದೆ. ಬಾವಾಜಿಯ ಗುಟುಕರಿಸುವ ಪ್ರಮಾಣವು ಮೆಲ್ಲ ಮೆಲ್ಲನೆ ಹೆಚ್ಚತೊಡಗಿತು. ಆಗ ಖಾದೀಧಾರಿಯ ವಾದದ ನುಡಿ ಕೇಳಿಸುತ್ತಿತ್ತು :

"ಹೃದಯದ ಭಾವನೆಗಳ ವಿಕಾಸವಿಲ್ಲದವನು ಮಾನವನೇ ಅಲ್ಲವೆಂದು ಮಹಾತ್ಮರ ಅಭಿಪ್ರಾಯ !"

"ಹೃದಯ ಭಾವನೆಗಾಗಿ ಇರುವುದಿಲ್ಲ. ಮನುಷ್ಯನ ಜೀವಿತದ ಸೂಚನೆಗಾಗಿ ಇರುವುದು. ಮನುಷ್ಯನು ಮನುಷ್ಯನೆನಿಸಿಕೊಳ್ಳುವುದು ಆತನ ಬುದ್ಧಿಶಕ್ತಿಯ ಮೂಲಕ. ಭಾವನೆ–ಭಾವನೆ–ಎಂದು ನಮ್ಮ ಭಾರತದಲ್ಲಿ ಬುದ್ಧಿಶಕ್ತಿಯನ್ನು ಓಡಿಸಿಬಿಟ್ಟಿದ್ದಾರೆ. ಎಂತಲೇ ಬಡವರೆಲ್ಲ ಕೇವಲ ಭಾವನೆಯ ಕೂಸುಗಳಾಗಿದ್ದಾರೆ. ದೇವರು, ಧರ್ಮ, ದಯೆ, ಔದಾರ್ಯ—ಎಂಬ ಹುಚ್ಚುಗಳ ಬೆನ್ನುಹತ್ತಿ, ಸಮಾಜವನ್ನು ಜೀವನ್ಮೃತ ಜನರ ಜಂಗುಳಿಯನ್ನಾಗಿ ಮಾಡಿದ್ದಾರೆ. 'ದುಡಿಯುವವನಿಗೇ ದುಡ್ಡು ದುಗ್ಗಾಣಿ' ಎಂಬ ಅರ್ಥನೀತಿಯ ಅರ್ಥವೇ ಅವರಿಗಾಗಲೊಲ್ಲದಾಗಿದೆ...."

ಮುಂದೆ ಸ್ಟೇಶನ್ ಬರಲಿರುವುದನ್ನು ಸೂಚಿಸಲು ಗಾಡಿಯು ಕೂಗು ಹಾಕಿತು. ಕರುಳಲ್ಲಿ ನೀರು ಹೋದುದರಿಂದ ಸ್ವಲ್ಪ ಸಮಾಧಾನವೆನಿಸಿತೇನೋ, ಬಾವಾಜಿ ಕಣ್ಣುಗಳನ್ನು ಅರಳಿಸಿ ನನ್ನ ಕಡೆಗೆ ನೋಡಲುತೊಡಗಿದ. ಗಾಡಿಯು ದಡದಡನೆ ನಡೆಯುತ್ತ ವೇಗವನ್ನು ತಡೆ–ತಡೆಯುತ್ತ ನಿಲ್ದಾಣದ ಬಳಿ ಬಂದು ನಿಂತುಕೊಂಡಿತು. ಕೂಡಲೇ ಕೂಗುಗಳು ಕೇಳತೊಡಗಿದುವು :

"ಗರಮ್ ಗರಮ್ ಚಹಾ !....ಬಿಸಿ ಬಿಸಿ ಕಾಫೀ !"

"ಮೋಸಂಬೀ ಹಣ್ಣು....ಕಿತ್ತಳೇ ಹಣ್ಣೂ....!"

ನಾನು ಚಹಾ–ಕಾಫಿಯವನನ್ನು ಕೂಗಿ ಕರೆದೆ. ಒಂದು ಕಪ್ಪು ಬಿಸಿ ಬಿಸಿ ಕಾಫಿಯನ್ನು ಕೊಡಲು ಹೇಳಿದೆ. ಮೂವರು ತರುಣರೂ ಅಂತಹ ಗದ್ದಲದಲ್ಲಿಯೆ ನುಗ್ಗಿ, ಕಂಪಾರ್ಟ್‌ಮೆಂಟಿನಿಂದ ಕೆಳಗಿಳಿದು ಉಪಾಹಾರ ಗೃಹದ ಕಡೆಗೆ ಹೋದುದನ್ನು ನೋಡಿದೆ. ನಾನು ಕಾಫಿಯನ್ನು ತೆಗೆದುಕೊಂಡು, ಚಮಚೆಯಿಂದಲೆ ಮೆಲ್ಲಗೆ ಬಾವಾಜಿಯ ಬಾಯಲ್ಲಿ ಹಾಕತೊಡಗಿದೆ. ಅವನು ಸ್ವೇಚ್ಛೆಯಿಂದಲೆ ಗುಟುಕರಿಸುತ್ತಿರುವನೆಂಬುದನ್ನು ಕಂಡುಕೊಂಡೆ. ನನಗೆ ತುಂಬ ಸಮಾಧಾನವೆನಿಸಿತು. ಕಪ್ಪಿನಲ್ಲಿಯ ಕಾಫಿಯೆಲ್ಲವನ್ನೂ ನಿಧಾನವಾಗಿ

ಕುಡಿಸಿದೆ. ಕಾಫಿಯು ಹೊಟ್ಟೆಯಲ್ಲಿ ಹೋಗಲು ತೊಡಗಿದಂತೆ, ಬಾವಾಜಿಯ ಕಣ್ಣಿನ ಕಳೆಯಲ್ಲಿ ಮಾರ್ಪಾಡು ಕಾಣಲು ತೊಡಗಿತು. ಮೈಮೇಲೆ ಸ್ವಲ್ಪ ಎಚ್ಚರ ಬಂದಿತೇನೋ ! ಪ್ರಯತ್ನಪೂರ್ವಕವಾಗಿ ಎರಡೂ ಕೈಗಳನ್ನು ಮೇಲ್ಗಡೆಗೆ ಎಳೆದುಕೊಳ್ಳಲು ಆರಂಭಿಸಿದ. ಅದೇಕೆಂಬುದು ನನಗೆ ತಿಳಿಯದೆ, ಆತನ ಕೈಗಳಿಗೆ ನಾನು ನೆರವನ್ನು ಕೊಟ್ಟೆನು. ಬಾವಾಜಿ ಕಂಪಿಸುತ್ತಿರುವ ಹಸ್ತಗಳೆರಡನ್ನೂ ಜೋಡಿಸಿ, ಹಣೆಯ ಕಡೆಗೆ ತರತೊಡಗಿದನು. ನನಗೆ ಅವನ ಆ ಪ್ರಯತ್ನದ ಅರ್ಥವು ಆಯಿತು. ಜೋಡಿಸಿದ ಆ ಎರಡೂ ಕೈಗಳನ್ನು ನನ್ನ ಕೈಯಿಂದ ಹಿಡಿದು ಇದ್ದಲ್ಲಿಯೇ ಇರಿಸಿ ಹೇಳಿದೆನು :

"ನನಗೆ ನಿಮ್ಮ ನಮಸ್ಕಾರವೇನೂ ಬೇಕಾಗಿಲ್ಲ. ನಿಮಗೆ ಗುಣವಾದರೆ ಸಾಕು ; ನನಗೆ ತುಂಬ ಸಂತೋಷ !" ಹತ್ತಿರ ಕುಳಿತ ಜನರೆಲ್ಲ ನನ್ನನ್ನು ಒಂದು ಸಲ, ಬಾವಾಜಿಯನ್ನು ಒಂದು ಸಲ, ಬೆರಗುಗಣ್ಣುಗಳಿಂದ ನೋಡುತ್ತಿದ್ದರು. ತಾವೇನಾದರೂ ಮಾಡಬೇಕಾದ ಕೆಲಸವಿದೆಯೆಂದು, ಆಗ ಅವರಾರಿಗೂ ಎನಿಸಿರಲಿಕ್ಕಿಲ್ಲ. ಬಾವಾಜಿಯ ಕಮಂಡಲುವನ್ನು ಸ್ವಚ್ಛವಾಗಿ ತೊಳೆದು, ಅದರಲ್ಲಿ ಒಂದು ಅರ್ಧಸೇರು ಬಿಸಿ ಬಿಸಿ ಹಾಲನ್ನು ಹಾಕಿಸಿಕೊಂಡು ಬಂದೆ. ನಾಲ್ಕು ಮೋಸಂಬೀ ಹಣ್ಣುಗಳನ್ನೂ ತೆಗೆದುಕೊಂಡು ಬಾವಾಜಿಯ ಬಳಿಯಲ್ಲೇ ಇಟ್ಟೆ. ಗಾಡಿಯು ಹೊರಡುವ ಕೂಗನ್ನು ಹಾಕಿತು. ಉಸ್ಸೆಂದು ನಿಡಿದಾಗಿ ಉಸಿರು ಹಾಕಿ ಮೆಲ್ಲಗೆ ಮುಂದುವರಿಯಿತು. ಆಗ ಮೂವರು ತರುಣರೂ ಒಬ್ಬರ ಹಿಂದೊಬ್ಬರಂತೆ ಓಡಿಬಂದು ಗಾಡಿಯನ್ನು ಹತ್ತಿದರು. ಎಲೆಯಡಿಕೆ ತಿಂದುದರಿಂದ ತುಟಿಗಳು ರಂಗು-ರಂಗಾಗಿದ್ದುವು. ತನ್ನ ಸ್ಥಳದಲ್ಲಿ ಕುಳಿತುಕೊಳ್ಳುತ್ತಿರುವಾಗಲೇ ಸಡಿಲು ಪಾಯಜಾಮೆಯವನು ನುಡಿದ :

"ಆ ಹೋಟಲಿನ ಆಳಿನ ಮ್ಯಾಲ ನನಗೆ ಬಹಳ ಸಿಟ್ಟು ಬಂತು ನೋಡ್ರಿ ! ನಮಗೆ ಮೊದಲ ಸಪ್ಲೈ ಮಾಡೋ-ಅಂತ ಹೇಳಿದರೆ, 'ಪಾಳೀ ಪ್ರಕಾರ ಸಪ್ಲೈ ಮಾಡಬೇಕಾಗತದರೀ !' ಅಂತಾನ ಮಗ ! ಆತನ್ನ ಒಂದೆರಡು ಬಿಗೀಬೇಕೆನ್ನುವಷ್ಟು ಸಿಟ್ಟು ಬಂದಿತ್ತು ಬಿಡ್ರಿ !'

ಖಾದೀಧಾರಿ ಹೇಳಿದ :

"ಏನೇ ಆಗಲಿ, ನಮಗಂತೂ ಬೇಕಾದದ್ದು ಎಲ್ಲಾ ಸಿಕ್ಕಿತಲ್ಲಾ ! ಉದ್ದಿನವಡಿ ಮಾತ್ರ ಇಲ್ಲಿಯವರು ಬಹಾಳ ರುಚಿಕಟ್ಟು ಮಾಡತಾರ ನೋಡ್ರಿ.

ಕಾಫೀ ಅಂತೂ ಮದ್ರಾಸಿನಿಂದ ಇಳಿದು ಬಂದ್ಹಾಂಗಽ ಆಗಿರತಽದ !"

ಕೋಟು-ಪ್ಯಾಂಟಿನವ ಹೇಳಿದ :

"ಏನ್ರಿಪಾ, ರೇಲ್ವೆ ಹೋಟಲಿನ ಮುಂದೂ ತಿರುಕರ ಪಿಡುಗು ಇರ ಬೇಕಽ ? ಸರಕಾರದವರು ಇದನ್ನ ಕಟ್ಟು-ನಿಟ್ಟಾಗಿ ಬಂದ್ ಮಾಡಬೇಕು ನೋಡ್ರಿ !"

"ಇಂಥಾ ಸರಕಾರೆಲ್ಲಾ ಏನು ಮಾಡತಽದರಿ ! ರಷ್ಯಾ ಸರಕಾರದಂಥಾ ಸರಕಾರ ಬೇಕಿಲ್ಲಿ ; ಅಂದರ ಒಬ್ಬ ತಿರುಕನೂ ಕಣ್ಣಿಗೆ ಬೀಳದ್ಹಾಂಗ ಮಾಡಲಿಕ್ಕೆ ಬರತಽದ !"

ಕೋಟು-ಪ್ಯಾಂಟಿನವ ನಗುನಗುತ್ತ ಕೇಳಿದ :

"ಹೌದು ಹೌದು, ಬ್ಯಾಡಾದ ಮಂದಿನ್ನೆಲ್ಲಾ ಗುಂಡುಹಾಕಿ ಇಲ್ಲದ್ಹಾಂಗ ಮಾಡಲಿಕ್ಕೆ ಬರಽತದ ಅಂಥಾ ಸರಕಾರಕ್ಕ !

ಖಾದೀಧಾರಿಯೂ ಮನಃಪೂರ್ವಕವಾಗಿ ನಗತೊಡಗಿದ. ಸಡಿಲು ಪಾಯಜಾಮೆಯವನು ಅಪ್ರತಿಭ ಭಾವದವನಾಗಿ, ಸಿಗರೇಟಿನ ಝುರಿಕೆಗಳನ್ನು ಎಳೆಯತೊಡಗಿದ.

ಇದನ್ನೆಲ್ಲ ಕೇಳುತ್ತಲೇ ನಾನು ಬಾವಾಜಿಗೆ ಸ್ವಲ್ಪ ಹಾಲನ್ನು ಕುಡಿಸಿದೆ. ಆತನ ಮುಖದ ಕೃತಜ್ಞತಾಭಾವ ನನ್ನ ಹೃದಯವನ್ನು ಅರಳಿಸುತ್ತಲಿತ್ತು. ಮೈಯನ್ನು ಆಗಾಗ ಜುಮ್ಮುದಟ್ಟಿಸುತ್ತಿತ್ತು. ಆಗ ನನಗಾಗುತ್ತಿದ್ದ ಆನಂದ, ಉದ್ದಿನವಡೆಯ ರುಚಿಗೆ ಸರಿಯೆನಿಸಬಹುದೊ-ಮದ್ರಾಸಿನ ಕಾಫಿಯ ಕಂಪನ್ನು ಸರಿಗಟ್ಟಬಹುದೊ !

ಮೋಸಂಬಿಯ ಹಣ್ಣೊಂದನ್ನು ಸುಲಿದೆ. ತೊಳೆಗಳನ್ನು ಹದಗೊಳಿಸಿ ಬಾವಾಜಿಯ ಬಾಯಲ್ಲಿ ಹಾಕತೊಡಗಿದೆ. ಆತ ಮೆಲ್ಲಮೆಲ್ಲಗೆ ಬಾಯಾಡಿಸಿ ರಸವನ್ನು ನುಂಗತೊಡಗಿದ. ಇದೆಲ್ಲವನ್ನೂ ಅಚ್ಚರಿಗಣ್ಣುಗಳಿಂದ ನೋಡುತ್ತ ಲಿದ್ದ ಹಳ್ಳಿಗನೊಬ್ಬ ನನ್ನನ್ನು ಕೇಳಿದ :

"ಇವರು ನಿಮಗ ಏನ ಆಗಬೇಕೇನ್ರಿ ?"

ನಾನೂ ಕುತೂಹಲ ತುಂಬಿದ ಕಣ್ಣುಗಳಿಂದ ಅಕ್ಕ-ಪಕ್ಕದ ಜನರ ಮುಖ ಗಳನ್ನು ನೋಡಿದೆ. ಹಳ್ಳಿಗ ಕೇಳಿದ ಪ್ರಶ್ನೆ ಅವರೆಲ್ಲರ ಪ್ರಶ್ನೆಯೂ ಆಗಿರ

ಬಹುದೆಂದು ಭಾವಿಸಿದೆ. ಕೂಡಲೆ, ಪ್ರಶ್ನೆ ಕೇಳಿದ ಹಳ್ಳಿಗನಿಗೆ ಕಿರುನಗೆಯೊಂದಿಗೆ ಉತ್ತರಕೊಟ್ಟೆ :

"ನನಗ ಇವರು ಏನು ಆಗಬೇಕಂತ ಕೇಳಿದಿರಲ್ಲಽ ನೀವು ? ಇವರು.... ನನಗ....ಏನು ಹೇಳಲಿ....ಹುಂ ! ಅಣ್ಣಾ ಆಗಬೇಕು !"

ಅಲ್ಲಿ ಕುಳಿತವರ ಮುಖದ ಮೇಲೆಲ್ಲ ಆಶ್ಚರ್ಯದ ಕಿರುನಗೆಯಾಡಿತು. ಆ ಮೂವರು ತರುಣರೂ ಬೆರಗುಗಣ್ಣುಗಳಿಂದ ಒಂದು ಸಲ ನನ್ನ ಕಡೆಗೆ ಹೊರಳಿ ನೋಡಿದರು. ಮೊದಲು ಪ್ರಶ್ನೆ ಕೇಳಿದ ಹಳ್ಳಿಗನೇ ಮತ್ತೆ ಕೇಳಿದ.

"ನಿಮ್ಮ ಅಣ್ಣವರು ಏನ್ರಿ ಇವರು ! ಹಾಂಗಾದರ ಇವರು ಬಾವಾಜೀಯಾಕ ಆಗ್ಯಾರ್ರಿ ?"

ನಾನು ಹೇಳಿದೆ :

"ಹೌದು, ಇವರು ನನ್ನ ಅಣ್ಣನವರು ! ಆದರ, ಇವರು ಬಾವಾಜೀಯಾಕೆ ಆಗ್ಯಾರಂಬೂದು ನನಗೂ ಗೊತ್ತಿಲ್ಲ ! ನಾನೂ ತಿಳಿದುಕೊಳ್ಳಬೇಕಾಗೇದ !"

ಬಾವಾಜಿಯ ಕಣ್ಣಿಂದ ಹನಿಹನಿಯಾಗಿ ಕಣ್ಣೀರು ಹರಿಯಿತು. ಆತನ ಮೈಮೇಲಿನ ಬಟ್ಟೆಯಿಂದ ಅದನ್ನು ಒರಸಿದೆ. ಆಗಲೇ ಕಂಪಾರ್ಟಮೆಂಟಿನ ಆಚೆಯ ಮೂಲೆಯಲ್ಲಿ ಹೆಣ್ಣಿನ ಕಂಠದಿಂದೊಂದು ಹಾಡು ಹೊರಟುದು ಕೇಳಿಸಿತು ;

"ಆಖಿಯಾ ಮಿಲಾಕೇ, ಜಿಯಾಭರಮಾಕೇ ಚಲೇ ನಹಿ ಜಾನಾ !

ಓ....ಚಲೇ ನಹಿ ಜಾನಾ !

ಹಾಡುವ ಕಂಠ ಮಧುರವಾಗಿದ್ದಿತು. ಸಹಜವಾಗಿಯೆ ನನ್ನ ಕಣ್ಣುಗಳು ಆ ಕಡೆಗೆ ಹೊರಳಿದುವು. ನೋಡಿದೆ. ಹತ್ತೊಂಬತ್ತು ಇಪ್ಪತ್ತು ವಯಸ್ಸಿನ ತರುಣಿ. ಕಣ್ಣು—ಮೂಗಿನಿಂದ ಚೆಲುವೆಯೆಂದೇ ಹೇಳಬೇಕು. ತಲೆಗೂದಲನ್ನು ಅಂದವಾಗಿ ಬಾಚಿ ಹಿಂದೆ ಮುಡಿಯನ್ನು ಕಟ್ಟಿದ್ದಾಳೆ. ಉಟ್ಟುದು ಸ್ವಲ್ಪ ಮಾಸಿದ್ದಿತಾದರೂ, ಚುಕ್ಕೆಗಳಿಂದ ಕೂಡಿದ ತೆಳುವಾದ ಬಿಳಿಯ ಸತ್ತಲವಾದುದರಿಂದ, ದುಂಡು ದುಂಡಾದ ಮೈಗೆ ಚೆನ್ನಾಗಿ ಹೊಂದಿಕೊಂಡಿದೆ. ತೊಟ್ಟುದು ತಿಳಿನೀಲಿಯ ಕುಪ್ಪಸ. ಯೌವನದ ಪೂರ್ಣತೆಯು ಹೊರಹೊಮ್ಮಿ ತೋರುವಂತೆ ಅದರ ರಚನೆಯ ರೀತಿ. ಹೊದ್ದುಕೊಂಡ ಸೆರಗು ಎದೆಯನ್ನು ಮುಚ್ಚಿಯೂ

ಮುಚ್ಚಿದಂತೆ ಮೇಲೇರಿ ಹಿಂಬದಿಯ ಮುಡಿಯಮೇಲೆ ಮುಸುಕು ಹಾಕಿತ್ತು. ಎಡದ ಮೂಗಿನಲ್ಲೊಂದು ತಾರೆ ಮಿನುಗುತಿತ್ತು. ಕಿವಿಯಲ್ಲಿ ನಾಲ್ಕಾಣೆಯ ಲೋಲಕಗಳು ಜೋಲಾಡುತ್ತಿದ್ದುವು. ಕೊರಳಲ್ಲಿ ಒಂದು ಹೊಂಬಣ್ಣದ ಒಂಟೆಳೆಯ ಚೇನು ! ಹಾಡನ್ನು ಹೇಳುತ್ತಿರುವ ಕಂಠದಂತೆಯೆ ಅವಳ ಮುಖದ ಚೆಲುವೂ ದೇಹದ ನಿಲುವೂ ಆಕರ್ಷಕವಾಗಿದ್ದುವು.

ಕಂಪಾರ್ಟ್‌ಮೆಂಟಿನಲ್ಲಿಯ ಎಲ್ಲ ಜನರ ಕಿವಿ-ಕಣ್ಣುಗಳನ್ನೂ ಆಕೆ ತನ್ನತ್ತ ಸೆಳೆದುಕೊಂಡಳು. ಮೂವರು ತರುಣಮಿತ್ರರಂತೂ ಕಣ್ಣು ಕದಲಿಸದೆ ಅವಳನ್ನು ನೋಡಲು ತೊಡಗಿದರು. ಅಲ್ಲಿ ಕುಳಿತಿದ್ದ ಆ ದಕ್ಷಿಣದೇಶದ ಕಾಗೆ ವೆಣ್ಣುಗಳ ಬಳಗವನ್ನು ನೋಡಿ ಆ ಗಾಯಕಿಯನ್ನು ನೋಡಿದರೆ, ಅವಳೊಬ್ಬ ಅಪ್ಸರೆಯೆಂದೇ ಭಾಸವಾಗುವಂತಿತ್ತು. ನಾನು ನನ್ನ ಕಿವಿಗಳನ್ನು ಆಕೆಯ ಮಧುರ ಗಾಯನಕ್ಕೆ ಕೊಟ್ಟಿದ್ದೆನಾದರೂ, ಆ ಬಾವಾಜಿಯ ಕಡೆಗೆ ಅಲಕ್ಷ್ಯ ವನ್ನೇನೂ ಮಾಡಿರಲಿಲ್ಲ. ಆಗಾಗ ಆತನ ಮೈಮೇಲೆ ಕೈಗಳನ್ನಾಡಿಸುತ್ತಿದ್ದೆ. ಚಮಚೆಯಿಂದ ಹಾಲನ್ನು ಕುಡಿಸುತ್ತಿದ್ದೆ. ಗಾಯಕಿಯ ಹಾಡು ನಡೆದೇ ಇದ್ದಿತು. ಒಂದು ಹಾಡು ಮುಗಿಯಿತು. ಯಾವನೋ ಒಬ್ಬ ಹಳ್ಳಿಗನು ಹೇಳಿದ :

"ಒಂದು ಕನ್ನಡ ಪದಾ ಹೇಳಬಾರದ ?"

ಕೂಡಲೆ ಗಾಯಕಿ ಹಾಡತೊಡಗಿದಳು :

"ಬಾ ಚದುರಿ ಕರಿಯತೀನ ನಾನಾ
ಮಂದಿರಕೆ ಬಾರೆ ನೀನಾ ||
ಇನ್ಯಾಕ ಮಾಡುದು ಅನುಮಾನಾ....
ನನ್ನ ಮನಸ ಮಾಡ ಸಮಾಧಾನಾ
ಬೇಡಿದ್ದನ್ನ ಕೊಡುವೆನು ನಾನಾ ||೧||

ಹಾಡು ಕೇಳುತ್ತ ಕೆಲವರು ತಾಳವನ್ನು ಹಾಕಿದರು ; ಕೆಲವರು ಗೋಣು ಹಾಕಿದರು ; ಬೇರೆ ಕೆಲವರು ಮೈಯನ್ನೆಲ್ಲ ಕುಣಿಸಿದರು ; ಮತ್ತೆ ಕೆಲವರು ಬೆರಳಿಂದ ಚುಟಿಕೆ ಬಾರಿಸಿದರು. ಹಾಡನ್ನು ಮುಗಿಸಿ ಗಾಯಕಿ ಬೇಡಲು ತೊಡಗಿದಳು. ಆಣೆ-ಪವಲಿಗಳಿಂದ ಅವಳ ಪಾತ್ರೆ ತುಂಬಿಹೋಯಿತು. ತಾವೇ ತಿರಿದು ತಿನ್ನುವ ಮದ್ರಾಸಿನ ಬಡಜನರೂ ಅವಳನ್ನು ಬರಿಗೈಯಿಂದ ಮುಂದೆ

ಹೋಗೆನ್ನಲಿಲ್ಲ. ತರುಣರ ಬಳಿಗವಳು ಬೇಡಲು ಬಂದಾಗ, ಸಡಿಲು ಪಾಯ ಜಾಮೆಯವ ಅವಳಿಗೆ ಮತ್ತೊಂದು ಸಿನೇಮಾ ಪದವನ್ನು ಹೇಳುವಂತೆ ಹೇಳಿದ ; ಅವಳಲ್ಲಿ ಪದಗಳಿಗೇನು ಕೊರತೆ ? ಹಾಡತೊಡಗಿದಳು :

"ನಯನೊಂಕೇ ಬಾನ್‌ಸೇ ನಾ ಮಾರೋ ಸಂಯಾ..."

ಆ 'ಸಂಯಾ'ಗಳು ತಮ್ಮ ನಯನದ ಬಾಣಗಳನ್ನು ಅವಳತ್ತ ಬಿಟ್ಟಿರೋ ಇಲ್ಲವೋ, ನನಗೆ ಕಾಣಲಿಲ್ಲ. ಆದರೆ ಹಾಡುತ್ತಿದ್ದ ಆ ಭಿಕ್ಷುಕ ರಮಣಿ, ತನ್ನ ನಯನಬಾಣಗಳನ್ನು ಅವರತ್ತ ಎಡೆಬಿಡದೆ ಕಳುಹುತ್ತಿದ್ದಳು. ಹಾಡು ಮುಗಿಯಿತು. ಮೂವರೂ ಸುಶಿಕ್ಷಿತ ತರುಣರು. ಆ ಭಿಕ್ಷುಕಿಗೆ ಕೊಡುವುದರಲ್ಲಿ, ಅಲ್ಲಿಯ ಅಶಿಕ್ಷಿತ ಜನರಿಗಿಂತ ಅವರು ಹಿಂದುಳಿಯುವರೇ ? ಹಣದ ಚೀಲಗಳನ್ನು ತೆರೆದು ಕೈಯಲ್ಲಿ ಹಿಡಿದು, ಆಕೆಯ ಮನಸ್ಸು ಮೆಚ್ಚುವಂತೆಯೆ ಭಿಕ್ಷೆಯನ್ನು ಸಲ್ಲಿಸಿರಬೇಕು ! ಬಾವಾಜಿಯ ಆರಯಿಕೆಯಲ್ಲಿ ಕುಳಿತ ನನ್ನನ್ನು ಭಿಕ್ಷೆ ಕೇಳಬೇಕೆಂಬ ಅಪೇಕ್ಷೆ ಅವಳಿಗೆ ಆಗಲೇ ಇಲ್ಲವೋ ಏನೋ ! ಚರಿ ಪಾರಣ್ಯದ ಪಕ್ಷಿಗೊಂದು ತರು ಗೊಡ್ಡಾಗಲೇನು ? ಆದರೆ ಆಕೆ ನನ್ನನ್ನು ಗೊಡ್ಡ ತರುವೆಂದು ಭಾವಿಸುವ ಕಾರಣವೇನೂ ಇರಲಿಲ್ಲ. ಹಾಡಿನ ಸವಿಯನ್ನು ಅನುಭವಿಸಿದುದಕ್ಕೆ ಪ್ರತಿಫಲವೆಂದು ನಾನೂ ಆಣೆ ಎರಡಾಣೆಗಳನ್ನು ಸಲ್ಲಿಸದೆ ಇರುತ್ತಿರಲಿಲ್ಲ. ಆದರೆ ಆ ತರುಣರು ಇತ್ತ ಭಿಕ್ಷೆಯು ಆಕೆಯ ಮನಸ್ಸನ್ನು ಸಂಪೂರ್ಣವಾಗಿ ತೃಪ್ತಿಗೊಳಿಸಿರಬಹುದು. ಎಂತಲೇ ಅವಳು ನನ್ನಲ್ಲಿ ಭಿಕ್ಷೆಯನ್ನು ಕೇಳಿರಲಿಕ್ಕಿಲ್ಲ.

ಮುಂದಿನ ನಿಲ್ದಾಣದಲ್ಲಿ ಗಾಡಿಯು ನಿಂತೊಡನೆಯೆ ತಿರುಕ ತರುಣಿ ನಮ್ಮ ಕಂಪಾರ್ಟ್‌ಮೆಂಟಿನಿಂದ ಇಳಿದು ಬೇರೆ ಕಡೆಗೆ ಹೋದಳು. ಸ್ಟೇಶನು ಚಿಕ್ಕದು. ಅಲ್ಲಿ ಉಪಾಹಾರದ ಅಂಗಡಿಯೂ ಇರಲಿಲ್ಲ; ಅಲ್ಲದೆ ಗಾಡಿಯು ಅಲ್ಲಿ ಹೆಚ್ಚು ವೇಳೆ ನಿಲ್ಲುವಂತೆಯೂ ಇರಲಿಲ್ಲ. ಆದರೂ ನಮ್ಮ ಆ ಮೂವರೂ ತರುಣರು ಗಾಡಿಯನ್ನು ಬಿಟ್ಟು ಇಳಿದರು. ಎಲ್ಲಿಗೆ ಹೋದರೇನೋ; ಗಾಡಿಯು ಸ್ಟೇಶನನ್ನು ಬಿಟ್ಟು ಹೊರಟರೂ ಅವರು ಮರಳಿ ಬರಲಿಲ್ಲ. ಅವರ ಸಾಮಾನು ಸಟ್ಟುಗಳೆಲ್ಲ ನಮ್ಮ ಕಂಪಾರ್ಟ್‌ಮೆಂಟಿನಲ್ಲಿಯೆ ಉಳಿದಿದ್ದುವು.

ಬಾವಾಜಿಯು ಹೆಚ್ಚು-ಹೆಚ್ಚಾಗಿ ಚೇತರಿಸಿಕೊಳ್ಳಲು ತೊಡಗಿದನು. ಹೊಟ್ಟೆಯಲ್ಲಿ ಆಹಾರ ಹೋದಂತೆಲ್ಲ ಆತನ ನರಗಳಲ್ಲಿ ರಕ್ತವು ಹರಿದಾಡ

ತೊಡಗಿತು. ಮುಂಕುಕವಿದಿದ್ದ ಮಿದುಳಿಗೆ, ನಿದ್ದೆಯ ಲೋಕದಿಂದ ಹೊರ ಬಿದ್ದಂತಾಗಿ, ಹೊರಗಿನ ಪ್ರಂಪಂಚವನ್ನು ಅದು ಹೆಚ್ಚು-ಹೆಚ್ಚಾಗಿ ಅರಿತು ಕೊಳ್ಳಲಾರಂಭಿಸಿತು. ನಾಲಗೆ ಮಾತನಾಡಬೇಕೆಂದು ಹವಣಿಸತೊಡಗಿತು. ನನ್ನ ಕಡೆಗೆ ಒಂದೇಸವನೆ ಆತ್ಮೀಯಭಾವದ ನೋಟಗಳಿಂದ ನೋಡುತ್ತಿದ್ದ. ಆಗ ನಾನು ಕೇಳಿದೆ :

"ಏನಾದರೂ ಹೇಳಬೇಕಾಗಿದೆಯೇ ನಿಮಗೆ ?"

"ಹೂಂ" ಎಂದು ಬಾವಾಜಿ ಗೋಣನ್ನು ಹಾಕಿದ.

"ಈಗ ನಿಮ್ಮಿಂದ ಮಾತಾಡಲಿಕ್ಕೆ ಆದೀತೆ ?" ನಾನು ಕೇಳಿದೆ.

ತಗ್ಗಿದ ಧ್ವನಿಯಲ್ಲಿಯೇ ಬಾವಾಜಿ ಹೇಳಿದ :

"ಈಗ ನಾಲ್ಕು ದಿನಗಳಿಂದಲೂ...ನನಗೆ ನಿರಾಹಾರ !"

ಕುತೂಹಲಿಯಾಗಿ ನಾನು ಕೇಳಿದೆ :

"ಏಕೆ?....ನಿರಾಹಾರವೇಕೆ ?...ವ್ರತವೇನಾದರೂ ಇದ್ದಿತೇ ?"

ಮತ್ತೆ ಅದೇ ತಗ್ಗಿದ ಕಂಠದಲ್ಲಿಯೇ ಉತ್ತರ :

"ಹುಂ!...ವ್ರತ!...ತಿರಿದು ತಿನ್ನಬಾರದೆಂಬ ವ್ರತ !"

"ಬಾವಾಜಿಯಲ್ಲವೇ ತಾವು ? ಭಿಕ್ಷೆ ಬೇಡುವುದಕ್ಕೆ ನಿಮಗೆ ಅಧಿಕಾರವೇ ಇರುವುದು !"

ವಿಷಾದದ ನಗೆ ನಕ್ಕು ಬಾವಾಜಿ ಹೇಳಿದ :

"ನಾನೋ ?.... ಬಾವಾಜಿ !....ಬಾವಾಜಿಯ ವೇಷವನ್ನೇನೊ..... ಹಾಕಿಕೊಂಡಿದ್ದೇನೆ !"

"ಇದು ನಿಮ್ಮ ವೇಷವೇ ?"

"ಹುಂ....ಹುಂ...ಜೀವನದ ನಾಟಕದಲ್ಲಿ... ಎಲ್ಲರದೂ ಒಂದೊಂದು ವೇಷ ! ಹಾಗೆಯೇ ನನ್ನ ಜೀವನ ನಾಟಕಕ್ಕಾಗಿ ನಾನು...ಬಾವಾಜಿಯ ಪಾತ್ರವನ್ನು...ಧರಿಸಿದ್ದೇನೆ ! ಬುದ್ಧಿವಂತರು ವೇಷವನ್ನು ವಾಸ್ತವವೆನಿಸುವಂತೆ ನಟಿಸುತ್ತಾರೆ. ನಮ್ಮಂತಹ ಬುದ್ಧಿಹೀನರು ಹಾಕಿದ ವೇಷವನ್ನು ಮರೆತು, ತಮ್ಮ ವಾಸ್ತವ ಸ್ವರೂಪವನ್ನೇ ಪ್ರಕಟಿಸುತ್ತಾರೆ !"

"ಯಾಕೆ ? ಈಗೇನಾಯಿತು ?"

"ಇನ್ನೇನಾಗಬೇಕು ?... ಬಾವಾಜಿಯ ವೇಷವನ್ನು ತಳೆದರೂ. ನನ್ನಿಂದ ಭಿಕ್ಷೆಯನ್ನು ಬೇಡುವುದಕ್ಕಾಗಲಿಲ್ಲ ! ಭಿಕ್ಷೆ ಬೇಡದೆ ಇದ್ದರೆ ಬಾವಾಜಿಗಳಿಗೆ ಬದುಕಿನ ಮಾರ್ಗವೆಲ್ಲಿ ?"

"ಏಕೆ ಭಿಕ್ಷೆಯನ್ನು ಬೇಡಲಿಕ್ಕಾಗಲೊಲ್ಲದು ನಿಮಗೆ ? ಯಾರು ನೀವು ? ಇದನ್ನು ನಾನು ಕೇಳಬಹುದೆ ?"

ಬಾವಾಜಿ ಮಾತೇನೂ ಆಡಲಿಲ್ಲ. ನಿಡಿದಾಗಿ ಉಸಿರೊಂದನ್ನು ಹಾಕಿದ; ಮತ್ತೆ ನಾನು ಕೇಳಿದೆ.

"ನಾನು ಹಾಗೆ ಕೇಳಿದುದರಿಂದ ತಮ್ಮ ಮನಸ್ಸಿಗೆ ನೋವೆನಿಸಿತೇನು ?"

"ನೋವೇನೂ ಇಲ್ಲ. ನನ್ನದು ದೊಡ್ಡ ಕಥೆ. ಈಗ ಹೇಳುವುದಕ್ಕೆ ನನ್ನಲ್ಲಿ ತ್ರಾಣವಿಲ್ಲ ! ಮುಂದೆ ಎಂದಾದರೂ ನನ್ನ ಕಥೆಯು ನಿಮಗೆ ತಿಳಿದೀತು!"

"ತಮಗೆ ತೊಂದರೆಯೆನಿಸುವುದಾದರೆ ಹೆಚ್ಚಿನ ಮಾತುಗಳನ್ನೇನೂ ಆಡಬೇಡಿರಿ !"

ಮತ್ತೊಂದು ನಿಲ್ದಾಣ ಬಂದುದರಿಂದ ನಮ್ಮ ಗಾಡಿಯು ನಿಂತಿತು. ಮೂವರೂ ತರುಣರು ನಗುತ್ತ ಕೆಲೆಯುತ್ತಲೇ ಬಂದು ಗಾಡಿಯಲ್ಲಿ ಹತ್ತಿ, ತಮ್ಮ ಸ್ಥಳವನ್ನು ಹಿಡಿದು ಕುಳಿತುಕೊಂಡರು. ಖಾದೀ ವೇಷಧಾರಿ ಮಾತ ನಾಡತೊಡಗಿದ :

"ಇಂಥವರನ್ನ ಸಿನೇಮಾ ಕಂಪನಿಯವರು ಯಾಕ ಉಪಯೋಗ ಮಾಡಿ ಕೊಳ್ಳಬಾರದು—ಅಂತೀನಿ. ಸುಂದರ ರೂಪ ಅದ; ಮಂಜುಲವಾದ ಕಂಠ ಅದ ! ಇಂಥವರನ್ನ ತಿರುಕೊಂಡು ತಿನ್ನಲಿಕ್ಕೆ ಹಚ್ಚೂದಂದರ ನಮ್ಮ ದೇಶದ ದುರ್ದೈವ, ಏನ್ರಪಾ !"

ಸಡಿಲು ಪಾಯಜಾಮೆಯವ ಹೇಳಿದ :

"ಅದೇ ಹೇಳಿದೆನಲ್ರಿ ! ನಮ್ಮ ದೇಶದೊಳಗ ಬಡಜನರ ಯಾವ ಗುಣಕ್ಕೂ ಬೆಲೀನೇ ಇಲ್ಲ ! ದುಡ್ಡಿದ್ದರೆ ಒಂದು ಕತ್ತೆಯನ್ನೂ ಕರೆದೊಯ್ದು ರಂಗದ ಮ್ಯಾಲ ಕುಣಿಸತಾರ. ಅದಕ್ಕಕಸಾ ಅನ್ನೂದು..."

ಕೋಟು-ಪ್ಯಾಂಟಿನ ತರುಣ ತುಂಬ ಬುದ್ಧಿವಂತನೆಂಬ ಆವಿರ್ಭಾವ ದಿಂದ ನುಡಿದ :

"ಇಂಥವರನ್ನು ಹೀಂಗ ಬಿಡಬಾರದ್ರೀ! ನಮ್ಮ ತರುಣರು ಇಂಥವರನ್ನು ಮದುವೀಮಾಡಿಕೊಂಡು ಒಳ್ಳೆಯ ಹಾದಿಗೆ ಹಚ್ಚಬೇಕು!"

ಸಡಿಲು ಪಾಯಜಾಮೆಯವ ಹೇಳಿದ :

"ಸರಿ! ಏನಾರೇ ಮಾತಾಡತೀರಿ ನೀವು! ವರದಕ್ಷಿಣೆ ಇಲ್ಲದೆ ನಮ್ಮ ದೇಶದ ತರುಣರು ಮದವೀ ಮಾಡಿಕೋತಾರೇನ್ರಿ? ಬಡವರ ಹೆಣ್ಣು ಎಷ್ಟೇ ಸುಂದರಿ—ಎಷ್ಟೇ ಸದ್ಗುಣಿ—ಇದ್ದರೂ, ಹಣದರಾಶಿ ಇಲ್ಲದೆ ಮದುವೀ ಮಾಡಿಕೊಳ್ಳುವ ಧೈರ್ಯಶಾಲಿಗಳು ಇದ್ದಾರ ಎಲ್ಲೆ ಹೇಳ್ರಿ! ಈಗ ಆ ಹುಡುಗಿ ತಂದೆ-ತಾಯಿಗಳು ಬಡವರಿದ್ದಾರಂತ ತಿಳೀರಿ; ಅವರು ತಮ್ಮ ಮಗಳನ್ನ ನಿಮಗ ಕೊಡತೀವಂತ ಹೇಳಿದರ, ನೀವು ಮದವೀ ಮಾಡಿಕೊಳ್ಳಲಿಕ್ಕೆ ಸಿದ್ಧರಾಗತೀರಾ?"

ಕೋಟು-ಪ್ಯಾಂಟನ ತರುಣ ನಿರುತ್ತರ ಭಾವದವನಾಗಿಯೇ ಮಾತನ್ನು ಆಡಿದ :

"ಸಿದ್ಧರಾಗಬೇಕರೆಪಾ!"

"ಎಲ್ಲಾರೂ ಹೀಂಗs ಅಂತಾರ್ರೀ! ತಮ್ಮನ್ನು ಬಿಟ್ಟು ಮಿಕ್ಕವರು ಸಿದ್ಧರಾಗಬೇಕೂ ಅಂತ ಅಪೇಕ್ಷಿಸತಾರ! ಈ ವರದಕ್ಷಿಣೀ ಅಂಬೂದು, ನಮ್ಮ ಸಮಾಜದೊಳಗ ಎಂಥೆಂಥಾ ಜೀವನಗಳ ಘಾತಮಾಡಲಿಕ್ಕೆ ಹತ್ತೇದಂಬೂದರ ಕಲ್ಪನಾ ಯಾರೂ ಮಾಡವೊಲ್ಲರು!" ಪಾಯಜಾಮೆಯವನ ಮಾತಿದು.

ಬಾವಾಜಿಯಿಗ ತರುಣರಲ್ಲಿಯ ಚರ್ಚೆಯ ಕಡೆಗೆ ಕಿವಿಗಳನ್ನು ಕೊಟ್ಟಿದ್ದ. ಪಾಯಾಜಾಮೆಯವನು ಆಡಿದ ವರದಕ್ಷಿಣೆಯ ಉಪನ್ಯಾಸದ ಮಾತುಗಳು ಅವನ ಅಶಕ್ತ ಮನಸ್ಸಿನ ಮೇಲೆ ಎಂತಹ ಪರಿಣಾಮವನ್ನು ಮಾಡಿದುವೋ ಏನೋ! ಸುಮ್ಮನೆ ಬಿದ್ದಲ್ಲಿ ಬಿದ್ದುಕೊಂಡು, ಕಂಬನಿಗಳನ್ನು ಹರಿಸತೊಡಗಿದ. ನಾನು ಬಾವಾಜಿಯ ಅಂಗಾಂಗಗಳ ವಿಕಾರಗಳನ್ನೆಲ್ಲ ದಿಟ್ಟಿಸಿ ನೋಡುತ್ತಲೇ ಕುಳಿತಿದ್ದೆ. ಆಗ ಒಮ್ಮೆಲೆ ಅವನು ತನ್ನಲ್ಲಿ ತಾನೇ ರೊಚ್ಚಿನ ಧ್ವನಿಯಲ್ಲಿ ಪಿಸುಗುಟ್ಟಿದ :

"ವರದಕ್ಷಿಣೆ!....ವ-ರ-ದ-ಕ್ಷಿ-ಣೆ!" ಪಿಸುನುಡಿಯ ಕೊನೆಯಲ್ಲಿಯೇ ನಿಡಿದಾದ ಬಿಸಿಯುಸಿರೊಂದು ಬಾವಾಜಿಯ ಮುಖದಿಂದ ಹೊರಬಿದ್ದಿತು. ನಾನಾಗ ಮೆಲುನುಡಿಗಳಲ್ಲಿಯೇ ಆತನನ್ನು ಕೇಳಿದೆ :

"ಯಾಕೆ ? 'ವರದಕ್ಷಿಣೆ'ಯ ಚರ್ಚೆಯನ್ನು ಕೇಳಿ ಸಂತಾಪವಾಯಿತೇ ನಿಮಗೆ ?"

ಬಾವಾಜಿ ವಿಷಾದದ ನಗೆ ನಗುತ್ತ ಹೇಳಿದ :

"ಸಂತಾಪ .... ಸಂತಾಪ .... ಹೊಸತಾಗಿ ಸಂತಾಪವೇನಾಗಬೇಕಾಗಿದೆ ನನಗೆ ! ನನಗಾದ ಸಂತಾಪ ನನ್ನ ಜೀವನವನ್ನು ಬೂದಿಗೊಳಿಸಿ ಬಿಟ್ಟಿದೆ ! ನನ್ನ ಬಾವಾಜಿತನದ ಬೂದಿಯ ಕುರುಳು–ಕಟ್ಟಿಗೆಗಳದಲ್ಲ....ನನ್ನ ಜೀವನವೇ ಬೆಂದ ಬೂದಿ !"

"ಅದೇಕೆ ನಿಮ್ಮ ಜೀವನವು ಬೆಂದು ಬೂದಿಯಾಯಿತು ?"

"ನನ್ನದೊಬ್ಬನ ಜೀವನವೇ ಬೇಯಲಿಲ್ಲ ; ನನ್ನನ್ನು ನಂಬಿದ ಒಬ್ಬ ಬಡ ಹೆಣ್ಣುಮಗಳ ಬದುಕಿನ ಹೋಳಿಯೂ ಆಯಿತು ! ರಾಯರೇ, ಅದನ್ನೆಲ್ಲ ನಾನೀಗ ಹೇಳಲಾರೆ....ಹೇಳಿ ಸಹಿಸುವ ಸಾಮರ್ಥ್ಯವೀಗ ನನ್ನಲಿಲ್ಲ....ನೀವಿಂದು ನನಗೆ ಜೀವದಾನ ಮಾಡಿದಿರಿ ! ನೀವು ಯಾರೆಂಬುದು ನನಗೆ ಗೊತ್ತಿಲ್ಲ. ದಯೆಯಿಟ್ಟು ನನಗೆ ನಿಮ್ಮ ವಿಳಾಸವನ್ನು ಕೊಡಿರಿ ! ಎಂದಾದರೂ ಒಂದು ದಿನ, ನಾನು ಯಾರೆಂಬುದೂ–ನನ್ನ ಜೀವನ ಬೂದಿ ಹೇಗಾಯಿತೆಂಬುದೂ– ನಿಮಗೆ ತಿಳಿಯಬಹುದು. ಮಾನವತೆಯಿರುವ ಎಡೆಯಲ್ಲಿ ನನ್ನ ಜೀವನದ ದುಃಖದುರಿಯನ್ನು ತೋಡಿಕೊಂಡರೆ, ಕರುಣೆಯ ಕಂಬನಿಗಳುದುರಿ ಆ ದುಃಖದ ಕಾವು ಕಡಿಮೆಯಾದೀತು !...."

ಬಾವಾಜಿಗೆ ಗ್ಲಾನಿ ಬಂದಂತಾಯಿತು. ಕಣ್ಣು ಮುಚ್ಚಿ ಸುಮ್ಮನೆ ಬಿದ್ದುಕೊಂಡ ; ಮತ್ತೆ ಬಾಯಲ್ಲಿ ನೀರು ಹಾಕಿದೆ. ನೆತ್ತಿಗೆ ಸ್ವಲ್ಪ ನೀರನ್ನು ತಟ್ಟಿದೆ ; ಮತ್ತೆ ಅವನು ಚೇತರಿಸಿ ಕಣ್ಣು ತೆರೆದು ನನ್ನನ್ನು ಕೇಳಿದ :

"ಎಲ್ಲಿ....ನಿಮ್ಮ ವಿಳಾಸವನ್ನು....ನನಗೆ ಕೊಡಿರಿ !"

ನಾನೊಂದು ಕಾಗದವನ್ನು ತೆಗೆದುಕೊಂಡು, ಅದರ ಮೇಲೆ ನನ್ನ ವಿಳಾಸವನ್ನು ಬರೆದು ಆತನ ಕೈಯಲ್ಲಿ ಕೊಡುತ್ತ ನುಡಿದೆ :

"ನಾನು ತಮ್ಮನ್ನು ಒಂದು ಮಾತಿನ ಬಗೆಗೆ ಕೇಳಿಕೊಳ್ಳಲೆ ?"

"ಏನು ?"

"ತಾವೀಗ ಎಲ್ಲಿಗೆ ಹೋಗಬೇಕೆಂದಿದ್ದೀರಿ ?"

"ಎಲ್ಲಿಗಾದರೂ .... ಬದುಕಿ ಉಳಿಯುವುದಕ್ಕೆ ಅನುಕೂಲವಿರುವ ಸ್ಥಳಕ್ಕೆ !"

"ಎಂದರೇನು ? ಯಾವುದಾದರೂ ಕ್ಷೇತ್ರಕ್ಕೆ ಹೋಗಬೇಕೆನ್ನುವಿರಾ ?"

"ಹುಂ....ಕ್ಷೇತ್ರ....ಕ್ಷೇತ್ರಕ್ಕೆ ಹೋಗಬೇಕೆಂದಿದ್ದೇನೆ !"

"ಅಲ್ಲಿಯವರೆಗೆ ಮತ್ತೆ ನಿರಾಹಾರ ಬೇಡ. ಇದು ತೆಗೆದುಕೊಳ್ಳಿರಿ ಸ್ವಲ್ಪ ಹಣ ! ಇದಿಷ್ಟು ನಿಮ್ಮ ಬಳಿಯಲ್ಲಿರಲಿ ! ಇದು ತಿರುಪೆಯಲ್ಲ... ನನ್ನ ನಿಮ್ಮ ಪರಿಚಯದ ಗುರುತು !"

"ನನಗೆ ಹಣವು ಬೇಡ...ಬೇಡವೇ ಬೇಡ...."

ಪಕ್ಕದ ಡಬ್ಬಿಯಲ್ಲಿ ಗಾಯಕಿಯು ಹಾಡುತ್ತಿದ್ದುದು ಕೇಳಿಸಿತು :

"ಅಖಿಯಾ ಮಿಲಾಕೇ ಜೀಯುಭರಮಾಕೇ ಚಲೆ ನಹಿ ಜಾನಾ !"

ಬಾವಾಜಿ ಕಿವಿಗೊಟ್ಟು ಕೇಳಿದ. ಕುತೂಹಲ ಮುದ್ರೆ ಆತನ ಮುಖದಲ್ಲಿ ಮೂಡಿಕೊಂಡಿತು. ಅರ್ಧ ತನ್ನೊಳಗೆ ಅರ್ಧ ಹೊರಗೆ ಎನ್ನುವಂತೆ ಅವನು ಮಾತನಾಡಿದ :

"ಅದೇ ಅದೇ ಧ್ವನಿ ! ಕನಸಿನಲ್ಲಿ ಕೇಳಿಸುತ್ತಿರುವ ಧ್ವನಿಯೂ ಇದೆ !"

ಆಮೇಲೆ ನನ್ನನ್ನು ನೋಡುತ್ತ ನುಡಿದ :

"ನನಗೆ ನಿಮ್ಮ ಹಣವು ಬೇಡ, ತಿರಿದುಕೊಂಡಾದರೂ ಬದುಕಬೇಕೆಂದು ಅಪರಿಚಿತ ಪ್ರದೇಶಕ್ಕೆ ಹೊರಟಿದ್ದೇನೆ."

"ಸರಿ ! ನಾನೂ ನಿಮಗೆ ಅಪರಿಚಿತನೆ ! ಅಪರಿಚಿತ ವ್ಯಕ್ತಿಯೇನು, ಪ್ರದೇಶವೇನು ?"

ನಾನು ಇಳಿಯಬೇಕಾದ ಪಟ್ಟಣದ ಸ್ಟೇಷನು ತೀರ ಸಮೀಪಿಸಿತು. ಗಾಡಿಯು ಅದರ ಸೂಚನೆಯನ್ನು ಕೊಟ್ಟಿತು. ನಾನು ಕೈಚೀಲವನ್ನು ತೆಗೆದುಕೊಂಡು ಕೆಳಗೆ ಇಳಿಯುವ ಸಿದ್ಧತೆಯನ್ನು ಮಾಡಿಕೊಂಡು ಬಾವಾಜಿಗೆ ನುಡಿದೆ :

"ನೋಡಿರಿ, ಜೀವನದ ಬೆಲೆಯು ಅಮೂಲ್ಯವಾದದ್ದು ! ಬದುಕಿ ಉಳಿದವನು 'ಭದ್ರಗಳನ್ನು' ಕಂಡೇ ಕಾಣುವನು. ಕತ್ತಲೆಯೆಂಬುದು ಸ್ವರೂಪತಃ ನಿಜವೂ ಅಲ್ಲ ; ಶಾಶ್ವತವೂ ಅಲ್ಲ. ಬೆಳಕಿನ ಅಭಾವದ ಕೆಲವು ಗಂಟೆಗಳ ಕಾಲ ಕತ್ತಲೆ ಎಂಬುದನ್ನು ನಾವು ಮರೆತು ನಡೆಯಲಾಗದು. ಕತ್ತಲೆಗಳನ್ನು ಅನುಭವಿಸದೆ ಬೆಳಕೂ ದೊರೆಯಲಾರದು ! ಇಗೋ, ನನ್ನ ನಿಲ್ದಾಣ ಬಂದಿತು. ಬೇಡವೆನ್ನಬೇಡಿರಿ ! ನಾನು ಕೊಡುವ ಈ ಹಣವನ್ನು

ತೆಗೆದುಕೊಳ್ಳಿರಿ !" ಎಂದು ಹತ್ತು ರೂಪಾಯಿಯ ನೋಟೊಂದನ್ನು ಆತನ ಮಗ್ಗಿಲ ಬುಡದಲ್ಲಿ ಸೇರಿಸಿ ನಾನು ಅಲ್ಲಿಂದ ಎದ್ದುಹೊರಟೆ. ಜನರ ನೂಕು-ನುಗ್ಗಲಿನಲ್ಲಿಯೆ ಗಾಡಿಯಿಂದ ಕೆಳಗಿಳಿದು ಕಿಟಕಿಯೊಳಗಿಂದ ಆ ಬಾವಾಜಿಯ ಕಡೆಗೆ ನೋಡಿದೆ. ಏನೋ ವಿಚಾರಮುದ್ರೆಯಲ್ಲಿ ಅವನು ಸುಮ್ಮನೆ ಬಿದ್ದು ಕೊಂಡಿದ್ದ. ನಾನು ಹೇಳಿದೆ : "ನಮಸ್ಕಾರ ಬಾವಾಜೀ !"

ಬಾವಾಜಿ ಕಷ್ಟದಿಂದಲೇ ಕೈಗಳನ್ನು ಜೋಡಿಸಿ ಎದೆಗೆ ಹಚ್ಚಿ ನುಡಿದ :

"ನ...ಮ...ಸ್ಕಾ...ರ ! ತಮಗೆ...ಕಾಗದ ಬರೆಯುತ್ತೇನೆ !"

"ಆಗಲಿ, ಹೋಗಿಬನ್ನಿರಿ !"

ನಾನು ಅಲ್ಲಿಂದ ಹೊರಟೆ. ಟ್ರೇನಿನ ಒಂದು ಡಬ್ಬಿಯೊಳಗಿಂದ ಗಾಯಕಿಯ ಹಾಡಿನ ನುಡಿ ಹೊರನುಗ್ಗಿ ಬರುತ್ತಲಿತ್ತು :

"ನೀರಜಾಕ್ಷೀ ಬಾರನ್ಯಾತಕೆ ಪ್ರಿಯ !
ಕರೆತಾರೇ ಮುಗಿವೆ ನಾ ಕೈಯ !"

ಹಾಡನ್ನು ಕೇಳುತ್ತಲೇ ನಾನು ಮುಂದೆ ನಡೆದೆ. ನಿಲ್ದಾಣದಿಂದ ಹೊರಬಿದ್ದು ಟಾಂಗೆಯೊಂದನ್ನು ಮಾಡಿ, ನಾನು ಇಳಿದುಕೊಳ್ಳಬೇಕಾದ ಮನೆಯತ್ತ ಹೊರಟೆ. ಟಾಂಗೆಯಲ್ಲಿ ಕುಳಿತಾಗ ನನಗೆ ನನ್ನ ಕಂಪಾರ್ಟ್‌ಮೆಂಟಿನದೇ ಹಗಲುಗನಸು ! ಮದ್ರಾಸಿನ ಬಡವರ ತಂಡ...ಮೂವರು ತರುಣ ಮಿತ್ರರ ಚರ್ಚೆ–ವಾದ...ಬಾವಾಜಿಯ ದಾರುಣ ಅವಸ್ಥೆ...ಗಾಯಕಿ–ಭಿಕ್ಷುಕಿಯ ಮೂಗುಬಟ್ಟು–ಲೋಲಕಿನ ಮುಖ...ಗಾಡಿಯಲ್ಲಿ ಹತ್ತುವವರು... ಗಾಡಿಯಿಂದ ಇಳಿಯುವವರು !

ಆಗ ನನ್ನ ಮನಸ್ಸಿನಲ್ಲೊಂದು ವಿಚಾರವು ಮೂಡಿತು :

"ಮೂರನೆಯ ವರ್ಗದ ಪ್ರವಾಸವೇ ನಿಜವಾದ ಪ್ರವಾಸ ; ಇಂಟರ್, ಎರಡನೆಯ ತರಗತಿ, ಒಂದನೆಯ ತರಗತಿ ಇವು ಮನುಷ್ಯನಲ್ಲಿ ಮನುಷ್ಯತ್ವವನ್ನು ತುಂಬಲಾರವು. ದೇಹ–ಮನಸ್ಸುಗಳನ್ನು ದಣಿಸಿದರೆಯೆ ನಮಗೆ ನಿಜವಾದ ಮನುಷ್ಯತ್ವದ ಅನುಭವವಾಗುವುದು. ನಾನಿನ್ನು ಮೇಲಿನ ವರ್ಗದ ತರಗತಿಯ ಪ್ರವಾಸವನ್ನು ಎಂದೂ ಮಾಡಕೂಡದು. ಕೊನೆಯುವರೆಗೂ ಮೂರನೆಯ ಪ್ರವಾಸಿಯೆ ಆಗಬೇಕು ನಾನು !"

ಖೆಡ್ಡಾ ಅಳಿಯ

ರಾ. ಶಿ.

ಇಡೀ ಕರ್ನಾಟಕದಲ್ಲಿ ನಮ್ಮ ಜಾತಿಯೇ ವಿಚಿತ್ರ. ನಮ್ಮವರ ಮನೆಗಳು ಸುಮಾರು ಇನ್ನೂರಿರಬಹುದು. ಒಂದೊಂದು ಮನೆಯವರೂ ಸುಮಾರು ಇನ್ನೂರು ಮೈಲಿ ದೂರದಲ್ಲಿ ವಾಸಮಾಡಿಕೊಂಡಿರುವರು. ಹೀಗಿರುವಾಗ ನಮಗೆ ಅಳಿಯನನ್ನು ಹಿಡಿದು ತರಬೇಕಾದರೆ ಬಲು ಕಷ್ಟ ಸಾಧ್ಯ. ಮೈಸೂರಿನಲ್ಲಿ 'ಖೆಡ್ಡಾ' ವಿಧಾನದಿಂದ ಆನೆ ಹಿಡಿಯುತ್ತಾರೆಂದು ಕೇಳಿ ಅಲ್ಲಿಗೆ ಹೋಗಿ ನೋಡಿದೆ. ಆಗನಿಸಿತು 'ಇದೇನು ಮಹಾಪ್ರಯಾಸ, ನಾನು ಅಳಿಯನನ್ನು ಹಿಡಿಯ ಹೋಗುವುದೇ ಕಷ್ಟತರ' ಎಂದು. ನಾನು ಹೂಡಿದ ತಂತ್ರ ಚಾತುರತೆಗಳನ್ನೆಲ್ಲಾ ಹೇಳುತ್ತೇನೆ; ನೀವೇ ತೀರ್ಮಾನಿಸಿ ಹೇಳಿ.

ನಮ್ಮ ಮನೆ ಕನ್ನೆಗೆ ಪಾಪ್ತ ವಯಸ್ಸಿನ್ನಿ. ಆಗ ನಾನು ನಮಗೆ ತಿಳಿದವರಿಗೆಲ್ಲಾ ಒಂದೊಂದು ಪತ್ರವನ್ನು ಬರೆದು ಹಾಕುತ್ತೇನೆ. ಅವರುಗಳಲ್ಲಿ ಕೆಲವರೆಲ್ಲಾ ಸುತ್ತುಮುತ್ತಲೂ ತಲಾಸೆ ಮಾಡಿ ಈ ಭಾವೀ ಅಳಿಯಂದಿರುಗಳು ಹೊಕ್ಕಿಕೊಂಡಿರುವ ಸ್ಥಳಗಳನ್ನು ನನಗೆ ತಿಳಿಸುತ್ತಾರೆ. ಆಗ ನಾನು ಆ ಸ್ಥಳದ ಸುತ್ತಲೂ ಇರುವ ತಿಳಿದ ತಿಳಿಯದ ಜನರಿಗೆಲ್ಲಾ ಕೈ ಮುಗಿದು, ಅವರ ಮನೆಯನ್ನು ಸುತ್ತುಗಟ್ಟುತ್ತೇನೆ. ಈ ಹೊರವ್ಯೂಹವು ಗಟ್ಟಿಯಾದ ಮೇಲೆ, ಸುತ್ತುಗಟ್ಟಿರುವ ಜನರಲ್ಲೊಬ್ಬನು ಗಲಭೆ ಎಬ್ಬಿಸುತ್ತಾನೆ—ಒಂದು ಪತ್ರ ಬರೆದು. ಅಳಿಯ, ಅಳಿಯನ ತಂದೆ-ತಾಯ್ಗಳು 'ಇದೇನಿದು!' ಎಂದು ಹಿಂಡಿಗೆ ಹಿಂಡೇ ಹೊರಬೀಳುವುದು. ಆಗ ನಾವೆಲ್ಲರೂ ಒಟ್ಟಿಗೇ ಮೇಲೆ ಬಿದ್ದು, ಸಲಗನನ್ನು ಎಂದರೆ ಅಳಿಯನ ತಂದೆಯನ್ನು ಯಾವುದಾದರೂ ಒಂದು ಮನೆಯಲ್ಲಿ ಹಿಡಿದುಹಾಕುತ್ತೇವೆ. ಆ ಸಲಗ ಎಷ್ಟು ಕೋರೆ ಹಲ್ಲು ತೋರಿಸಿದರೂ ನಾವೇನೂ ಬಿಡುವಂತಿಲ್ಲ. ಪಳಗಿದ ಆನೆಗಳಂತಿರುವ ಅವನ ಸೋದರಮಾವ, ಚಿಕ್ಕಪ್ಪ, ಇವರುಗಳ ಸಹಾಯದಿಂದ ಅವನನ್ನು ಮಾತುಗಳಿಂದ ಬಿಗಿಯುತ್ತೇವೆ. ಕಲಿಯುಗ-ಮಾತುಗಳ ಬಿಗಿತಕ್ಕೆ ಎಲ್ಲಿ ಗಸ್ತು ಕೊಡುವನೋ ಎಂದು

ಹೆದರಿ ಅವನಿಂದ ಬರವಣಿಗೆಯ ಮೂಲಕ ಬಂಧನವನ್ನು ಮಾಡಿಸುತ್ತೇವೆ. ಹೀಗಾದ ಮೇಲೂ ಆ ಸಲಗನು ಇನ್ನೂ ರೋಷದಿಂದಲೇ ಇರುತ್ತಾನೆ. ಆಗ ನಾವೆಲ್ಲರೂ ಅವನ ಮೈದಡವಿ ಕಬ್ಬಿನ ಜಲ್ಲೆಯನ್ನೂ ಅದರಿಂದುಂಟಾದ ಸಕ್ಕರೆ ಪಾಯಸಗಳನ್ನೂ ತಿನ್ನಲು ಕೊಡುತ್ತೇವೆ. ಆ ವೇಳೆಗೆ ಅವನೂ ಸ್ವಲ್ಪ ನಮ್ಮ ಕಡೆಗೇ ತಿರುಗುತ್ತಾನೆ. ಆಗ ಅವನನ್ನು ಹಿಡಿದುಕೊಂಡು ಅವನ ಹಿಂಡಿನ ಹತ್ತಿರ ಕರೆದುಕೊಂಡು ಹೋಗುತ್ತೇವೆ. ಆಗ ನೀವುಗಳು ನೋಡಬೇಕು, ಹೆಣ್ಣಾನೆಯು ಮಗುವನ್ನು ಕಾಪಾಡಿಕೊಳ್ಳುವುದನ್ನು ! ಎಷ್ಟೋ ವೇಳೆ ಸಲಗನನ್ನು ಹಿಡಿದರೂ, ಹಿಂಡಿಗೆ ಹಿಂಡೇ ಒಂದಾಗಿ ಕೈ ತಪ್ಪಿಸಿಕೊಂಡು ಹೋಗುವುದು, ಆದರೆ, ಇದನ್ನರಿತ ನಾವು ಹೆಣ್ಣಾನೆಯನ್ನು ಮೊದಲೇ ಬಲು ಒಳ್ಳೆಯ ಮಾತುಗಳಿಂದ, ಕುಪ್ಪಸ ಕುಂಕುಮಗಳಿಂದ, ನಮ್ಮ ಐಶ್ವರ್ಯವನ್ನು ತೋರಿಸಿ ಕೊಳ್ಳುವುದರಿಂದ, ಒಂದು ತೆರನಾಗಿ ಒಲಿಸಿಕೊಳ್ಳುತ್ತೇವೆ. ಆದರೂ ಆ ಹೆಣ್ಣಾನೆಗೆ ಅಸನಂಬಿಕೆ. ಸುತ್ತಲೂ ಮೂಸಿನೋಡುವಂತೆ ಸೊಂಡಿಲನ್ನು ಎಲ್ಲಾ ಕಡೆಗೂ ತಿರುಗಿಸಿ ನಮ್ಮ ಸ್ಥಿತಿಗತಿಗಳನ್ನು ತಕ್ಕಮಟ್ಟಿಗೆ ತಿಳಿದುಕೊಳ್ಳುತ್ತದೆ ಕೆಲವು ವೇಳೆ ಬೆಳ್ಳಗಿರುವುದನ್ನು ಹಾಲೆಂದೂ, ಕಣ್ಣಿಗೆ ಕಂಡುದನ್ನು ಕಬ್ಬೆಂದೂ ತಿಳಿದು ಒಪ್ಪಿಕೊಳ್ಳುತ್ತದೆ. ಆಗ ನಾವು ಮುಕ್ಕಾಲು ಪಾಲು ಗೆದ್ದಂತೆ! ಸಲಗ ಮತ್ತು ಹೆಣ್ಣಾನೆಯ ಸಹಾಯದಿಂದ ಮರಿಯಾನೆಯನ್ನು ಹಿಡಿದು ತರುತ್ತೇವೆ. ತಾಯ್ತಂದೆಗಳೊಡನೆ ಹರುಷದಿಂದ ಓಡಾಡುವ ಆ ಮರಿಯನ್ನು ಹಿಡಿದು ತಂದು, ನಮ್ಮ ದೊಡ್ಡಿಗೆ ಸೇರಿಸಿಕೊಂಡು, ಆರೈಕೆ ಮಾಡಿ, ಹರ್ಷಗೊಳಿಸಿ, ಅದಕ್ಕೆ ಜತೆಗಾಗಿ ನಮ್ಮ ಹೆಣ್ಣನ್ನು ಕೊಟ್ಟು, ತಯಾರು ಮಾಡುತ್ತೇವೆ. ಇದೂ ಮುಂದೆ ಸಲಗನಂತೆಯೇ ಆಗಿ, ತನ್ನ ಹಿಂಡನ್ನು ತಾನೇ ಸಾಕಿಕೊಳ್ಳುತ್ತದೆ ಎನ್ನುವ ಭರವಸೆಯಿಂದ ಇಷ್ಟು ಕಷ್ಟಪಟ್ಟು, ಖಡ್ಡಾ ರೀತಿಯಾಗಿ ಅಳಿಯನನ್ನು ಬೇಟೆ ಮಾಡಿ ತರುತ್ತೇವೆ.

ಆದರೆ ಇಲ್ಲಿಗೆ ಇವೆರಡರ ಹೋಲಿಕೆಯು ಮುಗಿದಂತೆ. ಖಡ್ಡಾದಲ್ಲಿ ಹಿಡಿದು ತಂದ ಆನೆಗಳೆಲ್ಲವೂ ನಮ್ಮಂತೆಯೇ ಸೌಮ್ಯವಾಗಿ ಬಾಳಲಾರಂಭಿಸುವುವು. ಸಾಕಿದ ಆನೆಗಳಂತೆಯೇ ನಡೆದುಕೊಳ್ಳುವುವು.

ಆದರೆ ನಮ್ಮ ಖಡ್ಡಾ ಅಳಿಯಂದಿರು, ಮಾವನ ಮನೆಗೆ ಬರುತ್ತಲೇ ಮರಿಯಾನೆಯಾಗಿ ಬಿಡುತ್ತಾರೆ. ಅವರ ಆಟಾಟೋಪಕ್ಕೆ ಎಣೆಯೇ ಇಲ್ಲ,

ಅವರ ಹೂಂಕಾರಕ್ಕೆ ಮಿತಿಯೇ ಇಲ್ಲ. ಕಡೆಕಡೆಗೆ ಎಷ್ಟೋ ಮನೆಗಳನ್ನು ತಮ್ಮ ಮದವೇರಿದಾಡಳಿತದಿಂದ ತೊಡೆದೇ ಹಾಕಿ ಬಿಡುತ್ತಾರೆ.

ಈಗ ನೀವು ಹೇಳಿ, ಖೆಡ್ಡಾ ಆನೆಗಳ ಷಿಕಾರಿ ಪ್ರಯಾಸವೋ ಫಲ ಕಾರಿಯೋ ? ನಮ್ಮ ಖೆಡ್ಡಾ ಅಳಿಯಂದಿರ ಷಿಕಾರಿ ಪ್ರಯಾಸವೋ ಫಲ ಕಾರಿಯೋ ?

ಕೊಡೆಯ ವಿಚಾರ

ಪಿ. ರಮಾನಂದ ರಾಯರು

ಬೇಸಗೆಯ ಕಾಲ ಕಳೆಯಿತು. ಮಳೆಗಾಲ ಪ್ರಾರಂಭಿಸಿತು. ಪ್ರಣಯಿಗಳಿಗೆ ಮನೋಲ್ಲಾಸದ ಕಾಲ ಒದಗಿತು. ವಿರಹಿಗಳಿಗೆ ಟಪ್ಪಾಲು ಪೇದೆಗಳು ಸಾಕಾಗದೆ ಮೇಘಗಳನ್ನೂ ದೂತರನ್ನಾಗಿ ಮಾಡುವ ಕಾಲ ಒದಗಿತು. ಮೊದಲ ಮಳೆಯ ಸ್ಪರ್ಶವೂ ಆಯಿತು. ಬೆಳೆದ ಯೌವನ ಚಂದ, ಮೊದಲ ಮಳೆಯು ಚಂದ. ನನಗೆ ಹಳೆಯ ಹಾಡುಗಳು ಚಂದ.

ಮಳೆಗಾಲಕ್ಕೆ ಬೇಕಾದ ಅಕ್ಕಿಮುಡಿಗಳನ್ನೂ, ಕಟ್ಟಿಗೆ ಸೌದೆಯನ್ನೂ, ಹಪ್ಪಳ ಸಂಡಿಗೆಗಳನ್ನೂ, ಉಪ್ಪಿನಕಾಯಿಗಳನ್ನೂ ಎಲ್ಲವನ್ನೂ ಶೇಖರಿಸಿದಂತಾಯಿತು. ಎಲ್ಲವನ್ನೂ ಅಲ್ಲ; ಒಂದನ್ನು ಮರೆತಿರುವೆನು. ಮಳೆಗಾಲಕ್ಕೆ ಅತಿ ಅಗತ್ಯವಾಗಿ ಬೇಕಾದ ಒಂದು ಮುಖ್ಯ ವಸ್ತುವನ್ನು. ಹಕ್ಕಿಗೆ ಗೂಡಿನಾಸೆ, ಕರುವಿಗೆ ದನದಾಸೆ, ಕೂಸಿಗೆ ತಾಯಾಸೆ, ನನಗೀಗ ಒಂದು ಕೊಡೆಯ ಆಸೆ. (ಹಳೆಯ ಹಾಡು)

ಆದರೆ ಮಾಡುವುದೇನು ? ನನಗೂ ಕೊಡೆಗೂ ದೀರ್ಘಕಾಲದ ದಾಂಪತ್ಯ ಸುಖವನ್ನು ವಿಧಾತನು ಬರೆಯಲೇ ಇಲ್ಲ. ನಾನು ಯಾವ ಕೊಡೆಯನ್ನು ಎಷ್ಟು ಶ್ರದ್ಧೆಯಿಂದ ಹುಡುಕಿ ಇಟ್ಟುಕೊಂಡರೂ ನಮ್ಮಿಬ್ಬರ ಜಾತಕದಲ್ಲಿ ಮೇಳಾಮೇಳಿಯೇ ಬರುವುದಿಲ್ಲ. ಕಳೆದ ಮಳೆಗಾಲದಲ್ಲಿ ನಾಲ್ಕು ವೀರಾಂಗನೆಗಳಾದ ಕೊಡೆಗಳು ನನ್ನ ಕೈಯನ್ನು ಹಿಡಿದು ನನ್ನನ್ನು ಗೌರವಿಸಿದ್ದುವು. ನಾನು ನಾಲ್ಕು ಛತ್ರಿಗಳ ಅಧಿಪತಿಯಾಗಿ ಮೆರೆದೆನು.

ಮೊದಲ ಕೊಡೆಯನ್ನು ನಾನೇ ಬಹಳ ಶ್ರದ್ಧೆಯಿಂದ ಹುಡುಕಿ ನನ್ನದಾಗಿ ಮಾಡಿಕೊಂಡಿದ್ದೆನು. ಅದರ ನುಣುಪಾದ ಥಳಥಳಿಸುವ ಮೈ, ಸಂಪಿಗೆ ಹೂವಿಗಿಂತ ಅಂದವಾದ ಅದರ ಮೂಗುತಿ, ಹಂಸಪಕ್ಷಿಯ ಕತ್ತಿನಂತಿರುವ ಅದರ ಕೊರಳು, ಲತೆಯಂತಿರುವ ಅದರ ಮೈಕಟ್ಟು, ಇವೆಲ್ಲವೂ ನನ್ನನ್ನು ಬಹಳವಾಗಿ ಮೋಹಗೊಳಿಸಿದ್ದುವು. ಅದು ನನ್ನ ಮೊದಲಿನ

ಕೊಡೆಯಾಗಿದ್ದರೂ ಎರಡನೆಯ ಹೆಂಡತಿಯಂತೆ ನನಗದು ಬಲು ಮುದ್ದಾಗಿದ್ದಿತು.

ಅದನ್ನು ಪಡಕೊಂಡ ಮೂರು ದಿನಗಳ ವರೆಗೆ ಅದನ್ನು ಅತ್ಯಧಿಕ ಪ್ರೇಮದಿಂದ ಜೋಪಾನ ಮಾಡಿದೆನು. ಅದಕ್ಕೊಂದು ಸುಂದರವಾದ ಪಂಚರಂಗಿ ಸೀರೆಯನ್ನುಡಿಸಿ ಸಾಧಾರಣ ಮಳೆಗೆಲ್ಲ ಅದನ್ನು ಕಂಕುಳಲ್ಲಿಯೇ ಹಿಡಿದುಕೊಂಡು ಬೀದಿಬೀದಿಯಲ್ಲಿ ಮೆರೆದೆನು. ಎರಡನೆಯ ದಿನ ನಾನು ಹಾಗೆ ಮೆರೆಯುತ್ತಿದ್ದಾಗ ನನ್ನ ಸ್ನೇಹಿತ ಹರಿಕಮತನು ನನಗೊಮ್ಮೆ ದಾರಿಯಲ್ಲಿ ಸಿಕ್ಕಿದನು. 'ಏನು ರಮಾನಂದ, ಮಳೆ ಬರುತ್ತಿದ್ದರೂ ನೀನು ಕೊಡೆಯನ್ನು ಬಿಡಿಸದೆ ನಡೆಯುತ್ತೀಯಲ್ಲ ?' ಎಂದು ನಗುತ್ತಾ ಕೇಳಿಯೇ ಬಿಟ್ಟನು. ನನ್ನ ಕಂಕುಳಲ್ಲಿ ನನ್ನನ್ನು ಪ್ರೇಮದಿಂದ ಆಲಿಂಗಿಸಿಕೊಂಡಿದ್ದ ನನ್ನ ಕೊಡೆಯನ್ನು ಮುದ್ದಾಗಿ ನೋಡಿದೆನು. ನನ್ನ ಮುಂದೆ ಹಲ್ಲುಕಿರಿದು ನಿಂತಿದ್ದ ಹರಿಕಮತನನ್ನು ಬಿರುಸಾಗಿ ನೋಡಿದೆನು. 'ಬೆಳೆದ ಯೌವನ ಚಂದ, ಮೊದಲ ಮಳೆ ಚಂದ, ಎಂದು ನಿನಗೆ ಗೊತ್ತಿಲ್ಲವೇ ?' ಎಂದು ಹೇಳಿ ನನ್ನ ಕೊಡೆಯನ್ನು ಬಿಡಿಸದೆ ಮಳೆಯಲ್ಲಿ ನೆನೆಯುತ್ತಾ ನನ್ನ ದಾರಿಯನ್ನು ಹಿಡಿದೆನು.

ಮೂರನೆಯ ದಿನ ನನ್ನ ಆಚ್ಚುಮೆಚ್ಚಿನ ಕೊಡೆಗೆ ನವ ವರ್ಷಾಕಾಲದ ಪ್ರಥಮಸ್ನಾನವಾಯಿತು. ಅದರೊಂದಿಗೆ ನನಗೂ ವಿಶೇಷ ಮಂಗಳಸ್ನಾನ ವಾಯಿತೆಂದು ನಾನು ಬೇರೆ ಹೇಳಬೇಕಾಗಿದ್ದಿಲ್ಲ. ಅಂದು ರಾತ್ರಿ ನಾನು ನನ್ನ ಕೊಡೆಗಾಗಿ ಪಟ್ಟ ವ್ಯಥೆ ಹೇಳತೀರದು. ಕಣ್ಣಿನಲ್ಲಿ ಗಾಢನಿದ್ರೆ ಹತ್ತಿದ್ದರೂ ನಾನು ಮೂರು ಸಲ ಎಚ್ಚತ್ತು ಅದರ ಮೈಯನ್ನು ಚನ್ನಾಗಿ ಒರಸಿ ನೋಡಿದೆನು. ಏಕೆಂದರೆ ಇಂತಹ ಕೋಮಲವಾದ ಕೊಡೆಗಳಿಗೆ ಶೀತವೂ, ಕೆಮ್ಮೂ, ಉಬ್ಬಸರೋಗವೂ,ಎಲುಬುಗಳ ಕ್ಷಯವೂ ಹಿಡಿಯುವುದು ಬಹು ಬೇಗ.

ನಾಲ್ಕನೆಯ ದಿನ ನಾನು ಒಂದು ಮೊಟಂಗಿನಲ್ಲಿ ಕುಳಿತಿದ್ದಾಗ ನನ್ನ ಮುದ್ದು ಕೊಡೆಯಿಂದ ಅಗಲಿರಬೇಕಾಯಿತು. ಮೊಟಂಗು ಅದಮೇಲೆ ನೋಡಿದೆನು. ನನ್ನ ಪ್ರೇಮದ ಕೊಡೆ ಯಾರ ಸಂಗಡವೋ ಪಲಾಯನ ಮಾಡಿತ್ತು !

ನನ್ನ ಕೈಹಿಡಿದ ಸುಶಿಗೆ ಅನೇಕ ಸದ್ಗುಣಗಳುಂಟು, ಅವುಗಳಲ್ಲಿ ಅತಿ ಮುಖ್ಯವಾದುದು ಯಾವುದೆಂದರೆ ಅವಳಿಗೆ ಸವತಿಮತ್ಸರವಿಲ್ಲದಿರುವುದೇ ಎಂದು ನನ್ನ ಅಭಿಪ್ರಾಯ. ಏಕೆಂದರೆ ನನ್ನ ಕೈ ಬಿಟ್ಟು ಹೋದ ಕೊಡೆಗಾಗಿ ಅವಳು ನನಗಿಂತಲೂ ಹೆಚ್ಚಾಗಿ ಮರುಗಿದಳು! ನಾನು ಊಟ ಮಾಡುವಾಗ, ಆಟವಾಡುವಾಗ, ಮಲಗುವಾಗ, ಏಳುವಾಗ ಮೈ ಮುರಿದುಕೊಳ್ಳುವಾಗ, ಆಕಳಿಸುವಾಗ–ಇನ್ನು ಯಾವಾಗಲಾಗಲಿ, ಅವಳು ನಾನು ಕಳಕೊಂಡ ಕೊಡೆಯ ಧ್ಯಾನವನ್ನೇ ಮಾಡಲಾರಂಭಿಸಿದಳು. ಅದರಲ್ಲೂ ಮೌನವಾದ ಧ್ಯಾನವಲ್ಲ! ನನ್ನ ಕೊಡೆಯ ಸಕಲ ಗುಣಗಳ ಬಣ್ಣನೆಯಿಂದ ಕೂಡಿದ ಒಂದು ಅಮೋಘವಾದ ಸ್ತೋತ್ರ! ಮೊದಲೇ ನನ್ನ ಹೃದಯ ನನ್ನ ಕೊಡೆಯ ವಿರಹದಿಂದ ಕಾದ ಹೃದಯವಾಗಿತ್ತು. ಈಗ ಅದರ ಮೇಲೆ ನೀರು ಹೊಯ್ದಂತೆ ಆಯಿತು.

ನನ್ನ ಮುದ್ದಾದ ಕೊಡೆ ಯಾವಾಗಲೂ ನನ್ನ ಕಂಕುಳಲ್ಲಿಯೇ ಇತ್ತೆಂಬುದಕ್ಕೆ ಹರಿಕಮತನೇ ಸಾಕ್ಷಿ ಎಂದು ನಿಮಗೆ ಗೊತ್ತುಂಟು. ಆದರೆ ನಾನು ಎಷ್ಟು ಪರಿ ಪೇಳಿದರೂ ನನ್ನ ಸುಶಿ ಇದನ್ನು ನಂಬುವುದಿಲ್ಲ. ಆಗಲೂ ನನ್ನ ಕಂಕುಳಲ್ಲಿದ್ದುದು ಈಗಲೂ ನನ್ನ ಕಂಕುಳಲ್ಲಿ ಯಾವಾಗಲೂ ಇರುವುದು ನನ್ನ ತಲೆಯೇ ಎಂದು ಅವಳ ವಾದ. ಇರಲಿ, ಬಿನ್ನಹಕೆ ಬಾಯಿಲ್ಲವಯ್ಯಾ!

ಮುಂದಿನ ನಾಲ್ಕು ತಿಂಗಳಲ್ಲಿ ಮೂರು ಕೊಡೆಗಳು ಒಂದರ ನಂತರ ಇನ್ನೊಂದಾಗಿ ನನ್ನೊಡನೆ ಸೇರಿ ನನ್ನ ಕೈಯನ್ನೂ ಕಂಕುಳನ್ನೂ ಗೌರವಿಸಿದುವು. ನಾಲ್ಕನೆಯ ಕೊಡೆ ನನ್ನ ಕೈಯನ್ನು ಬಿಟ್ಟು ಹೋದ ಮೇಲೆ ನನ್ನ ಸುಶಿ ಕೊಡೆಯ ವಿಷಯ ನನ್ನೊಡನೆ ಮಾತಾಡುವುದನ್ನು ನಿಲ್ಲಿಸಿಬಿಟ್ಟಳು. ಇದರಿಂದ ನನಗೆ ಸ್ವಲ್ಪ ಸುಖವಾಯಿತು. ಆದರೆ ನನ್ನ ದೇಹದಲ್ಲಿ ನನ್ನ ತಲೆಯಿರುವ ಸ್ಥಾನದ ವಿಷಯವಾಗಿ ಅವಳಿಗಿದ್ದ ತಪ್ಪು ಅಭಿಪ್ರಾಯ ಇನ್ನೂ ಬದಲಾಗಲಿಲ್ಲವೆಂದು ತಿಳಿಸಲು ವಿಷಾದಪಡುತ್ತೇನೆ.

ಕೊಡೆಗಳಿಗೆ ಸ್ವಲ್ಪವಾದರೂ ಹೃದಯವುಂಟೆಂದು ನನಗೆ ತಿಳಿದು ಬಂದುದು ನನ್ನ ನಾಲ್ಕನೆಯ ಕೊಡೆ ನನ್ನನ್ನು ಬಿಟ್ಟು ಪರಕೀಯನೊಬ್ಬನೊಡನೆ ಪಲಾಯನ ಮಾಡಿದಾಗ. ನನ್ನ ಕೊಡೆಗೆಂದು ನಾನು ಕೈಚಾಚಿದೆನು.

ಒಂದು ಅಪರಿಚಿತವಾದ ಕೊಡೆ ನನಗೆ ಹಸ್ತಲಾಘವವನ್ನು ಕೊಟ್ಟಿತು. ನನಗೆ ಅರ್ಥವಾಯಿತು. ನನ್ನ ಕೊಡೆ ತನ್ನ ಬದಲು ಬೇರೊಂದು ಜನವನ್ನು ಮಾಡಿಯೇ ಪಲಾಯನ ಮಾಡಿತ್ತು. ಹೀಗಿರುವಾಗ ಕೊಡೆಗಳಿಗೆ ಸ್ವಲ್ಪ ವಾದರೂ ಹೃದಯವಿಲ್ಲೆಂದು ಹೇಳಬಹುದೇ? ಆ ಅಪರಿಚಿತವಾದ ಕೊಡೆ ಯನ್ನು ಕೈಯೆತ್ತಿ ಹಿಡಿದೆನು. ಬಿಡಿಸಿ ನೋಡಿದೇನು. ಅಷ್ಟು ವರ್ಷ ಬಾಳಿದ ಕೊಡೆ ಎಷ್ಟು ಮಾತ್ರಕ್ಕೂ ಸುಮಂಗಲೆಯಾಗಿರಲಿಕ್ಕಿಲ್ಲವೆಂದು ತಿಳಿದು ಅದ ಕ್ಕೊಂದು ಬಿಳೇ ಸೀರೆಯನ್ನುಡಿಸಿದೆನು.

ಮರುದಿನವೇ ಅದಕ್ಕೆ ಶೀತವೂ, ಕೆಮ್ಮೂ ಆಗಿ ಬಹಳ ಕಷ್ಟಪಟ್ಟಿತು. ಮಾರನೆಯ ದಿನವೇ ಒಂದು ಚಿಕ್ಕ ಬಿರುಗಾಳಿಗೆ ಪ್ರಾಣಬಿಟ್ಟಿತು. ನನ್ನ ಮಗು ಪ್ರಭಾಶಂಕರ ಧೀರ. ಸ್ವಲ್ಪವಾದರೂ ಆ ಕೊಡೆಯ ಹೆಣಕ್ಕೆ ಹೆದರದೆ ಕೂಡಲೆ ಅದರ ಎಲುಬುಗಳಿಂದ ಬಿಲ್ಲು-ಬಾಣಗಳನ್ನು ಮಾಡಿ ಆಡಲಿಕ್ಕೆ ಪ್ರಾರಂಭಿಸಿದನು.

ಅಂದಿನಿಂದ ಈತನಕ ನನ್ನ ಕೈಗಳು ಮತ್ತು ಕಂಕುಳು ವಿಧುರತ್ವವನ್ನು ಹೊಂದಿವೆ.

ಈಗ ಪುನಃ ಮಳೆಗಾಲದ ಪ್ರಾರಂಭ. ಬಿಲ್ವ ಶಿವನಿಗೆ ಬೇಕು, ಹಲ್ವ ಮಗನಿಗೆ ಬೇಕು, ನನಗೀಗ ಒಂದು ಕೊಡೆ ಬೇಕು. (ಹೊಸ ಹಾಡು.)

ಆದರೆ ನನ್ನ ಮೂವತ್ತು ವರ್ಷಗಳ ಅನುಭವವನ್ನೂ ಸುಮ್ಮನೆ ನೀರಿ ನಲ್ಲಿ ಮಾಡಿದ ಹೋಮವೆಂದು ಎಣಿಸಲು ನನಗೆ ಇಷ್ಟವಿಲ್ಲ. ಕಳೆದ ವರ್ಷ ದಂತೆ ನಾಲ್ಕು ಛತ್ರಿಗಳ ಅಧಿಪತಿಯಾಗಿ ಮೆರೆಯುವುದೂ ನನಗೆ ಇಷ್ಟವಿಲ್ಲ. 'ಏಕಛತ್ರಾಧಿಪತಿ' ಎಂಬ ಬಿರುದಿಗೇನೇ ಹಂಬಲಿಸುತ್ತಿದ್ದೇನೆ. ಆದರೆ ನನಗೆ ಆ ಬಿರುದು ಸಿಕ್ಕಬೇಕಾದರೆ ಮೊದಲು ನಮ್ಮ ಕೊಡೆಗಳಲ್ಲಿ ಹಲವು ಬದಲಾ ವಣೆಗಾಳಾಗಬೇಕು, ಹಲವು ಸುಧಾರಣೆಗಳಾಗಬೇಕು.

ನಾವು ಸ್ವಲ್ಪ ಆಲೋಚಿಸೋಣ. 'ಕೊಡೆ' ಎಂದರೇನು? ಬಿಸಿಲಿ ನಲ್ಲಿಯೂ ಮಳೆಯಲ್ಲಿಯೂ ನಮ್ಮ ಕೈಹಿಡಿದು, ನಮ್ಮನ್ನು ರಕ್ಷಿಸಿ, ನಮ್ಮನ್ನು ಸುಖಿಗಳಾಗಿ ಮಾಡುವ ಈ 'ಕೊಡೆ' ಎಂದರೇನು?

ಹರಿಕಮತನು ಕ್ಲಬ್ಬಿನಲ್ಲಿ ಬಿಯ್ಯಿಕ್ ಆಡುವಾಗ ರಭಸದಿಂದ ಹಾಡುವ ಒಂದು ಹಾಡಿನ ತುಂಡು ಈ ಸಂದರ್ಭದಲ್ಲಿ ನನ್ನ ಕಿವಿಯೊಳಗೆ ಝೇಂಕರಿಸುತ್ತಾ,

ಇದ್ದು ನನ್ನ ಲೇಖನಿಯನ್ನು ಮುಂದರಿಸಲಿಕ್ಕೆ ಬಿಡುವುದಿಲ್ಲ. ನನ್ನ ಲೇಖನಿ ಮುಂದೆ ಸಾಗಿಹೋಗಬೇಕಾದರೆ ಆ ಹಾಡಿನ ತುಂಡನ್ನು ಇಲ್ಲಿ ಬರೆಯಲೇಬೇಕು :—

ಮಗ್ಗಿಗೆ ಎಮ್ತಾರೆ ಪುತ್ರಿ
ಕತ್ರಿಗೆ ಎಮ್ತಾರೆ ಕತ್ರಿ
ಕೊಡೆಗೆ ಎಮ್ತಾರೆ ಛತ್ರಿ
ನಂಗೆ ಕನ್ನಡಿ ಬರೋದಿಲ್ಲ !

ಬರೆದು ಆಯಿತು. ಇನ್ನು ನನ್ನ ಲೇಖನಿಗೆ ಮುಂದೆ ಸಾಗಿಹೋಗಲು ಯಾವ ಆತಂಕವೂ ಇಲ್ಲ. ಕ್ಲಬ್ಬಿನಲ್ಲಿ ಹರಿಕಮತನು ಈ ಹಾಡನ್ನು ಹಾಡಲಿಕ್ಕೆ ಮೊದಲುಮಾಡಿದ ಕೂಡಲೇ ಅವನ ಬಾಯಲ್ಲಿ ಒಂದೊಂದು ಬಿಸ್ಕೂಟು ಅಂಬೋಡೆಯನ್ನು ತುರುಕಿಸುವುದು ನನ್ನದೊಂದು ಅಭ್ಯಾಸವಾಗಿದೆ. ಇದರಿಂದ ನನಗೆ ದಿನಕ್ಕೆ ಎರಡಾಣೆಯಂತೆ ನಷ್ಟವಾದರೂ ಒಂದು ದಿನ ಅಥವಾ ಇನ್ನೊಂದು ದಿನ ನನ್ನ ಬಿಸ್ಕೂಟು ಅಂಬೋಡೆ ಅವನ ಗಂಟಲೊಳಗೆ ಸಿಲುಕಿ ಅವನಿಗೆ ಉಸುರು ಕಟ್ಟಿ ಹೋಗಬಹುದೆಂಬ ಆಸೆ ನನ್ನನ್ನು ಇನ್ನೂ ಬಿಟ್ಟುಹೋಗಿಲ್ಲ.

ನಾನು ಹೇಳಲಿಕ್ಕೆ ಹೋದುದಾದರೂ ಏನು ? ನೆನಪಾಯಿತು. ಕೊಡೆಯ ವಿಚಾರ.

"ಕೊಡೆ ರಾಮಗೆ ಸೀತೆಯನು....."

ರಾಮದೇವರ ಕಾಲದಲ್ಲಿಯೂ ಕೊಡೆಗಳಿದ್ದುವು ಎಂಬುದೇನೋ ನಿರ್ವಿವಾದದ ಸಂಗತಿ. ಆದರೆ ಈ ಒಂದು ಸಂಗತಿಯ ವಿಷಯ ನೀವು ಎಂದಾದರೂ ಆಲೋಚಿಸಿದ್ದೀರಾ ? ರಾಮದೇವರ ಕಾಲ ಆಗಿಹೋಗಿ ಇಂದಿಗೆ ಎಷ್ಟೋ ಸಹಸ್ರ ವರ್ಷಗಳಾದುವು. ಇಷ್ಟು ಸಹಸ್ರ ವರ್ಷಗಳಾಗಿದ್ದರೂ ಕೂಡ ರಾಮದೇವರ ಕಾಲದಲ್ಲಿ ನಾನು ಹಿಡಿಯಬಹುದಾಗಿದ್ದ ಕೊಡೆಗೂ ಈ ೨೦ನೆಯ ಶತಮಾನದಲ್ಲಿ ನಾನು ಹಿಡಿಯುವ ಕೊಡೆಗೂ ವ್ಯತ್ಯಾಸವೇನಾದರೂ ಉಂಟೇ ? ಇದು ಗಹನವಾದ ವಿಷಯ. ನೀವೇ ಆಲೋಚಿಸಿರಿ.

ಇಲ್ಲ ! ರವೆಯಷ್ಟಾದರೂ ವ್ಯತ್ಯಾಸವಿಲ್ಲ !

ಇದು ನಿಜವಾಗಿಯೂ ಆಶ್ಚರ್ಯಕರ. ಸುಧಾರಣೆಯ ಕಾಲವೇ ಇದು ಆದಾಗ ನಮ್ಮ ಕೈಹಿಡಿಯುವ ಕೊಡೆಗಳಲ್ಲಿ ಮಾತ್ರ ಯಾವ ತರದ

ಸುಧಾರಣೆಯೂ ಇಲ್ಲದಿರುವದು ನಿಜವಾಗಿಯೂ ಶೋಚನೀಯ. ಹಲವು ವಿಷಯಗಳಲ್ಲಿ ನಮ್ಮಲ್ಲಿ ಅನೇಕರು ೨೦ನೆಯ ಶತಮಾನದಲ್ಲಿದ್ದರೂ ಉಳಿದವರು ೨೧ನೆಯ ಶತಮಾನದಲ್ಲಿದ್ದರೂ, ಕೊಡೆಗಳ ವಿಷಯದಲ್ಲಿ ಮಾತ್ರ ನಾವು ಕ್ರಿಸ್ತ ಪೂರ್ವ ೫,೦೦೦ ವರ್ಷಗಳಲ್ಲಿದ್ದೇವೆ! ಇನ್ನಾದರೂ ನಾವು ಕೊಡೆಗಳ ಸುಧಾರಣೆಯ ಕಡೆಗೆ ದೃಷ್ಟಿ ತಿರುಗಿಸಬಾರದೆ?

ನನ್ನ ಮಟ್ಟಿಗೆ ಹೇಳುವುದಾದರೆ ಕೊಡೆಗಳಲ್ಲಿ ಆದಷ್ಟು ಬೇಗ ಕೆಳಗೆ ಹೇಳಿದ ಕೆಲವು ಸುಧಾರಣೆಗಳು ಆಗಲೇಬೇಕು. ಕೊಡೆಗಳ ಕರ್ತೃಗಳು ಇತ್ತ ಕಡೆ ಸ್ವಲ್ಪ ಗಮನಿಸಲಿ!—

ಮೊದಲಾಗಿ, ಒಬ್ಬನ ಕೈಯನ್ನೇ ಶಾಶ್ವತವಾಗಿ ಹಿಡಿದು, ಅವನನ್ನೇ ಕಡೆಯವರೆಗೆ ನಂಬಿಕೊಂಡು ಬರುವಂತಹ ಕೊಡೆಗಳೇ ನಮಗೆ ಬೇಕಾದುವು. ಈಗಿರುವಂತೆ ಸಿಕ್ಕಿಸಿಕ್ಕಿದವರ ಕೈಯನ್ನು ಹಿಡಿದುಕೊಂಡು ಹೋಗುವ ಸೂಳೆಗಾರಿಕೆಯ ಕೊಡೆಗಳು ನಮಗೆ ಬೇಡವೇ ಬೇಡ.

ಎರಡನೆಯದಾಗಿ ಕೊಡೆಗಳು ಈಗಿರುವಂತೆ ಆಡಂಬರದ ವಸ್ತುಗಳಾಗಬಾರದು; ಎಲ್ಲಿ ಹೋದರೂ ಎಲ್ಲಿ ಕೂತರೂ ಯಾರಿಗೂ ತಿಳಿಯದಂತೆ ನಮ್ಮ ಹತ್ತಿರವೇ ಇಟ್ಟುಕೊಳ್ಳಬಹುದಾದ ವಸ್ತುಗಳಾಗಿರಬೇಕು. ಗಡ್ಡ ತೆಗೆಯುವ ಸಾಮಗ್ರಿಗಳನ್ನು ಕೂಡ ಈ ದಿನಗಳಲ್ಲಿ ಒಂದು ನಸ್ಯದ ಡಬ್ಬಿಯಲ್ಲಿ ಹಾಕಿ ಅಂಗಿಯ ಜೇಬಿನಲ್ಲಿಟ್ಟುಕೊಳ್ಳುತ್ತಾರೆ. ನಮ್ಮ ಕೊಡೆಗಳನ್ನು ಕೂಡ ನಾವು ಹಾಗೆಯೇ ನಮ್ಮ ಜೇಬಿನಲ್ಲಿಟ್ಟುಕೊಳ್ಳುವಂತಾಗಬಾರದೇಕೆ?

ಮೂರನೆಯದಾಗಿ, ನಾವು ಬಿಸಿಲಿಗಾಗಲಿ ಮಳೆಗಾಗಲಿ ಕೊಡೆಯನ್ನು ಹಿಡಿದಾಗ ನಮ್ಮ ಈ ಎರಡೂ ಕೈಗಳಿಗೂ ತುಂಬಾ ಬಿಡುವು ಇರಬೇಕು. ಈ ಸುಧಾರಣೆಯ ಮಹತ್ವ ತನ್ನಾಕೆಯ ಆಜ್ಞೆಯ ಮೇರೆಗೆ ತನ್ನಿಬ್ಬರು ಮಕ್ಕಳನ್ನೂ ಈ ಮಳೆಗಾಲದಲ್ಲಿ ತಿರುಗಾಡಿಸಲಿಕ್ಕೆಂದು ಕರಕೊಂಡು ಹೋಗುವ ಯಾವ ತಂದೆಗಾದರೂ ವಿದಿತವಾಗದೆ ಇರಲಾರದು.

ನಾಲ್ಕನೆಯದಾಗಿ—ಇದು ಅತಿ ಪ್ರಾಮುಖ್ಯವಾದ ಸುಧಾರಣೆ— ನಮ್ಮ ಈಗಿನ ಕೊಡೆಗಳೆಲ್ಲ ನಮ್ಮ ಭುಜದ ಮೇಲಿರುವ ಭಾಗವನ್ನು ಮಾತ್ರ ಮಳೆಯಲ್ಲಿ ನೆನೆಯದಂತೆ ನೋಡುತ್ತವೆ. ನಮ್ಮ ಕಾಲುಗಳಿಗೆ ಅವುಗಳು ಯಾವ ರಕ್ಷಣೆಯನ್ನೂ ಕೊಡುವುದಿಲ್ಲ. ಇನ್ನು ಸುಧಾರಣೆ ಹೊಂದುವ ಕೊಡೆಗಳು

ನಮ್ಮ ತಲೆ ಮಾತ್ರವಲ್ಲ, ನಮ್ಮ ಕಾಲುಗಳೂ ಮಳೆಯಲ್ಲಿ ನೆನೆಯದಂತೆ ನೋಡಬೇಕಾಗುವುದು.

ನಮ್ಮ ಕೊಡೆಗಳಲ್ಲಿ ಮೇಲೆ ಸೂಚಿಸಿದ ಸುಧಾರಣೆಗಳಾಗುವ ವರೆಗೆ ನಾನು ಈ ವರ್ಷದ ಮಳೆಗಾಲಕ್ಕೆ ಯಾವ ಕೊಡೆಯನ್ನೂ ಕ್ರಯಕ್ಕೆ ತೆಗೆದು ಕೊಳ್ಳುವುದಿಲ್ಲವೆಂದು ನಿರ್ಧರಿಸಿದ್ದೇನೆ.

ಅಷ್ಟರವರೆಗೆ ?

ಅಷ್ಟರವರೆಗೆ ಒಂದು ಅಥವಾ ಇನ್ನೊಂದು ಕೊಡೆ ನನ್ನ ಹತ್ತಿರ ಯಾವಾಗಲೂ ಇರುವಂತೆ ಈ ಒಂದು ಉಪಾಯವನ್ನು ಹೂಡಬೇಕೆಂದು ಆಲೋಚಿಸಿದ್ದೇನೆ. ಇದನ್ನು ಬೇರೆ ಯಾರಿಗೂ ಹೇಳಿ ಕೊಡಬೇಡಿ !

ನನ್ನ ಮುಂದೆ ಒಬ್ಬ ಟೊಣಪ ಒಂದು ಸುಂದರವಾದ ಕೊಡೆಯನ್ನು ಬಿಡಿಸಿಕೊಂಡು ಹೋಗುತ್ತಾನೆಂದು ತಿಳಿದುಕೊಳ್ಳೋಣ. ನಾನು ಕೂಡಲೇ ಅವನ ಹತ್ತಿರ ಹೋಗಿ, 'ಏನಯ್ಯಾ, ನನ್ನ ಕೊಡೆಯನ್ನು ನೀವೆಲ್ಲಿಗೆ ಹಿಡಿದು ಕೊಂಡು ಹೋಗುತ್ತೀರಿ ? ಇದರ ಅರ್ಥವೇನು ?' ಎಂದು ಸಿಟ್ಟಿನಿಂದ ಕೇಳುತ್ತೇನೆ.

ಅವನು ಕೂಡಲೇ ದೀನಭಾವವನ್ನು ತಾಳಿ 'ಕ್ಷಮಿಸಿ, ಸ್ವಾಮಿ; ಈ ಕೊಡೆ ತಮ್ಮದೆಂದು ನನಗೆ ಗೊತ್ತಿರಲಿಲ್ಲ. ಅದಕ್ಕೆ ಯಾರೂ ಗಿರಾಕಿ ಇಲ್ಲ ವೆಂದು ತಿಳಿದುಕೊಂಡು ನಾನು ತೆಗೆದಿದ್ದೆ. ನಿಮ್ಮದಾದರೆ ಬೇಗನೇ ತೆಗೆದು ಕೊಳ್ಳಿ' ಎಂದು ನಡುಗುತ್ತಾ ಹೇಳಿ, ಕೊಡೆಯನ್ನು ನನ್ನ ಸ್ವಾಧೀನ ಪಡಿ ಸುವನು.

ನಾನು ಆ ಟೊಣಪನನ್ನು ಪ್ರಶ್ನಿಸಿದಂತೆಯೇ ಇನ್ನೊಬ್ಬ ಪುಣ್ಯಾತ್ಮ ನನ್ನನ್ನು ಪ್ರಶ್ನಿಸುವವರೆಗೆ ಆ ಕೊಡೆ ನನ್ನದಾಗುವುದು !

ನನ್ನ ಬೆನ್ನು

ನಾ. ಕಸ್ತೂರಿ

"ಸ್ವಾಮಿ !"

ನಾನು ಹಿಂತಿರುಗಿ ನಿಂತೆ. ಹಲ್ಲು ಕಿರಿಯುತ್ತ ಬಲಗೈಯನ್ನು ನೀಡುತ್ತ, ಮಧ್ಯವಯಸ್ಕರೊಬ್ಬರು ನನ್ನೆಡೆಗೆ ಓಡಿಬರುತ್ತಿದ್ದರು. ಎಷ್ಟೋ ದಿನಗಳ ವಿರಹದಿಂದ ತಪಿಸಿದವರಂತೆ, ಕಡೆಗೂ ತಮ್ಮ ಪ್ರೇಮಪಾತ್ರ ಕೈಗೆ ಸಿಕ್ಕಿದವನಂತೆ, ಅವರ ಕಣ್ಣುಗಳು ಅರಳಿದ್ದುವು. ನನ್ನ ಹಿಂದೆಯೇ ಅವರು ಬಹುದೂರ ಓಡಿ ಬಂದಿರಬೇಕು. ಏಕೆಂದರೆ, ಅವರು ಬೆವರುತ್ತ ಬುಸುಗುಟ್ಟುತ್ತ, ಏದುತ್ತ ತಮ್ಮ ಮೈಯನ್ನು ನೂಕಿಕೊಂಡು ವೇಗ ವೇಗವಾಗಿ ಬರುತ್ತಿದ್ದರು.

ಧಾರವಾಡ ನನಗೆ ತೀರ ಹೊಸದು. ಯಾವುದೋ ಒಂದು ಅಗತ್ಯ ಕೆಲಸಕ್ಕಾಗಿ ನಾನು ಅಲ್ಲಿಗೆ, ಆ ದಿನ ಬೆಳಗ್ಗೆ ಹೋಗಿ ಸೇರಿದ್ದೆ. ಅಲ್ಲಿ ನನಗೆ ಪರಿಚಿತರು ಯಾರೂ ಇರಲಿಲ್ಲ. ಆದರೂ ನನ್ನ ಬೆನ್ನ ಹಿಂದೆ ಗುರುತಿಸಿದ ಮಹನೀಯ ಯಾರು, ಎಂದು ಅರಿಯಲು ನಾನೂ ಕುತೂಹಲನಾದೆ. "ಸ್ವಾಮಿ !" ಎನ್ನುತ್ತ, ಅವರು ನನ್ನ ಸಮೀಪಕ್ಕೆ ಬಂದರು. ನನ್ನನ್ನು ಹತ್ತಿರದಿಂದ ನೋಡಿದರು...ಚಾಚಿದ ಕೈ ಹಿಂದಕ್ಕೆ ಹೋಯಿತು. ಅರಳಿದ ಕಣ್ಣುಗಳು ಬಾಡಿದುವು... "ಕ್ಷಮಿಸಿ ! ಗುರುತು ತಪ್ಪಿತು ! ತಮ್ಮನ್ನು ನಾನು ಬೇರೊಬ್ಬರು ಎಂದು ತಿಳಿದುಕೊಂಡುಬಿಟ್ಟೆ !" ಎಂದು ಹೇಳುತ್ತ, ನಾಚಿ ತಲೆ ತಗ್ಗಿಸಿ ಅವರು ಹಿಂದಕ್ಕೆ ನಡೆದರು.

ನಾನು ನನ್ನ ದಾರಿ ಹಿಡಿದೆ. ಆತನ ಮೇಲೆ ನನಗೆ ಕೋಪ ಬರಲಿಲ್ಲ. ಏಕೆಂದರೆ, ಇಂಥ ಅನುಭವ ನನಗೆ ಇದುವರೆಗೆ ನೂರಾರು ಆಗಿವೆ. ನನ್ನ ಬೆನ್ನಿಗೆ ಏನೋ ಒಂದು ರೀತಿಯ ವಿಶೇಷ ಗುಣವಿದೆ. ಅದನ್ನು ಕಂಡು, ಅನೇಕರು ಮೋಸ ಹೋಗಿದ್ದಾರೆ. ಅದರ ಅಗಲ, ರಚನೆ, ಬಾಗು, ಬಿಗಿ, ಅದರ ಮೇಲೆ ನನ್ನ ತಲೆ ಬುರುಡೆ ಪ್ರತಿಷ್ಠಿತವಾಗಿರುವ ಭಂಗಿ, ಅವೆರಡಕ್ಕೂ ನಡುವೆ ಬೆಳೆದಿರುವ ನನ್ನ ಕತ್ತಿನ ಉದ್ದ, ಸುತ್ತಳತೆ, ಬಳುಕು, ಬಿಂಕ ; ಅಲ್ಲದೆ

ನನ್ನ ನಡಿಗೆಯ ಠೀವಿ, ಠೇಂಕಾರ, ಅದರ ಒಯ್ಯಾರ, ಇವೆಲ್ಲದರ ಮೂಲಕ ಕರ್ನಾಟಕದ ಒಳಗೂ ಹೊರಗೂ ಎಲ್ಲ ಊರುಗಳಲ್ಲೂ ಜನ ನನ್ನನ್ನು ಬೇರೊಬ್ಬನೆಂದು ಗುರುತಿಸಿ ಮೋಸ ಹೋಗಿದ್ದಾರೆ. ನಸುಕಿನಲ್ಲಿ ಮಾತ್ರವೇ ಅಲ್ಲ, ಉರಿ ಹಗಲಿನಲ್ಲೂ ಮೋಸ ಹೋಗಿದ್ದಾರೆ. ನಿಬಿಡ ಸ್ಥಳಗಳಲ್ಲಿ ಮಾತ್ರ ವಲ್ಲ, ನಿರ್ಜನ ಪ್ರದೇಶಗಳಲ್ಲೂ ಕೂಡ.

ಆದರೆ, ಒಂದು ಸೋಜಿಗ. ನನ್ನೆದುರು, ನನಗಭಿಮುಖವಾಗಿ ಬರುವವ ರೊಬ್ಬರೂ ನನ್ನನ್ನು ಬೇರೆಯವನೆಂದು ತಿಳಿಯುವುದೇ ಇಲ್ಲ. ನನ್ನ ಹಣೆ, ಮುಖ, ಮೂಗು, ಎದೆ ಮುಂತಾದ ಮುಂಭಾಗಕ್ಕೆ ಒಂದು ವ್ಯಕ್ತಿತ್ವ, ಒಂದು ವೈಶಿಷ್ಟ್ಯ ಇದೆ ! ಅದು ನನ್ನದೆ ಆದ, ಬೇರೊಬ್ಬರಿಗೂ ಇಲ್ಲದ ರೂಪರೇಖೆ ಗಳಿಂದ ವಿರಾಜಿಸುತ್ತದೆ. ನನ್ನನ್ನೆದುರುಗೊಳ್ಳುವವರಿಗೆಲ್ಲ ನಾನು ನಾನೇ.... ನನ್ನನ್ನು ಹಿಂಬಾಲಿಸುವವರಿಗೆ ಮಾತ್ರ ನಾನು ಅವರವರ ಕಲ್ಪನಾಶಕ್ತಿಯಂತೆ, ಬೇರೆ ಬೇರೆ ವ್ಯಕ್ತಿಯಾಗಿ ಕಾಣುತ್ತೇನೆ. ಇದು ನನ್ನ ದೌರ್ಭಾಗ್ಯ ; ನನ್ನದೇ ಆದ ನನ್ನತನ.

"ಸ್ವಾಮಿ !", "ಸಾರ್", "ರೀ", "ಲೋ", "ಏ, ಅಪ್ಪಾ", "ಏ, ಅಜ್ಜ", "ನಿಂತುಕೊಳ್ರಣ್ಣ", "ಹಲೋ !", "ಜೀ"—ಎಂಬ ಬಗೆಬಗೆಯ ಸಂಬೋಧನಾ ಪದಗಳನ್ನೆಸೆದು, ಜನ ನನ್ನ ಬೆನ್ನನ್ನು ಕೂಗಿ ನಿಲ್ಲಿಸಿದ್ದಾರೆ. ನಿಂತು, ಹಾಗೆ ಕರೆದವರನ್ನು ನಾನು ತಿರುಗಿ ನೋಡುವುದೇ ತಡ, ಅವರು ಪೆಚ್ಚಾಗಿ, ಜೋಲು ಬಿದ್ದು, ನುಸುಳಿ, ಕ್ಷಮಾಪಣೆ ಕೇಳಿ, ತಪ್ಪಿಸಿಕೊಳ್ಳುವರು. ಬೆನ್ನೇ ಇಲ್ಲದೆ ನಾನು ದ್ವಿಮುಖನಾಗಿ ಹುಟ್ಟಿದ್ದರೆ ನನ್ನಿಂದಾಗುತ್ತಿರುವ ಈ ಕಾಟ ತಪ್ಪುವುದಲ್ಲಾ, ಎಂದು ಅನೇಕ ಸಾರಿ ನನಗೆ ಅನ್ನಿಸಿದೆ. ಆದರೇನು ಮಾಡುವುದು ? ಅಸಹ್ಯಮನುಭೋಕ್ತವ್ಯಂ ! ಅವರೂ ಅಷ್ಟೆ ; ನಾನೂ ಅಷ್ಟೆ !

ಧಾರವಾಡದಲ್ಲಿ ನನ್ನನ್ನು ಹಿಂಬಾಲಿಸಿದ ಮಹನೀಯರು ತೆಪ್ಪಗೆ ಹಿಂದಕ್ಕೆ ಪಲಾಯನ ಮಾಡಿದರು. ಆದರೆ ಅನೇಕರು ಹಾಗೆ ಮಾಡುವುದಿಲ್ಲ. ಅವರಿಗೆ ಆಶಾಭಂಗ ಉಂಟುಮಾಡಿದ್ದಕ್ಕೆ ಅವರು ನನ್ನ ಮೇಲೆ ರೇಗಾಡುವರು. "ಇದ್ಯಾಕ್ರಿ ಹಿಂಗಾದಿರಿ ! ಹಿಂದೊಂದು ಮುಂದೊಂದು, ಬೂಟಾಟಕೆ ಮಾಡಿ ಆಡಬೇಡ್ರಿ" ಎಂದು ಕೋಪಕಾರುವರು. ನನ್ನ ಗ್ರಹಚಾರವನ್ನೇ ಶಪಿಸುತ್ತ,

ನಾನು ಕಾಲಿಗೆ ಬುದ್ಧಿ ಹೇಳುವೆ. ಯಾರಾದರೂ ಹಿಂದೆ ಬಂದು ನನ್ನನ್ನು ಬೇರೊಬ್ಬನೆಂದೆಣಿಸಿ, ಅವರಿಗೆ ಸಲ್ಲಿಸಬೇಕಾದ ಪೂಜೆಯನ್ನು ನನಗರ್ಪಿಸಿ ಎರಡು ತಾಸ ಬಾರಿಸಿದರೆ, ಗತಿ ಏನಪ್ಪ, ಎಂದು ಹೆದರುವೆ.

ಎಂಟು ಹತ್ತು ಬಾರಿ, ನಾನು ನನ್ನ ಸಂಬೋಧಕರನ್ನು ಮಾತನಾಡಿಸಿದ್ದೂ ಉಂಟು. "ಚಿಂತೆ ಇಲ್ಲ ! ನೀವೆಣಿಸಿದ ವ್ಯಕ್ತಿ ಅಲ್ಲದಿದ್ದರೂ ನಾನೂ ಒಬ್ಬ ವ್ಯಕ್ತಿ ; ಸಂಸಾರಿ ; ಮಕ್ಕಳೊಂದಿಗ ; ತಾವು ನನ್ನನ್ನು ಯಾರು ಅಂತ ತಿಳಿದಿರಿ ?" ಎಂದು ಕೇಳಿದ್ದೇನೆ. ಆಗ, ನನಗೆ ಬಗೆಬಗೆಯ ಉತ್ತರಗಳು ಸಿಕ್ಕಿವೆ. ಚಿತ್ರದುರ್ಗದ ಒಬ್ಬರು ವರ್ತಕರು ನನ್ನನ್ನು ಬಸ್ ಮಾಲೀಕರೆಂದು ಬಗೆದರಂತೆ ; ಬ್ಯಾಡ್ಗಿಯಲ್ಲಿ ಮತ್ತೊಬ್ಬರಿಗೆ ನಾನು ಸ್ಟೇಷನ್ ಮಾಸ್ತರಾಗಿ ಕಂಡೆ ; ಮೈಸೂರಲ್ಲಿ ಅರಸುಗಳೊಬ್ಬರು ನನ್ನನ್ನು ಅಕ್ಕಸಾಲಿಗನೆಂದು ಮೋಸ ಹೋದರು ; ಅನೇಕರು ನನ್ನನ್ನು ತಮಗೆ ಸಾಲ ಹಿಂದಕ್ಕೆ ಕೊಡಬೇಕಾದ ತಮ್ಮ ಹಳೆಯ ಗೆಳೆಯನೆಂದು ಭಾವಿಸಿದ್ದರು. ಸಾಲ ಹಿಂದಕ್ಕೆ ಕೊಟ್ಟು ಮುಟ್ಟಿಸಿ ತೀರಿಸಬೇಕಾದ ಸಾಹುಕಾರ ಎಂದು ಒಬ್ಬರೂ ನನ್ನನ್ನು ತಿಳಿದುಕೊಳ್ಳದೆ ಇದ್ದುದೇ ಆಶ್ಚರ್ಯ.

ಬೆನ್ನ ವೈಶಿಷ್ಟ್ಯದಿಂದ ನನಗೆ ಹೆಚ್ಚು ತೊಂದರೆಯಾಗುತ್ತಿರುವುದು ಬಸ್ ಪ್ರಯಾಣದಲ್ಲಿ ! ನನ್ನ ಹಿಂದಿನ ಸೀಟಿನಲ್ಲಿ ಮಂಡಿಸಿರುವ ಮಹಾಜನಗಳ ಪೈಕಿ, ಪ್ರತಿಬಸ್‌ನಲ್ಲೂ ಒಬ್ಬಿಬ್ಬರು ನನ್ನನ್ನು "ಓ ಹೋ ಹೋ! ತಿಮ್ಮಣ್ಣಯ್ಯ ನವರೆ ಎಲ್ಲಿಗೆ ಹೊರಟಿರಿ?" ಎಂದು ಮುಂತಾಗಿ ಮಾತು ತೆಗೆದು, ಆ ಉತ್ಸಾಹದಲ್ಲಿ ಸಲಿಗೆಯಿಂದ ಬೆನ್ನ ಮೇಲೆ ಬಲವಾಗಿ ಗುದ್ದಿದ್ದೂ ಉಂಟು ! ಸರಕ್ಕನೆ ನಾನು ಹಿಂತಿರುಗುವಾಗ ಅವರ ಮುಖದಲ್ಲಿ ಆಶ್ಚರ್ಯವೂ ನಿರಾಶೆಯೂ ಒಮ್ಮೆಲೆ ಮೂಡುವುದನ್ನು ನಾನು ನೂರಾರು ಬಾರಿ ಕಂಡಿದ್ದೇನೆ. ಇಂಥ ಅನಾಹುತಗಳನ್ನು ತಪ್ಪಿಸುವದಕ್ಕಾಗಿ ನಾನು ಮೊದಲೇ ಕುಳಿತ ಕಡೆಯಿಂದ ಎದ್ದು, ಇಡೀ ಬಸ್ಸನ್ನು ಒಂದು ಸಲ ಅವಲೋಕಿಸಿ, ಎಲ್ಲರಿಗೂ ನನ್ನ ಮುಖವನ್ನು ಚೆನ್ನಾಗಿ ತೋರಿಸಿ, ಮತ್ತೆ ಕುಳಿತುಕೊಳ್ಳುವ ಅಭ್ಯಾಸ ಇಟ್ಟುಕೊಂಡಿದ್ದೇನೆ. ಆದರೂ ನಡುವೆ ಬಸ್ ಹತ್ತಿದವ ಯಾವನಾದರೂ ಒಬ್ಬ ನನ್ನನ್ನು ಚೆನ್ನಾಗಿ ನೋಡಿ "ಅಲ್ಲಿ ನೋಡಿರಿ ! ನಮ್ಮ ಪಟೇಲರು ಮುಂದಿನ ಸೀಟ್‌ನಲ್ಲಿ

ತೆಪ್ಪಗೆ ಕೂತಿರೋದನ್ನ....ತುಟಿಪಿಟಕ್ಕೆನ್ನದೆ!" ಎಂದು ಕೂಗೇ ಕೂಗುತ್ತಾನೆ ; ಪೆಚ್ಚು ತಿಂದೇ ತಿನ್ನುತ್ತಾನೆ !

ನನಗೆ ಹೆಚ್ಚು ವ್ಯಥೆಯನ್ನು ಕೊಡುವ ಅಂಶವೇನೆಂದರೆ, ಇದುವರೆಗೂ ನನ್ನನ್ನು ಯಾರೂ ಗಣ್ಯವ್ಯಕ್ತಿಗಳಾದ ಮಂತ್ರಿ, ಕಲೆಕ್ಟರ್, ಪೋಲೀಸ್ ಇನಸ್ಪೆಕ್ಟರ್, ರೇಷನಿಂಗ್ ಆಫೀಸರ್, ಅಡ್ವೊಕೇಟ್ ಇತ್ಯಾದಿಯೆಂದು ಮೋಸ ಹೋಗಿಯೇ ಇಲ್ಲ. ಏಟು ತಿಂದರೂ ಉಂಗುರ ಧರಿಸಿರುವ ಕೈಯಿಂದಾದರೆ ತಿಂದವನೂ ತುಸು ತೇಗುತ್ತಾನೆ. "ಕ್ಷಮಿಸಿ, ತಮ್ಮನ್ನು ನಾನು ನಮ್ಮೂರ ಶಾಲಾ ಮಾಸ್ತರು ಅಂತ ತಿಳಿದೆ" ಎಂದು ಒಬ್ಬರು ನಡುರಸ್ತೆಯಲ್ಲಿ ನಿಲ್ಲಿಸಿ ಕೊಂಡು ಹೇಳಿದರೆ, ಅಂದು ನಿದ್ರೆ ಹೇಗೆ ಬರುತ್ತೆ ? ಊಟ ಹೇಗೆ ಸೇರುತ್ತೆ ?

ನಿಜವಾದ ಮಂತ್ರಿಗಳಾಗಲು ದೇವರು ಹಣೆಯಲ್ಲಿ ಬರೆಯಲಿಲ್ಲ. ಬೆನ್ನಲ್ಲೂ ಬರೆಯಲಿಲ್ಲವೇ ? ಅಪ್ಪಿ ತಪ್ಪಿ ಒಬ್ಬನ ಮೆಳ್ಳಗಣ್ಣಿಗಾದರೂ ಹಾಳು ಬೆನ್ನು, ಮಂತ್ರಿಯ ಬೆನ್ನ ಹಾಗೆ ಕಾಣಿಸಬಾರದೆ ? ಆಗಲಕ್ಕೇನೂ ಕಡಿಮೆ ಇಲ್ಲ, ಹಾಳಾದ್ದಕ್ಕೆ ! ಇಡೀ ಪ್ರಾಂತದ ಭಾರವನ್ನೆಲ್ಲ ಹೇರಿದರೂ ಹೊರುವಷ್ಟು ಧಡೂತಿ ಇದೆ ; ಭುಜಬಲವಿದೆ, ಪರಾಕ್ರಮ ಕಡಿಮೆಯಾದರೂ. ಆದರೂ ಅವಲಕ್ಷಣದ ಜಾತಕ, ಪ್ರತಿಭಾವಂತರಾದ ಒಬ್ಬರ ಬೆನ್ನಿನ ಹಾಗೂ ಇಲ್ಲ, ಹಾಳಾದ್ದು.

ಒಬ್ಬ ಮಾತ್ರ, ಒಂದೇ ಒಂದು ದಿನ ಮಾತ್ರ, ಬಳ್ಳಾರಿಯಲ್ಲಿ, ಹಿಂದಿನಿಂದ ಚಪ್ಪಾಳೆ ತಟ್ಟಿ 'ಸ್ವಾಮಿ !' ಅಂತ ಕೂಗಿ, ನನ್ನ ಬೆನ್ನ ಹಿಂದೆ ಕನ್ನಡ ಕವಿಗಳೊಬ್ಬರ ಹೆಸರನ್ನು ಎತ್ತಿದ ! ನಾನು ಬಿರಬಿರನೆ ಮುಂದಕ್ಕೆ ನಡೆದೆ. ಇನ್ನೂ ಎರಡು ಮೂರು ಬಾರಿಯಾದರೂ ಆತ ಆ ಕವಿಯ ಹೆಸರನ್ನು ಹೇಳಿ ಆಹ್ವಾನಿಸಲಿ, ಎಂದು ! ನನಗೆ ಪರಮಾನಂದವಾಯಿತು. 'ಭಲಾ ! ನನ್ನ ಬೆನ್ನಿಗೆ ಈತ ಇಂಥ ಪ್ರಖ್ಯಾತ ಕವಿಯ ಹೆಸರನ್ನು ಅಂಟಿಸುತ್ತಿರುವನಲ್ಲಾ ! ಈ ದಿನವೇ ಸುದಿನ! ಎಂದು ಹಿಗ್ಗಿದೆ. ಕವಿ ಎಂಬ ಸ್ಥಾನ ಅಷ್ಟು ಲಾಭದಾಯಕವಲ್ಲದಿದ್ದರೂ, ಕೆಲವೇ ತಲೆ ಕೆಟ್ಟವರಿಗೆ ಮಾತ್ರ ಆ ತೆರನ ಜನರ ಪರಿಚಯ ಇರುವದಾದರೂ ಋಷಿ ಎಂಬ ಬಿರುದಿಗೆ ಅರ್ಹರಾದ ತಂಡಕ್ಕೆ ಸೇರಿದವರ ಆ ಹೆಸರು ನನಗೆ ಕರ್ಣರಸಾಯನವಾಗಿತ್ತು. ಕಡಗೆ, ಆತ ಓಡೋಡುತ್ತ, ನನ್ನ ಪಕ್ಕಕ್ಕೆ ಬಂದ. ನನ್ನ ಮುಖವನ್ನು ಅವನೆದುರು ಹಿಡಿಯದೆ ವಿಧಿ ಇಲ್ಲ

ಎಂಬ ಘಟ್ಟಕ್ಕೆ ಬಂತು, ಸನ್ನಿವೇಶ. ಆಗ ಅವನು ಎಲ್ಲರಂತೆ ನಾಚಿ ತಲೆ ತಗ್ಗಿಸಿ ಹಲ್ಲಕಿರಿತವನ್ನು ನುಂಗಿಕೊಂಡ. "ಕ್ಷಮಿಸಿ! ತಮ್ಮನ್ನ ನಾನು ನಮ್ಮ ಕರ್ನಾಟಕದ ಸಂಘದ ಸೆಕ್ರೆಟರಿಗಳು ಅಂತ ತಿಳಿದೆ; ತಪ್ಪಾಯ್ತು! ಬೇಂದ್ರೆ ಯವರು ಈ ಊರಿಗೆ ಬರುತ್ತಾರಂತಲ್ಲಾ, ಎಂದು ಅಂತ ತಮ್ಮಿಂದ ವರ್ತಮಾನ ತಿಳಿದುಕೊಳ್ಳೋಣ, ಎಂದು ಕೂಗಿದೆ" ಎಂದ. ತುಸು ಹೊತ್ತಾದರೂ ನನ್ನನ್ನು ಬೇಂದ್ರೆ ಎಂದು ಮೋಸ ಹೋದನಲ್ಲಾ, ಒಬ್ಬ ಕನ್ನಡಿಗ, ಎಂಬ ನನ್ನ ಸಂತೋಷ, ಬೇಗನೆ ಕೊನೆಗೊಂಡಿತು....ಅಂತೂ ಬೆನ್ನು ತೋರಿಸಿದರೆ, ಬೇಸ್ತು....

ತಾಳಮದ್ದಲೆ

ಎಸ್. ಆರ್. ಚಂದ್ರ

ತಾಳಮದ್ದಲೆಯು ನಮ್ಮ ಜಿಲ್ಲೆಯವರಿಗೆ ಹೊಸತಲ್ಲ. ಇದು ಯಕ್ಷಗಾನಕಲೆಯ ಮೂಲವಾದ ಬಯಲಾಟದ ಸುಸಂಸ್ಕೃತರೂಪ; ಮಳೆಗಾಲದ ಕಾರಿರುಳನ್ನು ಕಳೆಯಲು ಹಳ್ಳಿಯ ಹಿರಿಯರು ಏರ್ಪಡಿಸಿದ ಒಂದು "ಏರ್ಪಾಡು" ಅಥವಾ "ವಿಲೆವಾರಿ." ಈ "ವಿಲೆವಾರಿ"ಗೆ ತಾಳ ಅಥವಾ ಜಾಗಂಟೆ, ಮದ್ದಲೆ, ಶ್ರುತಿ—ಇಷ್ಟು ಅಗತ್ಯ.

ಇಂದಿನ ಸುಧಾರಿತರ ದೃಷ್ಟಿಯಲ್ಲಿ ಹಿಂದಿನ ತಾಳಮದ್ದಲೆಯು ಕೂಟವೆಂದರೆ, ಹತ್ತು ಜನ ಹಳ್ಳಿಯ "ಬೆಪ್ಪ ತಕ್ಕಡಿ"ಗಳ ಕೂಟ. ತಾಳಮದ್ದಲೆಯು ಸಮಾಪ್ತಿ ಹೊಂದಿದ ಮೇಲು ಕೂಡ—"ಈ ದಿನ ಯಾವ ಪ್ರಸಂಗವಾಗಿತ್ತು, ಸ್ವಾಮೀ, ಸಂಚವಟೆಯೋ ಅಲ್ಲ ಕೃಷ್ಣಸಂಧಾನವೋ ?" ಎಂದು ಸಂಶಯದಲ್ಲಿ ಬಿದ್ದು, ಕೊನೆಗೆ ಯಾರಿಗೂ ಯಾವುದೂ ನಿರ್ಧಾರವಾಗದೆ, ತಲೆತೂಕಡಿಸುತ್ತ ಮನೆಗೆ ಹೋಗುವ "ಬೆಚ್ಚಪ್ಪ"ಗಳೇ ಆ ಕೂಟದ ಸಭಿಕರಾಗುತ್ತಿದ್ದರು. ಹಿಂದಿನ ತಾಳಮದ್ದಲೆಯ ಸರಿಯಾದ ಪರಿಚಯವಾಗಬೇಕಾದರೆ, ಆ ಹಳೆಯ ಕೂಟದ ಚಿತ್ರವೊಂದನ್ನು ಕಲ್ಪಿಸಿಕೊಂಡು, ಆ ಕೂಟದಲ್ಲಿ ನಾವೂ ಸೇರಿಕೊಳ್ಳಬೇಕಾಗಿದೆ. ತಾಳಮದ್ದಲೆಯ ದಿನವು ಮೊದಲೇ ನಿಶ್ಚಿತವಾಗುವುದು. ಊರ ಪಟೇಲರಿಗೆ, ಶ್ಯಾನುಭಾಗರಿಗೆ, ಮೊಕ್ತೇಸರರಿಗೆ, ಗೌಡರಿಗೆ, ಗುತ್ತೆಯವರಿಗೆ, ಹೆಬ್ಬಾರರಿಗೆ ಎಲೆ ಅಡಿಕೆ ಸೀಯಾಳಗಳ ಕಾಣಿಕೆಯೊಂದಿಗೆ ಹೇಳಿಕೆಯಾಗುವುದು. ನಾಲ್ಕು ದಿನಗಳಿಗೆ ಮೊದಲೇ ಊರಲ್ಲೆಲ್ಲಾ ತಾಳ ಮದ್ದಲೆಯ ಸುದ್ದಿ, ತಾಳ ಮದ್ದಲೆಯ ಸಿದ್ಧತೆ, ತಾಳಮದ್ದಲೆಯ ಪ್ರತಾಪ! ಭಾಗವತರು ದಿನಾಲೂ ಕಷಾಯ-ಗಿಷಾಯ ಕುಡಿದು, ಗಂಟಲು-ಗಿಂಟಲು ಸರಿಪಡಿಸಿಕೊಳ್ಳುವರು; ಅರ್ಥಧಾರಿಗಳು ಅರ್ಥವನ್ನು ಗಟ್ಟಿಮಾಡಿಕೊಳ್ಳುವರು; ಮದ್ದಲೆಯವರು ಮದ್ದಲೆಗೆ "ಕುಟ್ಟಿಹಾಕಿ" ಸರಿಮಾಡುವರು.

ಕೊನೆಗೊಂದು ದಿನ ತಾಳಮದ್ದಲೆಯ ನಿಶ್ಚಿತದಿನವು ಬಂದೇ ಬರುವುದು. ಮಳೆಗಾಲದ ಕಾರಿರುಳಲ್ಲಿ ಕೊಳ್ಳಿದೆವ್ವಗಳಂತೆ "ಸೂಟೆ"ಗಳನ್ನು ಬೀಸುತ್ತಾ ದೂರ ದೂರದಿಂದ ನಡೆದು ಬಂದು, ಜನರೆಲ್ಲಾ ನಿಶ್ಚಿತಸ್ಥಳದಲ್ಲಿ ಕೂಡುವರು. ಹೆಚ್ಚಾಗಿ ಗ್ರಾಮಚಾವಡಿ, ಅಥವಾ ಗ್ರಾಮಶಾಲೆಯೇ ತಾಳಮದ್ದಲೆಯ ರಂಗ ಸ್ಥಳ. ರಂಗಸ್ಥಳದ ಮಧ್ಯೆ ಮಿಣ ಮಿಣನೆ ಉರಿಯುತ್ತಾ, ಮಳೆಗಾಳಿಗೆ ಕುಣಿಯುವ, ಹಾರುವ, ಒದ್ದಾಡುವ ದೀಪ, ಅದರೆದುರು ಭಾಗವತರ "ಸೀಟು," ಮುಂದೆ ಎರಡೂ ಬದಿಗಳಲ್ಲಿ ಅರ್ಥಧಾರಿಗಳ "ಲೈನು", ಅವರ ಹಿಂದೆ ಅರ್ಥ ವನ್ನಾಲಿಸುವವರ ಸಭೆ. ಆ ಸಭೆಯಲ್ಲಿ ಅಲ್ಲಿ ಗುತ್ತಿನವರು, ಇಲ್ಲಿ ಪಟೇಲರು, ಆಚೆಯಲ್ಲಿ ಗುರಿಕಾರರು, ಈಚೆಯಲ್ಲಿ ಮೊಕ್ತೇಸರರು. ಎಲ್ಲರ ಮುಖದಲ್ಲಿಯೂ ಶ್ರದ್ಧೆ, ಭಕ್ತಿ, ಆತುರ, ಆದರ. ಎಲ್ಲರ ದೃಷ್ಟಿಯೂ ಅರ್ಥಧಾರಿಗಳ ಮೇಲೆ, ಭಾಗವತರ ಮೇಲೆ.

ತಾಳಮದ್ದಲೆಗೆ ಭಾಗವತರು ಅತಿ ಅಗತ್ಯ. ಭಾಗವತರೆಂದರೆ—ಅವ ರನ್ನು ನೋಡುವಾಗಲೇ—"ಇದು ಒಂದು ಜನ ಹೌದು!" ಎನ್ನಿಸಬೇಕು, ಅಂಥವರು! ಜರಿಯು ನೆಗೆದು ಕಾಣುವಂತೆ ನೆರಿನೆರಿಯಾಗಿ ಮಡಚಿ ಉಟ್ಟ ಉದ್ದವಾದ ದೋತರ; ಕುತ್ತಿಗೆಯಿಂದ ಮೊಣಕಾಲಿನವರೆಗೆ ತೊಟ್ಟ ಇಪ್ಪತ್ತೈದು ಗುಬ್ಬಿಗಳಿರುವ ಮಾಂಧಾತರಾಯನ ಕಾಲದ ಕರಿಯ "ಕೋಟು"; ಅದರ ಮೇಲೆ ಹಿಂದೊಂದು ಮುಂದೊಂದು ಬಾಲವನ್ನಿಳಿಯಬಿಟ್ಟ ಜರಿಯ ಶಾಲು; ಅರ್ಧ ತಲೆಯನ್ನು ಸರಿಯಾಗಿ ಮುಚ್ಚುವ ಮೂವತ್ತು ಮೊಳದ ಜರಿಯ ಮುಂಡಾಸು! ಇಷ್ಟೆಲ್ಲಾ ವೇಷ ಭೂಷಣಗಳಿಂದೊಪ್ಪಿ, ಗಂಧಾಕ್ಷತೆ ಗಳಿಂದಲಂಕೃತರಾಗಿ, ಬಾಯಿತುಂಬಾ ಎಲೆ-ಅಡಿಕೆಯನ್ನು "ಜಮಾಯಿಸಿ" ಕೊಂಡ ಅನಂತರವೇ ಭಾಗವತರ ಸಭಾಪ್ರವೇಶ.

ಒಂದೊಂದು ಸಲ ಭಾಗವತರು ಬಾರದೆ ತೊಂದರೆಯಾಗುವುದೂ ಇದೆ. ಮಳೆಯಿಂದಾಗಿ ಹೊಳೆ ಕಟ್ಟಿಹೋದರೆ, ಶೀತದಿಂದಾಗಿ ಗಂಟಲು ಬಿದ್ದು ಹೋದರೆ, ಕೊಡೆ ಮುರಿದುಹೋಗಿ ಮುಂಡಾಸು ಒದ್ದೆಯಾದರೆ, ಭಾಗವತರು ಆ ದಿನ ನಾಮ! ಆದರೂ ಕಾಲಕ್ಷೇಪವು (ತಾಳಮದ್ದಲೆಯ ಇನ್ನೊಂದು ಹೆಸರು) ಹೇಗಾದರೂ ಸುಧಾರಿಸಿಯೇ ಹೋಗುವುದು. ಕಾಲಕ್ಷೇಪಕ್ಕೆ ಕೂಡಿದ ಚೋಮ, ದೂಮರಂತಹ ನಾಲ್ಕಾರು ಜನರ ಪೈಕಿಯಲ್ಲಿ ಒಬ್ಬನು ಭಾಗವತ

ನಾಗುವನು, ಇನ್ನೊಬ್ಬನು ಮದ್ದಲೆಗೆ ಪೆಟ್ಟುಹಾಕುವನು, ಮತ್ತೊಬ್ಬನು ಶ್ರುತಿಹಿಡಿಯುವನು. ಅರ್ಥಧಾರಿಗಳ ಸಂಖ್ಯೆಯು ಕೂಡ ಕಡಮೆಯಾದರೆ, ಭಾಗವತರೂ ಮದ್ದಲೆಯವರೂ ಸೇರಿಕೊಂಡು, ಹೇಗಾದರೂ ಅರ್ಥವನ್ನು "ಹಾರಿಸಿಬಿಡು"ವರು.

ಭಾಗವತರ ಸವಾರಿಯ ಚಿತ್ತೈಸಿದೊಡನೆಯೇ ಅರ್ಥಧಾರಿಗಳೆಲ್ಲರೂ ಸರಿಯಾಗಿ ಕುಳಿತುಕೊಳ್ಳುವರು. ಪ್ರಸಂಗವು ಹೆಚ್ಚಾಗಿ ಆ ಮೇಲೆಯೇ ನಿಶ್ಚಿತವಾಗುವುದು. ಕೆಲವು ವೇಳೆ ಚರ್ಚೆಯುಂಟಾಗಿ ಅಧಿಕ ಪ್ರಸಂಗವಾಗುವುದೂ ಇದೆ. ಅರ್ಥ ಹಂಚುವಾಗಲಂತೂ ದೊಡ್ಡ "ಗದ್ದೆಗೋರಿ"ಯೇ ಆಗಿ, ಅನರ್ಥವಾಗುವುದು. ಹೇಗೂ, ಮಧ್ಯರಾತ್ರಿಯೊಳಗೆ ಇದೆಲ್ಲಾ ಮುಗಿದು, "ಗಝಾನನಂ ಭೂಥಗಣಾಧಿಸೇವಿಥಪಥಂ" ಎಂಬ ಗಣಪತಿ ಪ್ರಾರ್ಥನೆಯೊಂದಿಗೆ ತಾಳಮದ್ದಲೆಯು ಪ್ರಾರಂಭವಾಗುವುದು.

ಬುಟ್ಟಿಯೊಳಗಿನ ನಾಗರಹಾವಿನ ಹೆಡೆಯಾಡಬೇಕಾದರೆ, ಡೊಂಬರವನ ಶ್ರುತಿಯು ಕಿವಿಗಿಂಪಾಗಿರಬೇಕು. ಹಾಗೆಯೇ, ಭಾಗವತರ ಬುರುಡೆಯಲ್ಲಾಡಿ ರಾಗವು ಹೊರಗುರುಳಬೇಕಾದರೆ, ಶ್ರುತಿಯು ಕಿವಿಯ ಬಳಿಯಲ್ಲೇ ಇದ್ದು, ಭಾಗವತರ ಕಂಠಕ್ಕೆ ಕೂಡಬೇಕು; ಇಲ್ಲವೆ ಭಾಗವತರ ಕಂಠವು ಶ್ರುತಿಗೆ ಕೂಡಬೇಕು; ಇವೆರಡೂ ಮದ್ದಲೆಯ ಸ್ವರಕ್ಕೆ ಜೊತೆಯಾಗಬೇಕು. ಇವುಗಳೊಳಗೆ ಎಣ್ಣೆ-ಸೀಗೆಯ ಸ್ನೇಹವೇ ಹೆಚ್ಚು. ಹೇಗಿದ್ದರೂ, ಈ ಮೂರು ಸ್ವರಗಳೂ ಒಟ್ಟಿಗೆ ಬೆರೆತು, ಕೇಳುವವರಿಗೆ "ಕೇಳೋಣ" ಎನ್ನಿಸಬೇಕಾದರೆ, ಹೆಚ್ಚು—ಕಡಿಮೆ ಒಂದು ಘಂಟೆಯಾದರೂಬೇಕು. ಈ ಮಧ್ಯೆ ಮದ್ದಲೆಗೆ ಕುಟ್ಟಿ ಹಾಕಿಕೊಳ್ಳುವುದು, ಶ್ರುತಿಯ ಕಣ್ಣುಗಳಿಗೆ ಮೇಣ ಅಂಟಿಸಿಕೊಳ್ಳುವುದು, ಭಾಗವತರ ಗಂಟಲನ್ನು "ಸಪಾಯಿ" ಮಾಡಿಕೊಳ್ಳುವುದು, ಎಲೆ-ಅಡಿಕೆ ಜಗಿಯುವುದು ಮತ್ತು ಉಗುಳುವುದು—ಈ ಕಾರ್ಯಗಳೆಲ್ಲಾ ಆಗಬೇಕು. ಶ್ರುತಿಯ ಸ್ವರವನ್ನು ಆಲಿಸುತ್ತ ಆಲಿಸುತ್ತ, ಭಾಗವತರಿಗೆ ಹಾಗೆ ಒಂದು ನಮೂನೆಯಾಗಿ, ಮೈಮೇಲೆ ಆವೇಶವು ಬರತೊಡಗುವುದು. ಅವರು ಮೆಲ್ಲ ಮೆಲ್ಲನೆ ಮುಂಡಾಸಿನ ಅಡಿಯಲ್ಲಡಗಿದ ತಲೆಯನ್ನಲಾಡಿಸುತ್ತಾ, ಮೀಸೆ ಹುರಿಯೇರಿಸಿ, ಕಣ್ಣಾಲಿಗಳನ್ನು ಮೇಲೇರಿಸಿ, ನಿಧಾನವಾಗಿ ಹಾವ-ಭಾವ ಸ್ವಭಾವ ದುರ್ಭಾವಯುಕ್ತವಾಗಿ ಬಾಯಿತೆರೆದು "ಸ್ಪೋಸಿ"ನಿಂದ ಒಂದು "ಪಾತಾಳ

ಮೈರಾವಣನ ರಾಗ" ತೆಗೆದು ಅರಚಿದರೆಂದರೆ, ಇಂಪಾದ ಆ ಸಂಗೀತ-ಚೀತ್ಕಾರ ವನ್ನು ಕೇಳಿ, ಎರಡು ಮೈಲು ವಿಸ್ತೀರ್ಣದೊಳಗಿನ ನಾಯಿಗಳೆಲ್ಲಾ ಒಂದೇ ಸಲ ಹೌಹಾರಿ ಬೀಳುವುದೂ ಇದೆ. ಓರೆ-ಕೋರೆಯಾಗಿ, ಏರು-ತಗ್ಗಾದ ನಾನಾ ತಿರುಗಾಸುಗಳಿಂದ ಕೂಡಿದ ಈ ಸ್ವರವು ಹೊಟ್ಟೆಯಲ್ಲಿ ಹುಟ್ಟಿ, ಗಂಟಲಿನಲ್ಲಿ ಸಿಲುಕಿ, ಬಾಯಿಯಲ್ಲಿ ಹೊರಳಿ, ಮರಳಿ, ಕೆರಳಿ, ಹೊರಗುರುಳುವಾಗ ಈ ಸ್ವರಕ್ಕೂ, ಶ್ರುತಿ ಮತ್ತು ಮದ್ದಲೆಯ ಸ್ವರಕ್ಕೂ ಸ್ವರ್ಗ-ಮರ್ತ್ಯ-ಪಾತಾಳ ಗಳೊಳಗಿರುವಷ್ಟು ಅಂತರವೇ ಬಂದುಬಿಡುವುದು. ಸ್ವರವು ಏರುತ್ತಾ ಹೋದಂತೆ, ಭಾಗವತರೂ ಕುಳಿತಲ್ಲಿಯೇ ಹಾರಿ ಹಾರಿ ಬೀಳುವರು. ನಮ್ಮೂರಿ ನಲ್ಲಿ ಒಬ್ಬ ವಿಚಿತ್ರ ಭಾಗವತರಿದ್ದಾರೆ. ಅವರು ಜಾಗಟೆಯನ್ನು ಹಿಡಿದರೆಂದರೆ, ಅವರ ಆವೇಶವೇ ಆವೇಶ! ಜಗುಲಿಯ ಒಂದು ತುದಿಯಲ್ಲಿ ಕುಳಿತಿದ್ದರೆ, ಪದ ಹಾಡುವ ರಭಸದಲ್ಲಿ "ಗೋಂಕುರು ಕಪ್ಪೆ"ಯಂತೆ ಕುಪ್ಪಳಿಸುತ್ತಾ, ಜಗುಲಿಯ ಇನ್ನೊಂದು ಮೂಲೆಗೆ ಪ್ರಯಾಣ ಬೆಳೆಯಿಸಿಬಿಡುವರು. ಮದ್ದಲೆ ಮತ್ತು ಶ್ರುತಿಯವರ ಪರಿವಾರವೂ ಅವರೊಂದಿಗೇ "ಸರ್ಕೀಟು" ಬಿಟ್ಟರೆ ಸರಿ; ಇಲ್ಲವಾದರೆ, ಶ್ರುತಿಗಾರರೊಂದು ಕಡೆ, ಮದ್ದಲೆಗಾರರು ಮತ್ತೊಂದೆಡೆ, ಭಾಗವತರು ಬೇರೊಂದೆಡೆ!

ತಲೆಯ ನಾಟ್ಯವನ್ನು ನೋಡಬೇಕಾದರೆ, ಮದ್ದಲೆಗಾರರ ಕಡೆಗೆ ದೃಷ್ಟಿ ಹೊರಳಿಸಬೇಕು. ಎಲ್ಲಾ ರೀತಿಯ ಮುಖವಿಕಾರಗಳನ್ನೂ ಕಾಣಬಹುದು; ತಲೆಯ ಮೇಲೆ ಅಕ್ಕಿಯ ಮುಡಿಯನ್ನಿಟ್ಟರೂ ಹಾರಿ ಹೋಗಬಹುದು. ಶ್ರುತಿ ಯವರಿಗೆ ಎರಡೇ ಕೆಲಸ; ಶ್ರುತಿಯನ್ನೂದುತ್ತಾ ಊದುತ್ತಾ ನಿದ್ದೆಮಾಡು ವುದು, ಮತ್ತು ಭಾಗವತರ ಕುಟ್ಟಿ ಬಿದ್ದೊಡನೆ ಕಣ್ಣುತಿಕ್ಕಿಕೊಂಡು ಪುನಃ ಶ್ರುತಿಯನ್ನೂದುವುದು.

ತಾಳಮದ್ದಲೆಯು "ಗಡದ್ದು" ಆಗುವುದು ಅರ್ಥಧಾರಿಗಳ ಮಾತು ಕತೆ ಗಳ ಚಾತುರ್ಯದಿಂದ, ಅರ್ಥದ ಬಲದಿಂದ. "ಬಲ" ಎಂದರೆ, ಚರ್ಚೆಯು ಹೆಚ್ಚಾದರೆ, ಕೊನೆಗೆ ಜಗಳವೇ ಬಲವಾಗುವುದು. ಭಾಗವತರ ಒಂದೊಂದು ಪದವು ಮುಗಿದೊಡನೆಯೇ ಅರ್ಥಕ್ಕೆ ಪ್ರಾರಂಭವಾಗುವುದು. ಒಬ್ಬೊಬ್ಬ ಅರ್ಥಧಾರಿಯು, ಮೊದಲೇ ನಿಶ್ಚಿತವಾದಂತೆ, ಪ್ರಸಂಗದೊಳಗಿನ ಒಂದೊಂದು ಪಾತ್ರದ "ದಲಾಲೀ-ವಕಾಲತ"ನ್ನು ವಹಿಸಿಕೊಂಡು ಮಾತನಾಡುವನು.

ಪ್ರಥಮದಲ್ಲಿ ಹೆಚ್ಚಾಗಿ ಒಡ್ಡೋಲಗದ ಅರ್ಥವೇ ಬರುವುದು. ರಾವಣ, ಮೈರಾವಣ, ಭೀಮ, ಕೌರವ, ಕೀಚಕ—ಇತ್ಯಾದಿ ಪಾತ್ರಗಳನ್ನು ಬಣ್ಣದ ಅರ್ಥವೆಂದು ಕರೆಯುವರು. ಇವು ಕೆಲವರಿಗೆ ಮಾತ್ರ ಕಟ್ಟಿಟ್ಟ ಅರ್ಥ, ಧರ್ಮರಾಯ, ಸುಗ್ರೀವ, ಧೃತರಾಷ್ಟ್ರ, ಋಷಿಗಳು ಇತ್ಯಾದಿ ಪಾತ್ರಗಳನ್ನು ಬರೇ "ಪಾಪದ ಜನ"ರಿಗೇ ಕೊಡುವುದು ವಾಡಿಕೆ. ಬಯಲಾಟದಲ್ಲಾದರೆ, ಧರ್ಮರಾಯನ ಪಾತ್ರವು ಪೆಟ್ಟಿಗೆ ಹೊರುವವನ ಪಾಲಿಗೆ ಬೀಳುವುದೇ ಹೆಚ್ಚು. ಸ್ತ್ರೀ ಪಾತ್ರಗಳ ಅರ್ಥವನ್ನು ಯಾರೂ ವಹಿಸಿಕೊಳ್ಳಬಹುದು. ಯಾಕೆಂದರೆ, ತಾಳಮದ್ದಲೆಯಲ್ಲಿ ವಯಸ್ಸಿನ "ಪಿಕಲಾಟ"ವಿಲ್ಲ.

ಒಡ್ಡೋಲಗದ ಅರ್ಥವನ್ನು ಹೇಳುವವರು ಪೀಠಿಕೆಯಲ್ಲೇ ರಾಮಾಯಣ ಭಾಗವತ-ಭಾರತಗಳ ಅರ್ಧಾಂಶವನ್ನು ಮುಗಿಸಿಬಿಡುತ್ತಾರೆ. ಇದರಲ್ಲಿ ಅಷ್ಟ ದಿಕ್ಪಾಲಕರು, ಅವರ ಪಟ್ಟಣ ಮತ್ತು ವಾಹನಗಳ ಹೆಸರುಗಳೆಲ್ಲಾ ಬರಬೇಕು; ಜೊತೆಗೆ ಅಮರದ ಎಂಟು-ಹತ್ತು ಶ್ಲೋಕಗಳನ್ನಾದರೂ ಹೇಳದಿದ್ದರೆ, ಆ ಅರ್ಥಕ್ಕೆ ಬೆಲೆಯೇ ಇಲ್ಲ. ಅಷ್ಟ ದಿಗ್ಗಜಗಳು, ಹದಿನಾಲ್ಕು ಲೋಕಗಳು, ಹದಿನೆಂಟು ಪುರಾಣಗಳು—ಇವೆಲ್ಲಾ ಸಾಮಾನ್ಯವಾಗಿ ಎಲ್ಲಾ ಅರ್ಥಗಳಲ್ಲಿಯೂ ಬಂದೇ ಬರುತ್ತವೆ. ಅತಳ, ವಿತಳ, ಸುತಳ—ಕೊನೆಗೆ ತಳಪಳಾದಿ "ಈರೇಳು ಹದಿನಾಲ್ಕು ಚತುರ್ದಶ" ಭವನಗಳನ್ನೆಲ್ಲಾ ತಂದು ಒಟ್ಟು ಸೇರಿಸಿ, ಒಂದು "ಕೋರ್ಜಿ"ಗೆ "ಭರ್ತಿ" ಮಾಡಿಬಿಡುವರು. ಯುದ್ಧಕ್ಕಾರಂಭವಾಯಿತೆಂದರೆ, ಯಾರೂ ಎಂದೂ ಕೇಳದ ಶಸ್ತ್ರಾಸ್ತ್ರಗಳ ಹೆಸರುಗಳೆಲ್ಲಾ ಬರುವುವು. ಅರ್ಜುನನು ಇಂದ್ರಕೀಲಕಕ್ಕೆ ಹೋಗುವ ಮೊದಲೇ ಅವನ ಕೈಯಲ್ಲಿ ಪಾಶುಪತಾಸ್ತ್ರ, ಗಾಂಡೀವಗಳು ಶೋಭಿಸುವುವು! ನಾಗಾಸ್ತ್ರ, ಉರಗಾಸ್ತ್ರ, ಪನ್ನಗಾಸ್ತ್ರ, ಸರ್ಪಾಸ್ತ್ರ ವಜ್ರಾಸ್ತ್ರ—ಕೊನೆಗೆ ಅಂಗವಸ್ತ್ರವು ಕೂಡಾ ಈ ಅಸ್ತ್ರಗಳ ಜೊತೆಯಲ್ಲಿ ಸೇರಿಬಿಡುವುದಿದೆ. "ನಿನ್ನ ಶಸ್ತ್ರಾಸ್ತ್ರಗಳನ್ನೆಲ್ಲಾ ನನ್ನ ಅಂಗವಸ್ತ್ರದಲ್ಲಿ ಕಟ್ಟಿ ಬಿಗಿದಿದ್ದೇನೆ!" ಎಂದು ಬಿಟ್ಟರೆ, ಎಂತಹ ಪ್ರಚಂಡ ಅರ್ಥಧಾರಿಯಾದರೂ ಬಾಯಿ ಮುಚ್ಚಲೇ ಬೇಕು! ತಾಳಮದ್ದಲೆಯಲ್ಲಿ ಹತ್ತು ಜನರಿಂದ "ಸೈ ಸೈ" ಎನ್ನಿಸಿಕೊಳ್ಳಬೇಕಾದರೆ, ಎದುರರ್ಥಗಾರನ ಬಾಯಿಯನ್ನು ಕಟ್ಟುವಷ್ಟು ಸಮರ್ಥನಾದ ಮಾತುಗಾರನಾಗಬೇಕು.

ಗೋಣಿಗೆ ತಾಗಿದ ಮೇಣದಂತೆ ಸೋತರೂ ಮಾತನ್ನು ಬಿಡದ ಪ್ರತಿಸ್ಪರ್ಧಿಗಳೀರ್ವರೂ ಚರ್ಚೆಯ ಮಲ್ಲರಾದರೆ, "ಬಿಗುವಿನ ಅರ್ಥಧಾರಿ"ಗಳಾದರೆ, ಭಾಗವತರಿಗೆ "ಮೇಕೆ ಕಡೆ"ಯಲು ತುಂಬಾ ಸಮಯ ಸಿಗುವುದು. ಒಬ್ಬನು ಕೌರವನ ತಮ್ಮಂದಿರ ಹೆಸರುಗಳನ್ನು ಕೇಳಿದರೆ, ಎದುರಿಯವನು ಕೃಷ್ಣನ ಹದಿನಾರು ಸಾವಿರದೆಂಟು ಮಂದಿ ಹೆಂಡತಿಯರ ಹೆಸರುಗಳ ಪಟ್ಟಿಯನ್ನು ಕೇಳುವನು. ಅಂತೂ, ಹೆಚ್ಚಾಗಿ ಅರ್ಥಗಾರರ ಚರ್ಚೆಯಲ್ಲೇ ಜಾಮ ಕೋಳಿಯು "ಬಾಂಗ್" ಕೊಡತೊಡಗುವುದು. ಕೊನೆಗೆ ಭಾಗವತರು ಪ್ರಸಂಗವನ್ನು "ಹಾರಿಸಿ" ಹೇಗೂ ಮಂಗಳ ಪದಕ್ಕೆ ಮುಟ್ಟಿಸಿಬಿಡುತ್ತಾರೆ.

ಪ್ರಸಂಗದ ಪದಗಳ ಸರಿಯಾದ ಅರ್ಥಜ್ಞಾನವಿಲ್ಲದ ಕೆಲವು ಅರ್ಥಧಾರಿಗಳು, ಪದಕ್ಕೂ ಅರ್ಥಕ್ಕೂ ಹೊಂದಿಕೆಯಾಗುವಂತೆ, ಅರ್ಥವನ್ನು ಮೊದಲೇ ಬರೆದು ಬಾಯಿಪಾಠ ಮಾಡಿಕೊಳ್ಳುವರು. ಅರ್ಥಹೇಳುವಾಗ ಭಾಗವತರ ಪದವು ಸ್ವಲ್ಪ ಹಿಂದು ಮುಂದಾಗಿ ಬಿಟ್ಟರೆ, ಪದಕ್ಕೂ ಅರ್ಥಕ್ಕೂ ತಾಳೆ ತಪ್ಪಿಹೋಗುವುದು. ಅರ್ಥದಾರಿಯು ತಾನು ಕಲಿತ ಕ್ರಮದಿಂದಲೇ ಅರ್ಥವನ್ನು ಮುಂದುವರಿಸುತ್ತಾ ಹೋಗುವನು; ಅರ್ಥದ ಗಂಧವನ್ನೇ ಅರಿಯದ ಭಾಗವತರಂತೂ, ತಮ್ಮಷ್ಟಕ್ಕೇ ಪದ ಹಾಡುತ್ತಾ ಹೋಗುವರು; ಮುಂದಿನ ಪದವು ಮರೆತುಹೋದಾಗ ರಾಮಾಯಣದಿಂದ ಭಾರತಕ್ಕೂ "ಲಾಗ ಹಾಕು"ವರು. ಒಟ್ಟಾರೆ ಮೇಲೆ ಪದ ಒಂದಾದರೆ, ಅರ್ಥವಿನ್ನೊಂದು. ಪ್ರಸಂಗಾಂತ್ಯದವರೆಗೂ ಹೀಗೆಯೇ ಮುಂದುವರಿಯುವುದೂ ಇದೆ. ಇನ್ನು ಕೆಲವರು, ಪದವು ಯಾವುದೇ ಇರಲಿ, ಎಲ್ಲಾ ಪದಗಳಿಗೂ ಒಂದೇ ರೀತಿಯ ಅರ್ಥದಿಂದ "ಸುಧಾರಿಸಿಬಿಟ್ಟು" ಊದುವ ಶಂಖವನ್ನು ಊದಿಯೇ ಬಿಡುವರು.

ರಸಪೋಷಣೆಯಲ್ಲಂತೂ ಅರ್ಥಧಾರಿಗಳು ಅಸಮಾನವೀರರು. ದುಃಖ ರಸವನ್ನು ವ್ಯಕ್ತಪಡಿಸಬೇಕಾದಲ್ಲಿ—"ಅಯ್ಯೋ, ಇಂಥಾ ಕಠಿಣವಾಗಿಕ್ಕೊಂಡಿರ. ತಕ್ಕಂಥಾ ಧುಃಕ್ಕದಲ್ಲಿ ಏನು ಹೇಳಲಿಕ್ಕೂ ಬರುವುದಿಲ್ಲವಲ್ಲಾ, ಏನು ಮಾಡಲಿ ?" ಎಂದು ಅಲ್ಲಿಗೇ ಪೂರ್ಣಾಹುತಿಗೊಳಿಸಿದರೆ ಮುಗಿಯಿತು. ಪ್ರಚಂಡ ರೋಷವನ್ನು ತೋರ್ಪಡಿಸಬೇಕಾದರೆ—"ಆಹಾ ! ಈ ಕೂಡಲೇ ನಾನು ಸಿಟ್ಟೆಂಬಂಥಾ ಕೋಪದ ಕ್ರೋಧಾಗ್ನಿಯನ್ನು ನಖಶಿಖಾಂತದ ವರೆಗೆ

ಧರಿಸುವಂಥವನಾಗುತ್ತೇನಯ್ಯ ? ಕೇಳಿ ಕೇಳಿ !'' ಎನ್ನುತ್ತಾ ಒಂದೆರಡು ಭಯಂಕರ ಆರ್ಭಟಿಗಳನ್ನು ಕೊಟ್ಟುಬಿಡುವರು. ವೀರರಸಕ್ಕೆ ಚೆಂಡೆ ಮತ್ತು ಆರ್ಭಟಿಗಳೇ ಪ್ರಧಾನ. ಇನ್ನುಳಿದ ರಸಗಳೆಲ್ಲಾ ಇವರ ಪಾಲಿಗೆ ಪಾದರಸವೇ ಸರಿ. ಸಾಯುವ ಸಂದರ್ಭದಲ್ಲಿ ಕೆಲವು ಅರ್ಥಧಾರಿಗಳು ಹೀಗೆ ಹೇಳುವುದೂ ಇದೆ—"ಆಹಾ, ವೈರಿಯ ಕೂರಸಿಯ ಮಾರ್ಗಣಿಗಳೆಂಬ ಶರ ಭಾಣಗಳ ವೇಧನೆಯನ್ನು ತಡೆಯಲಾರದೆ, ನನ್ನ ಪಂಭ ಪ್ರಾಣಗಳೆಂಬಂಥಾ ಜೀವಗಳು ಹೋಗಿಬಿಡುವಂಥಾದ್ದಾಯಿತಲ್ಲಾ, ಹಯ್ಯೋ! ಇದಕ್ಕೇನುಪಾಯ ಮಾಡಲಿ ?'' ಅಕ್ಷರಗಳ ಹಾಗೂ ಶಬ್ದಗಳ ಸರಿಯಾದ ಉಚ್ಚಾರಣೆಯನ್ನರಿಯದ ಕೆಲವು ಅರ್ಥಧಾರಿಗಳ ಅರ್ಥ-ಶೈಲಿಯು ಕೇಳುವುದಕ್ಕೆ ಬಲು ಸೊಗಸಾಗಿರುವುದು—"ಏ ಅಭಿಮಾನ್ಯ! (ಅಭಿಮನ್ಯು) ಈ ಚಕ್ರಹೂಯದಲ್ಲಿ ಉದ್ದ (ಯುದ್ಧ) ಮಾಡ್ಲಿಕ್ಕಾಗಿ ಈ ಕುರುಚೇತ್ರಕ್ಕೆ ನಾವುಗಳು ಬಂದುಕೊಂಡದ್ದಾಯಿತಲ್ವೊ ? ಜೈರತ (ಜಯದ್ರಥ) ಬಾಗ್ಲಲ್ಲಿ ನಿಂತಿದ್ದಾನೆ.'ಕುತ್ತ!' ಹ್ಯಾಗೆ ಅನ್ನಣ್ಣು ಜೈಸೋದು ? ನಾಣೇನು ಶಾಮಾಣ್ಯ (ಸಾಮಾನ್ಯ) ಸಾರತಿ ಎಂತ ತಿಳ್ದಿದ್ದಿಯೊ ನೀಣು ? ರತ ಹಾರಿಸ್ತೇಣೆ ನೋಡು !"

ತಾಳಮದ್ದಲೆಯನ್ನು ನೋಡಲು-ಯಾ-ಕೇಳಲು ಕುಳಿತ ಜನರ ದೃಶ್ಯವು ಬಹಳ ಮನೋಹರ. ಅರ್ಥದ ಸಾರವನ್ನು ಹೀರಿ ಅಮಲಾಗಿ, ಕುಳಿತಲ್ಲಿಯೇ "ಬೆಲ್ಲ ತೂಗು"ವವರು ಕೆಲವರು; ಅರ್ಥದ ಚಮತ್ಕಾರಕ್ಕೆ ಬೆರಗಾಗಿ ಬಾಯ್ಬಿಟ್ಟು ನೋಡುತ್ತಿರುವವರು ಕೆಲವರು; ಅರ್ಥದ ಅರ್ಥವನ್ನು ಹತ್ತಿರವಿದ್ದವರಿಗೆ ಹೊಗಳಿ ತಿಳಿಸುವವರು ಕೆಲವರು; ಕೈ ಕಾಲುನೀಡಿ, ಬಾಯಿಬಿಟ್ಟು, ಕಣ್ಣುಮುಚ್ಚಿ "ಗಮ್ಮತು" ಗೊರಕೆಹೊಡೆಯುತ್ತಾ ಕನಸಿನಲ್ಲಿಯೇ ತಾಳಮದ್ದಲೆ "ಮಜಾ" ನೋಡುವವರು ಕೆಲವರು. ತಾಳಮದ್ದಲೆಯ ಪೂರ್ಣ ಸ್ವಾರಸ್ಯವನ್ನು ತಿಳಿಯಬೇಕಾದರೆ, ಮರುದಿನ ಬೆಳಗ್ಗೆ ಕಣ್ಣುತಿಕ್ಕಿಕೊಂಡು ಮನೆಗೆ ಹೋಗುತ್ತಿರುವ ಈ ಪ್ರೇಕ್ಷಕರ ಗುಂಪಿನ ಜೊತೆಗೆ ಸೇರಿಕೊಂಡರೆ ಸರಿ. "ಕರ್ಣನ ಅರ್ಥ ಎಂದ್ರೆ ಎಂಥಾ ಅರ್ಥಯ್ಯ ಅದು! ಒಂದೊಂದು ಮಾತಿಗೆ ಒಂದೊಂದು ಪವನು ಕೊಡಬೇಕಲ್ಲ! ಅರ್ಜುನನ ಒಂದೇ ಒಂದು ಮಾತಿಗೆ ಹನುಮಂತಾಚಾರ್ರು ಬಾಲ ಮಡಚಿಯೇ ಬಿಟ್ಟರಲ್ಲ.....! ಲಕ್ಕಪ್ಪರೈಳೆ ಮೋನೆಗ್ ಇನಿ ಪೊರ್ಲ್ ಆರತಿ ಆಂಡ್ಯೆ !.....ವೀರ ರಸತ್ತೊ ಆರ್ತೋಗು

ನಮ್ಮ ಇಂಬೇರ್—ಸಯ್ತ್ನಾರ್—ಪೂವಣಿ ಶೆಟ್ರ್ ಬಿಗುತ್ತಾರ್ಯೆ! ಇತ್ತೆ ಸುಧಾರಣೆತ ಮಷ್ಟ್ಗ್ ನಮ ಮೂಲ್ಗೋಕೋಟು ಏರೆನ್ಲ ಬುಡ್ರಾಯೆರ್! ಮಲ್ಲೆ ಬಿರ್ಸೆ ಅತ್ತೊ .....ಮುರಾಣಿದ ತಾಳ ಮದ್ದೋಳಿಡ್ದ್ ಇನಿತ್ತಾವು ಎಡ್ಡೆ ರೈಸಾತಂಡ್ ಅತ್ಯೆ? ವಾ ಗಮ್ಮಸ್ತ್! ....ಅಂದೊ, ಎನ ಮೋಷ್ಟುತ ಜೋಡು ಯಾನ್ ಅವ್ಳೆ ಬುಡ್ಯೇನೊ ದಾನೆ?.....ಎಷ್ಟಾದರೂ ಇವತ್ತಿನ ರಾವಣ ಸ್ವಲ್ಪ ಹಾಳು ಮಾಡಿಬಿಟ್ಟಯ್ಯ! ಭಾಗೋತ್ರ ಕಂಠ ಅಂದ್ರೆ ಕಂಠ ಅಲ್ಲೊ ಇವತ್ತು! .....ಭೀಮ ಎಲ್ಲಾ ಆದೀತು, ಅರ್ಥದಲ್ಲಾಗ್ಲಿ, ಸ್ವರ ದಲ್ಲಾಗ್ಲಿ, ಮಾತಿನಲ್ಲಾಗ್ಲಿ, ಗತ್ತಿನಲ್ಲಾಗ್ಲಿ.....ಆದ್ರೆ, ಆ "ಫೋರ್ಸು" ಇಲ್ಲ ನೋಡಿ!.....ಪುತ್ತ ಮಾಸ್ತ್ರನ ಅರ್ಥ ಎಲ್ಲ ಒಳ್ಳೆದೇ. ಆದ್ರೆ, ಏನೂ "ರೈಸಿ"ದ್ದು ಸಾಲದು!.....ಕೌರವನಿಗೆ ನಮ್ಮ ಶ್ಯಾನುಭೋಗ್ರು ಹಾಗೆ ಹೇಳ ಬಾರದಿತ್ತು "ಮುಂಡೆ ಗಂಡಾ"ಂತ!.....ಶೂರ್ಪನಖಿ ನೋಡ್ಬೇಕು ನಮ್ಮ ರಾಂಭಟ್ರುದ್ದಯ್ಯ! ಆ ಹೊಟ್ಟೆ ನೋಡಿದರೆ ಸಾಕಲ್ಲ!....." ಈ ಟೀಕೆ-ಟಿಪ್ಪಣಿಗಳು ಕೆಲವು ಸಂದರ್ಭಗಳಲ್ಲಿ ಬಹಳ ಬಲವಾಗಿ ಈ ಗುಂಪಿನವರೊಳಗೇ ಪರಸ್ಪರ ಕೈಗೆ ಕೈಹತ್ತಿ "ಮಾರಾಮಾರಿ"ಯಾಗಿ ಮತ್ತೊಂದು ತಾಳಮದ್ದಲೆ ಯಾಗುವುದೂ ಇದೆ.

ಹಿಂದಿನ ತಾಳಮದ್ದಲೆ-ಕೂಟವು ಇಂದು ಎಷ್ಟೋ ಸುಧಾರಣೆ ಹೊಂದಿದೆ. ಕನ್ನಡದ ಸೇವೆಗೆ ಸೊಂಟಗಟ್ಟಿದ ಕೆಲವು ಮಹನೀಯರ ಸಾಹಸವೇ ಅದಕ್ಕೆ ಕಾರಣ. ಇಂದಿನ ಯಕ್ಷಗಾನ-ಸಭೆಗಳು ಅರ್ಥದ ಗಂಧವನ್ನರಿಯದ "ಪೆದ್ದ ಬಟ್ಟ"ರಿಂದಲ್ಲ....ನುರಿತ ಕಲಾವಿದರಿಂದ, ಅರಿತ ವಿದ್ವಾಂಸರಿಂದ ತುಂಬಿದೆ. ಆದರೆ, ತಮ್ಮ ತಮ್ಮ ಹೆಸರೇ ಮೇಲಾಗಬೇಕೆಂಬ ದುರಾಗ್ರಹವು ಈ ಕ್ಷೇತ್ರ ದಲ್ಲಿಯೂ ತಾಂಡವವಾಡುತ್ತಿದೆ. ಇಂದಿನ ಹೆಚ್ಚಿನ ಅರ್ಥಧಾರಿಗಳು ವಕೀಲರನ್ನು ಕೂಡಾ ಮೇಲೆ-ಕೆಳಗೆ ಮಾಡಿಬಿಡುವರು. ಒಂದೊಂದು "ಕೇಸಿ"ನಲ್ಲಿ ಚಿಕ್ಕ ದೊಂದು "ಪೈಂಟು" ಸಿಕ್ಕಿದರೆ ಸಾಕು—ಯಕ್ಷಗಾನದ ಬದಲು ಹರಿಕತೆಯೇ ನಡೆದು ಹೋಗುವುದು. ಮಾತಿನ ಮಲ್ಲಯುದ್ಧದ ಗರಡಿಯಲ್ಲಿ ಯಾವ ಜಟ್ಟಿಯ ಕೈ ಮೇಲಾಗುವುದೋ ಅವನೇ "ಭಯಂಕರ ಅರ್ಥಧಾರಿ!"—ಆ ದಿನದ "ಹೀರೊ!" ಅಥವಾ "ಹಿಟ್ಲರ್!" ಆತನ ಹೆಸರು ಮರುದಿನ ಪತ್ರಿಕೆ ಗಳಲ್ಲಿ ಮುದ್ದು ಮುದ್ದಾಗಿ ಪ್ರಕಟಿಸಲ್ಪಡುವುದು; ಆತನನ್ನು ದೂರ ದೂರದ

ಯಕ್ಷಗಾನ ಸಭೆಗಳಿಗೆ ಕರೆದೊಯ್ಯಲು "ಸ್ಪೆಶಲ್ ಕಾರು"ಗಳು ಬರುವುವು. ಇಂದಿನ ಯಕ್ಷಗಾನ ಸಭೆಗಳಲ್ಲಿ ಭಾಗವಹಿಸುವವರು "ಖಾಲಿ-ಪೋಲಿ, ಚಿಲ್ಲರೆ-ಜನಗಳಲ್ಲ—ಡಾಕ್ಟರರು, ವಕೀಲರು, ಪ್ರೊಫೆಸರರೇ ಮೊದಲಾದವರು. ಹೀಗಿರುವಾಗ ಅರ್ಥಹೇಳುವ ಮಧ್ಯೆಮಧ್ಯೆ—"ಉಡುಗೆ ತೊಡುಗೆ" ಎಂಬ ಶಬ್ದದ ಬದಲು "ಡ್ರೆಸ್", "ಬಾಯಿಮುಚ್ಚು" ಎನ್ನುವುದರ ಬದಲು "ಶಟ್ ಅಪ್!" (Shut up) ಎಂಬಿತ್ಯಾದಿ "ಇಂಗ್ಲಿಷು" ಶಬ್ದಗಳು ಬಂದರೂ "No matter!"

ಈಗೀಗ ತಾಳಮದ್ದಲೆಯು ನಾಟಕದ ರಂಗವನ್ನು ಹತ್ತತೊಡಗಿದೆ. ಈ "ತಾಳಮದ್ದಲೆ-ನಾಟಕ"ದಲ್ಲಿ ಭಾಗವತ-ಮದ್ದಲೆಗಾರರ ದರ್ಶನವು ಪ್ರೇಕ್ಷಕರಿಗೆ ಸಿಗುವುದಿಲ್ಲ. ಅರ್ಥಧಾರಿಗಳೆಲ್ಲರೂ ವೇಷಧಾರಿಗಳೇ. ಈಗ ತಾನೇ "ಕಾಫಿ ಯನ್ನು ಮೇಲೆ-ಕೆಳಗೆ ಸರ್ಕಸು" ಮಾಡುತ್ತಿದ್ದ ಕಾಫೀ ಹೋಟೆಲಿನ "ಪ್ರೊಪ್ರೈಟರ್" ಸಾಹೇಬರು, ಸ್ವರ್ಗದ ಸಭೆಯ ನಡುವೆ; ದೇವೇಂದ್ರನಾಗಿ ಶಚಿಯೊಡನೆ ಒಡ್ಡೋಲಗಸ್ಥರಾಗಿದ್ದಾರೆ! ಗ್ರಾಮದ ಪಠೇಲರು ರಾವಣನ ಅರಮನೆಯ ದ್ವಾರಪಾಲಕನಾಗಿ, ಬಾಗಿಲಲ್ಲಿ ನೆಟ್ಟಗೆ ನಿಂತಿದ್ದಾರೆ! ಜವುಳಿ ಸಾಹುಕಾರರು ಕುಚೇಲನಾಗಿ ದ್ವಾರಕೆಗೆ ಹೊರಟಿದ್ದಾರೆ! ವಕೀಲ ಮಹಾಶ ಯರು ಬಾಲಕಟ್ಟಿಕೊಂಡು, ಸಮುದ್ರ ಹಾರಿ, ಸೀತೆಯನ್ನು ಹುಡುಕಲು ಹೊರಟಿದ್ದಾರೆ—ಅಷ್ಟರಲ್ಲಿ, ಕಟ್ಟಿದ ಬಾಲವು ಉದುರಿಹೋಯಿತೆಂದು ಸಮುದ್ರಹಾರುವುದನ್ನು ಬಿಟ್ಟು, "ಗ್ರೀನ್ ರೂಮಿ"ನ ಕಡೆಗೆ ತಿರುಗಿದ್ದಾರೆ!... ಈ ನಾಟಕದಲ್ಲಿ ಒಂದೊಂದು ಸಲ ಅತ್ಯದ್ಭುತವಾದ "ಟ್ರಾನ್ಸ್‌ಫರ್ ಸೀನೇರಿ" ಗಳು ತೋರಿಸಲ್ಪಡುತ್ತವೆ. ರಾವಣನಿಗೆ ಕಟ್ಟಿದ ಒಂಬತ್ತು ತಲೆಗಳ ಪೈಕಿ, ಒಂದೆರಡು ತಮ್ಮಷ್ಟಕ್ಕೇ ಉದುರಿ ಬೀಳುವುವು. ಕರ್ಣಾರ್ಜುನರಿಗೆ ಬಲವಾಗಿ ಯುದ್ಧ ನಡೆಯುತ್ತಾ ಇರುವಾಗ, ಅರ್ಜುನನ ಒಂದು ಬದಿಯ ಮೀಸೆ ಬಿದ್ದು ಹೋಗುವುದು; ಉಳಿದ ಅರ್ಧ-ಮೀಸೆಯನ್ನು ಸಿಟ್ಟಿನಿಂದ ಕಿತ್ತೊಗೆಯವನು. ಹನುಮಂತನು ಸಮುದ್ರವನ್ನು ಹಾರುವುದಕ್ಕಾಗಿ ಆಲೋಚನೆ ಮಾಡುತ್ತಾ ಇರುವಾಗಲೇ, "ರೊಟ್ಟಿ"ಯ ಹನುಮಂತನು ಸರಿಗೆಯ ಮೂಲಕ ಸಮುದ್ರ ವನ್ನು ಹಾರುತ್ತಾ ಹಾರುತ್ತಾ, ಮಧ್ಯದಾರಿಯಲ್ಲಿ (ಸರಿಗೆ ಸುರುಟಿ ಹೋದುದ ರಿಂದ) ಸಿಕ್ಕಿಬಿದ್ದು, ತಲೆಕೆಳಗಾಗಿ ತೂಗಾಡುವನು; ಪಾತ್ರಧಾರಿ ಹನು

ಮಂತರಾಯರು ಅದನ್ನು ಹೇಗಾದರೂ ಸರಿಮಾಡಿ, ಸಮುದ್ರವನ್ನು ಹಾರಿಸಿಯೇ ಬಿಡುವರು ! ಸ್ತ್ರೀ-ಪಾತ್ರಧಾರಿಗಳು ತಲೆಯ "ಟೋಪನು"ಗಳು ಜಾರಿಬಿದ್ದಾಗ ತಲೆಹೋಕರಾಗಿ ನಿಲ್ಲುವರು ! "ಸ್ಪ್ರಿಂಗಿ"ನ ಲಾಂಗೂಲಾಸನದ ಮೇಲೆ ಕುಳಿತ ಅಂಗದ ರಾಯನು "ಬೆಲೆನ್ಸ್" ತಪ್ಪಿ, ಬಾಲಕಡಿದು, "ಸ್ಟೇಜಿ"ನ ಮೇಲೆ ಉರುಳಿಬೀಳುವನು !.....ಈ ಎಲ್ಲಾ ವೇಷ ಧಾರಿಗಳೂ, ಭಾಗವತರು ಪದ ಹಾಡುವಾಗ ಗೂಟಗಳಂತೆ ನೆಟ್ಟಗೆ ನಿಂತುಕೊಳ್ಳುವರು. ಈ ತಾಳಮದ್ದಲೆ-ನಾಟಕ"ವು ಆಚೆ ಬಯಲಾಟವೂ ಅಲ್ಲ, ಈಚೆ ನಾಟಕವೂ ಅಲ್ಲ—ಇವೆರಡರ "ಬೆಸಿಗೆ". ಅಂತೂ ಯಕ್ಷಗಾನ-ಪ್ರಸಂಚದಲ್ಲುಂಟಾದ ಕ್ರಾಂತಿಯು ಕುಂದು ಕೊರತೆಗಳಿದ್ದರೂ, ಪ್ರಶಂಸನೀಯವಾಗಿದೆ.

ಅಜ್ಜಯ್ಯನ ಅಭ್ಯಂಜನ

ಕುವೆಂಪು

ಮಲೆನಾಡಿನ ಜೀವನವನ್ನು ಸಾಮಾನ್ಯವಾಗಿ ನಿರುದ್ವಿಗ್ನ ಎಂದು ಕರೆಯ ಬಹುದು. ನಗರಗಳಲ್ಲಿರುವಂತೆ ದ್ರುತಪದಸಂಚಾರವಿಲ್ಲ ; ಮೋಟಾರು ಮೊದಲಾದ ಆತುರದ ಯಾನಗಳ ಗಡಿಬಿಡಿಯಿಲ್ಲ ; ಸಿನಿಮಾ ನಾಟಕಶಾಲೆಗಳ ಉದ್ವೇಗವಿಲ್ಲ; ಚಿತ್ರವಿಚಿತ್ರವಾದ ವರ್ತಮಾನ ಸಂಕುಲದಿಂದ ಸಮಾಚ್ಛನ್ನ ವಾಗಿ ಶಾಂತಿಭಂಗಕಾರಿಗಳಾಗಿರುವ ಚಿತ್ರಗುಪ್ತನ ದಪ್ತರದಂತಿರುವ ಪತ್ರಿಕೆಗಳ ಗಲಭೆಯಂತೂ ಬಹಳಮಟ್ಟಿಗೆ ಸೊನ್ನೆ. ಸಾಯಂಕಾಲದಲ್ಲಿ ದಿನದ ಬೇಸರ ವನ್ನು ಪರಿಹರಿಸಿಕೊಳ್ಳಲೆಂದು ಉಪನ್ಯಾಸ ಮಂದಿರಗಳಿಗೆ ಹೋಗಿ ನೀರಸವಾದ ಭಾಷಣಗಳನ್ನು ಕೇಳಿ ಬೇಜಾರಿಗೆ ಬದಲಾಗಿ ಅಶಾಂತಿಯನ್ನು ತುಂಬಿಕೊಂಡು ಗೊಣಗುತ್ತ ಹಿಂತಿರುಗುವ ಪ್ರಸಂಗಗಳಂತೂ ಒದಗುವುದೇ ಇಲ್ಲ. ಅಲ್ಲಿರುವುದು ಕೇವಲ ಶಾಂತಿ; ವನ್ಯವಾದರೂ ಅನಾಗರಿಕವಲ್ಲದ ಶಾಂತಿ. ಸುತ್ತ ನೋಡಿದರೆ ಮಾಲೆಮಾಲೆಯಾದ ಮಲೆಗಳು, ದಟ್ಟವಾದ ಕಾಡುಗಳು; ಅಲ್ಲಿ ಮೌನವನ್ನೇ ಮಲಗಿಸುವ ಜೋಗುಳದಂತಿರುವ ಹಕ್ಕಿಗಳ ಸವಿದನಿ. ಮೇಲೆ ತಲೆಯೆತ್ತಿ ನೋಡಿದರೆ ಆಕಾಶ, ನೀಲಾಕಾಶ; ಅನಂತ, ಅಪಾರ, ಪ್ರಶಾಂತ. ಅಲ್ಲಿ ಸುತ್ತುವ ಬೆಳ್ಮುಗಿಲಿನ ತುಂಡುಗಳೂ ಕೂಡ ಮೆಲ್ಲಗೆ ಚಲಿಸುತ್ತ ಜಗತ್ತನ್ನು ಸ್ವಪ್ನದಿಂದ ಹೊದಿಸುವಂತೆ ತೋರುತ್ತವೆ. ದಾರಿಯಲ್ಲಿ ತೊರೆಗಳೇನೋ ಬಂಡೆಯಿಂದ ಇಳಿದು ಜಾರಿ ಹರಿಯುತ್ತಿರುತ್ತವೆ. ಆದರೆ ಹರಿದಾಟದಲ್ಲಿರುವುದು ತತ್ತ್ವಜ್ಞಾನ ಔದಾಸೀನ್ಯ ; ಯೋಗಿಯ ನಿಷ್ಕಾಮಕರ್ಮ. ಜನಗಳ ನಿತ್ಯ ಜೀವನದಲ್ಲಿ ಹಲಕೆಲವು ಕ್ಷುದ್ರಕ್ಷುದ್ರ ಉದ್ವೇಗಗಳಿರಬಹುದು : ಬಡಸಂಸಾರದ ಸಾಲದ ಶೂಲೆ; ಮನೆಯಲ್ಲಿ ಮಗುವಿನ ಜ್ವರ; ಒಂದು ಎತ್ತನ್ನು ಹುಲಿ ಹಿಡಿದುದರಿಂದ ಈ ಸಾರಿ ಉಳಲು ಒಂದು ಎತ್ತು ಸಾಲದು; ಮಳೆಗಾಲಕ್ಕೆ ಬೇಕಾದ ಕಟ್ಟಿಗೆ ಇನ್ನೂ ಮನೆಗೆ ಬಂದಿಲ್ಲ; ಕೋರ್ಟಿನಲ್ಲಿ ಕೇಸು; ದನಕರು ಗಳಿಗೆ ಜಕ್ಕಿಣಿಯ ಕಾಟ–ಇತ್ಯಾದಿ.

ಇಂತಹ ಶಾಂತಿ ಪ್ರಪಂಚದಲ್ಲಿಯೂ ಕ್ರಾಂತಿಕಾಲಗಳಿವೆ. ಜನನ ಸಮಯದಲ್ಲಿ, ಮರಣ ಸಮಯದಲ್ಲಿ, ವಿವಾಹಕಾಲದಲ್ಲಿ, ಬೇಟೆಯಲ್ಲಿ ಮನೆಯ ಜನಗಳೆಲ್ಲ ತುಂಬ ಚಟುವಟಿಕೆಯಿಂದಿರುತ್ತಾರೆ. ಪೋಲೀಸರ ಕಾಟ, ಜಮಾ ಬಂದಿಯ ಊಟ ಇವುಗಳನ್ನು ಉತ್ಕ್ರಾಂತಿಗಳ ಗುಂಪಿಗೆ ಸೇರಿಸಬಹುದು. ಇವುಗಳ ವಿಚಾರವಾಗಿ ಮುಂದೆ ಹೇಳುತ್ತೇನೆ. ಮೇಲೆ ಹೇಳಿದ ವಿಷಯ ಗಳನ್ನು ಬಿಟ್ಟರೆ ಇನ್ನೊಂದು ಕ್ರಾಂತಿವಿಷಯವಿದೆ. ಅದು ಯಾವುದೆಂದು ಊಹಿಸಬಲ್ಲಿರೇನು? ಇಲ್ಲ; ನಿಮ್ಮಿಂದಾಗುವುದಿಲ್ಲ. ನೀವು ಬಯಲು ಸೀಮೆ ಯವರು. ಐದೇ ನಿಮಿಷದಲ್ಲಿ ಸ್ನಾನಮಾಡಿ ಎರಡೇ ನಿಮಿಷದಲ್ಲಿ ಊಟ ಮಾಡುವ ಜಾತಿಗೆ ಸೇರಿದವರು! ಹೋಗಲಿ, ನೀವು ಊಹಿಸಲಾಗದಿದ್ದರೆ ನಾನೇ ಹೇಳಿಬಿಡುತ್ತೇನೆ–ಅಭ್ಯಂಜನ! ಬೆರಗಾಗಬೇಡಿ. ನಿಮಗೆ ಗೊತ್ತಿಲ್ಲ. ಮಲೆನಾಡಿನಲ್ಲಿ ಅಭ್ಯಂಜನವೆಂದರೆ ಮಹಾಕಾರ್ಯ. ಅಭ್ಯಂಜನದ ದಿನ ಯಾರು ಸಾಯುತ್ತಾರೆ! ಯಾರು ಉಳಿಯುತ್ತಾರೆ! ಯಾರು ಮೂರ್ಛೆ ಬೀಳುತ್ತಾರೆ! ಹೇಳುವುದೇ ಕಷ್ಟ. ಆ ದಿನ ಮನೆಯಲ್ಲಿ ಗಲಭೆಯೋ ಗಲಭೆ!

ನಾನು ಚಿಕ್ಕವನಾಗಿದ್ದಾಗ—ಏಕೆಂದರೆ ಈಗ ನಾಗರಿಕತೆ ಬಂದುದರಿಂದ ಹಿಂದಿನ ಆಚಾರಗಳೆಲ್ಲ ಪರಿವರ್ತನೆಯಾಗಿ ಹೋಗಿವೆ—ನಾನು ಚಿಕ್ಕವನಾಗಿ ದ್ದಾಗ ನಮ್ಮ ಮನೆಯಲ್ಲಿ 'ಅಭ್ಯಂಗ' ಎಂದರೆ ನಮಗೆಲ್ಲ ಜನನ, ಮರಣ, ವಿವಾಹ, ಪೋಲೀಸರ ಕಾಟ, ಜಮಾಬಂದಿ ಎಲ್ಲವೂ ಒಟ್ಟಿಗೆ ಬಂದಹಾಗೆ ಅನುಭವವಾಗುತ್ತಿತ್ತು. ನಾವಾಗ ವಿದ್ಯಾರ್ಥಿಗಳಷ್ಟೆ? ಐಗಳು ನಮ್ಮ ಮನೆ ಯಲ್ಲಿಯೇ ಕೂಲಿ ಕೆಲಸ ಮಾಡುತ್ತಿದ್ದರು. ನಮಗೆ ಅವರು ಮೇಷ್ಟರಾದರೂ ನಮ್ಮ ಹಿರಿಯರಿಗೆ ಅವರು ಕೂಲಿಯಾಳು. ಐಗಳು ನಮಗೆ ಅ ಆ ಇ ಈ ಹೇಳಿಕೊಡುವುದರ ಜೊತೆಗೆ ಎಣ್ಣೆ ಹಚ್ಚುವುದು, ಸ್ನಾನ ಮಾಡಿಸುವುದು; ಸಮಯಬಿದ್ದರೆ ಬಟ್ಟೆ ಒಗೆದುಕೊಡುವುದು; ಪ್ರಸಂಗ ಒದಗಿದರೆ ಗುಡಿಸುವುದು; ಸನ್ನಿವೇಶ ಪ್ರಾಪ್ತವಾದರೆ ಯಜಮಾನರ ಕೂಸನ್ನು ಆಡಿಸುವುದು; ಅವರ ವೃತ್ತಿಯಲ್ಲಿ ಅದೂ ಒಂದು ಭಾಗವಾಗಿದ್ದುದರಿಂದ—ಆಳುಲೆಕ್ಕ ಇಡುವುದು; ಪುಣ್ಯಕಾರ್ಯವಾದ್ದರಿಂದ ದೇವರಪೂಜೆ ಮಾಡುವುದು, ಇತ್ಯಾದಿ ಇತ್ಯಾದಿ ಚಿಲ್ಲರೆ ಕೆಲಸಗಳನ್ನು ಸಾಂಗವಾಗಿ ನೆರವೇರಿಸುತ್ತಿದ್ದರು. ನಮಗೆ ಭಾನುವಾರ ರಜಾ; ಜೊತೆಗೆ ಅಭ್ಯಂಜನದ ಸಜಾ. ಆ ದಿನ ಎಲ್ಲಿಯಾದರೂ ತಿರುಗಾಡಿ,

ಹಣ್ಣು ಗಿಣ್ಣು ಕಿತ್ತು, ಮರ ಗಿರ ಹತ್ತಿ, ಕಲ್ಲು ಗಿಲ್ಲು ಹೊಡೆದು, ತಲೆ ಗಿಲೆ ಒಡೆದು, ಏನಾದರೂ ಒಂದು ಸಾಹಸ ಗೀಹಸ ಮಾಡಿ ಬೇಜಾರು ಕಳೆದು ಕೊಳ್ಳೋಣ ಎಂದರೆ, ಹಾಳು ಅಭ್ಯಂಜನ ಬಂದು ನಮಗೆಲ್ಲ ಬಹಳ ತೊಂದರೆ ಯಾಗುತ್ತಿತ್ತು. ಬೆಳಗಿನ ಆರು ಗಂಟೆಯಿಂದ ರಾತ್ರಿ ಎಂಟು ಗಂಟೆಯವರೆಗೂ ಎಣ್ಣೆಸ್ನಾನದ ತೀರ್ಥಯಾತ್ರೆ! ಅದೇನು ಒಬ್ಬರೇ? ಇಬ್ಬರೇ? ಮನೆಯ ಮಂದಿಗೆಲ್ಲ 'ಅಭ್ಯಂಗ'!

ಅದರಲ್ಲಿಯೂ ನಮ್ಮ ಅಜ್ಜಯ್ಯನ ಅಭ್ಯಂಗವೇ ಅರ್ಧದಿನವನ್ನು ಆಪೋಶನ ಮಾಡುತ್ತಿತ್ತು. ಅವರು ವಯಸ್ಸಾದವರು, ದೇವರಲ್ಲಿ ಬಹಳ ಭಕ್ತಿ; ಕಳ್ಳನ್ನು ಬಹಳ ಮಿತವರಿತು ತೀರ್ಥದಂತೆ ಪಾನಮಾಡುತ್ತಿದ್ದರು. ಅನ್ನಕ್ಕಿಂತಲೂ ಅಭ್ಯಂಜನವೇ ಶ್ರೇಷ್ಠ ಎನ್ನುವುದು ಅವರ ಧ್ಯೇಯೋಕ್ತಿ ಯಾಗಿತ್ತು. ಅಭ್ಯಂಜನ ಮಾಡಿ ಮಾಡಿ ದೇಹ ಸ್ವಲ್ಪ ಸ್ಥೂಲತೆಯ ಕಡೆಗೆ ಒಲೆದಿತ್ತು. ವಾರಕ್ಕೊಂದು ಅಭ್ಯಂಜನ ಮಾಡುತ್ತಿದ್ದರೆ ಅಮೃತತ್ವ ಲಭಿಸು ವುದೆಂದು ಅವರು ತಿಳಿದಿದ್ದಂತೆ ತೋರುತ್ತದೆ. ಆದರೆ ಪಾಪ, ಕೆಲವು ವರುಷ ಗಳ ಹಿಂದೆ ಅವರು ತೀರಿಕೊಂಡೇಬಿಟ್ಟರು. ಅವರು ಸ್ವರ್ಗಕ್ಕೆ ಹೋದರು ಎಂದು ನಾನು ತಿಳಿದಿದ್ದೇನೆ. ಅಲ್ಲೇನು ಕಡಮೆ! ಎಣ್ಣೆ, ಸೀಗೇಕಾಯಿ, ನೀರು, ಬೆಂಕಿ ಬೇಕಾದಷ್ಟಿವೆ! ಅಪ್ಸರಿಯರೂ ಮುಂದೆಮುಂದೆ ಇದ್ದಾರೆ. ಅಭ್ಯಂಜನ ಮಾಡಿದ್ದೇ ಮಾಡಿದ್ದು! ಅವರೇನು ಸ್ವರ್ಗದಲ್ಲಿ ದಿನಕ್ಕೆ ಇಪ್ಪತ್ತುನಾಲ್ಕು ಸಾರಿ ಅಭ್ಯಂಜನ ಮಾಡುತ್ತಾರೋ ಏನೋ! ಮಾಡಲಿ, ಪಾಪ, ಬೇಕಾದಷ್ಟು ಮಾಡಲಿ! ಮಾನವನ ಈಶ್ವರ ಪ್ರೇಮಕ್ಕೆ ಅಷ್ಟಾದರೂ ಪ್ರತಿಫಲ ಬೇಡವೇ! ಒಂದಿಷ್ಟು ಅಭ್ಯಂಜನವನ್ನೂ ಕೊಡಲಾರದ ದೇವರು ಅಮೃತತ್ವವನ್ನು ಕೊಡ ಬಲ್ಲನೆ?

ನಮ್ಮ ಮನೆಯಲ್ಲಿ ಸ್ನಾನದ ಇಲಾಖೆಯೆ ಪ್ರತ್ಯೇಕವಾಗಿತ್ತು—ಯಾರಿಗೋ ಸಂಬಳ ಕೊಡಬೇಕೆಂದು ಇಲಾಖೆ ನಿರ್ಮಿತವಾಗಿರಲಿಲ್ಲ. ಪರಂಪರೆಯಿಂದ ಬಂದುದು. ಮಾಮೂಲನ್ನು ತಪ್ಪದೆ ನಡೆಯುತ್ತಿದ್ದ ನಮ್ಮವರು, ಬರುವ ಆದಾಯ ತನ್ನ ಮಾಮೂಲನ್ನು ತಪ್ಪಿನಡೆದರೂ ಅಭ್ಯಂಜನದ ಮಾಮೂಲನ್ನು ಮಾತ್ರ ಬಿಟ್ಟಿರಲಿಲ್ಲ. 'ಬಚ್ಚಲುಮನೆ'ಯೇ ಬೇರೆ. ಇದೇನು? ಕಣ್ಣು ಕಣ್ಣು ಬಿಡುತಿದ್ದೀರಿ? ನಾನು ಮೊನ್ನೆ ಹೇಳಿದ್ದನ್ನು ಮರೆತಂತಿದೆ! ನೀವು

ಹೀಗೆಲ್ಲ ಮರೆತರೆ ನನ್ನ ಹರಟೆ ತುಂಡುಗಡಿದು ಹೋಗುತ್ತದೆ. ನಮ್ಮ ಕಡೆ ಸ್ನಾನದ ಮನೆಗೆ 'ಬಚ್ಚಲು' ಎಂದು ಕರೆಯುತ್ತಾರೆ. ಬಚ್ಚಲಿನಲ್ಲಿ ಒಂದು ದೊಡ್ಡ ಒಲೆ. ಕಬ್ಬಿಣವನ್ನು ಬೇಕಾದರೂ ಕರಗಿಸಬಹುದು ಅದರಲ್ಲಿ. ಆ ಒಲೆಯ ಬಾಯಿ ಮೂರು ಅಡಿ ಎತ್ತರ ಮೂರು ಅಡಿ ಅಗಲ. ಒಲೆಯ ಮೇಲೆ ಎರಡು ದೊಡ್ಡ ಹಂಡೆಗಳನ್ನು ಹೂಳಿರುತ್ತಾರೆ. ಅವುಗಳನ್ನು ತೂತುಬೀಳುವ ವರೆಗೂ ತೆಗೆಯುವಂತಿಲ್ಲ. ಹೊರಗೆ ತೆಗೆಯಬೇಕಾದರೆ ಅರ್ಧ ಒಲೆಯನ್ನೇ ಕೀಳಬೇಕು. ಆ ಹಂಡೆಗಳ ತುಂಬಾ ನೀರು ಹಾಕಿ ಕಾಯಿಸುತ್ತಾರೆ. ನೋಡಿ. ತಕಪಕ ತಕಪಕ ಕುದಿಯುವವರೆಗೆ. ಅಕ್ಕಿ ಹಾಕಿದರೆ ತಕ್ಷಣ ಅನ್ನ ಆಗಿ ಹೋಗುತ್ತೆ. ಆ ಒಲೆಯ ಬೆಂಕಿಯೆ ಮೂರು ನಾಲ್ಕು ಹೆಣಗಳನ್ನು ಆರೇಳು ನಿಮಿಷಗಳಲ್ಲಿ ಸುಟ್ಟು ಬೂದಿ ಮಾಡಿಬಿಡಬಹುದು ! ಕಟ್ಟಿಗೆಗೇನು ಮಲೆನಾಡಿನಲ್ಲಿ ! ನಾನು ನೀವೂ ಇಬ್ಬರೇ ಹೊರಟರೆ ಹತ್ತೆ ನಿಮಿಷಗಳ ಒಳಗೆ ಏನು ಕಡಮೆ ಎಂದರೂ ಒಂದು ಗಾಡಿ ಕಟ್ಟಿಗೆ ಒಟ್ಟುಮಾಡಬಹುದು. ಸಣ್ಣ ಕಡ್ಡಿಗಳನ್ನಲ್ಲ; ಮೈಸೂರಿನ ಬೀದಿಯ ಸಾಲುಮರಗಳಲ್ಲಿ ಕತ್ತಿ ದೋಟಿಯಿಂದ ಕ್ಷಯ ರೋಗ ಹಿಡಿದ ಗಿಡಗಳ ತುದಿಯ ಕೊಂಬೆಗಳನ್ನು ಮುರಿದು ತೆಗೆದುಕೊಂಡು ಹೋಗುತ್ತಾರಲ್ಲಾ, ಅಂಥಾ ಕಡ್ಡಿಗಳನ್ನಲ್ಲ; ದೊಡ್ಡ ದೊಡ್ಡ ಕುಂಟೆಗಳನ್ನು ! ನಮ್ಮ ಬಚ್ಚಲು ಮನೆಯ ಬೆಂಕಿ ಎಂದರೆ ಏನೆಂದು ತಿಳಿದಿದ್ದೀರಿ, ಸ್ವಾಮಿ ? ಬಡಬಾಗ್ನಿಯ ಮರಿ! ಸಾಕ್ಷಾತ್ ಬಡಬಾಗ್ನಿಯ ಮರಿ!

ಭಾನುವಾರ ಅಭ್ಯಂಜನ ಎಂದರೆ ಅರ್ಧಡಬ್ಬಿ ಹರಳೆಣ್ಣೆ, ಎರಡು ಬುತ್ತಿ ಸೀಗೆಪುಡಿ ಮನೆಲೆಕ್ಕಕ್ಕೆ ಖರ್ಚು. ನಾವು ಏಳೆಂಟು ಜನ ಹುಡುಗರು ನಮ್ಮ ಮನೆಯ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳು. ನಮ್ಮ ಪ್ರಿನ್ಸಿಪಾಲರೆ ನಮ್ಮಲ್ಲಿ ಎಣ್ಣೆಸವರಿಕೊಳ್ಳುವುದಕ್ಕೂ ಬರದ ಅಂಡರ್ ಗ್ರಾಜುಯೇಟ್‌ಗಳಿಗೆ ಎಣ್ಣೆ ಹಚ್ಚುವುದು. ಉಪಾಧ್ಯಾಯರು ವಿದ್ಯಾರ್ಥಿಗಳು ಎಂದರೆ ಹಾಗಿರಬೇಕು! ಏನು ಮೈತ್ರಿ! ಏನು ಸೇವೆ? ಎಷ್ಟು ಕರುಣೆ! ಈಗ ಎಲ್ಲೆಲ್ಲಿಯೂ ವಿದ್ಯಾರ್ಥಿಗಳಿಗೂ ಉಪಾಧ್ಯಾಯರುಗಳಿಗೂ ಸಂಬಂಧಹೋಯಿತು ಎಂದು ಕೂಗಿಕೊಳ್ಳುತ್ತಿದ್ದಾರೆ. ನಮ್ಮ ಮನೆಯ ವಿಶ್ವವಿದ್ಯಾನಿಲಯವನ್ನು ಉದಾಹರಣೆಯಾಗಿಟ್ಟುಕೊಂಡರೆ ನಮ್ಮ ಈ ಸನಾತನ ಪುರಾತನ ಪವಿತ್ರ ಪುಣ್ಯ ಭೂಮಿಯಾದ ಭಾರತವರ್ಷದ ಮಾತಂತಿರಲಿ, ಸಮಗ್ರ ಜಗತ್ತಿಗೇ ಕ್ಷೇಮ

ಉಂಟಾಗುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ! ನಗಬೇಡಿ, ಸ್ವಾಮಿ, ನಗಬೇಡಿ! ನನ್ನ ಮಾತಿನ ಅಂತರಾರ್ಥವನ್ನು ಗ್ರಹಿಸಿ ನೋಡಿ. ಆಗ ವಿಷಯ ಗೊತ್ತಾಗುತ್ತದೆ. ಹುಡುಗರು ಜೊತೆಗೆ ದೊಡ್ಡವರು: ಅಪ್ಪಯ್ಯ, ಚಿಕ್ಕಪ್ಪಯ್ಯ, ಸಣ್ಣ ಚಿಕ್ಕಯ್ಯ, ದೊಡ್ಡ ಕಕ್ಕಯ್ಯ, ಅಣ್ಣಯ್ಯ, ಅಜ್ಜಯ್ಯ ಇತ್ಯಾದಿ! ಎರಡು ಆಳುಗಳಿಗೆ ಎಣ್ಣೆ ತಿಕ್ಕೀ ತಿಕ್ಕೀ ಸಾಕಾಗಿ ಹೋಗಬೇಕು. ಎಷ್ಟೋ ಸಾರಿ ಅವರು ಮರುದಿನವೇ ಜ್ವರ ಬಂದು ಹಾಸಿಗೆ ಹಿಡಿದಿದ್ದಾರೆ ಅಂದರೆ! ಇನ್ನೆರಡು ಆಳುಗಳು ನೀರು ಸರಿಮಾಡುವುದು.

ಹಾಗೆಂದರೆ ಏನು ಅನ್ನುವಿರೋ ಹೇಳುತ್ತೇನೆ! ಲಾಲಿಸಬೇಕು! ಎರಡು ಹಂಡೆಗಳಲ್ಲಿ ನೀರು ಕುದಿಯುವುದು ಒತ್ತಟ್ಟಿಗಿರಲಿ. ಅದು ನೀರಿನ ಉಗ್ರಾಣವಾಯ್ತು. ಅಲ್ಲಿಂದ ನೀರನ್ನು ತೆಗೆದು, ಬೇರೆ ಕಡಾಯಿಗಳಿಗೆ ಹಾಕಿ, ತಣ್ಣೀರು ಬೆರಸಿ ಹದಮಾಡುವರು. ನೀರು ಬೆರಸಲು ಒಂದು ದೊಡ್ಡ ಅಗಲವಾದ ಬಾಯಿ ಇರುವ ಕಡಾಯಿ; ಅಲ್ಲದೆ ಒಂದು ದೋಣಿ, ಸುಮಾರು ಹನ್ನೆರಡು ಹದಿಮೂರು ಅಡಿಗಳಷ್ಟು ಉದ್ದದ್ದು. ಆ ದೋಣಿ ಏಕೆ ಅನ್ನುವಿರೋ? ಎಣ್ಣೆ ಹಚ್ಚಿಕೊಂಡು ಮೈ ಚೆನ್ನಾಗಿ ನೆನೆದ ಮೇಲೆ ಅದರಲ್ಲಿ ಮಲಗಿಕೊಳ್ಳುವುದು ಅಭ್ಯಂಜನದ ಒಂದು ಮುಖ್ಯವಾದ ಅಂಗ. ಆ ನೀರು ಬಿಸಿಬಿಸಿಯಾಗಿರುವುದು. ಅದನ್ನು ಬಿಸಿನೀರು ಎಂದರೆ ತಪ್ಪಾಗಬಹುದು. ಸುಡುನೀರು ಎನ್ನುವುದೇ ಉತ್ತಮ ಮತ್ತು ಸತ್ಯಕ್ಕೆ ಹೆಚ್ಚು ಸಮೀಪ. ಅಭ್ಯಂಜನದಲ್ಲಿ ಬಿಸಿನೀರನ್ನು ಉಪಯೋಗಿಸುವುದೇ ಇಲ್ಲ; ಎಲ್ಲ ಸುಡುನೀರೆ! ಎಷ್ಟೋ ಸಾರಿ ಹುಡುಗರನ್ನು ಬಲಾತ್ಕಾರದಿಂದ ಎಳೆದುಕೊಂಡು ಹೋಗಿ ಅದರಲ್ಲಿ ಅದ್ದಿದಾಗ ಅವರು ಕಿಟ್ಟನೆ ಕಿರಿಚಿಕೊಂಡು ಕೆಳಗೆ ಹಾರಿ ಕಲ್ಲಿನ ಮೇಲೆ ಬಿದ್ದು ಗಾಯವಾಗಿದೆ ಅಂದರೆ! ಇಷ್ಟೊಂದು ವಿಧವಿಧವಾದ ಪಾತ್ರೆಗಳಿಗೆ ನೀರು ಹಾಕುವುದು ಇಬ್ಬರಾಳುಗಳಿಗೆ ಸಾಕುಸಾಕಾಗಿ ಹೋಗುತ್ತದೆ.

ಅತ್ತ ಆಳುಗಳು ಅಭ್ಯಂಜನದ ನಾಟಕಕ್ಕೆ ಬೇಕಾದ ಸಲಕರಣೆಗಳನ್ನು ಸಿದ್ಧ ಮಾಡುತ್ತಿರಲು, ಇತ್ತ ಪಾತ್ರದಾರರು ಎಣ್ಣೆ ಹಚ್ಚಿಕೊಳ್ಳುತ್ತಿರುವುದೊಂದು ಸುಮನೋಹರ ದೃಶ್ಯ. ಮಸಿಯಲ್ಲಲ್ಲ, ಹರಳೆಣ್ಣೆಯಲ್ಲಿ ಅದನ್ನು ಬರೆದರೂ ಆ ವರ್ಣನೆ ಸರಿಯಾಗಿ ಆವಿರ್ಭವಿಸುವುದು ಅಸಾಧ್ಯ. ಪ್ರಿನ್ಸಿಪಾಲರಾದ ನಮ್ಮ ಐಗಳು ಕಿರಿಯರಿಗೆ ಎಣ್ಣೆ ಹಚ್ಚಿ ಹಚ್ಚಿ ಬಿಡುತ್ತಿರುವರು.

ಅದೊಂದು ದೊಡ್ಡ ಗೋಳು. ತಿಮ್ಮು ಎಣ್ಣೆಹಚ್ಚಿಸಿಕೊಳ್ಳುತ್ತಾ ಕಿಟ್ಟನೆ ಕೂಗಿಕೊಂಡನು. ಏಕೆ ಎಂದರೆ, ಮೊನ್ನೆ ಮಾವಿನ ಮರದಿಂದ ಕೆಳಗೆ ಹಾರಿದಾಗ ಬಿದ್ದು ಗಾಯವಾಗಿದ್ದನ್ನು ಯಾರಿಗೂ ಹೇಳದೆ ಮುಚ್ಚಿಟ್ಟಿದ್ದನು. ಐಗಳು ಅದನ್ನು ಅರಿಯದೆ ಕುದುರೆಗೆ ಮಾಲೀಸು ಮಾಡುವಂತೆ ಎಣ್ಣೆ ತಿಕ್ಕಿಯೆ ತಿಕ್ಕಿದರು. ಹಾಗೆ ಮಾಡುವಾಗ ಕೀತುಹೋದ ಗಾಯ ಹಿಸಿದುಕೊಂಡು ಇದ್ದಕ್ಕಿದ್ದಂತೆ ದೃಗ್ಗೋಚರವಾಯ್ತು. ಅಂತೂ ಗಾಯದ ನೋವಿಗೋ, ಗುಟ್ಟು ಬಯಲಾಯಿತಲ್ಲಾ ಎಂದೋ ಗೊಳೋ ಎಂದು ಅಳುತ್ತಿದ್ದಾನೆ. ಅವನನ್ನು ಸಮಾಧಾನ ಮಾಡಿದ್ದೇ ತಡ, ವಾಸು ಕೂಗುತ್ತಿದ್ದಾನೆ. ಏನು? ತಲೆಗೆ ಹಾಕಿದ ಎಣ್ಣೆ ಶಿವನ ತಲೆಯ ಜಡೆಗಳಿಂದ ಹೊರಟ ಶ್ರೀಮದ್ ಗಂಗೆಯಂತೆ ಮೆಲ್ಲನೆ ಕೇಶರಾಶಿಗಳಿಂದ ಉಚ್ಚಳಿಸಿ ಲಲಾಟದ ಮಾರ್ಗವಾಗಿ ಭ್ರೂಮಧ್ಯೆ ಇಳಿದು ಕಮಲ ನಯನಗಳನ್ನು ಪ್ರವೇಶಿಸಿಬಿಟ್ಟಿತು! ನೆಗೆನೆಗೆದು ಬಿದ್ದು ಬಿದ್ದು ಕಿರಿಚಿಕೊಳ್ಳುತ್ತಿದ್ದಾನೆ. ಸರಿ; ಐಗಳು ಓಬುಗೆ ಎಣ್ಣೆ ಹಚ್ಚುವುದನ್ನು ನಿಲ್ಲಿಸಿ ವಾಸುವಿನ "ರಿಲೀಫ್‌ವರ್ಕ್"ಗೆ ಹೊರಟರು. ಬಟ್ಟೆಯಿಂದ ಕಣ್ಣು ಜಜ್ಜಿಹೋಗುವಂತೆ ಒರಸಿದ್ದಾಯಿತು. ಆದರೆ ಆ ಗಲಾಟೆಯಲ್ಲಿ ತಲೆಯಲ್ಲಿದ್ದ ಕಜ್ಜಿಯ ಜ್ಞಾಪಕವೇ ಅವರಿಗಾಗಲಿಲ್ಲ. ಅದನ್ನು ಎಡಗೈಯಿಂದ ಬಲವಾಗಿ ಅದುಮಿದ್ದರಿಂದ ಅವನು ಮತ್ತೂ ಕುಣಿದು ಕೂಗತೊಡಗಿದನು. ಅಲ್ಲಿ ನೋಡಿ! ಅಲ್ಲಿ ನೋಡಿ !ಮಾನು ಎಣ್ಣೆಯ ಕುಡಿಕೆಯನ್ನೇ ಮಗುಚಿ ಹಾಕಿದನು! ಅವನಿಗೂ ಭೂದೇವಿಗೂ ಸ್ಪರ್ಧೆ ತೊಡಗಿದೆ. ಭೂದೇವಿ ತೈಲವನ್ನು ಪಾನಮಾಡಲು ಯತ್ನಿಸುತ್ತಿದ್ದಾಳೆ, ಮಾನು ಆದಷ್ಟನ್ನು ಬಳಿದು ಬಳಿದು ಮೈಗೆ ಬಳಿಯುತ್ತಿದ್ದಾನೆ. ಆ ಭರದಲ್ಲಿ ಮಣ್ಣೆಲ್ಲಾ ಮೈಗಾಗಿಹೋಗಿದೆ! ಈ ಅನಾಹುತವನ್ನು ನೋಡಿದ ಚಿಕ್ಕಯ್ಯ ರೇಗಿ ಎದ್ದು ಮಾನುಗೆ ದಿಡ್ ಎಂದು ಒಂದು ಗುದ್ದುಕೊಟ್ಟರು. ಅವನು ಮೌನವಾಗಿ ರೋದಿಸುತ್ತ ಮೂಲೆ ಸೇರಿ ಪೊರಕೆಯಾಗಿಬಿಟ್ಟನು. ಹುಡುಗರ ಗುಂಪಿನಲ್ಲಿ ಹೀಗೆ ಘಟನೆಗಳ ಮೇಲೆ ಘಟನೆಗಳು ಪ್ರಾಪ್ತವಾಗುತ್ತಿರಲಾಗಿ ದೊಡ್ಡವರ ಮೈಗೆ ಆಳುಗಳು ಎಣ್ಣೆ ಉಜ್ಜುತ್ತಿದ್ದಾರೆ. ಕೆಲವರು ಗರಡಿಯಲ್ಲಿ ಕಸರತ್ತು ಮಾಡುವರಂತೆ ಹುಂ ಉಸ್ ಹುಂ ಉಸ್ ಎನ್ನುತ್ತಿದ್ದಾರೆ. ಅಜ್ಜಯ್ಯ ದೂರದಲ್ಲಿ ಕುಳಿತು ಎಣ್ಣೆ ಉಜ್ಜಿಸಿಕೊಳ್ಳುತ್ತಿದ್ದಾರೆ. ಅವರ ಮೈಯೆಲ್ಲಾ ತೈಲಮಯ. ಆಳು ತಲೆಗೆ ಎಣ್ಣೆಹಾಕಿ ಪಟ್ ಪಟ್ ಎಂದು

ಮದ್ದಲೆ ಬಡಿಯುವಂತೆ ಬಿಡುವಿಲ್ಲದೆ ಬಡಿಯುತ್ತಿದ್ದಾನೆ. ಆ ಏಟಿಗೆ ಅಭ್ಯಾಸ ವಿಲ್ಲದವರಾಗಿದ್ದರೆ ಮೆದುಳು ಕದಡಿ ಹೋಗುತ್ತಿದ್ದರು. ಆದರೆ ಅಜ್ಜಯ್ಯ ಅಚಲದಂತೆ ಧೀರವಾಗಿ ಕುಳಿತಿದ್ದಾರೆ.

ಈ ಮಧ್ಯೆ ಅವರು ಎಣ್ಣೆ ಹಚ್ಚಿಕೊಳ್ಳುವುದನ್ನು ಪ್ರಾರಂಭಿಸುವಾಗ ಮಾಡುವ ಕರ್ಮಕ್ರಿಯೆಗಳನ್ನು ಹೇಳಿದರೆ ಅಪ್ರಕೃತವಾಗದು. ಅಲ್ಲಿ ನೋಡಿ! ಅವರ ಮುಂದೆ ನೆಲದ ಮೇಲೆ ಬೆರಳಿನಿಂದಿಟ್ಟ ಏಳು ಎಣ್ಣೆಯ ಚುಕ್ಕಿಗಳಿವೆ? ಅವು ಅಶ್ವತ್ಥಾಮ ಹನುಮಂತ ಮೊದಲಾದ ಪುರಾಣ ಪ್ರಸಿದ್ಧರಾದ ಸಪ್ತ ಚಿರಂಜೀವಿಗಳ ಸ್ಮಾರಕ ತೈಲ ಬಿಂದುಗಳು. ಅದಾದ ಮೇಲೆ ಅವರು ಏನೇನೋ ಬಾಯಲ್ಲಿ ಮಟಗುಟ್ಟುತ್ತ ಬಂಗಾಳದ ವೈಷ್ಣವರು ನಾಮಗಳನ್ನು ಬಳಿದು ಕೊಳ್ಳುವಂತೆ ಎದೆ, ಹೊಟ್ಟೆ, ತೋಳು, ಬೆನ್ನು ಮೊದಲಾದ ಕಡೆ ಎಣ್ಣೆಯ ಬಟ್ಟುಗಳನ್ನು ಇಟ್ಟುಕೊಂಡು ಆಳಿಗೆ ಎಣ್ಣೆ ಉಜ್ಜಲು ಅಪ್ಪಣೆ ಕೊಡುವರು. ಈ ಪ್ರಾರಂಭೋತ್ಸವವನ್ನು ನಾವು ಬಹಳ ಭಯಭಕ್ತಿಗಳಿಂದ ದೇವರಿಗೆ ಮಾಡುವ ಮಂಗಳಾರತಿಯನ್ನು ನೋಡುವಂತೆ ನೋಡುತ್ತಿದ್ದೆವು.

ಇಷ್ಟು ಹೊತ್ತಿಗೆ ದೊಡ್ಡ ಬೋಗುಣಿಯಲ್ಲಿ ಪಾನಕ ಸಿದ್ಧವಾಗುವುದು. ಎಣ್ಣೆ ಹಚ್ಚಿ ಆಯಾಸಪಟ್ಟವರಿಗಲ್ಲ; ಹಚ್ಚಿಸಿಕೊಂಡು ಆಯಾಸಪಟ್ಟವರಿಗೆ. ಅಲ್ಲದೆ ಅಭ್ಯಂಜನದ ನಡುವೆ ಬಿಸಿನೀರು ಮಿಂದು ಶಕ್ತಿಗುಂದಿದವರಿಗೂ ಪಾನಕ ಕೊಟ್ಟು ಪುನಃ ಸಶೇಷವಾದ ಸ್ನಾನವನ್ನು ಪೂರ್ತಿಯಾಗಿ ಪೂರೈಸಲು ಶಕ್ತಿ ಬರುವಂತೆ ಮಾಡುವುದು ರೂಢಿಯಾಗಿತ್ತು. ಅಷ್ಟು ಬಿಸಿಬಿಸಿಯಾದ ಸುಡು ನೀರನ್ನು ಹೇಗೆ ಮೈಯುತ್ತಿದ್ದೆವೋ ನಾನರಿಯೆ. ಈಗ ಅದನ್ನು ನೆನೆದರೆ ಸಾಕು ನನಗೆ ಬೆವರು ಬರುವ ಹಾಗೆ ಆಗುತ್ತದೆ! ಆ ಬಿಸಿನೀರಿನ ದೋಣಿಯಲ್ಲಿ ಅರ್ಧಗಂಟೆ ಮಲಗಿ ಅಲ್ಲಿಂದ ಕೆಳಗೆ ಇಳಿಯಲು ಶಕ್ತಿಸಾಲದೆ ಇತರರ ಸಹಾಯ ದಿಂದ ಕೆಳಗಿಳಿದರೆ, ಕೂಡಲೆ ಕಡಾಯಿಯಲ್ಲಿ ಸಿದ್ಧವಾಗಿದ್ದ ಸುಡುನೀರನ್ನು ತಲೆಯ ಮೇಲೆ ರಫ್ ರಫ್ ಎಂದು ಹಾಕುವರು. ಶಿಥಿಲವಾಗಿದ್ದ ಜೀವ ಮತ್ತೂ ಶಿಥಿಲವಾಗಿ ನಿಲ್ಲಲಾರದೆ ಕೊಣದ ಕಲ್ಲಿನ ಮೇಲೆ ಕುಳಿತರೆ ಒಬ್ಬರಲ್ಲ ಇಬ್ಬರು ಸೀಗೆಯಿಂದ ಮೈಯುಜ್ಜಲು ತೊಡಗುವರು. ಅವರ ತಿಕ್ಕಾಟ ಎಳೆದಾಟದಲ್ಲಿ ಮೂರ್ಛೆ ಬರುವಷ್ಟಾಗುವುದು. ಆಮೇಲೆ ತಲೆಯಲ್ಲಿದ್ದ ಹರಳೆಣ್ಣೆ ಸಂಪೂರ್ಣವಾಗಿ ಹೋಗುವಂತೆ ತಲೆಯುಜ್ಜುವರು. ಆ ಸಮಯದಲ್ಲಿ

ಅಳದೆ ಇರುವ ಹುಡುಗರೇ ಇಲ್ಲ. ಕಣ್ಣನ್ನು ಎಷ್ಟು ಬಲವಾಗಿ ಮುಚ್ಚಿದರೂ ಸೀಗೆಯ ನೀರು ಹೇಗಾದರೂ ಮಾಡಿ ಒಳಗೆ ನುಗ್ಗಿಯೇ ನುಗ್ಗುವುದು. ಸ್ನಾನ ಮುಗಿಯುವಷ್ಟರಲ್ಲಿ ಮೈಯೆಲ್ಲ ಹಣ್ಣಾಗಿ ಹುಣ್ಣಾಗಿ ಕಣ್ಣಿನಂತೆಯೇ ಕೆಂಪಾಗಿ ನಿಲ್ಲಲಾರದಷ್ಟು ಶಕ್ತಿಗುಂದದೆ ಇದ್ದರೆ ಅದು ನಿಜವಾದ ಅಭ್ಯಂಜನ ಅಲ್ಲವೇ ಅಲ್ಲ ಎಂದು ನಮ್ಮವರ ನಂಬುಗೆ. ಸ್ನಾನ ಮುಗಿಯಿತು. ಐಗಳು ಹುಡುಗನನ್ನು ಮೆಲ್ಲನೆ ಕೈಹಿಡಿದು ನಡೆಯಿಸಿಕೊಂಡು ಹೋಗಿ ಸಿದ್ಧವಾಗಿದ್ದ ಹಾಸಗೆಯ ಮೇಲೆ ಮಲಗಿಸುವರು. ಚೆನ್ನಾಗಿ ಬೆವರಲಿ ಎಂದು ಶಾಲು, ಕಂಬಳಿ, ರಗ್ಗು ಎಲ್ಲವನ್ನೂ ಮುಖಮುಚ್ಚಿ ಹೊದಿಸುವರು. ಒಳಗೆ ಪ್ರಾಣಿ ಬೆವತೂ ಬೆವತೂ ಹಾಸಿಗೆಯೆಲ್ಲ ತೊಯ್ದು ಹೋಗುತ್ತದೆ. ಹೀಗೆ ಹುಡುಗರನ್ನು ಒಬ್ಬೊಬ್ಬರನ್ನಾಗಿ ಹಣ್ಣು ಹಣ್ಣು ಮಾಡಿ ಹಾಸಗೆಗೆ ತಳ್ಳಿದ ಮೇಲೆ ದೊಡ್ಡವರ ಸ್ನಾನ ಪ್ರಾರಂಭವಾಗುತ್ತದೆ. ಕಡೆಯಲ್ಲಿ ನಮ್ಮ ಅಜ್ಜಯ್ಯನವರ ಅಭ್ಯಂಜನ. ಎಲ್ಲರಿಗೂ ಹೆದರಿಕೆ!

ಅಜ್ಜಯ್ಯಗೆ ಎಲ್ಲರಿಗಿಂತಲೂ ಹೆಚ್ಚು ಬಿಸಿಯಾದ ನೀರು ಬೇಕು. ಅವರು ಮೀಯುವ ನೀರಿಗೆ ನಾವು ಕೈಯಿಟ್ಟರೆ ಫಕ್ಕನೆ ಹೊರಗೆ ಎಳೆದುಕೊಳ್ಳುವಂತಾಗುತ್ತಿತ್ತು. ಅಭ್ಯಂಜನದ ಕಾಲದಲ್ಲಿ ಅವರು ಎರಡು ಮೂರು ಸಾರಿಯಾದರೂ ಮೂರ್ಛೆ ಹೋಗದೆ ಇರುತ್ತಿರಲಿಲ್ಲ. ಅಷ್ಟೊಂದು ಬಿಸಿಯಾದ ನೀರನ್ನು ಮಿಂದರೆ ಯಾರಿಗೆ ತಾನೆ ಮೂರ್ಛೆ ಬರುವುದಿಲ್ಲ?—ಅದರಲ್ಲಿಯೂ ಸ್ವಲ್ಪ ವಯಸ್ಸು ಹೋದವರು. ಅವರು ದೋಣಿಯಲ್ಲಿ ದೀರ್ಘಕಾಲ ಮಲಗುವರು. ಏಳುವಾಗ ಒಂದು ಲೋಟ ಪಾನಕ ಕುಡಿಯುವರು. ಆಮೇಲೆ ಕೊಣದಲ್ಲಿ ಕುಳಿತು ತಲೆಯ ಮೇಲೆ ಸುಡುನೀರು ಹಾಕಿಸಿಕೊಳ್ಳುವರು. ಒಬ್ಬರಲ್ಲ ಇಬ್ಬರು, ಚೊಂಬುಗಳಲ್ಲಿ ಕಡಾಯಿಯಿಂದ ಮೊಗೆಮೊಗೆದು ಎಡೆಬಿಡದೆ ನೀರನ್ನು ಎತ್ತರದಿಂದಲೇ ರಫ್ ರಫ್ ಎಂದು ನೆತ್ತಿಗೆ ಹೊಡೆಯುವರು. ಈ ದ್ವಿತೀಯ ಕರ್ಮವಾದ ಮೇಲೆ ಒಂದು ಲೋಟ ಪಾನಕ ಖರ್ಚಾಗುತ್ತಿತ್ತು. ಆಮೇಲೆ ಆಳುಗಳು ಮೈಕೈಗಳನ್ನೂ ತಲೆಯನ್ನೂ ಸೀಗೆಯಿಂದ ಗಸಗಸ ಉಜ್ಜುವರು. ಪುನಃ ಸುಡುನೀರು ಜಲಪಾತದಂತೆ ತಲೆಯ ಮೇಲೆ ಬೀಳುತ್ತಿತ್ತು. ಇಷ್ಟು ಹೊತ್ತಿಗೆ ಮೂರ್ಛೆಹೋಗಿ ಕೊಣದ ಕಲ್ಲಿನ ಮೇಲೆ ಮಲಗಿಬಿಡು

ಅಜ್ಜಮ್ಮ ಬರುತ್ತಿದ್ದರು. ಕೆಲವರು ಪಾನಕ ಕುಡಿಸುವರು; ಕೆಲವರು ತಣ್ಣೀರನ್ನು ತಲೆಗೆ ತಟ್ಟುವರು; ಕೆಲವರು ಗಾಳಿಬೀಸುವರು ; ಕೆಲವರು ತೋಟ ದಾಚೆಯ ಭೂತರಾಯನಿಗೆ ಅಡ್ಡಬಿದ್ದು ಅಜ್ಜಯ್ಯನನ್ನು ಸಂರಕ್ಷಿಸುವಂತೆ ಅಂಗಲಾಚಿ ಬೇಡುವರು ಅಂತೂ ಸ್ವಲ್ಪಹೊತ್ತಿಗೆ ಅಜ್ಜಯ್ಯನ ಮೂರ್ಛೆ ಕೊನೆಗೊಂಡು 'ಅಮ್ಮಯ್ಯ' 'ನಾರಾಯಣ' ಮೊದಲಾದ ಶಬ್ದಗಳು ಅವರ ಬಾಯಿಂದ ಹೊರಬಿದ್ದು ಎಲ್ಲರಿಗೂ ಧೈರ್ಯವನ್ನುಂಟುಮಾಡುತ್ತಿದ್ದುವು. ಸರಿ; ಮತ್ತೆ ಜಳಕ ಮತ್ತೆ ಮೂರ್ಛೆ! ಹೀಗಾಗಿ ಕೊನೆಗೆ ಸ್ನಾನ ಕೊನೆಗಾಣುವುದು. ಅವರಿಗೆ ನೀರೆರೆವವರು ಕೈಗಳನ್ನು ಆಗಾಗ ತಣ್ಣೀರಿನಲ್ಲಿ ಅದ್ದಿ ತಂಪು ಮಾಡಿಕೊಂಡರೂ ಆ ಬಿಸಿನೀರಿನ ತಾಪ ಶಮನವಾಗುತ್ತಿರಲಿಲ್ಲ; ಅಷ್ಟು ಬಿಸಿ ಅವರು ಮಿಾಯುವ ನೀರು! ಅಜ್ಜಯ್ಯನ ಸ್ನಾನ ಕೊನೆಗಾಣುವಾಗ ಅವರು ಗಂಗೆ ಯಮುನೆ ಮೊದಲಾದ ಪುಣ್ಯ ನದಿಗಳ ಹೆಸರಿನ ಪಟ್ಟಿಯೊಂದನ್ನು ಗಟ್ಟಿಯಾಗಿ ಉಚ್ಚರಿಸಿ ನಾಲ್ಕು ದಿಕ್ಕುಗಳಿಗೂ ಕೈಮುಗಿಯುತ್ತಿದ್ದರು. ಇಬ್ಬರು ಎರಡು ಕೈಗಳನ್ನೂ ಹಿಡಿದು ಹಾಸಗೆಗೆ ಕರೆದೊಯ್ಯುತ್ತಿದ್ದರು. ಹೋಗುವಾಗ ಅವರ ಮೈ ಹೊಗೆಯಾಡುವಂತೆ ಕಾಣುತ್ತಿತ್ತು. ಅಲ್ಲಿ ಸಿದ್ಧವಾಗಿದ್ದ ಕಂಬಳಿ ಮೊದಲಾದವುಗಳನ್ನು ಮೈ ತುಂಬಾ ಹೊದೆದುಕೊಂಡು ಮಲಗಿ ಬೆವರಿಸಿಕೊಳುತ್ತಿದ್ದರು. ಅವರು ಆ ದಿನ ರಾತ್ರಿ ಊಟ ಮಾಡುತ್ತಿರಲಿಲ್ಲ. ಬರಿಯ ಹಾಲನ್ನೇ ಕುಡಿದು ಮಲಗಿಬಿಡುವರು.

ಅವರ ಕಾಲ ಮುಗಿದುಹೋಯಿತು. ಅವರೊಡನೆ ಆ ಅಭ್ಯಂಜನದ ಮಹೋತ್ಸವವೂ ಮರೆತುಹೋಯಿತು.

ಚಟ

—ಹಿರೇಮಲ್ಲೂರ ಈಶ್ವರನ್

ನಿನಗೆ ಎಂತಹ ಚಟವಿದೆಯೆನ್ನುವುದನ್ನು ಹೇಳು ; ಆಗಲೆ ನೀನು ಎಂತ ಮನುಷ್ಯನಿರುವೆಯೆಂಬುದನ್ನು ಸ್ಪಷ್ಟವಾಗಿ ನಾನು ಹೇಳಬಲ್ಲೆ. ಆಗಸದ ನಕ್ಷತ್ರ ಎಣಿಸುವುದು ಬೇಕು. ಚಟದ ವಿವಿಧ ರೂಪಗಳನ್ನು ಲೆಕ್ಕಕ್ಕೆ ಕೂಡಿಸುವುದು ಎಂದಿಗೂ ಬೇಡ. ಬುಟ್ಟಿಯಲ್ಲಿ ಮೀನ ತುಂಬಿ ಇಡಲೆತ್ನಿಸುವವನೂ ಚಟದ ಪ್ರಕಾರಗಳನ್ನು ಎಣಿಸುವವನೂ ಒಂದೇ ತರಗತಿಯ ಸೋಲು ಒಪ್ಪಿಕೊಳ್ಳುವುದುಂಟು.

ಕೀಡೆ ಹಿಡಿದ ಹುವ್ವು, ಅನ್ಯರ ಸಂಗ ಬಯಸಿದ ಹೆಣ್ಣು, ಚಟ ಹತ್ತಿದ ಗಂಡು ಎಲ್ಲಾ ಒಂದೆ. ಗಂಟು ಬಿದ್ದ ಚಟ ರೋಮರೋಮದ ಕುಳಿಯನ್ನೆಲ್ಲ ತುಂಬುತ್ತದೆ. ಪೆಂಡ್ಯುಲಮ್ ಗಡಿಯಾರದ ಮುಳ್ಳು ತಿರುಗಿಸುವಂತೆ ಮೈಯನ್ನಾವರಿಸಿಕೊಂಡ ಚಟ ನರನಾಡಿಗಳನ್ನು ಹಿಡಿದು ನಡೆಸುತ್ತದೆ. ಒಮ್ಮೆ ಕೀಲಿಯ ಕೈ ತಿರುಗಿಸುವುದನ್ನು ಬಿಟ್ಟರೆ ಸಾಕು, ಯಂತ್ರವೆ ನಿಂತುಹೋಗುತ್ತದೆ. ಚಟದ ಗುರಿಯ ಕೊನೆಯೂ ಅದೇ ರೀತಿಯದು.

ಎಂತ ಚಟವೇ ನಿನ್ನನ್ನು ಆವರಿಸಲಿ. ರತ್ನತ್ರಯಗಳನ್ನು ಶುದ್ಧವಾಗಿರಿಸಿಕೋ. ನಿನ್ನ ಜ್ಞಾನ, ನಿನ್ನ ದರ್ಶನ, ನಿನ್ನ ಚಾರಿತ್ರ್ಯ, ಯಾವಾಗಲೂ ನಿರ್ಮಲವಾಗಿರಲಿ. ಜ್ಞಾನ ಮಸುಕಾಯಿತೇ, ನೀನು ಮಾನವತೆಯ ಪಟ್ಟವನ್ನೆ ಕಳೆದುಕೊಳ್ಳುವಿ. ಮನುಷ್ಯನು ಜ್ಞಾನವುಳ್ಳ ಪ್ರಾಣಿ. ಜ್ಞಾನಹೀನ ಮನುಜನು ಪಶುಸಮಾನ. ಗುರುಹಿರಿಯರನ್ನು ಮಾತಾಪಿತೃಗಳನ್ನು, ಋಷಿಯ ಅಮೃತವಾಕ್ಕನ್ನು ಓಲೈಸಿ ಜ್ಞಾನ ಗಳಿಸಿಕೊ, ಇದ್ದುದನ್ನು ಉಳಿಸಿಕೋ. ಜ್ಞಾನವಳಿಯಿತೇ ನೀನು ಮೋಟುಮರ. ಹಣ್ಣು, ಕಾಯಿ, ಹುವ್ವು, ಮಿಡಿ, ಚಿಗುರುಗಳಿಲ್ಲದ ಗಿಡದ ಹತ್ತಿರ ಪಶುಪಕ್ಷಿಗಳೂ ಬಾರವು.

ಹಾವಿನ ಹೆಡೆಯ ರತ್ನದಂತೆ ದರ್ಶನ ಯಾವಾಗಲೂ ಅಲಂಕೃತವಾಗಿರ ಬೇಕು. ಕತ್ತಲಲ್ಲಿ ಕಳ್ಳರು ಬರುತ್ತಾರೆ. ಮೋಸ ಮಾಡಿ ಕೊಲ್ಲುವುದರಲ್ಲಿ ಕಳ್ಳರು ಎತ್ತಿದ ಕೈಯುಳ್ಳವರು. ಊಟಮಾಡುತ್ತಾ ಕುಳಿತಿರು. ಅನ್ನದಲ್ಲಿ ರಕ್ತ ಸಿಡಿಯುವಂತೆ ಚಂಡು ಹಾರಿಸುವರು. ಯಾರ ನೋವು ಯಾರಿಗೆ ? ಅಜ್ಞಾನದ ಗರಹಿಡಿದ ಲೋಕದ ಕಣ್ಣಿಗೆ ನ್ಯಾಯಾನ್ಯಾಯಗಳೇ ಇಲ್ಲ. ಆದುದರಿಂದ ನಿನ್ನ ಮನೆಯನ್ನು ಬಹು ಜತನದಿಂದ ಕಾಪಾಡಿಕೊಳ್ಳುವ ಹೊಣೆ ನಿನ್ನ ಮೇಲೆಯೆ ಇರುವುದು. ದರ್ಶನಹೀನನಾದರೆ, ಹಗಲಿನಲ್ಲಿ ಹಾಡುತ್ತಲೆ ನಿನ್ನನ್ನು ಸೂರೆಗೆಯ್ಯುವುದಕ್ಕೆ ಕಳ್ಳರು ಸರ್ವದಾ ಸಿದ್ಧ. ಗುರು ಹೇಳಿದ ಮಾತು : ದರ್ಶನ ಜತನ ಕರೋ !

ಚಟದ ಗೆಳೆಯರು ಸವಿಮಾತನಾಡುತ್ತ ಬರುತ್ತಾರೆ. ಮೈ, ಕೈ ಮುಟ್ಟಿ ನಕ್ಕು ನಗಿಸುತ್ತಾರೆ. ನಗೆ ಹೊಗೆ, ಮೌನ ಮುತ್ತು. ನಗುತ್ತ ಬಂದವನು ಕೈಯಲ್ಲಿ ಬೇಡಿಯನ್ನು ತಂದಿದ್ದಾನೆಂಬುದನ್ನು ಎಂದಿಗೂ ಮರೆಯಬೇಡ. ತಿರುಗಿಹೋಗುವಾಗ ಅವನ ಕೈ ಬೇಡಿ ನಿನ್ನ ಕೈಗೆ ಬಂದುದನ್ನು ನೀನು ಬೇಗ ಅರಿತುಕೊಂಡರೆ ಬದುಕುವಿ, ಇಲ್ಲವಾದರೆ ದುರ್ಮರಣ ಕಟ್ಟಿಟ್ಟದ್ದೆ. ಚಾರಿತ್ರ್ಯ ಹೀನನಾಗಬೇಡ. ಆಗುವುದಾದರೆ, ಆಗಿದ್ದರೆ ಹಗ್ಗ ತೆಗೆದುಕೊಂಡು ನೇಣು ಹಾಕಿಕೊ.

ಮನಸ್ಸು ಗಟ್ಟಿಯಾಗಿರಲಿ. ಬಲಾಢ್ಯವಾದ ಮನಸ್ಸೊಂದಿದ್ದರೆ ಇಂದ್ರಿಯ ಗಳು ಚಲವಿಚಲಿತವಾಗಲಾರವು. ಬಲ್ಲಿದನಾದ ಅಶ್ವಾರೋಹಿ ಬಾನಿನ ಅಂಚನ್ನೇ ಮುಟ್ಟಬಲ್ಲ. ಹರಿವ ಗಾಳಿ, ಚಂಚಲ ಮನಸ್ಸು, ಚಟದ ಓಟ ನಿಲ್ಲಿಸುವುದು ಯಾರಿಂದಲೂ ಸಾಧ್ಯವಿಲ್ಲ. ಇಂದ್ರಿಯಗಳನ್ನು ಮೆಟ್ಟಿ ನಿಲ್ಲಬಲ್ಲಾತ ಮೂಲೋಕಗಳನ್ನು ಕೈ ಬುಟ್ಟಿಯಲ್ಲಿ ತುಂಬಿ ತರಬಲ್ಲ. ಚಟಗಳು ಕೊಡುವ ಸೌಖ್ಯ ಕ್ಷಣಿಕ ; ಫಲವೊ ಅತ್ಯಲ್ಪ ; ಹಾನಿ ಬಾಳಿನ ಪರ್ಯಂತ ಬೆಂಬತ್ತಿದ್ದೇ ಬೆಂಬತ್ತಿದ್ದು. ಚಟದ ಕೈಗೆ ಪೂರ್ತಿಯಾಗಿ ಸಿಲುಕಿದವನು ಸಾಧನ ಮಾರ್ಗ ದಿಂದ ಪಾರಾಗಲೆತ್ನಿಸಬೇಕು. ಸಾಧಕನಿಗೆ ಯಾವಾಗಲೂ ಏಳು ಸುತ್ತಿನ ಕೋಟೆಯ ರಕ್ಷಣೆಯುಂಟು. ಸನ್ಯಾಸಿಗೆ ನಿಂತಿದ್ದೇ ರಂಗಭೂಮಿ. ಲಾಭ ಹಾನಿ, ಸುಖ ದುಃಖ, ಜನನ ಮರಣ ಬರುತ್ತವೆ ಹೋಗುತ್ತವೆ. ಪಂಡಿತ

ನಾದವನು ಯಾವುದಕ್ಕೂ ತಿರುಗಿ ನೋಡಲಾರನೆಂದು ಗೀತೆಯ ವಚನವುಂಟು. ಅಂತ ಸ್ಥಿತಪ್ರಜ್ಞನೇ ಮಂದರಗಿರಿಧರ. ಅವನನ್ನು ಪವನ ಚಲಿಸದು. ಅಗ್ನಿ ಮುಟ್ಟದು.

ಕುರಿಯ ದಂಡಿನಂತೆ ಚಟದ ಗುಂಪು. ಒಂದರ ಹಿಂದೆ ಇನ್ನೊಂದು. ಕುಡಿತದಿಂದ ಕುಣಿತ. ಕುಣಿತದಿಂದ ಕೂಟ. ಕೂಟದಿಂದ ಬೇಟ. ಬೇಟದಿಂದ ಬೆಂಕಿ. ಬೆಂಕಿಯಲ್ಲಿ ಬಿದ್ದ ಪತಂಗ ಯಾರು ಎತ್ತಿ ಮೇಲಿಟ್ಟಾರು ? ನಿರ್ಮಲ ವಾದ ಮನಸ್ಸಿನಿಂದ ಉಷಃಕಾಲದಲ್ಲಿ ಎದ್ದು ತಾಯಿಯ ಪಾದ ಮುಟ್ಟಿ ಹೇಳು. ಕರುಣಾಳು ಬಾ ಬೆಳಕೆ, ಮಬ್ಬು ಮುಸುಕಿದೀ ಕತ್ತಲೆಯಲ್ಲಿ ಕೈ ಹಿಡಿದು ನಡಸೆನ್ನನು !

ಮಗುವಿನ ಮನಸ್ಸು ಹಸಿಯ ಗೋಡೆಯ ಹಾಗೆ. ಎಲವೊ ಚಟಗಾರ, ಹಸುಳೆಯ ಹತ್ತಿರ ಬಾರದಿರು. ಹೇಳಬಾರದ, ನೆನೆಯಬಾರದ ಚಟದ ತವರು ಮನೆ ನೀನು. ಎಂಥ ಚಟಗಾರನನ್ನು ಕಂಡರೂ ನನಗೆ ಆಗುವುದೇ ಇಲ್ಲ.

ವರ್ತಕನಿಗೆ ವಂಚನೆಯಲ್ಲಿ, ನೌಕರನಿಗೆ ಸೇವೆಯಲ್ಲಿ, ಗುಲಾಮನಿಗೆ ಎಂಜಲಲ್ಲಿ, ಕಾಮಿಗೆ ಮನೆಯ ಹೊರಗಿನ ಹೆಣ್ಣಿನಲ್ಲಿ, ಕೀರ್ತಿಮೋಹಿನಿಗೆ ಹುಸಿ ವಿನಯದಲ್ಲಿ, ರಾಜಕಾರಣಿಗೆ ಮೋಸದ ಕಂತೆಯಲ್ಲಿ....ಒಂದರಲ್ಲೆ ಎರಡರಲ್ಲೆ ಚಟದ ಕೈವಾಡ ! ಕುಡಿದರೇ ಕವಿತೆ ಬರುತ್ತದೆ. ಕೆಡಸಿದರೇ ಕಾದಂಬರಿ ಮೂಡುತ್ತದೆ. ತಿಂದರೇ ನೆಮ್ಮದಿಯಾಗುತ್ತದೆ. ಕಪನಿ ತೊಟ್ಟರೇ ಮೋಕ್ಷ ದೊರೆಯುತ್ತದೆ.....ಲೋಕಕ್ಕೆ ಏನು ಕುರುಡೊ ! ಚಟದ ಬೇನೆಯಿಂದ ಸಾಯುವ ರೋಗಿಗೆ ಸಂಯಮವೇ ದಿವ್ಯೌಷಧಿ !

ಚಟದ ಪ್ರಪಂಚಕ್ಕೆ ಸಂದೇಶವನ್ನೊಯ್ದು ಸಾರುವವರು ಐವರು ದೂತರು. ಅವರಲ್ಲಿ ಯಾರು ಹೆಚ್ಚು, ಯಾರು ಕಡಮೆ ? ಆದುದರಿಂದ ಚಟ ಸಣ್ಣದಿರಲಿ, ದೊಡ್ಡದಿರಲಿ, ನೀನು ಯಾವ ಚಟಗಾರನನ್ನೂ ನಂಬದಿರು.

ನನ್ನ ಮನಸ್ಸು ದಿಙ್ಮೂಢವಾಗಿ ಹೋಗಿದೆ. ನಂಬಿ ಕೆಟ್ಟವರಲ್ಲಿ ನಾನೂ ಒಬ್ಬ. ಮೌನ ತಳೆದಾಗ ನನಗೆ ಮೂಕನೆಂದು ತೆಗಳಿದವರುಂಟು. ಆಡಿದಾಗ ಮಾತಾಳಿ ಎಂದು ಅವಹೇಳನಗೆಯ್ದವರುಂಟು. ಕಂಡದ್ದನ್ನು ತೋರಿದಾಗ ಜರಿದು ನುಡಿದವರುಂಟು. ನನಗೀಗ ನೆಮ್ಮದಿಯೇ ಇಲ್ಲವಾಗಿದೆ. ಏನು ನಂಬಲಿ?

ಯಾರ ಬೆನ್ನು ಬೀಳಲಿ ? ನಿರಾಶಾವಾದವೇ ನನಗೆ ರೂಢಿಯಾಗುತ್ತ ನಡದಿದೆ. ಅಳುವುದೇ ನನಗೆ ಚಟವಾಗಿ ಹೋಗಿದೆ.

ಸುತ್ತಲೂ ನೋಡುತ್ತೇನೆ ; ಜನ ಅಳುತ್ತಲೇ ಇದ್ದಾರೆ. ಹುಟ್ಟುವ ಕೂಸು ಅಳುತ್ತಿದೆ. ಕೂಸು ಸತ್ತಾಗ ಜನನಿ ಜನಕರು ಅಳುತ್ತಾರೆ. ಮಳೆಗಾಲ ಬಂದಿತೇ ಬಾನು ಕಂಬನಿಗರೆಯುತ್ತಿದೆ. ಚಳಿಗಾಲ ಬಂದಿತೇ ಗಿಡ ಮರಗಳು ಎಲೆ ಪಳ ಪಳ ಉದುರಿಸುತ್ತಿವೆ. ವಸಂತ ಬಂದಿತೇ ಕೋಗಿಲೆವಿಂಡು ಅಳುತ್ತಿವೆ. ನನ್ನ ಮನಸ್ಸು ಕಲ್ಲಿಗಿಂತ ಕಲ್ಲಾಗಿಬಿಟ್ಟಿದೆ. ಚಟ ಯಾರ ಬೆನ್ನೂ ಬಿಡಲಿಲ್ಲವಲ್ಲ?

ಸೋಮಾರಿತನ ಎಂಬ ಸದ್ಗುಣ

ದ. ರಾ. ಬೇಂದ್ರೆ

ಸೋಮಾರಿತನ ಎಂಬ ಸದ್ಗುಣವನ್ನು ಕುರಿತು ನನಗೆ ಮಾತನಾಡಲು ಹೇಳಿದ್ದಾರೆ. ನಾನೂ ಒಪ್ಪಿಕೊಂಡಿದ್ದೇನೆ. ರೂಢಿಯಲ್ಲಿ ಸೋಮಾರಿತನ ಒಳ್ಳೆಗುಣವಲ್ಲ ಎಂದು ಹೇಳುತ್ತಾರೆ. ನಾನು ಅದನ್ನು ಒಳ್ಳೇ ಗುಣ ಎಂದು ಹೇಳಬೇಕು. ಸರಿ. ಜನರು ರೂಢಿಯ ಸೋಮಾರಿಗಳಂತೆ, ನನ್ನ ಈ ಭಾಷಣವನ್ನೇ ಕೇಳದಿದ್ದರೆ ಹೇಗೆ ? ಸಿದ್ಧ ಸೋಮಾರಿಗಳು ನನ್ನ ಭಾಷಣ ಕೇಳಿ, ಹೊಸದಾಗಿ ಏನು ಗಳಿಸಿಯಾರು ? ಮತ್ತೂ, ಸೋಮಾರಿತನ ಗಳಿಸಿ ಬರಬೇಕಾದ ಗುಣ ಅಲ್ಲ. ಅದು ಹುಟ್ಟುಗುಣ. ಅದು ಬೀಜದಲ್ಲಿ ಇರಬೇಕು. ಅಂದರೆ ಅದು ನಾಳೆ ಸಸಿಯಾಗಿ, ಮೊಳಕೆ ಒಡದೀತು. ಇನ್ನು ಹುಟ್ಟು ಸೋಮಾರಿಗಳಲ್ಲದವರು ನನ್ನ ಈ ಭಾಷಣ ಕೇಳಿ, ಇದೊಂದು ಸದ್ಗುಣ ಎಂದೂ ಮನಗಂಡು, ಸೋಮಾರಿಗಳೇ ಆಗಿಬಿಟ್ಟರೆ ಹೇಗೆ ? ಹೀಗೆ ನನ್ನ ಮನಸ್ಸು ಸೋಮಾರಿತನದಲ್ಲೇ ಹೊಯ್ದಾಡುತ್ತಿರುವಾಗ, ಮಾತಿಗಾಗಿ ನಾನು ಇಷ್ಟು ವಿಚಾರ ಮಾಡಬೇಕೆ ? ಎಂಬ ವಿಚಾರ ಹೊಳೆಯಿತು. ಮಾತಿನ ಸೋಮಾರಿತನ ಕೃತಿಯ ಸೋಮಾರಿತನವಲ್ಲ. ನನ್ನ ಮಾತಿನಂತೆಯೇ ನನ್ನ ಕೃತಿಯಾಗಿದ್ದರೆ ಸೋಮಾರಿತನವೆಂಬ ಸದ್ಗುಣಕ್ಕೆ ಹಳೆಯ ಗುರುಗಳಂತೆ ನಾನು ಹದಿನೈದು ನಿಮಿಷ ಮೌನವ್ಯಾಖ್ಯಾನ ಮಾಡಬೇಕು ; ತಾವು ಮೌನ ಗುರುವಿನ ಮೌನಿಶಿಷ್ಯರಂತೆ ಹದಿನೈದು ಮಿನಿಟುಗಳ ಕೊನೆಗೆ ಹುಂಹುಂ ಎಂದಾಗಲೀ ನಿದ್ದೆಯಲ್ಲಿ ತೂಕಡಿಸಿಯಾಗಲೀ ಸುಮ್ಮತಿ ಕೊಡಬೇಕು. ನನಗೆ ಬೇರೆ ಏನು ಕೆಲಸ ಇಲ್ಲಾ. ನಾನು ಸೋಮಾರಿ ; ಮಾತೆಂಬುದು ಗಾಳಿಯ ಕೂಡ ಚಲ್ಲಾಟ, ತಮಗೂ ಬೇರೆ ಏನೂ ಕೆಲಸವಿಲ್ಲಾ, ಸುಖಾಸನದಲ್ಲಿ ಕುಳಿತು ತಾವು ಬಾನುಲಿಗೆ ಕಿವಿಗೊಡುತ್ತಿದ್ದೀರಿ. ಈ ಸೋಮಾರಿತನದ ಕ್ರೀಡೆ ನಿಷ್ಕಾಮಕರ್ಮ ; ನಿಷ್ಕರ್ಮ ಎಂದರೂ ಸಲ್ಲುವದು. ಇದು ಕೆಲಸವೂ ಅಲ್ಲ, ಇದಕ್ಕೆ ಫಲವೂ ಇಲ್ಲ ; ಆಟದ ಆನಂದ ಇದೆ. ನಾನು ಹೇಳುತ್ತಿದ್ದೇನೆ,

ನೀವು ಕೇಳುತ್ತಿದ್ದೀರಿ, ನಿಜ. ಆದರೆ ನಾವು ಒಬ್ಬರನ್ನೊಬ್ಬರು ನೋಡುತ್ತಿಲ್ಲ. ಗೋಳಗುಮ್ಮಟದ ಆ ತುದಿಗೆ ನೀವು, ಈ ತುದಿಗೆ ನಾನು, ಸೋಮಾರಿತನದಲ್ಲಿ—ಏನೋ ಪಿಸುಗುಡುತ್ತಿದ್ದೇನೆ. ತಾವೂ ಮುನಿಸುಗುಡದೇ ಕೇಳಬೇಕು. 'ಪರಿಹಾಸ ವಿಜಲ್ಪಿತಂ ಸಖೇ ಪರಮಾರ್ಥೇನ ಗೃಹ್ಯತಾಂ ವಚನೇ' ನಗೆಯಲ್ಲಿ ಆಡಿದ್ದನ್ನು ನಿಜವೆಂದು ನಂಬಬೇಡಿ, ಎಂದು ಕಾಳಿದಾಸನ ಒಂದು ಸುಭಾಷಿತವಿದೆ. ನಿಜವೆಂದು ಹೇಳಿದ್ದನ್ನೇ 'ನಗೆಮಾತು' ಎಂದು ತಿಳಿದುಕೊಳ್ಳುವ ಈ ಕಾಲದಲ್ಲಿ ನಗೆಮಾತನ್ನು ನಿಜವೆಂದು ನಂಬಿಯಾರು ಎಂದು ತಿಳಿದುಕೊಳ್ಳುವ ಕಾರಣವಿಲ್ಲ. ಆದರೂ ಎಂಥೆಂಥ ನಗೆಗೇಡಾದ ಮಾತುಗಳನ್ನೇ ನಿಜವೆಂದು ನಂಬಿ ನಡೆಯುವ ಈ ಕಾಲದಲ್ಲಿ ನನ್ನ ನಗೆಮಾತನ್ನೇ ನಿಜ ಎಂದು ನಂಬಲಾರರು ಎಂದು ಹೇಗೆ ಹೇಳಬೇಕು? ನೀವೇ ಹೇಳಿ ಫಲ ಏನೇ ಬರಲಿ, ಈ ಕೆಲಸವಲ್ಲದ ಕೆಲಸವನ್ನು ನಿಷ್ಕಾಮವಾಗಿ ನೈಷ್ಕರ್ಮ್ಯ ಎಂದು ಮಾಡುತ್ತೇನೆ. ಇಷ್ಟು ಹೊತ್ತಿಗೆ ತಮಗೆ ನಿದ್ದೆ ಬಂದಿರದಿದ್ದರೆ ಇನ್ನು ಮುಂದೆ ಹೇಳಿ.

ಸೋಮಾರಿತನ ಸದ್ಗುಣವಾಗಲಾರದು, ಸದ್ಗುಣಕ್ಕೆ ಸೋಮಾರಿತನ ಎಂಬುವದು ತಪ್ಪು, ಎಂದು ಬಲ್ಲವರಾದ ತಮ್ಮೆದುರು ಮಾತಿನ ಲೀಲಾ ವಿಲಾಸದಲ್ಲಿ ನಾನು ಸೋಮಾರಿತನ ಸದ್ಗುಣ ಎಂದು ಸಾಧಿಸಬೇಕಾಗಿದೆ. ಈ ಕಸರತ್ತಿನ ಹಾದಿಯನ್ನು ಸ್ವಲ್ಪ ಲಕ್ಷ್ಯಕೊಟ್ಟು ನೋಡಿ, ನಾವು ಸದ್ಯಕ್ಕೆ ಒಪ್ಪಿಕೊಳ್ಳೋಣ, ಸೋಮಾರಿತನ ಸದ್ಗುಣ, ಎಂದು. ಅದು ನಿಜವಾದರೆ, ಕೆಲಸಿಗತನ ಕಷ್ಟಮಾಡುವದು, ಅದು ಅಷ್ಟು ಒಳ್ಳೆಯ ಗುಣವೇನೂ ಅಲ್ಲ, ಎಂದು ಯಾರಿಗೂ ಮೇಲೇ ತಿಳಿಯುವಂತಿದೆ. ಅಷ್ಟೇ ಅಲ್ಲಾ, ಅದು ಶುದ್ಧ ದುರ್ಗುಣ. ಕೆಲಸಾ, ಕೆಲಸಾ, ಕೆಲಸಾ, ಮೂರು ಹೊತ್ತು ಕೆಲಸಾ. ಒಬ್ಬರಿಗೆ ಕೆಲಸಾ. ಇನ್ನೊಬ್ಬರಿಗೆ ಕಷ್ಟಾ. ಅಥವಾ ಇವರು ಮಾಡಿದ ಕಷ್ಟಾ ಇನ್ನೊಬ್ಬರಿಗೆ ಕೆಲಸಾ ಕೊಡುತ್ತಿದೆ ಎನ್ನುವಾ. ಇದು ಒಳ್ಳೆಯದೇನೇ? ಒಬ್ಬರ ಕೆಲಸದಿಂದಾ ಇನ್ನೊಬ್ಬರ ತಲೆ ಕೆಟ್ಟುಹೋದರೆ, ಅಭದ್ರವಾಗಿ ಬಿಟ್ಟರೆ, ಅದರಿಂದ ಏನು ಸುಖಾ? ಇದಕ್ಕಿಂತ ಗಡ್ಡಾ, ತಲೆ, ಬೆಳೆಸಿಕೊಂಡು ತನ್ನ ತಲೆಯೊಳಗಿದ್ದುದನ್ನು ಇನ್ನೊಬ್ಬರ ತಲೆಯೊಳಗೆ ತುರುಕುವ ಪ್ರಯತ್ನ

ಮಾಡದೇ ಋಷಿಮುನಿಗಳಂತೆ ಮೌನದಿಂದಿರುವದು ಸದ್ಗುಣವಲ್ಲದೇ ಮತ್ತೇನು ?

ಅಗೋ, ಅಲ್ಲಿ ಭಾರತದ ಭೂಪಟದಲ್ಲಿ, ಉತ್ತರದ ನೆತ್ತಿಯಲ್ಲಿ ಹಿಮಾಲಯ, ತಲೆಯೆತ್ತಿ ನಿಂತಿದೆ. ಮುಗಿಲಿಗೆ ಮುದ್ದಿಡುವ ಅದರ ಅನೇಕ ಶಿಖರಗಳಲ್ಲಿ, ಕೈಲಾಸ ಶಿಖರ ಒಂದು. ಕಣ್ಣು ಮುಚ್ಚಿಕೊಂಡು ನೋಡಿ, ಕೈಲಾಸ ಕಾಣುತ್ತದೆ. 'ಕಾಯಕವೇ ಕೈಲಾಸ' ಎಂದು ಹಿರಿಯರು ಕೇಳಿಲ್ಲವೆ ? ನಾನು ಕಣ್ಣುಮುಚ್ಚಿ ಹೇಳುವ ಕಾಯಕ ನಡೆಸಿದ್ದೇನೆ, ನೀವು ಕಣ್ಣುಮುಚ್ಚಿ ಕೇಳುವ ಕಾಯಕ ನಡೆಸಿದ್ದೀರಿ. ಈ ಕಾಯಕಕ್ಕೆ ಕೈಲಾಸ ಫಲ ಏಕೆ ಇಲ್ಲಾ ? ಕಣ್ಣು ಮುಚ್ಚಿದವರೆಲ್ಲಾ ಕೈಲಾಸವಾಸಿಗಳಾದರು ಎಂದು ಹೇಳುತ್ತಾರೆ. ಅಂದಮೇಲೆ, ನಿಂತಲ್ಲೆ ಕುಳಿತಲ್ಲೆ, ಕಣ್ಣು ಮುಚ್ಚಿದರೆ ಕೈಲಾಸ ಕಾಣುವದು ಅಪರೂಪವಾಯಿತೆ ? ಆ ಕೈಲಾಸ ಶಿಖರದಲ್ಲಿ ಸೋಮಾರಿಗಳ ಒಡೆಯನೊಬ್ಬ ಕಾಮಾರಿ ಇದ್ದಾನೆ. ಮೊದಲೇ ತಣ್ಣನ್ನ ಮಂಜಿನ ದೆವ್ವನಂಥ ಗುಡ್ಡ ! ನಿರ್ಜನ ಪ್ರದೇಶ! ಅಲ್ಲಿ ಏನೂ ಸುಳಿದಾಡುತ್ತಿದ್ದರೆ, ದೇಹವಿಲ್ಲದ ಭೂತಗಳ ಸಂಚಾರವಿರಬೇಕು. ಅಂಥ ಆ ಸ್ಮಶಾನಶಾಂತಿಯಲ್ಲಿ, ಎಲ್ಲ ಕಾಮಸಂಕಲ್ಪನೆಗಳನ್ನು ಸುಟ್ಟು ಬೂದಿ ಮಾಡಿ, ಮೈಗೆ ಬಡೆದುಕೊಂಡ ಒಬ್ಬ ಮಹಾಪುರುಷ ಕುಳಿತಿದ್ದಾನೆ. ಮೈಮೇಲೆ ಚಿಂದಿಬಟ್ಟೆಯೂ ಇಲ್ಲ. ಹಾವು ಹರಿದಾಡುತ್ತಿವೆ. ಅವನ ತಲೆಯ ಮೇಲೆ ಬೆಳದಿಂಗಳಾಗಿ ಬೆಳೆಯಲಿರುವ ಬಾಲಚಂದ್ರ. ಇದು ಸಾಲದ್ದಕ್ಕೆ, ಬೇಸಿಗೆಗಾಲದಲ್ಲಿಯೂ ನೆರೆನೆರೆಯಾಗಿ, ಹರಿಯುವ ಗಂಗೆಯ ಅಖಂಡ ಜಲಪಾತ ! ಹಿಮದಲ್ಲಿ ಹುಟ್ಟಿ, ನಿರ್ಜನದಲ್ಲಿ ನೆಟ್ಟು, ಬೆಳುದಿಂಗುಳಲ್ಲಿ ಬೆಳೆದು, ಗಂಗೆಯಲ್ಲಿ ಮುಳುಮುಳುಗಿ ಇನ್ನೂ 'ನಾನು ಇದ್ದೇನೆ, ಬಾಳಿದ್ದೇನೆ, ಬದುಕಿದ್ದೇನೆ' ಎಂಬುವ ಈ ಸತ್‌ಗುಣಕ್ಕೆ, ಸತ್ತಗುಣ ಎಂದು ಹೇಳಿಬಿಡಬಹುದೆ ? ಸತ್ತಂತೆ ಇರುವ ಎಲ್ಲದರಲ್ಲಿಯೂ, ಜೀವಕಳೆ ತುಂಬುವ, ಈ ಶಿವ-ಶಕ್ತಿ, ಸದ್ಗುಣದ ತವರುಮನೆ ! ಸೋಮಾರಿತನದ ಸಾಮ್ರಾಜ್ಯ ಪದವಿ ! ಆ ಕೈಲಾಸ ಪೀಠದಲ್ಲಿ ಕುಳಿತು, "ನೈವ ಕುರ್ವನ್, ನಕಾರಯನ್," ಮಾಡುವುದೂ ಇಲ್ಲಾ, ಮಾಡಿಸುವದೂ ಇಲ್ಲಾ, ಆಗುವದನ್ನು ನೋಡುತ್ತೇನೆ, — ಎನ್ನುತ್ತದೆ ಸೋಮಾರಿಗಳ ದೈವ. ಪ್ರಕೃತಿಯ ಆಗುಹೋಗುಗಳಿಗೆಲ್ಲ ನಾನು ಅಧ್ಯಕ್ಷ ಎಂಬುದೇ ಅದರ ಸೂಕ್ತಿ—ಸುಭಾಷಿತ. ಸಭೆಯಲ್ಲಿ ಸೋಮಾರಿಯಂತೆ ಕುಳಿ

ತಿರುವ ಅಧ್ಯಕ್ಷ ಒಳ್ಳೇ ಸದ್ಗುಣಿ ಎಂದು ಎಲ್ಲರೂ ಬಲ್ಲರು. ತಾವೂ ಕೂಡ ನನ್ನ ಈ ಮಾತಿನ ಆಗು ಹೋಗುಗಳ ಕಡೆಗೆ ಸೋಮಾರಿ ಅಧ್ಯಕ್ಷರಂತೆ ಕಿವಿ ಗೊಟ್ಟು ಕೇಳುತ್ತಿರುವಿರಷ್ಟೆ ?

ಸೋಮಾರಿತನ ಸದ್ಗುಣ ಎಂದು ಹೇಳಿದರೆ ಸಾಲದು ಕೆಲಸ ಮಾಡುವದು ದುರ್ಗುಣ ಎಂಬುದನ್ನು ಸ್ಪಷ್ಟಪಡಿಸಲೇಬೇಕು. ಈ ಜಗತ್ತಿನಲ್ಲಿ ಸುಮ್ಮನೆ ಕೂಡುವದು ಸುಲಭವಲ್ಲಾ, ಸಾಧ್ಯವಲ್ಲಾ, ಸ್ವಾಭಾವಿಕವಲ್ಲಾ ! ಶರೀರ ಯಾತ್ರೆ ನಡೆಯಬೇಕಾದರೂ ಕೆಲಸಮಾಡಲೇಬೇಕಾಗುತ್ತದೆ. ನಿದ್ದೆಯಲ್ಲಿಯೂ ಉಸಿರಾಟ ನಡೆಯಬೇಕು. ಕಲ್ಲಿನಂಥ ಕಣ-ಕಣದಲ್ಲಿಯೂ, ಕ್ಷಣಕ್ಷಣಕ್ಕೂ, ಅಣುಗಳ ಕುಣಿದಾಟ ನಡೆದಿದೆ, ಎಂದು ಕಂಡಿರುವ ಇಂದಿನ ದೃಷ್ಟಿಗೆ, ಸುಮ್ಮನೆ ಇರುವದು ಸಾಧ್ಯವೆ ?—ಇದ್ದೇವೆ ಎಂದು ತಿಳಿಯುವುದು. ಸಾಧ್ಯವೇ ! "ನೈವ ಕಿಂಚಿತ್ ಕರೋಮೀತಿ ಯುಕ್ತೊ ಮನ್ಯೇತ್ ತತ್ತ್ವವಿತ್" ಯೋಗಿಯಾದ ತತ್ತ್ವವೇತ್ತನು ತಾನೇನೂ ಮಾಡುವದಿಲ್ಲಾ ಎಂದು ಅನುಭವಿಸಬೇಕು. ಇದು ಹೊಕ್ಕ ಸೋಮಾರಿಯ ಲಕ್ಷಣ. ಆದರೆ ಇಂದಿನ ಜಗತ್ತು ಕಾರ್ಮಿಕರ ಕಲಹ ಕೋಲಾಹಲಗಳಿಂದ ತುಂಬಿದೆ. ಏನೂ ಮಾಡುವದಿಲ್ಲಾ ಎನ್ನುವವನಿಗೆ ಇಂದು ಇರುವ ಅಧಿಕಾರವಿಲ್ಲಾ. ಕುರುಕ್ಷೇತ್ರದ ಮೇಲಿನ ಸೈನಿಕನಂತೆ ಕೊಲ್ಲುತ್ತೇನೆ, ಸಾಯುತ್ತೇನೆ, ಕೊಲ್ಲುತ್ತೇನೆ, ಸಾಯುತ್ತೇನೆ ಎಂದು ಉಸಿರುಸಿರಿಗೆ ಜಪ ನಡೆಯಿಸಬೇಕು, ನಾವು ಹೀಗೆ ಸಾವಿನ ಗಣಿಯ ತುದಿಯ ಮೇಲೆ ಕುಣಿಯುವವರಿಗೆ, ಇರುವ ಅಧಿಕಾರ ಇದೆ. ಉಳಿದವರು ಸತ್ತರು; ಇಲ್ಲವೆ ಸಾಯುವರು ಎಂದು ತಿಳಿಯಬೇಕು. ಇನ್ನೂ ಉಳಿದವರು ಇದ್ದರೂ ಜೀವಂತ ಹೆಣವಿದ್ದಂತೆ. ಸಾವಿನ ಜಪವನ್ನೇ ಜೀವನಸೂತ್ರ ಮಾಡಿಕೊಂಡ ಈ ಜಗತ್ತಿನಲ್ಲಿ ಮೂರನೆಯ ವಿಶ್ವಯುದ್ಧ, ಮಹಾಯುದ್ಧ, ಹೊತ್ತಿಕೊಳ್ಳುವದು ಏನು ಆಶ್ಚರ್ಯ ?

ನಾನೇ ಎಲ್ಲವನ್ನು ಮಾಡುತ್ತೇನೆ, ಮಾಡಿಸುತ್ತೇನೆ, ಎಂದು ಶಾಂತಿ, ವಿಶ್ರಾಂತಿ ಇಲ್ಲದೆ, ಕೊಂಡು ಕೊನೆದಾಡುವ ಕರ್ಮವಾದದಲ್ಲಿ ಸಂಹಾರಕ ಯುದ್ಧಗಳು ಹುಟ್ಟುತ್ತವೆ. ಅದೇ ಇಂದಿನ ಜಗತ್ತಿನ ದುರ್ಗುಣ. ತಾನು ಕರ್ತೃತ್ವ ಶಾಲಿ, ತನ್ನಿಂದಲೆ ಹಳ್ಳಿಯ, ಊರಿನ, ನಾಡಿನ, ರಾಷ್ಟ್ರದ ಎಲ್ಲ

GURU VISHWARADHYA
A SIMHASAN JNANAMANDIR
LIBRARY
Jangamawadi Math, Varanasi
Acc. No, 225

ಕರ್ಮಪ್ರಪಂಚ ಸಾಗಿದೆ. ಎಂಬ ಅಹಂವಾದಿಗಳಿಂದ–ಪ್ರಪಂಚ ಗಜಬಜಿಸಿ ಹೋದದ್ದರಿಂದ ಕಲಹಕ್ಕೆ ಕರ್ಮಯೋಗದ ಸ್ವರೂಪ ಬಂದಿದೆ. ಇಂಥ ಈ ಜಗತ್ತಿನಲ್ಲಿ ಸೋಮಾರಿ ಎನಿಸಿಕೊಂಡರೂ ಆಡ್ಡಿಯಿಲ್ಲಾ, ಸುಮ್ಮನೆ ಇರುವುದು ಸದ್ಗುಣವೇ ಸರಿ. ಅದಕ್ಕೆ ಕಾಮಾರಿಯ ಕೃಪೆ ಬೇಕು! ಜಗತ್ತಿಗೆ ಒಳ್ಳೆಯ ದನ್ನು ಮಾಡಲು ಬರದಿದ್ದರೆ ಕೆಟ್ಟದನ್ನಾದರೂ ಮಾಡುತ್ತೇನೆ, ಎಂಬ ದುರ್ಗುಣ ಇಂದು ಪ್ರಚಾರದಲ್ಲಿದೆ. ಪ್ರತಿಯೊಬ್ಬನು ತಾನು ಏನಾದರೂ ಕೆಲಸ ಮಾಡು ತ್ತಿದ್ದೇನೆ, ಎಲ್ಲಿಯಾದರೂ ಕೆಲಸ ಮಾಡುತ್ತಿದ್ದೇನೆ, ಯಾರಿಗಾದರೂ ಕೆಲಸ ಮಾಡುತ್ತಿದ್ದೇನೆ, ಎಂದು ಸಿದ್ಧಪಡಿಸಲು, ಪ್ರಸಿದ್ಧನಾಗಲು ಧಡಪಡಿಸುತ್ತಿರು ತ್ತಾನೆ. ಕೆಲವರು ಭಾಷಣ ಮಾಡುತ್ತಾರೆ, ಕೆಲವರು ಲೇಖ ಬರೆಯುತ್ತಾರೆ. ಕೆಲವರು ಛಾಪಿಸುತ್ತಾರೆ, ಕೆಲವರು ಅದನ್ನು ಮಾರುತ್ತಾರೆ, ಕೆಲವರು ಕೊಂಡು ಓದುತ್ತಾರೆ. ಕೆಲವರು ಓದಿ ಚರ್ಚೆಮಾಡುತ್ತಾರೆ, ಚರ್ಚೆ ಹೋಗಿ ವಾದ ಆಗುತ್ತದೆ. ವಾದದಿಂದ ಚಳವಳಿಗೆ ಹೋಗುತ್ತದೆ, ಚಳವಳಿಗೆ ಪ್ರತಿ ಚಳವಳಿ ಹುಟ್ಟಿಕೊಳ್ಳುತ್ತದೆ. ಸಣ್ಣ ದೊಡ್ಡ ಕುರುಕ್ಷೇತ್ರಗಳಾಗುತ್ತವೆ, ಮಹಾಸಂಹಾರ ವಾಗುತ್ತದೆ. ಶಾಂತಿ ಸಂಧಾನಗಳ ಗರ್ಜನೆ ಆಗುತ್ತದೆ, ಆ ಮಾತಿನ ಹಿಂದೆ ಮುಂದಿನ ಯುದ್ಧದ ಸಂಧಾನ ನಡೆಯುತ್ತದೆ. ಈ ಕರ್ಮವಾದ ಯಾವ ಸದ್ಗುಣ ಎಂಬುದನ್ನು ಇನ್ನೂ ಎಚ್ಚರ ಇದ್ದವರು ಹೇಳಲಿ.

ನನ್ನ ಈ ಸೋಮಾರಿ ಪುರಾಣ ಕೇಳಿ ನಿಮ್ಮ ಮೆದಳು ತಣ್ಣಗಾಗುತ್ತ ನಡೆದಿರಬೇಕು. ಆದರೆ ಇದು ಒಳ್ಳೇ ಸೋಮಾರಿತನವಲ್ಲಾ. ನಿಜವಾದ ಸೋಮಾರಿಯ ತಲೆಯಲ್ಲಿ ಶಿವಶಕ್ತಿ ಕುಣಿಯುತ್ತದೆ. ಕರ್ಮಕಲಹವಾದಿಗಳ ತಲೆಯಲ್ಲಿ ಶಿವನಿಲ್ಲದ ಶಕ್ತಿ, ಇಲ್ಲವೆ ಶಕ್ತಿ ಇಲ್ಲದ ಶಿವ ಎಂದರೆ ಮಹಾರುದ್ರ ಕುಣಿಯುತ್ತಾನೆ. ತಲೆಯಲ್ಲಿ ಹೊಕ್ಕ ಈ ಮಹಾ ರೌದ್ರವೇ ಭಸ್ಮಾಸುರನಂತೆ ತನ್ನನ್ನೂ ಇತರರನ್ನೂ ಭಸ್ಮಮಾಡುತ್ತದೆ, ಇಂದಿನ ಆಟಂಬಾಂಬಿನಂತೆ. ಏನು ಮಾಡಬೇಕೆಂದು ತಿಳಿಯದೆ ಏನಾರೆಮಾಡುವ ಕರ್ಮವಾದವೆ ದುರ್ಗುಣ. ಜ್ಞಾನಿಯ ಶಾಂತಿಯನ್ನು ದುರ್ಗುಣವೆನ್ನುವ ಜಾಣರು ಇಂದು ಇದ್ದಾರೆ. ಅಜ್ಞಾನಿಗಳ ಕರ್ಮತಾಂಡವವನ್ನು ಭಪ್ಪರೆ ಎಂದು ಬೆನ್ನು ತಟ್ಟುವವರೂ ಇದ್ದಾರೆ. ಹೀಗಾಗಿ ಒಂದು ಬಗೆಯಲ್ಲಿ ಜ್ಞಾನದ ಹೆಸರು ಕೆಟ್ಟರೆ, ಇನ್ನೊಂದು ಬಗೆಯಲ್ಲಿ ಕರ್ಮದ ಫಲಾ ಕೆಟ್ಟಿದೆ.

ಅಂತೆಯೇ ನಾನು ಹೇಳುತ್ತೇನೆ, ಅಣ್ಣಗಳಿರಾ, ಸದ್ಗುಣಿಗಳಂತೆ ಸೋಮಾರಿಗಳಾಗಿರಿ. ಒಳಹೊಕ್ಕು ವಿಚಾರಮಾಡಿರಿ. ವಿಚಾರಮಾಡಿ ಆಚಾರಕ್ಕೆ ಪ್ರವೃತ್ತರಾಗಿರಿ; ಅಯ್ಯೋ ನಮಗೆ ವಿಚಾರಮಾಡಲು ಬರುವದಿಲ್ಲಾ, ವಿಚಾರ ವೆಂದರೇ ನಮಗೆ ಬೇಜಾರು. ವಿಚಾರವೇ ಆಲಸ್ಯಲಕ್ಷಣ ಎಂದು ಒಂದಿಲ್ಲೊಂದು ರೀತಿಯಿಂದ ಪ್ರತಿಪಾದಿಸುವ ಅವಿಚಾರಿಗಳಿಂದಲೇ ಇಂದಿನ ಕರ್ಮವಾದ ದುಷ್ಕರ್ಮವಾದಕ್ಕೆ ಇಳಿದಿದೆ. "An idle brain is a satan's work-shop" ಸತ್ ವಿಚಾರಗಳಿಲ್ಲದ ತಲೆಗಳಿಂದಲೇ ಅವಿಚಾರದ ಕೃತ್ಯಗಳು ನಿರಾಯಾಸವಾಗಿ ಆಗುತ್ತವೆ. ಕೆಲವೊಂದು ಜಯಘೋಷಗಳು, ಹಸ್ತಪತ್ರಿಕೆ, ಚಳವಳಿ, ಕಾರ್ಯದ ವರದಿ, ಈ ಬಗೆಯ ಚಕ್ರದಲ್ಲಿ ಸಿಕ್ಕ, ಆಲಸಿಗಳಲ್ಲದಂತೆ ಕಾಣುವ ಕರ್ಮಾಸಕ್ತರ ಮಿದುಳಿನ ಜಾಡ್ಯದಲ್ಲಿಯೇ ಕಲಿಪುರುಷನು ತನ್ನ ಕಮ್ಮಟಹಾಕುತ್ತಾನೆ. ಅವಿಚಾರಿಗಳಾದ ಕಾರ್ಮಿಕರ ತಲೆಯೇ ಕಲಿಪುರುಷನ ಕಮ್ಮಟವಾಗುತ್ತದೆ. ಯಾವ ಕಲಿಪುರುಷನೂ ಕೆಲವು ಜಯಘೋಷ ಕಾರ್ಯ ಕ್ರಮಗಳಿಂದ ಜನಜಂಗುಳಿಯನ್ನು ಸೂತ್ರಗೊಂಬೆ ಆಡಿಸಿದಂತೆ ಆಡಿಸುತ್ತಾನೆ. ಇದಕ್ಕಿಂತಲೂ ವಿಚಾರಪೂರ್ವಕವಾದ ಸೋಮಾರಿತನವು ಸಾವಿರಪಾಲು ಮೇಲು !

ಇಂದಿನ ಮಾತುಗಳನ್ನು ಇನ್ನು ಸ್ವಲ್ಪದರಲ್ಲಿ ಸಂಗ್ರಹಿಸಿ ಹೇಳುತ್ತೇನೆ. ಸುವಿಚಾರ ಸಾಮರ್ಥ್ಯವೇ ಸದ್ಗುಣ ! ಅಂಥ ಸುವಿಚಾರಕ್ಕೆ ತುಂಬಿದ ಶಾಂತಿ ಬೇಕು. ಅದು ಸೋಮಾರಿತನದಂತೆ ಕಂಡರೂ, ಅದು ಆಲಸ್ಯವಲ್ಲಾ, ಜಾಡ್ಯ ವಲ್ಲಾ. ಅದರಂತೆಯೇ ಸುವಿಚಾರದ ಶಾಂತಿ ಇಲ್ಲದೆ, ಕ್ಷೋಭಗೊಂಡು, ದಿಕ್ಕು ಗೆಟ್ಟು, ಯಾವಾಗಲೂ, ಏನಾದರೂ ಮಾಡುತ್ತಿರುವದು ಭಾರೀ ಕರ್ಮ ಯೋಗದಂತೆ ಕಂಡರೂ, ಅದು ದುರ್ಗುಣವೇ ಸರಿ. ಸದ್ಗುಣ, ಸೋಮಾರಿ ತನದಂತೆ ಕಂಡರೂ ಸದ್ಗುಣವೇ ! ಯಾಕೆಂದರೆ ಅದರಲ್ಲಿ ಬಾಳಿನ ಬೀಜವಿದೆ, ಕೆಚ್ಚು ಇದೆ. ಅವಿಚಾರದ ಅಥವಾ ಕುವಿಚಾರದ ಕರ್ಮಠತನವು, ವಿನಾಶದ ನಾಂದಿಯಾಗಿರುವದರಿಂದ, ಅದು ಮಹಾ ದುರ್ಗುಣ. ಸದ್ಗುಣ ಸಾಕ್ಷಾತ್-ಕರಿಸಿಕೊಳ್ಳುವ ಸೋಮಾರಿಗಳಾಗಿರಿ. ದುರ್ಗುಣ ಪ್ರಕಟಿಸುವ ಕರ್ಮ ಕಾರರಾಗಬೇಡಿರಿ. ಕರ್ಮ ಸದ್ಗುಣ ಎನ್ನಿಸಿಕೊಳ್ಳಬೇಕಾದರೆ, ಜ್ಞಾನದಲ್ಲಿ

ಮೊಳೆತಿರಬೇಕು. ಏನೋ ಕರ್ಮಮಾಡಿ ಭೀಮಾರಿಗಳಾಗುವದಕ್ಕಿಂತ ಸೋಮಾರಿಗಳಂತೆ ಕಂಡರೂ ಸದ್ಗುಣ ಸಿದ್ಧಪಡಿಸಿಕೊಳ್ಳೋಣ. ಸದ್ಗುಣದ ಸೋಮಾರಿತನ, ಅಥವಾ ಸೋಮಾರಿಗಳ ಸದ್ಗುಣ, ದೈವಗುಣ ; ಬೇಕಾದ್ದು ಆಗಲಿ, ಎಂಬ ಕರ್ಮದ ಹೋರಾಟ, ಅದು ದೈತ್ಯಗುಣ, ಆದ್ದರಿಂದ ಶಿವಗುಣದ ಶಕ್ತಿಸಂಪಾದನೆ ಆಗಬೇಕಾದರೆ ಸದ್ಗುಣಿಗಳಾದ ಸೋಮಾರಿಗಳಾಗಬೇಕು. ಈ ಕಾಯಕದಲ್ಲಿ ಕಲ್ಯಾಣವೂ ಇದೆ, ಕೈಲಾಸವೂ ಇದೆ.

ನಂಟರು

ಶೀ. ನಂ. ಶ್ರೀಕಂಠಯ್ಯ

ಯಾರು ನಂಟರು ?

"ಇದು ಎಂಥ ಪ್ರಶ್ನೆ ! ಎಳೆಯ ಮಕ್ಕಳಿಗೆ ಕೂಡ ಯಾರು ನಂಟರು ಎಂದು ಗೊತ್ತಿದೆಯಲ್ಲಾ !" ಎಂದು ಹಾಸ್ಯಮಾಡಬೇಡಿ. ಇದು ಎಷ್ಟು ತೊಡಕಾದ ಸಮಸ್ಯೆ ಎನ್ನುವುದು ಒಂದು ಕ್ಷಣದಲ್ಲಿ ಮನದಟ್ಟಾಗುತ್ತದೆ.

ಮಾವ, ಭಾವ, ಅತ್ತೆ, ಮೈದುನ—ಇವರೆಲ್ಲರೂ ನಂಟರೆಂದು ನೀವು ಬೇಗ ಹೇಳಿಬಿಡಬಹುದು. ರಕ್ತಸಂಬಂಧಿಗಳೆಲ್ಲರೂ ನಂಟರೆಂದು ಶಾಸ್ತ್ರಪರಿಷ್ಕೃತವಾದ ಬುದ್ಧಿಯುಳ್ಳವರು ಲಕ್ಷಣವನ್ನೂ ಕಲ್ಪಿಸಬಹುದು. ಆದರೆ ಬಾಂಧವ್ಯದ ರಹಸ್ಯಗಳನ್ನೆಲ್ಲಾ ಒಂದು ಸೂತ್ರದಿಂದ ಕಟ್ಟಹಾಕುವುದು ಸಾಧ್ಯವಲ್ಲ. ತಂದೆ ತಾಯಿಗಳ ರಕ್ತವೇ ನಮ್ಮ ದೇಹದಲ್ಲೆಲ್ಲಾ ಹರಿಯುತ್ತಿದೆಯಷ್ಟೆ. ಇವರು ನಂಟರೆ ? ಈಗಿನ ವಿದ್ಯಾವಂತರಾದ ನೀವು ನಿಮ್ಮ ಮುಪ್ಪಿನ ತಂದೆಯೊಡನೆ ಬೆಂಗಳೂರಿನಲ್ಲಿ ಪೇಟೆಯ ಕಡೆಗೆ ಹೊರಟಿರಿ ಎನ್ನಿ. ಆಗ ನಿಮ್ಮ ಮಿತ್ರರೊಬ್ಬರು ಎದುರಿಗೆ ಬಂದು ಕಂಡು "ಇವರು ಯಾರು ?" ಎಂದು ನಿಮ್ಮ ತಂದೆಯ ಕಡೆಗೆ ತೋರಿಸಿ ಕೇಳಿದಾಗ, ನೀವು "ನಮ್ಮ ನಂಟರು" ಎಂದು ಹೇಳಿಬಿಟ್ಟರೆ ಆಗುವ ಅನರ್ಥವನ್ನು ಊಹಿಸುವುದಾದರೂ ಸಾಧ್ಯವೆ? ಕೆಲವು ಮಂದಿ ಸತ್ಪುತ್ರರು ಇಂಥ ಉತ್ತರಗಳನ್ನು ಕೊಟ್ಟ ಮಾತ್ರದಿಂದಲೇ ಎಷ್ಟೋ ಸಂಸಾರಗಳು ಒಡೆದು ಹೋಗಿಲ್ಲವೆ ?

"ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ" ಎಂದು ಹೇಳುವುದು ಗಾದೆಯಲ್ಲಿ ಮಾತ್ರ. ಉಪ್ಪು ರುಚಿಯೆಂದು ಬರಿಯ ಉಪ್ಪನ್ನೇ ಒಂದು ಹಿಡಿಯಷ್ಟು ಮುಕ್ಕಿ ; ತಾಯಿ ಬಂಧುವೆಂದು ಆಕೆಯನ್ನು ಬಂಧುವಿನಂತೆಯೇ ಕಂಡು ಕರೆಯಿರಿ. ಆಗ ಗೊತ್ತಾಗುತ್ತದೆ ! ಉಪ್ಪು ರುಚಿಗೆ ಮೀರಿದ್ದು ; ತಾಯಿ ಬಂಧುಗಳಿಗೆ ಮೀರಿದವಳು.

ತಂದೆತಾಯಿಗಳ ಮಾತಾಯಿತು. ಮಕ್ಕಳೊ? ತಂದೆಯನ್ನು "ನಂಟರು" ಎಂದಲ್ಲ, "ನಮ್ಮವರು" "ನಮ್ಮ ಮನೆಯ ದೇವರಪೂಜೆಯ ಬ್ರಾಹ್ಮಣರು" ಎಂದು ಕೂಡ ಕರೆದ ಪುಣ್ಯಾತ್ಮರಿರಬಹುದು. ಆದರೆ ಎಂಥ ಕಟುಕನೇ ಆಗಲಿ, ತನ್ನ ಮಗನನ್ನು "ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಲಿಲ್ಲ" ಎಂದು ಬೈದಿರಬಹುದೇ ಹೊರತು, "ನೀನು ನನ್ನ ನಂಟ" ಎಂದು ಹೇಳಿದ ಪಾಪವನ್ನು ಕಟ್ಟಿಕೊಂಡಿರಲಾರನು.

ಇನ್ನು ಹೆಂಡತಿಯನ್ನು "ನಂಟಳು" ಎನ್ನಬಹುದೆ? ಕೇಳಿದ ಕೂಡಲೆ ನೀವೇ ನಕ್ಕುಬಿಡುತ್ತೀರಿ. ವಿಚಾರಮಾಡುವ ಪ್ರಸಂಗವೇ ಇಲ್ಲ. ಬುದ್ಧಿಗಿಂತ ಮೊದಲು ನಿಮ್ಮ ಹೃದಯವೇ ಇಲ್ಲಿ ತೀರ್ಪನ್ನು ಹೇಳಿಬಿಡುತ್ತದೆ.

ಹೋಗಲಿ. ಅಣ್ಣತಮ್ಮಂದಿರನ್ನು ನಂಟರೆನ್ನಬಹುದೆ? "ಹುಟ್ಟಹುಟ್ಟುತ ಅಣ್ಣತಮ್ಮಂದಿರು, ಬೆಳೆಯಬೆಳೆಯುತ ದಾಯಾದಿಗಳು." ಅಣ್ಣತಮ್ಮಂದಿರು ಗ್ರಹಚಾರ ತಪ್ಪಿದರೆ ದಾಯಾದಿಗಳಾಗುವರೇ ಹೊರತು ನಂಟರು ಮಾತ್ರ ಎಂದಿಗೂ ಆಗುವುದಿಲ್ಲ. ದಾಯಾದಿಗಳಿಗೂ ನಂಟರಿಗೂ ಇರುವ ವ್ಯತ್ಯಾಸವನ್ನು ನೋಡಿ: ದಾಯಾದಿಗಳಲ್ಲಿ ನಿಮಗೆ ದ್ವೇಷಭಾವ, ನಂಟರಲ್ಲಿ ಉದಾಸೀನಭಾವ. (ಪ್ರೀತಿಯೂ ಕೆಲವು ಕಡೆ ಇದ್ದೀತು; ಆದರೆ ಅದು ಬಹು ವಿರಳ.) ನೀವು ಅಪ್ಪಿ ತಪ್ಪಿ ಕ್ರೂರಿಗಳಾದರೆ ದಾಯಾದಿಗಳಿಗೆ ಕೇಡುಬಯಸುವಿರಿ, ಅವರಿಗೆ ಸಿರಿ ಬಂದರೆ ಕರುಬುವಿರಿ. ಅವರೂ ಹಾಗೆಯೇ ಅಸಲಿಗೆ ಬಡ್ಡಿಯನ್ನು ಸೇರಿಸಿ ನಿಮ್ಮ ಮೇಲೆ ಅವರು ವಿಷಕಾರುವರು. ನಂಟರ ವಿಚಾರ ಹಾಗಲ್ಲ. ಅವರ ಮೇಲೆ ನಿಮಗೆ ದ್ವೇಷವಿಲ್ಲ. ಅವರು ಮನೆಗೆ ಬಂದರೆ ಉಪಚಾರ ಮಾಡುವಿರಿ, ಯೋಗಕ್ಷೇಮವನ್ನು ಕೇಳುವಿರಿ. ಯಾವ ದಾಯಾದಿಗಳೇ ಆಗಲಿ, ಪ್ರಾಣ ಹೋಗುವಂತಿದ್ದರೂ ನಿಮ್ಮ ಮನೆಯ ಹೊಸಿಲನ್ನಾದರೂ ಮೆಟ್ಟುವರೆ!

ಹಾಗಾದರೆ ಯಾರು ನಂಟರು?

ತಂದೆತಾಯಿಗಳಲ್ಲ, ಹೆಂಡತಿಮಕ್ಕಳಲ್ಲ, ಅಣ್ಣತಮ್ಮಂದಿರಲ್ಲ, ಅಕ್ಕ ತಂಗಿಯರಲ್ಲ. ಇವರ ರಕ್ತಸಂಬಂಧಿಗಳು ನಮಗೆ ನಂಟರು. ತಂದೆಯ ತಂಗಿ ನಿಮ್ಮ ಸೋದರತ್ತೆಯಾಗಬೇಕು. ಹೆಂಡತಿಯ ತಂದೆ ನಿಮ್ಮ ಮಾವನಾಗಬೇಕು. ಇವರು ನಿಮ್ಮ ನಂಟರು. ಹೀಗೆಯೇ ಪ್ರತ್ಯಕ್ಷ ರಕ್ತಸಂಬಂಧವುಳ್ಳವರನ್ನು

ನಂಟರ ಪಟ್ಟಿಯಿಂದ ತೆಗೆದುಹಾಕಬೇಕು. ಒಂದು ತಲೆಯಾದರೂ ದೂರದ ಸಂಬಂಧದವರೇ ಬಾಂಧವ್ಯದ ಪೂಜ್ಯತೆಗೆ ಅಧಿಕಾರಿಗಳು.

ಇದರಲ್ಲಿ ಒಂದು ಸ್ವಾರಸ್ಯವುಂಟು. ನಂಟತನದಲ್ಲಿ ನಮಗೆ ಹತ್ತಿರದ ಕಡೆಗೆ ಒಂದು ಎಲ್ಲೆಯಿರುವ ಹಾಗೆ ನಮಗೆ ದೂರದ ಕಡೆಗೆ ಇಲ್ಲ. ದೂರ ದೂರಕ್ಕೆ ಹೋದಹಾಗೆಲ್ಲ ಅದೊಂದು ಮಹಾರಣ್ಯ. ಅಲ್ಲಿ ನಮಗೆ ದಾರಿಯೂ ಕಾಣುವುದಿಲ್ಲ, ಕೊನೆಯೂ ಸಿಕ್ಕುವುದಿಲ್ಲ. ಮಾತಾಡಿಸಿದವರೆಲ್ಲರೂ ನಂಟರೇ ಆಗಿಬಿಡುತ್ತಾರೆ. ನಿಮ್ಮ ಚಿಕ್ಕಮ್ಮ—ಎಂದರೆ ನಿಮ್ಮ ತಾಯಿಯ ತಂಗಿ—ನಿಮಗೆ ನಂಟರಷ್ಟೆ. ಅವರ ಗಂಡನೊ ? ಆತನ ತಮ್ಮನೊ ? ಆ ತಮ್ಮನ ಮಾವನ ಮಗನೊ? ಆ ಮಗನ ಹೆಂಡತಿಯ ಸೋದರತ್ತೆಯ ಗಂಡನೊ ? ಎಲ್ಲರೂ ನಂಟರೇ ತಾನೆ! ನಿಮ್ಮ ಮದುವೆಗೆ ಈ ತುದಿಯ ನಂಟನು ಬಂದಿದ್ದನಲ್ಲ, ಆತನನ್ನು ಹಿಂದೆ ನೀವು ನೋಡಿ ಕಾಣಿರಿ, ಹೆಸರನ್ನು ಅರಿಯಿರಿ ; ಕಡೆಗೆ ಅಂಥವನೊಬ್ಬನು ಇದ್ದ ಸಂಗತಿ ಕೂಡ ನಿಮಗೆ ಗೊತ್ತಿರಲಿಲ್ಲ. ಆದರೇನು ? "ನೀನು ನನ್ನ ನಂಟನಲ್ಲ" ಎಂದು ಹೇಳಿ ಆತನನ್ನು ಅಸಡ್ಡೆ ಮಾಡಿದಿರಾ ? ಗೌರವವಾಗಿ ಮೊದಲನೆಯ ಪಂಕ್ತಿಗೇ ಮಣೆ ಹಾಕಿ ಕುಳ್ಳಿರಿಸಿ ಔತನಮಾಡಿ ಕಳಿಸಿಕೊಟ್ಟಿರಿ. ಹಾಗೆ ಮಾಡಿದ್ದರಿಂದಲೇ ನಿಮಗೆ ಮಾನ ಬಂದಿತು.

ಮೈಸೂರಿನಲ್ಲಿ ಮನೆಮಾಡಿಕೊಂಡಿರುವವರಿಗೆ ಬಾಂಧವ್ಯದ ಸೌಖ್ಯ ನವರಾತ್ರಿಯ ಕಾಲದಲ್ಲಿ ತಕ್ಕಮಟ್ಟಿಗೆ ಮನದಟ್ಟಾಗುತ್ತದೆ. ಮನೆಯ ಯಜಮಾನ ಅಷ್ಟೊಂದು ನೆಮ್ಮದಿಯಾಗಿಲ್ಲದಿದ್ದರೆ ಅದರ ಸೊಗಸು ಇನ್ನೂ ಹೆಚ್ಚು. ರೈಲ್ವೆ ಸ್ಟೇಷನ್ನಿಗೆ ಒಂದು ಗಾಡಿ ಬಂದಿತೆಂದರೆ ಅವನು ಒಂದು ಗೇಣಿನಷ್ಟು ಕುಗ್ಗಿಹೋಗುತ್ತಾನೆ. ಅವನ ಮನೆಯಲ್ಲಿ ಒಂದು ಕೊಠಡಿ ಕಿಕ್ಕಿರಿದು ಹೋಗುತ್ತದೆ. ಪಾಪ, ಆ ಗಾಡಿಗಳ ಸಂಖ್ಯೆಗಾದರೂ ಮಿತಿಯುಂಟೆ? ಹಿಂದೆ ಒಂದು ಬರುತ್ತಿದ್ದ ಕಡೆ ಈಗ ಹತ್ತು. ಘಂಟೆಘಂಟೆಗೂ ಸ್ಪೆಷಲ್ ಗಾಡಿಗಳೇ ; ಬೆಂಗಳೂರಿನ ಕಡೆಯಿಂದ, ಅರಸೀಕೆರೆಯ ಕಡೆಯಿಂದ, ಚಾಮರಾಜನಗರದ ಕಡೆಯಿಂದ ! ಗಾಡಿಗಾಡಿಗೂ ನಂಟರು. ನಿತ್ಯವೂ ಮನೆಯಲ್ಲಿ ಸಮಾರಾಧನೆ. ಒಂದು ನವರಾತ್ರಿ ಕಳೆಯುವ ಹೊತ್ತಿಗೆ ಒಂದು ಅಶ್ವಮೇಧ ಯಾಗವನ್ನು ಕೈಕೊಂಡು ಕೊನೆ ಮುಟ್ಟಿಸಿದಷ್ಟು ಶ್ರಮ

ಬಾಂಧವ್ಯದಲ್ಲೆಲ್ಲಾ ವಿಚಿತ್ರವಾದದ್ದು ಅಳಿಯಮಾವಂದಿರ ಸಂಬಂಧ. ಮಿಕ್ಕ ನಂಟರಲ್ಲೆಲ್ಲಾ ಉದಾಸೀನಭಾವವಿದ್ದರೆ, ಅಳಿಯನಿಗೂ ಮಾವನಿಗೂ ಶತ್ರುಭಾವ. ಹಿಂದೆ ಶತ್ರುವಾಗಿ ನಿಮ್ಮಿಂದ ನರಳಿದ್ದವನೇ ಈ ಜನ್ಮದಲ್ಲಿ ಸೇಡುತೀರಿಸಿಕೊಳ್ಳುವುದಕ್ಕಾಗಿ ನಿಮ್ಮ ಅಳಿಯನಾಗಿಯೋ ಮಾವನಾಗಿಯೋ ಹುಟ್ಟುವನು. ಅಳಿಯಂದಿರೆಲ್ಲರೂ ಕೆಟ್ಟವರು, ಮಾವಂದಿರೆಲ್ಲರೂ ಒಳ್ಳೆಯವರು ಎಂದು ಕೆಲವರು ಹೇಳುತ್ತಾರೆ. ಇದು ಪಕ್ಷಪಾತದ ಮಾತು ; ಇದರಲ್ಲಿ ನನಗೆ ನಂಬಿಕೆಯಿಲ್ಲ. ಮಾವ ಒಳ್ಳೆಯವನಾದರೆ ಅಳಿಯ ಕೆಟ್ಟವನು ; ಅಳಿಯ ಸಾಧುವಾದರೆ ಮಾವ ಕೆಡುಕಿ—ಹೀಗೆ ಇರುತ್ತದೆ. ಅನೇಕ ವೇಳೆ ಇಬ್ಬರೂ ದುಷ್ಟರಾಗಿದ್ದರೂ ಇರಬಹುದು. ಆದರೆ ಇಬ್ಬರೂ ಒಳ್ಳೆಯವರಾಗಿರುವುದನ್ನು ನೋಡುವುದೂ ಕುದುರೆಯ ಕೊಂಬನ್ನೂ ತರುವುದೂ ಒಂದೇ. ಒಂದು ವೇಳೆ ಇತರರಿಗೆ ಇಬ್ಬರೂ ಒಳ್ಳೆಯವರಾಗಿದ್ದರೂ, ತಮ್ಮೊಳಗೆ ಮಾತ್ರ ಒಬ್ಬನ ತಲೆಯನ್ನು ಕಂಡರೆ ಇನ್ನೊಬ್ಬನಿಗೆ ಆಗುವುದಿಲ್ಲ. ಇದು ಸೃಷ್ಟಿಯ ನಿಯಮ ವೆಂದು ತೋರುತ್ತದೆ. ಗೋ ವ್ಯಾಘ್ರ, ಗಜ-ಸಿಂಹ, ತುರಗ-ಮಹಿಷ, ಈ ರೀತಿ ಯಾಗಿ ಜಾತಿವೈರಿಗಳ ಪಟ್ಟಿಯನ್ನು ಕೊಡುವ ಒಂದು ಸಂಸ್ಕೃತಪದ್ಯವಿದೆ. ಅದನ್ನು ಬರೆದವರು ಬುದ್ಧಿವಂತರಾಗಿದ್ದಾರೆ ಶ್ವಶುರ-ಜಾಮಾತೃ ಎಂದು ಇನ್ನೊಂದು ವರ್ಗವನ್ನೂ ಅಲ್ಲಿ ಸೇರಿಸುತ್ತಿದ್ದರು. ಮದುವೆಗೆ ಮುಂಚೆ ಅಳಿಯನೂ ಮಾವನೂ ಪರಿಚಯಸ್ಥರಾಗಿ ಪ್ರೀತಿಯಿಂದಲೇ ಇದ್ದರೂ, ಅಥವಾ ಈಗ ಹೆಚ್ಚಾಗಿ ನಡೆಯುವಂತೆ ಅಪರಿಚಿತರಾಗಿಯೇ ಇದ್ದರೂ ಕಾಶೀಯಾತ್ರೆಯ ಸಮಯದಲ್ಲಿ ಮಾವನು ತನ್ನ ಕಣ್ಣೀರನ್ನು ಬೆರಸಿಯೇ ಅಳಿಯನ ಕಾಲನ್ನು ತೊಳೆಯುತ್ತಾನೆ. ಇದಕ್ಕೆ ಈಗಿನ ವರದಕ್ಷಿಣೆಯೇ ಅನೇಕ ಸಂದರ್ಭಗಳಲ್ಲಿ ಕಾರಣವೆನ್ನಬಹುದು ; ಆದರೆ ಹಿಂದೆ ಅದು ಇರಲಿಲ್ಲವಷ್ಟೆ ; ಈಗಲೂ ಕೆಲವು ಕಡೆಗಳಲ್ಲಿ ಇಲ್ಲವಷ್ಟೆ. ಹಾಗಾದರೆ ವೈರ ಮಾತ್ರ ಏಕೆ ಪೂರ್ವಕಾಲದಿಂದಲೂ ಇದ್ದೇ ಇದೆ ?

ನಂಟರು ಎಂದರೆ ಸುಮ್ಮನೆ ಜನರು ಹಿಗ್ಗುತ್ತಾರಲ್ಲ, ಒಂದು ಸೋಜಿಗದ ಸಂಗತಿಯನ್ನು ಯಾರಾದರೂ ಆಲೋಚಿಸಿದ್ದೀರಾ ? ನಿಮ್ಮ ನಂಟರಲ್ಲಿ ಎಷ್ಟು ಜನ ನಿಮ್ಮ ಸ್ನೇಹಿತರು? ಅಥವಾ ಆ ಪ್ರಶ್ನೆಯನ್ನೇ ಮಗುಚಿ ಕೇಳುವುದಾದರೆ ನಿಮ್ಮ ಸ್ನೇಹಿತರಲ್ಲಿ ಎಷ್ಟು ಜನ ನಿಮ್ಮ ನಂಟರು? ನಂಟನಾದವನು ಎಂದಿಗೂ

ಸ್ನೇಹಿತನಾಗುವುದಿಲ್ಲ : ನಿಜವಾದ ಸ್ನೇಹವು ರಕ್ತಸಂಬಂಧವಿಲ್ಲದವನಲ್ಲಿಯೇ ಹುಟ್ಟುವುದು. ನಿಮ್ಮ ಪ್ರಿಯಮಿತ್ರನನ್ನು ಹೆಣ್ಣು ಕೊಟ್ಟೋ ತಂದೋ ನಂಟನನ್ನು ಮಾತ್ರ ಮಾಡಿಕೊಳ್ಳಬೇಡಿ. ಆ ದಿನವೇ ನಿಮ್ಮಿಬ್ಬರ ಸ್ನೇಹಕ್ಕೆ ನೀವು ಎಳ್ಳು ನೀರು ಬಿಟ್ಟಹಾಗೆ. ಇದಕ್ಕೆ ಕಾರಣವುಂಟು. ಸ್ನೇಹದ ತಳಹದಿ ಪ್ರೇಮ ಋಜುತ್ವ. ಬಾಂಧವ್ಯದ ತಳಹದಿ ಗೌರವ, ಬಿಗುಮಾನ. ಅದಕ್ಕೂ ಇದಕ್ಕೂ ಗಂಟುಬೀಳುವುದು ಹೇಗೆ? ಸ್ನೇಹಿತನ ಸಂಗಡ ಮುಚ್ಚುಮರೆಯಿಲ್ಲದೆ ನಿಮ್ಮ ಅಂತರಂಗವನ್ನು ಬಿಚ್ಚಿ ಹೇಳುವಂತೆ ನಂಟನ ಸಂಗಡ ಹೇಳಲಾದೀತೆ? ಸ್ನೇಹಿತನೊಂದಿಗೆ ಸರಸವಾಡುವಂತೆ ನಂಟನೊಂದಿಗೆ ಆಡಲಾದೀತೆ? ಯಾವ ಘಳಿಗೆಗೆ ನಗೆ ಹೋಗಿ ಹೊಗೆಯಾಗುವುದೋ ಎಂಬ ಭೀತಿ.

ನಂಟರೆಂದರೆ ಯಾವಾಗಲೂ ಹೆದರಿಕೆ; ನಿಮ್ಮನ್ನು ಎಲ್ಲಿ ಆಡಿಕೊಳ್ಳುವರೋ ಎಂದು. ನಿಮ್ಮ ಹುಳುಕು ಯಾವುದೂ ಅವರಿಗೆ ಕಾಣಿಸದ ಹಾಗೆ ನೀವು ಬಲು ಎಚ್ಚರವಾಗಿರುತ್ತೀರಿ. ನಂಟರು ಮನೆಗೆ ಬಂದರೆ, ಹೊರಕ್ಕೇ ತೆಗೆಯದ ಜಮಖಾನವನ್ನು ಆ ಹೊತ್ತು ಹಾಸಬೇಕು. ಮಿಕ್ಕ ದಿನಗಳಲ್ಲಿ ಹರುಕು ಸೀರೆಯನ್ನು ಉಡುತ್ತಿದ್ದರೂ ಆ ದಿನ ದೊಡ್ಡಂಚಿನ ಸೀರೆಯನ್ನುಟ್ಟುಕೊಂಡೇ ನಿಮ್ಮ ಹೆಂಡತಿ ಊಟಕ್ಕೆ ಬಡಿಸಬೇಕು. ಮಾರನೆಯ ದಿನಕ್ಕೆ ಅಕ್ಕಿಯೇ ಇಲ್ಲದಿದ್ದರೂ, ಅಂಗಡಿಯಲ್ಲಿ ಸಾಲ ವಿಷದಂತೆ ಏರುತ್ತಿದ್ದರೂ, ಏನಾದರೂ ಮಾಡಿರವೆ, ಸಕ್ಕರೆ, ಕಾಫಿಪುಡಿ ಇವನ್ನೆಲ್ಲ ತಂದು ಅಚ್ಚುಕಟ್ಟಾಗಿ ಫಲಾಹಾರಕ್ಕೆ ಏರ್ಪಡಿಸಬೇಕು. "ಅಟ್ಟಡಿಗೆ ಅಳಿಯನಿಗೆ, ಇಟ್ಟ ನೀರು ಮಾವನಿಗೆ" ಎಂದು ಹಾಡು ಹೇಳುವ ಹಾಗೆ. ಆಮೇಲೆ ಗೊತ್ತೇ ಇದೆ : "....ಮುಂದೆ ಬರುವ ಪತ್ರದ ಸಾಲ ಮಗನಿಗೆ."

ನನ್ನ ಜೀವನದರ್ಶನ

ವಿ. ಸೀ.

ಬಾಳಲ್ಲಿ ನಾನು ಕಂಡುದೇನು? ಉಂಡುದೇನು? ಜನಕ್ಕೆ ತಿಳಿಸಿದುದೇನು ಎಂಬುದು, ಬಹುಶಃ, ಈ ಸಂಜೆಯ ವಿಷಯ. ನಾನು ಬರೆದಿರುವುದು ಕಲ್ಪನಾಪ್ರಧಾನವಾದ ರೂಪಕತಾಂಡವಗಳುಳ್ಳ ಕವಿತೆ ಅಲ್ಲ. ಮಹಾ ಕವಿಗಳ ಶಕ್ತಿಯಲ್ಲಿನ ಒಂದು ಕಾಲುಭಾಗ ಇಲ್ಲದವನಾದರೂ ನಮ್ಮ ಹಳೆಯ ಚಂಪೂ ಕಾವ್ಯದ ಅತಿರೇಕಗಳಿಗೆ ರೋಸಿ ವಿಶದವಾಗಿ, ವಾಸ್ತವವಾಗಿ, ನೇರವಾಗಿ ಬರೆಯಬೇಕೆಂದು ತೊಡಗಿದವರಲ್ಲಿ ನಾನೊಬ್ಬ. ಅದು ಯಾರಿಗೆ ಒಪ್ಪೊ ಯಾರಿಗಲ್ಲವೊ ಆ ಚಿಂತೆ ನನಗೇಕೆ? ನನ್ನ ಮನಸ್ಸು ಕಲಕಿದುದೇನು? ಕವಿತೆಯಾಗಿ ರೂಪಗೊಂಡದ್ದೆಷ್ಟು? ಅದನ್ನು ಓದಿದವರು ಕೇಳಿದವರು ಮೆಚ್ಚಿದಾಗ ಇಲ್ಲದಾಗ ನನಗೆ ಹೇಗೆನ್ನಿಸಿತೊ? ಬಹುಕಾಲದಮೇಲೆ ನನಗೇ ಅದು ಹೇಗೆನ್ನಿಸುತ್ತದೆಯೊ? ಆ ಸಂಗತಿಯೂ ಈಗ ಬೇಡ. ಹಲವೇಳೆ ನಮ್ಮ ಮನಸ್ಸೇ ನಮಗೆ ತಿಳಿಯದು. ನಮ್ಮ ಮಾತಿಗೂ ಕೆಲಸಕ್ಕೂ ಒಂದೇ ಕಾರಣವಿರುವುದಿಲ್ಲ. ನಮ್ಮ ಮನಸ್ಸಿನ ಎಲ್ಲ ಪದರಗಳಲ್ಲಿನ ಪ್ರವೃತ್ತಿ ಯಾವಾಗಲೂ ಸಭ್ಯವಾದುದೇ ಎಂದು ಯಾರು ಶಪಥಮಾಡಿಯಾರು? ಅಥವಾ ನಮ್ಮ ಅಂತರಾತ್ಮನಿಗೆ ತೃಪ್ತಿಯಾಗುವಂತೆ ನಡೆದಿದ್ದೇವೊ? ನಡೆಯುತ್ತೇವೆ ಎಂದು ತಾನೇ ಯಾರು ಹೇಳಬಲ್ಲರು? ಅವೆಲ್ಲ ಹೇಗೇ ಇರಲಿ—ಆಗಲಿ ನಮ್ಮ ಬೆಲೆ, ಎಣಿಕೆ, ಮನಸ್ಸು, ತಿಳಿದೊ ತಿಳಿಯದೆಯೊ ಬಹುಬಗೆಯಾಗಿ ಮಾರ್ಪಡುತ್ತಲೇ ಇರುತ್ತವೆ. ಬದುಕನ್ನು ಸಂತತವಾಗಿ ರೂಪಿಸುತ್ತಿರುತ್ತವೆ.

ಯಾರ ಬಾಳಲ್ಲಿಯೂ ನೇರವಾಗಿ ಅರಿತಭಾಗವುಂಟು; ಕೇಳಿ ತಿಳಿದದ್ದುಂಟು; ಊಹೆ ಉಂಟು; ಭ್ರಾಂತಿ, ಅಭಿರುಚಿ ಉಂಟು. ಇವುಗಳಲ್ಲಿ ಕೆಲವಕ್ಕೆ ಹೊಂದಿಕೆಯಾಗುವುದು; ಕೆಲವಕ್ಕಾಗದು. ಒಂದು ತೂಕದಲ್ಲಿಯೂ ಸೂತ್ರದಲ್ಲಿಯೂ ಇವು ಹೊಂದಿಕೊಳ್ಳುವವರೆಗೂ ಶಾಂತಿ, ನೆಮ್ಮದಿ ಬಾರವು. ಹೊಸ ಒಂದು ಅನುಭವ ಹಿಂದಿನ ನಿರ್ಣಯಗಳನ್ನೂ ಪದಗಳನ್ನೂ ಮೂಡಲಿ

ಸುತ್ತದೆ. 'ಒಂದೇ, ನಿನ್ನ ಬಗೆಗೆ ಬುದ್ಧಿಗೆ ನನ್ನನ್ನು ಹೊಂದಿಸಿಕೊ ಇಲ್ಲವಾದರೆ ನನ್ನನ್ನು ಅಲ್ಲಗಳೆ, ಹೊರಗೆ ಹಾಕು. ಇಲ್ಲವೊ–ನನ್ನ ರೀತಿಗೆ ನಿನ್ನ ಹಳತೆಲ್ಲ ವನ್ನೂ ಮಾರ್ಪಡಿಸಿಕೊ' ಎಂದು ಕೂಗುತ್ತದೆ. ಹೀಗಾಗಿ ಎಲ್ಲಿಯೇ ಆಗಲಿ ಕಡೆಯ ತೀರ್ಮಾನ ಎಂಬ ಮಾತು ನನಗೆ ಅಗ್ರಾಹ್ಯ : ಹೊಸ ಅಂಥ ಅನುಭವ ಬಾರದಿರುವ ಮಹಾನುಭಾವರಿಗೆ ನಮಸ್ಕಾರ.

ಈ ಸ್ಥಿತಿಯಲ್ಲಿ ಸುಖವುಂಟು; ಅನಿಶ್ಚಯ ದುರ್ಬಲತೆಗಳೂ ಉಂಟು ಆದರೆ ಕವಿಮನಸ್ಸಿಗೆ ಒಂದು ವಿಶೇಷವಾದ ನೋಟ, ದೃಢ, ಧಾರಾಳ, ಕೆಚ್ಚು ಬೇಕು. ನುಗ್ಗಿ ದುಡಿಯುವ ಒಂದು ಸಾಹಸ ಬೇಕು. ಇಲ್ಲವಾದರೆ ನೋಟ, ವಾಣಿ ತಡೆಯುತ್ತವೆ. ಕಲ್ಪನೆಯ ಓಟ ಕುಂಟಬಹುದು. ನುಗ್ಗಂತೂ ಅಶಕ್ಯ ವಾಗುತ್ತದೆ. ಅರೆತಿಳಿವೂ ಅರೆನಿಶ್ಚಯವೂ ಯಾರಿಗೆ ಬೆಳಕನ್ನಾಗಲಿ ಸ್ಫೂರ್ತಿ ಯನ್ನಾಗಲಿ ತಂದಾವು? ಹಾಗೆಂದು ಬೇರೆ ಪ್ರಯೋಜನಗಳಿಗಾಗಿ ನಮ್ಮ ಮನಸ್ಸು, ಬುದ್ಧಿ ಒಪ್ಪದವನ್ನು ಹೇಗೆ ಸ್ವೀಕರಿಸಲಾದೀತು ? ಸತ್ಯಕ್ಕೆ ಹಲವು ಮುಖಗಳುಂಟು. ಅವೆಲ್ಲ ಸರಿಯೇ ಆಗಿರುವಾಗ ಒಂದು ಮಾತ್ರ ಸರಿ ಇನ್ನೊಂದಲ್ಲ ಎನ್ನುವುದು ಹೇಗೆ? ಇಂಥಲ್ಲಿ ನನಗೆ ಕಷ್ಟ. ಆದರೆ ಇನ್ನೊಬ್ಬರ ದೃಷ್ಟಿಯನ್ನು ಒಪ್ಪುವುದು ಇದರಿಂದ ಸುಲಭವಾಗಿದೆ. ಇದು ಕೆಲವೇಳೆ ವಿಪರೀತಕ್ಕೂ ಇಟ್ಟುಕೊಂಡಿದೆ. ಒಂದು ಸಲ; ಬಹು ವರ್ಷಗಳ ಹಿಂದಿನ ಮಾತು–ಎರಡು ಪಕ್ಷಗಳವರು ತುಂಬಾ ಕಟುವಾಗಿ ವಾದಿಸಿ ಕೆಂಪು ಮುಖ ಗಳನ್ನು ಕಪ್ಪು ಮಾಡಿಕೊಳ್ಳುತ್ತಿದ್ದರು. ರಾತ್ರಿ ಬೇಗೆ ಹೊತ್ತಿತ್ತು. ಸುಮ್ಮ ನಿದ್ದ ನನ್ನನ್ನು ಕುರಿತು ನನ್ನ ಅಭಿಪ್ರಾಯವೇನೆಂದರು. ನಾನು ಹೇಳಿದ್ದು ಇಬ್ಬ ರಿಗೂ ತೃಪ್ತಿಯಾಗಲಿಲ್ಲ. ಆವರೆಗೂ ಸಮ್ಮನಿದ್ದ ಮಾನ್ಯರೊಬ್ಬರು ಉದ್ರೇಕ ಗೊಂಡು 'ಏನ್ರಿ, ರಸ್ತೆಯ ಎರಡೂ ಕಡೆ ನಿಂತು ಮಾತನಾಡುತ್ತಿದ್ದೀರಿ' You stand on both sides of the Road ಎಂದರು ಇಂಗ್ಲಿಷಿ ನಲ್ಲಿ. ನನಗೆ ಗತಿ ? ಅದಕ್ಕೆ ನಾನೆಂದೆ : ನಾನು ರಸ್ತೆ, ಸ್ವಾಮಿ, ಈ ಎರಡೂ ನನ್ನ ಎದುರುಬದುರು ಕಡೆಗಳು. ನನ್ನನ್ನು ಕುರಿತು ಇನ್ನೂ ಎಷ್ಟೋ ಕಡೆಗಳು ಶಕ್ಯ ಎಂದೆ. ಮಾತು ನಿಂತಿತು. ಅವರು ಎದ್ದು ಅಲ್ಲಿಂದ ಹೊರಟು ಹೋದರು. ಪುನಃ ಅವರನ್ನು ನಾನು ಕಂಡಿಲ್ಲ. ಅವರ ಕೋಪ ತಿರುಗಿದೆಯೊ ಇಲ್ಲವೊ ನನಗೆ ತಿಳಿಯದು.

ಯಾವಾಗ ಯಾವ ಯೋಚನೆ ಹಾಯುವುದೊ ಅದರಂತೆ ಮನಸ್ಸು ಓಡುವಾಗ ಅದಕ್ಕೇ ಪ್ರಾಧಾನ್ಯ. ಆಗ ಅದರದೇ ತೂಕ; ಅಳತೆ; ಕಾಣ್ಕೆ. ಜೀವನವನ್ನು ಕುರಿತ ತತ್ವ, ವಾದ, ಸಿದ್ಧಾಂತವೂ ಆಗ ಬಾಧಿಸದು. ಇದೊಂದು 'ಅಸಹ್ಯ' ಪರಿಸ್ಥಿತಿ ಎಂದು ನಿರ್ದೇಶಿಸಬಹುದು. ಇದನ್ನು ಕೇಳಿ ಓದಿ ಬೇಕಾದವರು ಕನಿಕರಪಡಬಹುದು. ಒಂದು ಬಗೆಯಲ್ಲಿ ಕವಿ ಬಾಳೆಲ್ಲ ಹೀಗೇ. ಈ 30-35 ವರ್ಷಗಳ ಅಹನ್ಯಹನಿ ಬಾಳನ್ನು ನಡಸಿದುದರಲ್ಲಿ ಯಾವುದೋ ಭಾವ, ರೀತಿ ನನ್ನ ಮನಸ್ಸಿಗೆ ಹಾಸಾಗಿ, ನಿಟ್ಟಾಗಿ ಉಳಿದಿರಬೇಕು. ಅದು, ಬಹುತರ, ನನ್ನ ಒಟ್ಟು ಕೃತಿಗಳ ಉಸಿರಾಗಿ ಕಂಡೀತು. ಇದು ನಿಜವೊ ಅಲ್ಲವೊ ಬೇರೆಯವರು ನನಗೆ ತಿಳಿಸಬೇಕು.

ಜೀವನ ದರ್ಶನವೆಂದರೇನು ? ಬದುಕು ನಮಗೆ ಹೇಗೆ ಕಾಣಿಸುತ್ತದೆ ಎಂದೆ ? ಅದರ ಸ್ವರೂಪವನ್ನು ಕುರಿತೂ, ದೈವಗತಿ ಮಾನವಗತಿಯನ್ನು ಕುರಿತೂ ನಮ್ಮ ಅಭಿಪ್ರಾಯ ಏನೆಂದೆ ? ನಮ್ಮ ಕೃತಿಗಳಲ್ಲಿ ಕಾಣುವ ದೃಷ್ಟಿ ಯಾವುದು ಎಂದೆ ? ಹೇಗೂ ಆಗಬಹುದು. ನಾವೆಲ್ಲ ಎಲ್ಲಿಯೊ ಹುಟ್ಟಿ ಹೇಗೊ ಬೆಳೆಯುತ್ತೇವೆ. ನಮ್ಮ ಶೀಲ, ಭಕ್ತಿ, ಶಕ್ತಿ ಆಕೃತಿಗೊಂಡಿರುತ್ತವೆ. ಊಟ, ಉಡುಪು, ನಡೆ, ನೋಟ, ಎಣಿಕೆ, ಪಕ್ಷಪಾತಗಳಲ್ಲಿ ಗುರುತಿಸಬಲ್ಲ ಒಂದು ಖಚಿತ ಲಕ್ಷಣ ಬಹುವಾಗಿ ಏರ್ಪಟ್ಟು ಎದ್ದು ಕಾಣುತ್ತದೆ— ಇಂಥವು ನಮ್ಮದೇ ಅಂಕಿತವೆಂಬ ಮಟ್ಟಿಗೆ. ಸ್ವಂತ ಬದುಕು ಕಷ್ಟದಲ್ಲಿ ಸುಖದಲ್ಲಿ, ಇಷ್ಟದಲ್ಲಿ ಅನಿಷ್ಟದಲ್ಲಿ ನಡೆದಿರುತ್ತದೆ. ಬೇರೆ ಹೆಚ್ಚಿನದು ದೊರೆಯದಾಗ ಇರುವುದಕ್ಕೆ ಸಂತೋಷಪಡುವುದೇ ಒಂದು ಧರ್ಮವಾದರೆ ಒಳಿತು ಎನ್ನಿಸುತ್ತದೆ. ನಮ್ಮ ಗುರುಗಳೊಬ್ಬರು ಹೇಳುತ್ತಿದ್ದರು : ದೊಡ್ಡದಕ್ಕೆ ಆಸೆಪಡಿ, ಯತ್ನಮಾಡಿ, ದೊರಕದಿದ್ದರೆ ಬಳಲಬೇಡಿ. ಬಂದುದನ್ನು ಬೇಡವೆನ್ನಬೇಡಿ. ಎಲ್ಲರೂ ಬುದ್ಧಿವಂತರೂ ಅದೃಷ್ಟಶಾಲಿಗಳೂ ಆಗುವುದು ಶಕ್ಯವಿಲ್ಲ. ಆದರೆ ಎಲ್ಲರೂ ಸಜ್ಜನರಾಗಬಹುದು–It is given to everyone to be good- ಎಂದು. ಈ ಮಾತು ನನ್ನ ಬಾಳಿಗೆ ನೆರವು. ಇದು 'ವೇದಾಂತ'ವಲ್ಲ. ದಿನದ ಬದುಕಿಗೆ ಅಗತ್ಯವಾದ ಮನೋಧರ್ಮ. ಇಂಥದೊಂದಿಲ್ಲವಾದರೆ ನಾವು ಕೆಟ್ಟೆವು. ಬದುಕು ಗಾಸಿಪಡುತ್ತದೆ. ಅದನ್ನು ಗಾಸಿಪಡಿಸಿ ನಾವು ಗಳಿಸಬಹುದೇನನ್ನು ? ಸಂಸ್ಕಾರವನ್ನೆ, ಸಂಪತ್ತನ್ನೆ, ಶಾಂತಿಯನ್ನೆ, ಸಿದ್ಧಿಯನ್ನೆ ?

ಲೋಕ ಜೀವನವೆಂಬುದರಲ್ಲಿ ನಮಗೆ ಕಾಣುವುದು ಬಹು ಸ್ವಲ್ಪ. ಕಂಡುದರಲ್ಲಿಯೂ ಅರೆಮನಸು, ಭ್ರಾಂತಿ ಒಟ್ಟಬಲ್ಲವು. ಕೇಳಿದುದೂ ಮನಸ್ಸಿಗೆ ತಟ್ಟಿದುದೂ ನನ್ನಂಥವರಿಗೆ ಸಾಹಿತ್ಯದ ಮೂಲಕ, ಲೋಕ ಚಿಂತನೆಯ ಮೂಲಕ ತಟ್ಟುತ್ತವೆ. ಇವೆಲ್ಲ ಚಿತ್ತಸಂಸ್ಕಾರಕಾರಿಯಾಗುತ್ತವೆ. ಇದರಲ್ಲಿ ನೂರಾರು ನಿಟ್ಟುಗಳುಂಟು. ನೋಡುನೋಡುತ್ತ ಅಲ್ಲಿ ಮೇಲು, ಬೀಳು, ನಯ, ಒರಟು, ತುಂಬು, ಬಡಕಲು ತಾಳು, ಕೊಂಬೆ, ಒಳ, ಪದರ, ಒಣ, ಸರಸ ಗೊತ್ತಾಗುತ್ತವೆ. ಇದು ಕೆನೆ, ಇದು ಪೋಷಕ, ಇದು ನಾಶಕ, ಇದು ನೇರ, ಇದು ಬಳಸು ಎಂಬ ವಿವೇಕ ದೊರೆಯುತ್ತದೆ. ಸ್ವಂತ ಅನುಭವದ ಜೊತೆಗೆ ಇಂಥ ಬೆಲೆಗಳ ದರ್ಶನ ಸೇರಿಕೊಳ್ಳುತ್ತದೆ. ದುರ್ಮಾರ್ಗರ ಸಂಗತಿ ಹೇಗೊ ಸಭ್ಯರ, ಸಂತರ ಸಂಗತಿಯೂ ಹಾಗೇ ಅನಂತ. ಆದರೆ ಈ ಕಾಲ ದೇಶ, ಈ ಜಾತಿಮತ, ಈ ಮನಸ್ಸಿನದೇ ಸರ್ವ ಪ್ರಾಮಾಣ್ಯ ಎನ್ನಲಾಗದು. ಹಿರಿತನದ ವಿಲಾಸ ಎಲ್ಲಿಯೂ ಆದೀತು. ಕಂಡಾಗ ಅದಕ್ಕೆ ಕೈಮುಗಿವ ಬುದ್ಧಿಮಾತ್ರ ಇರಲಿ, ಮಾಸ್ತಿಯವರ ತಿರುಪಾಣಿ ನಾಟಕದಲ್ಲಿ ಶ್ರೀರಂಗದಲ್ಲಿ ಹಲವು ಆಳ್ವಾರರ ವಿಗ್ರಹಗಳ ಜೊತೆಗೆ, ವಿಗ್ರಹವಿಲ್ಲದ ಪೀಠ ಒಂದು ಇತ್ತೆಂದಿದ್ದಾರೆ. ಬರಲಿರುವ ಆಳ್ವಾರರಿಗೆ ಸಂತತ ತೆರೆದಿರುವ, ಕಾದಿರುವ ಪೀಠ ಅದು. ಅವರ ಸಂತತಿ ಒಂದು ಕಾಲಕ್ಕೆ ಮುಗಿಯುವುದಿಲ್ಲ. ಪೀಠ, ಹೃದಯ, ಮನಸ್ಸು, ಹೀಗೆ ಸರ್ವದಾ ತೆರೆದಿದ್ದರೆ ಚೆನ್ನ. ಈತನು ವಿಮರ್ಶೆಯ ಬೆಲೆಗಳನ್ನೆಲ್ಲ ಕದಡಿ ಬಗ್ಗಡ ಮಾಡುತ್ತಾನೆಂಬಷ್ಟು ಪರಸ್ಪರ ವಿರುದ್ಧವಾದ ಒಲವು, ಪಕ್ಷಪಾತ ನನ್ನಲ್ಲಿ ಹುಟ್ಟವೆ. ಹಾಗಿದ್ದರೆ ಪ್ರಮಾಣವಾವುದೂ ಇಲ್ಲವೆ ಎಂದವರುಂಟು. ಇದೆ, ಆದರೆ ಅದೆಲ್ಲ ಹಳೆಯ ಸೃಷ್ಟಿ ಸಾಧನೆಯಲ್ಲಿ ಕಂಡ ಚೆಲುವಿಂದ ನಿರ್ಣೀತವಾದ್ದು. ಮುಂದೆಯೂ ಚೆಲುವು ಹೀಗೆ ಕಾಣಬೇಕು ಎಂಬ ನಿರ್ಬಂಧವೇನು? ಚೆನ್ನಾಗಿದ್ದುದರ ಲಕ್ಷಣ ಕಂಡಿರಿ. ಈ ಲಕ್ಷಣಗಳಿರುವುದರಿಂದ ಇದು ಚೆನ್ನಾಗಿದೆ ಎಂದೀರಿ. ಇನ್ನಾವ ಚೆನ್ನಾದ್ದಕ್ಕೂ ಇವೇ ಲಕ್ಷಣಗಳಿರಬೇಕು ಎಂಬ ವಾದ ಮಾತ್ರ ಸರಿಯಲ್ಲವಾದೀತು. ಭಗವಂತನ ಸೃಷ್ಟಿಗೆ ತಡೆಯೇನು? ಇನ್ನೊಂದು ಹೊಸ ಬಗೆಯ ಚೆಲುವನ್ನು ನಿರ್ಮಿಸಲಾರದಷ್ಟು ಬರಡನೆ ಅವನು? ಮುಂದಿನ ಜೀವವುಳಿಸುವ ಪ್ರಸಂಗದಲ್ಲಿ ಇದು–ಹಿಂದಿನ ಬೆಲೆ–ಬಳಕೆ–ಉಬ್ಬಸ ತರುವ, ಕುತ್ತಿಗೆ ಹಿಸುಕುವ ನಿರ್ಮಾನುಷ ನಿರ್ಬಂಧ ಮಾತ್ರ

ಆಗಬಾರದು. ನಾಡ ಹಾಡುಗಳನ್ನು ಹಾಡಲು ತೊಂಬತ್ತು ಮೇಲೊಂಬತ್ತು ದಾರಿಗಳುಂಟು ; ಅವುಗಳಲ್ಲಿ ಒಂದೊಂದೂ ಸರಿಯೇ ಎಂದುದುಂಟು. ಅವು ಹಾಡಾದರೆ ಸಾಕು.

ಲೋಕಗತಿ, ವ್ಯಕ್ತಿಗತಿಗಳದು ದೊಡ್ಡ ಪ್ರಶ್ನೆ. ಸಾಮಾನ್ಯರಿಗೆ ನಿಲುಕದ್ದು, ನೀಗದ್ದು. ಇಂಥಲ್ಲಿ ದರ್ಶನ ಬಾಹುಳ್ಯವುಂಟು. ಆಚಾರ್ಯರೂ ಆದರ್ಶಗಳೂ ನಾನಾ. ಒಬ್ಬರ ಭಕ್ತಿ ಇನ್ನೊಬ್ಬರದಾಗಬೇಕಿಲ್ಲ, ಹೀಗಿರುವಾಗ ನಮ್ಮ ವಿಶ್ವಾಸಕ್ಕೆ ಇನ್ನೊಬ್ಬರನ್ನು ತಲೆತೆರಬೇಕೆನ್ನುವುದು ಯಾವ ನ್ಯಾಯ ? ಅವು ಅತಿ ಲೌಕಿಕ ಭಕ್ತಿಗಳಿಗೆ ಮನಸ್ಸನ್ನು ಒಯ್ಯುವ ಪ್ರಕರಣಗಳು. ಅವನ್ನು ಕಂಡ, ಕುರಿತ ಕಡೆಯನುಡಿ ಲೋಕ ಮುಗಿಯುವವರೆಗೂ ಶಕ್ಯವಿಲ್ಲ. ಅಲ್ಲಿ ಸತ್ಯನಿರ್ಣಾಯಕಗಳೂ ಸ್ಥಾಪಕಗಳೂ ಪ್ರಯೋಗಗಳೂ ಕಷ್ಟ. ಅವರವರ ಮನಸ್ಸು, ಜೀವದ ಅಗತ್ಯ, ಪ್ರೀತಿ ಅಪ್ರೀತಿಗಳಿಗೆ ಅವನ್ನು ಬಿಡೋಣ. ನಂಬಿದರೆ ವಿಶ್ವಾಸ ; ಪವಿತ್ರವೆನಿಸಿದರೆ ಪವಿತ್ರ. ನಮಗೆ ಉಂಟಾದರೆ ಶ್ರದ್ಧೆ. ಶ್ರದ್ಧೆ, ನಂಬಿಕೆ, ಪವಿತ್ರಭಾವನೆ ಇವಿಲ್ಲದೆ ಮತಸಮಯವೇ—ರಿಲಿಜನ್ ಎಂಬುದೇ - ಇಲ್ಲ. ಇದು ಕೇವಲ ಬುದ್ಧಿಯ ಒಲವಲ್ಲ. ವಿಶ್ವಾಸದ ಪಕ್ಷಪಾತ. ಕೇವಲ ಯುಕ್ತಿಯ ಪ್ರಪಂಚಕ್ಕೆ ಇದು ಹೊರಗು.

ದಿನಜೀವನಕ್ಕೆ ಮೇಲ್ಪಟ್ಟ ಯಾವುದೊ ಶಕ್ತಿ ಲೋಕವನ್ನು ನಡಸುತ್ತಿದೆ ಎಂಬುದು ಬಹುಶಃ ನಿಜ. ಅದರ ಸ್ವರೂಪ ಹೀಗೆ, ಇಷ್ಟೇ ಸರಿ ಎಂಬುದು ಮಾತ್ರ ದುಡುಕು. ಶಾಸ್ತ್ರದ್ದು, ಧರ್ಮದ್ದು, ಕಲೆಯದು, ವ್ಯವಹಾರದ್ದು, ಅನುಭವದ್ದು ಎಲ್ಲ ಒಂದೊಂದು ದೃಷ್ಟಿ. ಇವೆಲ್ಲ, ಇನ್ನೂ ಎಷ್ಟೋ ಸೇರಿ ಒಟ್ಟು ನೋಟ ಬಂದರೆ ಅದಕ್ಕೆ ಸಾಕಷ್ಟು ಸಿದ್ಧಿ ದೊರೆತ ನೋಟ ತುಂಬಿದ ನೋಟವಾಗುತ್ತದೆ. ಇದೆಲ್ಲ ಒಂದು ಸೃಷ್ಟಿಕ್ರಮದ, ಒಂದು ಕಾಲರಚನೆಯ ಮಾತು. ಇನ್ನೊಂದು ಬಗೆಯ ಸೃಷ್ಟಿಗೆ ಇನ್ನೊಂದು ಕಾಲ ಗಣನೆಯ ವ್ಯಾಪಾರಕ್ಕೆ ಇವೆಲ್ಲ ಹೇಗೆ ಕಾಣುವುದೊ ಯಾರು ಬಲ್ಲರು ? ಈ ಪ್ರಪಂಚದವರಲ್ಲಿ ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ತಾಳಿಕೆ, ತಾಳ್ಮೆ ಇರಬೇಕಾದ್ದು ಮಾತ್ರ ಅಗತ್ಯ. ಯಾರ ಅನುಭವದಲ್ಲಿ ಹೆಚ್ಚು ಸರ್ವಗ್ರಾಹಕತೆ ಇದೆಯೊ ಯಾರಿಂದ ಲೋಕಕ್ಕೆ ಹೆಚ್ಚು ನೆಮ್ಮದಿಯೊ, ಯಾರ ನಿಲವಿನ ಪ್ರಶ್ನೆಯನ್ನು ವಿಮರ್ಶೆಯಿಂದಲೂ ಗ್ರಹಿಸಬಹುದೊ, ಅಂಥದಲ್ಲಿನ ಪಾಕವನ್ನು ಅವರ ಉಸಶಾಂತಿ

ಪ್ರಸನ್ನತೆಗಳಿಂದ ಕಂಡುಕೊಳ್ಳಬಹುದು. ಅಂಥದಕ್ಕೆ ಬೆಲೆ ಹಿರಿದು. ಇಲ್ಲಿ ಪೌರ್ವಾತ್ಯ, ಪಾಶ್ಚಿಮಾತ್ಯಗಳ ವಿಶೇಷ ಲಕ್ಷಣ, ಮುಖ ಇರಬಹುದು. ಬಣ್ಣದಲ್ಲಿ, ಸ್ವರಘಾತದಲ್ಲಿ, ಹೊರಮೈಯಲ್ಲಿ, ರಸದಲ್ಲಿ, ಸತ್ವದಲ್ಲಿ ಅಲ್ಲ. ಯಾವ ಒಂದು ಜನಕ್ಕೇ ದೇಶಕ್ಕೇ ಆಗಲಿ ಇಂಥ ಸಿದ್ಧಿ ಸರ್ವಸಾಮಾನ್ಯವಾಗಿ ಬಿಟ್ಟಿದೆ, ಉಳಿದವರೆಲ್ಲ ಸರ್ವಕಾಲಕ್ಕೂ ಹೀನರೇ, ನಮ್ಮದು ಸರ್ವಥಾ ಶ್ರೇಷ್ಠ, ಅದರ ಸರಿಗೆ ಯಾರೂ ಏರಿಲ್ಲ ಎಂದರೆ ಮಾತ್ರ ನಾನು ಒಪ್ಪಲಾರೆ. ಮಾನವನ ಅನುಭವದಲ್ಲಿ ಎಲ್ಲಿ ದೊಡ್ಡತನ ಕಂಡರೂ ಅದು ದೊಡ್ಡದೇ. ಅವಿರೋಧದಲ್ಲಿ ಎಲ್ಲದರೊಡನೆಯೂ ಸೇರಿ ಅವನು ಲೋಕಕಲ್ಯಾಣವನ್ನು ಸಾಧಿಸಬೇಕು. ಸೌಮನಸ್ಯ ಅಲ್ಲಿ ಮೂಲಧಾತು. ನಮ್ಮಲ್ಲಿಯೂ ಇರುವುದು ಇದೆ ; ಇಲ್ಲದುದು ಇಲ್ಲ. ಇದ್ದುದನ್ನು ಕೊಡೋಣ ; ಇಲ್ಲದುದನ್ನು ತಂದುಕೊಂಡು ಬದುಕೋಣ.

ನಮ್ಮ ಗತಿ ಯಾವುದು ? ಲೋಕದ್ದು ? ಲೋಕದ ಕಥೆ ಮುಗಿದ ಮೇಲೆ ತಾನೆ ಅದರ ಗತಿ ಏನು ಎಂಬುದು ತಿಳಿದೀತು ? ಹರಿವ ಒಂದು ನದಿಯ ಈ ದಡದಿಂದ ಆ ದಡಕ್ಕೆ, ಆ ಕಡೆಯಿಂದ ಈ ಕಡೆಗೆ ಹೋಗುತ್ತ ಬರುತ್ತ ಬದುಕಿನ ದಿನದಿನದ ಅಥವಾ ಆಯುಸ್ಸಿನ ಕೆಲಸಗಳನ್ನು ಮಾಡಿಕೊಳ್ಳುತ್ತ ಇರುವವರು ನಾವು. ನದಿಯ ಮೂಲದಿಂದ ಹಿಡಿದು ಕಡಲು ಮುಟ್ಟುವವರೆಗೂ ಅದನ್ನು ಕಂಡವರಿಗಲ್ಲವೆ ನದಿಯ ಪೂರ್ಣ ಸ್ವರೂಪ ಗೊತ್ತಾಗುವುದು ? ಈಗ ನಡೆಯುತ್ತಿರುವ ಒಂದು ಕಾಲಪ್ರವಾಹದಲ್ಲಿ ಎಷ್ಟೋ ಜೀವಗಳು, ಜನತೆಗಳು, ನಾಗರಿಕತೆಗಳು ತೇಲಿವೆ ; ಮುಳುಗಿವೆ. ನಾವೂ ತೇಲುತ್ತ ಮುಳುಗುತ್ತ ಅಲ್ಪ ಪ್ರಯೋಜನಗಳಿಗಾಗಿ ಅಲ್ಲಷ್ಟು, ಇಲ್ಲಷ್ಟು ಆ ನದಿಯ ದರ್ಶನ, ಉಪಯೋಗ ಪಡೆಯುತ್ತಿರುವವರು. ಸೃಷ್ಟಿಯ ಕೆಲಸ ಮುಗಿದ ಕೊನೆಯಲ್ಲಿ ಮಾತ್ರ ಗೊತ್ತಾಗಬಲ್ಲ ಪೂರ್ಣತೆಯ ಪರಿಚಯ ಯಾರಿಗಾಗಬಹುದು ? ಸೂತ್ರರೂಪವಾಗಿ ಅದನ್ನು ತೊಡಗಿದ ಭಗವಂತನಿಗೆ ; ಪರಿಣಾಮವಾಗಿ, ಸಿದ್ಧಿಸಿದುದನ್ನು ಕಂಡ ಅದೇ ಭಗವಂತನಿಗೆ. ಉಳಿದವರೆಲ್ಲರದು ಅಪೂರ್ಣ ದರ್ಶನ. ಅವರಿಂದ ದೊರೆವುದು ಆ ಈ ವಾದಗಳು, ಕ್ಷಣಿಕ ವೇದನಗಳು, ನಿವೇದನಗಳು ಮಾತ್ರ. ಈ ನಡುವೆ ಯಾವ ಮತವೂ ನಂಬುವವರನ್ನು ಉದ್ಧಾರಮಾಡಬಲ್ಲದು,– ಹದಮಾಡಿ. ಅವರು ಹದಗೊಂಡರೆ. ಅದರ ತಿಳಿವಿನ ಎತ್ತರಕ್ಕೆ

ಏರಿ ಅದರ ಶುಚಿಯನ್ನು ರೂಢಿಸಿಕೊಂಡು ಅವರು ಬೆಳೆದರೆ. ನಂಬಿಕೆ, ತಿಳಿವಳಿಕೆ, ಚಾರಿತ್ರ ಇವು ಮೂರು ರತ್ನಗಳು ಎಂಬ ಜೈನರ ಮಾತಿನಲ್ಲಿ ಅಡಕವಾಗಿ ಈ ತತ್ವ ಪ್ರಕಾಶವಾಗುತ್ತದೆ.

ನಾನು ಅನೇಕ ಹಿರಿಯರನ್ನು ನೋಡಿದ್ದೇನೆ. ಆಸ್ತಿಕರಾಗಿ, ಆಚಾರವಂತರಾಗಿ ಪ್ರಾಮಾಣಿಕರಾಗಿದ್ದು ಸಂಪ್ರದಾಯದಲ್ಲಿಯೇ ಉಪಶಾಂತಿಯನ್ನು ಸಾಧಿಸಿದವರಿದ್ದಾರೆ. ಕಹಿ ಬೆಳಸಿ ನೋವಿನಲ್ಲಿ, ಸೋಲಲ್ಲಿ ಕುಯ್ಯೊ ಮೊರೆಯೊ ಎಂದವರಿದ್ದಾರೆ. ಯಾವುದನ್ನೂ ನಂಬದೆ ಬಾಳನ್ನು ಚೊಕ್ಕಟವಾಗಿಟ್ಟುಕೊಂಡು ತುಂಬುಬಾಳು, ನೆರೆಬಾಳು ಬಾಳಿದವರಿದ್ದಾರೆ. ಬೇರೆ ಬೇರೆ ದೇಶ ಮತಗಳವರು ಶುದ್ಧ ಮನಸ್ಕರಾಗಿ ಸೋದರರಾಗಿ ಬಾಳಿದವರುಂಟು. ಒಂದೇ ದೇಶದವರು ವಿರಸವಾಗಿ ಹುಳುಗಳಂತೆ ಬಾಳಿರುವುದುಂಟು. ಇನ್ನು ಕೆಲವರು ಯಾವುದನ್ನೊ ಒಂದನ್ನು ಒಪ್ಪಿಕೊಂಡು ಹೊಸತಾಗಿ ಬರುವ ತಿಳಿವನ್ನೆಲ್ಲ ತಮ್ಮ ಹಳತರ ಪೋಷಣೆಗೆ ಕಾಲುವೆ ಹರಿಸಿಕೊಂಡು ಒಂದು ನಂಬಿಕೆಯ ದ್ವೀಪವನ್ನು ಕಲ್ಪಿಸಿಕೊಂಡು ಕ್ಷೇಮದಲ್ಲಿ, ಸಂತೋಷದಲ್ಲಿ ಧೀರವಾಗಿ ನಡೆದವರುಂಟು. ಅವರಿಗೆ ಸಂದೇಹಗಳೇ ಇಲ್ಲ. ಎಲ್ಲ ತೀರ್ಮಾನವಾಗಿಬಿಟ್ಟಿದೆ. ಎಲ್ಲಿ ಏನು ನಡೆದರೂ ಅವರ ತಿಳಿವಿಗೇ ಪೋಷಕ. ಆಗದಿದ್ದರೆ ಹಾಗೆ ಅರ್ಥ ಮಾಡಿಕೊಂಡು ಅದರ ವಿಷಮತೆಯಿಂದ ಪಾರಾಗುತ್ತಾರೆ. 'ಬೆಟ್ಟಕ್ಕೆ ಚಳಿ ಯಾದರೇನ ಹೊದಿಸುವಿರಯ್ಯ' ಎಂದ ಪ್ರಭುವಿನ ಮಾತು ಇವರ ಬಳಿಗೆ ಬಾರದು. ಇವರನ್ನು ತಾಪಗೊಳಿಸದು. ಇವರು ಬೆಟ್ಟವಲ್ಲ. ಈ ಚಳಿ ಚಳಿಯಲ್ಲ ಇವರಿಗೆ. ಹತ್ತು ದಿಕ್ಕಿನ ಗಾಳಿಗೆ ತೆರೆದ ಬೆಟ್ಟಕ್ಕೆ ತಾನೇ ಚಳಿಯನ್ನು ತಡೆವ ಅಗತ್ಯ, ಚಿಂತೆ ? ಅದು ಬೆಟ್ಟವಾದ್ದರಿಂದ ಆ ಚಳಿಯನ್ನು ತಡೆಯಬಲ್ಲದು. ಇವೊತ್ತಿನ ಹುಚ್ಚು ಕ್ಷೋಭೆಗಳನ್ನು ನೋಡಲೊಲ್ಲದೆ, ಒಮ್ಮನ ತರುವ ಸಂಪರ್ಕಗಳನ್ನು ಹಳಿದು ದೂರ ನಿಲ್ಲುವವರಿಗೆ ಇಂದಿನ ಬಿಸಿ ಅರ್ಥವಾದೀತು ಹೇಗೆ ? ಈ ತುಮುಲದಲ್ಲಿ ನೆಲೆ ಸಿಕ್ಕದೆ ಇರುವ, ಕಾಣುವ ನೆಲೆಗಳು ತೃಪ್ತಿಕರವಲ್ಲದೆ ಮುಂದೆ ಇನ್ನೂ ದಾರಿಯೇ ಕಾಣುತ್ತ ಇರುವ ಬಾಳುಗಳೂ ಉಂಟು. 'ನೂರು ಜನ್ಮಕ್ಕೆ ಪಯಣವಾದರೆ ನೂರು ಜನ್ಮದ ಪಯಣವೇ' ಎಂದು ನನ್ನ ದಾರಿಕಾರನೊಬ್ಬ ಈ ಮನಸ್ಸಿನಲ್ಲಿಯೇ ನುಡಿದದ್ದು' ಇದು ತಪ್ಪೊ ಸರಿಯೊ ನಾ ಕಾಣೆ. ಇದನ್ನು ಅಣಕಿಸಬಹುದು.

ಒಂದು ಕಡೆ ಸಮಾಜ ಶಾಸ್ತ್ರಗಳ, ಇನ್ನೊಂದು ಕಡೆ ತತ್ವ ಧರ್ಮಗಳ ವ್ಯಾಸಂಗದಲ್ಲಿ, ಆಲೋಚನೆಯಲ್ಲಿ ನಾನು ಸ್ವಲ್ಪ ಕಾಲ ಕಳೆದಿದ್ದೇನೆ. ಅವು ಬಾಳಿಗೆ ಸಾಲವೆನ್ನಿಸಿತು. ನನ್ನ ಮನಸ್ಸು ಸಾಹಿತ್ಯಕ್ಕೆ ಹೆಚ್ಚಾಗಿ ಒಲೆಯಿತು. ಜೀವನಕ್ಕೆ ಒಂದುಸಲ ಸಾಹಿತ್ಯದ ಸವಿ ಇಳಿದರೆ, ಬೇರೆ ಎಲ್ಲ ಸಪ್ಪೆಯಾಗುತ್ತದೆ. ಶಾಸ್ತ್ರಗಳದು ಸಾಧನಕಾಂಡ. ಅವು ಕಲ್ಪಗಳು, ಆಗಮ ಗಳು. ಪ್ರಯೋಜನಗಳಿಗೆ ದುಡಿವ ಅಂಗಗಳು. ಸಾಹಿತ್ಯ, ಸಂಗೀತ ಹಾಗಲ್ಲ. ಇವುಗಳಲ್ಲಿನ ಸ್ವಾತಂತ್ರ್ಯ, ಧೀರತೆ, ಅನಂತಾವಕಾಶ, ನಿರ್ಭೀತಿ, ಆಳ, ಉನ್ನತಿ, ವಿಸ್ತಾರ, ಸೂಕ್ಷ್ಮಗಳು, ಎಲ್ಲಕ್ಕೂ ಮೇಲಾಗಿ, ಮಾನವತೆ ಇನ್ನೆಲ್ಲೂ ನನಗೆ ಕಾಣವು. ಇಲ್ಲಿ ಮನಸ್ಸು ಆಡುವ ರೀತಿಯೇ ಸೊಗಸು. ಇಲ್ಲಿನ ಅಂತಃಕರಣ ಪ್ರವೃತ್ತಿ ಬೇರೆಲ್ಲಕ್ಕೂ ತಳಹದಿ ; ಜೀವರಸ ; ಫಲದಾನ. ಇಲ್ಲಿ ಲ್ಲದ ದಿವ್ಯತೆ ಬೇರೆಡೆ ಕಾಣದು. ದೊಡ್ಡ ಸಾಹಿತ್ಯದ ಅನುಭವದಿಂದ ಒಂದು ಗಳಿಗೆಯಲ್ಲಿ ಉಂಟಾಗುವ ಜೀವಸೌಭಾಗ್ಯದ ಕಾಣ್ಕೆ, ಚಿತ್ತಹೃದಯಗಳ ಸಂಸ್ಕಾರ ಒಂದು ಯುಗದ ತಪಸ್ಸಿನಿಂದ ಆದೀತೆನ್ನಿಸುವುದಿಲ್ಲ. ಬಹುಶಃ ನಾನು ತಪಸ್ಸು ಮಾಡಿಲ್ಲವಾದ್ದರಿಂದ ಇರಬಹುದು ನನ್ನ ಈ ಮಾತು. ಆದರೆ ಇಂಥ ಕಡೆ ತಪಸ್ಸಿದೆಯೆಂದು ಹೊಗಳಿರುವ ನಾಲ್ಕಾರು ಕಡೆ ನಿಜವಾದ ಹಣ್ತನವನ್ನು ನಾನು ಕಂಡಿಲ್ಲ. ಅದರ ಒರಟು, ಅಹಂತೆ ನನಗೆ ಕರ್ಕಶವಾಗಿ ಕಂಡಿವೆ. ಸಾಹಿತ್ಯದಲ್ಲಿ ದೌರ್ಬಲ್ಯಕ್ಕೂ ಚಾಪಲ್ಯಕ್ಕೂ ಸ್ಥಾನವುಂಟು. ಪಾಪಿಗೆ ಅನು ಕಂಪೆಯುಂಟು. ದುಃಖಕ್ಕೆ ಸಾಂತ್ವನ ಉಂಟು ವಿಧಿಯ ತೊಳಲಲ್ಲಿ ಸಿಕ್ಕಿದ ನರನನ್ನು ಕಂಡು ಅಯ್ಯೊ ಎನ್ನುವ ಕಾರುಣ್ಯ, ಅದಕ್ಕೆ ನೆರವಾಗಬಯಸುವ ಪ್ರೀತಿ ಉಂಟು.

ಪತತು ನಭಃ ; ಸ್ಫುಟತು ಮಹೀ
ಚಲಂತು ಗಿರಯಃ ಮಿಲಂತು ವಾರಿಧಯಃ
ಅಧರೋತ್ತರಮಸ್ತು ಜಗತ್
ಕಾ ಹಾನಿಃ ವೀತರಾಗಸ್ಯ ?

—ಕಾ ಹಾನಿಃ – ವೀತರಾಗಸ್ಯ ? ವೀತರಾಗತೆ ಕೆಲವರಿಗೆ ಕಡೆಯ ಹಂತವೇನೊ. ಅದು ಪೂಜ್ಯವೇ ಇರಬೇಕು. ಏನಾದರೆ ಅವರಿಗೇನು ? ಅಮ್ಮ ಅಳಿದರೇನು ? ಅಪ್ಪ ಕೊಳೆತರೇನು ? ಮಗು ಅತ್ತರೇನು ? ದಿಕ್ಕಿಲ್ಲದ

ವಿಧವೆಯನ್ನು ಬೀದಿಯ ನಾಯಿ ಮಾಡಿ ಅವಳನ್ನೆ ಹಳಿಯುವ ಹಿರಿತನ ವಿಜೃಂಭಿಸಿದರೇನು? ಅನ್ಯಾಯವೇನು, ಧರ್ಮಿಷ್ಠರ ಸೋಲೇನು? ಇವರು ವೀತರಾಗರು. ಲೋಕಕ್ಕೆ ಇವರು ವಿಮುಖರು. ನಾನಾಡುವುದು ಸಾಮಾನ್ಯರ ಮಾತನ್ನು. ಒಂದು ಹಾಡಿನ ಪಲ್ಲವಿ, ಚರಣ, ಅದರ ನಾದಲಯ, ಯಾವುದೊ ಕಣ್ಣಿನ ಒಂದು ಒಸೆವ ಹೊಳಪು ಒಂದೊಂದು ಬದುಕನ್ನು ಬಣ್ಣಿಸಬಲ್ಲವು. ಕಾಪಾಡಬಲ್ಲವು. ಉದ್ಧಾರ ಮಾಡಬಲ್ಲವು. ಇಲ್ಲಿನ ಸೌಂದರ್ಯ, ಮಾನವ ವಿಲಾಸ ಬೇರೊಂದರಲ್ಲಿ ನಾ ಕಾಣೆ. ಆದ್ದರಿಂದಲೇ ನನ್ನ ಮನಸ್ಸು ಸಾಹಿತ್ಯದ ಉಪಾಸನೆಗೂ ಆರ್ಜನೆಗೂ ಭೋಗಕ್ಕೂ ತನ್ನನ್ನು ತೆತ್ತುಕೊಂಡಿದೆ.

ನನಗೆ ಇಷ್ಟು ನಿಜ: ಬದುಕಿನಲ್ಲಿ ದುಃಖವಿರುವಂತೆ ಸಂತೋಷವೂ ಇದೆ. ಹಗೆಯಿರುವಂತೆ ಕೆಳೆ ಇದೆ. ನಿಷ್ಠುರತೆ ವಂಚನೆ ಇರುವಂತೆ ನಯ, ಪ್ರಾಮಾಣಿಕತೆ ಇವೆ. ಕಷ್ಟದಲ್ಲಿ ಇರುವಾಗ ಯಾರೊ ಒಬ್ಬರಾಡಿದ ಮಾತು ಅಮೃತ ಸತ್ವವಾಗಬಲ್ಲದು. ಕೋಟಿ ಕರ್ಕಶ ಕೊಲ್ಲುತ್ತಿರುವಾಗ, ಮೌನದಲ್ಲಿ ಮರೆಯಲ್ಲಿ ನಮಗಾಗಿ ಚಾಚಿ ಹಿಡಿವ ಕೈಕೆಳೆ, ಕೊಡುವ ಧೈರ್ಯ, ನುಡಿವ ತುಟಿಯ ಒಂದು ಅಲುಗು, ಮಾತು, ಕಣ್ಣಿನ ಒಂದು ಸ್ನೇಹದ ಮಿನುಗು ಸಾಕು–ತಾರಣೆಗೆ, ಉಳಿಸುವುದಕ್ಕೆ, ಬದುಕಿನಲ್ಲಿ ನಂಬಿಕೆ ಸ್ಥಾಪಿಸುವುದಕ್ಕೆ. ಈ ಲಕ್ಷಣ ಮಾನವತೆಯ ಪರಮ ಲಕ್ಷಣ. ಇದು ನರಲೋಕದ ಸೌಭಾಗ್ಯ. ಈ ಸೌಭಾಗ್ಯ ಎಷ್ಟು ಹೊಮ್ಮಿದರೂ ಕಡಮೆಯೇ ಎನ್ನಿಸುತ್ತದೆ ನನಗೆ. ಅದನ್ನು ಸವಿಯುವ ಭೋಗ, ಸಾಧಿಸುವ ಯೋಗ ಸಾಹಿತ್ಯ ಯೋಗ. ಲೋಕ ಕ್ಷಣಿಕವೇನು? ಆಗಲಿ. ಈ ಸೌಂದರ್ಯ, ಮೈತ್ರಿ ನಶ್ವರವೇ ಆಗಲಿ. ಇಲ್ಲಿನ ಪ್ರೀತಿ ನನಗೆ ದಿವ್ಯ. ಬಾಳಿಗೆ ನಾನು ಕೃತಜ್ಞ ಎಂಬ ಕವಿ ನುಡಿಗಳಿವೆ. ಆ ಸುಖೋಷ್ಣತೆ, ಆ ಕರುಳಕರುಣೆ, ನನಗೂ ಸಾಕು. ಅವನ್ನು ಎರೆವವರು ಬಂಧುಗಳು. ಲೋಕವೆಲ್ಲ ನಿರ್ಘೃಣವಾಗಿ ಕೈ ಬಿಟ್ಟ ಕಾಲದಲ್ಲಿ ಎಲ್ಲಿನದೊ ಒಂದು ಪ್ರೀತಿ, ಧೈರ್ಯ ಕಂಡಾಗ ನನಗೆ ಮಾನವನ ಬದುಕು ಸಾರ್ಥಕವಾದಂತೆ ಕಾಣುತ್ತದೆ. ಹಿರಿದರಲ್ಲಿ ನಂಬಿಕೆ ನಿಲ್ಲುತ್ತದೆ. ಹತ್ತು ಯುಗಗಳ ಕಷ್ಟವನ್ನು ದಾಟಬಲ್ಲೆನೆಂಬ ದೃಢ, ಸ್ಫೂರ್ತಿ ಬರುತ್ತವೆ. ರಾಜ್ಯಸಾಮ್ರಾಜ್ಯಗಳ ದರ್ಪವನ್ನು ಪ್ರತಿಭಟಿಸಬಲ್ಲೆನೆಂಬ ನಿಶ್ಚಯ, ಸಾಹಸ ಉಂಟಾಗುತ್ತವೆ. ಈ ನಂಬಿಕೆ ನನಗೆ ಸಾಕು.

ಸಂಗೀತ ಸಭೆಯ ಸ್ವಾರಸ್ಯ

ಎಂ. ವಿ. ಸೀತಾರಾಮಯ್ಯ

ಸಂಗೀತ ಸಭೆಗಳಲ್ಲಿ ಸಂಗೀತದ ಸ್ವಾರಸ್ಯ ಒಂದು ದಿನ ಇದ್ದಂತೆ ಇನ್ನೊಂದು ದಿನ ಇರುವುದಿಲ್ಲ ; ಸಂಗೀತಗಾರರನ್ನು ಅನುಸರಿಸಿ ಆ ಸ್ವಾರಸ್ಯ ಬಗೆ ಬಗೆಯಾಗಿ ಇರುತ್ತದೆ, ಹೆಚ್ಚು ಕಡಮೆಯಾಗಿರುತ್ತದೆ. ಸಂಗೀತದ ಸ್ವಾರಸ್ಯ ಕುರಿತು ನಾನು ಇಲ್ಲಿ ಹೇಳ ಹೊರಟಿಲ್ಲ ; ಸಭೆಗಳ ಸ್ವಾರಸ್ಯ ಕುರಿತು.

ಸಂಗೀತ ಸಭೆಗಳಲ್ಲಿ ಕಾಣಬರುವ ಸ್ವಾರಸ್ಯ ದಿನ ದಿನಕ್ಕೆ ಬೇರೆಯಾಗದೆ ಒಂದೇ ತೆರನಾಗಿದ್ದರೂ, ಅದು ಬೇರೆ ಯಾವ ಸಭೆಗಳಲ್ಲೂ ಕಾಣಬರುವುದಿಲ್ಲ ಎಂದು ನನ್ನ ಮತ. ಸಂಗೀತ ಕೇಳಲು ಹೋಗುವವರಲ್ಲಿ ನನ್ನಂತೆ ಸಂಗೀತದ ಗಂಧವನ್ನರಿಯದವರೇ ಬಹುಮಂದಿ; ಇಂಥವರಲ್ಲಿ, ಸಂಗೀತ ಬಲ್ಲಂತೆ ತೋರ್ಪಡಿಸಿಕೊಳ್ಳುವವರೇ ಹೆಚ್ಚು ಮಂದಿ. ಅವರ ತಲೆತೂಗಾಟವೇನು, ಮೈಯೊಲೆದಾಟವೇನು, ಬಾಯ ಚಪ್ಪರಿಕೆಯೇನು, ಸಂಗೀತಗಾರನಿಗೆ ಪ್ರೋತ್ಸಾಹ ಕೊಡಲು ಅವರು ಚೆಚ್ಚುವ ಚಪ್ಪಾಳೆಯ ರಭಸವೇನು ! ಇಷ್ಟೆಲ್ಲಾ ಅಭಿನಯವಿಲ್ಲದ ಅವರು ಸಂಗೀತದ ಸವಿ ಸವಿಯಲಾರರು. ಸಂಗೀತಾಮೃತಪಾನವೆಂದರೆ ಅವರ ಪಾಲಿಗೆ ಹಾಲುಕೀರು ಕುಡಿದಂತೆ ; ಸೊರಸೊರ ಎಂದೇ ಹೀರಬೇಕು. ಇದು ತಪ್ಪು ಎಂದು ನಾನು ಹೇಳುವುದಿಲ್ಲ; ಸಂಗೀತದೆದುರು 'ಏಕಾಂಗಿ'ಯಾದ ಸರ್ವವೇ ತಲೆತುಗೂವುದೆಂದಮೇಲೆ, ಭಗವತ್ಕೃಪೆಯಿಂದ ಅಂಗಾಗಗಳನ್ನು ಹೊಂದಿದ, ಅಂಗಭಂಗಿಸಮರ್ಥನಾದ ಮಾನವ ಪ್ರಾಣಿ ಸುಮ್ಮನೆ ಕುಳಿತಿರುವುದು ಹೇಗೆ ಸಾಧ್ಯ? ಅಲ್ಲದೆ, ಈ ಬಗೆಯ ಸಂಗೀತ ರಸಾಸ್ವಾದನ ಪ್ರದರ್ಶನವನ್ನು ಸಂಗೀತಗಾರರೇ ನಿರೀಕ್ಷಿಸುತ್ತಾರೆ ; ಅದು ಅವರ ತಪ್ಪು! ಗೂಟ ಬಡಿದ ಹಾಗೆ ಕುಳಿತು ಕಣ್ಣು ಮುಚ್ಚಿ ಸಂಗೀತ ಕೇಳುವವರು ಸಂಗೀತಗಾರನೆದುರು ಕುಳಿತು ಬಿಟ್ಟರೆ, ಆತನ ಮನೋಧರ್ಮವೇ ಮಾಯವಾಗುತ್ತದೆಯಂತೆ. ಆದ್ದರಿಂದ, ಆತನ ಮುಂದೆ ಕುಳಿತಿರುವ ಸಂಗೀತಜ್ಞರು ಕೂಡ, ತಾವು ಸಂಗೀತಜ್ಞರೆಂಬುದನ್ನು ಮರೆತು, ಸಂಗೀತ ಅಜ್ಞರಂತೆ ವರ್ತಿಸುತ್ತಾರೆ. ಇದರಲ್ಲಿ ತಪ್ಪಿಲ್ಲ, ಆಶ್ಚರ್ಯವೂ ಇಲ್ಲ.

ಸಂಗೀತಗಾರನು ತಾಳ ಹಾಕಿಕೊಂಡು ಸಂಗೀತ ಹೇಳುವುದಂತೂ ಸರಿಯೆ ; ಪಕ್ಕದಲ್ಲಿ ಕುಳಿತು ತಾಳ ಹಾಕುವ ಶಿಷ್ಯನು ಎಲ್ಲಿ ತಾಳತಪ್ಪಿ ತಾನು ಮುಗ್ಗರಿಸಬೇಕಾದೀತೋ ಎಂದು ಆತ ತಾಳ ಹಾಕುತ್ತಾನೆ ; ಅದನನ್ನುಸರಿಸಿ, ಶ್ರೋತೃವೃಂದವೂ ತಮ್ಮ ತಮ್ಮ ಶಕ್ತ್ಯನುಸಾರ ತಾಳ ಹಾಕುವುದು ಸರಿಯೆ ; ಆದರೆ, ತಪ್ಪು ತಾಳ ಹಾಕುವುದು ಮಾತ್ರ ತಪ್ಪು ! ನನಗೆ ತಿಳಿದಮಟ್ಟಿಗೆ, ಸಂಗೀತಗಾರ ಮತ್ತು ಮೃದಂಗದವನನ್ನು ಬಿಟ್ಟು, ತಾಳ ತಪ್ಪುವವರೆ ಎಲ್ಲ. (ಕೆಲವೊಮ್ಮೆ, ಅವರಿಬ್ಬರು ಕೂಡ ತಾಳ ತಪ್ಪುವುದುಂಟು ; ಇದು ನಿಮಗೆ ಮಾತ್ರ ಹೇಳಿದ ಪಿಸುಮಾತು, ನೆನಪಿರಲಿ.)

ಸಂಗೀತ ಸಭೆಗಳಿಗೆ ಮಕ್ಕಳನ್ನು ಕರೆತರಲು ಅವಕಾಶವಿಲ್ಲ. ಆದರೂ, ಅಲ್ಲಿ ನೆರೆದ ಕೆಲವರು ಮಕ್ಕಳಿಲ್ಲವೆಂಬ ಕೊರತೆಯನ್ನು ದೂರ ಮಾಡುತ್ತಾರೆ. ಇವರು ಮಕ್ಕಳಂತೆ ಚಡಪಡಿಸುವ ಸ್ವಭಾವದವರು, ಚಂಚಲಿಗಳು, ಕುಳಿತ ಕಡೆ ಕುಳ್ಳಿರರು, ನಾಲ್ಕು ಗಂಟೆಯ ಕಚೇರಿ ಕೇಳಲು ಶುದ್ಧ ಅಸಮರ್ಥರು, ಗಳಿಗೆಗೊಮ್ಮೆ ಎದ್ದುಹೋಗಿ ಬರುವವರು. ಇಂಥವರಿಂದಾಗಿ ಸಂಗೀತ ಸಭೆಗಳು ವಿಶೇಷ ಕಳೆಕಟ್ಟುತ್ತವೆ ! ಇವರನ್ನು ಕುಳಿತ ಕಡೆ ಅಚಲರನ್ನಾಗಿ ಮಾಡಲು ಸಂಗೀತಗಾರ ತನ್ನ ಶಕ್ತಿಸಾಮರ್ಥ್ಯವನ್ನೆಲ್ಲ, ಪ್ರತಿಭೆ ಪಾಂಡಿತ್ಯಗಳನ್ನೆಲ್ಲ, ಪ್ರದರ್ಶಿಸುವ ಸನ್ನಾಹ ಮಾಡುತ್ತಾನೆ. ನನ್ನಂಥ ಚಾತಕಪಕ್ಷಿಗಳಿಗೆ ರಸವೃಷ್ಟಿಯೇ ಲಭಿಸುತ್ತದೆ.

ಸಂಗೀತ ಸಭೆಯಲ್ಲಿ ಏನು ಮಾಡಿದರೂ ತಪ್ಪಿಲ್ಲವೆಂದು ತಿಳಿಯಬೇಡಿ, ನನ್ನ ಮೇಲಿನ ವಾಕ್ಯಗಳನ್ನು ಓದಿ: ಒಂದು ತಪ್ಪಿದೆ; ಅದು ತಪ್ಪುಮಾತ್ರವಲ್ಲ, ಘೋರಪಾತಕ—ನನ್ನ ಎಣಿಕೆಯಲ್ಲಿ ; ಗಟ್ಟಿಯಾಗಿ ಮಾತನಾಡುವುದು ಕೂಡ ಅಂತಹ ತಪ್ಪಲ್ಲ, ಆ ತಪ್ಪಿಗೆ ಹೋಲಿಸಿದರೆ; ಈ ತಪ್ಪು ಮಾಡುವವರು ಎಲ್ಲೋ ಕೆಲ ಮಂದಿ ; ಆದ್ದರಿಂದ, ಅಸಾಧಾರಣವಾದ್ದು ; ಅಕ್ಷಮ್ಯ. ಅದು ಏನೆಂದು ಹೇಳಿಬಿಡಲೇನು ? ನಾನು ಹೇಳುವುದಿಲ್ಲ : ನೀವು ನನ್ನಹಾಗೆ ಸಂಗೀತ ಸಭೆಗಳಿಗೆ ಒಂದಕ್ಕೂ ತಪ್ಪದೆ ಹೋಗುವವರಾಗಿದ್ದರೆ, ಅದು ಏನೆಂಬುದು ನಿಮಗೇ ಗೊತ್ತೇ ಇರಬೇಕು. ಇಲ್ಲದಿದ್ದರೆ , ಒಂದು ಸಭೆಗಾದರೂ ಹೋಗಿ; ಅಲ್ಲಿ ಸಂಗೀತವಾಗುವಾಗ ಒಂದು ಕಾದಂಬರಿಯನ್ನೊ ಕಾಲ್ಕ್ಯುಲಸ್ಸನ್ನೊ ಇಲ್ಲವೆ ವೃತ್ತಪತ್ರಿಕೆಯನ್ನೊ ಅದರಲ್ಲಿನ ವಾರಭವಿಷ್ಯವನ್ನೊ ಇಲ್ಲವೆ ರೇಷನ್

ಕಾರ್ಡನ್ನೊ ಹೆಂಡತಿ ಬರೆದ ಕಾಗದವನ್ನೊ ಹಿಡಿದು ಅದರ ಅವಲೋಕನ ವಾಚನ ಪರಿಧ್ಯಾನಗಳಲ್ಲಿ ತಲ್ಲೀನರಾಗಿರುವವರ ಪಕ್ಕದಲ್ಲಿ ಕುಳಿತುಕೊಳ್ಳಿ—ಆಗ ತಿಳಿಯುತ್ತದೆ.

ನಾನು ಕಂಡಿರುವ ಇನ್ನೊಂದು ಸಂಗತಿಯನ್ನು ಹೇಳದೆ ವಿರಮಿಸಿದರೆ ಲೇಖನ ಸ್ವಯಂಪೂರ್ಣವಾಗುವುದಿಲ್ಲ, ನನ್ನ ಮನಸ್ಸಿಗೂ ತೃಪ್ತಿಯಾಗುವುದಿಲ್ಲ. ಸ್ವಲ್ಪ ಸಂಕೋಚಪಡಬೇಕಾದ ವಿಷಯ : ಕ್ಷಮಿಸಬೇಕು. ಎಲ್ಲ ಇತರ ಸಭೆಗಳಂತೆ ಸಂಗೀತ ಸಭೆಗಳಲ್ಲಿಯೂ ಮಹಿಳೆಯರಿಗಾಗಿ ಪ್ರತ್ಯೇಕ ಸ್ಥಳ. ಇತರ ಸಭೆಗಳಿಗೆ ಮಹಿಳೆಯರ ಸಂಖ್ಯೆ ಕಡಮೆ; ಸಂಗೀತ ಸಭೆಗೆ ಕಳೆಕಟ್ಟುವ ಮಟ್ಟಿನ ಸಂಖ್ಯೆಯಲ್ಲಿ ಮಹಿಳೆಯರು ಬರುತ್ತಾರೆ. ನನ್ನ ಕೆಲವರು ಮಿತ್ರರಿದ್ದಾರೆ : ಅವರು ಸಂಗೀತವನ್ನು 'ಕೇಳಲು' ಬರುವುದಿಲ್ಲ, ಸಂಗೀತವನ್ನು 'ನೋಡಲು' ಬರುತ್ತಾರೆ. ಹಾಡುವ ವ್ಯಕ್ತಿಯೂ ಮಹಿಳೆಯೇ ಆಗಿಬಿಟ್ಟರೆ ಈ 'ನೋಟ' ಅವರಿಗೆ ದ್ವಿಗುಣವಾಗುತ್ತದೆ. ಸಂಗೀತಗಾರರು ಹಾಡುವ ಕಲ್ಯಾಣಿ, ಲಲಿತ, ದೇವಮನೋಹರಿ, ವಸಂತ,—ಇವೇ ಮೊದಲಾದ ಕೆಲವು ರಾಗಗಳು ರೂಪ ತಳೆದು 'ರಾಗಿಣಿ'ಯರಾಗಿ ಅವರಿಗೆ ಪ್ರತ್ಯಕ್ಷವಾಗಿರುತ್ತವೆ! ಅವರು ಸಂಗೀತ ವನ್ನು ನೋಡಿದ್ದೂ ನೋಡಿದ್ದೆ! ನಾನೂ ನೇತ್ರೇಂದ್ರಿಯ ಚಾಪಲ್ಯಕ್ಕೆ ಎಲ್ಲರಂತೆ ಒಳಗಾಗತಕ್ಕವನೇ. ಆದರೂ, ಶ್ರವಣೇಂದ್ರಿಯ ಸುಖಕ್ಕಾಗಿಯೇ ಉದ್ದೇಶಿಸಿ ಹೋಗಿರುವಾಗ ಆ ಸುಖವನ್ನು ಇನ್ನೊಂದು ಬಗೆಯ ಸುಖಕ್ಕಾಗಿ ಬಲಿಕೊಡ ಲಾರೆ. ಕಾವ್ಯ ಕನ್ನಿಕೆಯೊಡನೆ ರಮಿಸುತ್ತಿರುವಂದು ಕೈ ಹಿಡಿದ ಹೆಂಡತಿಯೇ ನನಗೆ ದೂರವಾಗುವಳು : ಇದು ನನ್ನ ಜಾಳಿ !

ಸಂಗೀತದ ಸ್ವಾರಸ್ಯ ಬೇಕಾದರೆ, ಕಣ್ಣುಮುಚ್ಚಿ ಕಿವಿ ತೆರೆದಿರಬೇಕು ; ಸಂಗೀತದ ಸಭೆಯ ಸ್ವಾರಸ್ಯ ಬೇಕಾದರೆ, ಕಿವಿ ಮುಚ್ಚಿ ಕಣ್ಣು ತೆರೆದಿರಬೇಕು. ಸಂಗೀತ ಸಭೆಗಳ ಸ್ವಾರಸ್ಯ, ವೈವಿಧ್ಯ, ಅನೇಕವೇಳೆ ನನ್ನ ಕಿವಿ ಮುಚ್ಚಿ ಕಣ್ಣು ತೆರೆಯಿಸಿವೆ. ಈ ಅಂಶ ಈ ಹೊತ್ತಿಗೆ ನಿಮಗೆ ವೇದ್ಯವಾಗಿರಬೇಕು.

ವೈಜ್ಞಾನಿಕ ವಿಕ್ರಮಗಳು

ಎನ್ಕೆ

ಬಹುಶಃ ವಿಜ್ಞಾನಿ ಇನ್ನು ಕೆಲವೇ ದಿನಗಳಲ್ಲಿ ಪ್ರಕೃತಿಯ ರಹಸ್ಯಗಳನ್ನು ಒಂದೂ ಬಿಡದಂತೆ ಬಯಲಿಗೆಳೆದು ಎಲ್ಲಿಯೊ ಅಡಗಿ ಕುಳಿತಿದ್ದ ಆಲ್‌ಮೈಟ ದೇವರನ್ನು ಬಹಿರಂಗಕ್ಕೆಳೆದು ಬಿಡಬಹುದು. ಇಲ್ಲದಿದ್ದರೆ ಏನ್ರಿ? ನಾವೆಲ್ಲ ಗರುಡ ಪುರಾಣಗಳಲ್ಲಿ ಕೇಳ್ತಾ ಇರಲಿಲ್ಲವೆ—ಪುಣ್ಯ ಜೀವಿಗಳು ಇಹದಿಂದ ಪ್ರಾಣೋತ್ಕ್ರಮಣವಾದ ಮೇಲೆ ಚಂದ್ರಲೋಕಕ್ಕೆ ಹೋಗುತ್ತಾರೆ ಅಂತ? ಇಚ್ಛಾಮರಣಿಯಾದ ಭೀಷ್ಮರು ಉತ್ತರಾಯಣದವರೆಗೂ ಕಾದಿದ್ದು ಆ ಮೇಲೆ ಪ್ರಾಣಾರ್ಪಣೆ ಮಾಡಿ ಪರಂಧಾಮವನ್ನೈದಿದರು ಅಂತ ಓದಿಲ್ಲವೆ ನಾವು? ಆಮೇರೆಗೆ ಬಹುಶಃ ಭೀಷ್ಮಾಚಾರ್ಯರು ಚಂದ್ರಲೋಕದಲ್ಲಿ ನಮ್ಮ ಮುಂ ಬರುವ ಚಂದ್ರಯಾನಿಗಳ ಕಣ್ಣಿಗೇಕೆ ಬೀಳಬಾರದು? ಅಲ್ಲಾರೀ ಹಾಗೇ ಏನಾದರೂ ಆಗಿಬಿಟ್ರೆ ಏನಾದೀತು ಅಂತ? ಹಾಗೆಯೆ ಮಂಗಳಲೋಕದಲ್ಲಿಯೂ ಜೀವರಾಶಿಗಳಿದ್ದಿರಬೇಕು ಅಂತಾರೆ. ಅಲ್ಲಿಗೂ ಒಂದು ಸುಪ್ರಭಾತದಲ್ಲಿ ಬಾಹ್ಯಾಕಾಶ ನೌಕೆಯೊಂದು ದೌಡು ಮಾಡಿತು ಅಂತ ಇಟ್ಟುಕೊಳ್ಳಿ, ಆಗ ಮಂಗಳಲೋಕದಲ್ಲೆಲ್ಲಾ ಮುಕ್ತ ಜೀವಿಗಳಾದ ನಮ್ಮ ಪ್ರಾಚೀನ ಪಿತೃಗಳೆ ವಾಸವಾಗಿದ್ದರೆ ಅವರನ್ನೂ ಭೂಲೋಕಕ್ಕೆ ಕರತರಬಹುದಲ್ಲವೇ? ಯಾರಿಗೆ ಗೊತ್ತು, ಪುರಂದರದಾಸರು 'ಯಾಕೆನ್ನ ಈ ಲೋಕಕೆಳೆತಂದೆ ಹರಿಯೆ?' ಅಂತ ಮತ್ತೆ ಹಾಡತೊಡಗುತ್ತಾರೊ ಏನೊ ಅಂತೂ ಪರಮಾತ್ಮನ ಯೋಗ ಮಾಯೆಯ ತೆರೆಯನ್ನು ಹರಿದು, ಹರಿಯನ್ನು ಹೊರಗೆಳೆಯುವ ಧಾಡಸೀ ಕೃತ್ಯ ದಲ್ಲಿ ತೊಡಗಿದ್ದಾನೆ ಈ ವಿಜ್ಞಾನಿ, ಬಾಹ್ಯಾಕಾಶಯಾನಿ. ಬಹುಶಃ ಮುಂಬರುವ ಗೋಕುಲಾಷ್ಟಮಿಯ ಹೊತ್ತಿಗೆ ಮಂಗಳಲೋಕದಲ್ಲಿ ಮಾನವನು ಹೆಜ್ಜೆ ಇಟ್ಟಿರುತ್ತಾನೆ. ಯೋಗಮಾಯೆಯಿಂದ ಆವೃತವಾದ ತನ್ನನ್ನು ಅಬುದ್ಧ ಲೋಕವು ಮೌಢ್ಯದಿಂದಾಗಿ ಅರಿಯದು—ಎಂದಿದ್ದಾನಲ್ಲವೆ ಆ ಗೀತಾಕಾರ? ಇನ್ನು ಎಲ್ಲಿ ಅಡಗಿ ನಿಲ್ಲುತ್ತಾನೆ?

ಇನ್ನೊಂದು ವಿಷಯ, ಇಲ್ಲಿಂದ ಪ್ರಯಾಣ ಬೆಳಸಿದ ಪ್ರೇತಾತ್ಮಗಳೆಲ್ಲವೂ ಬಾಹ್ಯಾಕಾಶದ ಒಂದಾನೊಂದು ಲೋಕದಲ್ಲಿ ಗೋಚರಿಸುವ ಸಾಧ್ಯತೆ ಇರುವಂತೆ, ನಮ್ಮ ಪ್ರಾಚೀನ ಋಷಿಗಳು, ಪಿತೃಗಳು, ರಾಜರು, ಕವಿ, ಗಮಕಿ, ವಾದಿ, ವಾಗ್ಮಿಗಳು ಆಡಿದ ಒಂದೊಂದು ನುಡಿಯೂ ನಾದಬಿಂದುವಾಗಿ ಆಕಾಶದಲ್ಲೆ ಅಡಗಿರುತ್ತದಂತೆ. ಆ ಪ್ರಕಾರ ಅತ್ಯಂತ ಸೆನ್ಸಿಟಿವ್ ಮೈಕ್ರೋಫೋನ್ ಯಂತ್ರದೊಡನೆ ಬಾಹ್ಯಾಕಾಶಕ್ಕೆ ಉಡ್ಯಾಣ ಮಾಡಿ ಅಲ್ಲಿ ಆ ಮೈಕ್ರೋಫೋನ್ ಇಟ್ಟಿದ್ದಾದರೆ ನಮ್ಮ ತಲೆ ತಲಾಂತರದ ಹಿರಿಯರೆಲ್ಲರ ಧ್ವನಿಗಳನ್ನ ಮುದ್ರಿಸಿಕೊಳ್ಳಲು ಸಾಧ್ಯವೇಕಾಗಬಾರದು ? ಒಂದು ಪ್ರಶ್ನೆ ಬರಬಹುದು. ಆ ನಾದಸಾಗರದಲ್ಲಿ ಎಲ್ಲ ಶಬ್ದಗಳು ಅಲೆಯಲೆಯಾಗಿ ಲೀನವಾಗಿ ಹೋಗಿರುವಾಗ ಒಂದರಿಂದ ಇನ್ನೊಂದನ್ನು ಬೇರ್ಪಡಿಸುವುದು ಹೇಗೆ ಸಾಧ್ಯ ಅಂತ. ಆದರೆ ಇಷ್ಟೆಲ್ಲ 'ಫಿಲ್ಟರ್' ಯಂತ್ರಗಳು ಶೋಧಿಸಲ್ಪಟ್ಟಾಗ ಆ ನಾದ ಸಮುದ್ರದಿಂದ ನಮ್ಮ ನಮ್ಮ ಪಿತೃಗಳ ಧ್ವನಿಗಳನ್ನು ಬೇರು ಸಹಿತ ಬೇರ್ಪಡಿಸಲು ಸಾಧ್ಯವಾಗಬಾರದೇಕೆ ? ಎಲ್ಲಿಂದಲೋ ಹಾರಿ ಬರುತ್ತಿರುವ ಹಾರಾಡುವ ತಟ್ಟೆಗಳು, ನಮ್ಮ ಪಿತೃಗಳು ಮಂಗಳಲೋಕದಿಂದ ಕಳಿಸುತ್ತಿರುವ ಉಪ್ಪಿಟ್ಟಿನ ತಟ್ಟೆಗಳೇಕಾಗಿರಬಾರದು ? ನವೀನ ಮಾದರಿಯ 'ದಿಢೀರ್' ಉಪ್ಪಿಟ್ಟನ್ನು ತಯಾರಿಸುವ ಹೊಸದೊಂದು ಬಗೆಯ ಸಿಂಥೆಟಿಕ್ ರವೆಯನ್ನು ಶೋಧಿಸಿ ಉಪ್ಪಿಟ್ಟು ಮಾಡಿ ತಿಂದು, ಆ ತಟ್ಟೆಯನ್ನು ತಮ್ಮ ಕಿರಿ ಮರಿ ಮಕ್ಕಳು–ಮರಿಗಳಿಗೆ ಅಂತ ಯಾಕೆ ಕಳಿಸಬಾರದು ?

ಜಗತ್ತಿನಲ್ಲಿ ಬುದ್ಧಿವಂತನಾದ ಭಗವಂತನ ಜಗತ್ತಿನಲ್ಲಿ ಶೋಧವಾಗೋದು ಅಂತ ಯಾವುದೂ ಇದ್ದ ಹಾಗೆ ಇಲ್ಲ. ಎಲ್ಲವೂ ಆಗಿಯೇ ಬಿಟ್ಟಿರುತ್ತದೆ. ನಮ್ಮ ಕಣ್ಣಿಗೆ ಮಾತ್ರ ಹೊಸತಾಗಿ ಗೋಚರವಾಗಿ ಅದು ಶೋಧವಾದ ಹಾಗೆ ಕಾಣುತ್ತದೆ. ಮನುಷ್ಯ ಭಗವಂತನ ಸೃಷ್ಟಿಯ ಜಾಡು ಹಿಡಿದುಕೊಂಡೇ, ತನ್ನ ವಿಶ್ವಾಮಿತ್ರನ ಸೃಷ್ಟಿಯನ್ನು ರಚಿಸುತ್ತಾನೆ ಅನ್ನಬೇಕು. ಈಗ 'ಬ್ರೇನ್' ಎಂಬ ವಸ್ತುವನ್ನೇ ತೆಗೆದುಕೊಳ್ಳಿ. ಜಗತ್ತಿನಲ್ಲಿ ಈಗ ಒಟ್ಟು ತೊಂಬತ್ತು ಸಾವಿರದಷ್ಟು ಎಲೆಕ್ಟ್ರಾನಿಕ್ ಮೆದುಳುಗಳು ಸಿದ್ಧವಾಗಿವೆಯಂತೆ. ಈ ಬ್ರೇನ್‌ಗಳು ಮನುಷ್ಯ ಮಿದುಳಿನ ಪ್ರತಿಫಲಗಳು. ಮನುಷ್ಯನ ಮೆದುಳು

ತೆಗೆದು ಇಂತಹ ಅತ್ಯದ್ಭುತ ಅಣುಶಕ್ತಿಯ ವಿದ್ಯುತ್‌ಚಾಲಿತ ಮೆದುಳೊಂದನ್ನು ಕಸಿ ಮಾಡಿದರೆ ಮನುಷ್ಯ ಏನಾದಾನು? ಏನು ಮಾಡಬಹುದು.

ಕಂಪ್ಯೂಟರಗಳನ್ನೆ ತೆಗೆದುಕೊಳ್ಳಿ. ಮಾನವ ವಯೋಮಾನಕ್ಕನುಗುಣವಾದ ಸ್ಮರಣ ಶೈಥಿಲ್ಯ ಇವಕ್ಕಿಲ್ಲ. ಎಲ್ಲಿಯಾದರೂ ಏನಾದರೂ ಒಂದಿಷ್ಟು ತಪ್ಪು ತಡೆ ಆಯಿತೊ ಕೆಂಪು ದೀಪ ಬಂತೇ. ಈಗೀಗಲಂತೂ ಕಂಪ್ಯೂಟರಗಳು ಕೆಲಸ ಮಾಡದ ಕ್ಷೇತ್ರವಿಲ್ಲ. ಬಾಹ್ಯಾಕಾಶ ಯಾನಿಗಳು, ವಿಮಾನ ಚಾಲಕರು, ವಿದ್ಯಾಲಯಗಳ ಪರೀಕ್ಷಾಮಂಡಲಿಗಳು. ಇಲೆಕ್‌ಟ್ರಿಕ್ ಮೀಟರ್ ರೀಡರುಗಳು—ಇಷ್ಟೇಕೆ ಕನ್ಯಾನ್ವೇಷಣೆಗೂ ಕಂಪ್ಯೂಟರ್ ಸಹಾಯ ಮಾಡುತ್ತವೆಯಂತೆ. 'ರತ್ನಂ ಸಮಾಗಚ್ಛತು ಕಾಂಚನೇನ' ಎಂದ ಕಾಳಿದಾಸ. 'ಚಹಾದ ಜೋಡಿ ಚೂಡಾಧಾಂಗ' ಎಂದರು ಅಂಬಿಕಾತನಯರು. ಈಗ ಈ ಕಂಪ್ಯೂಟರ ಯಂತ್ರಗಳು ಇಂತಹ ಜೋಡಿಗಳನ್ನು ಹುಡುಕಿಕೊಡುತ್ತವೆಯಂತೆ. ಜೋಡಿ ಎಂದರೇನು? ಯಾವ ಉಸಮೆ ಇದಕ್ಕೆ? ಕ್ರೌಂಚಮಿಥುನಗಳೆ? ಚಕ್ರವಾಕಗಳೆ? ಊಹೂಂ, ಚಪ್ಪಲಿಯಂತಹ ಜೋಡಿಗಳು. ಒಂದರ ಅಟ್ಟೆ ಒಂದಿಷ್ಟು ಸಮೆದಿದ್ದರೆ, ಇನ್ನೊಂದರದೂ ಅಷ್ಟೆ ಸಮೆದಿರಬೇಕು–ಹಾಗೆ.

ನನಗೊಮ್ಮೆ ಎನ್ನಿಸುತ್ತದೆ; ಈ ಸ್ವಯಂಚಾಲಿತ ಯಂತ್ರಗಳ ಮಾನವ ಶರೀರವೂ ಒಂದು ಸಿದ್ಧಿಯಾಗುವ ಕಾಲ ದೂರವಿಲ್ಲ ಅಂತ. ಪ್ಲಾಸ್ಟಿಕ್ ದೇಹ! ಪ್ಲಾಸ್ಟಿಕ್ ಎಷ್ಟು ನುಣುಪಾಗಿರುತ್ತದೆ ನಿಮಗೆ ಗೊತ್ತು ತಾನೆ? ಇಂತಹ ಒಂದು ಹೆಣ್ಣು ದೇಹ ತಯಾರಾಯಿತು ಎನ್ನಿ. ಅದೇ ಒಂದು 'ಈವ್' ಇದ್ದಂತೆ – ಹೊಸಲೋಕಕ್ಕೆ, ವಿಜ್ಞಾನಯಂತ್ರದ ಹೊಸ ವಿಶ್ವಾಮಿತ್ರ ಲೋಕಕ್ಕೆ.

ಈ ಪ್ಲಾಸ್ಟಿಕ್ ದೇಹಕ್ಕೆ ಎಲೆಕ್ಟ್ರಾನಿಕ್ ಬ್ರೇನ್ ಒಂದನ್ನು ಕೂಡಿಸಿ ಪ್ರೇಮದ ಕೆನೆಯಿಂದ ರಚಿಸಿದ ಒಂದು ಕಸಿ ಹೃದಯವನ್ನು ಜೋಡಿಸಿದರೆ ಸಾಕಲ್ಲೆ? ಪ್ಲಾಸ್ಟಿಕ್ ರೂಪವೆಂದರೂ ಹವಣಾದ ಮೂಗು, ಹವಣಾದ ಹಣೆ, ಅಗಲವಾದ ಕಣ್ಣು, ಹದವಾದ ಮಿದವಾದ ಎದೆ, ಜಡಿದಾದ ನೀಳ ಜಡೆ— ಅಂತೂ ಬ್ರಹ್ಮನಿಗಿಂತಲೂ ಬುದ್ಧಿಯಲ್ಲಿ ಸುಧಾರಿಸಿದ ಇಂದಿನ ಕಲ್ಪನಾ ಶಿಲ್ಪ ಊಹಿಸಬಹುದಾದ ಬೆಡಗು ಬಿನ್ನಾಣಗಳ ಪ್ರತಿಮೆ ಎನ್ನುವಂತೆ ಒಂದು ಎಲೆಕ್ಟ್ರಾನಿಕ ಈವ್ ತಯಾರಾದರೆ, ಅದಕ್ಕೆ ಒಂದು ಸರಿತೂಗುವ ಆ್ಯಡಂ

ಒಬ್ಬನನ್ನು ಕಂಪ್ಯೂಟರ್ ಸಹಾಯದಿಂದ ಕಂಡುಹಿಡಿಯಬಹುದು. ಸೇಬು ಹಣ್ಣನ್ನು ಎಲ್ಲಿಂದಲಾದರೂ ದೊರಕಿಸಬಹುದು ಬಿಡಿ. ಕಾಶ್ಮೀರ ಭಾರತದ ಅಂಗವಾಗಿರುವವರೆಗೂ ಸೇಬುಗಳಿಗೇನು ಕೊರತೆ ; ಸೇಬು ಇಲ್ಲದಿದ್ದರೆ ಸೀಬೆ ಹಣ್ಣು, ಯಾವುದೇನು. ಪಾಪಕ್ಕೆ ಒಂದು ಹಣ್ಣು, ಶಾಪಕ್ಕೆ ಒಂದು ಹೆಣ್ಣು ಸಾಕಲ್ಲ. ಹೀಗೆ ವಿದ್ಯುತ್‌ಚಾಲಿತ ಅದಾಂ ಮತ್ತು ಈವ್ ನಿರ್ಮಾಣಗೊಂಡು ಪ್ರಣಯಕ್ಕೆ ಮೊದಲು ಮಾಡಿದ ಮೇಲೆ ಟೆಸ್ಟ್ ಟ್ಯೂಬ್ ಬೇಬಿಗಳ ತರಹ ನಮ್ಮ ಇಚ್ಛಾಶಕ್ತಿಯಿಂದ ಬೇಕಾದಾಗಷ್ಟೇ ಸ್ಪೇಸಿಂಗ್ ತತ್ವಕ್ಕೆ ಅನುಗುಣ-ವಾಗಿ ದೀರ್ಘಕಾಲಿಕ ಬೇಬಿಗಳನ್ನು ಪಡೆಯಬಹುದು. ಮುಂದೆ ಈ ಬೇಬಿಗಳು ಬೃಹದಾಕಾರವಾಗಿ ಬೆಳೆದು ತಮ್ಮವೇ ಒಂದು ಪ್ರಪಂಚ ನಿರ್ಮಿಸಿಕೊಳ್ಳಬಹುದು, ಎನ್ನಿ. ಆ ಲೋಕಕ್ಕೆ ಏನು ನಾಮಕರಣ ಮಾಡುತ್ತೀರಿ ?

ಎಲ್ಲೀದು ಸಾರ್ ಮೊದಲು ಹೇಳಿದ ಮಾತನ್ನು ನಾನು ಮರೆತರೂ ನೀವೂ ಮರೆತುಬಿಟ್ಟಂತೆ ತೋರುತ್ತದಲ್ಲ ? ಅಲ್ಲಾರೀ ಈ ವಿಜ್ಞಾನಿ ಹೊಸ ಹೊಸ ಗ್ರಹಗಳ ಮೇಲೆ—ಲೋಕಗಳ ಮೇಲೆ ದೌಡು ಮಾಡುತ್ತಿರುವ ಸಂದರ್ಭದಲ್ಲಿ ಎಲ್ಲಿಯೊ ಬ್ರಹ್ಮನೆ ಏಕೆ ಆತನಿಗೆ ಗಂಟು ಬೀಳಬಾರದು ? ಆಗ ಮಾತ್ರ ಸಂಚಾಯಿತಿ ! ಬ್ರಹ್ಮ ತನ್ನ ಸೃಷ್ಟಿಗೆ ತಾನೇ ನಾಚಿ ವಿಜ್ಞಾನಿ ಮಾನವನಿಗೆ ಭಲೇ ಕಣೋ, ಅಂತೂ ನನ್ನನ್ನು ಶೋಧಿಸಿದೆ. ನನ್ನ ರಹಸ್ಯ ಭೇದಿಸಿದೆ. ನಿನ್ನ ಎಲೆಕ್ಟ್ರಾನಿಕ್ ಆದಂ ಮತ್ತು ಈವ್ ಇವರುಗಳಿಗೆ ಎಲ್ಲಾ ಇದೆ. ಮಕ್ಕಳೂ ಇದ್ದಾರೆ. ಆದರೆ ಆತ್ಮ ಅನ್ನೋದು ಮಾತ್ರ ಇಲ್ಲ, ತಕ್ಕೊ ಈ ಅಣುವಿನ ಅಣುಯಂತ್ರ ಇದೆ ನೋಡು, ಇದರಲ್ಲಿ ಆತ್ಮಗಳನ್ನು ನಿರ್ಮಿಸುವ 'ಎಸೆನ್ಸ್' ಇದೆ. ಅದನ್ನೇ ಒಂದಿಷ್ಟು ಹಸಿಹೃದಯಕ್ಕೆ ಜೋಡಿಸಿ ಬಿಡು ಆಯಿತು. ವಿಜ್ಞಾನ ಅನ್ನೋದು ಆಧ್ಯಾತ್ಮದ ಒಂದು ಮೆಟ್ಟಿಲೇ ಆಗಿದೆ. ಹೊಸ ದೇವ ಮಾನವ ಅವತಾರ ಆಗೋದಿತ್ತು. ನಾನು ತಡೆಹಿಡಿದಿದ್ದೆ. ಈಗ ಅದು ಸಾಧಿಸಿದಂತಾಯಿತು, ಎಂದಾಗ ವಿಜ್ಞಾನಿ ಮಾನವನಿಗೆ ಎಷ್ಟು ಹರುಷವಾಗ ಬೇಡ ? ಬ್ರಹ್ಮನೂ ಒಬ್ಬ ಮಹಾ ವಿಜ್ಞಾನಿಯೆ, ಆತನ ಪ್ರಯೋಗ ಶಾಲೆ, ಅದೂ ಮಹಾ ಪ್ರಯೋಗಶಾಲೆ ಈ ಸೃಷ್ಟಿ, ಈ ಬ್ರಹ್ಮಾಂಡ. ಬ್ರಹ್ಮನೇ ಮನುಷ್ಯನನ್ನು ನಿರ್ಮಿಸಿದ, ಉಳಿದ ಚರಾಚರರೊಂದಿಗೆ. ಆದರೆ ಈ ಮನುಷ್ಯ, ಮಹಾಘಾಟಿ ನೋಡಿ ಈತ. ಉಳಿದ ದೇವತೆಗಳನ್ನೆಲ್ಲ ತಾನೇ ನಿರ್ಮಿಸಿಬಿಟ್ಟ.

ಬ್ರಹ್ಮ ಮನುಷ್ಯನಿಗೆ ಒಂದು ತಲೆ ಕೊಟ್ಟರೆ ಮನುಷ್ಯ ತನ್ನನ್ನು ಸೃಷ್ಟಿಸಿದ ಬ್ರಹ್ಮನಿಗೆ ನಾಲ್ಕು ತಲೆಗಳನ್ನು, ರಾವಣನಿಗೆ ಹತ್ತು ತಲೆಗಳನ್ನು ಕೊಟ್ಟ. ಶಿವನಿಗೆ ಮೂರು ಕಣ್ಣು ಕೊಟ್ಟ. ಹ್ಯಾಗಿರುತ್ತದೋ ನೋಡೋಣ ಅಂತ. ಮುಕ್ಕಣ್ಣ ಒಳ್ಳೇ ಕವಿಯೂ ಆಗಿದ್ದಿರಬೇಕು. ನಾದಯೋಗಿ ಅಲ್ಲವೆ ಆತ. ಬರಬರುತ್ತ ಮನುಷ್ಯ ಮೂವತ್ತುಮೂರು ಕೋಟಿ ದೇವತೆಗಳನ್ನು ನಿರ್ಮಾಣ ಮಾಡಿದ. ಸಂಖ್ಯಾಸ್ಫೋಟವಾಯಿತೋ ಏನೊ ಅಷ್ಟಕ್ಕೆ ದೇವತೆಗಳ ಕುಟುಂಬ ಯೋಜನೆ ಮಾಡಿಬಿಟ್ಟ. ಬ್ರಹ್ಮನೇನು ಕಡಿಮೆ ಅಂತೀರಿ. ಮಾನಸ ಪುತ್ರರನ್ನೆ ನಿರ್ಮಾಣ ಮಾಡಲು ಶುರು ಮಾಡಿದ.

ಹೀಗೆ ಸೃಷ್ಟಿಯ ಆದಿಕಾಲದಿಂದಲೂ ಸೃಷ್ಟಿಕರ್ತನಿಗೂ ಸೃಷ್ಟ ಮಾನವನಿಗೂ ಪೈಪೋಟಿ ಸೃಷ್ಟಿಯನ್ನು ನಿರ್ಮಿಸಿದವನು ಅಡಗಿ ಕೂಡೋದ ಅಂದ್ರೆ ಏನ್ರಿ ? ಗ್ರಂಥ ಸಿಕ್ಕು ಗ್ರಂಥಕರ್ತನೆ ಸಿಗದಿದ್ದರೆ ಹ್ಯಾಗೆ ? ಸಂಶೋಧಕ ಬುದ್ಧಿಯ ಮನುಷ್ಯ ಎಲ್ಲಿ ಸುಮ್ಮನೆ ಕೂಡುತ್ತಾನೆ ? ಹೀಗಾಗಿ ಲಾಗಾಯತಿನಿಂದಲೂ ಮನುಷ್ಯ ತನ್ನನ್ನು ಹಡೆದ ಪ್ರಪಿತಾಮಹನನ್ನು ಕಾಣಬೇಕೆಂದು ಹೊರಟ. ಸೂರ್ಯ-ಚಂದ್ರರಲ್ಲಿ ಬಾನಿಟ್ಟ ಅಂತ ಶೋಧಿಸಿದ. ಮಂಜು ಮೋಡಗಳಲ್ಲಿ, ಅಗ್ನಿ-ಪೂರಗಳಲ್ಲಿ ಹುಡುಕಾಡಿದ. ವೇದಮಂತ್ರಗಳಲ್ಲಿ ಹುಡುಕಿದ. ಪರಮಾತ್ಮ ಸಿಗಲಿಲ್ಲ. ಬಿಡು-ಎಂದ ಮನುವು ವಿಜ್ಞಾನಿಯಾದ. ಪ್ರಕೃತಿಯ ರಹಸ್ಯಗಳನ್ನು ಬಗಿದು ಬೆದಕಿ ಕೆದಕಿ ನೋಡತೊಡಗಿದ. ಒಂದೊಂದೆ ರಹಸ್ಯ ಸ್ಫೋಟವಾದಂತೆಲ್ಲ ಪರಮಾತ್ಮನ ಒಂದೊಂದು ಅಂಶ ಬಹಿರಂಗವಾಗತೊಡಗಿತು-ತಿಲದ ಮರೆಯ ತೈಲದಂತೆ ಇದ್ದ ಆತನನ್ನು ಗಾಣದಲ್ಲಿ ಹಿಂಡಿಬಿಟ್ಟ. ನೆಲದ ಮರೆಯ ನಿಧಾನದಂತಿದ್ದ ಆತನನ್ನು ಹುಡುಕುವಂತೆ ಚಿನ್ನದ ಗಣಿಗಳನ್ನು ಅಗಿದ. ಇಷ್ಟೆಲ್ಲ ಆದರೂ ಓಡೋಡಿ ಓಡೋಡಿ ಹೋಗತೊಡಗಿದನಂಬಿ ಕರೆದೊಡೆ ಓ ಎಂಬ ಶಿವನು.

ಈಗ ನೋಡಿ ಸಾರ್ ಸಚ್ಚಿದಾನಂದ ರೂಪಿಯಾದ ಈತ ವಿಜ್ಞಾನಿಯ ಜಾಜ್ವಲ್ಯ ಬುದ್ಧಿಶಕ್ತಿಯ ಮುಂದೆ ಹೆಳವನಂತೆ ಬಿದ್ದುಕೊಂಡಿದ್ದಾನೆ. ನವಗ್ರಹಗಳ ಮುಖಾಂತರ ನಮ್ಮನ್ನು ಇದುವರೆಗೂ ದಣಿಸಿ ಕಾಡಿಸಿದ ಈ ಮಾರಾಯಾ ಇನ್ನು ಮೇಲೆ ವಿಜ್ಞಾನಿ ಬೊಂಬೆಗಳಂತೆ ಬ್ರಹ್ಮನ ಮೋರೆಗಳ ತಿರುಗಿಸತೊಡಗಿದನೆಂದರೆ ಆಗ ತಿಳಿಯುತ್ತದೆ ಮೊನ್ನೆ ಮೊನ್ನೆ ಶನಿ ಬದಲಿ

ಆಗಿದ್ದಾನಂತಲ್ರಿ ! ನನಗೀಗ ಹನ್ನೊಂದನೇ ಶನಿ ! ಮುಂದಿನ ಶನಿ ಸಾಡೇ ಸಾತ ! ಆದರೆ ಶನಿಯನ್ನು ಇದ್ದಲ್ಲಿಯೆ ತಡೆದುಬಿಟ್ಟರೆ ಸಾಕಲ್ಲ ! ಮುಟ್ಟದ್ದೆಲ್ಲ ಚಿನ್ನ ! ಚಂದ್ರನನ್ನು ಮುಟ್ಟಿದ ವಿಜ್ಞಾನಿ ಶನಿಯನ್ನು ಮುಟ್ಟಿ ಆತನ ಜಾತಕವನ್ನು ಬರೆಯಬಲ್ಲ] ನನಗೀಗ ಶುಕ್ರದೆಸೆಯೂ ಇದೆ. ಶುಕ್ರದೆಸೆ ಶಾಶ್ವತವಾಗಿ ಉಳಿಯುವಂತೆ ಇಂದು ಸಾಧಿಸಬಲ್ಲವನಾಗಿದ್ದಾನೆ ವಿಜ್ಞಾನಿ. ರೋಗ ರುಜಿನಗಳನ್ನು ಗೆದ್ದು ದೀರ್ಘಾಯುಗಳಾಗಿದ್ದೇವೆ. ಜನನವನ್ನು ಹತೋಟಿಯಲ್ಲಿಟ್ಟುಕೊಂಡಿದ್ದೇವೆ. ಇನ್ನು ಉಳಿದುದು ಮರಣದ ಮೇಲಿನ ಗೆಲುವು ಒಂದೇ ! ಆ ಮೇಲೆ ಮನುಷ್ಯನಿಗೇ ಅಮರ (ಅಮರಾನಿರ್ಜರಾ ದೇವಾಃ– ಇತ್ಯಮರಃ) ಅನ್ನಬೇಕಲ್ಲವೇನು ?

ಭೀತಿಮೀಮಾಂಸೆ

ಪು. ತಿ. ನರಸಿಂಹಾಚಾರ್

"ಕನ್ನಡ ನುಡಿ"ಯ ವಿಶೇಷ ಸಂಚಿಕೆಗೆ ಏನು ಬರೆಯೋಣ ಎಂದು ಆಲೋಚಿಸುತ್ತಿದ್ದಾಗ, ಮನಸ್ಸಿಗೆ ಗೆಲುವಾದ ಯಾವ ವಿಷಯವೂ ಬರಲಿಲ್ಲ. ಅನೇಕ ಪ್ರಶ್ನೆಗಳು ಮಾತ್ರ ತಲೆ ಹಾಕಿದುವು. ಐಶ್ವರ್ಯವಂತರಿಂದ ಬಡವರಿಗೆ ತೊಂದರೆಯೋ, ಬಡವರಿಂದ ಬಡವರಿಗೆ ತೊಂದರೆಯೊ? ಇದನ್ನು ಆಲೋಚಿಸಿ ನಾನು ಬಡವರಿಂದಲೇ ಬಡವರಿಗೆ ತೊಂದರೆ ಎಂಬ ನಿರ್ಧಾರಕ್ಕೆ ಬಂದೆ. ಈ ವಾದಸರಣಿ ಕ್ರಾಂತಿಕಾರಕವಾದುದರಿಂದ ನಾನು ಇಲ್ಲಿ ಈಗ ಬರೆಯುವುದಕ್ಕೆ ಅಂಜುತ್ತೇನೆ. ಅಂಜಿಕೆಯ ಮಾತು ಬಂದಿತಲ್ಲಾ. ಜಗತ್ತು ಯಾರಿಂದ ನಡೆಯುತ್ತದೆ ಎಂಬ ಪ್ರಶ್ನೆಗೆ, ಅಂಜಿ ನಡೆಯುವವರಿಂದಲೇ ಎಂಬ ಉತ್ತರ ಸದುತ್ತರವಲ್ಲವೇ ? ಇಲ್ಲಿ ಕ್ರಾಂತಿಯ ಮಾತಿಲ್ಲ. ಶಕ್ತಿ ಪೂಜೆಯ ಈ ಉತ್ಸವ ದಿನಗಳಲ್ಲಿ ಇದರ ವಿವೇಚನೆಯನ್ನು ನಾನು ಏಕೆ ಸ್ವಲ್ಪ ಮಾಡಬಾರದು. ತಾಳಿದವ ಬಾಳಿಯಾನು—ಸರಿಯೆ, ಯಾರಿಲ್ಲವೆಂದರು ? ಆದರೆ ಅಂಜುವವ ತಾನೆ ತಾಳಿಯಾನು ! ಬಾಳಬೇಕೆಂಬ ಆಸೆಯ ತಳಹದಿಯಲ್ಲಿಯೇ ಅಂಜಿಕೆಯ ಅಸ್ತಿಭಾರವಿದೆ. ಜೀವನಮೀಮಾಂಸೆಗೆ ಈ ಭಯದ ವೇದಾಂತ ಬಹಳ ಮುಖ್ಯ.

ಭಯವನ್ನು ಯಾಕೆ ದುರ್ಗುಣವೆಂದು ಕರೆದರೋ, ಧೈರ್ಯ ಏಕೆ ಸದ್ಗುಣವಾಯಿತೋ, ನನಗಂತೂ ಇನ್ನೂ ಅರ್ಥವಾಗಿಲ್ಲ. ಭಯದಿಂದ ಧೈರ್ಯ ಹುಟ್ಟಿತೊ, ಧೈರ್ಯದಿಂದ ಭಯ ಹುಟ್ಟಿತೋ ಹೇಳುವವರಿದ್ದಾರೆಯೇ ? ತುಪ್ಪಕ್ಕೆ ದೊನ್ನೆ ಆಧಾರವೋ, ದೊನ್ನೆಗೆ ತುಪ್ಪವೋ ಎಂಬ ತರ್ಕ ದಷ್ಟು ಸುಲಭವಲ್ಲ ಈ ಸಮಸ್ಯೆ. ಮೊಟ್ಟೆಯಿಂದ ಕೋಳಿಯೋ ಕೋಳಿಯಿಂದ ಮೊಟ್ಟೆಯೋ ಎನ್ನುವಷ್ಟು ಗಹನ.

ಬ್ರಹ್ಮಾಂಡದ ಸೃಷ್ಟಿ ಲಯಗಳಿಗೆ ಭಯ ಕಾರಣವೋ ಅಲ್ಲವೋ ನನಗೆ ತಿಳಿಯದು. ಅದರ ಸ್ಥಿತಿಗಂತೂ ಭಯವೇ ಮೂಲಕಾರಣ. ಭಯದಲ್ಲಿ

ವೈಷ್ಣವಾಂಶವಿದೆ. "ಭಯಾದಗ್ನಿಸ್ತಪತಿ", "ತೇನ ವಿನಾ ತೃಣಮಪಿ ನ ಚಲತಿ" ಇತ್ಯಾದಿ ಶ್ರುತಿವಾಕ್ಯ ಪ್ರಮಾಣಗಳಿಂದಲೂ ಮತ್ತು "ಭಯಂ ಚಾಭಯಮೇವ ಚ" ಎಂಬ ಗೀತೋಪನಿಷತ್ತಿನ ಭಗದ್ವಾಕ್ಯಗಳಿಂದಲೂ ಇದು ಸಿದ್ಧ. ಭಯವೆಂದರೆ ಭವ, ಅಭಯವೆಂದರೆ ವೈರಾಗ್ಯ—ಪ್ರಪಂಚದಲ್ಲಿ ವಿರಕ್ತರಂತೂ ಅಪರೂಪ. ಅಂದರೆ ಜಗತ್ತು ನಡೆಯುವುದು ಭಯಶಾಲೀನರಿಂದ. ಪ್ರಾಣಕ್ಕಿಂತಲೂ ಪ್ರಿಯವಾದುದು ಯಾವುದು, ಅದನ್ನು ನಡೆಯಗೊಡಿಸುವ ಭಯಕ್ಕಿಂತ ಉಪಕಾರವಾದ ಗುಣ ಮತ್ತಾವುದು ? ಸೂರ್ಯನಿಗೆ ತೇಜಸ್ಸು ಹೇಗೆಯೋ ಹಾಗೆಯೇ ಪ್ರಾಣವಂತನಿಗೆ ಭಯ. ಯಾರಿಗೆ ಪ್ರಾಣದ ಮೇಲೆ ಆಸೆ ಇಲ್ಲವೋ ಆತನಿಗೆ ಮಾತ್ರ ಭಯವಿಲ್ಲ. ಅಂಥವನು ಏನೂ ಇಲ್ಲದವನು. "ನಾಹಮಸ್ಮೀತಿ ಸಾಹಸಂ." ಅಂಥವರ ಮಾತು ಬಾಳಬೇಕೆಂಬ ನಮಗೇಕೆ ? ಅಂಥವರಿಂದ ಲೋಕಕ್ಕೆ ತಾನೆ ಏನು ಪ್ರಯೋಜನ ?

ಪ್ರಪಂಚದಲ್ಲಿ ಯಾವ ಯಾವವಕ್ಕೆ ಆಧ್ಯಾತ್ಮಿಕವಾದ ಬೆಲೆ ಇದೆಯೋ ಅವೆಲ್ಲಕ್ಕೂ ಭೀತರೇ ಆಶ್ರಯರು. 'ದಯವೇ ಧರ್ಮದ ಮೂಲ' ಎಂಬ ಮಾತಿನ ತಥ್ಯ ಸಂದೇಹಾಸ್ಪದವಾಗಿದೆ. ಭಯವೇ ಧರ್ಮದ ಮೂಲ ಎಂದರೆ ಸಮಂಜಸವಾದೀತು. ಪರ್ಷಿಯಾ ದೇಶದ ಪ್ರಾಚೀನ ಮತ ಯಾರಿಂದ ಈವರೆಗೆ ಉಳಿದಿದೆ ? ಭೀತರಾಗಿ ಈ ದೇಶಕ್ಕೆ ಓಡಿಬಂದ ಝುರತುಷ್ಟ್ರಾನು ಯಾಯಿಗಳಿಂವ ಅಲ್ಲವೇ ? ಮುಸಲ್ಮಾನರ ಮತ ಯಾರಿಂದ ಅಭಿವೃದ್ಧಿ ಹೊಂದಿತು ? ಭಯಾರ್ತರು ಅದಕ್ಕೆ ತಲೆವಾಗಿ ತಮ್ಮ ತನುಮನಗಳನ್ನು ಕೋಟಗಟ್ಟಲೆ ತೆತ್ತುದರಿಂದ ತಾನೆ. ಷೇಕ್ಸ್‌ಪಿಯರ್. ಷೆಲ್ಲಿ ಮುಂತಾದ ಪಾಶ್ಚಾತ್ಯ ಜನಾಂಗದ ಕವಿಗಳೂ, ಅವರ ಅಮೋಘವಾದ ಸಂಸ್ಕೃತಿಯೂ, ವಿಜ್ಞಾನವೂ ಯಾರ ಆಶ್ರಯವನ್ನು ಪಡೆದು ಈ ದೇಶದಲ್ಲಿ ಮುನ್ನಣೆ ಪಡೆಯಿತು ? ಆಂಗ್ಲಭೀತರಾದ ನಮ್ಮಿಂದಲ್ಲವೇ ? ಭಕ್ತಿಗೂ ಗೌರವಕ್ಕೂ ಭಯವೇ ಅಲ್ಲವೆ ವಾಹನ ? ಯುದ್ಧಗಳಾಗುತ್ತಿರುವಾಗ ಉಳಿಯುವವರಾರು? ಸೋಲನ್ನೊಪ್ಪಿಕೊಳ್ಳುವವರಾರು? ಸಂಧಿಪ್ರಿಯರಾರು? ಶಾಂತಿ ಯಾರ ಇಷ್ಟ? ನಮ್ಮ ಪುರಾತನ ಸಂಸ್ಕೃತಿಗೆ ಯಾರಿಂದ ಉಳಿವು ? ಎಲ್ಲ ಅಪಾಯಕ್ಕೂ ಹೆದರಿ, ವಿಷಪ್ರಂಪರೆಗಳನು ತಾಳಿಕೊಂಡು, ಎಡವಿದರೆ ಅಂಜುತ್ತಾ,

ಸಮಯ ಬಂದಾಗ ಪಲಾಯನ ಸೂತ್ರವನ್ನು ಅವಲಂಬಿಸುತ್ತಾ, ಕ್ರೋಧ ವಶರಾಗಬೇಕಾದ ಕಾಲದಲ್ಲಿ ಸ್ಥಿತ ಪ್ರಜ್ಞರಾಗುತ್ತಾ, ಅಮೂಲ್ಯವಾದ ಜೀವನ ವನ್ನು ಸಾಹಸಕ್ಕೀಡು ಮಾಡದೆ, ಸಾಮ್ರಾಜ್ಯಗಳು ಉಳಿಯಲಿ ಅಳಿಯಲಿ ಶಾಂತಚಿತ್ತರಾಗಿ, ಬಾಳುವೆಯನ್ನು ಅಂಜಲಿಪ್ರಮುಖವನ್ನಾಗಿ ಮಾಡಿ ನಡೆ ಯುವ ಭಯಶರಣ್ಯರಾದ ನೂರಕ್ಕೆ ತೊಂಬತ್ತೊಂಬತ್ತು ಜನ ಸತ್ಪ್ರಜೆಗಳಿಂದ ಲ್ಲವೇ ? "ಶತೇಷು ಜಾಯತೇ ಶೂರಃ" ಎಂಬ ಸುಭಾಷಿತ ಈಗ ನೆನಪಿಗೆ ಬಂದು ನನ್ನ ಈ ವಾದಕ್ಕೆ ಪೋಷಕವಾಗಿದೆ. ಸೃಷ್ಟಿಶಕ್ತಿಗೆ ಅಂಜಿಕೆಯುಳ್ಳವ ರಲ್ಲಿಯೆ ಹೆಚ್ಚು ವಾತ್ಸಲ್ಯ.

ಅಂದರೆ ಸಭ್ಯ ಜೀವನಕ್ಕೆ ಭಯವೇ ಮೂಲ. ಅದರ ಅಸ್ತಿವಾರದ ಮೇಲೆ ಧರ್ಮ, ಸಂಸ್ಕೃತಿ, ಶಿಸ್ತು, ಶಾಂತಿ, ಇತ್ಯಾದಿ, ಇತ್ಯಾದಿ ಸದ್ಗುಣಗಳು ಮೇಲೆಮೇಲೆ ಗೋಪುರಾಕಾರವಾಗಿ ಬೆಳೆದು ಮುಗಿಲನ್ನು ಮುಟ್ಟಿವೆ. ಇಂಥ ಅಮೂಲ್ಯ ಗುಣಸಂಪನ್ನರಾದ ನಮ್ಮ ಸ್ತ್ರೀಪುರುಷರು ಧನ್ಯರೇ ಸರಿ.

ಆದರೆ ಇದು ಹುಟ್ಟುಗುಣ. ಭೂಗರ್ಭದಲ್ಲಿರುವ ಖನಿಜಗಳಂತೆ, ಇದನ್ನು ವೃದ್ಧಿಮಾಡುವುದು ದುಸ್ಸಾಧ್ಯ. ಬೇಕಾದರೆ ಅಗೆದು ತೋಡಿ ಹೊರತಂದು ಬಳಸಿಕೊಳ್ಳಬಹುದು ಅಷ್ಟೆ. ನಮ್ಮ ಮನಸ್ಸಿನಲ್ಲಿ ಇದರ ಪ್ರಮಾಣ ನಿಯತ ವಾದದ್ದು. ಅದಕ್ಕೆ ಮಿತಿಯುಂಟು. ಅದನ್ನು ಹೊರತುಳುಕಿಸಿದಷ್ಟೂ ಅದರ ಪರಿಮಾಣ ಮನಸ್ಸಿನಲ್ಲಿ ಕಡಿಮೆಯಾಗುತ್ತದೆ. ಚೆಲ್ಲಿಹೋದುದು ಹೋದ ಹಾಗೆಯೇ ಸರಿ; ಅದನ್ನು ತಿರುಗಿ ತಂದುಕೊಂಡು ಮನಸ್ಸಿಗೆ ತುಂಬಿಕೊಳ್ಳುವ ಹಾಗಿಲ್ಲ. ಅದು ಜನತೆಯಲ್ಲಿ ಕಡಿಮೆಯಾದಷ್ಟೂ ರಾಷ್ಟ್ರಕ್ಕೂ ಸಮಾಜ ಸಂಸ್ಕೃತಿಗಳಿಗೂ ಕೇಡು. ಅದರ ಒರತೆ ಇಂಗಿದ ಮನುಷ್ಯ ಕ್ರಾಂತಿಮೂಲ ನಾಗುತ್ತಾನೆ. ಸುವ್ಯವಸ್ಥಿತವಾದ ಯಾವ ಸಂಸ್ಥೆಗೂ ಆತನಿಂದ ಅಪಾಯ. ಜನತೆ ಭೀತಿಪ್ರರೂಢರಾದಾಗಲ್ಲವೇ ನಿರ್ಭೀತ ಪುರುಷರ ಅವತಾರವಾಗಿ ಜಗತ್ಕ್ರಾಂತಿಯಾಗುವುದು ? ಆದುದರಿಂದ ಮಾನವನ ಮನಸ್ಸಿನಲ್ಲಿ ಅದನ್ನು ಆದಷ್ಟು ಸುರಕ್ಷತೆಯಿಂದ ಕಾಪಿಡುವುದು ರಾಜ್ಯತಂತ್ರದ ಪ್ರಮುಖನೀತಿಯಾಗ ಬೇಕು ಎನ್ನಿಸುತ್ತದೆ. ಜನದ ಚಿತ್ತದಿಂದ ಅದರ ಪ್ರಮೋಚನವನ್ನು ಆದಷ್ಟು ಕಡಿಮೆಮಾಡಿ ದೇಶಭದ್ರತೆಗೋಸ್ಕರ ಈ ಅಮೂಲ್ಯವಾದ ಗುಣವನ್ನು ನಾವು

ಅಲ್ಲಿಯೇ ಉಳಿಸಿಕೊಳ್ಳಬೇಕು. ಅನಿವಾರ್ಯವಾದಾಗ ಹೊರತು ಅದನ್ನು ಹೊರತೋಡಬಾರದು. ನಾಡಹಬ್ಬದ ಶಕ್ತಿ ಪೂಜಾಕಾಲದಲ್ಲಿ ನಾವು ಎಲ್ಲರೂ ಈ ವೈಷ್ಣವಾಂಶದ ಸಂಗ್ರಹಣೋಪಾಯವಲ್ಲವೇ ಚಿಂತಿಸಬೇಕಾದುದು !

ಭಯಕ್ಕೆ ಸಲ್ಕೆ ಮಾನವಂ
ಇಲ್ಲ—ಅವನೆ ದಾನವಂ !

ಗೊಣಗುವ ಚಟ

ಎ. ಎನ್. ಮೂರ್ತಿರಾವ್

'ಅಬ್ಬ, ಇದೇನಿದು, ಈ ಸೆಕೆಯ ಉಬ್ಬರ! ಕಳೆದ ಬೇಸಿಗೆಯಲ್ಲಿ ಇಷ್ಟೊಂದು ಸೆಕೆ ಕಾಣಲಿಲ್ಲ. ಇಷ್ಟು ಹೊತ್ತಿಗೆ ಒಂದೆರಡು ಹದ ಮಳೆ ಬರ ಬೇಕಾಗಿತ್ತು. ಹಾಳು ಕಲಿಗಾಲ, ಋತುಧರ್ಮವೇ ಬದಲಾಗಿ ಹೋಯಿತು. ದೈವಶ್ರದ್ಧೆಯಿಲ್ಲ. ಧರ್ಮಶ್ರದ್ಧೆಯಿಲ್ಲ, ಇನ್ನೇನಾಗುತ್ತೆ! ಈ ಹಾಳು ಅಣು ಬಾಂಬುಗಳ ಪ್ರಯೋಗ ಬೇರೆ. ಅದರಿಂದಲೇ ಹೀಗಾಗುತ್ತೋ ಏನೊ. ನೋಡಿ, ಚಳಿ ಮಳೆಗಳನ್ನು ಹೇಗಾದರೂ ತಡೆಯಬಹುದು; ಈ ಸೆಕೆ ಮಾತ್ರ ತಡಿಯು ವುದಕ್ಕಾಗುವುದಿಲ್ಲ."—ಕಳೆದ ಮೇ ತಿಂಗಳಿನಲ್ಲಿ ಯಾರೊಬ್ಬರು ಮತ್ತೊಬ್ಬರನ್ನು ಕಂಡಾಗಲೂ ಬಹುಶಃ ಈ ಬಗೆಯ ಮಾತು ಕೇಳಿಬರುತ್ತಿತ್ತು. ಈ ಮಾತಿನಲ್ಲಿ ಏನೂ ಹುರುಳಿಲ್ಲ. ಕಳೆದ ವರ್ಷದ ಬೇಸಗೆ ಹೆಚ್ಚು ಕಡಿಮೆ ಈ ವರ್ಷದ ಬೇಸಗೆಯಂತೆಯೇ ಇದ್ದಿರಬೇಕು; ಒಂದು ವರ್ಷದ ಅವಧಿಯಲ್ಲಿ ಆಗ ಬಹುದಾದ ಋತುಧರ್ಮದ ಬದಲಾವಣೆ ಅಷ್ಟೇನೂ ಗಮನಾರ್ಹವಾದದ್ದಲ್ಲ; ಧರ್ಮಶ್ರದ್ಧೆಗೂ ಹವಾಗುಣಕ್ಕೂ ಏನೂ ಸಂಬಂಧವಿಲ್ಲ; ಅಣುಬಾಂಬುಗಳ ಸಿಡಿತದಿಂದ ಸೆಕೆ ಹೆಚ್ಚುತ್ತದೋ ಇಳಿಯುತ್ತದೋ, ಅದು ಪ್ರಕೃತಕಾಲದಲ್ಲಿ ವಿಜ್ಞಾನಿಗಳಿಗೂ ಸರಿಯಾಗಿ ತಿಳಿಯದ ವಿಷಯ. ಇದನ್ನೆಲ್ಲಾ ಗೊಣಗುವ ವನೂ ಬಲ್ಲ; ಆದರೆ ಅವನ ಗೊಣಗಾಟಕ್ಕೆ ಈ ತಿಳಿವಳಿಕೆ ಪ್ರತಿಬಂಧಕ ವಾಗಲಾರದು. ಈಗ ಬೇಸಗೆ ಕಳೆದಿದೆ, ಸೋನೆ ಮಳೆ ಹಿಡಿದಿದೆ, ಮೂರು ದಿನಗಳಿಂದ ಸೂರ್ಯರಶ್ಮಿಯೇ ಕಾಣುತ್ತಿಲ್ಲ. ಆದರೆ ಬೇಸಗೆಯನ್ನು ಬಯ್ಯು ತ್ತಿದ್ದವರಿಗೆ ಇದರಿಂದೇನೂ ಆನಂದವಾಗಿಲ್ಲ. 'ಏನು ಹಾಳು ಮಳೆಯೋ! ಹಿಡಿದದ್ದು ಬಿಡಲೇ ಒಲ್ಲದು. ಎಲ್ಲಿ ನೋಡಿದರೂ ಕೊಚ್ಚೆ. ಬೇಸಗೆಯ ಸೆಕೆಯನ್ನು ಹೇಗಾದರೂ ತಡೆಯಬಹುದು, ಒಂದು ಫ್ಯಾನ್ ಹಾಕಿಕೊಳ್ಳ ಬಹುದು. ಈ ಮಳೆ ಹಿಡಿದರೆ ಮಾತ್ರ ಏನೋ ರೇಜಿಗೆ, ಮಂಕುಕವಿದ ಹಾಗಾಗಿಬಿಡುತ್ತೆ. ಅಷ್ಟು ಕಾಣದೆ ನಮ್ಮವರು ಇದನ್ನು ದುರ್ದಿನ ಎಂದು ಕರೆದರೆ!' ಎಂದು ಮಳೆಗಾಲವನ್ನು ಬಯ್ಯುತ್ತಾರೆ.

ಇದು ಶುದ್ಧ ಹುಚ್ಚುತನ ಎನ್ನಬೇಡಿ. ಹೀಗೆ ಗೊಣಗುವವರನ್ನು ನೋಡಿ ನಾವು ನಗುವಂತಿಲ್ಲ. ಏಕೆಂದರೆ, ಪ್ರಾಮಾಣಿಕವಾಗಿ ಆತ್ಮಪರೀಕ್ಷೆ ಮಾಡಿಕೊಂಡರೆ ನಾವು ಅದೇ ವರ್ಗಕ್ಕೆ ಸೇರಿದವರೆಂದು ಒಪ್ಪಲೇ ಬೇಕಾಗುತ್ತದೆ. ಇದರ ತಪ್ಪು ನಮ್ಮದಲ್ಲ, ಭಗವಂತ ಗೊಣಗಾಟಕ್ಕೆ ಅವಕಾಶ ಕೊಡುವಂಥ ವಿಶ್ವವನ್ನು ಸೃಷ್ಟಿಸಿದ್ದಾನೆ, ನಾವೇನು ಮಾಡೋಣ, ಎನ್ನುವಂತೆಯೂ ಇಲ್ಲ. ನಮ್ಮ ಗೊಣಗಾಟ ಸಮರ್ಪಕವಾದ, ಅಸಮರ್ಪಕವಾದ, ಎಲ್ಲ ವಿಷಯಗಳಿಗೂ ನಿಷ್ಪಕ್ಷಪಾತವಾಗಿ ಸಲ್ಲುತ್ತದೆ. ಎವರೆಸ್ಟ್ ಶಿಖರವನ್ನು ಗೆದ್ದದ್ದು ಮಾನವನಿಗೆ ಅದ್ಭುತವಾದ ವಿಜಯ. ವೃತ್ತ ಪತ್ರಿಕೆಗಳಲ್ಲಿ ಅದರ ವರ್ತಮಾನ ಬಂದಾಗ ನನ್ನ ಸ್ನೇಹಿತರೊಬ್ಬರು ಕೇಳಿದರು, 'ಆಯಿತು, ಶಿಖರ ಹತ್ತಿದರು; ಅದರಿಂದ ನಮಗೆ ಬಂದ ಕಿರೀಟವೇನು? ನಮ್ಮ ಹೊಟ್ಟೆ ತುಂಬಿದ ಹಾಗಾಯಿತೆ? ಅಕ್ಕಿ ಬೇಳೆಯ ಬೆಲೆ ವಿಷದ ಹಾಗೆ ಏರುತ್ತಾ ಇದೆ, ನೋಡಿ' ಎಂದು! ನಮ್ಮನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗಿ ಬಿಟ್ಟರೆ, 'ಈ ಸ್ವರ್ಗದಲ್ಲಿ ಹಸಿವೇ ಆಗುವುದಿಲ್ಲ, ಆ ಹಾಳು ಅಮೃತ ಕುಡಿದದ್ದರ ಫಲ!' ಎನ್ನುತ್ತೇವೆ. ಒಂದು ವೇಳೆ ನಮ್ಮ ಸುತ್ತಮುತ್ತ ಎಲ್ಲ ವಿಷಯಗಳಲ್ಲೂ ಅನುಕೂಲವಾದ ವ್ಯವಸ್ಥೆಯಿದ್ದರೆ, ಅದನ್ನು ಪ್ರಯತ್ನ ಪೂರ್ವಕವಾಗಿ ಬದಲಾಯಿಸಿಕೊಂಡಾದರೂ ನಾವು ಗೊಣಗುವುದಕ್ಕೆ ಅವಕಾಶ ಕಲ್ಪಿಸಿಕೊಳ್ಳುತ್ತೇವೆ. ಕೆಲವು ವರ್ಷಗಳ ಹಿಂದೆ ನಾನಿದ್ದ ಸಂಸ್ಥೆಯೊಂದರಲ್ಲಿ ಒಂದು ಕ್ಲಬ್ ಸ್ಥಾಪಿಸಿದ್ದೆವು. ಆ ಕ್ಲಬ್ಬಿನ ಮುಖ್ಯ ಕೆಲಸವೆಂದರೆ, ಕಿತ್ತಲೆ ಹಣ್ಣಿನ ಕಾಲದಲ್ಲಿ ಆ ಹಣ್ಣಿನ ದಾಸ್ತಾನು ಇಟ್ಟು ಸದಸ್ಯರಿಗೆ ದಿನಕ್ಕೆ ಎರಡರಂತೆ ಹಂಚುವುದು. ಇದಕ್ಕೆ ಬೇಕಾದ ಹಣವನ್ನು ನಮ್ಮಿಂದ ವಸೂಲು ಮಾಡುವುದಕ್ಕೆ ಒಬ್ಬನನ್ನು ನಾವೇ ಚುನಾಯಿಸಿದೆವು. ನಾವು ಪ್ರತಿದಿನ ಹಣ ಕೊಡುತ್ತಿದ್ದುದು ನಮ್ಮ ಸ್ವಂತ ಒಪ್ಪಿಗೆಯ ಮೇಲೆ; ದಿನಕ್ಕೆ ಎರಡೇ ಹಣ್ಣು ತೆಗೆದುಕೊಳ್ಳಬೇಕೆಂಬ ನಿಯಮ ನಾವೇ ಖುದ್ದು ರಾಜಿಯಿಂದ ಮಾಡಿಕೊಂಡದ್ದು. ಆದರೆ ಒಂದು ದಿನವಾದರೂ ನಾವು ಗೊಣಗಾಟವಿಲ್ಲದೆ ಹಣ ಕೊಡಲಿಲ್ಲ. ಹಣ ವಸೂಲು ಮಾಡುವವನು ಕೇಳಿದಾಗ 'ದಿನಾ ಇವನದ್ದೊಂದು ವಲಡಿ. ಬೆಳಗ್ಗೆ ಎದ್ದರೆ ಸಾಕು, ಕಾದಿರುತ್ತಾನೆ ಈ ನಕ್ಷತ್ರಿಕ! ನಾವೇನು ಮಠ ಮಾರಿಕೊಂಡು ಓಡಿಹೋಗುತ್ತೇವೆಯೆ? ಕೊಟ್ಟೇ ಕೊಡುತ್ತೇವೆ, ಇವತ್ತಲ್ಲದಿದ್ದರೆ

ನಾಳೆ,' ಎಂದು ಗೊಣಗಿದೆವು. 'ನಮ್ಮ ದುಡ್ಡು, ನಮ್ಮ ಹಣ್ಣು. ಅದರ ಮೇಲೆ ಇವನದ್ದೇನು ಅಧಿಕಾರ? ಇನ್ನೊಂದು ಹಣ್ಣು ಹೆಚ್ಚಾಗಿ ಕೊಟ್ಟರೆ ಇವರಪ್ಪನ ಗಂಟೇನು ಹೋಯಿತು? ನಮಗೇನು ಬಿಟ್ಟಿಕೊಡುತ್ತಾನೆಯೆ? ಚೇಳಿಗೆ ಪಾರುಪತ್ಯ ಕೊಟ್ಟ ಹಾಗಾಯಿತು!' ಎಂದು ಆಕ್ಷೇಪಿಸಿದೆವು. ಕೊನೆಗೆ ಆತ 'ನೀವು ಕೊಡುವುದು ಎರಡಾಣೆ, ಅದನ್ನು ಕೊಟ್ಟೂ ಕೊಡುತ್ತೀರಿ. ಇಷ್ಟೆಲ್ಲಾ ವಾಗ್ವಾದವಿಲ್ಲದೆ ಕೊಡಬಾರದೆ?' ಎಂದು ಆಕ್ಷೇಪಿಸಿದ. ಆಗ ಮನಶ್ಶಾಸ್ತ್ರಜ್ಞನೊಬ್ಬ 'ತಿಂಗಳ ಹಣವನ್ನೆಲ್ಲಾ ಮುಂಗಡವಾಗಿ ಕೊಡುವ ವ್ಯವಸ್ಥೆ ಮಾಡಿಕೊಳ್ಳೋಣ. ನಾಲ್ಕು ರೂಪಾಯಿ ಒಟ್ಟಿಗೆ ಕೊಡಬೇಕಾದಾಗ ಗೊಣಗಿದರೆ ಅದೇನೂ ಅನ್ಯಾಯವಲ್ಲ' ಎಂದು ಸಲಹೆ ಮಾಡಿದ. ಹಾಗೆಯೇ ಮಾಡಿ ಮನಸ್ಸಿಗೆ ತೃಪ್ತಿಯಾಗುವಷ್ಟೂ ಗೊಣಗಿದೆವು. ಒಟ್ಟಿಗೆ ನಾಲ್ಕು ರೂಪಾಯಿ ಕೊಡುವುದು ಕಷ್ಟ. ಆ ಕಷ್ಟವನ್ನು ಎದುರಿಸಿಯಾದರೂ ಸರಿಯೆ, ಗೊಣುಗುವುದಕ್ಕೆ ಅವಕಾಶ ಕಲ್ಪಿಸಿಕೊಳ್ಳುವುದು ನಮಗೆ ಅವಶ್ಯಕವಾಗಿ ಕಂಡಿತು.

ಅಂದ ಮೇಲೆ, ಗೊಣಗಾಟ ಮನುಷ್ಯನಿಗೆ ಸ್ವಾಭಾವಿಕವಾಗಿ, ನೈಸರ್ಗಿಕವಾಗಿ ಬಂದ ಗುಣ, ಅದರ ಹೊಣೆ ನಮ್ಮದಲ್ಲ, ಎಂದಂತಾಯಿತು. ನಮ್ಮ ರಕ್ತದಲ್ಲಿರುವ ಕೆಂಪು ಮತ್ತು ಬಿಳಿಯ ಕಣಗಳಿಗಾಗಿ ನಮ್ಮನ್ನು ದೂರುವುದು ಎಷ್ಟು ಅನ್ಯಾಯವೋ ಗೊಣಗಾಟಕ್ಕಾಗಿ ದೂರುವುದೂ ಅಷ್ಟೇ ಅನ್ಯಾಯ. ಆ ಗುಣ ಕೆಲವರಲ್ಲಿ ಸ್ವಲ್ಪ ಉಲ್ಬಣವಾಗಿ ಕಾಣಬಹುದು; ಆದರೆ ನಮಗೂ ಅವರಿಗೂ ಇರುವ ವ್ಯತ್ಯಾಸ ಕೇವಲ ಪ್ರಮಾಣದ ಹೆಚ್ಚು ಕಡಿಮೆಯ ಮಾತು. ಸ್ವಭಾವವೇನೋ ಎಲ್ಲರಲ್ಲೂ ಒಂದೇ. ಅದನ್ನು ಮನಸ್ಸಿನಲ್ಲಿಟ್ಟುಕೊಂಡೇ ನಾನು ಗೊಣಗಾಡುವವರನ್ನು ವಿಡಂಬನೆ ಮಾಡಲು ಹೊರಟಿಲ್ಲ, ಆ ಮನೋವೃತ್ತಿಯನ್ನು ಸಹಾನುಭೂತಿಯಿಂದ ಪರಿಶೀಲಿಸಲು ಹೊರಟಿದ್ದೇನೆ.

ದೇವರು ನನಗೇಕೆ ಈ ಮನೋವೃತ್ತಿಯನ್ನು ಕೊಟ್ಟ! ಇದರಲ್ಲಿ ಏನೋ ಒಂದು ಉದ್ದೇಶವಿರಬೇಕು. ಅದನ್ನು ತಿಳಿಯಬೇಕಾದರೆ ನಾವು ಗೊಣಗಾಟಕ್ಕೂ ರೇಗಾಟಕ್ಕೂ ಇರುವ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳಬೇಕು. ಇವೆರಡರಲ್ಲಿ ಒಂದಾದರೂ ಎಲ್ಲ ಮನುಷ್ಯರಲ್ಲೂ ಇದ್ದೇ ಇರಬೇಕಾಗುತ್ತದೆ. ಗೊಣಗಾಟವೇ ಮೂಲದೇವರು; ರೇಗಾಟ ಉತ್ಸವ ವಿಗ್ರಹ.

ಗೊಣಗಾಟ ನಮ್ಮಲ್ಲಿ ಸ್ಥಿರವಾಗಿ ನೆಲಸಿ ಸರ್ವದಾ ತನ್ನ ಪ್ರಭಾವವನ್ನು ಬೀರುತ್ತಿರುತ್ತದೆ; ರೇಗಾಟ ಹಠಾತ್ತಾಗಿ ಹೊರಹೊರಟು ಒಂದು ಸುತ್ತು ತಿರುಗಿಕೊಂಡು ಮರಳಿ ಸ್ವಸ್ಥಾನಕ್ಕೆ ಬರುತ್ತದೆ; ಬಂದು ತನ್ನ ಸತ್ವವನ್ನೆಲ್ಲಾ ಮೂಲವಿಗ್ರಹಕ್ಕೇ ಕೊಟ್ಟು ತೆಪ್ಪಗಾಗುತ್ತದೆ. ಉತ್ಸವ ಮೂರ್ತಿಯನ್ನು ಬಿಜಯ ಮಾಡಿಸದೆ, ಅದು ಮೂಲ ದೇವರ ಸತ್ವವನ್ನು ವ್ಯಯ ಮಾಡದಂತೆ ನೋಡಿಕೊಳ್ಳುವುದೇ ಬುದ್ಧಿವಂತಿಕೆಯ ಲಕ್ಷಣ. ರೂಪಕವನ್ನು ಬದಲಾಯಿಸ ಬಹುದಾದರೆ, ರೇಗಾಟವನ್ನು ಬಾಂಬಿಗೆ ಹೋಲಿಸಬಹುದು; ಗೊಣಗಾಟ ವನ್ನು ನಮ್ಮ ದೇಹದಲ್ಲಿ ಸದಾ ನೆಲಸಿ ಮಿತಿಮೀರದೆ ದೇಹವನ್ನು ಕಾಪಾಡುವ ಉಷ್ಣಕ್ಕೆ ಹೋಲಿಸಬಹುದು. ಬಾಂಬಿನ ಕೆಲಸವೇನಿದ್ದರೂ ಅತ್ಯಲ್ಪ ಕಾಲ ದಲ್ಲಿ, ಒಂದೇ ಒಂದು ಸೆಕೆಂಡಿನಲ್ಲಿ ನಡೆದು ಮುಗಿಯುವಂಥಾದ್ದು. ಅದು ಸಿಡಿದಾಗ ಸುತ್ತಮುತ್ತ ಇರುವ ಕೆಲವರು ರೇಗಾಟವನ್ನು 'safety valve' ಎಂದು ಕರೆದು ಸಮರ್ಥಿಸುವುದುಂಟು. ಇದು ತಪ್ಪು ತಿಳಿವಳಿಕೆ. ಅದು ರಕ್ಷಣಾವಸ್ಥೆಯೇನಲ್ಲ, ಸರ್ವ ನಾಶದ ವ್ಯವಸ್ಥೆ. ಅದು ಇತರರನ್ನು ನಾಶ ಮಾಡಿ ತನ್ನನ್ನಾದರೂ ರಕ್ಷಿಸಿಕೊಳ್ಳುವುದಾದರೆ ಅದನ್ನು ಸಮರ್ಥಿಸಬಹುದು. ಆದರೆ ಕೋಪ ಮಿತಿಮೀರಿ ರೇಗುವವನು ಇತರರನ್ನು ಉರಿಸುವಂತೆ ತನ್ನನ್ನೂ ಉರಿಸಿಕೊಳ್ಳುತ್ತಾನೆ. ಕೋಪವು ಭುಗ್ಗನೆ ಜ್ವಲಿಸಿ ತಾನೂ ಕ್ರಿಯಾಶಕ್ತಿ ಯನ್ನು ಕಳೆದುಕೊಂಡು ದುರ್ಬಲವಾಗಿ ಬೀಳುತ್ತದೆ. ನಿಜವಾಗಿ ನೋಡಿದರೆ, ನಮ್ಮ ಸ್ವಭಾವದಲ್ಲಿ ದೈವ ನೆಟ್ಟಿರುವ ರಕ್ಷಣಾವ್ಯವಸ್ಥೆಯೆಂದರೆ ಗೊಣಗಾಟ. ಅದನ್ನು ಬೆಳಸಿಕೊಂಡರೆ ನಾವು ರೇಗುವ ಸಂಭವ ಕಡಿಮೆ; ಇಲ್ಲವೇ ಇಲ್ಲ ಎಂದರೂ ಎನ್ನಬಹುದು. ಕ್ಷಣಕಾಲ ಉರಿದಿದ್ದು ಅನಂತರ ತಣ್ಣಗಾಗುವುದಲ್ಲ, ಗೊಣಗಾಟದ ಸ್ವಭಾವ. ವಿದ್ಯುತ್ತಿನ ತಂತಿಯಲ್ಲಿ ಸರ್ವದಾ ಅವಶ್ಯಕವಿದ್ದಷ್ಟು ಮಾತ್ರ ಶಕ್ತಿ ಹರಿದು ನಮಗೆ ಬೆಳಕನ್ನೂ ಶಾಖವನ್ನೂ ಕೊಡುವಂತೆ ಈ ಗೊಣಗಾಟವೂ ಒಂದು ಮಿತಿಯಲ್ಲಿ ಸಂತತವಾಗಿ ಚೈತನ್ಯವನ್ನು ಕಾಪಾಡು ತ್ತದೆ. ರೇಗಾಟವು ನಮ್ಮ ದೇಹದಲ್ಲೂ ಮನಸ್ಸಿನಲ್ಲೂ ಸಂಚಿತವಾದ ಚೈತನ್ಯ ವನ್ನು ಕ್ಷಣಮಾತ್ರದಲ್ಲಿ ದುಂದುವೆಚ್ಚಮಾಡಿ ಮುಗಿಸುತ್ತದೆ. ಗೊಣಗಾಟ ವಾದರೋ ಅದನ್ನು ಸಂತತವಾಗಿ ಅಲ್ಪ ಪ್ರಮಾಣದಲ್ಲಿ ಒದಗಿಸಿಕೊಡುತ್ತದೆ.

ಉದಾಹರಣೆಗೆ ಆಕಾಶವಾಣಿಗಾಗಿ ಈ ಲೇಖನ ಬರೆಯುವ ಉದ್ಯಮವನ್ನೇ ತೆಗೆದುಕೊಳ್ಳೋಣ. ಇದನ್ನು ಪ್ರಸಾರ ಮಾಡುವ ತಾರೀಖಿಗಿಂತ ಹತ್ತು ದಿನ ಮುಂಚಿತವಾಗಿ ಕಳಿಸಬೇಕೆಂಬ ನಿಯಮವಿದೆ. ನಿಯಮವಿದ್ದ ಕಡೆ ಗೊಣಗಾಟ ಹೆಚ್ಚು. ನೀವು ಹಸ್ತಪ್ರತಿಯನ್ನು ಬರೆಯುವ ಮುನ್ನ 'ಸಾಕಪ್ಪಾ ಈ ಆಕಾಶವಾಣಿಯವರ ಕಾಟ! ಹಸ್ತಪ್ರತಿಯನ್ನು ಹತ್ತು ದಿನ ಮುಂಚೆಯೇ ಕಳಿಸಬೇಕಂತೆ. ಯಾಕೋ ಕಾಣೆ! ಮುಂಚೆ ತರಿಸಿಕೊಂಡು ಇದಕ್ಕೇನು ಉಪ್ಪು ಹುಳಿ ಕಾರ ಹಾಕಿ ಪಳಗಿಸುತ್ತಾರೇನು? ಅಥವಾ ನಾನು ಬರೆದದ್ದನ್ನು ತಿದ್ದುವ ಧಾಷ್ಟ್ಯಕ್ಕೆ ಕೈ ಹಾಕುತ್ತಾರೊ? (ಬರಹಗಾರರೆಲ್ಲರಿಗೂ ಇದೊಂದು ಜಂಬವಿದೆ: ತಾನು ಬರೆದದ್ದು ಸರ್ವಾಂಗಪರಿಪೂರ್ಣವಾದದ್ದು, ಅದರಲ್ಲಿ ಒಂದೇ ಒಂದು ಅಕ್ಷರವನ್ನು ಬದಲಾಯಿಸಿದರೂ ಏನೋ ಒಂದು ಭಾರಿ ಅನಾಹುತವಾಗುತ್ತದೆ. ಯಥೇಂದ್ರಶತ್ರುಃ ಸ್ವರತೋಽಪರಾಧಾತ್, ಎಂಬ ಜಂಬ)' ಎಂದು ಗೊಣಗಾಡುತ್ತೀರಿ; ಇದು ಬರವಣಿಗೆಗೆ ಪೂರ್ವಸಿದ್ಧತೆ. ಗೊಣಗುವುದಕ್ಕೆ ಬದಲು ರೇಗಿದರೆ ಕೆಲಸ ಅಲ್ಲಿಗೇ ನಿಂತು ಹೋಗುತ್ತದೆ; 'ನನ್ನಿಂದ ಈ ಕೆಲಸ ಸಾಧ್ಯವಿಲ್ಲ' ಎಂದು ಆಗಲೇ ಬರೆದು ಹಾಕಿ ಕೈತೊಳೆದುಕೊಳ್ಳುತ್ತೀರಿ. ಗೊಣಗಾಟ ಮಾತ್ರ ಇರುವುದರಿಂದ ಭಾಷಣ ಬರೆಯಬೇಕೆಂಬ ವಿಷಯ ಮನಸ್ಸಿನಲ್ಲಿ ಜೀವಂತವಾಗಿ ನಿಲ್ಲುತ್ತದೆ. ನಾಲ್ಕಾರು ದಿನ ಹೀಗೆಯೇ ಕಳೆದಮೇಲೆ ಕಾಗದ ಕಡ್ಡಿಗಳನ್ನು ಹುಡುಕುವ ಕೆಲಸ. 'ನನ್ನ ಫೌಂಟನ್ ಪೆನ್ ಎಲ್ಲಿ ಹೋಯಿತು? ಇಲ್ಲೇ ಮೇಜಿನ ಮೇಲೆ ಇದ್ದದ್ದು ಮಾಯವಾಗಿದೆಯಲ್ಲ! ಈ ಮನೆಯಲ್ಲಿ ಇಟ್ಟದ್ದೊಂದೂ ಇಟ್ಟ ಕಡೆ ಇರೋದಿಲ್ಲ. ಎಲ್ಲೋ ರಾಮು, ನನ್ನ ಫೌಂಟನ್ ಪೆನ್?.... ಕೂಗಿದರೆ ಯಾರಾದರೂ ಉತ್ತರ ಕೊಟ್ಟರೆ ಸರಿ!' ಇತ್ಯಾದಿ. ರೇಗುವ ಸ್ವಭಾವದರಾದರೆ ಆಗಿನ ವರ್ತನೆಯೇ ಬೇರೆ. ಮನೆಯ ಹುಡುಗರನ್ನೆಲ್ಲಾ ಮನಸ್ಸಿ ಬಯ್ದು, ಬಹುಶಃ ಒಂದೆರಡು ಪೆಟ್ಟು ಕೊಟ್ಟು, ಹೆಂಡತಿಯ ಬಾಯಿಂದ 'ನಿಮ್ಮ ಪದಾರ್ಥ ನೀವು ನೋಡಿಕೊಳ್ಳದೆ ಹುಡುಗರ ಮೇಲೆ ಯಾಕೆ ರೇಗುತ್ತೀರಿ!' ಎಂಬ ಕಠಿನವಾದ—ಆದರೆ ನ್ಯಾಯವಾದ—ಮಾತನ್ನು ಕೇಳಿ ಮತ್ತಷ್ಟು ರೇಗಿ, ಆ ವೇಳೆಗೆ ಕಣ್ಣೆದುರಿಗೆ ಕಂಡುಬರುವ ಪೆನ್ನನ್ನು ಮೇಜಿನ

ಮೇಲೆ ಕುಳ್ಳಿ, 'ಹಾಳಾಯಿತು' ಎಂದು ಕಿರಿಚಿ ಹೊರಟುಹೋಗುತ್ತೀರಿ. ನಿಮ್ಮ ಮನಸ್ಸು ಆಗ ಇರುವ ಸ್ಥಿತಿಯಲ್ಲಿ ಬರವಣಿಗೆ ಸಾಧ್ಯವಲ್ಲ.

ಪ್ರಪಂಚದಲ್ಲಿ ಈಗ ಇರುವ, ಅಥವಾ ಮುಂದೆ ಅಸ್ತಿತ್ವಕ್ಕೆ ಬರಬಹುದಾದ, ಯಾವುದಾದರೂ ಗೊಣಗಾಟಕ್ಕೆ ವಿಷಯವಾಗಬಹುದು. ಆದರೆ ಅದಕ್ಕೆ ಮುಖ್ಯವಾಗಿ ಸಾಮಗ್ರಿಯನ್ನು ಒದಗಿಸುವ ಕ್ಷೇತ್ರಗಳು ಎರಡಿವೆ: ಒಂದು, ರಾಷ್ಟ್ರದ ಆಡಳಿತವ್ಯವಸ್ಥೆ; ಇನ್ನೊಂದು, ನಮ್ಮ ಸ್ವಂತ ಮನೆಯಲ್ಲಿರುವ ಅವ್ಯವಸ್ಥೆ. ಎಲ್ಲ ಕಾಲದಲ್ಲೂ, ಎಲ್ಲ ರಾಷ್ಟ್ರಗಳಲ್ಲೂ ಅವ್ಯವಸ್ಥೆ ಹೆಚ್ಚು ಕಡಿಮೆ ಇದ್ದೇ ಇತ್ತು; ಪೌರಜಾನಪದರು ಅದನ್ನು ಟೀಕಿಸುತ್ತಲೇ ಇದ್ದರು. 'ರಾಮೇ ರಾಜ್ಯಂ ಪ್ರಶಾಸತಿ' ಎನ್ನಬಹುದಾಗಿದ್ದ ಕಾಲದಲ್ಲೂ ಎಲ್ಲರೂ ಸರ್ವಲಕ್ಷಣಸಂಪನ್ನರಾಗಿರಲಿಲ್ಲ, ಧರ್ಮಪರಾಯಣರಾಗಿರಲಿಲ್ಲ— ಇದ್ದರೆಂದು ವಾಲ್ಮೀಕಿ ಹೇಳಿದರೆ ಅದು ಕ್ಷಮಾರ್ಹವಾದ ಉತ್ಪ್ರೇಕ್ಷೆ. ಇನ್ನು ಈ ಕಲಿಗಾಲದ ಮಾತನ್ನಂತೂ ಹೇಳಬೇಕಾಗಿಯೇ ಇಲ್ಲ. ಸರ್ಕಾರದವರು ಯದ್ವಾತದ್ವಾ ತೆರಿಗೆಗಳನ್ನು ಹೇರುತ್ತಿದ್ದಾರೆ, ಪದಾರ್ಥಗಳ ಬೆಲೆ ಏರುತ್ತಿದೆ, ಬಂಡವಾಳಗಾರರು ನಮ್ಮನ್ನು ಸುಲಿದು ತಾವು ಕೋಟ್ಯಧೀಶ್ವರರಾಗುತ್ತಿದ್ದಾರೆ. ಎಲ್ಲೆಲ್ಲೂ ಲಂಚಕೋರತನ ಹೆಚ್ಚುತ್ತಿದೆ, ಕೂಲಿಗಾರರು ಸಂಪು ಮಾಡಿ ಅಶಾಂತಿಯನ್ನು ಹರಡುತ್ತಿದ್ದಾರೆ—ಅಂತೂ ಯಾರೊಬ್ಬರಿಗೂ ಬುದ್ಧಿಯಿಲ್ಲ! ರೈಲುಗಳನ್ನು ನೋಡಿ, ಎಷ್ಟು ತಡವಾಗಿ ಬರುತ್ತವೆ! ಬಸ್ಸುಗಳನ್ನು ನೋಡಿ, ನಡುದಾರಿಯಲ್ಲಿ ನಿಂತುಹೋಗುತ್ತವೆ! ಬೆಳಿಗ್ಗೆ ವೃತ್ತಪತ್ರಿಕೆಯನ್ನು ತೆಗೆದರೆ ಮೊದಲು ಕಣ್ಣಿಗೆ ಬೀಳುವುದೆಂದರೆ ವಿಮಾನದ, ರೈಲಿನ, ಮೋಟಾರಿನ, ಅಪಘಾತ! ದೇವರು ಕೊಟ್ಟ ಗಾಳಿ ನೀರುಗಳಿಗೂ ಅಭಾವದ ಕಾಲ ಬಂದಿದೆ. ಮೋಟಾರುಗಳ ಹೊಗೆಯಿಂದ ಗಾಳಿ ಕೆಟ್ಟಿದೆ, ನೀರಿಗಾಗಿ ಕಣ್ಣೀರು ಕರೆಯಬೇಕು!—ಇಂಥ ಗೊಣಗಾಟವಿರುವ ಕಡೆ ಕ್ರಾಂತಿಯಾಗುವುದಿಲ್ಲ, ಆದರೆ ಪ್ರಗತಿಗೆ ಕಾರಣವಾದ ಅಸಂತೃಪ್ತಿ ಮಾತ್ರ ಇರುತ್ತದೆ, ಗೊಣಗಾಟಕ್ಕೆ ಬದಲಾಗಿ ರೇಗಾಟ ಮೊದಲಾದರೆ ಹಠಾತ್ತಾಗಿ ಜನ ರೊಚ್ಚಿಗೆದ್ದು ಕ್ರಾಂತಿಯನ್ನೆಬ್ಬಿಸುತ್ತಾರೆ; ರಕ್ತಪಾತವಾಗುತ್ತದೆ, ಇದ್ದ ಬದ್ದ ವ್ಯವಸ್ಥೆಯೂ ನಾಶವಾಗುತ್ತದೆ. ಗೊಣುಗುವವರು ಇದ್ದ ಕಡೆ ಜೀವನದ ಪಥ ಹಠಾತ್ತಾದ ಬದಲಾವಣೆಗಳಿಲ್ಲದೆ ಸಾವಧಾನವಾಗಿ ಸಾಗುತ್ತದೆ. ಜೀವನದ ನದಿಯಲ್ಲಿ ಮಹಾಪೂರ ಬಂದು

ಎಲ್ಲವನ್ನೂ ಕೊಚ್ಚಿಕೊಂಡು ಹೋಗುವುದಿಲ್ಲ. ಗೊಣಗಾಟ ಸಂಯಮದಲ್ಲಿರುವ ಅಸಂತೃಪ್ತಿ, ರೇಗಾಟ ಅಸ್ಫೋಟಿಸುವ ಅಸಂತೃಪ್ತಿ.

'ನಾವು ಗೊಣಗಾಡುವುದೇನೋ ಸರಿಯೆ, ಆದರೆ ಮನೆಯಲ್ಲಿ ನಮ್ಮ ಮಾತನ್ನು ಸದಾ ಕೇಳುತ್ತಿರಬೇಕಾದವರ ಗತಿಯೇನು' ಎನ್ನುವಿರೇನೊ. ಅವರಿಗೂ ಏನು ಅನ್ಯಾಯ ಮಾಡಿದಂತಾಗುವುದಿಲ್ಲ. ಅನುಗಾಲವೂ ಗೊಣಗುವವರು ಇರುವ ಮನೆಯಲ್ಲಿ ಹೆಚ್ಚಿನ ಜಗಳಕ್ಕೆ ಅವಕಾಶವಿರುವುದಿಲ್ಲ. ನೀವು ರೇಗಿದರೆ ತಾನೆ ಮನೆಯವರು ನಿಮ್ಮ ಮೇಲೆ ರೇಗುವುದು ? ನಿಮ್ಮ ಗೊಣಗಾಟ ಕ್ರಮೇಣ ಮನೆಯರಿಗೆಲ್ಲಾ ಅಭ್ಯಾಸವಾಗುತ್ತದೆ; ನಿಮ್ಮ ಬೇಸರದ ದನಿ ಅವರಿಗೆ ಚಿರಪರಿಚಿತನಾದ ಸ್ನೇಹಿತನಂತಾಗುತ್ತದೆ; ಮುಗುಳುನಗೆ ನಕ್ಕು ಅದಕ್ಕೆ ಸಹನೆ ತೋರಿಸುತ್ತಾರೆ. 'ಅವರ ಪೆನ್ ಕಣ್ಣಿಗೆ ಕಾಣುವಂತೆ ಇಡಪ್ಪ' ಎಂದು ತಾಯಿ ಮಕ್ಕಳಿಗೆ ಹೇಳುತ್ತಾಳೆ. ಮಕ್ಕಳು 'ಅವರಿಟ್ಟ ಕಡೆಯಲ್ಲೇ ಇರಲಮ್ಮ, ತಮಾಷೆ ನೋಡೋಣ' ಎಂದು ನಗುತ್ತಾರೆ. ಸಂಸಾರ ಸುಮುಖವಾಗಿ ಸಾಗುತ್ತದೆ.

ಗೊಣಗಾಟವನ್ನು ಪ್ರಯತ್ನಪೂರ್ವಕವಾಗಿ ಬೆಳಸಿಕೊಳ್ಳಿ ಎಂದೇನೂ ನಾನು ಸಲಹೆ ಕೊಡುತ್ತಿಲ್ಲ. ನಾನು ಮೊದಲೇ ಹೇಳಿದಂತೆ ಅದು ನೈಸರ್ಗಿಕವಾದ ಗುಣವಾದ್ದರಿಂದ ಅದನ್ನು ಬೆಳಸಲು ಪ್ರಯತ್ನವೇ ಬೇಕಿಲ್ಲ. ಅದು ಅಸ್ಫೋಟಕ ವಸ್ತುವಾಗಿ ಮಾರ್ಪಡದಂತೆ ಹದದಲ್ಲಿಟ್ಟುಕೊಂಡರೆ ಸಾಕು.

ನನ್ನ ಪ್ರಯಾಣಸಖಿ *

ಆನಂದ

ಮೈಸೂರಿನಿಂದ ಅರಸೀಕೆರೆಗೆ ಹೋಗುವ ರಾತ್ರಿ ರೈಲಿನ ಎರಡನೇ ತರಗತಿ ಗಾಡಿಯಲ್ಲಿ ಹೊರಟಿದ್ದೆ. ನಮ್ಮಿಬ್ಬರಲ್ಲಿ ಯಾರು ಮೊದಲು ಗಾಡಿಯನ್ನು ಪ್ರವೇಶಿಸಿದೆವೋ ಕಾಣೆ. ನಿಜವಾಗಿಯೂ, ಸ್ವಲ್ಪ ಹೊತ್ತಿನವರೆಗೆ, ಆಕೆ ಗಾಡಿಯಲ್ಲಿದ್ದದ್ದರ ಅರಿವೇ ನನಗೆ ಇರಲಿಲ್ಲ.

"ಮೆಯಿಲ್" – "ಪ್ಯಾಸೆಂಜರ್" – "ಗುಡ್ಸ್" ಎಲ್ಲ ಏಕಮಾಲೆಯಾಗಿರುವ ಈ "ಟ್ರೇನು" ಮೈಸೂರಿಗೂ ಅರಸೀಕೆರೆಗೂ ಮಧ್ಯ ಎಲ್ಲ ಸ್ಟೇಶನ್ನುಗಳಲ್ಲೂ ನಿಲ್ಲುತ್ತ, ಸ್ಟೇಶನ್ನುಗಳ ಮಧ್ಯ ಯಥಾ ಸಾವಕಾಶವಾಗಿ ಅಂಬೆಗಾಲು ವೇಗದಲ್ಲಿ ಉರುಳುವುದರಿಂದ– ಇದರಲ್ಲಿ ಕುಳಿತರೆ ನಿಮಗೆ ಕಾಲದ ಅನಂತತೆಯ ಅರ್ಥವಾಗುತ್ತದೆ.

ಟ್ರೇನು ಮೈಸೂರಿನಿಂದ ಹೊರಟಾಗ ನಮ್ಮ ಗಾಡಿ ತಕ್ಕಮಟ್ಟಿಗೆ ಭರ್ತಿಯಾಗಿಯೇ ಇತ್ತು. ಅದು ಬೆಳಗೊಳ – ಕೃಷ್ಣರಾಜಸಾಗರ – ಯಡತೊರೆ ಸ್ಟೇಶನ್ನುಗಳಲ್ಲಿ ನಿಂತಾಗ ಪ್ರಯಾಣಿಕರು ಒಬ್ಬೊಬ್ಬರಾಗಿ – ಇಬ್ಬಿಬ್ಬರಾಗಿ ಇಳಿದು ಹೋದರು. ಆ ಸ್ಟೇಶನ್ನುಗಳಲ್ಲಿ ಯಾರೂ ನಾನಿದ್ದ ಗಾಡಿಗೆ ಹತ್ತಲಿಲ್ಲ. ಕಡೆಯದಾಗಿ ಉಳಿದಿದ್ದ ಗೃಹಸ್ಥರೊಬ್ಬರು ಹಾಸನದಲ್ಲಿ ಇಳಿದರು. ಇಲ್ಲಿಯೂ ನನ್ನ ಗಾಡಿಗೆ ಯಾರೂ ಹತ್ತದೆ ಟ್ರೇನು ಮುಂದಕ್ಕೆ ಹೊರಟಿತು. ಗಾಡಿಗೆಲ್ಲ ನಾನೊಬ್ಬನೇ ಆದೆ; ಉಹುಂ–ಅಲ್ಲ, ಒಬ್ಬನೆ ಆದೆ–ಅಂತ ತಿಳಿದುಕೊಂಡೆ.

ಸಾಧಾರಣವಾಗಿ ಜನ ತುಂಬಿ, ರಾತ್ರಿಯ ಕಾಳಗರ್ಭವನ್ನು ಭೇದಿಸುತ್ತ ಹೋಗುವ ಟ್ರೇನಿನಲ್ಲಿ – ಅಪರೂಪಕ್ಕೆ ಗಾಡಿಗೆಲ್ಲಾ ಒಬ್ಬನೇ ಇರುವಂತಾದರೆ, ಆಗ ಒಂದು ಅನಿರ್ವಚನೀಯ ಸ್ವಾತ್ರಂತ್ರ್ಯದ ಉತ್ಕಟ ಅನುಭವದಿಂದ

---

* ಎ. ಜಿ. ಗಾರ್ಡಿನರ್‌ರವರ "A Fellow Traveller" ಎಂಬ ಲೇಖನದಿಂದ ಪ್ರಚೋದಿತವಾದದ್ದು.

ಹೃದಯ ತುಂಬಿ ಬರಿಯುತ್ತದೆ. ನಿರಂಕುಶತಾಭಾವದ ಬಹು ಹಿತಕರವಾದ ರೂಪ ಅದು; ಸ್ವಾಚ್ಛಂದ್ಯದ ಪರಮಾವಧಿ. ಈ ಮೈಮರೆಸುವ ಮಧುರ ಸನ್ನಿವೇಶದಲ್ಲಿ ನೀವು ಏನು ಬೇಕಾದರೂ ಮಾಡಬಹುದು. ಇತರರು ಕೇಳಿ ಯಾರು ಅಥವಾ ನೋಡಿಯಾರು – ಎಂಬ ಭಯ ಲವಲೇಶವೂ ಇಲ್ಲದೆ, ನಿಮ್ಮ ಇಷ್ಟದ ಮೇಲಿನ ಕಡಿವಾಣವನ್ನು ಕೈಬಿಡಬಹುದು. ಉದಾಹರಣೆಗೆ, ನಿಮ್ಮೊಡನೆ ನೀವೇ, ನಿಮಗೆ ಇಷ್ಟಬಂದಷ್ಟು–ನಿಮ್ಮ ಶ್ವಾಸಕೋಶದ ಶಕ್ತಿ ಇದ್ದಷ್ಟು–ಗಟ್ಟಿಯಾಗಿ ಮಾತಾಡಿಕೊಳ್ಳಬಹುದು. ಈಗ ನಮ್ಮದು ರಾಮರಾಜ್ಯ–ಎಂದು ನೆನ್ನೆ ಮೈಸೂರಲ್ಲಿ ನಿಮ್ಮೊಡನೆ ವಾದಿಸಿದ ಬಿಳೀತೋಪಿ ಗುಂಡಯ್ಯನೊಡನೆ–ಅವನು ಈಗ ನಿಮ್ಮೊಡನೆ ಇಲ್ಲದೆ ಇರುವುದರಿಂದ ತಿರುಗೇಟ್‌ನ ಭಯವಿಲ್ಲದೆ–ವಾಗ್ಯುದ್ಧದಲ್ಲಿ–ಅವಶ್ಯಬಿದ್ದರೆ ಮಲ್ಲಯುದ್ಧದಲ್ಲಿ–ತೊಡಗಿ, ಅವನಿಗೆ ಮಣ್ಣು ಮುಕ್ಕಿಸಿ, ನೀವು ಜಯೋತ್ಸಾಹದಿಂದ (ಇದ್ದರೆ–) ಮೀಸೆ ತಿರುವಬಹುದು. ನಿಮ್ಮ ಸರ್ಕಸ್ಸನ್ನು ಯಾರಾದರೂ ನೋಡಿ ನಗುವರೆಂಬ ನಾಚಿಕೆಯಿಲ್ಲದೆ-ನೀವು ಶೀರ್ಷಾಸನ ಯೋಗಾಭ್ಯಾಸ ಮಾಡಬಹುದು; ಮಣಿಪುರೀ–ಭರತ–ಕಥಕ್ಕಲೀ ನಾಟ್ಯಗಳಲ್ಲಿ ತೊಡಗಬಹುದು; ಅಥವಾ ಟೆನ್ನಿಸ್ ಆಟದ ಒಂದು ವರಿಸೆಯನ್ನೋ ಕ್ರಿಕೆಟ್ ಕ್ರೀಡೆಯ ಒಂದು ಶೈಲಿಯನ್ನೋ ಅಭ್ಯಾಸ ಮಾಡಬಹುದು. ಬೇಕಾದರೆ, ಗಾಡಿಯ ನೆಲದ ಮೇಲೆ, ಗೋಲಿ – ಕವಡೆ – ದಚ್ಚಿಬಾರ ಚೌಕಾಬಾರ ಇವುಗಳಲ್ಲಿ ಯಾವುದನ್ನಾದರೂ ಅಥವಾ ಎಲ್ಲವನ್ನೂ ಆಡಬಹುದು. ನಿಮಗೆ ಯಾವ ಅಡ್ಡಿ ಆತಂಕಗಳೂ ಇರುವುದಿಲ್ಲ. ನೀವು ಮಾಡಬಹುದಾದ ಕೆಲಸಗಳ ಪಟ್ಟಿ ಇಷ್ಟಕ್ಕೆ ಮುಗಿಯಲಿಲ್ಲ. ಯಾರ ಆಕ್ಷೇಪಣೆಯ ಅಂಜಿಕೆಯೂ ನಿಲ್ಲದೆ, ನೀವು ಮುಚ್ಚಿದ ಕಿಟಕಿಯನ್ನು ತೆರೆಯಬಹುದು; ತೆರೆದ ಕಿಟಕಿಯನ್ನು ಮುಚ್ಚಬಹುದು; ಖಯಾಲಿ ಬಂದರೆ, ಎಲ್ಲ ಕಿಟಕಿಗಳನ್ನೂ ತೆರೆಯಬಹುದು ಅಥವಾ, ಎಲ್ಲವನ್ನೂ ಮುಚ್ಚಬಹುದು. ಅಷ್ಟೇಕೆ? ನಿಮ್ಮ ಮನಸ್ಸಿಗೆ ತೋರಿದರೆ ಅವುಗಳನ್ನು ಒಂದು ಕಡೆಯಿಂದ ಸಾಲಾಗಿ ಮುಚ್ಚುತ್ತ – ಇನ್ನೊಂದು ಕಡೆಯಿಂದ ತೆರೆಯುತ್ತ, ನಿಮಗೆ ಅಸರೂಪಕ್ಕೆ – ಆಕಸ್ಮಿಕವಾಗಿ ದೊರೆತಿರುವ ಸ್ವಾತಂತ್ರ್ಯ ಸುಧೆಯನ್ನು ಸವಿಯಬಹುದು. ಚೌಕೋಣದ ಗಾಡಿಯ ಯಾವ ಕೋಣ ಬೇಕಾದರೂ ನಿಮ್ಮದೇ ಆಗಿರುತ್ತದೆ. ನಿಮಗೆ ಖುಷಿ ಬಂದರೆ, (ಬಂದೇ

ಬರುತ್ತದೆ !) ಒಂದೊಂದಾಗಿ, ಎಲ್ಲ ಕೋಣಾಸನಗಳ ಸೌಖ್ಯವನ್ನೂ ಪಡೆಯ ಬಹುದು. ಗಾಡಿಯ ಉದ್ದನೆಯ–ಕೂಡ್ರುವ ಮೆತ್ತೆಯ ಮೇಲೆ ಉರುಳಾಡುವ–ಹೊರಳಾಡುವ ; ಗಾಡಿಯ ನೆಲದ ಮೇಲೆ ಪಲ್ಟಿ ಹೊಡೆಯುವ ; ಎದುರುಬದುರಾಗಿರುವ ಆಸನಗಳಲ್ಲಿ ಒಂದರಿಂದ ಇನ್ನೊಂದಕ್ಕೆ ನೆಗೆಯುವ ; ಕುಣಿದು ಕುಪ್ಪಳಿಸುವ ; ಚೀರಿಡುವ ಭೋರಿಡುವ ; ಸಿಳ್ಳುಹಾಕುವ ಗಾಳಿ ಗುದ್ದುವ ವಿವಿಧ ಸ್ವಾತಂತ್ರ್ಯಗಳ ಪೂರ್ಣ ಹಕ್ಕು ನಿಮ್ಮದೇ ಆಗಿರುತ್ತದೆ. ಹೆಚ್ಚೇನು? ಒಂದೇ ವಾಕ್ಯದಲ್ಲಿ ಹೇಳಬಹುದಾದರೆ, ಸಭ್ಯವರ್ತನೆಯ, ಸರ್ವನೀತಿ–ನಿಯಮ–ಕೋಡು (Code) ಕಾನೂನುಗಳ ಕಂತೆಯನ್ನೂ, ಜೊತೆಗೆ ನಿಮ್ಮ ಕೈಯನ್ನೂ ಕಪಿಮುಷ್ಟಿಯಲ್ಲಿ ಪಿಡಿದಾಕೆಯ ವಜ್ರಹೃದಯವನ್ನೂ ಏಕಕಾಲದಲ್ಲಿ ಒಡೆದು ಪುಡಿಗೈದು, ಹರಿದು ಹಂಚಬಹುದು. ನಿಮ್ಮಾಕೆಗೆ ಮಾತ್ರ–ನೀವು ಗುಟ್ಟಾಗಿ ಅವರ ಹೃದಯ ಒಡೆದಿರುವ ವಿಷಯ–ಗೊತ್ತಿರುವುದಿಲ್ಲ ಅಷ್ಟೆ. ಆದರೆ, ನೀವು ನಿಮ್ಮ ಉತ್ತಮಾರ್ಧಾಂಗಿಯವರ ಉರಿಗೋಪದಿಂದಲೂ ಪಾರಾಗುತ್ತೀರಿ ಅನ್ನುವುದನ್ನು ಮರೆಯತಕ್ಕದ್ದಲ್ಲ.

ನಾನು ಪ್ರಯಾಣ ಹೊರಟಿದ್ದ ನಡುಬೇಸಿಗೆಯ ಈ ಸುಂದರತಮ ಪೂರ್ಣಿಮಾ ರಾತ್ರೆ, ಮೇಲೆ ತಿಳಿಸಿದ ಕ್ರೀಡಾಕಾರ್ಯಕ್ರಮಗಳಲ್ಲಿ ಒಂದನ್ನೂ ಮಾಡಲಿಲ್ಲ. ಕಾರಣ–ಇವು ಯಾವುವೂ ನನ್ನ ಮನಸ್ಸಿಗೆ ಹೊಳೆಯಲೇ ಇಲ್ಲ. ನಾನು ಏನು ಮಾಡಿದೆನೋ ಅದು, ಸಮಯಸ್ಫೂರ್ತಿಯ ಅಭಾವದಿಂದ ತೀರ ಸಾಧಾರಣವಾಗಿತ್ತೆಂದೇ ಹೇಳಬೇಕು....ನನ್ನ ಜೊತೆ ಪ್ರಯಾಣಿಕರಲ್ಲಿ ಕಟ್ಟಕಡೆಯ ಮನುಷ್ಯ ಹಾಸನದಲ್ಲಿ ಇಳಿದುಹೋದಮೇಲೆ ನಾನು ಓದುತ್ತಿದ್ದ "ಕಾಲಹರಣ"ವೆಂಬ (ಅದು "ಕಾಸುಹರಣ" ವೂ ಹೌದು!) ವೃತ್ತಪತ್ರಿಕೆಯನ್ನು ಕೆಳಗಿಟ್ಟೆ ; ತೋಳು ಕಾಲುಗಳನ್ನು ಸೆಟೆದು ಚಾಚಿ, ಮೈಮುರಿದು ಎದ್ದುನಿಂತೆ ; ಬಾಗಿಲ ಬಳಿ ಹೋಗಿ ಬಗ್ಗಿನಿಂತು, ಕಿಟಕಿಯ ಹೊರಗೆ ಪ್ರಶಾಂತವಾದ ಬೇಸಿಗೆ ಬೆಳದಿಂಗಳ ರಾತ್ರಿಯ ಸೊಬಗನ್ನು ನಿಟ್ಟಿಸಿದೆ. ಗಾಡಿ ಮುಂದಕ್ಕೆ ಹರಿದಹಾಗೆಲ್ಲ ಹಿಂದಕ್ಕೆ ಓಡುತ್ತಿದ್ದಂತೆ ಭಾಸವಾಗುತ್ತಿದ್ದ ರೈಲುದಾರಿಯ ಪಕ್ಕದ ಪಿಡಮರ ಪೊದೆಗಳನ್ನೂ, ಟೆಲಿಗ್ರಾಫ್ ಕಂಭಗಳನ್ನೂ, ಅವುಗಳಾಚಿನ, ಹೋಗ ಹೋಗುತ್ತ ಅಸ್ಫುಟವಾಗಿ ಕಾಣುತ್ತ ಹಿಂದರಿಯುತ್ತಿದ್ದ ಹೊಲ ಗದ್ದೆ, ಗುಡ್ಡ ಬೆಟ್ಟಗಳ ಸಾಲನ್ನೂ ಸ್ವಲ್ಪ ಹೊತ್ತು ನೋಡಿ, ಅನಂತರ ಹಿಂದಕ್ಕೆ

LIBRARY.
Jangamwadi Math, VARANASI,
Acc: No. 3837 1045

ಬಂದು ಕುಳಿತು, ಪುನಃ ಪತ್ರಿಕೆಯನ್ನು ಓದತೊಡಗಿದೆ. ಆಗ–ಅಂದರೆ, ಓದ ತೊಡಗಿದಾಗ – ನನ್ನ ಪ್ರಯಾಣಸಂಗಾತಿಯ ಇರುವಿಕೆಯ ಅರಿವಾಯಿತು. ಇಂದ್ರಲೋಕದಿಂದ ಇಳಿದು ಬಂದ ಅಪ್ಸರೆಯಂತೆ–ನವುರಾದ ಪಕ್ಷಗಳಿಂದೊಡ ಗೂಡಿ, ಬಡನಡುವಿನ ಬೆಡಗುಗಾತಿಯೂ ಗುಯ್ಗ್ಲ್ ಗಂಧರ್ವಗಾನ ತಲ್ಲೀನಳೂ ಆದ, ಕಂಡೂಕಾಣದ ಆ ಕೀಟಕಾಮಿನಿ, ವಕ್ರಗತಿಯಿಂದ ತೇಲಿಬಂದು ನನ್ನ ನಾಸಿಕಾಗ್ರಕ್ಕೆ ಮುತ್ತು ಕೊಟ್ಟಳು. ಹೀಗೆ ಮಾಡಿದ ಸೊಳ್ಳೆ ಹೆಣ್ಣೆಂದು ನಾನು ನಿರ್ಧರಿಸಿದ ಬಗೆ ಹೇಗೆ?–ಎಂದು ನೀವು ಕೇಳಬಹುದು. ಕೇಳಿ, ಅದು ನಪುಂಸಕ ಅಲ್ಲ ಅನ್ನುವುದಕ್ಕೆ ಅದರ ದಿಟ್ಟತನವೇ ಸಾಕ್ಷಿ. ಅಪರಿಚಿತ ಪರ ಪುರುಷನೊಬ್ಬನಿಗೆ ಇಂತಹ ಬಿಸಿ ಮುತ್ತು ಕೊಡಬೇಕಾದರೆ, ಅದು ಸೊಳ್ಳೆ ಅಷ್ಟೇ ಅಲ್ಲ–ಗಯ್ಯಾಳಿ ಸೊಳ್ಳೆಯಾಗಿರಬೇಕು! ಅಲ್ಲದೆ, ಆ ಕಂಠಮಾಧುರ್ಯ– ಆ ನರ್ತನ – ಆ ವಯ್ಯಾರ – ಬೆಡಗು ಬಿನ್ನಾಣ, ಗಂಡಸನ್ನು ಕಂಡರೆ ಆ ನಿರ್ಲಕ್ಷ್ಯ–ಇವೆಲ್ಲ ಸ್ತ್ರೀಯೋಚಿತವಾದ ಗುಣಗಳಲ್ಲವೆ? ಆದ್ದರಿಂದ ಆ ಮಶಕದ ವ್ಯಾಕರಣ ಸ್ತ್ರೀಲಿಂಗ. ಜ್ಞಾನವೃದ್ಧ ಹೌದೋ ಅಲ್ಲವೋ – ವಯೋವೃದ್ಧ ನಂತೂ ಹೌದಾದ ನನ್ನ ಈ ಮಾತನ್ನು ನೀವು ನಂಬಬೇಕು.

ಮುತ್ತು ಕೊಡುವವರ ಮನಸ್ಸು ಎಷ್ಟು ಮೃದುವಾಗಿದ್ದರೂ – ಪ್ರೇಮ ದಿಂದ ತುಂಬಿ ತುಳುಕುತ್ತಿದ್ದರೂ–ಅವರ ತುಟಿ ಉಕ್ಕಿನ ಸೂಜಿಯಂತೆ ಕಠೋರ ವಾಗಿದ್ದರೆ ಮುತ್ತು ಕೊಳ್ಳುವವರಿಗೆ ಅದನ್ನು ವಿನಯದಿಂದ ನಿರಾಕರಿಸುವ ಸ್ವಾತಂತ್ರ್ಯ ಇದೆ; ಇಲ್ಲದೆ ಇದ್ದರೆ, ಅವಶ್ಯಕವಾಗಿ ಇರಬೇಕು. ಆದ್ದರಿಂದ, ನಾನು ಕೈಬೀಸಿ ಆ ಮುಳ್ಳುಖಿಯನ್ನು ಓಡಿಸಿದೆ. ಆಕೆ ಚಂಗನೆ ದೂರಕ್ಕೆ ಹಾರಿದಳು. ಸ್ವಲ್ಪ ಕಾಲ, ಗಾಡಿಯ ಉದ್ದ–ಅಗಲ–ಎತ್ತರಗಳನ್ನು ಅಳತೆ ಮಾಡಿ ನೋಡುವಂತೆ, ಅತ್ತ, – ಇತ್ತ, – ಮೇಲೆ – ಕೆಳಗೆ ಹಾರಾಡಿದಳು. ಪ್ರತಿ ಕಿಟಕಿಯ ಬಳಿಯೂ ಹೋಗಿ ಹಿಂತಿರುಗಿ, ಗಾಡಿಯ ತಾರಸಿಯಲ್ಲಿದ್ದ ದೀಪಸೂರ್ಯನ ಸುತ್ತ ಭೂದೇವಿಯಂತೆ ಪ್ರದಕ್ಷಿಣೆ ಮಾಡತೊಡಗಿದಳು. ಈ ಕೆಲಸದಲ್ಲಿ ಅವಳಿಗೆ ಬೇಗ ಬೇಸರವಾದಂತೆ ಕಾಣುತ್ತದೆ. ಅದನ್ನು ಕಳೆದು ಕೊಳ್ಳುವುದಕ್ಕೆ, ಮೂಲೆಯಲ್ಲಿ ಕುಳಿತಿದ್ದ ಈ ದೊಡ್ಡ ಪ್ರಾಣಿಗಿಂತ ಹೆಚ್ಚು ಕುತೂಹಲಜನಕವಾದದ್ದು ಗಾಡಿಯಲ್ಲಿ ಏನೂ ಇಲ್ಲವೆಂದು ನಿರ್ಧರಿಸಿ, ಈ ಬಾರಿ ನನ್ನ ಕುತ್ತಿಗೆಯ ಹಿಂದೆ ಕುಳಿತಳು. ನಾನು ಪುನಃ ಕೈಬೀಸಿ ಅವಳನ್ನು

ಅಟ್ಟಿದೆ. ಆ ರಕ್ತಪಿಪಾಸಿ ಪಾಪಿಷ್ಠೆ, ಕುಯ್ಯ್ಣಾ ! – ಎಂದು ಚಿಮ್ಮಿ ನೆಗೆದು, ಗಾಡಿಯಲ್ಲೆಲ್ಲಾ ಇನ್ನೊಂದು ಸುತ್ತು ಸ್ವೇಚ್ಛೆಯಾಗಿ ವಿಹರಿಸಿ–ನನ್ನ ಬಳಿಗೆ ವಾಪಸು ಬಂದಳು. ಈ ಸಲ ಅತಿ ಧೈರ್ಯದಿಂದ ನನ್ನ ಎಡ ಹಿಂಗೈ ಮೇಲೇ ಕುಳಿತುಕೊಳ್ಳುವುದೇ–ಆ ಗಂಡುಬೀರಿ–ಬಜಾರಿ !

"ಸಾಕು ! ಸಾಕು !" – ಎಂದೆ ನಾನು ಅಗ್ನಿಮುಖನಾಗಿ ! –ಜ್ವಾಲಾಕ್ಷನಾಗಿ ! ನಾನು ಎರಡು ಸಲ ಉಚ್ಚರಿಸಿದ ಈ ಒಂದೇ ಮಾತಿನಲ್ಲಿ – ಅಗ್ಗದ ನವ್ಯ ಕಾದಂಬರಿಕಾರರ ಸಾರ್ವಭೌಮ ಶ್ರೀಯುತ ಶ. ಕಾ. ರ–ರವರ ಅನನುಕರಣೀಯ ಭವ್ಯಶೈಲಿಯಲ್ಲಿ ಹೇಳುವುದಾದರೆ–ಈ ಒಂದೇ ಮಾತಿನಲ್ಲಿ, ಉಕ್ಕಿನ ಕಠೋರತೆಯಿತ್ತು, ಸತ್ಯದ ಸಾಣೆಯಿತ್ತು ! – ಕಡುಕೋಪದ ಕಿಡಿಯಿತ್ತು ! ಚಾವಟಿಯ ಏಟಿತ್ತು –ಇನ್ನೂ ಏನೇನೋ ಇತ್ತು. ನಾನು ಗಂಭೀರವಾಣಿಯಿಂದ ಆಕೆಯನ್ನು ಉದ್ದೇಶಿಸಿ ಹೇಳಿದೆ ! "ಔದಾರ್ಯಕ್ಕೂ ಒಂದು ಮಿತಿ ಇದೆ. ನಾನು ನಿರ್ದಿಷ್ಟನಾದ ಒಬ್ಬ ಗಣ್ಯವ್ಯಕ್ತಿ – ಎಂದು ನಿನ್ನ ಅಲ್ಪಮತಿಗೆ ಕಾಣದೆ ಇರಬಹುದು. ಕಳೆದ ಜನಗಣತಿಯಲ್ಲಿ ನನ್ನನ್ನೂ ಲೆಕ್ಕಕ್ಕೆ ತೆಗೆದುಕೊಂಡಿದೆ, ಘನಸರ್ಕಾರ. ನಿರುದ್ಯೋಗಿಗಳ ಪಟ್ಟಿಯಲ್ಲೂ ಒಂದು ಸ್ಥಾನವನ್ನು ಗಳಿಸಿದ್ದೇನೆ. ಶ್ರೀಮನ್ಮಹೀಸೂರು ವರಪುರೀ ವಿಶ್ವವಿದ್ಯಾನಿಲಯದ ಡಿಗ್ರೀಧರನೂ ಹೌದು. ಅಂದ ಮೇಲೆ, ನಿನ್ನಂತೆ ನಾನೇನು ಅನಾಮಧೇಯನಲ್ಲ, ಅನ್ವರ್ಥವಾಗುವುದೆಂದು ವೃಥಾ ಆಸೆಪಟ್ಟು ನನಗೆ ಇಟ್ಟ ಅಂಕಿತನಾಮ ಆ – ಹುಂ ! ಅದನ್ನು ಕಟ್ಟಿಕೊಂಡು ನಿನಗೇನು! ಒಟ್ಟಿನಲ್ಲಿ, ನನ್ನ ಘನಮಾನದ ವ್ಯಕ್ತಿತ್ವವು, ಅಸರಿಚಿತಳೋರ್ವಳ– ಬೇಕಿಲ್ಲದ– ಅನುಚಿತ– ಅಧಿಕಪ್ರಸಂಗೀಯ ಸರಸವನ್ನೂ, ಅಸಹನೀಯ ಚುಂಬನಗಳನ್ನೂ ಧಿಕ್ಕರಿಸುವುದೆಂದು ನಿನಗೆ ಒಂದಲ್ಲ – ಎರಡು ಬಾರಿ ಎಚ್ಚರಿಕೆ ಕೊಡಲಾಗಿದೆ. ನೀನು ಸೊಳ್ಳೆಯಾದರೇನಂತೆ ? ಹೆಣ್ಣುತನದ ಘನತೆ – ಗಾಂಭೀರ್ಯ – ಲಜ್ಜೆ – ಶೀಲ – ಮಾನ – ಮರ್ಯಾದೆಗಳನ್ನು ಹಾರುತ್ತ ಹಾಡುತ್ತ ಗಾಳಿಗೆ ತೂರಿ, ಈ ರೀತಿ, ಮರ್ಯಾದಸ್ಥನೂ – ಏಕಪತ್ನೀಕಾಂತನೂ ಆದ ಪರಪುರುಷನೊಡನೆ ಸಲ್ಲದ ನಿನ್ನ ಏಕಾಂತ ಲಾಲಸೆ ಘೋರತಮಪಾತಕ ! ಆದ್ದರಿಂದ, ಎಲೈ ಪರಮ ಪಾತಕಿಯೇ, ನಾನು ಕಪ್ಪು ತೋಪಿಯನ್ನು ಧರಿಸುತ್ತೇನೆ; ನಿನಗೆ ಮರಣಶಿಕ್ಷೆ ವಿಧಿಸುತ್ತೇನೆ. ಇದು ಅತ್ಯವಶ್ಯಕವೆಂದು ಮನುಧರ್ಮ ಶಾಸ್ತ್ರವು ಬಲಾತ್ಕಾರಿಸುತ್ತದೆ; ಆದ್ದರಿಂದ, ಧರ್ಮಗ್ಲಾನಿಯನ್ನು

ತಡೆಗಟ್ಟುವುದಕ್ಕಾಗಿ, ಈ ಶಕಟ ನ್ಯಾಯಸ್ಥಾನವು ನಿನಗೆ ಮರಣ ಶಿಕ್ಷೆಯ ತೀರ್ಪನ್ನು ಕೊಡುತ್ತದೆ. ನಿನ್ನ ಮೇಲೆ ಅನೇಕಾನೇಕ ಆಪಾದನೆಗಳಿವೆ ; ನೀನೊಬ್ಬ ತಲೆತಿರುಕಿ, ರಕ್ತಚೋರಿ, ಸಾರ್ವಜನಿಕ ಅಸಹ್ಯಪೀಡೆ. ಪರರು ಕಷ್ಟಪಟ್ಟು ಶೇಖರಿಸಿದ ರಕ್ತದಿಂದ ಜೀವಿಸುವ ಅನ್ಯಾವಲಂಬಿ ಭಂಡ ಬಂಡ ವಾಳಿಗ ರಾಜಕೀಯ, ನಿನ್ನದು. ನೀನು ಟಿಕೀಟಿಲ್ಲದೆ ಪ್ರಯಾಣಮಾಡುತ್ತ ಕೇಂದ್ರ ಸರ್ಕಾರಕ್ಕೇ ದ್ರೋಹಮಾಡುತ್ತಿರುವೆ. ನಿನ್ನ ರೇಷನ್ ಕಾರ್ಡಿನಲ್ಲಿ ನಿನಗೆ ಮಂಜೂರಾಗಿರುವುದಕ್ಕಿಂತ ಹೆಚ್ಚಾಗಿ ರಕ್ತದ ಪಡಿತರ ಹೀರುತ್ತಿ ; ಅಲ್ಲದೆ, ಒಂದೇ ಕಾರ್ಡಿನಿಂದ – ಒಂದೇ ಹೆಸರಿಗೆ, ಬೇರೆ ಬೇರೆ ಡಿಪೋಗಳಿಂದ ಪಡಿತರ ಪಡೆಯುತ್ತಿರುವೆ. ನಿನ್ನ ಪ್ರಗತಿಯ ಧೋರಣೆಯನ್ನೂ ಗಯ್ಯಾಳಿತನವನ್ನೂ ನೋಡಿದರೆ ನೀನು (ಮದುವೆಯಾಗಿದ್ದರೆ) ಪತಿದ್ರೋಹಿಯಂತೆ ಕಾಣುತ್ತಿ– ಅಷ್ಟೇ ಅಲ್ಲ, ನೀನು ಆ ಬಡಪಾಯಿಯನ್ನು ಕೊಂದುಹಾಕಿರಲೂಬಹುದು ! ಈ ಮತ್ತು ಇತರ ದುರ್ವರ್ತನೆಗಳಿಗಾಗಿಯೂ, ಕಾನೂನು ಭಂಗಗಳಿಗಾಗಿಯೂ ಇದೋ–ನಿನಗೆ ಸಾವೇ ಯಥಾರ್ಥವಾದ–ಅನಿವಾರ್ಯವಾದ ಶಿಕ್ಷೆ !"

—ಹೀಗೆಂದು ಹೇಳಿ, ನನ್ನ ಎಡಹಿಂಗೈ ಮೇಲೆ ಕುಳಿತು ರಕ್ತವನ್ನು ದರೋಡೆ ಮಾಡುತ್ತಿದ್ದ ಆ ಕ್ಷುದ್ರಜೀವಿಗೆ, ಬಲಗೈಯಿಂದ, ವಜ್ರಾಘಾತದಂತೆ– ವಿದ್ಯುದ್ವೇಗದ ಮರಣದಾಯಕವಾದ ಪೆಟ್ಟನ್ನು ಪಠೀರ್ !– ಎಂದು ಗುರಿ ಯಿಟ್ಟು ಕೊಟ್ಟೆ. ಆದರೆ, ಅವಳು ತಪ್ಪಿಸಿಕೊಂಡಳು ! ವಿದ್ಯುದ್ವೇಗಕ್ಕೂ ಮೀರಿದ ಚಮಕಿನಿಂದ–ಲೀಲಾಜಾಲವಾಗಿ–ನಿರಾಯಾಸವಾಗಿ ತಪ್ಪಿಸಿಕೊಂಡೇ ಬಿಟ್ಟಳು ! ತಪ್ಪಿಸಿಕೊಂಡವಳು, ದಿಟ್ಟ ಧಿಕ್ಕಾರದಿಂದ ನನ್ನ ಮುಖದ ಮುಂದೆಯೇ ಹಾರಾಡುತ್ತ ನನ್ನ ತೇಜೋವಧೆ ಮಾಡಿದಳು. ಈ ಕ್ಷಣದಲ್ಲಿ ನನ್ನ ವೈಯಕ್ತಿಕ ಅಹಂಕಾರ ಸರ್ಪ ಹೆಡೆಯೆತ್ತಿ ಭುಸುಗುಟ್ಟಿತು ! ಸರ್ರನೆ ಅವಳೆಡೆಗೆ ಕೈಬೀಸಿ, ಚಕ್ಕನೆ ಮುಷ್ಟಿಗಟ್ಟಿ, "ಹ್ಹಾ ! ಸಿಕ್ಕಿದಳು ! ಸತ್ತಳು !!" ಎಂದು ಕಡುಸಂತೋಷದಿಂದ ಮೆಲ್ಲನೆ ಮುಷ್ಟಿ ತೆರೆದೆ. ಖಾಲಿ ಅಂಗೈ ! "ಅರೇಸ್ಕಿ ! ಕಣ್ಣಿಗೆ ಕಂಡದ್ದು ಕೈಗೆ ಇಲ್ಲವಾಯ್ತೆ !" – ಎಂದು ನನ್ನ ಬಿಟ್ಟ ಬಾಯಲ್ಲಿ ಮಾತು ಬರುವುದೇ ತಡ, ಅವಳು ಹಿಂದಿನಿಂದ ಹಾರಿಬಂದು, ನನ್ನ ಎಡಕಿವಿಯ ಅಂಚಿನ ಮೇಲೆ ಕುಳಿತಳು. ಈ ಬಾರಿ ಅವಳನ್ನು ಆಹುತಿ ತೆಗೆದುಕೊಂಡೇ ತೀರಬೇಕೆಂದು ಮಾರಿಸಂಕಲ್ಪ ಮಾಡಿದೆ. ನನ್ನ ರುಂಡ

ಮುಂಡಗಳನ್ನು ಶವಪ್ರಾಯ ಮಾಡಿದೆ! ಬಲಗಡೆ ಇದ್ದ ಪತ್ರಿಕೆಯನ್ನು ತೆಗೆದು ಕೊಂಡು ದಪ್ಪನಾಗಿ ಮಡಿಸಿ–ಎಡಗೈಗೆ ವರ್ಗಾಯಿಸಿದೆ ; ಮೆಲ್ಲಗೆ ಕಿವಿ ನೇರಕ್ಕೆ ಎತ್ತಿ–ಅದರ ಮೇಲೆ–ಪೋಟು ಬೀಳುವಂತೆ–ರಪ್ಪನೆ ಅಪ್ಪಳಿಸಿದೆ. ಈ ಸಲವೂ ನನ್ನ ಪ್ರಯತ್ನ ಕೈಗೂಡಲಿಲ್ಲ. ಅವಳ ಕೋಮಲಕಂಠದ ಏಕನಾದದಿಂದ, ಆ ಕಠೋರಮುಖಿ ಇನ್ನೂ ಬದುಕಿದ್ದಾಳೆ–ಬಹಳ ಲವಲವಿಕೆಯಿಂದ ಇದ್ದಾಳೆ ಎಂದು ಗೊತ್ತಾಯಿತು. ಆ ಮಾಯಾವಿನಿಯ ಪತ್ತೆ ಹಚ್ಚುವುದಕ್ಕೋಸ್ಕರ, ಹಾಗೆಯೇ ಆಲಿಸುತ್ತ; ಕಣ್ಣಿನಿಂದ ಗಾಡಿಯ ಅಂತರಾಳವನ್ನೆಲ್ಲ ತಡಕಾಡಿದೆ. ಗಾಡಿಯ ಒಳಗಿನ ಅಂತರಿಕ್ಷದ ತುಂಡಿನಲ್ಲಿ ಅವಳು ಹಾರಾಡುತ್ತಿದ್ದುದು ಕಣ್ಣಿಗೆ ಬಿತ್ತು. ಕೂಡಲೇ ನಾನು, ಕುಳಿತುಕೊಳ್ಳುವ ಮೆತ್ತೆಯ ಮೇಲೆ ನೆಗೆದು ನಿಂತು–ಆ ಕ್ಷಣಕ್ಕೆ ದೀಪದ ಸುತ್ತ ಪ್ರದಕ್ಷಿಣೆ ಮಾಡುತ್ತಿದ್ದ ಅವಳನ್ನು ಹಿಂಬಾಲಿಸಿದೆ; ಅವಳನ್ನು ತೀರಿಸಿಬಿಡುವ ಆಸ್ಪದಕ್ಕಾಗಿ, ಹುಲಿ ಜಾತಿಗೆ ಸೇರ್ದ ಬೆಕ್ಕಿನಂತೆ ಹೊಂಚುಹಾಕಿದೆ ; ಅವಳು ಎಲ್ಲಾದರೂ ಕುಳಿತುಕೊಂಡಾಳೇನೋ ಎಂದು, ಬೇಟೆಗಾರನಂತೆ ಕಾದು ನೋಡಿದೆ ; ಕುಳಿತುಕೊಂಡ ಕೂಡಲೆ, ಬಲು ಜಾಗರೂಕತೆಯಿಂದ–ಭಯಂಕರ ಸೇಡಿಗೆ ಘೋರ ತೀವ್ರಾಕಾಂಕ್ಷೆಯಿಂದ– ಪತ್ತೆ ಯಾಗದಂತೆ ಹತ್ತಿರ ಹೋಗಿ, ಬರಸಿಡಿಲಿನಂತೆ ಬಡಿಯತೊಡಗಿದೆ. ಆಹಾ! ಆ ಕೀಟಾಧಮಳನ್ನು ಕೊಲ್ಲುವ ಉದ್ರೇಕದ ಭರವಲ್ಲಿ, ಅವಳು ಕುಳಿತ ನನ್ನ ಕೆನ್ನೆ, ಮೂಗು, ಹಣೆ, ಕುತ್ತಿಗೆಗಳಿಗೆ ನಾನೇ ಹತ್ತಿಪ್ಪತ್ತು ಸಲ–ಫಠೀರ್–ಫಠೀರ್– ಎಂದು ಬಾರಿಸಿಕೊಂಡೆ!

ಏನೇ ಆಗಲಿ; ನನ್ನ ಸಾಹಸ–ಸರ್ಕಸ್ಸು, ಹಸ್ತಾಯುಧ–ಪತ್ರಿಕಾಸ್ತ್ರ, ಮಾರ್ಜಾಲ ಮಂತ್ರ–ಮಾನವತಂತ್ರ ಎಲ್ಲ ಬಟ್ಟಬಯಲಾಯಿತು. ಕೋಪೋದ್ರೇಕದಿಂದ ಗುಟುರುತ್ತ – ಭುಸುಗುಡುವ ಗೂಳಿಭೈರವನನ್ನು – ಚತುರನಾದ ಗೂಳಿಕಾಳಗ ಮಲ್ಲನು ಸುತ್ತುತ್ತ ಆಡಿಸುವಂತೆ, ಆ ಕೀಟಚದುರೆ, ಬಹಿರಂಗ ವಾಗಿ–ಬಲು ಬೆಡಗಿನಿಂದ ನನ್ನನ್ನು ಆಟವಾಡಿಸಿದಳು.

ಈ ಸಮಯದಲ್ಲಿ ನನಗೆ ಒಂದು ವಿಷಯ ಖಚಿತವಾಯಿತು. ಈ ಆಟ ದಿಂದ ಅವಳ ಮಟ್ಟಿಗೆ ಅವಳು ಬಹಳ ವಿನೋದವಾಡುತ್ತಿದ್ದಂತೆ ಕಂಡಿತು. ಅಂದ ಮೇಲೆ ಈ ವಿಲಕ್ಷಣ ಆತ್ಮೋಲ್ಲಾಸಕ್ಕಾಗಿಯೇ ಅವಳು ಸಭ್ಯತೆಯ ಸೀಮೋ ಲ್ಲಂಘನೆಮಾಡಿ, ನನ್ನ ಶಾಂತಿಗೆ ಭಂಗ ಉಂಟುಮಾಡಿದಳೆಂಬುದು ಸ್ವಯಂ

ವೇದ್ಯವೇ ಅಲ್ಲವೇ ? ಅವಳಿಗೆ ಇನ್ನೂ ಹೊಸಪ್ರಾಯ ಎಂದು ಕಾಣುತ್ತದೆ; ಸ್ವಲ್ಪ ಆಟ ಸರಸ ಬೇಕಿತ್ತೋ ಏನೋ ? ಬಹು ರುಚಿಕರವಾದ ರಕ್ತದ ಭಾಂಡ ವಾಗಿ, ಪರ್ವತದಂತೆ ಬೃಹದಾಕಾರನಾಗಿದ್ದರೂ ಕೈಲಾಗದ ಈ ಮೊದ್ದು ಮಾನವನೊಡನೆ ಚೂಟು ಆಡುವುದಕ್ಕಿಂತ ವಿನೋದಕರವಾದದ್ದು ಬ್ರಹ್ಮ ಸೃಷ್ಟಿಯಲ್ಲಿ ಇನ್ನು ಏನಿದ್ದೀತು !...ನಿಜ, ಈ ಪ್ರಸಂಗವನ್ನು ನೋಡುವ ಇನ್ನೊಂದು ದೃಷ್ಟಿಕೋನವೂ ಇದೆ ! ನಾನು ಈ ಕೋಣ(ದ) ದೃಷ್ಟಿಯಿಂದ ಅವಳ ಮನೋಭಾವದೊಡನೆ ಐಕ್ಯಹೊಂದತೊಡಗಿದೆ. ನನ್ನ ದೃಷ್ಟಿಯಲ್ಲಿ ಈ ಪಲ್ಲಟವಾದದ್ದೇ ತಡ ಅವಳು ನನ್ನ ಭಾಗಕ್ಕೆ, ವೃಥಾ ಕಿರುಕುಳಕೊಡುವ ಕೀಟ ಮಾತ್ರವಾಗಿ ಉಳಿಯಲಿಲ್ಲ; ಅತ್ಯವಶ್ಯವಾಗಿ ಲೆಕ್ಕಾಚಾರಕ್ಕೆ ತೆಗೆದುಕೊಳ್ಳ ಬೇಕಾದ ಒಂದು ಸತ್ವಪೂರ್ಣ ವ್ಯಕ್ತಿತ್ವವನ್ನು ತಳೆದು ನಿಂತಿದ್ದಳು; ನಿಂತಿದ್ದಳೇ ? – ಅಲ್ಲ, ಹಾರಾಡುತ್ತಿದ್ದಳು–ಗಾನವಿಶಾರದೆ. ನನ್ನೊಡನೆ ಈ ರೈಲುಗಾಡಿಯ ಸಮಾನಸ್ವಾಮಿತ್ವಕ್ಕಾಗಿ ಸವಾಲು ಹಾಕುವ ಅಪಾರ ಬುದ್ಧಿ ಶಕ್ತಿಯಾಗಿದ್ದಳು–ಈ ವಿಷವದನೆ. ಮೂರು ದಿನದ ಹಿಂದೆ, ರಾಜಧಾನಿಯ ಪುರಭವನದಲ್ಲಿ "ಸಕಲ ಇಂಡಿಯಾ ಗಂಡುನಾರೀ ಗೋಷ್ಠಿ"ಯ ವಾರ್ಷಿಕ ಸಮ್ಮೇಳನದಲ್ಲಿ ಅಧ್ಯಕ್ಷಿಣಿ ಶ್ರೀಮತಿ ಹಯುವದನಾಬಾಯಿ ಕಠೋರ್‌ಕರ್‌ರವರು "ಸಪ್ತಸಮುದ್ರಗಳೂ ಸೇರಿ ಈ ಭೂಮಿಯೂ, ಇದರ ಸಕಲ ಸಂಪತ್ತೂ, ಭೋಗ ಭಾಗ್ಯಗಳೂ–ಬಿಸಿಲು ಬೆಳದಿಂಗಳುಗಳೂ, ಅವಕಾಶ ಆಸ್ಪದಗಳೂ ಪುರುಷರ ಉತ್ತಮಾರ್ಥರಾದ–ಆಗಬಹುದಾದ ನಮಗೆ. ಕನಿಷ್ಠಪಕ್ಷ ಶೇಕಡ ಅರವತ್ತ ರಂತೆಯಾದರೂ ಈ ಕೂಡಲೆ–ಇಲ್ಲಿ–ಈಗ !–ಹಿಸ್ಸೆಯಾಗಬೇಕು !" ಎಂದು ಕೀರಲುವಾಣಿಯಿಂದ ಘೋಷಿಸಿದ್ದು ನೆನಪಾಯಿತು. ಆ ಮಹಾತಾಯಿಯ ಪ್ರತೀಕವೋ ಪ್ರೇತವೋ ಎಂಬಂತಿದ್ದ ಈ ಮೃತ್ಯುಚುಂಬಕಿಯನ್ನು ಕಂಡು, ನನ್ನ ಪುರುಷಹೃದಯ ಸಹಾನುಭೂತಿಯ ಶಾಖದಿಂದ ಹಿಗ್ಗಿತು. ನಾನು ಕುಳಿತಿದ್ದ ಗಾಡಿಯ - ಶೇಕಡ ಅರುವತ್ತರಷ್ಟೇ ಏಕೆ ! – ತೊಂಭತ್ತೊಂಭತ್ತರಷ್ಟನ್ನು ಖುದ್ದು ರಾಜಿಯಿಂದ ಬಿಟ್ಟುಕೊಡಲು ನನ್ನ ಮನಸ್ಸು ಸಿದ್ಧವಾಯಿತು. ನೂರೈವತ್ತು ಇನ್ನೂರು ವರ್ಷಗಳಿಂದ ಬೇರೂರಿ ಬಲಿತಿದ್ದ ಬ್ರಿಟಿಷ್ ಕದೀಮರೇ ಕಾಲ ಗತಿಯನ್ನನುಸರಿಸಿ – ಬೇರೆ ಗತಿ ಕಾಣದೆ, ಇಡೀ ಭರತಖಂಡವನ್ನೇ

ಬಿಟ್ಟುಕೊಟ್ಟು ಬಂದ ದಾರಿಹಿಡಿದಮೇಲೆ, ಮೈಸೂರಲ್ಲಿ ಹತ್ತಿ ಅರಸೀಕೆರೆಯಲ್ಲಿ ಳಿಯುವ ನಾನು ಹಟತೊಡುವುದರಲ್ಲಿ ಅರ್ಥವೇನು ?....ನನ್ನ ಮೇಲು ಗಾರಿಕೆಯ ಅಹಂ ಸರ್ಪ ಹೆಡೆ ಮುದುರಿ ಸುರುಳಿಯಾಗಿ ಸುಪ್ತವಾಯಿತು ಅಷ್ಟಲ್ಲದೆ ಏನು ? ನಾನು ತೊಡಲಿದ್ದ ಒಂದೇ ಒಂದು ಪೈಪೋಟಿಯಲ್ಲಿ - ಹೋರಾಟದಲ್ಲಿ - ನನ್ನ ಗಾತ್ರಕ್ಕೆ ಬೆದರದೆ, ನನ್ನ ಕೋಪ - ಆಟಾಟೋಪಗಳಿಗೆ ಅಂಜದೆ, ಧಿಕ್ಕರಿಸಿ ಅಟ್ಟಹಾಸದಿಂದ ಹಾಡುತ್ತ, ನನ್ನ ಮೇಲೆ ಪೂರ್ಣ ಅಧಿಕಾರವನ್ನು ಪಡೆದಿದ್ದ ಪ್ರಾಣಿಗಿಂತ ನಾನು ಹೆಚ್ಚು - ಎಂದು ಗರ್ವ ಪಡೆಯು ವುದಾದರೂ ಹೇಗೆ ? ಪುನಃ ಔದಾರ್ಯವನ್ನೇ ಏಕೆ ತೋರಿಸಬಾರದು ? ಔದಾರ್ಯ, ದಯೆ – ಕನಿಕರ ಇವು ಮನುಷ್ಯನ ಮಾನವತೆಯ – ಅತ್ಯುನ್ನತ - ಅಗ್ರಗಣ್ಯ - ಲಕ್ಷಣಗಳು. ನಾನು ಈ ಕಲ್ಯಾಣಗುಣಗಳನ್ನು ಧಾರಾಳವಾಗಿ ಪ್ರದರ್ಶಿಸಿ, ಹುಡಿಹುಡಿಯಾಗಿರುವ ನನ್ನ ಆತ್ಮ ಗೌರವ – ಪ್ರತಿಷ್ಠೆಗಳನ್ನು ವಾಪಸು ಪಡೆಯುವ ಅವಕಾಶ ಇದೆ. ಸದ್ಯಕ್ಕಂತೂ ನಾನೊಬ್ಬ ನಾಚಿಕೆ ಗೇಡಿನ ದುರ್ಬಲ ವ್ಯಕ್ತಿಯಾಗಿದ್ದೆ ; ಅವಹೇಳನಕ್ಕೂ ಗುರಿಯಾದ ಗೂಳಿ ಗಣ್ಣಾ (Bull's Eye) ಗಿದ್ದೆ. ಈ ವಿಷಮ ಪರಿಸ್ಥಿತಿಯಲ್ಲಿ ನಾನು ಔದಾರ್ಯ ಕನಿಕರಗಳ ಕೋಡಿ ಹರಿಸಿ, ಮಾನವ ಕುಲದ – ಅದರಲ್ಲೂ ಗಂಡಸರ – ನೈತಿಕ ಘನತೆ ಗೌರವಗಳನ್ನು ಅವುಗಳ ಉನ್ನತ ಪೀಠದಲ್ಲಿ ಪುನಃ ಪ್ರತಿಷ್ಠೆ ಮಾಡಿ, ಮುಖರಕ್ಷಣೆ ಮಾಡಿಕೊಂಡು, ಮಾನದಿಂದ ಗಾಡಿಯಲ್ಲಿ ನನ್ನ ಮೂಲೆಗೆ ನಾನು ಹೋಗಬಹುದು – ಹೌದು. ಆದ್ದರಿಂದ ನಾನು ಸೊಳ್ಳೆಗೆ ಕೇಳಿಸು ವಂತೆ ಗಟ್ಟಿಯಾಗಿ ಹೇಳಿದೆ : "ಎಲೌ ಬಾಣಮುಖಮಶಕೀ, ನಿನ್ನ ಹೋರಾ ಟದ ಹಿಂಬದಿಯ ತತ್ತ್ವವನ್ನು ಒಪ್ಪಿ, ಇದೋ – ನಿನಗೆ ವಿಧಿಸಿದ್ದ ಮರಣ ಶಿಕ್ಷೆಯ ತೀರ್ಪನ್ನು ವಾಪಸು ತೆಗೆದುಕೊಳುತ್ತೇನೆ – ನಿನ್ನನ್ನು ಕೊಲ್ಲಲಾರೆ, ನಿಜ ; ಆದರೆ, ಮೃತ್ಯುವಿನ ದಾಡೆಯಿಂದ ನಿನ್ನನ್ನು ಈಚೆಗೆ ಎಳೆದು ಕೊಳ್ಳಬಲ್ಲೆ – ಎಳೆದುಕೊಳ್ಳುತ್ತೇನೆ."

—ಹೀಗೆ ಹೇಳಿ ಮುಗಿಸಿ ನಾನು, ನನ್ನ ಮೂಲೆಗೆ ಹೋಗಿ ಕುಳಿತು – ಈ ಸಲ ಕೈಗೆ "ಸರ್ವೋದ್ಧಾರ" ಮಾಸಪತ್ರಿಕೆಯನ್ನು ತೆಗೆದುಕೊಂಡು ತೆರೆದೆ. ಆ ಸೊಳ್ಳೆ ಬಂದು, ಆತ್ಮಹತ್ಯೆಗೋ ಎಂಬಂತೆ – ಈ ಬಾರಿ, ನಾನು ತೆರೆದಿದ್ದ ಹಾಳೆಯ ಕೇಂದ್ರದಲ್ಲೇ ಕುಳಿತುಕೊಂಡಿತು. ಅದನ್ನು ಉದ್ದೇಶಿಸಿ ನಾನು

ಹೇಳಿದೆ ! "ಎಲೆ ಮುಠ್ಠಾಳ ಹೆಣ್ಣೇ ! ಈ ಸಲ ನೀನು ನನ್ನ ಕೈಗೆ ಚೆನ್ನಾಗಿ ಸಿಕ್ಕಿರುವೆಯೆಂಬುದನ್ನು ಕಾಣೆಯಾ ? ಇದೊ – ಭಾರತವನ್ನು ಭೂಸ್ವರ್ಗ ಮಾಡಲು ಟೊಂಕಕಟ್ಟಿರುವ ಈ ಘನ ಮಾಸಪತ್ರಿಕೆಯನ್ನು ರಪ್ಪನೆ ಮುಚ್ಚಿದರೆ – ಆದೆ, ನೀನು ಅಪ್ಪಚ್ಚಿ ! 'ಅಹಿಂಸೆ' ಎಂಬ ಲೇಖನಕ್ಕೂ 'ಪ್ರಾಣಿದಯೆ' ಎಂಬ ಲೇಖನಕ್ಕೂ ನಡುವೆ ನೀನು, ಮಸಾಲೆ ದೋಸೆ ಮಡಿಕೆಯ ಮಧ್ಯದ ಪಲ್ಯ ಚಟ್ನಿಯಂತೆ ಆಗುತ್ತೀಯೆ ! ಆದರೆ, ಹೆದರಬೇಡ,– 'ಕೊಟ್ಟ ಭಾಷೆಗೆ ತಪ್ಪಲಾರೆನು – ಕೆಟ್ಟ ಯೋಚನೆ ಮಾಡಲಾರೆನು.' ನಿನ್ನನ್ನು ಕನಿಕರದಿಂದ ಖುಲಾಸೆ ಮಾಡಿದ್ದೇನೆ. ಈ ದೊಡ್ಡ ಪ್ರಾಣಿ, ಮನಸ್ಸೇ ಒಂದು, ಮಾತೇ ಒಂದು, ಕೆಲಸವೇ ಒಂದು – ಆದ ದುರಾತ್ಮನಲ್ಲ ; ಮನಸ್ಸು, ಮಾತು – ಕೆಲಸ – ಎಲ್ಲ ಒಂದೇ ಆಗಿರುವವನು. ಈ ಮಹಾ ಕಾಯನ ಮನಸ್ಸು – ಮಾತುಗಳೂ ಮಹತ್ ಬೃಹತ್‌ಗಳಿಂದ ಕೂಡಿವೆ ಯೆಂದು ಕಾರ್ಯತಃ ನಿನಗೆ ರುಜುವಾತು ಮಾಡಿಕೊಡುತ್ತೇನೆ. ನನಗೆ ನಿನ್ನ ಪ್ರಾಣ ತೆಗೆಯುವ ಆಸೆ ಇನ್ನು ಇಲ್ಲ. ಅಷ್ಟೆ ಅಲ್ಲ, ನನ್ನ ಬದಲಾಯಿಸಿದ ಕೋಣದೃಷ್ಟಿಗೆ ನಿನ್ನ ಪರಿಚಯ ಚೆನ್ನಾಗಿ – ಸರಿಯಾಗಿ ಆದುದರ ಫಲವಾಗಿ, ನಿನ್ನ ವಿಷಯದಲ್ಲಿ (ಹೇಳಲೇ ?) ಒಂದು ವಿಶೇಷ ಮಾದರಿಯ ಮಮತೆ ಯುಂಟಾಗಿದೆ. ಮಹಾತ್ಮಾ ಗಾಂಧೀಜಿಯವರ ಪಟ್ಟ ಶಿಷ್ಯ ಕೋಟಿಯಲ್ಲಿ ಯಾರಾದರೂ ಒಬ್ಬ ಮರಿಮಹಾತ್ಮ ನಿನ್ನನ್ನು 'ಪುಟ್ಟ ಸೋದರೀ' ಎಂದು ಪ್ರೀತ್ಯಾದರದಿಂದ ಕರೆದಾನು. ಕರೆಯಲಿ : ನನ್ನ ಆಕ್ಷೇಪಣೆಯೇನೂ ಇಲ್ಲ. ನನ್ನ ಮಟ್ಟಿಗೆ, ಗಾಂಧೀಯ ಧರ್ಮ – ತತ್ತ್ವಗಳಲ್ಲಿ ಅಷ್ಟು ದೂರ ಹೋಗಲಾರೆ ನಾದರೂ ನನಗೂ ನಿನಗೂ ಮಧ್ಯೆ ಸ್ವಲ್ಪ ದೂರದ ಬಾಂಧವ್ಯವನ್ನೂ ಒಪ್ಪಿ ಕೊಳ್ಳಲು ಸಿದ್ಧವಾಗಿದ್ದೇನೆ. ಕೇಳು, ಕೀಟ ಕುಲಲಲಾಮೆ, ಈ ಗ್ರೀಷ್ಮ ಚಂದ್ರಿಕಾ ರಜನಿಯ ರೈಲುಗಾಡೀ ಪ್ರಯಾಣದಲ್ಲಿ, ಯಾವುದೋ ಅದೃಷ್ಟ ಸುಕೃತದಿಂದ ನೀನು ನನ್ನ ಪ್ರಯಾಣಸಖಿಯಾಗಿರುವೆ. ನನ್ನಿಂದ, ಹೆಣ್ಣಿಗೆ ಹುಟ್ಟು ಗುಣವಾದ ನಿನ್ನ ಕುತೂಹಲ ತೃಪ್ತಿಯಾಗಿದೆ. ನೀನು ಸೊಳ್ಳೆ ಯಾದರೂ – ಹೆಣ್ಣಾದ್ದರಿಂದ – ನನಗೂ ಮನರಂಜನೆಯಾಗಿದೆ ಎಂದು ಒಪ್ಪಿ ಕೊಳ್ಳುತ್ತೇನೆ. ಆದ್ದರಿಂದ ನಮ್ಮಿಬ್ಬರ ಋಣಾನುಬಂಧ – ಹಾಗೂ ವಿಮೋಚನೆ ಪರಸ್ಪರವಾದದ್ದು ; ನಾವಿಬ್ಬರೂ ಸಹಮರ್ತ್ಯರು – ಎನ್ನುವ

(ಪ್ರಾಣಕ್ಕೆ !) ಮೂಲಸತ್ಯದ ಆಧಾರದ ಮೇಲೆ ಸ್ಥಾಪಿತವಾದದ್ದು. ಜೀವದ ಸವಾಡ – ರಹಸ್ಯಗಳ ಸಮಾನ ಪಾಲುಗಾರಿಕೆ ನಮ್ಮದು. ಬಹುಶಃ ನಿನ್ನ ಪ್ರಯಾಣದ ಗುರಿ ಏನೆಂದು ನಿನಗೆ ತಿಳಿದಿರಲಾರದು. ತನ್ನ ಪ್ರಯಾಣದ ಗುರಿ ಏನೆಂದು ಈ ಮಹಾ ಘಟಕ್ಕೂ ನಿನಗಿಂತ ಹೆಚ್ಚು ತಿಳಿದಿದೆಯೆಂಬ ಖಾತ್ರಿಯಿಲ್ಲ ! .... ಆಹಾ ! ಹಾಗೆಯೇ ಯೋಚಿಸಿದರೆ, ನಿಜವಾಗಿಯೂ ನಮ್ಮಿಬ್ಬರಿಗೂ ಸಾಮ್ಯ ಎಷ್ಟು ಹೆಚ್ಚಾಗಿದೆ ! ಈ ಕ್ಷಣ ಇದ್ದು – ಮರುಕ್ಷಣ ಇಲ್ಲದಂತೆ ಭಾಸವಾಗುವ ಛಾಯೆಗಳು ! ಮಹಾ ರಾತ್ರಿಯ ನಿಗೂಢ ಗರ್ಭದಿಂದ ಹೊಮ್ಮಿ, ಬೆಳಕು ತುಂಬಿದ ಗಾಡಿಯೊಂದನ್ನು ಪ್ರವೇಶಿಸಿ, ಕೆಲವು ಕ್ಷಣಗಳು ದೀಪದ ಸುತ್ತ ಸಂಭ್ರಮದಿಂದ ಹಾರಾಡಿ, ಪುನಃ ಅನಂತ ನಿಶಿಯ ಮಸಿ ಹೃದಯಕ್ಕೆ ಹಿಂತಿರುಗುವ – ಅಸ್ಪಷ್ಟ ಆಕೃತಿಯ – ಅನಿರ್ದಿಷ್ಟ ಗುರಿಯ – ಗಾಳಿಗೂ ಹಗುರಾದ ಮಂಜುಮುಗಿಲ ಮಸಕು ರೂಪಗಳು ಮಾತ್ರ !...."

ಯಾರೋ ಕಿಟಕಿಯ ಬಳಿ ಮಾತಾಡಿದಂತಾಯಿತು. ಮೂಲೆಗೆ ಒರಗಿ ನಿದ್ದೆ ಹೋಗುತ್ತಿದ್ದ ನನ್ನನ್ನೂ ಯಾರೋ ಪುಣ್ಯಾತ್ಮ ಪೋರ್ಟರು ಎಬ್ಬಿಸಿದ. "ಸ್ವಾಮೀ, ಇದು ಅರಸೀಕೆರೆ; ತಾವು ಎಲ್ಲಿಗೆ ಹೋಗಬೇಕು ?" ಎಂದು ಕೇಳಿದ. ನಾನು ಅರಸೀಕೆರೆಯಲ್ಲೇ ಇಳಿಯಬೇಕಾಗಿತ್ತು. ಸದ್ಯ – ಹರಿಹರಕ್ಕೆ ಹೋಗೋದನ್ನ ತಪ್ಪಿಸಿದನಲ್ಲ – ಎಂದು ಸಂತೋಷದಿಂದ ಅವನನ್ನು ಹರಸಿ, ಅವನ ಕೈಗೆ ಎರಡಾಣೆ ಇಟ್ಟು ನನ್ನ ಟೋಪಿ (ಬಿಳೀದಲ್ಲ !) ಕೈ ಪೆಟ್ಟಿಗೆ ಸಮೇತ ಗಾಡಿಯಿಂದ ಇಳಿದೆ. ಇಳಿಯುವಾಗ ಒಮ್ಮೆ ಹಿಂದಿರುಗಿ ಗಾಡಿಯೊಳಗೆ ನೋಡಿದೆ, ದೀಪದ ಸುತ್ತ ಬಹು ಉಲ್ಲಾಸದಿಂದ ಸುತ್ತಿ ಸುತ್ತಿ ನರ್ತಿಸುತ್ತಿದ್ದಳು – ನನ್ನ ಪ್ರಯಾಣಸಖಿ.

ಸಾವಧಾನ

ದ. ಬಾ. ಕುಲಕರ್ಣಿ

ರಾಕೆಟ್ ಯುಗದಲ್ಲಿ ಸಾವಧಾನ — ಎನ್ನುವುದು ಎಂಥ ಆಭಾಸ? ಇದು ಅವಸರದ ಕಾಲ; ಓಟದ ಯುಗ. ಇಂದು – ನಾಳೆಗಳ ಅಂತರವೇ ಹಿರಿದಾಗಿ ಮಧ್ಯದ ಅಲ್ಪಾವಕಾಶದಲ್ಲಿ ಅತ್ಯಮೋಘ ಅವಸ್ಥೆಗಳನ್ನು ಸೀಳಿ ಮುಂದುವರಿಯುವ ಕಾಲದಲ್ಲಿ ಸಾವಧಾನ ಸೂತ್ರವು ಪ್ರತಿಗಾಮಿ ಮನೋವೃತ್ತಿಯ ದ್ಯೋತಕವಾಗಿ ಕಂಡರೆ ಆಶ್ಚರ್ಯವಲ್ಲ ಆದರೆ ಬದುಕಿನ ಅವಸ್ಥೆಗಳು ಸಾವಧಾನವನ್ನೇ ಬಯಸುತ್ತವೆಂಬುದನ್ನು ತಿಳಿದುನೋಡುವಷ್ಟಾದರೂ ವ್ಯವಧಾನವಿದ್ದರೆ ಸರಿ; ಇಲ್ಲವಾದರೆ ಜೀವನ – ಮರಣಗಳು ಬದುಕಿನ ಮಧ್ಯಂತರವನ್ನೇ ಕಳೆದುಕೊಂಡು ಶೈಶವ, ತಾರುಣ್ಯ ಮತ್ತು ಮುಪ್ಪು ಇವುಗಳನ್ನು ಶಾಸ್ತ್ರೋಕ್ತವಾಗಿಯೂ ಅನುಭವಿಸದೆ ಕೇವಲ ಗೃಹಿಕೆಯನ್ನು ಮಾತ್ರ ಹೊಂದಿ ಧಾವಿಸಿದಂತಾಗುತ್ತದೆ. ಬದುಕು ಎಂಬುದು ಕ್ರಮಾಗತವಾದ, ಹಂತ – ಹಂತವಾದ ಅವಸ್ಥಾಂತರಗಳನ್ನು ಹಾದು ಬರುವುದೇ ಆಗಿದೆ. ಯಾವಾಗಲೂ ನಡುಗಾಲವೇ ಸೊಗಸು. ನಾವು ನಡೆನಡೆದಂತೆ ನಮ್ಮ ಹೆಜ್ಜೆಗಳು ಯಾವುದಾದರೊಂದು ಗುರಿಯ ನಡುನಡೆಯನ್ನೇ ಹೊಂದಿರುತ್ತವೆ.

ಗಣಿ ಏರಿ ನಿಲ್ಲುವುದು, ಕೊನ್ನಾರದಲ್ಲಿ ಧುಮುಕುವುದು — ಎರಡೂ ಅವಿವೇಕ. ಆಗುಂಬೆಯಿಂದ ಸೋಮೇಶ್ವರಕ್ಕೆ ಒಮ್ಮೆಲೆ ಹಾರಿಕೊಂಡು ತಲುಪಿ ಮಾಡುವುದೇನು? ಎರಡು ಅಂಚುಗಳನ್ನು ಮುಟ್ಟುವುದೇ ಶ್ರೇಯಸ್ಸಲ್ಲ. ಮಧ್ಯದ ಒಡಲಿರುವುದರಿಂದಲೇ ಅದರ ವಿಸ್ತಾರಕ್ಕೆ ಈ ಮೇರೆಗಳು ಅಂಚಾಗುತ್ತವೆ. ಒಡಲು ಇಲ್ಲದೆ, ಪ್ರದೇಶವಿಲ್ಲದೆ ಅಂಚು ಯಾವುದಕ್ಕೆ? ಮೇರೆ ಯಾವುದಕ್ಕೆ? ಬದುಕು ಒಡಲಾದರೆ ಹುಟ್ಟು–ಸಾವು ಮೇರೆಗಳು.

ಬದುಕಿನ ಅವಸ್ಥಾಂತರಗಳು ಆವಿರ್ಭವಿಸಿದಂತೆ ಬರುವುದಿಲ್ಲ. ಬದುಕು ಲಾಟ್ರಿ ಸಂಪತ್ತಿನಂತಲ್ಲವೇ ಅಲ್ಲ. ಕೂದಲು ಅರಿಯದೆ ಬೆಳೆದಂತೆ, ಸಸ್ಯಗಳು ದಿನ ದಿನಕ್ಕೂ ನಿಲವು ಪಡೆಯುವಂತೆ ಪರಿವರ್ತನೆ ಹೊಂದುವುದೇ ಬಾಳಿನ

ಗತಿ. ಕೂದಲು ಬೋಳಿಸಿ ತೆಗೆದಂತೆ ಕ್ರಾಂತಿ ಆಭಾಸಯುಕ್ತವಾದದ್ದು. ಅದು ಅವಿವೇಕವೂ ಅಹುದು. ಶೈಶವವನ್ನು ಹಾದು ಬರದೆ ಕಾವ್ಯದಿಂದ, ಕತೆಯಿಂದ ಅದನ್ನು ಗ್ರಹಿಸಲಾಗುವುದಿಲ್ಲ. ಎಲ್ಲರೂ ಶೈಶವ ಹಾದು ಬಂದವರೇ ಆಗಿರುವುದರಿಂದ ಆ ಕತೆ, ಆ ಕಾವ್ಯಗಳು ನಮಗೆ ಭಾವವೇದ್ಯ ವಾಗುತ್ತವೆ. ತಾರುಣ್ಯವೂ ಅಂತಹದೇ ಒಂದು ಅವಸ್ಥೆ. ಅದನ್ನು ಮಾತ್ರ ಯಾರೂ ಅವಸರದಲ್ಲಿ ದಾಟಿ ಬಯಸುವುದಿಲ್ಲ. ಅದರಲ್ಲೇ ಸದಾ ಕಾಲ ಬದುಕು ಮಾಡುವ ಆಸೆ ಪ್ರತಿಯೊಬ್ಬ ಮನುಷ್ಯ ಮಾತ್ರನಿಗೂ ಇದೆ. ಶೈಶವದಲ್ಲಿ ತಾರುಣ್ಯ ಕರೆಯುತ್ತದೆ; ಜೀವ ಧಾವಿಸುತ್ತದೆ. ಆದರೆ ತಾರುಣ್ಯದ ಅನಂತರದ ಅವಸ್ಥೆ ಮಾತ್ರ ಯಾರಿಗೂ ಅಷ್ಟು ಆಕರ್ಷಕ ವಾದುದಲ್ಲ. ಕರೆಯದೆ ಬರುವ ಮುಪ್ಪನ್ನು ಮುಂದೆ ಮುಂದೆ ಸರಿಸುವುದೇ ಮನುಷ್ಯನ ಯತ್ನ. ತಾರುಣ್ಯದಲ್ಲಿ ಒಂದು ಅವಸರವಿದ್ದೇ ಇದೆ: ಅದು ಭೋಗದ್ದು. ಅದನುಂಡಷ್ಟೂ ತೃಪ್ತಿ ಕಾಣದು. ಇನ್ನೊಂದು: ಯಶಸ್ಸಿ ನದು. ಅದೂ ಪಡೆದಷ್ಟೂ ಸಾಲದು. ಸುಖ ಎಂದರೆ ಇಷ್ಟೇಯೇ — ಎಂಬ ಚಿರಂತನವಾದ ಹಸಿವು ಸದಾ ಕಾಡುತ್ತದೆ. ತುಡುಗ ದನ ಕಂಡದ್ದನ್ನು ಗಸಗಸ ತಿಂದು ಮುಂದಿನ ಹೊಲಕ್ಕೆ ಓಡುವಂತೆ ಜೀವ ಧಾವಿಸುತ್ತದೆ. ನಡೆದ ದಾರಿಯ ಲೆಕ್ಕವಿಲ್ಲ. ಗಗನಚುಂಬಿಯಾಗಿ ಬಯಕೆ ಬಾಯ್ದೆರೆದೇ ಕುಳಿತಿರು ವಾಗ ಯಾವುದಕ್ಕೆ ಕಾಯಬೇಕು, ಯಾಕೆ ಕಾಯಬೇಕು? ಆಲೋಚನೆ— ಅದಕ್ಕೆ ಸಮಯವಿಲ್ಲ. ವಿರಾಮ — ಉಂ—ಹೂಂ. ರಕ್ತ ಧಮನಿಗಳು ಪೂರ ಬಂದಂತೆ ಚಲಿಸುವಾಗ, ಚಿತ್ತ ಹತ್ತೂ ದಿಕ್ಕಿಗೆ ಕತ್ತು ಚಾಚುವಾಗ, ಎದೆಯ ಕೆಚ್ಚು ಹುಚ್ಚೆದ್ದು ಕುಣಿಯುವಾಗ ಕೈಗೆ ಎಟಕಿದ್ದನ್ನು ಬಾಚಿ ವಶವರ್ತಿ ಯಾಗಿಸಿಕೊಂಡು, ಒಂದು ಕ್ಷಣ, ಒಂದೇ ಕ್ಷಣ ಪಡೆದದ್ದನ್ನು ಮೂಸಿನೋಡಿ ಇನ್ನೊಂದಕ್ಕೆ ಕೈ ಚಾಚುವ ಚಪಲ, ತೀರದ ಹಸಿವು, ಹರಿಗಡಿಯದ ಪಿಪಾಸೆ ನಿಂತಲ್ಲಿ ನಿಲ್ಲಗೊಡುವುದಿಲ್ಲ; ಇದ್ದಲ್ಲಿ ಇರಗೊಡುವುದಿಲ್ಲ. ಬಾಯ್ಗೆ ಆಗ ಎಲ್ಲಾ ರುಚಿ; ಕಣ್ಗೆ ಆಗ ಎಲ್ಲಾ ಸೊಗಸು; ಕಿವಿಗೆ ಎಲ್ಲಾ ಇಂಪು; ಮೂಗಿಗೆ ಕಂಪು — ಕಮ್ಮುಗೆ; ಮೈಗೆ ಬೀಸುವ ಗಾಳಿ ಹಿತಾವಹ. ಸುಡುವ ಬಿಸಲು ಯಾವ ಲೆಕ್ಕ? ಸುರಿವ ಮಳೆಗೆ ಮೈಯೊಡ್ಡಿ ಎದುರಿಸುವ ಹುಮ್ಮಸ್ಸು. ಆದರೆ ಮಂಗಮನಸ್ಸು ಇದನ್ನೆಲ್ಲಾ ಒಂದೊಂದೇ ಸಲದ

ಆಸ್ವಾದನೆಯಿಂದ ನಿರ್ಮಾಲ್ಯಗೊಳಿಸುತ್ತದೆ. ಹೊಸದು, ಇನ್ನೂ ಹೊಸದು; ಚೆಂದ, ಇನ್ನೂ ಚೆಂದ; ಇಂಪು — ಇನ್ನೊಂದು, ಕಂಪು ಮತ್ತೊಂದು ಎಂದು ಪಂಚಾಂಗಗಳನ್ನು ಹತ್ತು ದಿಕ್ಕುಗಳ ಆಸೆಗಳಿಂದ ಉದ್ದೀಪನಗೊಳಿಸುತ್ತದೆ. ಆದರೆ ಈ ಅವಸರ ಸಲ್ಲ — ಎಂದು ಯಾರು ಹೇಳಿಯಾರು ? ಹೇಳಿದರೆ ಯಾರು ಕೇಳಿಯಾರು ? ಆದರೂ ನೆನಪಿನ ಸೂತ್ರ ಕಹಿ – ಸಿಹಿಗಳ ದುಃಖ ಸುಖಗಳನ್ನು ಪೋಣಿಸುತ್ತಲೇ ಇರುತ್ತದೆ. ಪ್ರಜ್ಞಾಖಾತೆಯ ಫೈಲುಗಳಲ್ಲಿ ಎಲ್ಲಾ ಅಂಶಗಳೂ ನಮೂದಾಗುತ್ತವೆ.

ಮನುಷ್ಯನ ಬದುಕಿಗೆ ತಾರುಣ್ಯ ಒಡಲು. ಅದು ಹರಹಿಕೊಂಡಷ್ಟೂ ಹಬ್ಬಿಕೊಂಡಷ್ಟೂ ಉಬ್ಬಿ – ಕೊಬ್ಬಿ ಕೊಂಡಷ್ಟೂ ಅಪೇಕ್ಷಣೀಯ. ಇದೇ ಬಾಳಿನ ದೀರ್ಘ ಮಧ್ಯಾವಧಿ. ಇದು ವಿರಾಮರೇಖೆ ಮಾತ್ರ ಅಲ್ಲ ; ಆರಾಮ ಧಾಮವೂ ಅಲ್ಲ. ಅದು ಸಾಧ್ಯವೇ ಅಲ್ಲ. ಆದರೆ ನಿಜವಾದ ಆರಾಮ – ವಿರಾಮಗಳೂ ಹೊಸೆದುಕೊಂಡು, ದಣಿಯದ – ಮಣಿಯದ ಚೇತೋಹಾರಿಯಾದ, ಮತ್ತವಾದ, ಉನ್ಮತ್ತವಾದ ಅವಸ್ಥೆಗೆ ಎಲ್ಲವೂ – ಅವಿರಾಮವೂ ಸೊಗಸುವಾಗ ಈ ಮಧ್ಯಾವಧಿಯ ಅವಕಾಶವನ್ನು ನಾವು ಸಾವಧಾನದಿಂದ ಕಳೆಯಬಲ್ಲೆವಾದರೆ, ನಮ್ಮ ಔತ್ಸುಕ್ಯ ಚಿಂತನೌತ್ಸುಕ್ಯವಾದರೆ, ನಮ್ಮ ಶಕ್ತಿ - ಸಾಮರ್ಥ್ಯಗಳ ಎಲ್ಲೆಯನ್ನು ನಾವು ಅಳೆಯಬಲ್ಲೆವಾದರೆ ಮುಪ್ಪು ಸ್ವಲ್ಪ ನಿಧಾನವಾಗಿ ನಮ್ಮ ಕಡೆಗೆ ಕಣ್ಣು ಹಾಯಿಸುತ್ತದೆ. ಇಲ್ಲವೋ ನಾವರಿಯದಂತೆಯೇ ಅದು ನಮ್ಮ ತಲೆಯೇರಿ ಬೆಳ್ಳಿ ಮಾಡವನ್ನು ನಿರ್ಮಿಸುತ್ತದೆ. ಮುಖದಲ್ಲಿ - ಮೈ ಯಲ್ಲಿ ನಿರಿಗೆಗಳು ಒಂದೊಂದೇ ಬಂದು ಸೇರುತ್ತವೆ. ಕಾಲು ಅರಿಯದೆ ಜಡವಾಗಿ, ಕೈ ಬೀಸು ಚುರುಕುತನವನ್ನು ಕಳೆದುಕೊಳ್ಳುತ್ತದೆ. ದೃಷ್ಟಿ ಚಪಲತೆಯನ್ನು ನೀಗಿಕೊಳ್ಳುತ್ತದೆ. ನರಗಳ ಹುರಿ ಮೆಲ್ಲಮೆಲ್ಲನೆ ಸಡಿಲುತ್ತದೆ. ನಮ್ಮ ಅವಸರ ತಂತಾನೆ ಸಾವಧಾನಗೊಳ್ಳುತ್ತದೆ. ಆದರೆ ಮನಸ್ಸು ಮಾತ್ರ ದಣಿಯದ ಚೇತನೆಯುಳ್ಳದ್ದು. ಅದು ಮೈ ದಣಿದಂತೆ ದಣಿವುಗಾಣದು ; ಹಾಗೇ ತಣಿವುಗಾಣದು. ಚಿರಯೌವನವನ್ನು ಪಡೆದು ಬಂದದ್ದು ಮನಸ್ಸು ಮಾತ್ರ. ಹೊಸೆ – ಹೊಸೆದಂತೆ, ಮಸೆ – ಮಸೆದಂತೆ, ಲಕಲಕಿಸುವ ಅವ್ಯಕ್ತ ಚೇತನೆ ಮನಸ್ಸಿನದು. ಅದೇ ಎಲ್ಲದಕ್ಕೂ ಮೂಲ.

ಆದರದು ತನ್ನ ಅಸ್ತ್ರಗಳಾದ ಪಂಚಾಂಗಗಳನ್ನು ಬಳಸುವಾಗ ಸಂಯಮವನ್ನರಿಯದು. ಸಿಡುಕು ಹೆಣ್ಣಿನಂತೆ ತೃಪ್ತಿಯನ್ನೇ ಕಾಣದ ಮನಸ್ಸು ತನ್ನ ಆಟವನ್ನು ಚಲಾಯಿಸಲು ಸಾಧನಗಳಾದ ಅಂಗಾಂಗಗಳನ್ನು ದಣಿಸಿ ತಾನೂ ಪೆಟ್ಟು ತಿನ್ನುತ್ತದೆ; ಪಶ್ಚಾದ್ ಬುದ್ಧಿಯಿಂದ ಮಿಡುಕಾಡುತ್ತದೆ!

ಮುಪ್ಪಿನ ಮೊದಲಂಚು ಅನಿರ್ದಿಷ್ಟವಾದದ್ದು. ಭೌಗೋಲಿಕ ಗಡಿ ರೇಖೆಗಳಂತೆ ವಯೋಮಿತಿ ಇದನ್ನು ಕೊರೆದಿಡಲಾರದು. ಒಂದೊಂದು ಅವಸ್ಥೆಗೂ ಒಂದೊಂದು ಸಂಧ್ಯಾರುಣತೆಯಿದೆ. ಕಾರ್ಗತ್ತಲೆ, ಕಡುಬಿಸಿಲುಗಳು ತಮ್ಮ ಪೂರ್ವೋತ್ತರಗಳನ್ನು ಕಾಣದ ಉನ್ನತ ಅವನತಮುಖಗಳಾಗಬಾರದು. ಕಡುನೀಲಕ್ಕೆ, ಕಡುಗೆಂಪು — ಕಾಳಪಚ್ಚೆಗಳಿಗೆ ದಟ್ಟಯಿಸುವ ವರ್ಣಕಾಂತಿ ತಿಳಿಗೊಳ್ಳುವಾಗ, ತಿಳಿವಾದಾಗಲೂ ಕಮನೀಯವಾಗಿ ಕಂಡೀತು. ಆದರೆ ತಿಳಿದ ನೀರಿನಲ್ಲಿ ಕಸರು – ಕಡ್ಡಿ ಎದ್ದು ಕಾಣುತ್ತದೆ. ಆಗ ಶುಚಿತ್ವ ಮಾತ್ರ ಕಾಂತಿಯನ್ನಳೆಯುತ್ತದೆ.

ಆದ್ದರಿಂದ ಜೀವಿತದ ಮೂರು ಅವಸ್ಥೆಗಳೂ ತಮ್ಮ ಸಂಧ್ಯಾರುಣಾವಸ್ಥೆಗಳಲ್ಲಿ ಶುಚಿತ್ವವನ್ನು ಕಾಪಾಡಿಕೊಳ್ಳಬೇಕಾಗುತ್ತದೆ.

ಬಾಲ್ಯದ, ಯೌವನದ ನೆನಪಿನ ಜಪಮಾಲೆ ಹಿಡಿದು ಜರದ್ ಋಷಿ ತನ್ನ ಬದುಕನ್ನು ಆರಂಭಿಸುತ್ತಾನೆ. ಆಗ ಅವನಿಗೆ ತನ್ನ ಮೂಗಿನದೊಂದೇ ನೇರವಲ್ಲ. ಹಲವರ ಮೂಗಿನ ನೇರಗಳು ವಕ್ರಿಸಿದ ತೊಡಕನ್ನು ಸಾವಧಾನದಿಂದ ಬಿಡಿ ಬಿಡಿಯಾಗಿ ಕಾಣಲು ಅವನ ದೃಷ್ಟಿ ಸ್ಥಿರವಾಗಿದೆ. ಉನ್ಮತ್ತಾವಸ್ಥೆಯ ದೋಷವನ್ನೂ ಗುಣವನ್ನೂ ಅವನು ತೂಗಿ ನೋಡಬಲ್ಲ. ಸುಖ ಯಾವುದು, ಯಾವಾಗ – ಎಂಬುದನ್ನೂ ಅವನು ಎಣಿಸಬಲ್ಲ. ಕ್ಷಮೆ ಅವನ ದಣಿವಿನಿಂದಲ್ಲ ಬಂದದ್ದು; ಅವನ ಪಕ್ವ ಅನುಭವದಿಂದ. ತಪ್ಪು – ತಡೆಗಳನ್ನು ನಿಗ್ರಹಿಸುವ ಮನಸ್ಸಿನ ಬಲವನ್ನೂ ಅವನು ಪಡೆದಿದ್ದಾನೆ. ಅವನು ಆಪತ್ತುಗಳನ್ನು ದೈಹಿಕವಾಗಿ ಎದುರಿಸಹೋಗುವುದೇ ಇಲ್ಲ. ಅದವನ ಅಸಾಮರ್ಥ್ಯವೆಂದಲ್ಲ. ಅದನ್ನು ಎದುರಿಸುವ ಮಾನಸಿಕ ಶಕ್ತಿಯನ್ನವನು ಹೊಂದಿದ್ದಾನೆ. ಅವನು ಸಾವಧಾನದ ಸೊಬಗನ್ನರಿತು ಬದುಕಿನ ಸಂಧ್ಯೆಯನ್ನೂ ಮರಣದ ಅರುಣೋದಯವನ್ನೂ ಸಹ್ಯವಾಗಿ ಮಾಡಿಕೊಳ್ಳುತ್ತಾನೆ.

ಸಾವಧಾನವು ದುಡುಕುವ ಬುದ್ಧಿಗೆ 'ಬ್ರೆಕ್' ಇದ್ದ ಹಾಗೆ ; ಅಪಘಾತ – ಆಘಾತಗಳನ್ನು ಮುಂದಾಗಿ ತಿಳಿದು, ಆಲೋಚನೆಯಿಂದ ಗತಿಯನ್ನು ಸಮ ಗೊಳಿಸಲು, ಸುಗಮಗೊಳಿಸಲು ಇರಬೇಕಾದ ಒಂದು ಎಚ್ಚರ. ಮಾರ್ಗ ಕ್ರಮಣದ ಹಲವು ದಾರಿಗಳಲ್ಲಿ ಗುರಿಯನ್ನು ತಲುಪಲು ಅನುಕೂಲವಾದೊಂದು ದಾರಿಯನ್ನು ಆಯ್ದು ಮುನ್ನಡೆಯಿಸುವ ಕೃಷ್ಣಸಾರಥ್ಯ-ಸಾವಧಾನ ಸೂತ್ರ. ಎದುರುನಿಂತ ಅತಿರಥರನ್ನು ಎದುರಿಸಲು ಚತುರೋಪಾಯಗಳನ್ನು ಸಮಯವರಿತು ಚಲಾಯಿಸಲು ಬೋಧಿಸುವ ಗೀತೆ-ಸಾವಧಾನ. ವಿವೇಕ ಯುತವಾದ ಶಕ್ತಿಸಂಪನ್ನತೆಯನ್ನು, ಪರಿಸರವನ್ನು ಅನುಲಕ್ಷಿಸಿ ಮುನ್ನಡೆ ಯಿಸುವ ಕ್ರಿಯಾಸಂಪನ್ನತೆಯನ್ನು ಪಡೆದುಕೊಳ್ಳುವುದು ಸಾವಧಾನದಿಂದ.

ಬದುಕೇ ಒಂದು ಸಂಗ್ರಾಮ. ತನ್ನ ಗುರಿಯನ್ನೇ ಅರಿಯದಂತಹ ಮನೋವಾಂಛಿತಗಳ ತುಮುಲ ಅಂತರಂಗದಲ್ಲಿ ಸುಖದ ಆಮಿಷ-ಅದೇ ಬದುಕಿನ ಗುರಿಯಾಗಿ ಆಕರ್ಷಿಸುತ್ತದೆ. ಆದರೆ ಬದುಕಿನ ಸುಖದ ವ್ಯಾಪ್ತಿ ಕೇವಲ ವೈಯಕ್ತಿಕವಾದುದಲ್ಲ. ಒಂಟಿಯಾದ ಜೀವ ಆಹಾರ-ನಿದ್ರಾ-ಭಯಾದಿಗಳಿಂದ ಮಾತ್ರ ಸುಖಿಸುವುದಿಲ್ಲ. ಸುಖ ನಮ್ಮ ಸುತ್ತ ಸುಳಿಯುವ ಕಾಂಚನ ಮೃಗ. ಅದು ನಮ್ಮನ್ನು ಇದ್ದಲ್ಲಿ ಇರಗೊಡದೆ ದೂರ ದೂರ ಸೆಳೆ ದೊಯ್ಯುತ್ತದೆ. ಮನುಷ್ಯನ ಜೀತನೆ ಹತ್ತು ಕಡೆಯಿಂದ ಬಳುವಳಿಯನ್ನ ಪೇಕ್ಷಿಸುತ್ತದೆ. ಆಗ ಹತ್ತಾರು ಜೀವಗಳ ಸುಖ - ದುಃಖಗಳನ್ನು ಅನುಲಕ್ಷಿ ಸುವ, ಅವಲಂಬಿಸುವ ಕರ್ಮವಿಶೇಷ ಜೀವಕ್ಕೆ ಅಂಟಿಕೊಳ್ಳುತ್ತದೆ. ಆಗ ಹತ್ತು ಒಳ್ಳೆಯ ಮಾತು ಕೇಳುವುದು ಸುಖ ; ತನ್ನ ಮಾತು ಹತ್ತಾದರೂ ಕಿವಿಗಳಿಗೆ ಹಿತವೆಂದು ಕಂಡರೆ ಸುಖ. ಆತ್ಮಿಕವಾದ ಸುಖ - ಸಮಾಧಾನ ಗಳೂ ಕೇವಲ ಕಳವಿನ ತಿಂಡಿಯನ್ನು ಮೆದ್ದಂತೆ ಸುಖ ತರುವುದಿಲ್ಲ. ಒಂದು ಬಾಳಿನ ಆಗು ಹೋಗುಗಳು ತನ್ನನ್ನೇ ಎಂದೂ ಹೊಂದಿಕೊಂಡಿರುವು ದಿಲ್ಲ. ಮನುಷ್ಯನು ಸಮಾಜ ಜೀವಿ. ಹಿಂದಿನ ಋಷಿ - ಮುನಿಗಳಿಗೂ ರಾಕ್ಷಸರ ಕಾಟವಿತ್ತು. ಇಂದು ರಾಕ್ಷಸಭಾವ ನಮ್ಮಲ್ಲೇ ಹುದುಗಿರಬಹುದು ; ನೆರೆಯಲ್ಲೇ ನಿಂತಿರಬಹುದು. ನಮಗೆ ದುಃಖವಾದರೆ ಬೇಕಾದವರ ಮುಂದೆ, ಬೇಡವಾದವರ ಮುಂದೆ ತೋಡಿಕೊಂಡು ಅದರ ಭರವನ್ನು ಇಳಿಸಿಕೊಳ್ಳುತ್ತೇವೆ. ಮನುಷ್ಯ ಎಷ್ಟೇ ಸ್ವಾರ್ಥಿಯಾದರೂ ಸುಖವನ್ನು ತಂತಾನೆ ಚಪ್ಪರಿಸಿ ಸವಿದು

ಕುಳಿತಿರಲಾರ. ಅದು ಹತ್ತು ಜನರ ಕಣ್ಣಿಗೆ ಬೀಳುವುದರಲ್ಲಿ, ಜನದ ಬಾಯಲ್ಲಿ ತನ್ನ ಹೆಸರು ಉಳಿದು—ನಲಿಯುವುದರಲ್ಲಿ ಸುಖಿಸುತ್ತಾನೆ. ಆಗ ಅವನು ತನ್ನ ಪಾಲಿನ ಸುಖವನ್ನು ಪ್ರದರ್ಶನದ ಆಸೆಗಾಗಿಯೇ ಇರಲಿ....ಒಂದಿಷ್ಟು ಹಂಚ ಬೇಕಾಗುತ್ತದೆ. ಇನ್ನೊಬ್ಬರ ಕಷ್ಟವನ್ನು ಉಪಚಾರಕ್ಕಾಗಿಯಾಗಲಿ, ಒಂದಿಷ್ಟು ಹೊರಬೇಕಾಗುತ್ತದೆ. ಇದರಿಂದ ಸುಖ-ದುಃಖಗಳ ಹಂಚುವಿಕೆ ನಡೆಯುವುದು ಅನಿವಾರ್ಯವಾಗುತ್ತದೆ. ಈ ವಿನಿಮಯವೇ ಜೀವಗಳ ಸಮಾಜವನ್ನು, ಸಮಾಜ ಜೀವನವನ್ನು ರಚಿಸುತ್ತದೆ.

ಲೋಕವು ವೈವಿಧ್ಯಪೂರ್ಣವಾಗಿದೆ. ಅದೇ ಅದರ ವೈಶಿಷ್ಟ್ಯ. ಒಂದರಂತೆ ಇನ್ನೊಂದು; ಅದರಂತೆ ಮತ್ತೊಂದು ಇದ್ದರೆ ತಣಿಯುವುದು ಸಾಧ್ಯವೇ? ಅದರಿಂದ ರುಚಿವೈವಿಧ್ಯಕ್ಕೆ ಎಡೆಯಾಯಿತು. ಕಾಲಧರ್ಮದಿಂದ, ಪ್ರದೇಶ ವಿಸ್ತಾರದಿಂದ ಜನಮನ ಒಂದೊಂದು ಜೀವನಸೂತ್ರವನ್ನು ರೂಢಿಸಿಕೊಳ್ಳುತ್ತದೆ. ಇದರಿಂದ ಒಂದು ವ್ಯಕ್ತಿ ತನ್ನ ಪ್ರದೇಶವನ್ನು ಪ್ರತಿನಿಧಿಸುವಂತಾಗುತ್ತದೆ. ಇಂಥ ಹಲವು ಪ್ರದೇಶಗಳ ಭಿನ್ನ-ವಿಭಿನ್ನವಾದ ನಡವಳಿಕೆಗಳು ಸಂಪರ್ಕ ಸಾಧನಗಳಿಂದ ಒಂದು ಏಕರೂಪವಾದ ಸಂಸ್ಕೃತಿಯನ್ನು ರೂಪಿಸಿಕೊಳ್ಳುತ್ತವೆ. ಮುಂದೆ ಜನಾಂಗಗಳು, ರಾಷ್ಟ್ರಗಳು ಮತ್ತೆ ಮೂಲದ ಮಾನವ ಜೀವಿತದ ಸುಖಸೂತ್ರಗಳತ್ತ ಸಾವಿರ ದಾರಿಯ ಒಂದೇ ಗುರಿಯನ್ನು ನಿಲುಕುವ ಹವ್ಯಾಸಕ್ಕೆ ತೊಡಗುತ್ತವೆ.

ಶಾಲೆಯ ಒಂದು ತರಗತಿಯ ಹಲವು ಬಾಲಕರ ಚಿತ್ರವನ್ನು ಕಣ್ಣ ಮುಂದೆ ತಂದುಕೊಳ್ಳೋಣ: ಅವರೆಲ್ಲರ ಗುರಿ ಒಂದೇ. ಅದು ಪರೀಕ್ಷೆ. ಅದಕ್ಕೆ ಉಪಾಧ್ಯಾಯರು ಹೇಳುವ ದಾರಿ ಒಂದೇ; ಆದರೆ ಒಬ್ಬೊಬ್ಬ ಬಾಲಕನಿಗೂ ಒಂದೊಂದು ಬಗೆಯ ಯತ್ನವಾದಿತ್ಪವಿದೆ; ರುಚಿವೈಚಿತ್ರ್ಯವಿದೆ. ಪಾಠಪ್ರವಚನ ಗಳಷ್ಟೇ ಸಾಲದ ಒಬ್ಬನನ್ನು ನಾವು ಕಾಣಬಹುದಾಗಿದೆ; ಅಷ್ಟೂ ಜೀರ್ಣ ವಾಗದ ಇನ್ನೊಬ್ಬನೂ ಇರುತ್ತಾನೆ. ಪರಿಸರದ ಪ್ರಭಾವದಿಂದ ಸ್ವಭಾವ ರೂಪುಗೊಳ್ಳುವುದೂ ಬಾಳಿನ ಹೆಜ್ಜೆಗಳು ತಪ್ಪು ಹೆಜ್ಜೆಗಳಾಗಿ ಆರಂಭವಾಗು ವುದೂ ಇಲ್ಲಿಂದಲೇ ಏನೋ! ಹೆಜ್ಜೆ ತಪ್ಪಿದರೆ ದಾರಿ ತಪ್ಪಿದಂತಲ್ಲ. ಮಾರ್ಗ ಪ್ರವೇಶಕ್ಕೆ ಹೆಜ್ಜೆಗಳು ಪೀಠಿಕೆಯಾಗಬಹುದು.

ಮನಸ್ಸೇ ಹಲವು ವಿಕಲ್ಪಗಳನ್ನು ಸೃಷ್ಟಿಸುತ್ತದೆ. ಒಂದೇ ರೋಗ ಹಲವರ ಪ್ರಕೃತಿಗೆ ಬೇರೆಬೇರೆ ಪರಿಣಾಮ ತರುತ್ತದೆ. ವೈದ್ಯ ಅವೇ ಅವೇ ಔಷಧಗಳನ್ನು ಬೇರೆಬೇರೆಯವರಿಗೆ ಬೇರೆಬೇರೆ ಪ್ರಮಾಣದಲ್ಲಿ ಬೆರಸಿ ಒಂದೊಂದು 'ಕಂಪೌಂಡ್' ಮಾಡಿ ರೋಗ ಪರಿಹಾರ ಮಾಡುತ್ತಾನೆ.

ಹಾಗೆಯೇ ಒಂದು ಜೀವದ ಸುಖ, ಹಲವು ಜೀವರುಗಳ, ಹಲವು ಆಲೋಚನೆಗಳ, ಹಲವಾರು ರುಚಿ-ರೀತಿಗಳನ್ನು ಹೊಂದಿರುವಂತೆ ತನ್ನಲ್ಲಿ ಹೊರಗಿನ ಶಕ್ತಿಗಳನ್ನು ಆವಾಹನೆ ಮಾಡುವ, ಧಾರಣೆ ಮಾಡುವ ಪಾತ್ರತೆಯನ್ನೂ ಹೊಂದಿದೆ.

ಒಬ್ಬನ ಇಳಿವು ಇನ್ನೊಬ್ಬನ ಏರಿಕೆಗೆ ದಾರಿ ಮಾಡುತ್ತದೆ. ಒಬ್ಬನ ದಾರಿಗೆ ಮತ್ತೊಬ್ಬ ಅಡ್ಡಯಿಸುತ್ತಾನೆ. ಆದ್ದರಿಂದ ಸಂಕಲ್ಪಸಾಧನೆ, ಲೆಕ್ಕದ ಪರಿಣಾಮ ವ್ಯತ್ಯಸ್ತಗೊಳ್ಳುತ್ತದೆ. ಮತ್ತೆ ಹೊಸ ಹಾದಿ, ಹೊಸ ಆಸೆ, ಹೊಸ ಪರಿಣಾಮಕ್ಕೆ ನಾವು ಸಿದ್ಧರಾಗಬೇಕಾಗುತ್ತದೆ.

ಇಂತಹ ಚಕ್ರದಲ್ಲಿ ಇಂದು ವ್ಯಕ್ತಿಜೀವನ ಸುತ್ತಬೇಕಾಗಿದೆ. ಈಗ ಸಂಕಲ್ಪ ಒಂದೇ ಸಾಲದು; ಶಕ್ತಿಯೊಂದೇ ಸಾಲದು; ಹರಕೆ–ಹಸಾದಗಳೂ ಸಾಲವು; ಅವಸರ ಸಾಲದು; ನಿಧಾನವೂ ಸಾಲದು. ಸಾವಧಾನ ಅವಸರವನ್ನೂ ನಿಯಂತ್ರಿಸುತ್ತದೆ; ನಿಧಾನವನ್ನೂ ನಿಯಂತ್ರಿಸುತ್ತದೆ. ಆದರದನ್ನು ನಾವು ಚಿತ್ತದ ಸ್ಥಿರತೆಯಿಂದ ಮಾತ್ರ ಸಾಧಿಸಬಲ್ಲೆವು.

ಮಹಾಮಾರಿ

ಕೆ. ವೆಂಕಟರಾಮಪ್ಪ

ಬಸ್ಸು ಬಸ್ಸಿಗೆ ಢಿಕ್ಕಿ ಹೊಡೆದರೆ ಅದರಲ್ಲೇನೂ ಅಸಾಧಾರಣ ಸಂಗತಿಯಿಲ್ಲ. ಅದು ಸಮಾನಸ್ಕಂಧರಲ್ಲಿ–ಸರೀಕರಲ್ಲಿ, ಒಂದೇ ಕಸಬಿನವರಲ್ಲಿ, ನಡೆಯುವ ಸ್ಪರ್ಧೆ. ಇಬ್ಬರೂ ಪ್ರಯಾಣಿಕರನ್ನು ಹೊತ್ತು ಸಾಗಿಸಿ ಲಾಭಗಳಿಸುವವರು. ಆದ್ದರಿಂದ ಅವರವರಲ್ಲಿ ಜಗಳವಾದರೆ ಹೆಚ್ಚಿನ ಆಶ್ಚರ್ಯವೇನೂ ಇಲ್ಲ. ಎರಡು ಲಾರಿಗಳಿಗೆ ಢಿಕ್ಕಿ ಆದರೂ ಅಷ್ಟೆ! ಸಮಾನ ಬಲರಲ್ಲಿ, ಸಮಾನ ಗಾತ್ರರಲ್ಲಿ, ಕುಸ್ತಿ ನಡೆಯುವುದು ರೂಢಿ. ಅದು ಧರ್ಮ ಸಮ್ಮತ. ಆದರೆ ಈ ಕಲಿಕಾಲದಲ್ಲಿ ಅಂಥ ಯಾವ ನಿಯಮವೂ ಇಲ್ಲದೆ, ಬೃಹದಾಕಾರದ ಬೆಟ್ಟದಂಥ ಲಾರಿ ಬಡಕಲು ಬೈಸಿಕಲ್ ಮೇಲೆ ಹಾಯುವುದಲ್ಲ! ಈ ನರಪೇತಲ ಬೈಸಿಕಲ್ ಆ ದೆವ್ವಲಾರಿಗೆ ಏನು ಅಪರಾಧ ಮಾಡಿತ್ತು? ಏನು ಮಾಡುವುದಕ್ಕೆ ಸಾಧ್ಯ? ಅದು ತೆಳ್ಳಗಿರುವುದೇ ತಪ್ಪೆ? ಎಲ್ಲರೂ ದಪ್ಪಕ್ಕೇ ಇರಬೇಕೆಂಬ ನಿಯಮವೇನಿದೆ? ದಪ್ಪಕ್ಕಿರುವವರೆಲ್ಲ ಹೀಗೆ ತೆಳ್ಳನೆಯವರ ಮೇಲೆ ಬೀಳಬಾರದು! ಅದು ಸರ್ವಥಾ ಸರಿಯಲ್ಲ. ಆನೆ ಸೊಳ್ಳೆಯ ಮೇಲೆ ಯುದ್ಧ ಹೂಡಬಾರದು. ಹಾಗೆ ಮಾಡಿದರೆ ಅದು ಆನೆಗೇ ಬಹಳ ಹೀನಾಯ! 'ಇಜುಂಪೆಗಾನೆ ಮೊಗಮಿಕ್ಕುವುದೆ?'

ಬೈಸಿಕಲ್ಲು ಜನ ಸವಾರಿ ಮಾಡುವುದಕ್ಕೆ ಅನುಕೂಲವೇ ಹೊರತು ಸಾಮಾನು ಸಾಗಿಸಲು ಉಪಯೋಗವಿಲ್ಲ. ಎಷ್ಟು ಸೈಕಲ್ಲುಗಳಾದರೂ ಒಂದು ಲಾರಿ ಹೊರುವಷ್ಟು ಸರಕನ್ನು ಸಾಗಿಸಲು ಸಾಧ್ಯವಾಗದು. ಆದ್ದರಿಂದ ಇದು ತನ್ನ ಮೇಲೆ ಪೈಪೋಟಿ ಮಾಡಬಹುದೆಂಬ ಅಂಜಿಕೆ, ಆಗ್ರಹ, ಲಾರಿಗೆ ಇರಬೇಕಾದ್ದೇ ಇಲ್ಲ. ಚೇಳು, ಜಿರಳೆ, ಹಾವು, ಮೊದಲಾದ ಜಂತುಗಳು ತಮಗೇನೂ ಅಪರಾಧ ಮಾಡಿರದಿದ್ದರೂ ಅವು ಮುಂದೆ ಎಂದಾದರೂ ಮಾಡಬಹುದೆಂಬ ಕಲ್ಪನೆಯಿಂದ ಅವುಗಳನ್ನು ಕಂಡುಕೂಡಲೆ ಕೊಲ್ಲಲು ಈ ಮಾನವ ಜನ್ಮರು ಯತ್ನಿಸುವ ಹಾಗೆ ಲಾರಿಗಳು ಬೈಸಿಕಲ್ಲು ಕಾಣಿಸಿದ ಕೂಡಲೆ

ನಿಷ್ಕಾರಣವಾಗಿ ಅದರ ಮೇಲೆ ನುಗ್ಗುತ್ತವೆ. ಅನೇಕ ಸಲ ಪೇಪರುಗಳಲ್ಲಿ 'ಲಾರಿ ಬೈಸಿಕಲ್ ಢಿಕ್ಕಿ. ಬೈಸಿಕಲ್ ಅಪ್ಪಚ್ಚಿ. ಸೈಕಲ್ ಸವಾರ ಬಚಾವ್' ಎಂಬ ಸುದ್ದಿ ಓದಿದ್ದೇವೆ. ಇದು ಮೇರು ಮಂದರ ಸದೃಶವಾದ ಆ ಮಹಾ ಲಾರಿಗೆ ಎಷ್ಟು ಹೀನಾಯ! ಅದು ಆ ಲಾರಿ ಜಾತಿಗೆ ಅರ್ಥವೇ ಆಗುವುದಿಲ್ಲವೆ? ಅಥವಾ, ಹೆಚ್ಚು ಹೆಚ್ಚಿನ ಔನ್ಯತ್ಯವನ್ನು ಪಡೆಯುತ್ತ ಎಲ್ಲ ಸಂಕೋಚ, ನಾಚಿಕೆ, ಮಾನ, ಮರ್ಯಾದೆಗಳ ವಿಷಯದಲ್ಲಿ ಅಸಡ್ಡೆ ಹುಟ್ಟುತ್ತದೆಯೋ - ಏನೋ, ಈ ಕಲಿಕಾಲದಲ್ಲಿ! 'ನಾಚಿಕೆ, ಹೇಚಿಕೆ ಎಲ್ಲ ಊರಿಂದಾಚೆಗೆ!' ಎಂಬುದು ಗಾದೆಯ ಮಾತಾಗಿದೆ.

ಬಸ್ಸಿಗೆ ಬೈಸಿಕಲ್ ಮೇಲೆ ಅಸಮಾಧಾನವಿದ್ದರೆ ಅದೇನೂ ಅಷ್ಟು ಸೋಜಿಗವಲ್ಲ. ಏಕೆಂದರೆ ಅದು ಕೊಂಚ ಮಟ್ಟಿಗೆ ಬಸ್ಸಿಗೆ ವೈರಿ—ಚಿಕ್ಕ ವೈರಿ! ಬೈಸಿಕಲ್ ಹತ್ತಬಲ್ಲವರು ಬಸ್ಸಿಗೆ ಕಾಯುವುದಿಲ್ಲ–ಅದರ ಕರುಣೆಗಾಗಿ ಕಾದು ತಮ್ಮ ಆಯುಷ್ಯದ ಅಮೂಲ್ಯಭಾಗವನ್ನು ಅಪವ್ಯಯ ಮಾಡಬೇಕಾಗಿಲ್ಲ. ಅದು ಮನುಷ್ಯರ ಸ್ವಾವಲಂಬನೆಯ ಚಿಹ್ನೆ! ಊರಿಂದೂರಿಗೇ ಅಲ್ಲದೆ ಊರೊಳಗೇ ಮೈಲಿ ಅರ್ಧ ಮೈಲಿಗೆಲ್ಲ ಬಸ್ಸನ್ನೇ ಬಯಸುವ ಕಾಲ ಇದು. ಇದಕ್ಕೆ ಶ್ರೀಮಂತರು ದರಿದ್ರರೆಂಬ ಭೇದವಿಲ್ಲ. ಎಲ್ಲರೂ ತಮ್ಮ ನಿತ್ಯವ್ಯವಹಾರ ನಿರ್ವಹಣೆಗೂ ಬಸ್ಸನ್ನೇ ಅವಲಂಬಿಸುತ್ತಾರೆ. ಆದ್ದರಿಂದಲೇ ಬಸ್ಸು ಬಿಡುವುದಕ್ಕೆ ನಮ್ಮ ನಾಡಿನಲ್ಲಿ ಮಹಾಸ್ಪರ್ಧೆ. ಜನಸಾಮಾನ್ಯರೇ ಅಲ್ಲದೆ ಜನತಾ ಸರ್ಕಾರಗಳೂ ಇದರಿಂದ ಭಾಗ್ಯ ಸಂಪಾದಿಸಿಕೊಳ್ಳಲು ಪ್ರಯತ್ನಿಸುತ್ತಿವೆ. ಆದರೆ ಈ ಬೈಸಿಕಲ್ ಅದಕ್ಕೆ ಕೊಂಚಮಟ್ಟಿಗೆ ಕಂಟಕವಾಗಿದೆ!

ಅಲ್ಪ ಸಲ್ಪ ಹಣ ವೆಚ್ಚ ಮಾಡಿದರೆ ಬೈಸಿಕಲ್ ಸಿಕ್ಕುತ್ತದೆ; ಬಸ್ಸು ಸಿಕ್ಕುವುದಿಲ್ಲ. ಈಗ ಬರೀ ಪುರುಷವರ್ಗವೇ ಅಲ್ಲದೆ ಸ್ತ್ರೀಯರೂ ಬೈಸಿಕಲ್ ಸವಾರಿಗೆ ಆರಂಭಿಸಿದ್ದಾರೆ. ಹೀಗಾಗಿ ಬಸ್ಸಿನ ಸರ್ವಸ್ವಾಮ್ಯ ಹೋಗಿಬಿಡುತ್ತಿದೆ! ಆದ್ದರಿಂದ ಬಸ್ಸಿಗೆ ಸೈಕಲ್ ಮೇಲೆ ವೈರ ನ್ಯಾಯ. ಒಂದೇ ವೃತ್ತಿಯವರು ಪರಸ್ಪರ ಅಸೂಯೆ ಪಡುವುದು, ಸ್ಪರ್ಧಿಸುವುದು, ಮರ್ದಿಸಲು ಹವಣಿಸುವುದು, ಹೊಸ ಸಂಗತಿಯಲ್ಲ. ಚಿಕ್ಕ ಮೀನು ದೊಡ್ಡ ಮೀನಿಗೆ ಆಹಾರ ಬಡವನನ್ನು ಹಿಂಡಿ ಹಿಪ್ಪೆ ಮಾಡಿದರೆ ತಾನೆ, ಭಾಗ್ಯವಂತ!

ಹತ್ತು ಜನರನ್ನು ಬಡವರನ್ನಾಗಿ ಮಾಡದಿದ್ದರೆ ಒಬ್ಬ ಭಾಗ್ಯವಂತನಾಗುವುದು ತಾನೇ ಹೇಗೆ ? ಸ್ಪರ್ಧೆ, ಮೇಲಾಟ, ಜಗಳ, ಪೈಪೋಟಿ–ಇವೆಲ್ಲ ಬದುಕಿಗೆ ಬಹಳ ಒಳ್ಳೆಯ ಮಸಾಲೆಗಳಿದ್ದ ಹಾಗೆ ! ಸ್ಪರ್ಧೆಯೇ ಇಲ್ಲದ ಜೀವನ ಶುದ್ಧ ಸಪ್ಪೆ.

ಎತ್ತಿನ ಗಾಡಿ ಲಾರಿಗೆ ಪ್ರತಿಕಕ್ಷಿ–ಬೈಸಿಕಲ್ ಬಸ್ಸಿಗಾದ ಹಾಗೆ! ಆದರೆ ಅದು ಜನವಾಹಕವೂ ಹೌದು, ವಸ್ತು ವಾಹಕವೂ ಹೌದು. ಈಚೆಗೆ ಬಸ್ಸುಗಳು ಬಹಳ ಹೆಚ್ಚಿಕೊಂಡು ಬೀದಿ ಬೀದಿಗಳಲ್ಲೆಲ್ಲ ಹರಿದಾಡುತ್ತಿರುವುದರಿಂದ ಈಗ ನಮ್ಮ ನಾಡಿನಲ್ಲಿ 'ಸವಾರಿ ಗಾಡಿ'ಗಳಿಗೆ ಗಿರಾಕಿ ಹೋಗಿಬಿಟ್ಟಿದೆ! ಅವುಗಳ ವೈಭವ ಈಗ ಪುರಾಣಕಥೆಯೇ ಸರಿ. ಆದರೆ ಎತ್ತಿನ ಗಾಡಿಯ ಇನ್ನೊಂದು ವ್ಯಾಪಾರ ಇನ್ನೂ ನಿಂತಿಲ್ಲ. ಸಧ್ಯದಲ್ಲಿ ನಿಲ್ಲುವಂತೆಯೂ ಕಾಣಲಿಲ್ಲ. ಲಾರಿ ಹೋಗಲಾಗದ ರಸ್ತೆಗಳು ನಮ್ಮ ಈ ಪುಣ್ಯಭೂಮಿಯಲ್ಲಿ ಇನ್ನೂ ಇವೆ ! ಆದರೆ ಲಾರಿಗೆ ತನ್ನ ವೃತ್ತಿಯಲ್ಲಿ ಕೈ ಹಾಕುವವರನ್ನು ಕಂಡರೆ ಆಗುವುದಿಲ್ಲ. ಶತ್ರು ಚಿಕ್ಕವನೆಂದು ಅಲಕ್ಷ್ಯ ಮಾಡುವ ಅವಿವೇಕ ಲಾರಿಗೆ ಸರ್ವಥಾ ಇಲ್ಲ. ಶತ್ರುಶೇಷವಿರಬಾರದಲ್ಲವೆ ?

ಹಳೆಯ ಕಾಲದಿಂದ, ನಮ್ಮ ತಾತ ಮುತ್ತಾತರ ಕಾಲದಿಂದ ಗಾಡಿಗಳೇ ನಮ್ಮ ನಾಡಿನಲ್ಲಿ ವಸ್ತುವಾಹಕಗಳಾಗಿದ್ದುವು. ಎಲ್ಲೋ ಒಂದೊಂದು ಸಲ ಎತ್ತು ಕತ್ತೆ ಕೋಣಗಳ ಮೇಲೂ ಸಾಮಾನು ಸಾಗಿಸುತ್ತಿದ್ದುದುಂಟು. ಆದರೆ ಅದು ಬಹಳ ಸ್ವಲ್ಪ. ಇನ್ನು ಆನೆ ಒಂಟೆಗಳನ್ನು ಕಟ್ಟಿಕೊಂಡ ಭಾಗ್ಯಶಾಲಿಗಳು ನಮ್ಮಲ್ಲಿ ಬಹಳ ವಿರಳ. ಗಾಡಿಗಳೇ ಗತಿ. ಭರ್ತಿಗಾಡಿ ತಿರುಗುಗಾಡಿ ಸಂತೆಗಾಡಿಗಳೆಂಬ ಮಾತುಗಳು ನಿನ್ನೆಮೊನ್ನೆಯವರೆಗೂ ಎಲ್ಲರಿಗೂ ಪರಿಚಿತವಾಗಿದ್ದುವು. 'ಗಾಡಿಯ ಚೌಕ' ಸಾಮಾನ್ಯವಾಗಿ ಎಲ್ಲ ಊರುಗಳಲ್ಲಿಯೂ ಸಂತೆಮಾಳಗಳ ಹತ್ತಿರ ಇರುತ್ತಿತ್ತು. ಈಗ ಗಾಡಿಯೇ ಉಳಿಯುವಂತಿಲ್ಲ. ಅದಕ್ಕೆ ಅಂತ್ಯಕಾಲ ಸನ್ನಿಹಿತವಾಗಿರುವಂತೆ ತೋರುತ್ತದೆ !

ಇದು ಲಾರೀಯುಗ. ಧಾನ್ಯ ಸಾಗಿಸುವುದಕ್ಕೆ, ಸೌದೆ ಹೊರುವುದಕ್ಕೆ, ಲಾರಿ ಬೇಕು, ಸೀಮೆಗೊಬ್ಬರ, ಕಂತ್ರಿಗೊಬ್ಬರ, ಕಡೆಗೆ ಕಾಂಪೋಸ್ಟ್ ಗೊಬ್ಬರ ಹೊರುವುದಕ್ಕೂ ಲಾರಿಯೇ ಆಗಬೇಕು ! ಹೆಚ್ಚೇಕೆ, ಮಣ್ಣು

ಹೊರುವುದೂ ಲಾರಿ, ಸುಣ್ಣ ತರುವುದೂ ಲಾರಿ. ಎಲ್ಲಕ್ಕೂ ಲಾರಿ, ಲಾರಿ, ಲಾರಿ, ಲಾರಿ ! ಈ ಲಾರಿಯ ಹೊಡೆತ ಗಾಡಿಗಳಿಗೆ ಮಾರಿ !

ಆದರೂ ಗಾಡಿಗಳೂ ಮೊಂಡಾಟ ಮಾಡುತ್ತ ಇನ್ನೂ ಧೈರ್ಯದಿಂದ ತಮ್ಮ ವೃತ್ತಿಯನ್ನು ನಡೆಸುತ್ತಲೇ ಇವೆ. ಬೇಗ ಸಾಯಲೊಲ್ಲದ (Die hards) ಗಾಡಿಗಳನ್ನು ಕಂಡರೆ ಲಾರಿಗೆ ಕೆಂಡಾಮಂಡಲ ಕೋಪ ! ಈ ದರಿದ್ರ ಗಾಡಿಗಳಿಗೆ ಡೀಸಲ್ ಬೇಡ, ಟೈರ್ ಬೇಡ, ಟ್ಯೂಬ್ ಬೇಡ. ಸ್ಪ್ರಿಂಗ್ ಇಲ್ಲ. ಗಿಂಗ್ ಇಲ್ಲ ! ಅನ್ಯ ದೇಶದ ಆವಲಂಬನವೇ ಬೇಡ ಇದಕ್ಕೆ ! ವಿದೇಶೀ ವಿನಿಮಯದ ಚಿಂತೆಯೇ ಇದಕ್ಕಿಲ್ಲ. ಗಾಡಿ ಪೂರಾ ಸ್ವದೇಶಿ! ನಮ್ಮ ಕನ್ನಡ ನಾಡಿನಲ್ಲಿಯೇ ಹುಟ್ಟಿ ಬೆಳೆದ ಎರಡು ಎತ್ತೋ, ಕೋಣವೊ, ಹೋರಿಯೋ ಆದರೆ ಆಯಿತು. ನಮ್ಮವನೇ ಒಬ್ಬ ಆಳು ಸುಲಭವಾಗಿ ಅದನ್ನು ನಡೆಸಬಲ್ಲ. ಅಭ್ಯಾಸವಾಗಿಬಿಟ್ಟರೆ ಆಳಿನ ಅಪೇಕ್ಷೆಯೇ ಇಲ್ಲದೆ ಊರಿಂದ ಊರಿಗೆ ಸಲೀಸಾಗಿ ಎತ್ತುಗಳೇ ಭರ್ತಿಗಾಡಿಗಳನ್ನು ಎಳೆದುಕೊಂಡು ಹೋದದ್ದುಂಟು ! ಸಾರಥಿ ನಿದ್ದೆ ಮಾಡಿದರೂ ಬಾಧಕವಿಲ್ಲ !

ಕೆಲವು ಸಂದರ್ಭಗಳಲ್ಲಿ ಎರಡು ಎತ್ತೂ ಬೇಕಿಲ್ಲ, ಒಂದೇ ಸಾಕು ! ಒಂಟೆತ್ತಿನ ಗಾಡಿಗಳನ್ನು ಯಾರು ನೋಡಿಲ್ಲ ? ಈಚೀಚೆಗೆ ಎತ್ತೇ ಇಲ್ಲದೆ ಮನುಷ್ಯರೇ ಎಳೆದು, ತಳ್ಳಿ, ನಡೆಸುವ ಗಾಡಿಗಳು ನಮ್ಮ ಸೀಮೆಯಲ್ಲಿಯೂ ಹೆಚ್ಚಾಗುತ್ತಿವೆ ? ಎತ್ತು ತುಟ್ಟಿ, ಮನುಷ್ಯ ಅಗ್ಗ ! ಅಯ್ಯಾ, ಏನು ಹೇಳಲಿ ? ಈ ಧರ್ಮಕಾಲದಲ್ಲಿ ನಮ್ಮ ಈ ಪುಣ್ಯಭೂಮಿಯಲ್ಲಿ, 'ಎತ್ತಿಲ್ಲದಿದ್ದರೆ ಬೇಡ, ನೇಗಿಲಿಗೆ ಎರಡು ಹಸುಗಳೇ ಸಾಕು' ಎಂಬ ಸಾಧು ಸತ್ಪುರುಷರು ಹೆಚ್ಚುತ್ತಿದ್ದಾರೆ ! ಸ್ತ್ರೀ ಪುರುಷ ಸಮಾನತಾ ತತ್ವಸ್ಥಾಪನೆಯ ಯುಗವಲ್ಲವೆ, ಇದು! ಗಂಡಾದರೇನು, ಹೆಣ್ಣಾದರೇನು, ದುಡಿದು ತಿನ್ನಬೇಕು. ದುಡಿಯದಿದ್ದರೆ ಉಳಿವಿಲ್ಲ. "ದುಡಿ, ಇಲ್ಲವೆ ಮಡಿ" ಎಂಬುದೇ ಇಂದು ಬಾಳಿನ ದಿವ್ಯಸೂತ್ರ!

ಅದೆಲ್ಲ ಏನೇ ಇರಲಿ, ಪ್ರಕೃತ ಗಾಡಿ ಲಾರಿಗೆ ಪ್ರತಿಕಕ್ಷಿ. ಈ ಸಂಗತಿ ಎಲ್ಲ ಲಾರಿಗಳಿಗೂ ಚೆನ್ನಾಗಿ ತಿಳಿದಿದೆ, ಆದ್ದರಿಂದಲೇ ಲಾರಿಗೆ ಸಿಕ್ಕಿದ ಗಾಡಿ ಮುರಿದೇ ಹೋಗ್ತೀತು. ಇನ್ನು ಹುಲ್ಲು ತಿಂದು ಬದುಕುವ ಎತ್ತುಗಳು ಉಳಿದಾವೆ ?

ಢಕ್ಕಾ ಮುಕ್ಕಿ ಮಾಡುತ್ತಾ ಮೃತ್ಯುವೇಗದಲ್ಲಿ ಇರುಳು ಹಗಲೆನ್ನದೆ ಓಡುತ್ತಿರುವುದು ಲಾರಿಗಳಿಗೆ ಅಭ್ಯಾಸವಾಗಿಬಿಟ್ಟಿದೆ. ದುರ್ಬಲವಾದ ಎತ್ತು ಕತ್ತೆಗಳಿಗೆ, ಸಣ್ಣ ಪುಟ್ಟ ಗಾಡಿ, ಬೈಸ್ಕಲ್ ಟ್ರೈಸ್ಕಲ್‌ಗಳಿಗೆ ಡಿಕ್ಕಿಹೊಡೆದು ಗೆದ್ದು ದಕ್ಕಿಸಿಕೊಂಡೆವೆಂಬ ದುರಹಂಕಾರದಿಂದ ಲಾರಿ ಬಸ್ಸುಗಳು ಈಗ ಐಲು ಐಲಾಗಿ ರೈಲು ಟ್ರಕ್ಕುಗಳಿಗೆ ಢಿಕ್ಕಿ ತಗಲಿ ಹಾಳಾಗುತ್ತಿವೆ! ರೈಲಿನ ಮೇಲೆ ವೈರ ಮಾಡಿದರೆ ನಡೆದೀತೆ? ಲಾರಿ ಉಳಿದೀತೆ? ಎತ್ತು ಲಾರಿಗೆ ಹೇಗೆ ಸ್ಪರ್ಧಿಯೋ, ಬೈಸಿಕಲ್ ಬಸ್ಸಿಗೆ ಹೇಗೆ ಸ್ಪರ್ಧಿಯೋ ಹಾಗೆ ಲಾರಿ ಈಗ ರೈಲಿಗೆ ಸ್ಪರ್ಧಿ. ಈಗೇನು, ಡಿಲ್ಲಿ ದ್ವೀಪಾಂತರಗಳಿಂದ ಬೇಕಾದರೂ ನಿಮ್ಮ ಸರಕುಗಳನ್ನು ಲಾರಿಯಿಂದಲೇ ತರಿಸಿಕೊಳ್ಳಬಹುದು. ಕಾಶ್ಮೀರದಿಂದ ಕನ್ಯಾ ಕುಮಾರಿಗೆ, ಮದರಾಸಿನಿಂದ ಬೊಂಬಾಯಿಗೆ, ಭಟ್ಕಳದಿಂದ ಬಿಸಾನತ್ತಕ್ಕೆ, ಹೊನ್ನಾವರದಿಂದ ಹೌರಕ್ಕೆ, ಸಾಮಾನುಗಳನ್ನು ಲಾರಿಗಳಿಂದಲೇ ಸಲೀಸಾಗಿ ಸಾಗಿಸಬಹುದು. ರೈಲಿನ ಅಗತ್ಯವೇ ಇಲ್ಲ. ರೈಲಿಗಿಂತ ಲಾರಿಯೇ ಬೇಗ ಸಾಗಿಸಬಲ್ಲುದು! ಆದ್ದರಿಂದ ಇದುವರೆಗೆ ಮಹಾವೈಭವದಿಂದ ಮೆರೆಯುತ್ತಿದ್ದ ರೈಲಿಗೆ ಈಗ ಘನಘೋರವಾದ ಅಪಮಾನವಾಗಿದೆ; ಮಹಾರೋಷ ಹುಟ್ಟಿದೆ! ಈಚೆಗೆ ರೈಲು ಸಿಕ್ಕ ಕಡೆಗಳಲ್ಲೆಲ್ಲ, ಸ್ವಲ್ಪವೂ ಕನಿಕರಿಸದೆ, ಹಿಂದು ಮುಂದು ನೋಡದೆ ಲಾರಿಗಳನ್ನು ತನ್ನ ಚಕ್ರಗಳಡಿ ಸಿಕ್ಕಿಸಿಕೊಂಡು ಜಜ್ಜಿಹಾಕುತ್ತಿದೆ! ಹಾಗೆ ಜಜ್ಜುವ ರಭಸದಲ್ಲಿ ಆ ಲಾರಿ ಟ್ರಕ್ಕುಗಳಲ್ಲಿನ ಕಲ್ಲು, ದಿಮ್ಮಿ, ದ್ರಾವಕ ಮೊದಲಾದ ವಸ್ತುಗಳಿಂದ ತನಗೆ ಆಗಬಹುದಾದ ನೋವನ್ನೂ ಲೆಕ್ಕವಿಡದೆ, ಸೊಪ್ಪು ಹಾಕದೆ, ತನ್ನ ಈ ದುಷ್ಟ ವೈರಿಗಳನ್ನು ತೀಡಿ ತಿಕ್ಕಿ ಕೆಡುವುತ್ತಿದೆ! 'ನಿಡಿಯರ್ಗಂ ನಿಡಿಯರೊಳರ್?'

ಚಿಕ್ಕವರು ಎಚ್ಚರದಪ್ಪಿ ಅವಿನಯದಿಂದ ಹೀಗೆ ದೊಡ್ಡವರ ಮೇಲೆ ಸೆಣಸಿ ನುಗ್ಗಬಹುದೆ? ಅದು ಅಕ್ಷಮ್ಯವಾದ ಅಪರಾಧವಲ್ಲವೆ?

ಹೌದು. ದೊಡ್ಡವರ ವಿಚಾರದಲ್ಲಿ ಚಿಕ್ಕವರಿಗೆ ಭಕ್ತಿ, ಭಯ ಗೌರವಗಳಿರ ಬೇಕು. ಅವರು ವಿನಯ ವಿಧೇಯತೆಗಳಿಂದ ಹಿರಿಯರನ್ನು ಸೇವಿಸಿ ಒಲಿಸಿ ಕೊಂಡು ಅವರ ಆಶೀರ್ವಾದ ಅನುಗ್ರಹಗಳಿಗೆ ಪಾತ್ರರಾಗಿ ಬದುಕಬೇಕು!

ಅದು ನಿಜ. ಆದರೆ ದೊಡ್ಡವರು ಅಕಸ್ಮಾತ್ ದಾರಿ ತಪ್ಪಿದ ಚಿಕ್ಕವರನ್ನು ಕೊಂಚವೂ ಕರುಣೆಯಿಲ್ಲದೆ, ದಯ ದಾಕ್ಷಿಣ್ಯಗಳನ್ನು ದೂರ ಮಾಡಿ ಹೀಗೆ

ಕುಟ್ಟಿ ಕೆಡವಬಹುದೆ ? ಇಂಥ ಅವಿಚಾರವಾದ ಕ್ರೌರ್ಯ ಅವರ ಹಿರಿಯ ತನಕ್ಕೆ ಭೂಷಣವೆ ? ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಬಿಡುವುದು ಯಾವ ಘನತೆ ?

ಬಲಹೀನರಿಗೆ ಬಲಿಷ್ಠರು ರಕ್ಷಣೆ ಕೊಡಬೇಕಾದದ್ದು ಧರ್ಮ. ಹೀನ ಬಲಗಳಾದ ಬೈಸಿಕಲ್, ಸ್ಕೂಟರ್, ಬೇಬಿಕಾರ್, ಬೂಬಿಕಾರ್, ಮುಂತಾದ ಚಿಕ್ಕ ಪುಟ್ಟ ಮರಿವಾಹನಗಳಿಗೆ ಬಸ್ಸು, ಡಬ್ಬಲ್ ಡೆಕ್ಕರ್, ಲಾರಿ, ಟ್ರಕ್, ಮೊದಲಾದ ಬೃಹತ್ ಶರೀರಗಳು ರಕ್ಷಣೆ ಕೊಡಬೇಡವೆ ?

'ಆದರೆ ಹಾಗೆ ಧರ್ಮ, ಶಿಸ್ತು, ಅಹಿಂಸೆ, ಜೀವಕಾರುಣ್ಯ ಎಂಬ ತತ್ವ ಗಳನ್ನೇ ಕುರಿತು ಯೋಚಿಸುತ್ತಿದ್ದರೆ ನಾವು ಪ್ರಗತಿ ಸಾಧಿಸುವುದು ಹೇಗೆ ? ದೊಡ್ಡವರೆನ್ನಿಸಿಕೊಳ್ಳುವುದು ಹೇಗೆ ? ಅಥವಾ ಇಂಥ ಸಣ್ಣ ಸಣ್ಣವರಿಗೆಲ್ಲ ಅಂಜಿ ಸುಮ್ಮನಿರಬೇಕಾದರೆ ದೊಡ್ಡವರಾದರೆ ತಾನೆ ಏನು ಲಾಭ ?' ಎಂದು ಯಾರಾದರೂ ಕೇಳಿದರೆ ಈಗ ಏನೇನೂ ಆಶ್ಚರ್ಯಪಡಬೇಕಾಗಿಲ್ಲ. ಪ್ರಗತಿಯ ಮೂಲಾಧಾರ ಪೈಪೋಟಿ, ಸ್ಪರ್ಧೆ, ಛಲ, ಕಾರ್ಯಸಾಧನೆ ! ಅದರಲ್ಲಿ ಅನ್ಯರ ಕಷ್ಟನಷ್ಟಗಳನ್ನು, ಹಾನಿ ವೃದ್ಧಿಗಳನ್ನು, ಅಳಿವು ಉಳಿವುಗಳನ್ನು ಕುರಿತು ಯೋಚಿಸುವುದಕ್ಕೆ ಸುತರಾಂ ಪುರಸೊತ್ತಿಲ್ಲ. ತಮ್ಮ ಯೋಗಕ್ಷೇಮ ಚಿಂತ ನೆಗೇ ಹೊತ್ತಿಲ್ಲ. ಇನ್ನುಳಿದವರ ಸುದ್ದಿಯೇಕೆ ?

ಆದ್ದರಿಂದ ಬಲಿಷ್ಠರು ಬಲಹೀನರನ್ನು ಪೀಡಿಸುವುದು ಆಡಿಸುವುದು, ಕಾಡಿಸುವುದು, ಓಡಿಸುವುದು, ಸರಿಯೆ, ಎಂಬ ಪ್ರಶ್ನೆಯೇ ಈಗ ಉದ್ಭವಿಸು ವುದಿಲ್ಲ. ದುರ್ಬಲರನ್ನಲ್ಲದೆ ಬಲವಂತರನ್ನು ಹಿಂಸೆ ಮಾಡುವುದು ಸಾಧ್ಯವೆ ? ಹಿಂಸಿಸಿದರೆ ಅವರು ನಮ್ಮನ್ನು ಸುಮ್ಮನೆ ಬಿಟ್ಟಾರೆ ?

ಮೊದಲು ಆತ್ಮರಕ್ಷಣೆ ಮಾಡಿಕೊಳ್ಳಬೇಕು. 'ಆತ್ಮರಕ್ಷಾ ಕರ್ತವ್ಯಾ' 'ಪ್ರಾಣರಕ್ಷಣೆ ಪ್ರಥಮ' 'ತಾನುಂಟೋ ಮೂರು ಲೋಕವುಂಟೊ' 'ಜೀವನ್ ಭದ್ರಾಣಿ ಪಶ್ಯತಿ' ಎಂಬ ಮಹಾವಾಕ್ಯಗಳನ್ನು ಕೇಳಿಲ್ಲವೆ ?

ಹೌದು ಹಾಗಾದರೆ ಇತರರ ಪ್ರಾಣಕ್ಕೆ ಧಕ್ಕೆ ತಂದು ಹಾನಿಯುಂಟು ಮಾಡಿ ತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳುವುದೇ ?

ಅದು ಬಹಳ ಸನಾತನವಾದ ಆರ್ಷೇ ಯವಾದ ಆರ್ಯಪದ್ಧತಿಯಲ್ಲವೆ ? ಹರಿಶ್ಚಂದ್ರ ಶುನಶ್ಶೇಫನನ್ನು ಬಲಿ ಕೊಡಲು ಸಿದ್ಧನಾಗಲಿಲ್ಲವೆ ? ಕೋಳಿ ಕುರಿ,

ಕುರಿಮರಿ, ಮೊದಲಾದ ಏನೂ ಪಾಪವರಿಯದ ಚಿಕ್ಕ ಪುಟ್ಟ ಮುಗ್ಧ ಪ್ರಾಣಿಗಳನ್ನು ಮಾರಮ್ಮನಿಗೆ 'ಬಲಿ' ಕೊಟ್ಟು ತಮ್ಮ ಪ್ರಾಣ ತಮ್ಮ ಮಕ್ಕಳ ಪ್ರಾಣ, ಉಳಿಸಿಕೊಳ್ಳಬಯಸುವುದು ಆದಿಕಾಲದಿಂದ ಅವಿರತವಾಗಿ ನಡೆದು ಬಂದಿರುವ ಸತ್ಸಂಪ್ರದಾಯವಲ್ಲವೆ ? ಅದೇನು ನಿನ್ನೆ ಮೊನ್ನೆಯ ಮಾತೆ?

ಅದೆಲ್ಲ ಬಹಳ ಹಳೆಯ ಮಾತು ! ನಿಜ. ಈಗ ಯಾರೂ ಹಾಗೆ ಮಾಡಲು ಸಾಧ್ಯವಿಲ್ಲ. ಪ್ರಾಣಿಬಲಿಯನ್ನು ಈಗ ನಾವು ನಿಷೇಧಿಸಿದ್ದೇವೆ. ಅದಕ್ಕಾಗಿ ಸಕ್ರಮವಾದ ಶಾಸನವನ್ನೇ ಮಾಡಿಸಿದ್ದೇವೆ. ಈಗ ಆ ಮಾರಮ್ಮನೂ ನಮ್ಮ ರಾಜ್ಯದಲ್ಲಿ ಆ ದುರ್ಬಲ ಪ್ರಾಣಿಗಳನ್ನು ಆಹುತಿ ತೆಗೆದುಕೊಳ್ಳುವಂತಿಲ್ಲ. ಅದು ಈಗ ಸಾಧ್ಯವೇ ಅಲ್ಲ.

ಅದಕ್ಕೆ ಸಾರ್, ಆ ಮಹಾಮಾರಿ ಈಗ ಮೋಟಾರ್, ಸ್ಕೂಟರ್, ಬಸ್ಸು, ಲಾರಿ, ಟ್ರಕ್ಕು, ರೈಲುಗಳ ಮೇಲೆ ಬಂದು ನಿರ್ದಾಕ್ಷಿಣ್ಯವಾಗಿ ತನಗೆ ಬೇಕು ಬೇಕಾದಾಗ, ಬೇಕಾದ ಕಡೆ, ಲಕ್ಷಣವಾಗಿ ನರಬಲಿ ತೆಗೆದುಕೊಳ್ಳುತ್ತಿದ್ದಾಳೆ, ನರಬಲಿ ! ಮಹಾಮಾರಿಗೆ ಯಾವ ಶಾಸನ ತಾನೆ ಅಡ್ಡಿ ಆದೀತು ? ಆ ಅಮ್ಮನ ಕರುಣೆ ತಪ್ಪಿದರೆ ಲಾರಿಯೇ ಮಹಾಮಾರಿ !

ನಮ್ಮ ಎಮ್ಮೆಗೆ ಮಾತು ತಿಳಿಯುವುದೆ ?

ಗೊರೂರು ರಾಮಸ್ವಾಮಿ ಐಯಂಗಾರ್

ನಮ್ಮ ನಾಡು ಎಮ್ಮೆಯ ನಾಡು. ಮಹಿಷಮಂಡಲವೆಂಬುದು ನಾವು ಹೆಮ್ಮೆಯಿಂದ ಹೇಳಿಕೊಳ್ಳುವ ಹೆಸರು. ನಮ್ಮ ರಾಜರಿಗೆ ಮಹಿಷಾಸುರ ಮರ್ದಿನಿ ದೇವರು. ನಾವೆಲ್ಲ ಎಮ್ಮೆಯ ಹಾಲಿನಿಂದಲೇ ಬೆಳೆದವರು. ಎಮ್ಮೆ ಹೀಗೆ ನಮಗೆ ದೇವರಾದುದರಿಂದಲೇ ನಮ್ಮ ದೇಶದಲ್ಲಿ ಇತರ ದೇಶಗಳಿಗಿಂತ ಎಮ್ಮೆ ಪ್ರಾಬಲ್ಯ ಹೆಚ್ಚು.

ಇನ್ನು ನಮ್ಮ ಮನೆಯ ಮಾತು. ನಮ್ಮ ಮನೆಗೆ ಎಮ್ಮೆ ಪ್ರಕೃತಿಯಂತೆ ಶಾಶ್ವತ. ಎಮ್ಮೆ ಇಲ್ಲದ ಕಾಲ ನಮ್ಮಲ್ಲಿ ಇಲ್ಲವೆ ಇಲ್ಲ. ಮನೆಯ ಯಜಮಾನರ ವಂಶವನ್ನೂ ಹಿರಿಯರನ್ನೂ ಮೂರು ತಲೆ ನಾಲ್ಕು ತಲೆಗಳಿಂದ ಗುರುತಿಸುವಂತೆ ನಮ್ಮ ಮನೆಯ ಎಮ್ಮೆಯ ಮೂಲವನ್ನೂ ನಾಲ್ಕು ತಲೆಗಳಿಂದ ಗುರುತಿಸ ಬಹುದು. ಇದು ಹೀರೇ ಗೌಡ್ನ ಹಳ್ಳಿ ಎಮ್ಮೆ. ಇದರ ಹೆಸರು ದೊಡ್ಡಿ. ಇದು ಒಂಬತ್ತು ಕರು ಹಾಕಿದೆ. ಇದರ ನಾಲ್ಕನೆಯ ಕರು ಬಿಳಿಕೋಡಿನ ಎಮ್ಮೆ. ಅದರ ಮೂರನೆಯ ಕರು ಸಣ್ಣ ಎಮ್ಮೆ. ಅದರ ಎರಡನೆಯ ಕರು ಕಡಸು. ಸಣ್ಣೆಮ್ಮೆಯ ಮೊದಲನೆ ಕರು ಈಗಾಗಲೇ ಎರಡು ಕರ ಹಾಕಿದೆ. ಹೀಗೆ ನಮ್ಮ ಮನೆಯ ಎಮ್ಮೆಯ ವಂಶವೃಕ್ಷ ರಾಜ ಮಹಾರಾಜರ ವಂಶ ವೃಕ್ಷಗಳಿಗಿಂತ ಹೆಚ್ಚು ಸ್ಪಷ್ಟವೂ ಶುದ್ಧವೂ ನೇರವೂ ಆಗಿದೆ. ಸಣ್ಣ ಎಮ್ಮೆಯ ಸಾಧುಸ್ವಭಾವವನ್ನೂ ಅಂದವಾದ ಕೋಡುಗಳನ್ನೂ, ಅಷ್ಟು ಸಣ್ಣ ಕೆಚ್ಚಲಿಗೆ ಅಷ್ಟೊಂದು ಹಾಲನ್ನೂ ನೋಡಿ ಅನೇಕರು ಅದರ ಅಪ್ಪ, ಅಮ್ಮ. ತಳಿ ಯಾವು ದೆಂದು ಪದೇ ಪದೇ ವಿಚಾರಿಸಿಕೊಂಡು ಹೋಗುತ್ತಾರೆ. ಈ ಕಾರಣಗಳಿಗಾಗಿ ನಮ್ಮ ಎಮ್ಮೆಯ ವಂಶವೃಕ್ಷವನ್ನಿಡುವುದು ನನಗೆ ಆವಶ್ಯಕ.

ನಮ್ಮ ಮನೆಗೆ ಎಮ್ಮೆ ಪ್ರಕೃತಿಯಂತೆ ಶಾಶ್ವತ ಎಂದು ಹೇಳಿದೆ. ನಮ್ಮ ಮನೆಯಲ್ಲಿ ಯಾವಾಗಲೂ ಎಮ್ಮೆಗಳು ಇದ್ದೇ ಇರುತ್ತವೆ: ಆದರೆ ಈ ಎಲ್ಲಾ ಎಮ್ಮೆಗಳೂ ಹೀರೇಗೌಡ್ನ ಹಳ್ಳಿಯ ದೊಡ್ಡ ಎಮ್ಮೆಯ ತಳಿಗಳೇ ಎಂದು

ನಮ್ಮ ಹಿರಿಯರು ಹಟದಿಂದ ವಾದಿಸುತ್ತಾರೆ. ಹೀರೇಗೌಡ್ನ ಹಳ್ಳಿಯ ಆ ದೊಡ್ಡ ಎಮ್ಮೆಗೆ ಈಗಾಗಲೇ ಮೂವತ್ತು ನಲವತ್ತು ವರ್ಷಗಳಾಗಿರಬೇಕು. ಆದರೆ ಅದರ ತಳಿಗಳ ಸಂಖ್ಯೆ ಹೆಚ್ಚಾಗಿ ಬೆಳೆದಿರುವುದರಿಂದ ಯಾವುದರ ಅಪ್ಪ ಅಜ್ಜ ಯಾರು ಎಂದು ಗುರುತಿಸುವುದು ಅಸಾಧ್ಯವಾಗುತ್ತಿದೆ. ಆದರೆ ಇಷ್ಟು ಖಂಡಿತ. ನಮಗೆ ಗಾಳಿ, ನೀರು, ನದಿ, ಮರ, ಕೆರೆ, ಹೂವು, ಕಾಡು ಹೇಗೆ ಪ್ರಕೃತಿಯೋ ಹಾಗೆಯೇ ಎಮ್ಮೆಯೂ ಪ್ರಕೃತಿ. ಜನ ಬರಬಹುದು ; ಜನ ಹೋಗಬಹುದು ; ಜನ ಹುಟ್ಟಬಹುದು ; ಜನ ಸಾಯಬಹುದು ; ರಾಜ ಬದಲಾಯಿಸಬಹುದು ; ರಾಜ್ಯದಲ್ಲಿ ಕ್ರಾಂತಿಯಾಗಬಹುದು. ಆದರೆ ನಮ್ಮ ಕೊಟ್ಟಿಗೆಯಲ್ಲಿ ಮಾತ್ರ ಎಮ್ಮೆ ನಿತ್ಯ ; ಪುರಾತನ ; ಅಚಲ.

ಪ್ರಕೃತಿಯನ್ನು ಅರ್ಥಮಾಡಿಕೊಳ್ಳುವುದು ಬಹಳ ಕಷ್ಟ. ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಸುಮ್ಮನೆ ನೋಡಬೇಕು. ಸಾಧ್ಯವಾದರೆ ಅನುಸರಿಸಬೇಕು. ನಮ್ಮ ಪೂರ್ವದ ಋಷಿಗಳು ಪ್ರಕೃತಿಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಿಲ್ಲ. ಅದನ್ನು ಅನುಸರಿಸಿದರು ; ಅದರ ಪೂಜಾರಿಗಳಾದರು. ಎಮ್ಮೆ ಪ್ರಕೃತಿಯಂತೆ ; ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಅದನ್ನು ಸುಮ್ಮನೆ ಅನುಸರಿಸಬೇಕು. ಮಹಾತ್ಮಾ ಗಾಂಧಿಯಂತಹ ಭಾರತ ಭಾಗ್ಯವಿಧಾತರಿಗೆ ಸಹ ಎಮ್ಮೆ ಅರ್ಥವಾಗಲಿಲ್ಲ. "ಎಮ್ಮೆ ಗೋ ಜಾತಿಗೆ ಸೇರಿದುದಲ್ಲ. ಇದರ ಬೆಳವಣಿಗೆಯಿಂದ ಭಾರತದಲ್ಲಿ ಗೋವುಗಳ ಪ್ರಾಬಲ್ಯ ಕಡಿಮೆಯಾಗಿದೆ. ಸಾಧ್ಯವಾದಷ್ಟು ಬೇಗ ಎಮ್ಮೆಗಳನ್ನು ಇಲ್ಲದಂತೆ ಮಾಡಬೇಕು. ಇದರ ಹಾಲೂ ಜನಕ್ಕೆ ಆರೋಗ್ಯವಲ್ಲ. ಹಸುವಿನ ಹಾಲಿನಲ್ಲಿರುವ ತ್ರಾಣ ಪುಷ್ಟಿ ಎಮ್ಮೆಯ ಹಾಲಿನಲ್ಲಿ ಇಲ್ಲ. ಆದುದರಿಂದ ಎಮ್ಮೆಗಳನ್ನು ಇಲ್ಲದಂತೆ ಮಾಡಿ ಒಳ್ಳೆಯ ಜಾತಿಯ ಗೋವುಗಳನ್ನು ವೃದ್ಧಿಪಡಿಸುವುದೇ ಗೋಸೇವೆ" ಎಂದು ಮಹಾತ್ಮಾಗಾಂಧಿಯವರು ಸಾರಿ ಸಾರಿ ಹೇಳಿದ್ದಾರೆ. ನಮ್ಮ ಮನೆಯ ಎಮ್ಮೆಯ ಮುಖವನ್ನು ನೋಡಿದರೆ ಅದು ನನ್ನನ್ನು ನೋಡಿ ಕನಿಕರದಿಂದ "ಪಾಪ, ಋಷಿಗಳಿಗೆ ಪ್ರಕೃತಿ ಅರ್ಥವಾಗಲಿಲ್ಲ. ಹಾಗೆಯೇ ಗಾಂಧಿಗೂ ನಾವು ಅರ್ಥವಾಗಿಲ್ಲ. ನಮ್ಮನ್ನು ಇಲ್ಲದಂತೆ ಮಾಡಬೇಕಂತೆ ; ಹೇಗೆ ಮಾಡುತ್ತೀರಿ ? ಬೆಟ್ಟಗಳನ್ನು ಇಲ್ಲದಂತೆ ಮಾಡುತ್ತೀರಾ ? ನದಿಗಳನ್ನೂ ಕಾಡುಗಳನ್ನೂ ಇಲ್ಲದಂತೆ ಮಾಡುತ್ತೀರಾ ? ಪಾಪ, ಗಾಂಧಿಗೆ ಏನು

ಗೊತ್ತು ?" ಎಂದು ಹೇಳುವಂತೆ ತೋರುತ್ತದೆ- ಗಾಂಧಿಯವರ ತತ್ತ್ವವನ್ನು ಜ್ಞಾಪಕದಲ್ಲಿಟ್ಟುಕೊಂಡಿರುವ ನಾನು ಆ ಎಮ್ಮೆ ಮುಂದೆ ಹೋದಾಗ ನಮ್ಮ ಮನಸ್ಸಿನಲ್ಲಿರುವುದನ್ನು ಅದು ತಿಳಿದಿರುವಂತೆ "ನನಗೆ ಎಲ್ಲಾ ಗೊತ್ತು" ಎಂಬುದಾಗಿ ತಲೆಯಲ್ಲಾಡಿಸುತ್ತದೆ. ಗಾಂಧಿಯವರ ತತ್ತ್ವವನ್ನು ತಿಳಿದುದೇ ನನ್ನ ತಪ್ಪು ಎಂಬ ಭಾವ ನನ್ನಲ್ಲಿ ಮೂಡಿ ನಾನು ಈ ಎಮ್ಮೆಗೆ ಅಪರಾಧಿ ಎಂದು ಕೊಳ್ಳುತ್ತೇನೆ.

ನಮ್ಮ ದೇಶದ ಜನಗಳಂತೆಯೇ ನಮ್ಮ ದೇಶದ ರಾಸುಗಳೂ. ಈಗಾಗಲೇ, ಪುಷ್ಟರಾದ ಜನ ನಮ್ಮಲ್ಲಿ ಎಲ್ಲಿಯೂ ಕಣ್ಣಿಗೆ ಬೀಳುವುದಿಲ್ಲ. ಎಲ್ಲರೂ ಗುಜ್ಜಾರಿಗಳೇ, ವಾಮನರೇ. ಇನ್ನು ಕೆಲವು ಕಾಲ ಕಳೆದರೆ ಇವರು ಮನುಷ್ಯರೋ ಎಂಬುದನ್ನು ಕುರಿತು ನೋಡಬೇಕಾಗುತ್ತದೆ. ಹೊಟ್ಟೆ ತುಂಬ ಆಹಾರವಿಲ್ಲದವನು ಬೆಳೆಯುವುದು ಹೇಗೆ ? ಜನಕ್ಕೆ ಹೊಟ್ಟೆಗಿಲ್ಲದೆ ತಿರುಗುವಾಗ ದನಕ್ಕೆ ಏನು ಸಿಕ್ಕೀತು ? ನಮ್ಮ ಹಸುಗಳು ಆಡು ಕುರಿಗಳಂತೆ ಆಗುತ್ತಿವೆ. ಆಹಾರ ನಿಪುಣರ ಸಲಹೆ ಪ್ರಕಾರ ನಮ್ಮಲ್ಲಿ ಪ್ರತಿಯೊಬ್ಬರೂ ಪ್ರತಿದಿನವೂ ಹತ್ತು ಔನ್ಸು ಹಾಲನ್ನಾದರೂ ಕುಡಿಯಬೇಕಂತೆ. ಇಲ್ಲದಿದ್ದರೆ ನಮ್ಮ ಆರೋಗ್ಯ ಸರಿಯಾಗಿರುವುದಿಲ್ಲವಂತೆ. ಹಾಲು ಇರಲಿ. ಈ ನಲವತ್ತು ಕೋಟಿ ಜನಕ್ಕೆ ನಿತ್ಯಾ ಔನ್ಸು ಗಂಜಲ ಸಹ ದೊರೆಯುವಷ್ಟು ಒಳ್ಳೆಯ ಹಸುಗಳು ನಮ್ಮ ದೇಶದಲ್ಲಿ ಇಲ್ಲ. ಎಮ್ಮೆ ವಿಶ್ವಾಮಿತ್ರನ ಸೃಷ್ಟಿಯೆಂದು ಹೇಳುತ್ತಾರೆ. ವಿಶ್ವಾಮಿತ್ರ ಕಾರುಣ್ಯ ಸೇಡು ಛಲ ಮನುಷ್ಯತ್ವ ಮಾನ ರಸಿಕತೆಗಳ ಪ್ರತಿಬಿಂಬ. ವಸಿಷ್ಠನಂತೆ ಅವನು ಬರಿಯ ಒಣಕಾಷ್ಠವಲ್ಲ. ಅವನು ಅಂತಹ ಕರುಣಾಮಯಮೂರ್ತಿಯಾದುದರಿಂದಲೇ ತಾಯಿತಂದೆಗಳಿಬ್ಬರಿಗೂ ಬೇಡವಾದ ಶುನಶ್ಶೇಫನನ್ನು ಯಜ್ಞಬಲಿಯಿಂದ ಉಳಿಸಿದನು. ಅವನು ಕರುಣಾಮಯಮೂರ್ತಿಯಾದುದರಿಂದಲೇ ವಸಿಷ್ಠನ ಮತ್ತು ಅವನ ಮಕ್ಕಳ ಕ್ರೋಧಕ್ಕೆ ತುತ್ತಾಗಿ ಚಂಡಾಲನಾಗೆಂದು ಶಪಿಸಲ್ಪಟ್ಟ ತ್ರಿಶಂಕುವಿನಿಂದ ಯಜ್ಞಮಾಡಿಸಿ ಅವನನ್ನು ಸ್ವರ್ಗಕ್ಕೆ ಕಳುಹಿಸಿದನು. ಹೀಗೆ ಸಂಪ್ರದಾಯಗಳಿಗೆಲ್ಲಾ ವಿರೋಧವಾಗಿ ಕ್ರಾಂತಿಯನ್ನೆಬ್ಬಿಸಿದ ವಿಶ್ವಾಮಿತ್ರನ ಶಿಷ್ಯ ತ್ರಿಶಂಕುವಿಗೆ, ಈ ಸಂಪ್ರದಾಯಶರಣನಾದ ಇಂದ್ರ, ತನ್ನ ಸಂಸ್ಥಾನದಲ್ಲಿ ಸ್ಥಳ ಕೊಡಲಿಲ್ಲ. ತ್ರಿಶಂಕು ತಲೆಕೆಳಗಾಗಿ ಭೋ ಎಂದು ಕೂಗುತ್ತಾ

ಭೂಮಿಗೆ ಬಿದ್ದನು. ಆ ಆರ್ತನಾದವನ್ನು ಕೇಳಿ ಕರುಣಾಮಯನಾದ ವಿಶ್ವಾಮಿತ್ರ ಅವನಿಗೆ ಒಂದು 'ಪಾಕಿಸ್ತಾನ'ವನ್ನೇ ನಿರ್ಮಿಸಿದನು. ಹೊಸ ಜಗತ್ತನ್ನೇ ಸೃಷ್ಟಿಮಾಡಿದನು. ತೆಂಗಿನ ಮರಕ್ಕೆ ಬದಲು ಈಚಲು ಮರವನ್ನು ಸೃಷ್ಟಿಸಿದನು; ಹಸುವಿಗೆ ಬದಲು ಎಮ್ಮೆಯನ್ನು ಸೃಷ್ಟಿಸಿದನು. ವಿಶ್ವಾಮಿತ್ರ ಮಾಡಿದುದೇ ಸರಿ ಎಂಬಂತೆ ತೆಂಗಿನ ಮರದಿಂದಲೂ ಹೆಂಡವನ್ನೇ ತೆಗೆಯುತ್ತಿದಾರೆ. ವಿಶ್ವಾಮಿತ್ರ ಎಮ್ಮೆಯನ್ನು ಸೃಷ್ಟಿಸಲು ಅವನಿಗೆ ಹಸುವಿನ ಮೇಲೆ ಉಂಟಾದ ಒಂದು ತಿರಸ್ಕಾರವೂ ಕಾರಣ. ವಸಿಷ್ಠ ಋಷಿ ತನ್ನಲ್ಲಿದ್ದ ನಂದಿನಿಧೇನುವನ್ನು ವಿಶ್ವಾಮಿತ್ರನಿಗೆ ಕೊಡಲಿಲ್ಲ. ವಿಶ್ವಾಮಿತ್ರ ಕೋಪದಿಂದ ಹಸುವಿಗಿಂತ ಹೆಚ್ಚು ಹಾಲು ಕೊಡುವ ಎಮ್ಮೆಯನ್ನೇ ಸೃಷ್ಟಿಸಿದನು. ವಿಶ್ವಾಮಿತ್ರ ಮೈಸೂರಿನವನೇ ಆಗಿರಬೇಕು. ಆದುದರಿಂದಲೇ ಇಲ್ಲಿ ಎಮ್ಮೆಗಳು ಹೆಚ್ಚು. ಈ ದೇಶಕ್ಕೂ ಎಮ್ಮೆಯ ದೇಶವೆಂದು ಹೆಸರು.

ನಮಲ್ಲಿ ಸ್ವಲ್ಪ ಬುದ್ಧಿ ಮಂಕಾಗಿರುವವರನ್ನು 'ಎಮ್ಮೆಯ ಹಾಲು ಕುಡಿದವನು' ಎಂದು ಹಾಸ್ಯಮಾಡುತ್ತಾರೆ. ಹಾಲು ಬೆಳ್ಳಗಿದೆಯೋ ಕಪ್ಪಗಿದೆಯೋ ಎಂಬುದನ್ನು ನಮ್ಮ ದೇಶದ ಅನೇಕ ಹಳ್ಳಿಗಳವರು ಕಾಣರು. ಹಾಲು ಹಸುವಿನಿಂದ ಬರುತ್ತದೆ ಎಂಬುದೇ ಅನೇಕರಿಗೆ ಗೊತ್ತಿಲ್ಲ. ನಮ್ಮೂರಿನಿಂದ ಕೊಡಗಿಗೆ ಒಂದುಸಲ ಬಸ್‌ನಲ್ಲಿ ಹೋಗುತ್ತಿದ್ದೆ. ಬಸ್ಸಿನ ಪ್ರಯಾಣಿಕರ ಪೈಕಿ ಒಬ್ಬ ಹೆಂಗಸು ಒಂದು ಚಿಕ್ಕ ಮಗುವನ್ನು ಎತ್ತಿಕೊಂಡು ಕುಳಿತಿದ್ದಳು. ಮಗು ಸಾಯುವಂತೆ ಇತ್ತು. ಹತ್ತು ಹದಿನೈದು ದಿನಗಳಿಂದ ಜ್ವರ ಬರುತ್ತಿದೆ ಎಂದು ಆಕೆ ಮತ್ತೊಬ್ಬರೊಂದಿಗೆ ಹೇಳುತ್ತಿದ್ದಳು. ಮಧ್ಯಾಹ್ನ ಒಂದು ಗಂಟೆಯ ಉರಿಬಿಸಿಲಿನಲ್ಲಿ ಬಸ್ಸು ಒಂದು ಹಳ್ಳಿಯ ಮುಂದೆ ನಿಂತಿತು. ತಾಯಿ ಎತ್ತಿಕೊಂಡಿದ್ದ ಮಗು ಮೆತ್ತಗೆ ಸಣ್ಣ ದನಿಯಲ್ಲಿ ಅಳಲು ಪ್ರಾರಂಭಿಸಿತು. ಅದರ ಗಂಟಲಿನಿಂದ ಧ್ವನಿ ಹೊರಡುವುದೇ ಕಷ್ಟವಾಗಿತ್ತು. ತಾಯಿ ಸ್ವಲ್ಪ ಹಾಲು ಕುಡಿಸಬೇಕು ಎಂದುಕೊಂಡು ಮೇಲೆ ಇಟ್ಟಿದ್ದ ಬುಟ್ಟಿಯನ್ನು ಕೆಳಕ್ಕೆ ತೆಗೆಸಿಕೊಂಡಳು. ಬುಟ್ಟಿಯಲ್ಲಿ ಒಂದು ಸೀಸೆಯಲ್ಲಿ ಇಟ್ಟಿದ್ದ ಹಾಲು ಚೆಲ್ಲಿ ಬುಟ್ಟಿಯ ಬಟ್ಟೆ ನೆನೆದಿದ್ದಿತು. ಹಾಲು ಇರಲಿಲ್ಲ. ಮಗು ಹಸಿವಿನಿಂದ ಸಾಯುವಂತೆ ಅರಚುತ್ತಾ ಕೈಕಾಲು ಬಡಿಯುತ್ತಿದ್ದಿತು. ನಮಗೆಲ್ಲಾ ಅದು ಹಾಲಿಲ್ಲದಿದ್ದರೆ ಸಾಯುವುದೆಂದು ಖಂಡಿತವಾಗಿದ್ದಿತು. ಆ ಹಳ್ಳಿಯಲ್ಲಿ ಮುವ್ವತ್ತು ಮನೆಗಳಿವೆ,

ನಾವೆಲ್ಲಾ ಇಳಿದು ಊರಿನೊಳಕ್ಕೆ ಹೋದೆವು. ಮುವ್ವತ್ತು ಮನೆಗಳನ್ನೂ ವಿಚಾರಿಸಿದೆವು. ಸೇರಿಗೆ ಒಂದು ರೂಪಾಯಿ ಕೊಡುವುದಾಗಿ ಹೇಳಿದೆವು. ಆದರೆ ಹಾಲು ಸಿಕ್ಕಲಿಲ್ಲ. ಒಂದು ಮನೆಯಲ್ಲಿಯೂ ಕರೆಯುವ ಹಸುವಾಗಲಿ ಎಮ್ಮೆಯಾಗಲಿ ಇರಲಿಲ್ಲ. ಹಳ್ಳಿಗರು ತಿಂಗಳಿಗೆ ಒಂದು ದಿನವೂ ಮಜ್ಜಿಗೆ ಕುಡಿಯುತ್ತಿರಲಿಲ್ಲ.

ಇಂತಹ ದೇಶದಲ್ಲಿ—"ಎಮ್ಮೆಯ ಹಾಲು ಕುಡಿದರೆ ಬುದ್ಧಿ ಮಂದ, ಹಸುವಿನ ಹಾಲು ಕುಡಿ" ಎಂದು ಹೇಳುವುದು ಹೊಟ್ಟೆಗೆ ಅನ್ನ ಒದಗಿಸಲು ಚೈತನ್ಯವಿಲ್ಲದವನ ಮಗುವಿಗೆ "ಶಕ್ತಿ ಬರುವುದಕ್ಕಾಗಿ ಗ್ಲೂಕೋಸ್, ಓವಲ್ಟಿನ್ ಸೇವಿಸು" ಎಂದಂತೆ. ವಸಿಷ್ಠ ಶ್ರೀಮಂತ (ಅರಿಸ್ಟೋಕ್ರಾಟ್) ಪಂಗಡಕ್ಕೆ ಸೇರಿದವನು. ಆತನ ಗೋವು ನಂದಿನೀಧೇನು ಯಜ್ಞಕ್ಕೆ ಹಾಲನ್ನೂ ಘೃತವನ್ನೂ ಒದಗಿಸುವುದು. ದೇವತಾರಾಧನೆಗೆ ಅಮೃತವನ್ನು ಒದಗಿಸುವುದು. ಆದರೆ ಅದರ ಹಾಲು ಎಲ್ಲರಿಗೂ ಸಾಲದು ; ಗೋವಿನ ಹಾಲು ಅತಿ ಸಾತ್ವಿಕ, ವಸಿಷ್ಠ ಋಷಿಗಳಂತೆಯೇ. ಮೇನಕೆಯ ನರ್ತನವನ್ನು ನೋಡಿ ಮುಗ್ಧನಾಗಿ ಇಂದ್ರಿಯಗಳ ಮೇಲಿನ ಹಿಡಿತವನ್ನು ಸಡಿಲಿಸಿ ಆಕೆಯೊಂದಿಗೆ ಹತ್ತು ವರುಷ ವಿಲಾಸಿಯಾಗಿ,—ನೀನು ಇಲ್ಲಿ ಬಂದುದು ನೆನ್ನೆ ಅಲ್ಲವೇ ಎಂದು ಆಕೆಯನ್ನು ಕೇಳಿದ ರಸಿಕತೆ, ಕಾವು, ರಾಜಸ ಗುಣಗಳುಳ್ಳ ರಾಜಋಷಿಯ ಸೃಷ್ಟಿ ಎಮ್ಮೆಯ ಹಾಲು. ವಸಿಷ್ಠನ ಎದುರಿಗೆ ನೂರು ಮೇನಕೆಯರು ನೂರು ಭಾವಭಂಗಿಗಳಲ್ಲಿ ನೂರು ವರುಷ ಕುಣಿದಿದ್ದರೂ ಆ ಕಾಷ್ಠ ಚಿಗುರುತ್ತಿರಲಿಲ್ಲ. ಆದರೆ ಮನುಷ್ಯನೇ ಆಗಿದ್ದ ವಿಶ್ವಾಮಿತ್ರ ಮೇನಕೆಗೆ ಮನಸೋತನು. ಅದೇ ರಾಜಸ ಗುಣ. ಈ ಕಲಿಯುಗದಲ್ಲಿ ಬೇಕಾದುದು ಶುದ್ಧ ಸಾತ್ವಿಕವಲ್ಲ ; ಅದು ಅತಿ ಬಿಳುಪು ; ಶುದ್ಧ ತಾಮಸವೂ ಅಲ್ಲ ; ಅದು ಅತಿ ಕಪ್ಪು. ಬೇಕಾದುದು ಕೆಂಪು ರಾಜಸ ಗುಣ. ಕಲಿಯುಗದಲ್ಲಿ ಧರ್ಮಕ್ಕೆ ಮೂರು ಕಾಲು ಇಲ್ಲ ವೆಂಬಂತೆ, ಸಾತ್ವಿಕ ಗುಣಕ್ಕೆ ಸ್ಥಾನವೇ ಇಲ್ಲ. ಅದು ರಸ. ಆದರೆ ತಾಮಸ ಗುಣ ಬೇಕಾಗಿಲ್ಲ ; ಅದು ವಿರಸ. ಬೇಕಾದುದು ಸಮರಸ. ಅದೇ ರಾಜಸ. ಕಾಫಿ ಈ ರಾಜಸ ಗುಣದ ಗುರುತು. ಅದು ಕೃತಯುಗದ ಅಮೃತದಂತಹ ಸಾತ್ವಿಕ ವಸ್ತುವೂ ಅಲ್ಲ, ಕಲಿಯುಗದ ಕಳ್ಳು ಸಾರಾಯಿನಂತಹ ತಾಮಸ ವಸ್ತುವೂ ಅಲ್ಲ. ಕಲಿಯುಗದ ನಾಗರಿಕತೆಯ ಶಿಖರ ಕಾಫಿ. ಸ್ವಭಾವದಿಂದ

ಋಷಿಯಾದ ವಿಶ್ವಾಮಿತ್ರನಿಗೆ ಈ ರಹಸ್ಯ ಭವಿಷ್ಯ ತಿಳಿಯಿತು. ಆತ ರಾಜಸ ಕಾಫಿಗೆ ಅನುಗುಣವಾದ ರಾಜಸ ಎಮ್ಮೆಗಳನ್ನು ಸೃಷ್ಟಿಮಾಡಿದ. ಎಮ್ಮೆಯ ಹಾಲು ಸೇರದ ಕಾಫಿ ಕಾಫಿಯೇ ಅಲ್ಲ ; ಸ್ವರ್ಗಲೋಕದಲ್ಲಿ ಕಾಂಗ್ರೆಸ್ ಮಂತ್ರಿ ಮಂಡಲಗಳು ಬಂದು ಎಲ್ಲೆಲ್ಲೂ ಪಾನನಿರೋಧದ ಕಾನೂನು ಜಾರಿಯಾಯಿತಷ್ಟೆ. ಅಮೃತವನ್ನೆಲ್ಲಾ ಉಗ್ರಾಣಗಳಲ್ಲಿ ಹಾಕಿ 'ಸೀಲು' ಮಾಡಿಬಿಟ್ಟರು. ಅಮೃತಪಾನದಿಂದ ಮತ್ತರಾಗುವುದರಲ್ಲಿ ನಿರತರಾಗುತ್ತಿದ್ದ ಇಂದ್ರಾದಿಗಳು ಸಹ ಗುಟ್ಟನಲ್ಲಿ ಎಮ್ಮೆಯ ಹಾಲನ್ನು ತರಿಸಿ ಕಾಫಿ ಮಾಡಿಕೊಂಡು ಕುಡಿದು ಸ್ವಲ್ಪ ತುಷ್ಟರಾದರಂತೆ.

ಇಂತಹ ಪೂರ್ಣಪುರುಷ ವಿಶ್ವಾಮಿತ್ರನಿಂದ ಪ್ರತಿ ಜಗತ್ತಾಗಿ ಸೃಷ್ಟಿಯಾದುದರಿಂದಲೇ ಎಮ್ಮೆ ಮೂಲ ಜಗತ್ತಿನ ಹಸುವಿಗಿಂತ ಹೆಚ್ಚು ಬಲವಾಗಿದೆ. ಹೆಚ್ಚು ಒರಟಾಗಿದೆ. ಹೆಚ್ಚು ಕಪ್ಪಾಗಿದೆ ; ಹೆಚ್ಚು ದಪ್ಪನಾಗಿದೆ. ಎಮ್ಮೆಯಲ್ಲಿ ಹಾಲೂ ಹೆಚ್ಚು. ಬೆಣ್ಣೆಯೂ ಹೆಚ್ಚು. ಇಂತಹ ಪ್ರಾಣಿಯ ಹಾಲನ್ನು ತೆಗೆದುಕೊಳ್ಳುವವರಿಗೆ ಬುದ್ಧಿ ಮಂಕು ಎಂದು ಹೇಳುವವರ ಬುದ್ಧಿಗೆ ಏನು ಹೇಳೋಣ ? ನಮ್ಮ ಮೈಸೂರಿನವರ ಬುದ್ಧಿ ಮಂಕೆ ? ಇವರನ್ನು ನೋಡಿದ ಕೂಡಲೇ ಇವರು ಎಮ್ಮೆಯ ಹಾಲನ್ನು ಕುಡಿದವರೆಂಬುದು ಗೊತ್ತಾಗುವುದಿಲ್ಲವೆ ? ಎಮ್ಮೆಯ ಹಾಲನ್ನು ಕುಡಿಯುವವರ ಬುದ್ಧಿ ಇರಲಿ. ಸ್ವತಃ ಎಮ್ಮೆಯೇ ಬಹು ಚುರುಕಾದ ತೀಕ್ಷ್ಣ ಬುದ್ಧಿಯ ಪ್ರಾಣಿ. ಎಮ್ಮೆಯನ್ನು ಅನುಸರಿಸಿಕೊಂಡು ಅದರ ಜತೆಯಲ್ಲಿ ಓಡಾಡುತ್ತಿರುವವರಿಗೆ ಇದು ಗೊತ್ತಾಗುವುದೇ ಹೊರತು ಎಲ್ಲಿಯೋ ದೂರದಿಂದ ಅದರ ಕಪ್ಪು ಮೈಯನ್ನು ನೋಡುವವರಿಗೆ ಖಂಡಿತ ಗೊತ್ತಾಗುವುದಿಲ್ಲ. ಬುದ್ಧಿಯ ವಿಷಯ ಒಂದೇ ಅಲ್ಲ. ಎಮ್ಮೆಗೆ ಮಾತು ಸಹ ತಿಳಿಯುವುದು. ಒಂದು ಉದಾಹರಣೆ ಕೇಳಿ.

ನಮ್ಮ ಮನೆಯ ಎಮ್ಮೆ—ಇದು ಸಾಧಾರಣವಾಗಿ ಕರು ಹಾಕಬೇಕಾದರೆ ನಿಂತುಕೊಂಡೇ ಕರುವನ್ನು ಎಸೆದುಬಿಡುತ್ತಿದ್ದಿತು. ಅಂತಹ ಒರಟು ಪ್ರಾಣಿ ! ಹೊಟ್ಟೆಯಿಂದ ಹೊರಕ್ಕೆ ಬರುವಾಗಲೇ ಅಂತಹ ಒದೆತದೊಂದಿಗೆ ರಭಸದಿಂದ ಭೂಮಿಗೆ ಬಿದ್ದ ಹೊಸ ಎಳಗರು ಪಾಪ, ಚೇತರಿಸಿಕೊಳ್ಳುವುದಕ್ಕೇ ಎರಡು ಮೂರು ಗಂಟೆ ಬೇಕಾಗುತ್ತಿದ್ದಿತು. ಪ್ರಪಂಚ ಏನೂ ಸುಖವಿಲ್ಲ. ಇಲ್ಲಿ ಒದೆತಗಳೇ ಜಾಸ್ತಿ. ತಾಯಿ ತಂದೆ ಅಣ್ಣ ತಮ್ಮ ಹೆಂಡತಿ ಅಪ್ಪ ಮಗ ಎಲ್ಲರೂ

ಒಬ್ಬರನ್ನೊಬ್ಬರು ಒದೆಯುತ್ತಾರೆ, ಬಡಿಯುತ್ತಾರೆ. ಜಗತ್ತಿಗೆ ಬರುವುದು ಸುಖಕ್ಕಲ್ಲ ಎಂಬುದು ಆ ಬಡಪಾಯಿ ಎಳಗರುವಿಗೆ ಜಗತ್ತಿಗೆ ಬರುವಾಗಲೇ ಗೊತ್ತಾಗುತ್ತದೆ. ಹೋಗು, ನಿನ್ನ ಪಾಪಗಳಿಗೆ ಅಲ್ಲಿ ಅನುಭವಿಸು ಎಂದು ತನ್ನನ್ನು ತಂದು ಹೊರಕ್ಕೆ ದೂಡಿದಂತಾಗಿ ಕರು ಭೂಮಿಯ ಮೇಲೆ ಎರಡು ಗಂಟೆ ಬಿದ್ದಿದ್ದು ಮುಂದಿನ ಕಷ್ಟಗಳಿಗೆ ಸಿದ್ಧವಾಗುತ್ತದೆ. ಹೀಗೆ ಎಮ್ಮೆ ಎರಡು ಮೂರು ಸಲ, ಕರುವನ್ನು ಎಸೆದುದನ್ನು ನೋಡಿ ನನ್ನ ಆಳು ತೂರ "ಮುಂದಿನ ಸಲ ಕರ ಎಸೆಯೋದಕ್ಕೆ ಬಿಡಕೂಡದು. ಗೋಣಿಚೀಲ ಹಿಡಿದು ಕೊಂಡು ಕರ ಆತುಕೋ ಬೇಕು" ಎಂದ. ಎಮ್ಮೆ ಮುಂದಿನ ಸಲ ಗಬ್ಬವಾಗಿ ಈಯುವ ಕಾಲವೂ ಬಂದಿತು.

ಆ ಬೆಳಗ್ಗೆ ತೂರ ನನ್ನೊಂದಿಗೆ "ಇವತ್ತು ಸಾಯಂಕಾಲ ಎಮ್ಮೆ ಕರ ಹಾಕುತ್ತೆ" ಎಂದ. ಆ ವಿಷಯ ಅವನಿಗೆ ಚೆನ್ನಾಗಿ ಅನುಭವ. ಈ ವಿಚಾರ ಗಳು ಇವನಿಗೆ ಇಷ್ಟು ಖಂಡಿತವಾಗಿ ಹೇಗೆ ಗೊತ್ತಾಗುವುದೆಂದು ನಾನು ಅನೇಕ ಬಾರಿ ಆಶ್ಚರ್ಯಪಟ್ಟಿದ್ದೇನೆ. ತೂರ ಎಮ್ಮೆಗೆ ಕೇಳಿಸುವಂತೆ "ಇರಲಿ, ನಿನಗೆ ಮಾಡುತ್ತೇನೆ, ಕರ ಎಸೀತೀಯ" ಎಂದ. ನನ್ನೊಂದಿಗೆ "ಗೋಣಿಚೀಲ ಹಿಡಿದುಕೊಂಡು ಆತುಕೊಬೇಕು" ಎಂದ. ಆ ಮಾತನ್ನು ಕೇಳಿ ಎಮ್ಮೆ ಸರ್ರನೆ ಒಂದು ಸಲ ನನ್ನ ಕಡೆ ತಿರುಗಿತು, ಆ ನೋಟವನ್ನು ನೋಡಿ ನಾನು ಬೆಚ್ಚಿ ಬಿದ್ದೆ. ಒಬ್ಬನನ್ನು ನೀವು ಮನಸ್ಸಿನಲ್ಲಿಯೇ ಬೈದುಕೊಂಡು ಹೋಗುತ್ತಿರು ವಾಗ ಆತ ನಿಮ್ಮ ಎದುರಿಗೆ ಬಂದು ನಿಂತರೆ ಹೇಗಾಗುವುದೋ ಹಾಗೆ ಆಯಿತು; ಆ ಕ್ಷಣದಲ್ಲಿ "ಇದಕ್ಕೆ ಬುದ್ಧಿ ಇದೆ, ಮಾತೂ ತಿಳಿಯುತ್ತದೆ ; ಕಿವಿಯೂ ಕೇಳಿಸು ತ್ತದೆ" ಎಂಬ ಭಾವವುಂಟಾಯಿತು. ಇದರಿಂದ ನನ್ನ ಮನಸ್ಸಿನಲ್ಲಿ ಹೇಗೆ ಹೇಗೊ ಆಯಿತು. ಹಿಂದೆ ಹಾಲಿವುಡ್ ಸಿನಿಮಾ ತಾರೆಯರು, ನೀಗ್ರೋ ಪುರುಷರನ್ನು ಪುರುಷರಾಗಿಯೇ ಪರಿಗಣಿಸದೆ ಅವರ ಎದುರಿಗೆ ಅಸ್ತವ್ಯಸ್ತವಾಗಿ ಉಡುಪುಗಳನ್ನು ಧರಿಸಿ ಅಂತಃಪುರದಲ್ಲಿ ತಿರುಗಾಡುತ್ತಿದ್ದರಂತೆ. ನೀಗ್ರೋ ಗಳು ನಾಗರಿಕ ಜನಾಂಗ ಎಂದು ಆದ ಮೇಲೆ ಅವರಿಗೆ ಬಹಳ ಬೇಜಾರಾಯಿ ತಂತೆ. ನನ್ನ ವಿಷಯವೂ ಹಾಗೆಯೆ ಆಯಿತು. ಎಮ್ಮೆಗೆ ಮಾತು ತಿಳಿಯು ವುದಿಲ್ಲ ಎಂದು ಅದರ ಎದುರಿಗೆ ಮನಸ್ಸಿಗೆ ಬಂದುದನ್ನು ಹರಟುತ್ತಿದ್ದ ನನಗೆ ನಮ್ಮ ಎಮ್ಮೆಯ ಆ ನೋಟವನ್ನು ನೋಡಿ ಗಾಬರಿಯಾಯಿತು. ಎಮ್ಮೆ

'ಆಗಲಿ' ಎನ್ನುವಂತೆ ನನ್ನ ಕಡೆ ನೋಡಿತು. ಆ ನೋಟ ಅದರ ಮುಖದಲ್ಲಿ ಕಂಡುದು ಒಂದೇ ಕ್ಷಣ. ಮರುಕ್ಷಣ ಎಮ್ಮೆ ಮುಖವನ್ನು ಬೇರೆ ಕಡೆ ತಿರುಗಿಸಿ ಕೊಂಡಿತು. ಅದರ ಕಣ್ಣಿನಲ್ಲಿ ನನಗೆ ಈ ಮೊದಲಿನ ತಿಳಿವಿನ ನೋಟ ಈಗ ಕಾಣಲಿಲ್ಲ.

ಸಾಯಂಕಾಲವಾಯಿತು. ಎಮ್ಮೆಗೆ ಪ್ರಸವ ವೇದನೆ ಪ್ರಾರಂಭವಾಗಿದೆ ಎಂದು ತೂರ ಸೂಚಿಸಿದ. ಎಮ್ಮೆ ನಿಂತುಕೊಂಡೇ ಇದ್ದಿತು. "ಇದು ಮಲಗಿ ಕೊಂಡು ಕರ ಹಾಕುವುದಿಲ್ಲ. ಅದೇ ಇದರ ಕೆಟ್ಟಚಾಳಿ" ಎಂದ ತೂರ. ನಾವು, ಅಂದಾಜುಮಾಡಿ ಎಮ್ಮೆ ನಿಂತಿದ್ದ ನೇರದಿಂದ ಒಂದು ಮಾರು ಆಚೆಗೆ, ಪ್ರಾಯಶಃ ಕರುವನ್ನು ಇಲ್ಲಿಗೆ ಎಸೆಯಬಹುದು ಎಂದುಕೊಂಡು, ಗೋಣಿ ಚೀಲದ ಆಚೆ ಈಚೆ ಹಿಡಿದುಕೊಂಡು ನಿಂತುಕೊಂಡೆವು. ಎಮ್ಮೆ ಒಂದು ಮಾರು ಬಲಗಡೆಗೆ ತನ್ನ ಹಿಂಭಾಗವನ್ನು ತಿರುಗಿಸಿಕೊಂಡು ನಿಂತಿತು. ನಾವು ಸರ್ರನೆ ಚೀಲದೊಂದಿಗೆ ಅದರ ನೇರಕ್ಕೆ ಹಾರಿ ನಿಂತುಕೊಂಡೆವು. ಎಮ್ಮೆ ಕೂಡಲೆ ಎರಡು ಮಾರು ಎಡಗಡೆಗೆ ತನ್ನ ಹಿಂಭಾಗವನ್ನು ತಿರುಗಿಸಿತು. ನಾವೂ ಗೋಣಿ ಚೀಲದೊಂದಿಗೆ ಹಾರಿದೆವು. ಎಮ್ಮೆ ನಿಮಿಷ ನಿಮಿಷಕ್ಕೂ ತಿರುಗತೊಡಗಿತು. ನಾವೂ ನಿಮಿಷ ನಿಮಿಷಕ್ಕೂ ಕೊಕ್ಕಿನ ಆಟದಲ್ಲಿಯಂತೆ ಹಾರತೊಡಗಿದೆವು. ಸರ್ಕಸ್‌ನಲ್ಲಿ ಮೇಲುಗಡೆ ಒಬ್ಬ ಆಟಗಾರ ಸಾಧನೆ ಮಾಡುತ್ತಿರುವಾಗ ಅವನ ಕೈ ಕಾಲು ಜಾರೀತೆಂಬ ಭಯದಿಂದ ಕೆಳಗಡೆ ಹತ್ತಾರು ಜನ ಬಂದು ಜಮಖಾನ ಹಿಡಿದುಕೊಂಡು ಅವನ ನೇರದಲ್ಲಿ ತಿರುಗುವುದನ್ನು ನೀವು ಕಂಡಿದ್ದೀರಿ. ನಮಗೂ ಎಮ್ಮೆಗೂ ಉಂಟಾದ ಸ್ಪರ್ಧೆ ಈ ಬಗೆಯದಾಯಿತು. ಅದು ಈ ವಿನೋದದಲ್ಲಿ, ಕರು ಹಾಕಬೇಕೆಂಬುದನ್ನೇ ಪೂರ್ಣವಾಗಿ ಮರೆತಂತೆ ತೋರಿತು. ಈ ಓಡಾಟ ದಲ್ಲಿ, ಎಮ್ಮೆಗಿಂತ ನಮಗೇ ಹೆಚ್ಚು ಸುಸ್ತಾಗಿ ನಮ್ಮ ಅಳ್ಳೆಗಳು ಹೊಡೆದು ಕೊಳ್ಳತೊಡಗಿದುವು. ಎಮ್ಮೆ ಮಾತ್ರ ಹಿಂದಿನ ಚೇಷ್ಟೆಯ ನಗುವಿನಿಂದ ಮತ್ತೆ ನನ್ನ ಕಡೆ ನೋಡಿತು. ಇದು ಸದ್ಯಕ್ಕೆ ಕರುಹಾಕುವುದಿಲ್ಲ. ಇನ್ನು ಒಂದು ಗಂಟೆ ಬಿಟ್ಟು ಬರೋಣವೆಂದು ನಾನೂ ತೂರನೂ ಚೀಲವನ್ನು ಒಂದು ಮೂಲೆಗಿಟ್ಟು ಒಳಕ್ಕೆ ಹೋದೆವು. ಒಂದು ನಿಮಿಷದೊಳಗಾಗಿ ಕೊಟ್ಟಿಗೆಯಲ್ಲಿ ದೊಪ್ಪೆಂದು ಸದ್ದಾಯಿತು. ಹೋಗಿ ನೋಡಿದರೆ ಎಮ್ಮೆ ಪದ್ಧತಿಯಂತೆ ನಿಂತು ಕೊಂಡೇ ಎರಡು ಮಾರು ಆಚೆಗೆ ಕರುವನ್ನು ಎಸೆದಿದ್ದಿತು.

ಹೀಗೆ ತನ್ನನ್ನು ಅವಮಾನಮಾಡಿದುದರಿಂದಲೋ ಎಂಬಂತೆ ಪ್ರತಿ ಸಲವೂ ಸರಾಗವಾಗಿ ಹಾಲುಕೊಡುತ್ತಿದ್ದ ಎಮ್ಮೆ ಈ ಕರು ಹಾಕಿದ ಮೇಲೆ, ಹಾಲು ಕರೆಯುವುದಕ್ಕೆ ಹೋದರೆ ಒದೆಯುವುದನ್ನು ಪ್ರಾರಂಭಿಸಿತು. ಆಗ ಅದಕ್ಕೆ ತವುಡು, ಹಿಂಡಿ, ಹತ್ತಿಯ ಬೀಜ ಮುಂತಾದ ತಿಂಡಿಗಳನ್ನು ಎರಡು ಹೊತ್ತೂ, ಕರೆಯುವ ವೇಳೆಯಲ್ಲಿ ಇಡತೊಡಗಿದೆವು. ತಿಂಡಿಯನ್ನು ತನ್ನ ಮುಂದೆ ಇಟ್ಟಾಗ ಎಮ್ಮೆ "ತನ್ನಿ, ನೀವೇನೋ ಪರೋಪಕಾರ ದೃಷ್ಟಿಯಿಂದಲೂ ಗೋ ಸೇವಾ ಬುದ್ಧಿಯಿಂದಲೂ ತರುತ್ತಿಲ್ಲ. ನನ್ನ ಹಾಲು ಬೇಕಾಗಿದೆ. ಅದಕ್ಕಾಗಿ ತರುತ್ತಿದ್ದೀರಿ" ಎನ್ನುವಂತೆ ನಮ್ಮ ಕಡೆ ನೋಡುತ್ತಿದ್ದಿತು. ಬೆಳಗಿನ ಕಾಫಿ ನಮಗೆ ಹೇಗೆ ಸಕಾಲಕ್ಕೆ ಆಗಬೇಕೋ ಹಾಗೆ ಎಮ್ಮೆಗೆ ತಿಂಡಿ ಸಕಾಲಕ್ಕೆ ಆಗ ಬೇಕಾಗಿದ್ದಿತು. ಒಂದು ದಿವಸ ತಿಂಡಿ ಇಟ್ಟು ಹಾಲು ಕರೆಯುವುದಕ್ಕೆ ನನ್ನ ಹೆಂಡತಿ ಬರುವುದು ಬೆಳಗ್ಗೆ ಹತ್ತು ಗಂಟೆಯಾಯಿತು. "ಇಷ್ಟು ಹೊತ್ತು ಯಾಕೆ? ಹೊತ್ತಿಗೆ ಮುಂಚೆ ಕರೆಯುವುದಕ್ಕೇನು? ಈಗ ಕೊಡುತ್ತದೆಯೆ?" ಎಂದೆ. ನನ್ನ ಹೆಂಡತಿ "ಕೊಡದೆ ಅದಕ್ಕೇನು ರೋಗ? ಹೊಟ್ಟೆ ಬಿರಿ ಯುವ ಹಾಗೆ ತಿಂಡಿ ತಿನ್ನುತ್ತಿಲ್ಲವೇ" ಎಂದಳು. ಎಮ್ಮೆ ಒಂದು ಸಲ ಸರ್ರನೆ ಅವಳ ಕಡೆ ನೋಡಿತು. ಆ ನೋಟದಲ್ಲಿ ಆ ಹಿಂದಿನ ತಿಳಿವು ಕಾಣುತ್ತಿದ್ದಿತು. ಎಮ್ಮೆಯ ಭಾಷೆ ನನಗೆ ಅರ್ಥವಾಯಿತು. ನನ್ನ ಹೆಂಡತಿ ಅದರ ಮೊಲೆಯನ್ನು ಎಷ್ಟು ಹೀಜಿದರೂ ಎಮ್ಮೆ ಸೋರು ಬಿಡಲಿಲ್ಲ. ಬಾಂಡಲೆಯಲ್ಲಿದ್ದ ತಿಂಡಿ ಯೆಲ್ಲಾ ಮುಗಿಯಿತು. "ತಿಂಡಿ ಹೊಡೆಯುವುದಕ್ಕೆ ಇದೊಳ್ಳೆ ಅಭ್ಯಾಸ ಮಾಡಿಕೊಂಡಿತು, ಹಾಳು ಮುಂಡೇದು" ಎಂದುಕೊಂಡು ನನ್ನ ಹೆಂಡತಿ ಮತ್ತೊಂದು ಬಾಂಡಲೆ ತಿಂಡಿ ತರಲು ಒಳಕ್ಕೆ ಹೋದಳು. ಅವಳು ಒಳಗಿ ನಿಂದ ತಿಂಡಿ ತರುತ್ತಿರುವಾಗ ಎಮ್ಮೆ ಮತ್ತೆ ದುರುದುರನೆ ನೋಡಿತು. "ತನ್ನಿ ತನ್ನಿ. ಇಲ್ಲದಿದ್ದರೆ ನೀವು ತರುತ್ತೀರಾ" ಎಂಬಂತೆ ಕಣ್ಣು ಮಿಟಕಿಸಿತು. "ಇದು ಈ ಉಪಾಯ ಮಾಡಿಕೊಳ್ಳದೆ ಸುಮ್ಮನೆ ಸಾಧುವಾಗಿ ಹಾಲು ಕೊಟ್ಟ ದ್ದರೆ ನೀವು ಹೀಗೆ ನಿತ್ಯಾ ಇದಕ್ಕೆ ಎರಡು ಹೊತ್ತೂ ತಿಂಡಿ ಇಡುತ್ತಿದ್ದಿರಾ" ಎಂದು ನಾನು ನಕ್ಕೆ. ಹೀಗೆ ಅಂದು ಎಮ್ಮೆಗೆ ತಿಂಡಿ ಎರಡು ಸಲ ಇಡಬೇಕಾಗಿ ಬಂದುದರಿಂದ ಅಲ್ಲಿಂದ ಮುಂದೆ ನನ್ನ ಹೆಂಡತಿ ಎಮ್ಮೆಗೆ ಸಕಾಲದಲ್ಲಿ ಇಟ್ಟು ಹಾಲು ಕರೆದುಕೊಳ್ಳುತ್ತಿದ್ದಳು.

ಈ ಎಮ್ಮೆಯನ್ನು ಸಾಧಾರಣವಾಗಿ ನನ್ನ ಹೆಂಡತಿಯೇ ಕರೆಯುವ ಅಭ್ಯಾಸವಿದ್ದಿತು. ಒಂದು ಸಲ ಎಂಟು ದಿವಸ ಅವಳು ನರಸೀಪುರದ ತೇರಿಗೆ ಹೋದಳು. ನಾನೇ ತಿಂಡಿ ಕಲಸಿ ಎಮ್ಮೆಗೆ ತೆಗೆದುಕೊಂಡು ಹೊರಟೆ. ತೂರ "ಹಿಂಡಿ ಸಾಲದು. ಇನ್ನೊಂದು ಹಿಡಿ ರಾಗಿ ಹಿಟ್ಟು ಹಾಕಿ" ಎಂದ. ನಾನು "ಸರಿ ಸರಿ. ಜನರಿಗೆ ತಿನ್ನುವುದಕ್ಕೆ ರಾಗಿ ಇಲ್ಲ; ಹನುಮಂತರಾಯ ಹಗ್ಗ ಮೇಯ್ತಿರೋವಾಗ ಪೂಜಾರಿ ಶಾವಿಗೆ ಬೇಡಿದ ಹಾಗೆ ಆಯಿತು. ನಡಿ ಸಾಕು" ಎಂದೆ. ತಿಂಡಿಯನ್ನು ತೆಗೆದುಕೊಂಡು ಹೋಗಿ ಎಮ್ಮೆಯ ಮುಂದೆ ಇಟ್ಟು ನಾನೇ ಹಾಲು ಕರೆಯಲು ಕುಳಿತೆ. ಎಮ್ಮೆ ಒಂದು ಸಲ ತಿಂಡಿ ಮೂಸಿ ನೋಡಿತು. ನಾನು ಹಾಲು ಕರೆಯಲು ಕೈಯಲ್ಲಿ ಹಿಡಿದಿದ್ದ ಪಾತ್ರೆ ಕೆಳಕ್ಕೆ ಬೀಳುವಂತೆ ಪಟಾರನೆ ಒದೆಯಿತು. ನಾನು ತೂರನಿಗೆ "ನಿನ್ನ ಮಾತು ನಿಜ. ಇದಕ್ಕೆ ರಾಗಿ ಹಸಿಹಿಟ್ಟಿನ ರಸ ಹಲ್ಲಿಗೆ ಇಳಿದು ಅಭ್ಯಾಸವಾಗಿದೆ. ಇನ್ನಷ್ಟು ಹಸಿಹಿಟ್ಟು ಹಾಕಿಕೊಂಡು ಇನ್ನೊಂದು ಗಳಿಗೆ ಬಿಟ್ಟು ಬರೋಣ. ಎಲ್ಲಾ ಕೆಟ್ಟಭ್ಯಾಸ" ಎಂದು ಒಳಕ್ಕೆ ಬಂದೆ. ಮತ್ತೆ ತಿಂಡಿ ಸರಿಮಾಡಿಕೊಂಡು ಹೋಗುವುದಕ್ಕೆ ಮುಂಚೆ ತೂರ "ಇದಕ್ಕೆ ಅಮ್ಮೋರು ಕರ ಬಿಟ್ಟ ಪಾಟ. ನಿಮಗೆ ಕೊಡೋಕಿಲ್ಲ. ಖಂಡಿತ ಒದೀತದೆ" ಎಂದ. ಆಗ ನಾನು ಒಂದು ಉಪಾಯವನ್ನು ಮಾಡಿದೆ. ಇದನ್ನು ಓದುವ ವಾಚಕರು ನಗಬೇಕಾಗಿಲ್ಲ. ನನ್ನ ಹೆಂಡತಿಯ ಒಂದು ಸೀರೆಯನ್ನು ಮೈತುಂಬ ಹೊದೆದುಕೊಂಡು ಎಮ್ಮೆಯ ಮುಂದೆ ಕುಳಿತೆ. ಎಮ್ಮೆ ಈ ಮೋಸಕ್ಕೆ ಬಿದ್ದಿತು. ಹಾಲು ಕೊಟ್ಟಿತು. ಹೀಗೆ ನಾನು ಐದು ಆರು ದಿನ ಅಭಿನವ ಸೈರಂಧ್ರಿಯಾಗಿ ರಾಗಿಹಿಟ್ಟು ಹಿಂಡಿಗಳನ್ನು ಪೂರಾ ಹಾಕಿ ಹಾಲು ಕರೆದುಕೊಳ್ಳುತ್ತಿದ್ದೆ. ನನ್ನ ಹೆಂಡತಿ ಹಿಂದಿರುಗುವುದು ನಾಳೆ ಎನ್ನುವಾಗ, ನಾನು ಎಮ್ಮೆಯ ಮುಂದೆ ಹಾಲು ಕರೆಯುತ್ತಾ ಕುಳಿತಿದ್ದೆ. ತೂರ "ಹಸು ಆಗಿದ್ರೆ ವಾಸನೆ ಮೇಲೆ ಹಿಡಿದು ಒದ್ದು ಬಿಡೋದು. ಇದು ಎಮ್ಮೆ ಜಾತಿ. ದೆಯ್ಯದಂತ ಮುಂಡೇದು ಬುದ್ಧಿ ಇಲ್ಲ" ಎಂದ. ನಾನು ನನ್ನ ಹೆಂಡತಿಯ ದನಿಯಂತೆ ದನಿಮಾಡಿಕೊಂಡು "ಇದಕ್ಕೆ ಬುದ್ಧಿ ಇದೆ" ಎಂದೆ. ಎಮ್ಮೆ ಒದ್ದೇ ಬಿಟ್ಟಿತು.

ಈ ಎಮ್ಮೆಗೆ ಒಂದು ಸಲ ಕಾಲುಜ್ವರ ಬಾಯಿಜ್ವರ ಆಯಿತು. ಆಳು ತೂರ ಎಲ್ಲಾ ಹಸುಗಳನ್ನೂ ಬೋರೆಗೆ ಬಿಡುತ್ತಿದ್ದ. "ಎಮ್ಮೆ ಬಿಡಬೇಡ. ದನಿನ

ಆಸ್ಪತ್ರೆಯಿಂದ ಔಷಧಿ ತರಿಸಿ ಹುಯ್ಯಿಸುತ್ತೇನೆ" ಎಂದೆ. ಆ ಮಾತು ಅಲ್ಲೇ ನಿಂತಿದ್ದ ಎಮ್ಮೆಗೆ ಕೇಳಿಸಿರಬೇಕು. ನಾವು ಒಳಕ್ಕೆ ಹೋದಾಗ ಎಮ್ಮೆ ಕಿತ್ತು ಕೊಂಡು ಬೋರೆಗೆ ಓಡಿಬಿಟ್ಟಿತು. ಈ ಎಮ್ಮೆಗೆ ರಾಗಿಯ ಅಂಬಲಿ ಬಹಳ ಇಷ್ಟ. ಕಾಯಿಲೆಯಾದಾಗಲೂ, ಬೇರೆ ಹುಲ್ಲು ತಿಂಡಿಗಳನ್ನು ಮುಟ್ಟದಿದ್ದರೂ, ಇದು ರಾಗಿಯ ಅಂಬಲಿಯನ್ನು ಮಾತ್ರ ಯಾವಾಗಲೂ ಕುಡಿಯುತ್ತದೆ. ಇದಕ್ಕೆ ಕಾಲುಜ್ವರ ಬಾಯಿಜ್ವರವಾದಾಗ "ಇದನ್ನು ಹಿಡಿದುಕೊಂಡು ಗಂಟ ಲಿಗೆ ಗೊಟ್ಟಹಾಕಿ ಔಷಧಿ ಹುಯ್ಯುವುದು ಕಷ್ಟ. ಅಂಬಲಿಗೆ ಸೇರಿಸಿಕೊಟ್ಟು ಬಿಡೋಣ ಎಂದಳು, ನನ್ನ ಹೆಂಡತಿ. ಮೊದಲನೆಯ ಸಲ ಹಾಗೆ ಮಾಡಿ ಎಮ್ಮೆಯ ಮುಂದೆ ಇಟ್ಟೆವು. ಅದು ಏನೂ ತಿಳಿಯದ ಪ್ರಾಣಿಯಂತೆ ಸುಮ್ಮನೆ ಅಂಬಲಿ ಕುಡಿಯಿತು. ಆ ಸಾಯಂಕಾಲ, ದನದ ವೈದ್ಯರು ಮನೆಗೆ ಬಂದು ಎಮ್ಮೆ ನೋಡಿದರು. "ಇದಕ್ಕೆ ಔಷಧಿ ಹೇಗೆ ಕುಡಿಸುತ್ತೀರಿ" ಎಂದರು. ಆಳು ತೂರ "ಅಂಬಲಿ ಒಳಗೆ ಕುಡೀತದೆ" ಎಂದ. ಆ ಮಾತು ಎಮ್ಮೆಗೆ ಕೇಳಿಸಿತು. ಆ ಸಂಧ್ಯಾಕಾಲದಿಂದಲೇ ಅದು ಅಂಬಲಿ ಕುಡಿಯುವುದನ್ನು ಬಿಟ್ಟಿತು. ಮರುದಿನ ಬೆಳಗ್ಗೆ ಬಂದ ವೈದ್ಯರು "ಇದಕ್ಕೆ ಔಷಧಿ ಕುಡಿಸಲೇ ಬೇಕು" ಎಂದರು. ಆಗ ಎಮ್ಮೆ ಮಲಗಿದ್ದಿತು. ಆಳು ತೂರ "ಮಲಗಿರು ವಾಗ ಕಾಲುಕಟ್ಟಿ ಗೊಟ್ಟದಲ್ಲಿ ಹುಯ್ಯಬೇಕು" ಎಂದನು. ಎಮ್ಮೆ ಎದ್ದು ನಿಂತುಕೊಂಡಿತು. ತೂರ ಮನೆಯಲ್ಲಿರುವವರೆಗೆ ಅದು ಮಲಗುತ್ತಲೇ ಇರಲಿಲ್ಲ. ಹುಷಾರಿಲ್ಲದಿದ್ದರೂ ನಿಂತೇ ಇರುತ್ತಿದ್ದಿತು. ತೂರ ಹನ್ನೊಂದು ಗಂಟೆಗೆ ದನಗಳನ್ನು ಬೋರೆಗೆ ಹೊಡೆದುಕೊಂಡು ಹೋದ ಮೇಲೆಯೇ ಅದು ಮಲಗುತ್ತಿದ್ದಿತು. ಅನಂತರ ತೂರ ಬೋರೆಯಿಂದ ಸಾಯಂಕಾಲ ಬಂದನಂತರ ಉಳಿದ ದನಗಳೆಲ್ಲಾ ಒಳಕ್ಕೆ ಬಂದ ಕೂಡಲೇ ಎದ್ದು ನಿಂತುಕೊಂಡುಬಿಡು ತ್ತಿದ್ದಿತು. ರಾತ್ರಿ ನಾವೆಲ್ಲಾ ಮಲಗಿದ ಮೇಲೆ ಮಲಗುತ್ತಿದ್ದಿತು. ಬೆಳಗ್ಗೆ ನಮ್ಮ ಮುಖ ಕಂಡ ಕೂಡಲೇ ಎದ್ದು ನಿಂತುಬಿಡುತ್ತಿದ್ದಿತು.

ಹೀಗೆ ನಮ್ಮ ಎಮ್ಮೆ ನಮ್ಮ ಮನೆಯಲ್ಲಿ ಒಂದು ಅದೃಶ್ಯ ಶಕ್ತಿಯಾಗಿದೆ. ಭಗವಂತನ ಕಣ್ಣಿಗೆ ಕಾಣದಿದ್ದರೂ ನಮ್ಮ ಕಾರ್ಯಗಳ ಮೇಲೆ ತನ್ನ ಪ್ರಭಾವ ವನ್ನು ಬೀರುವಂತೆ ಎಮ್ಮೆ ಮೂಕ ಪ್ರಾಣಿಯಾದರೂ ನಮ್ಮ ಆಚರಣೆ

ಮಾತುಗಳಿಗೆ ಒಂದು ವಿಧವಾದ ಅಂಕುಶವಾಗಿದೆ. ಈ ಎಮ್ಮೆ ಮಾತ್ರವೇ ಅಲ್ಲ. ಯಾವ ಮೂಕಪ್ರಾಣಿಯ ಎದುರಿಗೂ ಮನಸ್ಸಿಗೆ ಬಂದಂತೆ ಮಾತ ನಾಡಲು ನಮಗೆ ಭಯವಾಗಿದೆ. ಯಾಕೆಂದರೆ ಯಾವ ಪ್ರಾಣಿಗೆ ಯಾವ ಶಕ್ತಿ ಇದೆಯೋ ಬಲ್ಲವರಾರು ? ಹೀಗಿರುವಲ್ಲಿ ಎಮ್ಮೆಗೆ ಬುದ್ಧಿ ಇಲ್ಲ ಎಂದು ಹೇಳಿ ದರೆ ನಂಬುವುದಕ್ಕೆ ಆಗುತ್ತದೆಯೇ. ಆ ಎಮ್ಮೆಯ ಹಾಲು ಕುಡಿದ ನಮ್ಮನ್ನೇ ನೋಡಿ !

ಗಂಟುಗ

ಎನ್. ಪ್ರಹ್ಲಾದರಾವ್

ಕಾದು ನಿಂತು ನಿಂತು ಕಾದು, ಎರಡು ರೂಪಾಯಿ ಕೊಟ್ಟು ತಂದ ಸೌದೆಯ ತುಂಡನ್ನು ಥೊಪ್ ಎಂದು ಮನೆಯ ಅಂಗಳದಲ್ಲಿ ಎಸೆಯುತ್ತ "ಇಗೋ! ನಿನ್ನ ಸೌದೆ" ಎಂದು ಬೆರಳು ಮಾಡಿ ತೋರಿಸಿದ ರಾಜು. ಪಟ್ಟು ಹಿಡಿದ ಜಟ್ಟಿಯಂತೆ ಬೊಕ್ಕ ಬೋರಲಾಗಿ ಅಂಗಳದಲ್ಲಿ ಬಿದ್ದಿದ್ದ ಆ ತುಂಡನ್ನು ಒಣಗಿದೆಯೋ ಇಲ್ಲ ಹಸೀ ಮುದ್ದೆಯೋ ಎಂದು ಪರೀಕ್ಷೆ ಮಾಡುವುದಕ್ಕಾಗಿ ಜೋರಾಗಿ ಒಂದು ಸಲ ಕಾಲಲ್ಲಿ ಒದ್ದೆ. ಅತ್ತ ಇತ್ತ ಅಲುಗಾಡಿದರೂ ಅದು ಮತ್ತೆ 'ಉಹು' ಎನ್ನುತ್ತ ತಾನು ಮೊದಲು ಇದ್ದ ಹಾಗೇ ಬಿದ್ದುಕೊಂಡಿತು. ಕುಳಿತುಕೊಂಡು ಎರಡೂ ಕೈಗಳಿಂದ ಅದನ್ನು ನೂಕಿ ಮುಖ ನೋಡಿದಾಗ ಅದು ನನ್ನ ಕಡೆ ದೃಷ್ಟಿಯನ್ನು ಹರಿಸಿ 'ಹಿ ಹಿ ಹಿ' ಅಂದಿತು. ಅಬ್ಬಾ! ಅದರ ಮುಖಾನೋ! ಶತಗಂಟು! ಅಡ್ಡಮೋರೆ, ಗಂಟು ಮೂಗು, ಗುಜ್ಜು ಗೊರಳು, ದೊಡ್ಡ ಕೈಕಾಲುಗಳು, ಗಿಡ್ಡ ದೇಹ, ಇನ್ನೇನು—'ನೃಪತಿ ಕೇಳೆಂದ' ಎನ್ನುವುದೇ ಬಾಕಿ. ಗಂಟು ಕುಂಟೆಗೆ ಎಂಟು ಮುಖ ಅನ್ನುವ ಹಾಗೆ ಮುಖವೆಲ್ಲಾ ಉಬ್ಬು ತಗ್ಗು, ಏರು ಇಳಿತ. ಆ ಕುಂಟೆಯನ್ನು ನೋಡಿದರೆ ವಾಲ್ಟ್ ಡಿಸ್ನೆಯ ಕಾರ್ಟೂನ್ ನೋಡಿದ ನೆನಪಾಯಿತು ನನಗೆ. ಸುಟ್ಟು ಹಾಕೋ ಸೌದೆಯ ಸೊಗಸು ನೋಡೋಕೆ ಆಗುತ್ತದೆಯೆ.? ನನ್ನ ಪಾಲಿಗೆ ಬಂದದ್ದು. ಅದಕ್ಕೋಸ್ಕರ "ರಾಜು ಹಿಡಿ ಅದನ್ನ. ಒಯ್ದು ನೀರೊಲೇಲಿ ಚಾಚಿ ಬಿಡೋಣ" ಎಂದೆ. ರಾಜು ಅದರ ಕೈಹಿಡಿದ, ನಾನು ಕಾಲು ಹಿಡಿದೆ, ಹೊತ್ತು ತಂದುದಾಯಿತು. ಒಲೆಯಲ್ಲಿ ಇಡ ಹೋದರೆ ಆ ತುಂಟ ಕುಂಟ ಕುಂಟೆ ತನ್ನ ಎರಡು ಕೈಗಳನ್ನು ಒಲೆಯ ಬಾಯಿಗೆ ಅಡ್ಡ ಹಿಡಿದು, "ಉಹು, ಬೇಡ. ನನ್ನಾಣೆ, ಅಯ್ಯೋ" ಎಂದು ರಗಳೆ ಮಾಡಿತು.

ರಾಜೂಗೆ ಇಷ್ಟು ಹೊತ್ತೂ ಕುಂಟೆಯೊಂದಿಗೆ ಹೆಣಗಾಡಿ ಮೈ ಕೈ ಎಲ್ಲ ನೋವಾಗಿತ್ತು. ಆದರೂ ಪಕ್ಕದ ಮನೆಗೆ ಹೋಗಿ ಕುಲಕ್ಕೆ ಮೃತ್ಯು—ಕೊಡಲಿಯನ್ನು ತಂದ. ಅದರ ಬಾಯೋ ಶುದ್ಧ ಗರಗಸದ ಹಾಗಿತ್ತು. ಕೈಲಿ

ಹಿಡಿದು ಮೇಲಕ್ಕೆ ಎತ್ತಿದರೆ ಅದು ಮೊಸಳೆಯಂತೆ ಬಾಯಿ ಬಿಡುತ್ತಾ 'ಹ್ರಾ' ಎಂದು ಅರಚಿತು. ನಾನೇ ಕಾಷ್ಠ ಯಜ್ಞಕ್ಕೆ ಹಿರಿಯಾಳಾಗಿ ನಿಂತು, ಅದನ್ನು ಆದಷ್ಟು ಮೇಲಕ್ಕೆ ಎತ್ತಿ, ನನ್ನ ಇದ್ದ ಮತ್ತು ಇಲ್ಲದ ಬಲವನ್ನೆಲಾ ಉಪಯೋಗಿಸಿ ಕುಂಟೆಯ ಬಾಯ ಮೇಲೆ ಧೊಪ್ ಎಂದು ಒಂದು ಏಟು ಕೊಟ್ಟೆ. ಒಂದೇ ಏಟು ! ಆ ಕುಂಟೆ 'ಆ' ಎಂದು ತುಟಿ ಎರಡು ಮಾಡಿ, ಹುಚ್ಚು ನಾಯಿ ಮೇಲೆ ಬಿದ್ದು, ಅಂಗೀನೋ ಪಂಚೇನೋ ಗಬಕ್ ಎಂದು ಬಿಡಿಯುವ ಹಾಗೆ, ಕೊಡಲಿಯನ್ನು ಕಚ್ಚಿಬಿಟ್ಟಿತು. ಎಳೆದರೂ ಇಲ್ಲ. ತುಳಿದರೂ ಇಲ್ಲ. ಅಲುಗಾಡಿಸಿದರೂ ಇಲ್ಲ. ಕೊಡಲಿಯನ್ನು ಕುಂಟೆಯಿಂದ ಬೇರ್ಪಡಿಸಿದ ಮೇಲೆ ತಾನೆ ಸೌದೆ ಕಡಿಯುವುದು. ಅಷ್ಟರಲ್ಲಿ ರಾಜು ನಾಲ್ಕು ದೊಡ್ಡ ದೊಡ್ಡ ಮೊಳೆಗಳನ್ನು ತಂದು ಅವೆಲ್ಲವನ್ನೂ ಕುಂಟೆಯ ಬಾಯಿಗೆ ಬಲವಾಗಿ ಹೊಡೆದ. ಆ ಕುಂಟೆ ನಿರಾಯಾಸವಾಗಿ ನಾಲ್ಕೂ ಮೊಳೆಗಳನ್ನು ನುಂಗಿ ನೀರು ಕುಡಿದು ಬಿಟ್ಟಿತು. ಶನಿ ಸೌದೆ. ಭಾರತದ ರಾಜಕೀಯದಂತೆ ತೊಡಕು ತೊಡಕು. ಉಪಾಯಗಳು ನಾಲ್ಕಕ್ಕೂ ಬಗ್ಗಲಿಲ್ಲ. ಸೀಳೋಣವೆಂದರೆ ಮೈ ಎಲ್ಲಾ ನಾರು, ಚಕ್ಕೆ ಕೂಡ ಏಳೊಲ್ಲ. ಸಪ್ಪ ಒಂದು ಎರಡಾದರೆ, ಹೇಗೋ ನೀರೊಲೆಗೆ ಆಹಾರವಾಗುತ್ತದೆ. ಆದರೆ ಅಷ್ಟು ಆಗಬೇಕಲ್ಲ.

"ಸುಮ್ಮನೆ ಇರಿ ಅಪ್ಪ. ನಾನು ಒಂದು ಉಪಾಯ ಮಾಡುತ್ತೇನೆ". ಅಂದರು ನಮ್ಮ ತಾಯಿ. ಅಂದವರು ಏನೇನೋ ತಂದರು. ಒಳ್ಳೆಣ್ಣೆ, ಎಳ್ಳೆಣ್ಣೆ, ನೆಯ್, ಸೀಮೆಎಣ್ಣೆ, ಕಸಕಡ್ಡಿ, ನಾನು ಕತೆಗಳನ್ನು ಬರೆದು ಹರಿದು ಹಾಕಿದ ರಾಶಿ ಕಾಗದದ ತುಂಡುಗಳು, ಹಳೆಯ ಅರಿವೆಯ ತುಂಡುಗಳು, ಇವೆಲ್ಲವನ್ನೂ ತಂದು ಆ ಕುಂಟೆಯ ಮೇಲೆ ಹಾಕಿ ಬೆಂಕಿ ಕಾಣಿಸಿದರು. "ಈಗ ನೋಡು, ಒಂದು ಕ್ಷಣಕ್ಕೆ ಸೌದೆ ಅರ್ಥ ಆಗುತ್ತೆ. ಆಮೇಲೆ ಅದನ್ನು ಒಲೆಗೆ ಹಾಕಿದರಾಯಿತು" ಎಂದರು. ಉರಿಯೋ ಬೆಂಕೀಲಿ ಸುಟ್ಟಷ್ಟೆ ಲಾಭ. ಎಂದು ನನ್ನ ತಂಗಿ ಒಂದು ಬಾಣಲೆಯಲ್ಲಿ ರೊಟ್ಟಿ ಹಚ್ಚಿ ತಂದು ಗಂಟುಗನ ತಲೆಯ ಮೇಲಿಟ್ಟಳು. ಮೊದಲು ಭೊಗ್ ಎಂದು ಉರಿ ಕಾಣಿಸಿತು. ಅನಂತರ ಹೊಗೆಯಾಡಿತು. ತುಪ್ಪದ ವಾಸನೆ, ಎಣ್ಣೆಯ ವಾಸನೆ ವಡೆಯ ವಾಸನೆ ಅವೆಲ್ಲ ಸೇರಿ ಹೊಗೆ ಗಮಗಮಿಸುತ್ತಿತ್ತು. ಎಣ್ಣೆಯೆಲ್ಲಾ ಉರಿದು, ಬಟ್ಟೆ ಸುಟ್ಟು, ಕಾಗದ ಕರಿಕಾಗಿ, ರೊಟ್ಟಿ ಬೆಂದರೂ ಗಂಟುಗ ಮಾತ್ರ ನಿರ್ವಿ

ಕಾರವಾಗಿ, ತಣ್ಣಗೆ ಸಮಾಧಿಯಲ್ಲಿ ಮಲಗಿರುವ ಋಷಿಯಂತೆ ಬಿದ್ದಿರುವುದನ್ನು ಕಂಡು ನಮ್ಮ ತಾಯಿ ಪೆಚ್ಚಾದರು. "ಇದರ ಮನೆ ಹಾಳಾಯ್ತು" ಎಂದ ರಾಜು. "ಎರಡು ರೂಪಾಯಿ ದಂಡಕ್ಕೆ ಹಾಕಿದೆಯಲ್ಲಾ" ಎಂದರು, ಇನ್ನೊ ಬ್ಬರು. 'ಅಯ್ಯೋ ! ಅದನ್ನು ಕಟ್ಟಿಕೊಂಡು ಏನು, ಊಟಕ್ಕೆ ಏಳಬಾರದೆ ?" ಎಂದಳು ನನ್ನ ಹೆಂಡತಿ. ಒಬ್ಬರಿಗೂ ಆ ಗಂಟುಗ ಬೇಡವಾಗಿತ್ತು, ಆದರೆ ಅದನ್ನು ಬಿಸಾಡುವ ಮನಸ್ಸು ಯಾರಿಗೂ ಇರಲಿಲ್ಲ.

ಪ್ರತಿದಿನ ಬೆಳಗ್ಗೆ ಎದ್ದವರೆಲ್ಲ ಗಂಟುಗನನ್ನು ನೋಡಿ "ಥೂ, ಇದರ ಮನೆ ಹಾಳಾಗ !" ಎನ್ನುವವರೆ. ನಾನು ಮಾತ್ರ ಯಾರೂ ಇಲ್ಲದಾಗ ಅದರ ಹತ್ತಿರ ಹೋಗಿ "ಏನಯ್ಯಾ ಮಿತ್ರ ! ಹೇಗಿದ್ದೀಯ ?" ಎನ್ನುತ್ತೇನೆ. ಆಗ ಗಂಟುಗ ಮೆಲ್ಲಗೆ ಕಣ್ಣು ಬಿಟ್ಟು, ಬಾಯಿ ತೆರೆದು 'ಹಿ ಹಿ ಹಿ' ಎನ್ನುತ್ತದೆ.

ಈಗೀಗ ಪ್ರತಿ ದಿನವೂ ಅದು ನನ್ನ ಮಾತಿಗೆ ನಗುತ್ತಿದೆ. ಹಾಗೆಯೇ ನಗುತ್ತಾ ಇರಲಿ. ಒಂದು ದಿನ ಜೋರಾಗಿ ನಕ್ಕು ದವಡೆ ಹರಿದು, ಹೊಟ್ಟೆ ಬಿರಿದು, ಅದರ ಪಕ್ಕೆಲುಬು ತುಂಡಾಗುತ್ತದೆ ! ಆಗ ಅದನ್ನು ಒಲೆಗೆ ಹಾಕಿ ಬಿಡುತ್ತೇನೆ ! !

ಕುರುಡು ಕಾಂಚಾಣ

ರಾ. ಕು.

"ಕಳ್ಳ ನಾಣ್ಯ ಸಲುಗೆಗೆ ಸಲ್ಲದು. ಕಳ್ಳನಾಣ್ಯವ ಸಲ್ಲಲೀಯರಯ್ಯ"

—ಬಸವಣ್ಣನವರ ವಚನ

ನಿನ್ನೆ ಯಾವನೊ ಒಬ್ಬ ಹಸ್ತಕುಶಲಿ ನನಗೆ ಮತ್ತೊಂದು ಖೊಟ್ಟಿ ನಾಣ್ಯ ಅಮರಿಸಿ ಹೋದ. ಅದು ದಾನವೊ ದಕ್ಷಿಣೆಯೊ ಆಗಿದ್ದರೆ ನನಗಷ್ಟು ದುಃಖವಾಗುತ್ತಿದ್ದಿಲ್ಲ. ಅದೇನು ಚಿಕ್ಕನಾಣ್ಯವೂ ಅಲ್ಲ. ಒಂದು ರೂಪಾಯಿಯ ಹೊಡೆತ. ದುಡ್ಡು ನನಗೆ ಯಾವಾಗಲೂ ಮೋಸಮಾಡುತ್ತಲೆ ಬಂದಿದೆ. "ಉದ್ಯೋಗಿನಂ ಪುರುಷಸಿಂಹ ಮುಪೈತಿ ಲಕ್ಷ್ಮೀ" ಎಂಬ ಮಾತಿನಲ್ಲಿ ನನಗೆ ಪ್ರಬಲವಾದ ಸಂಶಯವುಂಟಾಗುತ್ತದೆ. ಸಿಂಹನಾಗದಿದ್ದರೂ ನಾನು ಉದ್ಯೋಗಿ ಯಾಗಿದ್ದೇನೆ. ನನಗೆ ಈ ನಾಣ್ಯ ಸಾಗಿಸಿದವನೆ ಉದ್ಯೋಗಿಯೆ? ಹೋಗಲಿ ಬಿಡಿ. ಖೊಟ್ಟಿ ನಾಣ್ಯದ ಕಮ್ಮಟವೂ ಕರ್ತಾರರೂ ಇಂದಿನವರಲ್ಲ. ಬಸವಣ್ಣ ನವರನ್ನೆ ಬಿಡದವರು ನನ್ನನ್ನು ಬಿಟ್ಟಾರೆ? ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲು ವರು ಎಂಬ ಮಾತು ಹೇಳಬೇಕಾದರೆ ಪಾಪ, ಆ ಪುಣ್ಯವಂತನಿಗೆ ಎಷ್ಟು ಖೊಟ್ಟಿ ನಾಣ್ಯ ದಾಟಿಸಿರಬೇಕು ದುರಾತ್ಮರು? ಈ ನಾಣ್ಯ ನಡೆಸುವ ಜನ ಯಾವಕಾ ಲಕ್ಕೂ ಸಲ್ಲುವರೆಂಬ ಬಸವಣ್ಣನವರ ಭವಿಷ್ಯವಚನಕ್ಕೆ ನಾನು ಅಪವಾದವಾಗು ವುದು ಯೋಗ್ಯವೆ? ಕೂಡದು, ಶರಣರ ನುಡಿ ಸುಳ್ಳಾಗದು. ಆದುದರಿಂದಲೆ ನನ್ನ ಕೈಗೆ ಖೊಟ್ಟಿನಾಣ್ಯ ಕೊಟ್ಟು ಆ ಯಾವನೋ ಒಬ್ಬ ಉದ್ಯೋಗಿಯಾದನು. ನನ್ನ ಲಕ್ಷ್ಮಿ ಆ ಪುರುಷಸಿಂಹವನ್ನು ಹಿಂಬಾಲಿಸಿ ಹೋದಳು.

ನನ್ನ ಈ ವೇದಾಂತ ಬಸವಣ್ಣನವರ ಮೇಲಿನ ಭಕ್ತಿಯಿಂದ ಹುಟ್ಟಲಿಲ್ಲ. ಕಳವಾದುದೆ ನನಗೆ ತಿಳಿದಿರಲಿಲ್ಲ. ತಿಳಿದಿದ್ದರೆ, ನಿನ್ನೆ ನಾನು ಆ ಕಳ್ಳನನ್ನು ಹಿಡಿಯ ಬಹುದಿತ್ತು. ಕಳ್ಳನನ್ನು ಹಿಡಿದ ಹೆಮ್ಮೆ ಒಮ್ಮೆಯಾದರೂ ನನಗೆ ಬರುತ್ತಿತ್ತು. ಆದರೆ ಅವನು ಕಳ್ಳನೆಂದಾಗಲಿ, ಆ ನಾಣ್ಯ ಖೊಟ್ಟಿಯೆಂದಾಗಲಿ ನನಗಾಗ ಹೊಳೆಯಲಿಲ್ಲ. ಸಭ್ಯರೊಡನೆ ನಡೆದು ನಡೆದು, ಎಲ್ಲರೂ ಸಭ್ಯರೆಂಬ ನಂಬುಗೆ ನನ್ನಲ್ಲಿ ನೆಲೆಯೂರಿಬಿಟ್ಟಿದೆ. ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಣ

ವಾದೀತೊ ಇಲ್ಲವೊ, ನಡೆಯದ ನಾಣ್ಯವೊಂದು ಮಾತ್ರ ನಿಶ್ಚಿತವಾಗಿ ಕರಗತ ವಾಗುತ್ತದೆ. ಖೊಟ್ಟಿ ನಾಣ್ಯದ ಕಮ್ಮಟವಾಗಲಿ, ಸವಕಳಿಯ ಸಾಗಾಟಗಾರ ನಾಗಲಿ ಸರ್ವಜ್ಞನ ಕಣ್ಣಿಗೆ ಬಿದ್ದಂತೆ ತೋರುವುದಿಲ್ಲ. ಅದನ್ನು ಕುರಿತು ಒಂದು ತ್ರಿಪದಿ ಬರೆವ ಪ್ರಸಂಗ ಅವನಿಗೆ ಬಂದಿರಲಿಕ್ಕೂ ಇಲ್ಲ. ಸರ್ವಜ್ಞನಿಗೂ ಟೊಪ್ಪಿಗೆ ಹಾಕುವ ಸಾಹಸ ಯಾರು ಮಾಡಿಯಾರು? ಅದಕ್ಕೆ ಯೋಗ್ಯರಾದವರು ನನ್ನಂತಹವರು.

ಇದು ನನ್ನ ಮೊದಲ ಗಳಿಗೆಯಾಗಿದ್ದರೆ ನಾನು ನಿಮಗೆ, ಹೇಳುತ್ತಿದ್ದಿಲ್ಲ. ಆದರೆ ಹಲವಾರು ಸಲ-ನಡೆಯದ ನಾಣ್ಯಗಳಿಗೆ ಇವನೆ ಸರಿಯಾದ ಗಿರಾಕಿ ಯೆಂದು ಅನೇಕ ದುಷ್ಟರು ಕಂಡುಕೊಳ್ಳುವಷ್ಟು ಸಲ-ನಾನು ಈ ಟೊಪ್ಪಿಗೆ ಹಾಕಿಕೊಂಡಿದ್ದೇನೆ. ಹೀಗೆ ನನ್ನ ಬಳಿಗೆ ನಡೆದು ಬಂದ ಭಾಗ್ಯಲಕ್ಷ್ಮಿಯನ್ನು ಜೋಪಾನವಾಗಿ ಕಾಯ್ದುಕೊಂಡಿದ್ದೇನೆ. ಆ ನಾಣ್ಯಸಂಗ್ರಹ ನನ್ನ ಅವಿಭಾಜ್ಯ ಆಸ್ತಿ. ಅದರಲ್ಲಿ ಯಾರೂ ಪಾಲು ಕೇಳಲಾರರು. ಯಾವ ಕಳ್ಳನ ಕೈಯೂ ಅದನ್ನು ಮುಟ್ಟಲಾರದು. ಅದಕ್ಕೆ ರಕ್ಷಕನಾಗಲೀ, ರಕ್ಷೆಯಾಗಲಿ ಬೇಕಾಗಿಲ್ಲ. ಇಂತಹ ಸಂಪತ್ತು ಯಾರಿಗೆ ಸಿಕ್ಕೀತು? ಯಾರು ಯಾರೊ ಈ ನಾಣ್ಯಗಳನ್ನು ನನಗೆ ದಾಟಿಸಿದರು. ಅವುಗಳನ್ನು ಇನ್ನೊಬ್ಬರಿಗೆ ದಾಟಿಸಲು ನಾನೇನು ಸಿದ್ಧನಿಲ್ಲ. ಪರರೊಡ್ಡವದ ಠೀವಿಯ ಕೊಳ್ಳದಗ್ಗಳಿಕೆ ಕಾರಣವಲ್ಲ. ಅವುಗಳ ಸ್ವಭಾವವನ್ನು ನಾನು ಮೆಚ್ಚಿದ್ದೇನೆ! ಒಬ್ಬನನ್ನು ಒಮ್ಮೆ ಕೈಹಿಡಿದವೆಂದರೆ ಅವು ಎಂದೆಂದಿಗೂ ಯಾವ ಪ್ರಸಂಗದಲ್ಲಿಯೂ ಅವನನ್ನು ಬಿಟ್ಟು ಹೋಗ ಲಾರವು. ಈ ಸ್ವಾಮಿಭಕ್ತಿ ನನ್ನಲ್ಲಿ ಅವ್ಯಾಜವಾದ ಪ್ರೇಮವನ್ನು ಹುಟ್ಟಿಸಿದೆ. ಅಲ್ಲದೆ ಇವು ನಿರ್ಜೀವ ವಸ್ತುಗಳಲ್ಲ. ಒಂದೊಂದಕ್ಕೂ ಒಂದು ಕಥೆಯಿದೆ, ವ್ಯಥೆಯಿದೆ, ವಿನೋದವೂ ಇದೆ. ನನ್ನ ಆತ್ಮಚರಿತ್ರೆ ಬರೆಯುವ ಕಾಲ ಬಂದರೆ, ಈ ನಾಣ್ಯಗಳು ಒಂದೊಂದು ಅಧ್ಯಾಯವನ್ನು ಒದಗಿಸಬಲ್ಲುವು. ಮೇಲಾಗಿ, ನಾನು ಎಷ್ಟು ಜನಕ್ಕೆ ಉಪಕಾರಮಾಡಿದೆ ಎಂಬ ಹೆಮ್ಮೆಯನ್ನು ನನ್ನಲ್ಲಿ ಅವು ತುಂಬುತ್ತವೆ. ಈ ರೂಪಾಯಿ ಒಪ್ಪಿಸಿಹೋದ ಆ ಪುಣ್ಯಾತ್ಮ ಎಷ್ಟು ಹಿಗ್ಗಿರಬೇಡ! ತನ್ನ ಕೌಶಲ್ಯವನ್ನು ಮೆಚ್ಚಿ ಬೆನ್ನು ಚಪ್ಪರಿಸಿಕೊಂಡಿರ ಬೇಕು. ತನ್ನ ನಲ್ಲೆಯ ಮುಂದೆ ಹೇಳಿ, ಹಾಸ್ಯಮಾಡಿ ಅವಳನ್ನೂ ನಗಿಸಿ ದ್ದಾನು. ಅವರಿಬ್ಬರ ಸುಖದ ಮುಂದೆ ನನ್ನ ಚಿಕ್ಕದುಃಖವನ್ನು ನಿವಾಳಿಸಿ

ಒಗೆಯಬೇಕಲ್ಲವೆ ? ಒಂದುವೇಳೆ ನಾನೂ ವ್ಯವಹಾರ ಚತುರನಾಗಿದ್ದೆನೆನ್ನಿ ; ಆಗ, ಪಾಪ ! ಅವನಿಗೆ ಈ ಸುಖವೆಲ್ಲಿ ದಕ್ಕಬೇಕು ? ನನ್ನಂತಹ ಇನ್ನೊಬ್ಬನು ಅವನಿಗೆ ಅಷ್ಟು ಹಗುರಾಗಿ ಸಿಗುವುದು ಸಾಧ್ಯವೆ ?

ಈ ಪರೋಪಕಾರ ಬುದ್ಧಿ ನನಗೆ ಮೊದಲು ಇರುವುದಿಲ್ಲ. ಸಂಗತಿ ಜರುಗಿ ಹೋದ ಬಳಿಕ ನಾನು ಪರೋಪಕಾರಿಯಾದೆನೆಂಬುದು ತಿಳಿಯುತ್ತದೆ. ಈ ತಿಳಿವಳಿಕೆಯಿಂದ ಮೊದಮೊದಲು ನನಗೆ ಕಳವಳವಾಗುತ್ತಿತ್ತು. ಈಗ ರೂಢಿಯಾಗಿದೆ. ನನ್ನ ಕಣ್ಣಿನ ಬಗೆಗೊ, ಬುದ್ಧಿಯ-ಬಗೆಗೊ ಅಥವಾ ಎರಡನ್ನೂ ಕುರಿತೋ ನೀವು ಈಗಾಗಲೆ ಒಂದು ಅಭಿಪ್ರಾಯಕ್ಕೆ ಬರತೊಡಗಿದ್ದೀರಿ. ನಾನು ಬಲ್ಲೆ-ನೀವು ತಪ್ಪಿದ್ದೀರಿ. ಇಂತಹ ನಾಣ್ಯಗಳನ್ನು ಗುರುತಿಸುವಲ್ಲಿ ನಾನು ಎತ್ತಿದ ಕೈ. ಎಷ್ಟೋಸಲ ನಡೆಯದ ನಾಣ್ಯಗಳನ್ನು ಆಗಿಂದಾಗಲೇ ಹೆಕ್ಕಿ ತೆಗೆದು, ಅವುಗಳ ಒಡೆಯರಿಗೆ ತಿರುಗಿ ಒಪ್ಪಿಸಿದ್ದೇನೆ. ಆದರೆ ಎಂತಹ ಎಚ್ಚರದಲ್ಲಿಯೂ ಒಂದು ತೂಕಡಿಕೆ ಬರುತ್ತದೆ. ಆ ಹೊತ್ತಿನಲ್ಲಿಯೆ ಟೊಪ್ಪಿಗೆ ತಲೆಗೆ ಬೀಳುವುದು. ಮರೆವು, ದೇಹಾಲಸ್ಯ, ಅವಸರ, ಆವೇಶಗಳಲ್ಲಿ ಕವಿತೆಗೇ ಕುಂದು ಬರುವಾಗ ಒಂದು ಖೊಟ್ಟಿ ನಾಣ್ಯ ಕೈಗೆ ಬರುವುದು ಏನು ಸೋಜಿಗ ? ರಾಘವಾಂಕ ಕವಿಯ ಅನೇಕ ಗುಣಗಳಲ್ಲಿ ಅವನ ತಪ್ಪು ಒಪ್ಪಿಕೊಳ್ಳುವ ಈ ಗುಣವನ್ನು ನಾನು ಬಲವಾಗಿ ಮೆಚ್ಚಿದ್ದೇನೆ. ವ್ಯವಹಾರದಲ್ಲಿ ಕಡೆತನಕ ಬಂದ ಲೇಸಿಂಗೆ ತಲೆದೂಗುತ್ತಾ ಇರುವ ಹೊತ್ತಿಗೆ ಯಾವನೋ ಒಬ್ಬ ಒಂದು ನಾಣ್ಯವನ್ನು ಎಡವಾಯಿಸಿಬಿಡುತ್ತಾನೆ. ನಡೆಯುವವನು ಎಡವಿ ಬೀಳುತ್ತಾನೆ.

ನಡೆಯದ ನಾಣ್ಯವನ್ನು ಇನ್ನೊಬ್ಬರ ಕೈಗೆ ನಡೆಯಿಸಿ ಬಿಡುವುದು ಬಹು ಕುಶಲವಾದ ಕಲೆ. ಎವರೆಸ್ಟ ಏರುವದಕ್ಕಿಂತಲೂ ನಾಣ್ಯ ನಡೆಸುವುದು ಕಷ್ಟದ ಕೆಲಸ. ನನ್ನ ಕೈಗೆ ಇಂತಹ ಸಂಪತ್ತು ಸೇರಿದ ಸಲಕ್ಕೊಮ್ಮೆ ನಾನು ಆ ಕಲಾವಿದನನ್ನು ಮೆಚ್ಚುತ್ತೇನೆ. ಸುಳ್ಳು ಹೇಳುವುದು ಸುಲಭವಾದೀತು. ಸಲ್ಲದ ಬದುಕನ್ನು ಸರಿಯೆಂದು ಸಾಧಿಸಿಕೊಡುವುದು, ಸಲ್ಲದೆಂಬ ಸಂಶಯಕ್ಕೆ ಆಸ್ಪದಕೊಡದಿರುವುದು ಸಾಮಾನ್ಯವಾದ ಸಿದ್ಧಿಯಲ್ಲ. ಎಂತಹ ಕಣ್ಣಲ್ಲಿಯೂ ಮಣ್ಣುಗ್ಗಬೇಕಾದರೆ ಈ ಖೊಟ್ಟಿ ನಾಣ್ಯದ ಕಲಾವಿದ ಎಂತಹ ಪ್ರವೀಣನಿರಬೇಡ ! ಅವನು ಸಮಯ ನೋಡುತ್ತಾನೆ; ಗಿರಾಕಿಯನ್ನು

ಗುರುತಿಸುತ್ತಾನೆ; ವೇಷ ತೊಡುತ್ತಾನೆ. ನಿಮ್ಮ ಕಣ್ಣಿಗೆ ಯಾವ ಅಂಜನ ಹಚ್ಚುತ್ತಾನೊ ಏನೊ—ಎಷ್ಟು ನಿರಾಯಾಸವಾಗಿ, ಸೊಗಸಾಗಿ ಸುಲಿಗೆ ಮಾಡಿ ಸಭ್ಯತೆಯ ಸೀಮೆಯಲ್ಲಿ ನುಸುಳಿ ಹೋಗುತ್ತಾನೆ! ಮರಳಿ ಮರಳಿ ಇವನ ಭೇಟಿಮಾಡಿದ ನನಗೆ ಈ ಕಲೆಯ ಎಷ್ಟೋ ಹಿಡಿತಗಳು ಮನದಟ್ಟಾಗಿವೆ. ಆದರೆ ಆ ಕಲಾವಿದ ತನ್ನ ವಿದ್ಯೆಯ ಇನ್ನಾವುದೊ ಬಹುಮೂಲ್ಯವಾದ ಒಂದು ಗುಟ್ಟನ್ನು ಮಾತ್ರ ನನಗೆ ಬಿಟ್ಟುಕೊಟ್ಟಿಲ್ಲ. ಅದು ಒಳ್ಳೆಯದೆ. ಎನ್ನಿ. ಅವನ ಸ್ವಾರ್ಥ ನನ್ನ ಸಜ್ಜನಿಕೆಯನ್ನು ಕಾದಿದೆ. ತನ್ನ ವಿದ್ಯೆಯನ್ನು ನನಗವನು ಕಲಿಸಲೊಲ್ಲ. ಒಬ್ಬ ಒಳ್ಳೆಯ ಗಿರಾಕಿಯನ್ನು ಕಳೆದುಕೊಳ್ಳುವ ಭಯ ಅವನನ್ನು ಬಾಧಿಸುತ್ತಿರಬೇಕು. ಅವನ ದಂಧೆ ಮುಗ್ಗಿಸುವ ಉತ್ಸುಕತೆಯೂ ನನಗಿಲ್ಲ. ಆತ್ಮ ಸಂರಕ್ಷಣೆಯಷ್ಟೆ ನನಗೆ ಬೇಕು. ಅದು ಸಾಧ್ಯವೆಂದು ತೋರಿಲ್ಲ.

ನನ್ನಲ್ಲಿ ಕೂಡಿಬಿದ್ದ ನಾಣ್ಯಗಳನ್ನೆಲ್ಲ ನೋಡುತ್ತ ಕುಳಿತುಕೊಳ್ಳುವ "ಮೈದಾಸ" ಪ್ರವೃತ್ತಿ ನನಗಿಲ್ಲ. ಆದರೆ ಸಾಮಾನ್ಯವಾಗಿ ಒಂದೊ ಎರಡೊ ಇಂತಹ ನಾಣ್ಯಗಳನ್ನು ನನ್ನ ಕಿಸೆ ಯಾವಾಗಲೂ ಹೊಂದಿರುತ್ತದೆ. ಕುರುಡು ಕಾಂಚಾಣ ಕುಣಿಯುತ್ತಲಿದ್ದರೆಯೆ ನನಗೆ ಸೊಗಸು. "ಬರುವದೇನೊ ನೆಪ್ಪಿಗೆ ನೀನು ಬಿದ್ದೆ ಟೊಪ್ಪಿಗೆ" ಎಂದು ಗುಣುಗುಣಿಸಿ ಅವು ನನ್ನನ್ನು ಎಚ್ಚರಗೊಳಿಸುತ್ತವೆ. ಬಹುಶಃ ಅದರಿಂದಲೆ ನಾನು ಮತ್ತೆ ಟೊಪ್ಪಿಗೆ ಬೀಳುತ್ತೇನೆ. ಎಚ್ಚರಿಕೆ ಎಂದಾದರೊಮ್ಮೆ ಬಂದರೆ ಅದಕ್ಕೊಂದು ಬೆಲೆಯಿದ್ದೀತು. ಒಂದೆಸವನೆ ಗೊಣಗುಟ್ಟುವವರ ಮಾತು ಯಾರು ಕೇಳುತ್ತಾರೆ? ಅತಿ ಪರಿಚಯಕ್ಕೆ ಅವಜ್ಞೆಯೆ ಸರಿ. ಅಲ್ಲದೆ ಉಪದೇಶ ಮಾಡುತ್ತಲೆ ಇರುವವರನ್ನು ಕಂಡರೆ ಅವರ ಮಾತು ಮೀರಲೆಬೇಕು ಎಂದೆನಿಸುತ್ತದೆ. ಪಾಪ! ಅವುಗಳನ್ನಾದರೂ ಏಕೆ ದೂಷಿಸಲಿ? ಬಹಳವಾದರೆ ಇನ್ನೊಂದು ನಡೆಯದ ನಾಣ್ಯ ನನಗೆ ಲಭ್ಯವಾದೀತು. ನನ್ನ ನಾಣ್ಯಸಂಗ್ರಹ ವೃದ್ಧಿಯಾಗುತ್ತದೆ.

ಕೆಲಸಕ್ಕೆ ಬಾರದ ಹಳೆಯ ನಾಣ್ಯಗಳನ್ನು ಶೇಖರಿಸಿ ವಸ್ತು ಸಂಗ್ರಹಾಲಯದಲ್ಲಿ ಇಡುವುದಿಲ್ಲವೆ? ಕೆಲಸಕ್ಕೆ ಬಾರದ ಹೊಸ ನಾಣ್ಯಗಳನ್ನು ಹೊಂದಿಸಿ ನಾನು ಒಂದು ಸಂಗ್ರಹಾಲಯ ಮಾಡಬಹುದು. ಅದು ಬೆಳೆಯತ್ತ

ನಡೆದರೆ ನನಗೆ ಬಹಳ ಲಾಭವುಂಟು. ಮೊದಲನೆಯದಾಗಿ—ಲಕ್ಷ್ಮಿ ಚಂಚಲ ಳೆಂಬ ದುಪ್ರತೀತಿಯನ್ನು ಅದು ಕಳೆದುಹಾಕುತ್ತದೆ. ನನ್ನ ಕೈಯಲ್ಲಿ ದುಡ್ಡು ನಿಲ್ಲುವುದಿಲ್ಲವೆಂದು ಹೇಳಿದ ಭವಿಷ್ಯವಾದಿಯನ್ನು ಮಣ್ಣು ಮುಕ್ಕಿಸಿದಂತಾಗುತ್ತದೆ. ಹಳೆಯ ನಾಣ್ಯಗಳಿಂದ ಹೊರಡುವ ಬರಡು ಇತಿಹಾಸಕ್ಕಿಂತ ನನ್ನ ಈ ನಾಣ್ಯ ಹೇಳುವ ಆತ್ಮಚರಿತ್ರೆ ಹೃದಯಸ್ಪರ್ಶಿಯಾಗಿದೆ. ಸವಕಳಿ ನಾಣ್ಯಗಳನ್ನು ಕಂಡಾಗಲಂತೂ ನನ್ನ ಕರುಳು ಕರಗಿ ಹೋಗುತ್ತದೆ ತಮ್ಮ ಗತ ವೈಭವವನ್ನೂ, ನಷ್ಟವಾದ ಜನಪ್ರಿಯತೆಯನ್ನೂ ನೆನಸಿಕೊಂಡು ಅವು ಮೂಕವಾಗಿ ರೋದಿಸುತ್ತಿರುವವು. ಮುಖ ನೋಡಿ ಬೆಲೆಕಟ್ಟುವ ಮನುಷ್ಯರು ಅವುಗಳನ್ನು ಒಂದು ಕಾಲಕ್ಕೆ ಎತ್ತಿ ಆಡಿಸಿ, ವೀಣೆಯಂತೆ, ಕೂಸಿನಂತೆ ಕೈಯಿಂದ ಕೈಗೆ ಕೊಟ್ಟು, ತೆಗೆದುಕೊಂಡು ಮುದ್ದಿಸಿದ್ದರು. ಕೊನೆಗೊಮ್ಮೆ ಅವುಗಳನ್ನು ಕಂಡು ಮೂಗು ಮುರಿಯತೊಡಗಿದರು. ಮೈ-ಮುಖ ಸುಂದರವಾಗಿರುವವರೆಗೆ ಒಂದು ತೆರ, ಹಾಗಿಲ್ಲದಾಗ ಇನ್ನೊಂದು ತೆರ-ಮಾನವರ ಈ ಅಸ್ಥಿರ ಬುದ್ಧಿಯನ್ನೂ ಕೃತಘ್ನತೆಯನ್ನೂ ಕಂಡು ಸವಕಳಿ ನಾಣ್ಯಗಳು ಶಪಿಸುತ್ತಿರಲಿಕ್ಕಿಲ್ಲವೆ? ಅವುಗಳ ಮುಖಭಂಗ ಮಾಡಿದವರು, ವಿದ್ರೂಪಗೊಳಿಸಿದವರು ಇವರೆ ಅಲ್ಲದೆ ಇನ್ನಾರು? ಇವರ ಕೈಯಲ್ಲಿಯೆ, ಇವರ ಪ್ರೀತಿಗಾಗಿಯೆ ಅವು ಸವೆದುವು. ತಾವು ತೊರೆದುದೊಂದೆ ಅಲ್ಲದೆ, ನಾಣ್ಯಗಳ ಜಗತ್ತಿನಿಂದಲೂ ಈ ದುರ್ದೈವಿಗಳನ್ನು ಬಹಿಷ್ಕರಿಸಿದ ಜನರು ಎಂತಹ ನೀಚರು! ಸಾಮಾಜಿಕ ಪ್ರಜ್ಞೆಯಿಂದಲೊ, ಬಂಧುಪ್ರೇಮದಿಂದಲೊ ಇಂತಹದೊಂದು ಪರದೇಶಿ ನಾಣ್ಯ ಇತರ ನಾಣ್ಯಗಳೊಡನೆ ಬೆರೆತುಕೊಂಡರೆ ಅದನ್ನು ಈ ಮನುಷ್ಯರು ಸಹಿಸಲಾರರು. ಹದ್ದಿನ ಕಣ್ಣಿಂದ ನೋಡಿ, ಅದನ್ನು ಹೆಕ್ಕಿ ಕುಕ್ಕಿ ತೆಗೆದು, ಆಚೆಗೆ ಬಿಸುಡುತ್ತಾರೆ. "ಬಿಸುಡದಿರು ಬಿಸುಡದಿರು ಹಸುಳೆ ನೊಂದಹ"ನೆಂದು ಆ ಇನ್ನೊಬ್ಬ ಒಡೆಯನು ಹೇಳುವುದಿಲ್ಲ. ತಪ್ಪುಗಾರನಂತೆ ಕ್ಷಮೆ ಕೇಳಿಕೊಂಡು ಈ ಬಹಿಷ್ಕೃತ ನಾಣ್ಯವನ್ನು ಬೇರೊಂದು ಕಗ್ಗತ್ತಲೆಯಲ್ಲಿ ಭದ್ರವಾಗಿ ಸೆರೆಯಿಡುತ್ತಾನೆ. ಅನಂತ ಅಪರಾಧವನ್ನು ತಮ್ಮಲ್ಲಿ ಇಟ್ಟುಕೊಂಡವರು, ಬಿನ್ನಹಕ್ಕೆ ಬಾಯಿಯಿಲ್ಲದ ಈ ಜೀವಗಳನ್ನು ಹೀಗೆ ನಡೆಸಿಕೊಳ್ಳುವುದು ನ್ಯಾಯವೆ? ಮನುಷ್ಯನ ನಡೆವಳಿಕೆಯನ್ನು ನೋಡಿ ಈ ನಾಣ್ಯಗಳು ಒಮ್ಮೊಮ್ಮೆ ನಗುತ್ತಿರಬೇಕು. ತಮ್ಮನ್ನು ಕಂಡ ಕೂಡಲೆ ಇವನು

ಎಷ್ಟು ಬೆಚ್ಚಿ ಬೀಳುತ್ತಾನೆ! ತನ್ನವರ ಹೆಣವನ್ನು ಕಂಡಾಗಲೂ ಹಾಗೆಯೆ ಇವನ ವರ್ತನೆ. ಇಸಪೇಟು ಜಾಕಿಯನ್ನು ಸಾಗಿಸಿದಂತೆ ಈ ನಾಣ್ಯಗಳನ್ನು ಇನ್ನೊಬ್ಬರಿಗೆ ದಾಟಿಸುವುದೆ ಇವನ ಆದ್ಯ ಕರ್ತವ್ಯವಾಗುತ್ತದೆ. ಬೆಳೆದು ನಿಂತ ಮಗಳು ಮನೆಯಲ್ಲಿ ಉಳಿಯಬಾರದು ; ಖೊಟ್ಟಿನಾಣ್ಯ ಕೈಯಲ್ಲಿ ಉಳಿಯಬಾರದು. "ಅರ್ಥೋ ಹಿ ಕನ್ಯಾ ಪರಕೀಯ ಏವ" ಎಂದುಕೊಂಡು ಪ್ರತ್ಯರ್ಪಿತನ್ಯಾಸನಾಗುವ ಲವಲವಿಕೆಯಿಂದ ಯಾರಿಗರ್ಪಿಸಲಿದನು ಎಂದು ಜನಸಮ್ಮರ್ದದಲ್ಲಿ ನುಗ್ಗುತ್ತಾನೆ. ಈ ನ್ಯಾಸ ನನ್ನದು ಎಂದು ಒಪ್ಪಿಕೊಳ್ಳುವವರು ಯಾರಾದರೂ ದೊರೆತಾರೆಯೆ ?

ಈ ಮಾತುಗಳನ್ನೆಲ್ಲ ನಾಣ್ಯಗಳು ನನಗೆ ಹೇಳುತ್ತಿರುವಾಗ ಅವುಗಳನ್ನು ಕೇಳುತ್ತ ಕುಳಿತಿರುತ್ತೇನೆ. ಆ ನಾಣ್ಯಗಳ ಬಗೆಗಿರುವ ನನ್ನ ಅನುಕಂಪವನ್ನು ನನ್ನ ಮಿತ್ರರೂ ಮನೆಯವರೂ ಮೆಚ್ಚುವುದಿಲ್ಲ. ಈ ಸಂಗ್ರಹದ ಸದ್ವಿನಿಯೋಗ ಮಾಡಲು ಸಕಲರೂ ಸಲಹೆ ನೀಡುತ್ತ ಬಂದಿದ್ದಾರೆ. ನನಗೆ ತಿಳಿಯದಂತೆ ಒಂದೆರಡು ಸಲ ಅವುಗಳನ್ನು ನನ್ನಿಂದ ಅಗಲಿಸುವ ಪ್ರಯತ್ನ ಮಾಡಿ ಹತಾಶರಾದದ್ದೂ ಉಂಟು. ನನ್ನ ಕುಮಾರನೊಬ್ಬ ಅದರಲ್ಲಿಯ ಒಂದು ನಾಣ್ಯವನ್ನು ಎತ್ತಿಕೊಂಡು ಸವಿ ಕೊಳ್ಳಲು ಹೋದ ಚಿನ್ನಾದ ಒಂದು ನಾಣ್ಯವನ್ನು ಅಲ್ಲಿಗೆ ಕಳಿಸಿ, ಆ ಸ್ವಾಮಿ ನಿಷ್ಠ ನಾಣ್ಯ ಸ್ವಸ್ಥಾನಕ್ಕೆ ಸೇರಿತು. ಒಂದು ದುರ್ದೈವಿ ತಾಮ್ರದ ದುಡ್ಡು ಹಾವಿನ ಬಾಯಲ್ಲಿ ಸುಟ್ಟುಕೊಂಡು ಸತ್ತಿತು. ಅದರ ವಿದ್ರೂಪ ಅವಶೇಷದಲ್ಲಿ ಕರಿಯದಾರ ಪವಣಿಸಿ ಕಟ್ಟಿ ಕೊಂಡವರಿಗೆ ವಿಷಬಾಧೆಯಾಗದಂತೆ. ಈ ವಿಷವೈದ್ಯದ ಭಾಗ್ಯ ಮಣಿಯನ್ನು ಯಾವ ಪುಣ್ಯವಂತ ಪಡೆದುಕೊಂಡನೋ ಏನೊ! ನನ್ನ ಮಕ್ಕಳಿಗಂತೂ ಅದು ಸಿಕ್ಕಂತೆ ಕಾಣಲಿಲ್ಲ. ಅನೇಕ ದೇವಾಲಯಗಳ ಹೊಸತಲಿಗೂ ದ್ವಾರಬಂಧಕ್ಕೂ ನಾಣ್ಯಗಳನ್ನು ಮುದ್ರಿಸಿರುವುದು ನನ್ನ ಕಣ್ಣಿಗೆ ಬಿದ್ದಿದೆ. ಭಕ್ತರ ಹಸ್ತಪಾದ ಸ್ಪರ್ಶದಿಂದ ಅವು ನುಣುಪಾಗಿಯೊ, ಅಥವಾ ನುಣುಪಾಗಿದ್ದರಿಂದಲೆ ಆ ಸ್ಥಾನಕ್ಕೆ ಅಲಂಕಾರವಾಗಿ ಬಂದುವೊ ತಿಳಿಯದು. ಹತ್ತು ಕಡೆಗೆ ಹವಣಿಸಿ ಹತಾಶರಾದ ಸವಕಳಿಯ ಸಾಗಾಟಗಾರರು ಬಿಕ್ಕೆ ಬೇಡುವವರಿಗೆ ಅದನ್ನು ಅರ್ಪಿಸುವುದುಂಟು. ಆದರೆ ಈ ದಾನ ಪ್ರತಿಗ್ರಹಣವಾಗದು. ಉಗಿಬಂಡಿಯಲ್ಲೊಬ್ಬ ಕುರುಡ ಭಿಕ್ಷುಕ ತನ್ನ ಥಾಲಿ ಒಡ್ಡಿದಾಗ ಅದರಲ್ಲಿ ಸವಕಳಿ ಆಣೆ ಒಗೆದು, ಸರಿ

ಯಾದ ಮೂರು ದುಡ್ಡು ಎತ್ತಿಕೊಳ್ಳುವ ಚಪಲ ಕೆಲವರಿಗೆ ದುರ್ದಮ್ಯ ವಾಗುತ್ತದೆ. ಆದರೆ ಇದು ದಕ್ಕುವ ಆಟವಲ್ಲ. ಕುರುಡನಿಗೆ ಕೈಯಲ್ಲಿ ಕಣ್ಣುಂಟು. ಅದನ್ನು ಎತ್ತಿ ಹಿಡಿದು ಆತ ಎಲ್ಲರ ಸಮಕ್ಷಮವಾಗಿ ಅನ್ಯಾಯ ಪರಿಮಾರ್ಜನೆಗೆ ಮೊರೆಯಿಡುತ್ತಾನೆ. ಸ್ವಾಮಿಭಕ್ತ ಸವಕಳಿ ಮತ್ತೆ ಮೂಲ ಸ್ಥಾನಕ್ಕೆ ಮರಳುತ್ತದೆ. ಸಿಟ್ಟಿನಿಂದ ಆ ಸ್ವಾಮಿ ಅದನ್ನು ಶಾಂತಸಾಗರದ ಆಳವಾದ ಪಾತಾಳಖಾತಕ್ಕೆ ಎಸೆಯಬೇಕೆಂದು ನಿಶ್ಚಯಿಸುತ್ತಾನೆ. ಅಷ್ಟು ದೂರ ಅವನು ಹೋಗಬೇಕಾಗಿಲ್ಲ. ಸೃಷ್ಟಿಯೂ ಉಗಿಬಂಡಿಯೂ ಕೂಡಿ ಕೊಂಡು ಅವನನ್ನು ನದಿಯ ಮೇಲೆ ಹಾಯಿಸುತ್ತವೆ. ನದಿಯ ನೀರು ಸಮುದ್ರಕ್ಕೆ ಸೇರುವದಷ್ಟೆ. ಆ ನಾಣ್ಯವನ್ನು ಈ ನೀರಿನಲ್ಲಿ ಎಸೆದು ಬಿಟ್ಟರೆ ಎಷ್ಟೊಂದು ಸಾಧಿಸಿದಂತಾಗುತ್ತದೆ! ಬೆನ್ನಟ್ಟಿದ ಬೇತಾಳವೊಂದು ಹೀಗೆ ಕಳೆದುಹೋಗುತ್ತದೆ. ಪೂರ್ವಕರ್ಮದಂತೆ ಕೈಗಂಟಿಕೊಂಡು, ಕಂಡವರ ಮುಂದೆ ಮಾನ ಕಳೆಯಲೂ ಕಾರಣವಾದ ಕುರುಡು ಕಾಂಚಾಣವನ್ನು ಇಲ್ಲಿ ನೀರುಪಾಲು ಮಾಡಿಬಿಟ್ಟರೆ, ಅದರ ಮೇಲೆ ಸೇಡು ತೀರಿಸಿಕೊಂಡ ಆತ್ಮ ಸಂತೃಪ್ತಿಯೂ ಆಗುತ್ತದೆ. ಆನುಷಂಗಿಕವಾಗಿ ಪವಿತ್ರತೀರ್ಥದಲ್ಲಿ ದ್ರವ್ಯ ನೀಡಿದ ಪುಣ್ಯವೂ ಅಷ್ಟು ಪದರಿಗೆ ಬೀಳುತ್ತದೆ. ಬಹಳ ಜನ ಹೀಗೆ ನಂಬಿದ್ದಾರೆ. ನನಗೆ ಮಾತ್ರ ಈ ಪುಣ್ಯ ಪ್ರಾಪ್ತಿಯನ್ನು ಕುರಿತು ಸಂಶಯ ವುಂಟು. ದುಡ್ಡಿಗಷ್ಟು ಪುಣ್ಯವನ್ನು ಮಾರಿಕೊಳ್ಳುವ ಚಿಲ್ಲರೆ ವ್ಯಾಪಾರ ನಮ್ಮ ನದಿಗಳಿಗೆ ಬಹು ಕಾಲದಿಂದ ನಡೆದು ಬಂದ ವೃತ್ತಿ. ಎಂದಮೇಲೆ ಅವುಗಳಿಗೆ ಎಷ್ಟೊಂದು ವ್ಯವಹಾರ ಚಾತುರ್ಯ ಬಂದಿರಬೇಡ! ಈ ಸಾವಿ ರಾರು ವರ್ಷಗಳಲ್ಲಿ ಈ ಜಲದೇವತೆಯ ಉಡಿಯಲ್ಲಿ ಎಷ್ಟು ಸವೆದ, ಸಲ್ಲದ ಖೊಟ್ಟಿ ದುಡ್ಡು ಬಿದ್ದಿರಲಿಕ್ಕಿಲ್ಲ! ಇಂತಹ ಬಿಟ್ಟಿಯ ಭಕ್ತಿಗೆ ಆಕೆ ಏಕೆ ಪುಣ್ಯ ಕಟ್ಟಿಕೊಟ್ಟಾಳು? ಅಲ್ಲದೆ ಆಕೆಯೇನು ಅವಸರದಲ್ಲಿ ವ್ಯಾಪಾರ ಮಾಡಿ ಮುಗಿಸುವ ಕೋರಿ ಸೆಟ್ಟಿಯಲ್ಲ. ದುಡ್ಡು ಚೆಲ್ಲಿದ ಮುಮುಕ್ಷು ಈ ಲೋಕ ಬಿಟ್ಟು ಹೋಗುವ ವರೆಗೆ ಇವನ ಪುಣ್ಯದ ಲೆಕ್ಕವನ್ನು ಆಕೆ ಒಪ್ಪಿಸಬೇಕಾಗಿಲ್ಲ. ಆದರೆ ಪುಣ್ಯಾಕಾಂಕ್ಷಿಯಾದ ದಾನಶೀಲರು ಕಿಟಕಿಗಳಲ್ಲಿ ಕೈಚಾಚಿ, ತಂತಮ್ಮ ಕಾಂಚಾಣಗಳನ್ನು ಕೊಡವಿಕೊಳ್ಳುತ್ತಾರೆ. ಶಾಪಗ್ರಸ್ತ ದೇವತೆಗಳಂತೆ ಖೊಟ್ಟಿ ನಾಣ್ಯಗಳು ಮನವಿಲ್ಲದೆ, ಗತಿಯಿಲ್ಲದೆ, ಸ್ಥಾನಚ್ಯುತವಾಗಿ ಆವರಿಸು

ತ್ತವೆ, "ನಡು ನೀರೊಳು ನನ್ನ ಕೈಬಿಡುವರೇ" ಎಂದು ಕೊರಳ ಸೆರೆ ಬಿಗಿದು ಬಂದು ಬೇಡಿಕೊಳ್ಳುತ್ತಾ, ಮರಮರಳಿ ಹೊರಳಿ ನೋಡುತ್ತಾ, ಅಸಹಾಯರಾಗಿ, ನೀರಿಗೆ ಧುಮುಕುತ್ತವೆ; ಚಿಲ್ ಎಂದು ಎರಡು ಹನಿ ಚಿಮ್ಮಿ, ತೂಗಿ ತೂಗಿ ನಿಧಾನವಾಗಿ ಗಂಗೆಯ ಮಡಿಲಲ್ಲಿ ಮುಖ ಮುಚ್ಚಿಕೊಳ್ಳುತ್ತವೆ. ಜಗತ್ತಿನ ಜನತೆ ನಿಷ್ಕರುಣೆಯಿಂದ ಹೊರದೂಡಿದ ವ್ಯಕ್ತಿಗಳೂ, ವಸ್ತುಗಳೂ ಈ ರೀತಿಯಾಗಿ ಅವಳ ಮಡಿಲಲ್ಲಿ ಸೇರಿ ಶಾಂತರಾಗಿದ್ದುಂಟು. ನೆರೆನಂಬಿ ನಚ್ಚಿದ್ದ ನಿಃಸಹಾಯ ನಾಣ್ಯಗಳನ್ನು ನೀರಿಗೆ ನೂಕಿ ಕೈಮುಗಿಯುವುದು ಯಾವ ಪುಣ್ಯದ ಕೆಲಸವೋ ನಾನು ಕಾಣೆ. ಈ ಹತ್ಯಾಲಾಲಸೆಯನ್ನು ನಾನು ಸಹಿಸಲಾರೆ. ನಾನು ಸಾಕಿದ ಸವಕಳಿಗಳೆ, ನನ್ನ ಕೈಹಿಡಿದ ಖೊಟ್ಟಿಗಳೆ, ನಿಮ್ಮನ್ನು ನಾನು ನೀರು ಪಾಲು ಮಾಡಲಾರೆ. ನೀವು ನಿಶ್ಚಿಂತರಾಗಿ ನನ್ನ ಸಂಗಾತಿಗಳಾಗಿ ಉಳಿಯಿರಿ. ಹರಿಶ್ಚಂದ್ರನಂತೆ ನಿಮ್ಮನ್ನು ಮೆರೆದೊ, ತೊರೆದೊ, ಮಾರಿಯೊ ನಾನು ಹೋಗಲೊಲ್ಲೆ. ಕೈ ಹಿಡಿದವರನ್ನು ಕಾಪಾಡುವುದು ನನ್ನ ಧರ್ಮ.

ಈ ನಾಣ್ಯಗಳನ್ನು ನಾನೇಕೆ ಉಳಿಸಿಕೊಂಡೆ ಎಂಬುದು ನನ್ನ ಮಿತ್ರರಿಗೊಂದು ಸಮಸ್ಯೆಯಾಗಿದೆ. ಯಾರಿಗೂ ದಾಟಿಸಲಾರದೆ ಹೀಗೆ ಉಳಿಸಿರಬೇಕೆಂಬ ದುರೂಹೆಯನ್ನೂ ಅವರು ಮಾಡಿಕೊಂಡಿರಬೇಕು. ನನ್ನ ಸಹಧರ್ಮಿಣಿಯ ವಿನೋದಕ್ಕೆ ಅವು ಸಹಜವಾದ ಸಾಧನಗಳಾಗಿವೆ. ನನ್ನ ವ್ಯವಹಾರ ಜ್ಞಾನವು ಮುಗ್ಗರಿಸಿ ಬಿದ್ದಲ್ಲೆಲ್ಲ, ಒಂದೊಂದು ಸ್ಮಾರಕವನ್ನು ನಿಲ್ಲಿಸಿತೆಂದೂ ಈ ನಾಣ್ಯಗಳೆ ಆ ಸ್ಮಾರಕವೆಂದೂ ಅವಳು ಅಲಂಕಾರವನ್ನು ಮೆರೆಯುತ್ತಾಳೆ. ಕಾವ್ಯದ ಹೆಮ್ಮೆಯೆನಿಸುವ ಈ ಪ್ರತಿಮಾಶಕ್ತಿಯನ್ನು ನಾನು ಗೌರವಿಸುತ್ತೇನೆ. ಆದರೆ ತಾನು ಸೋಲಿಸಲಾಗದ ಬುದ್ಧಿಯನ್ನು ಇನ್ನಾರೊ ಸೋಲಿಸಿದರಲ್ಲ—ಅದೆ ತನ್ನ ಗೆಲುವು ಎಂದು ತೃಪ್ತಿ ಪಡೆದುಕೊಳ್ಳುವ ಆಕೆಯ ಪ್ರವೃತ್ತಿ ಮಾತ್ರ ನನ್ನ ಮನದ ಕೊನೆಯ ಮೊನೆಗೆ ತಾಕಿ ನಸುವೆ ನೋಯಿಸುತ್ತದೆ. ಈ ಆಂತರ್ಯದ ದುಷ್ಟ ಸಂತೋಷದಿಂದಲೆ ನನ್ನ ನಾಣ್ಯ ಸಂಗ್ರಹದ ರಕ್ಷಣೆಯಲ್ಲಿ ಆಕೆ ಸಹಕರಿಸಿದ್ದಾಳು. ಏನೂ ಚಿಂತೆಯಿಲ್ಲ. ಖೊಟ್ಟಿ ನಾಣ್ಯದಿಂದ ಇಷ್ಟು ಸಂತೋಷ ಸಿಗುವುದಾದರೆ, ಅವುಗಳನ್ನು ನಾನೇಕೆ ಗಳಿಸಬಾರದು ? ಹೊಸದೊಂದು ನಡೆಯದ ನಾಣ್ಯ ಕಂಡಾಗಲೆಲ್ಲ ಆಕೆಯ ಹೃದಯ

ಹಿಗ್ಗುತ್ತದೆ. ಅವಳ ಮನದಲ್ಲಿಯೂ ಕೆಲವು ಇಂತಹ ನಾಣ್ಯಗಳುಂಟು. ಅವುಗಳನ್ನು ನನ್ನ ಕೈಗೆ ದಾಟಿಸಿ, ನಡೆಯುವ ನಾಣ್ಯ ಪಡೆಯುವಕಾಲ ಬೇಗ ಬೇಗ ಬರುತ್ತಿದೆಯೆಂಬ ಭರವಸೆ ಆಕೆಗೆ ಉಂಟಾಗುತ್ತದೆ. ಏನೆ ಇರಲಿ. ಅವಳಿಂದ ನನ್ನ ನಾಣ್ಯಗಳಿಗೆ ಭಯವಿಲ್ಲ. ಭಯೋತ್ಪಾದಕನು ನನ್ನ ಕುಮಾರ. ಅವನನ್ನು ಕಂಡಕೂಡಲೆ ನನ್ನ ನಾಣ್ಯ ಗಡಗುಟ್ಟ ನಡಗುತ್ತದೆ. ತಂದೆಯ ತಲೆಯ ಬಗೆಗೆ ಅವನಿಗೆ ಈಗಾಗಲೆ ಪ್ರಬಲವಾದ ಶಂಕೆ ಹುಟ್ಟಿರಬೇಕು. ತನ್ನ ಯಾವ ಪ್ರಯೋಗಕ್ಕೂ ಅವನಿಗೆ ಈ ನಾಣ್ಯಗಳೆ ಯೋಗ್ಯ ಸಾಮಗ್ರಿಯಾಗಿ ಕಾಣುತ್ತಲಿವೆ. ಅದರಲ್ಲಿಯ ಒಂದು ರೂಪಾಯಿ ತನ್ನ ತಕಲಿಗೆ ತಕ್ಕುದೆಂದು ಅವನು ನಿರ್ಣಯಿಸಿದ್ದಾನೆ. ಮೂಲೋದ್ಯೋಗ ಶಾಲೆಯಲ್ಲಿ ಅವನಿಗೊಂದು ತಕಲಿಯುಂಟು. ಆದರೆ ಗೃಹಪಾಠಕ್ಕೆ ತನ್ನದೊಂದು ಸ್ವನಿರ್ಮಿತ ಸಾಧನ ಅವನಿಗೆ ಬೇಕು. ಸ್ವಂತ ಸಿದ್ಧಿಯ ಯಂತ್ರ, ಅದಕ್ಕಿಂತಲೂ ಅದನ್ನು ಸಿದ್ಧ ಪಡಿಸುವ ಶ್ರಮ ಅವನಿಗೆ ಅತಿಶಯವಾದ ಆನಂದವನ್ನು ಕೊಡುತ್ತದೆ. ಮಗನ ಮೇಲಿನ ಮಾಯೆ ಮತ್ತು ಮಾನಸಶಾಸ್ತ್ರ ಎರಡೂ ಕೂಡಿಕೊಂಡು ನನ್ನ ನಾಣ್ಯವನ್ನು ಕೊಲೆಗೆ ಒಪ್ಪಿಸುತ್ತವೆ. "ಕೊಲ್ಲಿರೀ ಮಗುವನ್ನು" ಎಂದು ಹಾಡುವುದು ನನ್ನಿಂದ ಸಾಧ್ಯವಿಲ್ಲ, ನಾನು ದೂರ ಎದ್ದು ಹೋಗಿಬಿಡುತ್ತೇನೆ. ನಾನು ತಿರುಗಿ ಬಂದಾಗ, ಅಕೊ! ನನ್ನ ಕುವರನ ಕೊಲೆಗಡುಕ ಕೈ ಆ ದುರ್ದೈವಿ ನಾಣ್ಯದ ಗಂಟಲಿಗೆ ಮೊಳೆ ಹೊಡೆಯಲು ಉದ್ಯುಕ್ತವಾಗಿದೆ. ಮೊಳೆ ಎಲ್ಲಿಡಬೇಕೆಂಬುದನ್ನು ತೋರಿಸಲು ಅವನ ತಾಯಿ ಅಲ್ಲಿ ನಿಂತಿದ್ದಾಳೆ. ಮುಖ ದಲ್ಲಿ ಹೇಗೆ ತೂತು ಕೊರೆಯಬೇಕೆಂಬುದನ್ನು ಹೆಣ್ಣಲ್ಲದೆ ಇನ್ನಾರು ಹೇಳಬೇಕು? ಅದರಲ್ಲಿ ಆಸ್ಥೆ ವಹಿಸಲು ಆಕೆಗೆ ಇನ್ನೊಂದು ಪ್ರಬಲತಮವಾದ ಕಾರಣವಿದೆ. ಆ ರೂಪಾಯಿ ನನಗೆ ಬಂದುದು ವರದಕ್ಷಿಣೆಯಲ್ಲಿ. ಈ ಮಾತು ನಿಜವಲ್ಲ ವೆಂದು ವಾದಿಸುತ್ತಾ ಬಂದಿದ್ದರೂ ಆಕೆಗೆ ಒಳಗಿಂದೊಳಗೆ ಆ ನಾಣ್ಯದ ಮೇಲೆ ಅಮೇಯವಾದ ದ್ವೇಷ ಆರದೆ ಉರಿಯುತ್ತಲೆ ಬಂದಿದೆ. ಈ ಸುದಿನದ ಸೇಡು ಇಂದು ತೀರಿಹೋಯಿತು. ತಕಲಿಗೊಂದು ದಿಂಡು ಮಾಡಲು ಅವರಿಬ್ಬರೂ ಕೂಡಿಕೊಂಡು ನನ್ನ ಹಳೆಯ ಕೊಡೆಯ ಹೆಣವೊಂದನ್ನು ಎಳೆದು ತರುತ್ತಾರೆ. ಅದಕ್ಕೊಂದು ಹೊಸ ಚರ್ಮ ಹೊದಿಸಿ, ಅಸ್ಥಿಸಂಧಾನ ಮಾಡಿ ಪುನರ್ಜನ್ಮ

ಕೊಡಿಸುವ ವಿಚಾರವಿತ್ತು. ಆದರೆ ಇವರ ಉತ್ಸಾಹದ ಮಹಾಪೂರಕ್ಕೆ ಪ್ರತೀಪಗಾಮಿಯಾಗುವ ಉಕ್ಕು ನನ್ನಲ್ಲಿ ಉಳಿದಿಲ್ಲ. ಈ ಕೊಲೆಯ ರುದ್ರ ಭಯ, ಅಸಹಾಯ ದುಃಖ. ನನ್ನನ್ನು ನಿರ್ವಿಣ್ಣಗೊಳಿಸಿವೆ. ನಾನು ನೋಡಲಾರೆ. ಶಿಥಿಲೀ ಭೂತಾಂಗದ ಆ ವೃದ್ಧಾತಪತ್ರದ ಅಸ್ಥಿಪಂಜರದಲ್ಲಿ ಬೆದಕಿ, ಅದರ ನಿಟ್ಟೆಲುವೊಂದನ್ನು ಕಿತ್ತರು. ಅದರಿಂದ ಅವರೊಂದು ನೂಲು ಹಿಡಿದ ಅಸ್ತ್ರ ಮಾಡಿದರು. ದಧೀಚಿಯ ವಂಶಕ್ಕೆ ನನ್ನ ಕೊಡೆ ಸೇರಿಹೋಯಿತು.

ಹೀಗೆಯೆ ಸಾಗಿದ ಪಕ್ಷದಲ್ಲಿ ಈ ನನ್ನ ಉತ್ತರಾಧಿಕಾರಿ ನಾನಿರುವಾಗಲೆ ನನ್ನ ನಾಣ್ಯ ಸಂಗ್ರಹವನ್ನು ಕರಗಿಸಿಬಿಡುವನೆಂಬಲ್ಲಿ ಸಂಶಯವಿಲ್ಲ. ಹಾಗಾದರೆ ಸವಕಳಿ ಸಂಪಾದನೆಯಲ್ಲಿ ನಾನು ಇನ್ನಷ್ಟು ಮನಸ್ಸು ಹಾಕಬೇಕೆಂದಾಯಿತು. ನಿರುಪಯೋಗಿಯೆನಿಸಿದ ವಸ್ತುವಿಗೂ ಒಂದು ಉಪಯೋಗ ಕಲ್ಪಿಸಿಕೊಡುವವರು ಇದ್ದಮೇಲೆ ನಾನೇಕೆ ಹಿಂದೆಮುಂದೆ ನೋಡಬೇಕು ? ಆದರೆ ಹಾಗೆಂದು 'ಸವಕಳಿ, ಸೊಟ್ಟ, ಖೊಟ್ಟ ಕುರುಡು ನಾಣ್ಯ ಬೇಕಾಗಿವೆ' ಎಂದು ಪ್ರಕಟನೆ ಕೊಡಲು ನಾನು ಮನಸ್ಸು ಮಾಡಲಾರೆ. ಬೇಡಿ ಪಡೆಯುವಲ್ಲಿ ಏನೂ ಸುಖವಿಲ್ಲ. ನಿರೀಕ್ಷೆಯಂತೆ ನಡೆದು ಬಂದರೆ, ಅದಕ್ಕೂ ಅಷ್ಟು ಸ್ವಾಗತವಿಲ್ಲ. ಅದೃಷ್ಟದಿಂದ, ಅ-ದೃಷ್ಟವಾಗಿ ಕೈಸೇರಿದಾಗಲೆ ಅದು ಸೊಗಸು. ಮಾತು ಮಿಂಚಿ ಹೋದ ಮೇಲೆ ಮರುಗು ಹುಟ್ಟಿಸಬೇಕು ; ಮತ್ತೆ ಮನಸ್ಸು ಮೆದುವಾಗಿ ಮರುಗು ಮಮತೆಯಾಗಬೇಕು. ಅದರ ಹದ ಅದರದೆ. ಖೊಟ್ಟ ನಾಣ್ಯ ಕೊಟ್ಟವನಿಗೆ ಸುಖವಾಗಬೇಕಾದರೆ ಅದು ದಕ್ಕಬೇಕು. ಪಡೆದವನಿಗೆ ಸುಖವಾಗಬೇಕಾದರೆ ಅವನಿಗೆ ಅದೂ ಅಂತಹದೊಂದು ಅನಿರೀಕ್ಷಿತ ಫಲವಾಗಬೇಕು. ಬಯಸಿದುದು ಬಂದಾಗ ಆಗತಕ್ಕ ಆನಂದಕ್ಕಿಂತ, ಬೇಡದುದು ಬಂದು ಕುಳಿತಾಗ ಆಗುವ ಉದ್ವೇಗ ಹೆಚ್ಚಿನದು. ಚೊಕ್ಕ ನಾಣ್ಯ ಬರಿನಾಣ್ಯ. ಬಹಳವಾದರೆ ಅದು ತಾನು ಕೊಳ್ಳಬಹುದಾದ ವಸ್ತುವನ್ನೊ ಸಲ್ಲಿಸುವ ಸುಖದ ಕಲ್ಪನೆಯನ್ನೊ ಕುದುರಿಸೀತು. ಖೊಟ್ಟನಾಣ್ಯದ ಕಥೆಯೆ ಬೇರೆ. ನಡೆವ ನಾಣ್ಯ ಮುಂದೆ ಕೈಮಾಡಿ ವರ್ತಮಾನ ಭವಿಷ್ಯತ್ತುಗಳ ಬಣ್ಣ ಬಣ್ಣದ ನೇಯ್ಗೆಯನ್ನು ತೋರುತ್ತಿದ್ದರೆ, ಖೊಟ್ಟನಾಣ್ಯ ನಮ್ಮನ್ನು ಹಿಂದೆ ಕರೆದುಕೊಂಡು ಹೋಗಿ ಕಥೆ ಹೇಳುತ್ತ ಕೂಡುತ್ತದೆ. ಹಣ್ಣಾದ ಮುದುಕನಂತೆ ಅದಕ್ಕೂ ಭವಿಷ್ಯವಿಲ್ಲ. ಹಳೆಯ ಕಥೆಯ ರಮ್ಯತೆಯಲ್ಲಿ ಜಗತ್ತಿನ ರೀತಿನೀತಿ

ಯನ್ನು ಖಂಡಿಸುವಲ್ಲಿ, ತನ್ನ ಏರಿಕೆಯ ದಿನಗಳನ್ನು ಬಣ್ಣಿಸುವಲ್ಲಿ ಅದಕ್ಕೆ ಆಸ್ಥೆ ಹೆಚ್ಚು. ಒಳ್ಳೆಯ ನಾಣ್ಯ ಓಡಿಹೋಗಲು ಯಾವಾಗಲೂ ತವಕಿಸುತ್ತಿದ್ದರೆ, ಒಳ್ಳೆಯತನವನ್ನು ಕಳೆದುಕೊಂಡ ಇಲ್ಲವೆ ಪಡೆಯದೆ ಬಂದ ನತದೃಷ್ಟ ನಾಣ್ಯ ಜಿಗುಳೆಯಂತೆ ಕಂಡವರ ಕೈಹಿಡಿದು ಜಿಗಿ ಬೀಳುತ್ತದೆ. ಅದರಲ್ಲಿರುವ ಒಂದು ಒಳ್ಳೆಯ ಗುಣವೆಂದರೆ ಅದು ನಮ್ಮನ್ನು ಚಿಂತನೆಗೆ ತೊಡಗಿಸುವುದು. ಅದು ನಮಗೆ ಎಚ್ಚರಿಕೆ ಕೊಡುವುದು. ಅಹಂಕಾರವನ್ನು ತಗ್ಗಿಸಿ, ನಮ್ಮ ಸೋಲನ್ನು ನಾವು ಒಪ್ಪಿಕೊಳ್ಳುವುದಕ್ಕೂ, ನಮ್ಮನ್ನು ಕಂಡು ನಾವೇ ನಗುವದಕ್ಕೂ ನಮಗೆ ಕಲಿಸಿಕೊಡುವುದು. ಇದೇನು ಸಣ್ಣ ಮಾತಲ್ಲ.

ಹಲ್ಲು !

ಡಾ॥ ಹೆಚ್. ಕೆ. ರಂಗನಾಥ್

ಹಲ್ಲಿಲ್ಲದವನೇಂ ಗಡ ಮಲ್ಲನೇ ? ಸುಡು ಸುಡು
ಸೊಲ್ಲಿಲ್ಲದಾತಂಗೆ, ಆಹ ಕಲ್ಲು ಬೀರೆಂದನಾ ವಿದುರ.

ನನಗೆ ಮಾತು ಬಂದ ಹೊಸದರಲ್ಲಿ ಮುದ್ದಿಟ್ಟು, ಬೆಲ್ಲ ಕೊಟ್ಟು ಮಾತ ನಾಡಿಸಿದವರಿಗೂ ಕೊನೆಕೊನೆಗೆ ನಮ್ಮ ಮಾತುಗಳು ಬಳಕೆಯಾಗುತ್ತ ಬಂದ ಹಾಗೆ ಬೇಸರವೇರುವುದನ್ನು ಕಂಡಿದ್ದೇನೆ. ಅದೂ ಹಲ್ಲು ಬಂದ ಮೇಲೆ ಮಾತನ್ನೇ ಆಡಬಾರದೋ ಏನೋ. ನನಗೆ ಜ್ಞಾಪಕವಿದೆ–ನಾನು ಚಿಕ್ಕವ ನಿದ್ದಾಗ ನಮ್ಮ ತಂದೆ, ಮನೆಗೆ ಯಾರಾದರೂ ಬಂದಾಗ ಅವರೆದುರಿಗೆ ನಿಲ್ಲಿಸಿ "ಎಲ್ಲಪ್ಪ, ಚೈತ್ರ – ವೈಶಾಖ ಹೇಳಿಬಿಡು – ಅವರು ಕೇಳಲಿ – ನೀನೇ ವಾಸಿ ಅವರಿಗೇನೂ ಬರುವುದೇ ಇಲ್ಲ–ಎಲ್ಲಿ–ಹೇಳು" ಎಂದು ಬೆಣ್ಣೆ ಹಚ್ಚುತ್ತಿದ್ದವರು ನನಗೆ ಮಾತನಾಡಲು ಸರಿಯಾಗಿ ಬಂದು, ನಾನೇ ಆಡಲು ಪ್ರಾರಂಭಿಸಿದಾಗ "ಮಾತಾಡಿದರೆ ಹಲ್ಲುದುರಿಸಿಬಿಡುತ್ತೇನೆ–ನೋಡು-ಕತ್ತೆ" ಎಂದು ಸಿಟ್ಟಾಗಿ ಅಟ್ಟಿಕೊಳ್ಳುತ್ತಿದ್ದರು. ಹುಳುಕಾದ ನನ್ನ ಎರಡು ಹಲ್ಲುಗಳನ್ನು ಉದುರಿಸಿ ಮಿಕ್ಕವನ್ನು ಉಳಿಸಿ ಇಡುವರೆಂಬ ಭರವಸೆ ಬಾರದಿದ್ದುದರಿಂದ ನಾನು ಬಾಯಿ ಮುಚ್ಚಲೇಬೇಕಾಗಿತ್ತು. ಅಂತೂ, ಹಲ್ಲಿನ ಮೇಲೆ ಎಲ್ಲರಿಗೂ ಕಣ್ಣು! 'ಅಹಹ! ಏನು ಹಲ್ಲು ಬಿಟ್ಟೆಯೋ ಪ್ಲಾಟ್‌ಫಾರಂ ಮೇಲೆ ನಿಂತ್ಕೊಂಡು !' 'ಯಾಕೋ, ಹಲ್ಲು ಕಿಸೀತೀಯಾ? ಉತ್ತರ ಹೇಳೋ?' 'ಹಲ್ಲು ಕಚ್ಚಿ ಆಕೆಯ ಮುಂದೆ ನುಗ್ಗಿದ.' 'ರಾಜನು ಕಟಕಟನೆ ಹಲ್ಲು ಕಡಿಯುತ್ತ ಕೆಳಗಿಳಿದು ಬಂದು ಸೈನ್ಯಾಧಿಪತಿಯನ್ನು ಒದ್ದನು. ಹೀಗೆಂಬುದಾಗಿ ನಾವು ಕೇಳಿದ್ದೇವೆ. ಅಂತೆಯೇ ಹಲ್ಲು, ಮಾನವನ ಜ್ಞಾನ, ಅಜ್ಞಾನ, ಮಾನ, ಅವಮಾನ, ಧೈರ್ಯ-ಸ್ಥೈರ್ಯ, ಶುಚಿ-ರುಚಿಗಳ ಬಗ್ಗೆ ಕೈಗನ್ನಡಿ.

ಮಾನವನ ಮುಖದಲ್ಲಿ ಹಲ್ಲಿಗೆ ಖಚಿತವಾದ, ನಿಖರವಾದ ಹೆಚ್ಚಳಿಕೆಯ ಸ್ಥಾನವಿದೆ. ಸ್ತ್ರೀಯರ ಮಹಾಸ್ತ್ರವೆಂದರೆ ಹಲ್ಲೆಂದು ಸ್ವತಃ ಸಿದ್ಧವಾಗಿದೆ.

ಅನೇಕ ಗಂಡಸರ ಹಲ್ಲುಗಳನ್ನು ಕಂಡರೂ ಗಾಬರಿಯಾಗುತ್ತದೆ. ಕೈ ಕುಸಿದಾಗ, ದೇಹ ಜಡವಾದಾಗ, ಹೆಗಲು ಮುರಿದಾಗ,–ಎಲ್ಲೆಲ್ಲಿ ಎಷ್ಟೆಷ್ಟು ನಿಸ್ತೇಜ ನಿತ್ರಾಣವಾದರೂ ಹಲ್ಲು ಸರಿಯಾಗಿದ್ದರೆ ಸಾಕು–ಶತ್ರುವನ್ನು ಹಿಂಸಿಸಿ ಕಾಡ ಬಹುದು. ಈ ಕಾರಣದಿಂದಲೂ, ಹಲ್ಲು ಯೌವನದ ಕುರುಹಾದುದರಿಂದಲೂ ಅನೇಕಾನೇಕ ಮಂದಿ ಮುದುಕರೂ ಹಲ್ಲು ಕಟ್ಟಿಸಿಕೊಂಡು ದವಡೆ ಬೀಸುತ್ತಾ ಹೋಗುತ್ತಿರುತ್ತಾರೆ. ಹಲ್ಲು–ಚೇತನದ ಕುರುಹು ; ಶೌರ್ಯದ ಗುರುತು. ಅದಕ್ಕಾಗಿಯೇ ಪೋಲೀಸಿನವರೂ, ಉಪಾಧ್ಯಾಯರೂ, ಸಾಹೇಬರೂ ತಮ್ಮ ಅಧಿಕಾರವನ್ನು ಚಲಾಯಿಸುವಾಗ 'ಹಲ್ಲುದುರಿಸಿಬಿಡುತ್ತೇನೆ ನೋಡು' ಎಂದು ಹೇಳುವುದು. ಹಲ್ಲೊಂದು ಹೋದರೆ ಹುಲಿಯೂ ಹಲ್ಲಿಯೇ ! (ಅದರೂ ಅದರ ಪಂಜಗಳನ್ನೂ ಬೋಳಿಸಿಬಿಟ್ಟರೆ ಒಳ್ಳೆಯದು). ಹಾವಿನ ಹಲ್ಲನ್ನು ಬೇರೆಯವರಿಂದ ಕೀಳಿಸಿ ಉಳಿದ ದೇಹವನ್ನು ತಮ್ಮ ಹೆಗಲಮೇಲೆ ಹಾಕಿಕೊಂಡು ಹೋಗುವವರನ್ನು ನೋಡಿದ್ದೇವೆ. ಏಕೆ ? ಸ್ವಲ್ಪವೂ ಹೆದರದೆ ಅದರ ಬಾಯೊಳಕ್ಕೆ ಹಂಚಿ ಕಡ್ಡಿ ಇಟ್ಟು ಆಟವಾಡಿಸುತ್ತಾರೆ. ಹೀಗಾಗಿ ಒಬ್ಬಾತನ ಅಥವಾ ಅದಕ್ಕಿಂತ ಒಬ್ಬಾಕೆಯ ಹಲ್ಲು ಕೆಲಸ ಮಾಡುವ 'ಕಂಡೀಷನ್'ನಲ್ಲಿದ್ದರೆ ಆ ವ್ಯಕ್ತಿಯನ್ನು ಎದುರಿಸುವುದು ಸುಲಭಸಾಧ್ಯವಲ್ಲ. ಶೃಂಗಾರ ನಾಟಕ, ಕತೆ, ಕಾದಂಬರಿಗಳಲ್ಲಿ ನೀವು ಓದಿರುವಂತೆ, ಅನೇಕ ಬಾರಿ ನಾಯಕಿ, ಖಳನಾಯಕನ ಕೈ ಕಚ್ಚಿ – ಆತ ಹದಿನಾಲ್ಕು ಇಂಜಕ್ಷನ್ ತೆಗೆದುಕೊಳ್ಳುವುದರೊಳಗಾಗಿ, ಕಳ್ಳತನದಿಂದ ಕಾದಿರುವ ನಾಯಕನೊಡನೆ ಓಡಿಹೋಗಿರುತ್ತಾಳೆ.

ರಕ್ಷಣೋಪಾಯವಾಗಿರುವಂತೆಯೇ, ಸಾಧಾರಣವಾಗಿ ಹಲ್ಲು ಮುಖ ಸೌಂದರ್ಯವನ್ನು ಹಿಗ್ಗಿಸಲೂ, ಕುಗ್ಗಿಸಲೂ ಮುಖ್ಯ ಕಾರಣವಾಗಿದೆ. ಕವಿಗಳು ಕಣ್ಣು, ಕೆನ್ನೆ, ಮೂಗು, ತುಟಿಗಳನ್ನು – ಕಮಲ, ಕನ್ನಡಿ, ಸಂಪಿಗೆ, ತೊಂಡೆ, ಹಣ್ಣುಗಳಿಗೆ ಹೋಲಿಸಿದಮೇಲೆ ಲೇಖನಿಯನ್ನು ಹಲ್ಲಿನೆಡೆಗೆ ಹರಿಯಬಿಡುತ್ತಾರೆ. 'ದಾಳಿಂಬೆಯ ಕಾಳಿನಂತೆ', 'ರಸ್ತೆಯ ಸಾಲುದೀಪಗಳಂತೆ' ಎಂದು ಮುಂತಾಗಿ ಹೋಲಿಸಿ ಹಾಸ್ಯಮಾಡಿದ್ದಾರೆ. ಆದರೆ ಈಚಿನ ಕವಿಗಳು ಸುಮ್ಮನೆ 'ಕಟ್ಟಿಸಿಕೊಂಡ ಹಲ್ಲಿನಂತೆ' ಎಂದುಬಿಡುತ್ತಾರೆ. ಕವಿಗಳು ಎಂದೆಂದಿಗೂ ರೆಕ್ಕೆ ಇಲ್ಲದೆ ಆಕಾಶದಲ್ಲಿ ಹಾರಾಡುತ್ತ ಭಾವಮಂದಿರಗಳನ್ನು ಕಟ್ಟಿ ಅಬದ್ಧಗಳನ್ನು ಜೋಡಿಸುವುದರಲ್ಲಿ ನಿಷ್ಣಾತರು. ಅದಕ್ಕೇ ಹಿಂದೊಬ್ಬ ರಾಜ, ಪದ್ಯ

ಬರೆಯುವವರನ್ನೆಲ್ಲಾ ಪಂಜರದಲ್ಲಿಡಿಸಿ ಕಡಲೆಕಾಯಿ ತಿನ್ನಿಸುತ್ತಿದ್ದನೆಂದು ಪ್ರತೀತಿಯಿದೆ. ಈಚೆಗೆ ಕೆಲವು ಕವಿಗಳ ಬರೆಹವನ್ನು ಓದಿದಮೇಲೆ ಆ ರಾಜ ಇಂದಿಗೂ ಇದ್ದಿದ್ದರೆ ಚೆನ್ನಾಗಿತ್ತು ಎನ್ನಿಸುತ್ತದೆ. ಅದಿರಲಿ. ಅಂತೂ ಶುಭ್ರವಾದ ಹಲ್ಲುಗಳು ಸಾಲಾಗಿ ಸಿಪಾಯಿಗಳಂತೆ ಕೂಡಿ ನಿಂತಿದ್ದರೆ ನೋಡಲು ಸಂತೋಷವಾಗುವುದರಲ್ಲಿ ಸಂಶಯವಿಲ್ಲ. ಅದಕ್ಕಾಗಿಯೇ ಹಲ್ಲು ಪುಡಿ ಕಾರ್ಖಾನೆಯ ಮಂದಪ್ಪನವರು 'ಹಲ್ಲುಗಳನ್ನು ಕಾಯ್ದಿಡಿ', 'ಹಲ್ಲೇ ಗುಲ್ಲು', 'ಹಲ್ಲಿಲ್ಲದವನನ್ನು ಕಲ್ಲಿಂದ ಹೊಡೆ' ಎಂಬ ಜಾಹೀರಾತುಗಳನ್ನೂ ಗಾದೆಗಳನ್ನೂ ಪ್ರಚುರಪಡಿಸಿ ಹೆಸರುವಾಸಿಯಾಗಿದ್ದಾರೆ.

ಅವರು ತಮ್ಮ ಹಲ್ಲುಗಳನ್ನೆಲ್ಲಾ ಕುಟ್ಟಿ ಪುಡಿಮಾಡಿ ಪಟ್ಟಣ ಕಟ್ಟಿಸಿ 'ಶ್ರೀ ಮಂದಪ್ಪನವರ ಹಲ್ಲುಪುಡಿಯನ್ನೇ ಉಪಯೋಗಿಸಿ' ಎಂಬುದಾಗಿ ಅರಚಿಸಿ-ಮಾರಿ, ತಾವು ನಾಲ್ಕಂತಸ್ತಿನ ಬಂಗಲೆಯನ್ನೂ ಹೊಸ ಹಲ್ಲನ್ನೂ ಕಟ್ಟಿಸಿ ಕೊಂಡು, ಮೂರು ಕಾರಿನಲ್ಲಿ ಕೂರುತ್ತಿದ್ದಾರೆ.

ಹಲ್ಲುಗಳಲ್ಲಿ ಮುಖ್ಯವಾಗಿ ಹುಬ್ಬುಹಲ್ಲು, ಬಾಚಿಹಲ್ಲು, ಹುಳುಕುಹಲ್ಲು ಹೆಚ್ಚುಹಲ್ಲು-ಇವು ಪ್ರಸಿದ್ಧವಾಗಿವೆ. ಇವುಗಳನ್ನು ಒಂದೊಂದಾಗಿ ಪರಿಶೀಲಿಸುವಾಗ ಉದಾಹರಣೆಗಳನ್ನು ಕೊಟ್ಟುಬಿಟ್ಟರೆ ಸಾಕು.

ಮನೆಯ ಯೋಗಕ್ಷೇಮವನ್ನು ಮೂಲೆಗೊತ್ತರಿಸಿ, ಬೀದಿ ಸುತ್ತುವ ಗಂಡುಬೀರಿಯಂತೆ ಉಬ್ಬುಹಲ್ಲು ಬಾಯಿಂದ ಹೊರಕ್ಕೆ ಹೊರಟುಕೊಂಡು ಮೂಗನ್ನು ಅಣಕಿಸುತ್ತಿರುತ್ತದೆ. ಮೇಲೂ ಕೆಳಗೂ ಉಬ್ಬುಹಲ್ಲು ಸಾಲಿದ್ದರಂತೂ, (ಒಂದೇ ವ್ಯಕ್ತಿಯ) ಎರಡೂ ತುಟಿಗಳು ಸೇರುವ ಸಂಭವವೇ ಇಲ್ಲ. ನಮ್ಮ ರಾಜಕೃಷ್ಣ-ಅಯ್ಯೋ ಪಾಪ, ಈಗ ಮೇಷ್ಟರಾಗಿದ್ದಾನೆ, ಬಿಡಿ-ಅವನು ತನ್ನ ಉಬ್ಬು ಹಲ್ಲಿನಿಂದಾಗಿ ನಮ್ಮ ಹಳ್ಳಿಯಲ್ಲೆಲ್ಲಾ ಅತಿ ಪ್ರಸಿದ್ಧನಾಗಿದ್ದ. ಅವನ ಹಲ್ಲುಗಳು ಬಾಯಬೇಲಿಯನ್ನು ದಾಟಿ ಬಹುದೂರ ಮುಂದೆ ಬಂದಿದ್ದುವು. ಅಮಾವಾಸ್ಯೆಯ ಕತ್ತಲಲ್ಲಿ ಅವನ ಮುಖ ಬೆರೆತು ಮಾಯವಾದರೂ ದೂರದಿಂದಲೇ ಅವನ ಹಲ್ಲುಗಳು ಅವನ ಗುರುತನ್ನು ದೊರಕಿಸಿ ಕೊಡುತ್ತಿದ್ದುವು. ಅವನು ನಮ್ಮೂರಿನಲ್ಲಿ ಹನುಮಂತನ ವೇಷ ಕಟ್ಟಿದಾಗ, ಬೇರೆ ವೇಷಭೂಷಣಗಳೇ ಬೇಕಾಗಲಿಲ್ಲ. ತನ್ನೆರಡು ತುಟಿಗಳನ್ನೂ ಸೆಳೆದು ಸೇರಿಸಿ, ಬಿಗಿದು ಅಗಿದು, ಇತರರು ರಾಮ, ರಾಮ, ಎನ್ನುತ್ತಿದ್ದ ದನಿ

ದಾಟಿಗೆ ತಾಳಕುಟ್ಟುತ್ತಾ ಕುಣಿದಾಡಿ ಕೀರ್ತಿ ಪಡೆದ. ಅಕ್ಷರಮಾಲೆಯ ಪ.ಫ. ಬ.ಭ.ಮ-ಎಂಬ ಅಕ್ಷರಗಳನ್ನು ಕಂಡರೇ ಅವನು ಕೆಂಡಕಾರುತ್ತಿದ್ದ. ಈಗಲೂ ರಾಜಕೃಷ್ಣ ಊರಲ್ಲಿದ್ದಾನೆ. ಬೇಸರವಾದಾಗ ಕಾಲಕಳೆಯಲು, ಹೋಗಿ ನೋಡಿಕೊಂಡು ಬರುತ್ತೇನೆ. ಉಬ್ಬುಹಲ್ಲುಗಳಲ್ಲಿ ಇನ್ನೊಂದು ಜಾತಿಯಿದೆ. ಮೇಲುಸಾಲು ಉಬ್ಬಾಗಿ ಮುಂದೆ ಧಾವಿಸಿದಾಗ, ಕೆಳಸಾಲು ಕುಳ್ಳಾಗಿ ಬಗ್ಗಿ ನಿಂತು ಬಾಯೊಳಕ್ಕೇ ಸುರುಟಿಕೊಂಡಿರುತ್ತದೆ. ಅಂತಹ ಹಲ್ಲನ್ನು ನೋಡಿದಾಗ ಮಾಲೀಕನ ಬಗೆಗೆ ಸಂಕಟವೂ ಕನಿಕರವೂ ಚಿಮ್ಮುತ್ತದೆ.

ವಾಮಣ್ಣನ ಬಾಚಿ ಹಲ್ಲುಗಳು ನಮ್ಮ ಪ್ರಾಂತದಲ್ಲೆಲ್ಲಾ ಹೆಸರುವಾಸಿಯಾಗಿದ್ದವು. ಅವನ ಕಟವಾಯನ್ನು ಸೀಳಿದಂತೆ ಹೊರಟುಕೊಂಡಿದ್ದ ಆ ಎರಡು ಬೃಹದಾಯುಧಗಳು ಅವನ ಮುಖಕ್ಕೆ ಅಪೂರ್ವವಾದ ಕಳೆ ಕೊಟ್ಟಿದ್ದವು. ಅವು ಇರುವವರೆಗೂ ಯಾರೊಬ್ಬರು ವಾಮಣ್ಣನೊಡನೆ ದ್ವೇಷ ಕಟ್ಟಿಕೊಳ್ಳಲಿಲ್ಲ. ನಮ್ಮ ಕನ್ನಡ ಪಂಡಿತರು ಅವನ ಹಲ್ಲುಗಳನ್ನು 'ಜೊತೆ ನೇಗಿಲು' ಎಂದು ಕರೆಯುತ್ತಿದ್ದುದರಿಂದ ಕೊನೆಕೊನೆಗೆ ಅವನು 'ನೇಗಿಲ ವಾಮಣ್ಣ'ನೆಂದೇ ಪ್ರಸಿದ್ಧಿ ಹೊಂದಿದ. ನಾಟಕ ಕಂಪನಿಗಳಿಂದ ರಾಕ್ಷಸರ ಪಾತ್ರಕ್ಕಾಗಿ ಅವನಿಗೆ ಆಹ್ವಾನದ ಮೇಲೆ ಆಹ್ವಾನ! ಅವನು ಒಪ್ಪಿಕೊಳ್ಳಲಿಲ್ಲ. ತನ್ನನ್ನು ನಗೆಗೀಡುಮಾಡಿದ ಆ ಬಾಚಿಗಳಿಂದ ಬಾಯಿಗೆ ಲೇಶಮಾತ್ರವೂ ಪ್ರಯೋಜನವಿರಲಿಲ್ಲ. ಅಂತೂ ಅವುಗಳನ್ನು ಹೊತ್ತುಕೊಂಡೇ ಓದಿ ಅವನ ಬಿ.ಎ. ಆಯಿತು. ಮದುವೆ ನಿಶ್ಚಯದ ದಿನ; ಭಾವೀ ಮಾವನವರು ಮಗಳ ಸರವಾಗಿ ಬೇಡಿಕೊಂಡ ಮೇಲೆ ನೇಗಿಲುಗಳನ್ನು ಕಳಚಲು ಪ್ರಯತ್ನ ಮಾಡಲೇಬೇಕಾಯಿತು. ಇಕ್ಕಳಗಿಕ್ಕಳಗಳ ಆಟ ಅವುಗಳ ಮುಂದೆ ನಡೆಯಲೇ ಇಲ್ಲ. ಕೊನೆಗೊಂದು ದಿನ ವಾಮಣ್ಣನನ್ನು ಕಂಬಕ್ಕೆ ಕಟ್ಟಿ ನಿಲ್ಲಿಸಿ, ಆ ಬಾಚಿಗಳಿಗೆ ಕಂಡಿ ಕೊರೆದು ಬಲವಾಗಿ ತಂತಿ ಕಟ್ಟಿ, ಆ ತಂತಿಯನ್ನು ವಸ್ತಾದ್ ಶಿವಣ್ಣನ ಜೀಪಿಗೆ ಬಿಗಿದರು. ಜೀಪು ಒಂದು ಜರ್ಕ್ ಕೊಟ್ಟು ಅರವತ್ತು ಮೈಲು ವೇಗದಲ್ಲಿ ಧಾವಿಸಿದೊಡನೆ, ವಾಮಣ್ಣನ ಬಾಯೇ ಕಿತ್ತು ಬರುವಂತೆ ತೋರಿತು. ಗಂಟಲಿನಿಂದ ರುದ್ರಧ್ವನಿಯೊಂದು ಆಸ್ಫೋಟವಾಯಿತು. ಕೊನೆಗೆ ತಂತಿ ಸಮೇತ ಎರಡು ಹಲ್ಲುಗಳೂ ಹೊರ ಬಂದೊಡನೆ ಮಾವನವರೂ ಇತರರೂ ಕಣ್ಣುಮುಚ್ಚಿ ಚಪ್ಪಾಳೆ ತಟ್ಟಿದರು. ವಾಮಣ್ಣ ನಿಸ್ತೇಜನಾಗಿ ಜೋತಾಡಿದ.

ಅಂತೂ ಅವನ ಹಲ್ಲುಗಳು ಒಂದೊಂದು ಸುಮಾರು ಐದು ಇಂಚು ಉದ್ದ, ಒಂದೂವರೆ ಇಂಚು ಸುತ್ತಳತೆ ಇದ್ದು ಬುರುಡೆಯವರಿಗೂ ನುಗ್ಗಿ ಆ ಪ್ರದೇಶವನ್ನೆಲ್ಲಾ ಆಕ್ರಮಿಸಿಕೊಂಡುದರಿಂದಲೇ ಅವನ ಮಿದುಳು ಬೆಳೆಯದೆ ಇಪ್ಪತ್ತಾರು ವಯಸ್ಸಾದರೂ ಎಳೆನಿಂಬೆ ಹಾಗೆ ಆಡುತ್ತಿದ್ದನೆಂದೂ ಇನ್ನು ಮುಂದೆ ಪರವಾಗಿಲ್ಲವೆಂದೂ ಡಾಕ್ಟರು ತಿಳಿಸಿ, ವರ್ಷಕ್ಕೆ ಎರಡು ರೂಪಾಯಿನಂತೆ ಐವತ್ತೆರಡು ರೂಪಾಯಿಗಳನ್ನು ಮಾವನವರಿಂದ ಕಿತ್ತುಕೊಂಡರು. ಈಗ ಇನ್ನೂ ಬೆಳೆಯುತ್ತಿರುವ ಅವನ ಹಲ್ಲುಗಳನ್ನು ಹೊಸೂರಿನ ಬಾಗಿಲ ಬಳಿ ಆಚೆ ಈಚೆ ನೆಟ್ಟು ನಿಲ್ಲಿಸಿದ್ದಾರೆ!

ಮಾನವನಿಗೆ ಬರುವ ಆಪತ್ತಿನಲ್ಲೆಲ್ಲ ಹಲ್ಲುನೋವಿಗೆ 'ಉಗ್ರಸ್ಥಾನ'ವಿದೆ. ಹಲ್ಲುನೋವು ಬಂದ ಅನೇಕರು ವಿಶೇಷ ರೀತಿಯ ಅನೇಕ ಚೀತ್ಕಾರ ಸೀತ್ಕಾರಗಳನ್ನು ಮಾಡುತ್ತಾ ಉರುಳಿ ಹೊರಳಿ, ತಲೆಯ ಮೇಲೆ ನಿಂತುಕೊಳ್ಳುತ್ತಾರೆ. ದೊಡ್ಡ ಬ್ಲಾಡರಿನಂತೆ ಊದಿ ಮಿಂಚುತ್ತಿರುವ ಅವರ ಮುಖವನ್ನು ನೋಡಿ ನಗೆ ಉಕ್ಕಿಬಂದರೂ ನಾವದನ್ನು ತಡೆದುಕೊಳ್ಳುವುದು ಒಳ್ಳೆಯದು. ಇಲ್ಲದಿದ್ದರೆ ನಮ್ಮ ದವಡೆಯೇ ಹಾಗೆ ಊದೀತು! ಊದಿರುವ ಗಲ್ಲದ ಮೇಲೆ ಟವಲಿಟ್ಟು, ಅದಕ್ಕೆ ಒಂದು ಕೈಯನ್ನು ಆಸರೆ ಕೊಟ್ಟು, ಹೆಜ್ಜೆ ಹೆಜ್ಜೆಗೂ ಝುಕ್ಕುಝುಕ್ಕನೆ ಉತ್ಕ್ರಮಿಸುವ ಶೂಲೆಗನುಸಾರವಾಗಿ ಮುಖ ವಿವರ್ಣ ಮಾಡುತ್ತಾ ನಡೆಯುವ ದಂತರೋಗಿಯನ್ನು ಕಂಡರೆ ಮರುಕವುಕ್ಕಿ 'ಎಂದಿಗೆ ಇವನ ಹಲ್ಲು ಹೋದೀತು ಎಂದು ಆತುರಪಡುತ್ತೇವೆ. ಹೀಗೆ ಒಂದೊಂದು ಹಲ್ಲಿನ ತಳಪಾಯ ಅಪಾಯಕ್ಕೆ ಈಡಾದರೇ ಇಂತಹ ಭೀಷಣ ಸಂಕಟವಾಗುವಾಗ ಇನ್ನು ನಮ್ಮ ವೆಂಕಟಲಕ್ಷ್ಮಿಯ ಫಜೀತಿಯನ್ನು ಹೇಳಿ ಮುಗಿಸಲು ಸಾಧ್ಯವಿಲ್ಲ. ಬುದ್ಧಿ ಮೊದ್ದಾಗಿರುವವರೆಗೆ ೨೮ ಹಲ್ಲುಗಳೂ ತದನಂತರ ೩೨ ಹಲ್ಲುಗಳೂ ದವಡೆಯಲ್ಲಿರುತ್ತವೆಂದು ಗಾದೆಗಳಿಂದ ತಿಳಿದುಬಂದಿದೆ. 'ನೋಡು; ೩೨ ಹಲ್ಲುಗಳನ್ನೂ ಉದುರಿಸಿ ಕೈಗಿಡುತ್ತೇನೆ' ಎಂಬುದಾಗಿ ಹೇಳುವುದುಂಟು. ಆದರೆ ಬಿಡಿ, ಅದು ಉತ್ಪ್ರೇಕ್ಷಾಲಂಕಾರ. ನನ್ನ ಅನುಭವದಲ್ಲಿ ೩೨ ಹಲ್ಲುಗಳನ್ನೂ ಒಂದೇಟಿಗೇ ಉದುರಿಸುವುದು ಸಾಧ್ಯವಿಲ್ಲ. ಹಾಗೆಯೇ ಜಂಬ ಕೊಚ್ಚಿ, ರೇಗಿದ್ದ ನನ್ನ ಚಿಕ್ಕಪ್ಪನನ್ನು ನಾನು ಗೇಲಿ ಮಾಡಿದಾಗ ಅವನು ರಭಸದಿಂದ ನನ್ನ ದವಡೆಗೆ ಗುರಿಯಿಟ್ಟು ಕೈಬೀಸಿದರು. ಹ್ಹ! ಹ್ಹ! ಆದರೇನು! ನಾನೇ ಪಂದ್ಯದಲ್ಲಿ ಗೆದ್ದ

ವನು ! ಕೇವಲ ಮೂರು ಹಲ್ಲುಗಳು ಆಗಲೇ ಬಿದ್ದುವು. ಮತ್ತೆ, ಅಕ್ಕಪಕ್ಕದ ನಾಲ್ಕು ಹಲ್ಲುಗಳು ಆಗಿನಿಂದ ಅಲುಗಾಡುತ್ತಿವೆ, ಅಷ್ಟೆ ! ಇನ್ನೂ ಬಿದ್ದೇ ಇಲ್ಲ ! ಆದರೆ ನಮ್ಮ ವೆಂಕಟಲಕ್ಷ್ಮಿಗೆ ಯಾರೂ '೩೨ ಹಲ್ಲುಗಳನ್ನು ಉದುರಿಸುತ್ತೇನೆ' ಎಂದು ಹೇಳಲು ಸಾಧ್ಯವಾಗುತ್ತಿರಲಿಲ್ಲ. ಅಥವಾ ಕೇವಲ ೩೨ ಹಲ್ಲುಗಳು ಹೋದರೆ ಅವಳಿಗೆ ಏನೂ ನಷ್ಟವೂ ಆಗುತ್ತಿರಲಿಲ್ಲ. ಏಕೆಂದರೆ, ಅವಳ 'ಅಕ್ಷಯ ಪಾತ್ರೆ'ಯಲ್ಲಿ ಅದೆಷ್ಟು ಹಲ್ಲುಗಳಿವೆ ಎಂಬುದು ಎಣಿಕೆಗೆ ಸಿಗದ ವಿಷಯ. ಅವಳ ಬೃಹದ್ಬಾಯಿಯಲ್ಲಿ ಒಂದರ ಹಿಂದೆ ಒಂದರಂತೆ ಎರಡು ಸಾಲು ಹಲ್ಲುಗಳೂ ಮಧ್ಯೆ ಕಣಿವೆಯಲ್ಲಿ ಅನೇಕ ಚಿಲ್ಲರೆ ಹಲ್ಲುಗಳೂ ಮನೆಮಾಡಿದ್ದುವು. ಆದರೂ ಇಷ್ಟು ಹಲ್ಲುಗಳಿಗೂ ಸಿಕ್ಕಿಕೊಳ್ಳದೆ ಚಕ್ಕರ್ ಹೊಡೆದು ಅವಳ ನಾಲಿಗೆ ಹರಟೆ ಕುಟ್ಟುತ್ತಲೇ ಇತ್ತು. ಆದರೆ ಅಲ್ಲಿನ ಭಾರಕ್ಕೆ ಗಲ್ಲ ಬಾಗಿ ಮುಂದಕ್ಕೆ ಚಾಚಿ ಕೊಂಡಿತ್ತು. ಹೀಗೆಯೇ ಕೆಲವು ಕಾಲ ಕಳೆದ ಮೇಲೆ ಹಲ್ಲು-ಹುಲ್ಲುಗಳಿಗೆ ಸ್ಥಳದ ಒತ್ತಡದ ವಿಷಯವಾಗಿ ಭಿನ್ನಾಭಿಪ್ರಾಯ ಬಂದು ಅಕ್ಷಯ ಪಾತ್ರೆಯಲ್ಲಿ ದೊಡ್ಡ ಆಂದೋಳನವಾಯಿತು. ಒಂದೊಂದು ಹಲ್ಲಿಗೆ ನೋವು ಬಂದರೂ ಸಹಿಸುವುದು ಕಷ್ಟ. ಇನ್ನು ವೆಂಕಟಲಕ್ಷ್ಮಿಯ ಸುಮಾರು ೫೯ ಹಲ್ಲುಗಳೂ ಒಂದಾದಮೇಲೊಂದರಂತೆ– ಕೊನೆಗೆ ಒಟ್ಟಿಗೆ ಕಿರುಗುಟ್ಟಲು ಪ್ರಾರಂಭಿಸಿದರೆ ಕೇಳಬೇಕೆ ? ಆಕೆಯ ಒದ್ದಾಟ ಹೇಳತೀರದು. ನೋವಿನ ಸಿಡಿತಕ್ಕೆ ತಹತಹಿಸಿ ವೆಂಕಟಲಕ್ಷ್ಮಿ ಹೆಂಚಿನ ಮೇಲಿಂದ ಹಾರಿದಳು ; ಸರಸರನೆ ಮನೆಯ ಮುಂದಿನ ತೆಂಗಿನ ಮರ ಹತ್ತಿದಳು ; ಬಚ್ಚಲು ಒಲೆಯಲ್ಲಿ ಕಾಲು ತೂರಿದಳು ; ದೇವರ ಪಟಗಳಿಗೆ ಮೆಣಸಿನ ಪುಡಿ ಎರಚಿದಳು ; ಪಕ್ಕದ ಮನೆ ನಾಯಿಮರಿಗೆ ಗುರಿ ಇಟ್ಟು ಕಲ್ಲು ಹೊಡೆದಳು ; ಮನೆ ಮಕ್ಕಳ ಕಿವಿ ಚಿವುಟಿ ಎಳೆದಳು ; ಮಧ್ಯಾಹ್ನ ಮೂಲೆಯಲ್ಲಿ ಮಲಗಿ ವಿಶ್ರಾಂತಿ ಪಡೆಯುತ್ತಿದ್ದ ಗಂಡ ಶಾಮಯ್ಯನ ಮೀಸೆ ಸುಟ್ಟಳು. ಕೊನೆಗೆ ಅವಳು, ಬೀದಿಯಲ್ಲಿ ಕಬ್ಬು ಮಾರುತ್ತ ಹೋಗುತ್ತಿದ್ದವ ನನ್ನು ಅಟ್ಟಿಸಿಕೊಂಡು ಹೋಗಿ ಮೈಮೇಲೆ ಬಿಸಿನೀರನ್ನು ಸುರಿದ ದಿನ ಅವಳ ಹಲ್ಲುಗಳನ್ನು ಕೀಳಿಸಬೇಕೆಂದು ಸಂಕಲ್ಪವಾಯಿತು. ಡಾಕ್ಟರು ಹಾಸನದ ಇಂಪ್ಲಿಮೆಂಟ್ ಕಾರ್ಖಾನೆಗೆ ಬರೆದು ಆಯುಧಾದಿಗಳನ್ನು ತರಿಸಿ ಕೊಳ್ಳುವ ವರೆಗೆ ವೆಂಕಟುವನ್ನು ಚಿಕ್ಕ ಮನೆಗೆ ಕೂಡಿ ಬೀಗಿದರು. ಕೊನೆಗೆ ಡಾಕ್ಟರು

ಮಹಾಸಾಹಸದಿಂದ ಅಕ್ಷಯಪಾತ್ರೆಯನ್ನು ಬರಿದುಮಾಡಿದರು. ಈಗ ವೆಂಕಟ ಲಕ್ಕು ಹುಷಾರಾಗಿ ಗಲ್ಲ ಎತ್ತಿಕೊಂಡು ತಿರುಗುತ್ತಿದ್ದಾಳೆ.

'ಹಲ್ಲ ಸಾಲದು ಡೊಂಕು, ಬಿದ್ದ ಕಿರಣವು ಡೊಂಕೆ!' ಎಂದು ಹಾಡಿದ ಬೇಂದ್ರೆಯವರು ನಮ್ಮ ಸುಬ್ಬಪ್ಪನ ದಂತವಕ್ರಗಳನ್ನು ಕಂಡಿಲ್ಲವೆಂಬುದು ಖಂಡಿತವೇ. ಅವನ್ನು ನೋಡಿದ್ದರೆ ಅವರೆಂದಿಗೂ ಹಾಗೆ ಬರೆಯುತ್ತಿರಲಿಲ್ಲ. ಅವನ ಹಲ್ಲು ಸಾಲದು ಮಾತ್ರವಲ್ಲ, ಹಲ್ಲುಗಳೇ ಶುದ್ಧ ಡೊಂಕು. ಇನ್ನು ಕಿರಣದ ಪ್ರತಿಬಿಂಬವೆಂದರೆ ತಾಮ್ರದ ಚೊಂಬಿನಂತಿರುವ (ಖಾಲಿ) ಅವನ ಬೋಡು ಬುರುಡೆಯಿಂದಲೇ ಹಲ್ಲಿನ ಸಮಸ್ಯೆ, ಅವನ ಜೀವನವನ್ನೇ ತಲೆಕೆಳಗು ಮಾಡಿ ತಿರುಗಿಸಿಬಿಟ್ಟಿದೆ.

ಸುಬ್ಬಪ್ಪ ಬಾಯಿಬಿಟ್ಟರೆ ಬಣ್ಣಗೇಡೇ! ಚಿಕ್ಕಂದಿನಿಂದ ಅವನ ಮೇಲೆ ಹಲ್ಲಿನ ದುಷ್ಟಪ್ರಭಾವವಿದೆ. ಅವನು ನಕ್ಕುದೂ, 'ಅಪ್ಪ' 'ಅಮ್ಮ' ಎಂದುದೂ, ಅಂಬೆಗಾಲಿಟ್ಟು ಬೆಕ್ಕಿನ ಬಾಲ ಎಳೆದದ್ದೂ, ಅಮ್ಮನ ಮೂಗು ಹಿಂಡಿದುದೂ ಚರಿತ್ರಾರ್ಹವಾದ ಸಂಗತಿಗಳೇ. ಅವನಿಗೆ ಮೊಟ್ಟಮೊದಲು ಎರಡು ಹಲ್ಲುಗಳು ಮೊಳಕೆ ಬಂದಾಗ ಅವನ ತಾಯಿತಂದೆಗಳ ಸಂತಸ ಮೇರೆ ಮೀರಿ ಹರಿಯಿತು. ಅವನ ಬಾಯಿ ಬಿಡಿಸಿ ಮೆರವಣಿಗೆ ಮಾಡಿದರು. ಬಾಳೆಹಣ್ಣು, ಸೀಬೆಹಣ್ಣು ಗಳನ್ನು ಅವನಿಂದ ಅಗಿಸಿ ಕುಣಿದಾಡಿದರು. ಹೀಗೆಲ್ಲ ಅವರು ಮಾಡಿದ ಸಂಭ್ರಮದಿಂದ ಅವನ ಹಲ್ಲುಗಳಿಗೆ ದೃಷ್ಟಿ ತಾಗಿ ಅವು ಆಮೇಲೆ ಜೊತೆಗಾರ ರಾದ ಇತರ ನಾಲ್ಕು ಹಲ್ಲುಗಳೊಡನೆ ಬಣ್ಣ ಬದಲಾಯಿಸಿ ಕಪ್ಪಗಾದವು. ಆರು ತಿಂಗಳೊಳಗೆ ಅವೆಲ್ಲ ಅಸ್ಪಟ ಹುಳುಕುಹಲ್ಲುಗಳೆಂದು ಸಿದ್ಧಾಂತವಾಯಿತು. ಕೊನೆಕೊನೆಗೆ ಅವನು ಬಾಯಿಬಿಟ್ಟರೇ ನೋಡಿದವರಿಗೆ ಸಂಕಟವಾಗಲು ಪ್ರಾರಂಭವಾಯಿತು. ಅವನಿಗೆ ನಾಲ್ಕು ವರ್ಷವಾದಾಗ ದೇವರ ದಯೆಯಿಂದ ಮುಂದಿನೆರಡು ಹಲ್ಲುಗಳು ಕಳಚಿಕೊಂಡವು, ಇನ್ನೂ ಮೂರನ್ನು ಸುಬ್ಬಪ್ಪ ತಾನೇ ಸ್ವಲ್ಪ ಅಲುಗಿಸಿ ನಿರಾಯಾಸವಾಗಿ ಕಿತ್ತು ನಗೆಯಾಡಿದ. ಮತ್ತೊಂದು, ಅವನು ತನ್ನ ತಂಗಿಯನ್ನು ಗುದ್ದಿದಾಗಲೂ, ಇನ್ನೊಂದು ಅವನು ರಭಸದಿಂದ ಮೆಟ್ಟಲಿಳಿದಾಗಲೂ, ಮಗದೊಂದು ಅವನು ಸೀನಿದಾಗಲೂ ಉರುಳಿಕೊಂಡವು. ಅವನ ಬೊಚ್ಚ ಬಾಯಿಯನ್ನು ಬಿಡಿಸಿ ಅವನ ತಾಯಿ ಭತ್ತದ ಕಾಳಿಂದ ವಸಡಿನ ಮೇಲೆ ಗೆರೆ ಕೊರೆದು, ಹಲ್ಲು ಸಾಲಾಗಿ ಹುಟ್ಟಲೆಂದು ದೇವನಲ್ಲಿ

ಪ್ರಾರ್ಥನೆ ಮಾಡಿದರು. ಆದರೆ ದೇವರು ಮೂರು ವರ್ಷ ಕಾಲ ಸುಬ್ಬಪ್ಪನ ಬಾಯನ್ನು ಬರಿದಾಗಿಯೇ ಇಟ್ಟ. ಆದರೂ ಸುಬ್ಬಪ್ಪ ಬೊಚ್ಚಬಾಯಿಗೇ ಬಲವಾಗಿ ಕೆಲಸಕೊಟ್ಟು ವಿಶಾಲವಾಗಿ ಹಬ್ಬಿಕೊಂಡ.

ಸುಬ್ಬಪ್ಪ ಮಿಡ್ಲ್ ಸ್ಕೂಲಿನಲ್ಲಿದ್ದಾಗ ಮೆಡಿಕಲ್ ಇನ್‌ಸ್ಪೆಕ್ಟರು ಅವನ ಬಾಯಿ ಬಿಡಿಸಿ ಅಲ್ಲಿನ ಬ್ರಹ್ಮಾಂಡವನ್ನು ನೋಡಿ ಅಚ್ಚರಿಗೊಂಡು ಬಾಯಿಗೆ ಫ್ಲಡ್ ಲೈಟ್ ಬಿಡಿಸಿ ಅವನ ಬಾಯಿನ-ಅರ್ಥಾತ್-ಹಲ್ಲುಗಳ ಭಾವಚಿತ್ರ ವನ್ನು ತೆಗೆದುಕೊಂಡು ಅನಾರೋಗ್ಯ ಪ್ರದರ್ಶನದಲ್ಲಿಡಿಸಿದರು. ಆಗ ಅವನ ಹಲ್ಲಿನ ಸ್ಥಿತಿ ನಿಜವಾಗಿ ಚಿಂತಾಜನಕವಾಗಿತ್ತು. ಅವನ ಹಲ್ಲುಗಳಿಗೆ ಸಾಲಾಗಿ ನಿಲ್ಲುವ ಅಭೀಷ್ಟವೇ ಇರಲಿಲ್ಲ. ಹಿಂದೊಂದು ಮುಂದೊಂದು-ಎದುರುಬದುರಿಗೆ, ಕೆಳಗೆ ಒಂದರಮೇಲೊಂದರಂತೆ ಮೂರು ಹಲ್ಲುಗಳ ಸವಾರಿ, ಹೀಗೆ ಅತ್ಯಂತ ವಿಚಿತ್ರವೆನಿಸುವ ರೀತಿಯಲ್ಲಿ ಅವು ಜನ್ಮವೆತ್ತಿ ನೆಟ್ಟುಕೊಂಡಿದ್ದುವು. ಇನ್ನು ಆಡಿಪಾಯವೇ ಭದ್ರವಿಲ್ಲ. ಹೀಗಾಗಿ ಸುಬ್ಬಪ್ಪ ಮೂರು ವರ್ಷಕಾಲ ಮಿಡ್ಲ್ ಸ್ಕೂಲಿನಲ್ಲಿ ಬಾಯನ್ನೆ ಬಿಡಲಿಲ್ಲ. ಯಾರೊಡನೆಯೂ ಬಾಯಿ ತೆರೆದು ಮಾತನಾಡಲಿಲ್ಲ.

ಸುಬ್ಬಪ್ಪ ಇಂಟರ್‌ಮೀಡಿಯಟ್ಟನ್ನು ಮೊದಲ ದರ್ಜೆಯಲ್ಲಿ ತೇರ್ಗಡೆ ಯಾಗುವ ಹೊತ್ತಿಗೆ ಅವನ ಬಾಯ ಸ್ಥಿತಿ ವಿಷಮಿಸಿಬಿಟ್ಟಿತ್ತು. ಮುಂಜಿಯ ದಿನ ಪುರೋಹಿತರೂ ಅವನನ್ನು ಕುರಿತು "ಬಾಯಿ ಮುಚ್ಚಿಕೊಂಡು ಮನಸ್ಸಿನಲ್ಲೇ ಮಂತ್ರ ಹೇಳಪ್ಪ, ಸಾಕು" ಎಂದು ಮನವಿಮಾಡಿ ಅವನ ಮನ ನೋಯಿಸಿದ್ದರು. ಅಂದು ತನ್ನನ್ನು ನೋಡ ಬಂದವರೆಲ್ಲರೂ ಮಾತನಾಡಿಸಿ ಬಾಯಿಬಿಡಿಸಿ ತನ್ನ ಹಲ್ಲು ನೋಡಿ ಹಾಸ್ಯಮಾಡಲುಬಂದವರೇ ಎಂದು ಸುಬ್ಬಪ್ಪ ಯೋಚಿಸಿಕೊಂಡ. ಮುಂಜಿಯ ರಾತ್ರಿ ಅದೇ ಯೋಚನೆಯಿಂದ ನಿದ್ರೆ ಹತ್ತಲಿಲ್ಲ. ಬಾಗಿಲು ಭದ್ರಮಾಡಿ ಮೇಜು ದೀಪವನ್ನು ಹಚ್ಚಿದ. ಕನ್ನಡಿಯನ್ನು ಕೈಗೆ ತೆಗೆದುಕೊಂಡು ಕಣ್ಣು ಮುಚ್ಚಿ, ದೀಪಕ್ಕೆ ಬಾಯಿ ನೀಡಿ, ಬಾಯಿಗೆ ಕನ್ನಡಿ ಹಿಡಿದು 'ರಾಮಾ' ಎನ್ನುತ್ತ ಕಣ್ಣು ಬಿಟ್ಟ. ಕಿಠಾರನೆ ಕಿರಿಚಿಕೊಳ್ಳು ವಂತಾಯಿತು. ಅದೆಂತಹ ವಿಚಿತ್ರ ದೃಶ್ಯ ತನ್ನ ಬಾಯಿ ನೀಡುತ್ತಿದ್ದುದು! ಅದೆಷ್ಟು ಬಗೆಯ ಆಕೃತಿಯ, ಎನಿತು ಬಣ್ಣದ, ಎಂತೆಂತಹ ನಿಲುವಿನ ವಿಚಿತ್ರ ಹಲ್ಲುಗಳು!! ಆ ಹಲ್ಲಿನ ಅರಣ್ಯದಲ್ಲಿ ನಾಲಿಗೆ ಸುರುಟಹೋಗಿತ್ತು! ಆ

ಬಾಯ ಬ್ರಹ್ಮಾಂಡವನ್ನು ನೋಡಿದರೆ ಎದೆ ಝುಕ್ಕೆನ್ನುತ್ತಿದ್ದುದು ಸಹಜವೇ! ತನಗೆ ತಿಳಿಯದಂತೆಯೇ ನಾಲ್ಕು ಹನಿಗಳು ಸುಬ್ಬಪ್ಪನ ಕಣ್ಣಿಂದ ಜಾರಿದವು. ಮುಂದೆ ತನ್ನ ಗತಿ ಏನು? ತನಗೆ ಪರೀಕ್ಷೆಯಲ್ಲಿ ಫಸ್ಟ್ ಕ್ಲಾಸುಗಳು ಸುರಿದು ಬಂದರೂ ಪ್ರಯೋಜನವೇನು? ತನ್ನ ಹಳ್ಳಿನಿಂದಾಗಿ ಜೀವನದಲ್ಲಿ ರಮ್ಯತೆ ಯೆಂದಿಗೂ ಬಾರದು. ಒಂದು ವರ್ಷದಿಂದ ತನ್ನ ಸೋದರತ್ತೆಯ ಮಗಳು ಸುಂದರಿಯಾದ 'ಸುಂದರಿ'ಯನ್ನು ಮದುವೆಯಾಗುವ ಮೆಲುಕನ್ನು ಹಾಕು ತಿದ್ದ. ಸೋದರತ್ತೆ ಈ ಬಗ್ಗೆ ತಾನೇ ಮೊದಲು ಮಾತಾಡಿದ್ದರೂ, ಸುಬ್ಬಪ್ಪ ನನ್ನು ನೋಡಿದ ಸುಂದರಿ ಮುನಿಸಿಕೊಂಡು ಮುಖ ಮುದುರಿಕೊಂಡಿದ್ದಳು. ಆ ಛಲಗಾತಿಯನ್ನೇ ಏನಾದರೂ ತಾನು ಮದುವೆಯಾಗಲೇ ಬೇಕು. ಆಕೆ ಯನ್ನು ಮೆಚ್ಚಿಸುವ ದೇಹ, ಮನಸ್ಸಾಧನವೆಲ್ಲ ಇದ್ದರೂ, ಈ ಹಾಳು ಬಾಯೊಂದು ಅದಕ್ಕೆ ಅಡ್ಡವಾಗಿ ನಿಂತಿದೆ! ಈ ಯೋಚನೆಯೆಲ್ಲ ಸುಳಿದು ಸುಬ್ಬಪ್ಪ ಕಪ್ಪಿಟ್ಟುಹೋದ. ಬಿಕ್ಕಿಬಿಕ್ಕಿ ಅಳುತ್ತಾ ಬಾಯಿಮುಚ್ಚಿ ಹಾಸಿಗೆಯ ಮೇಲೆ ಬಿದ್ದ.

ಬೆಳಗ್ಗೆ ಅವನೆದ್ದು ಹೊರಬಂದಾಗ ಅವನ ಮುಖರೂಪವನ್ನು ನೋಡಿ ತಂಗಿ ನೀರಜ ಚೀರಿಕೊಂಡಳು. ತಂದೆ ಗಾಬರಿಯಾದರು. ತಾಯಿ ಡಾಕ್ಟರನ್ನು ಕರೆತರಲು ಅಟ್ಟಿದಳು. ಪುರೋಹಿತರು ಸಂಧ್ಯಾವಂದನೆಯನ್ನು ಪೋಸ್ಟ್ ಪೋನ್ ಮಾಡಿ ಸುಬ್ಬಪ್ಪನ ಬಳಿಯಲ್ಲೇ ಕುಳಿತರು. ನೆಂಟರೆಲ್ಲ ಸುತ್ತುಮುತ್ತ ನೆರೆದು ತಾಮ್ರದ ತಪ್ಪಲೆಯಾದ ಅವನ ಮುಖವನ್ನು ನಿಟ್ಟಿಸಿದರು. ಬಾಯಿ ಮುಚ್ಚಿ ಬುಸುಗುಟ್ಟುತ್ತಾ ಸಂಕಟಪಡುತ್ತಿದ್ದ ಅವನನ್ನು ನೋಡಿ ಎಲ್ಲರೂ ದುಃಖವನ್ನು ಪ್ರಕಟಿಸಿ, ಸರದಿಯಂತೆ ಸಂದಿಯಲ್ಲಿ ಅಡುಗೆ ಮನೆಗೆ ಹೋಗಿ ಉಪ್ಪಿಟ್ಟು ಕಾಫಿ ಬಾರಿಸಿ ಬಂದರು. ಸುಬ್ಬಪ್ಪ ಯಾರಿಗೂ ಯಾವುದಕ್ಕೂ ಉತ್ತರ ಕೊಡಲಿಲ್ಲ ಕಣ್ಣು ತೇಲಿಸುತ್ತಾ ಮಂಕಾಗಿ ಮುದುರಿಕೊಂಡಿದ್ದ. ಡಾಕ್ಟರು ಧಾವಿಸಿ ಎಲ್ಲರನ್ನೂ ಅಟ್ಟಿ ರೂಮಿನಲ್ಲಿ ತಿದಿಯೊತ್ತಿ ಸುಬ್ಬಪ್ಪನ ಬಾಯಿ ಬಿಡಿಸಿ ಬೆರಗಾದರು. 'ಈ ಕೂಡಲೇ ಹಲ್ಲುಗಳನ್ನೆಲ್ಲಾ—ಬಹು ಕಷ್ಟ ವಾದರೂ ಕಿತ್ತುಹಾಕಲೇಬೇಕು' ಎಂದು ಹೇಳಿದರು. ಅವನ ತಂದೆ, ಅವನ ಖಾಲಿ ಬಾಯನ್ನು ಮನಸ್ಸಿನಲ್ಲೇ ಚಿತ್ರಿಸಿಕೊಂಡು, ಚೀರುತ್ತಾ ಸದ್ಯಕ್ಕೆ ಅವನನ್ನು ಬೊಚ್ಚುಬಾಯಿ ಮಾಡಕೂಡದೆಂದು ಬೇಡಿಕೊಂಡರು. "ಹೊಸ

ಸಟ್ಟು ಕಟ್ಟಿಸಿದರಾಯಿತು. ನನ್ನ ತಮ್ಮನೇ ಕಟ್ಟುತ್ತಾನೆ. ದೂರ ಹೋಗ ಬೇಕಿಲ್ಲ" ಎಂದು ಡಾಕ್ಟರರ ವಾದ. ಈ ಮಾತನ್ನು ಕೇಳಿದಾಗ ಸುಬ್ಬಪ್ಪನ ಕಣ್ಣಿನಲ್ಲಿ ಮಿಂಚು ಮೂಡಿತು. ಹೊಸ ಹಲ್ಲಿನಿಂದಾಗಿ ಸುಂದರಿಯೊಡನೆ ಹೊಸ ಜೀವನದ ಚಿತ್ರ ಕಟ್ಟಿ ಸ್ವಲ್ಪ ಗೆಲುವಾದ. ಆದರೆ ತಂದೆ ಹಲ್ಲು ಕೀಳಿಸಲು ಒಪ್ಪಲೇ ಇಲ್ಲ. ಬೇರೆ ಡಾಕ್ಟರರನ್ನು ಕರೆಸಿ ಬಾಯಿಗೆ ಒಂದು ಟನ್ ಮುಲಾಮು ಮೆತ್ತಿಸಿ, ಗಂಟಲಿಗೆ ಒಂದು ಬಾಟಲಿ ಔಷಧಿ ಸುರಿಸಿದರು. ದವಡೆಗೂ ಎದೆಗೂ ಅಂಗಾಲಿಗೂ ಬಿಸಿನೀರ ಶಾಖಕೊಡಿಸಿದರು. ನಾಲ್ಕು ದಿನಗಳಲ್ಲಿ ಪಂಕ್ಚರಾದ ಬ್ಲಾಡರಿನಂತೆ ಮುಖದ ಊದೆಲ್ಲ ಇಳಿದು, ಸುಬ್ಬಪ್ಪ ಮುಂಚಿನಂತೆ ಮಂಕಾದ.

ಹಲ್ಲು ಕೀಳಿಸುವ ಚಿಂತೆ ಸುಬ್ಬಪ್ಪನ ಬೆನ್ನ ಭೇತಾಳವಾಯಿತು. ತಂದೆ ತಾಯಿಯರು ಮಗನ ಬೊಚ್ಚುಬಾಯಿ ಇನ್ನೂ ಅನರ್ಥಕ್ಕೆ ಕಾರಣವಾದೀತೆಂದು ಬಗೆದು ಅದಕ್ಕೊಪ್ಪಲೇ ಇಲ್ಲ. ಯೋಚಿಸಿ ಯೋಚಿಸಿ ಸುಬ್ಬಪ್ಪ ಹಲ್ಲು ಕೀಳಿಸದೆ ಬೇರೆ ಗತಿಯೇ ಇಲ್ಲವೆಂದು ನಿರ್ಧರಿಸಿ ಉಪಾಯ ಹುಡುಕಿದ. ಮನೆಯ ಸಣ್ಣ ಮಕ್ಕಳು ಆಡುತ್ತ ಕುಳಿತಿದ್ದಾಗ ಸರಕ್ಕನೆ ನುಗ್ಗಿ 'ಬೊಂಯ್' ಎಂದು ಕೂಗಿ ಬಾಯಿ ಕಳೆದ. ಅಕ್ಕನ ಮಗಳು ಶಾರದೆಗೆ ಜ್ವರ ಬಂತು. ಬೀದಿಯಲ್ಲಿ ಹೋಗುತ್ತಿದ್ದ ನಾಯಿಯೆದುರು ಮುಖಮಾಡಿ ಗಕ್ಕನೆ ಬಾಯಿ ತೆರೆದ. ಅದು ಹೆದರಿ, ಅಲ್ಲೇ ನಡೆದು ಹೋಗುತ್ತಿದ್ದ ಲಾಯರ್ ನರಸಿಂಹಯ್ಯನವರ ಕಾಲು ಕಚ್ಚಿತು. ಅವರು ಹದಿನಾಲ್ಕು ಇಂಜಕ್ಷನ್ನಿನ ಕಾಸನ್ನು ಸುಬ್ಬಪ್ಪನ ಅಪ್ಪನಿಂದ ಕಸಿದರು. ಬಿ. ಎ. ಕ್ಲಾಸಿನಲ್ಲಿ ಬಾಯಿಬಿಟ್ಟು ಕುಳಿತುಕೊಂಡ. ಪ್ರಿನ್ಸಿಪಾಲ್ ವರೆಗೂ ದೂರು ಹೋಗಿ 'ಹಲ್ಲು ಕೀಳಿಸುವವರೆಗೂ ಕಾಲೇಜಿಗೆ ಸೇರಿಸುವುದಿಲ್ಲ' ವೆಂದು ಬರೆದು ಅವನನ್ನು ಮನೆಗೆ ಕಳುಹಿಸಿದರು. ಆದರೂ ಅಪ್ಪ ಜಗ್ಗಲಿಲ್ಲ.

ಕೊನೆಗೆ ಸುಬ್ಬಪ್ಪ ಒಂದು ದಿನ ತಂದೆಯ ಆಫೀಸಿಗೆ ಹೋಗಿ ಅವರ ಸಾಹೇಬರೆದುರಿಗೆ ನುಗ್ಗಿ ನಿಂತು ಸರಕ್ಕನೆ ಬಾಯಿ ಕಳೆದು ನಿಂತ. ಹೆದರಿದ ಅವರು ಅವನನ್ನು ಯಾರೆಂದು ಕೇಳಿದಾಗ, ತಂದೆಯವರ ಹೆಸರನ್ನು ಹೇಳಿ, ಮಿರಮಿರನೆ ನಾಲಗೆ ತಿರುಗಿಸಿ ಮತ್ತೆ ಬಾಯಿ ಬಿಟ್ಟು ಕೊಂಡು ನಿಂತ. ಸಾಹೇಬರು ಸುಬ್ಬಪ್ಪನ ತಂದೆಯನ್ನು ಕರೆಸಿ ಮರುಕಪಟ್ಟು, 'ಮಗ ಹುಚ್ಚನಾದರೂ ಹಲ್ಲುಗಳನ್ನೇಕೆ ಕೀಳಿಸದೆ ಬಿಟ್ಟಿದ್ದೀರಿ? ಮೊದಲು

ಕೀಳಿಸಿ' ಎಂದು ಅಪ್ಪಣೆ ಮಾಡಿದರು. ಹೌಹಾರಿದ ಸುಬ್ಬಪ್ಪನ ತಂದೆ, ಇನ್‌ಕ್ರಿಮೆಂಟನ್ನು ನೆನೆದು, ಸ್ವತಃ ತಾವೇ ಅವನನ್ನು ಹಲ್ಲು ಡಾಕ್ಟರ ಬಳಿಗೆ ಒಯ್ದು ಅಂದೇ ನಾಲ್ಕು ಹಲ್ಲುಗಳನ್ನು ಕೀಳಿಸಿ ನಾಂದಿ ಮಾಡಿದರು. ಅಂದಿನಿಂದ ಒಂದು ತಿಂಗಳ ಕಾಲ ಶ್ರಮಿಸಿ ಡಾಕ್ಟರು ಅವನ ದಂತವಕ್ರವನ್ನು ನಾಶಮಾಡಿದರು. ಮುಂದೆ ಮೂರು ತಿಂಗಳಲ್ಲಿ ಮಿರುಗುವ ಎರಡು ಸಾಲು ಹಲ್ಲು ಸುಬ್ಬಪ್ಪನ ದವಡೆಯನ್ನಲಂಕರಿಸಿದುವು.

ಆದರೆ ಬೊಚ್ಚುಬಾಯವನನ್ನು ಮದುವೆಯಾಗಲು ಸುಂದರಿ ನಿರಾಕರಿಸಿ, ಹಟತೊಟ್ಟು, ಬೇರೆ ಮದುವೆಯಾದಳು. ಅಂತಹವಳೇ ಒಲ್ಲೆನೆಂದಮೇಲೆ ಅಂತಹ ಗಂಡ ತಮಗೇಕೆಂದು ಬೇರೆಯವರೂ ಸಮ್ಮನಾದರು. ಸುಬ್ಬಪ್ಪನಿಗೆ ಈಗ ಮೂವತ್ತೇಳು ವರ್ಷ. ಬ್ರಹ್ಮಚಾರಿಯಾಗಿ 'ಗೀತೆ' ಓದುತ್ತಿದ್ದಾನೆ. ಗಾಂಧೀಜಿಯವರ ಅಹಿಂಸಾ ತತ್ವವನ್ನ ಅವನೂ ಮೆಚ್ಚಿ ಪ್ರತಿಪಾದಿಸುತ್ತಿದ್ದಾನೆ. ಆದರೂ ಅವನೆದುರು ಹಲ್ಲು, ಬಾಯಿಗಳ ಬಗ್ಗೆ ಮಾತನಾಡೀರಿ! ಜೋಕೆ!!

ಸಾಗರ

ಎ. ಎಸ್. ವೇಣುಗೋಪಾಲರಾವ್

ನಾನು ಒಂದು ರೀತಿಯಲ್ಲಿ ವಿಚಿತ್ರ ಪ್ರಾಣಿ! ಈ ಮಾವಿನಕಾಯಿ ಉದ್ದದ ನನ್ನ ಹೃದಯದಲ್ಲಿ ಯಾವ ಯಾವುದೋ ಆಸೆ ಆಕಾಂಕ್ಷೆಗಳನ್ನು ತುಂಬಿಕೊಳುತ್ತೇನೆ. ಅವುಗಳಲ್ಲಿ ಆಗುವುವು ಎಷ್ಟೋ! ಹೋಗುವುವು ಎಷ್ಟೋ! ಆದರೆ ಒಂದು ಅನಂತ ಆಶಾ ಪ್ರವಾಹ ನನ್ನ ಎದೆಯ ಬಯಲಲ್ಲಿ ತುಂಬಿ ಹರಿಯುತ್ತಲೇ ಇರುತ್ತದೆ. ಕೆಲವೊಮ್ಮೆ ಅಂದುಕೊಳ್ಳುತ್ತೇನೆ – ಈ ಪ್ರವಾಹದ ತುಂತುರು ಹನಿಗಳಿಂದಲೇ ನಾನಿನ್ನೂ ಬದುಕಿದ್ದೇನೆಯೇ ಎಂದು. ಆಸೆಯೇ ಇಲ್ಲದ ಜಗತ್ತಿಲ್ಲಿ ? ಜೀವನ ಎಲ್ಲಿ ?

ಇಂತಹ ನನ್ನ ಆಸೆಗಳಲ್ಲಿ, ಸಮುದ್ರವನ್ನು ನೋಡುವ ಆಸೆಯೂ ಒಂದು. 'ಇದೇನು ! ಬೆಳಗ್ಗೆ ಬೊಂಬಾಯಿ – ಸಂಜೆ ಅಮೆರಿಕಾ' ಎಂಬಷ್ಟು ವೇಗದಲ್ಲಿ ಮುಂದುವರಿಯುತ್ತಿರುವ ಈ ಜಗತ್ತಿನಲ್ಲಿ "ಇದೊಂದು ಮಹಾ ಆಸೆಯೆ ? ಆಗ ಹೋಗದ ಆಸೆಯೇ ?" ಎನ್ನುವಿರಾ ? ಆದರೆ ಹುಟ್ಟಿದ ಹಲವಾರು ವರ್ಷಗಳ ವರೆಗೆ ಮೈಸೂರಿನ ಗಡಿಯಾಚೆಯೂ ಇಣಿಕಿ ನೋಡದ ನನಗೆ ಸಮುದ್ರ ದರ್ಶನದ ಯೋಗವೆಲ್ಲಿ ? ನನಗೆ ಅದೇ ಒಂದು ಹಿರಿಯ ಆಸೆಯಲ್ಲವೇ ?

ಕೊನೆಗೊಮ್ಮೆ, ನನ್ನ ಆಸೆಯ ಬಳ್ಳಿ ಹೂ ಬಿಡುವ ಕಾಲ ಒದಗಿತು. ಕಳೆದ ವರ್ಷ ನಾನು ಬೊಂಬಾಯಿಗೆ ಹೋಗಬೇಕಿತ್ತಲ್ಲ - ಆಗ ಆ ಮಹಾನಗರದ ವೈಭವಯುತ ಭವನಗಳು, ಮೆಟ್ರೋ – ತಾಜ್‌ಗಳಿಗಿಂತ ಈ ಸಮುದ್ರ ದರ್ಶನದ ಆಕಾಂಕ್ಷೆಯೇ ನನ್ನನ್ನು ಅಲ್ಲಿಗೆ ಸೆಳೆಯಿತು ಎಂದು ಕೊಂಚ ನಾಚಿಕೆಯಿಂದ ಒಪ್ಪಿಕೊಳ್ಳುತ್ತೇನೆ. ಅಂತೂ ಕೊನೆಗೊಮ್ಮೆ ಸಮುದ್ರವನ್ನು ನೋಡುವ ಸುಯೋಗ ಒದಗಿತು. ಆ ವಿಶಾಲ ಸಾಗರದ ಎದುರು ಹೋಗಿ ನಿಂತೆ. ದಾದರ್, ಜುಹೂ, ಗೇಟ್‌ವೇ – ಹೀಗೆ ನಾನಾ ಕಡೆಗಳಿಂದ ಆ ವಿಸ್ತಾರ ಜಲರಾಶಿಯ ಎದುರು ನಿಂತು ದಿಟ್ಟಿಸಿದೆ. ನನ್ನ ಆಶಾಪ್ರವಾಹಗಳಂತೆಯೇ ಉಕ್ಕಿ ಹರಿಯುತ್ತ ಇರುವ, ಆ ಅನಂತ ಊರ್ಮಿಮಾಲೆಯನ್ನು ನೋಡಿ ನೋಡಿ ದಣಿದೆ. ವಿಶಾಲ ವಿಸ್ತೃತ ಮಳಲ ದಂಡೆಯ ಮೇಲೆ ಕುಳಿತು ನಗರದ ಗೊಂದಲದ

ವಾತಾವರಣವನ್ನು ಮರೆತು ಗಂಟೆಗಳನ್ನು ನಿಮಿಷದಂತೆ ಕಳೆದೆ. ಅಪ್ಪಳಿಸುವ ಅಲೆಗಳ ನಡುವೆ ತಮ್ಮ ಬಾಳದೋಣಿಗಳನ್ನು ತೇಲುಬಿಟ್ಟಿರುವ ಆ ನಾವಿಕರ ಧೈರ್ಯವನ್ನು ಮೆಚ್ಚಿದೆ. "ನಾವೆಲ್ಲರೂ ಉಕ್ಕುವ ಅಲೆಗಳ ತುದಿಯಲ್ಲಿ ತೂಗು ಬಿದ್ದಿದ್ದೇವೆ. ಈ ಅಲೆಗಳು ನಮ್ಮನ್ನ ಎತ್ತಿ ದಡಕ್ಕೆ ಎಸೆಯುವುವೋ, ಸಾಗರಕ್ಕೆ ತಳ್ಳುವವೋ ಯಾರು ಬಲ್ಲರು ? ಕಾರ್ಯದ ಪರಿಣಾಮದಲ್ಲಿ ಮಾತ್ರ ತಿಳಿದೀತು !" ಎಂಬ ಮ್ಯಾಥ್ಯೂ ಆರ್ನಾಲ್ಡ್‌ರ ಮಾತುಗಳನ್ನು ನೆನೆದೆ. ಈ ಭೋರ್ಗರೆಯುವ ಅಲೆಗಳ ಸಂದೇಶ ಏನು ? ಎಂದು ಆಳವಾಗಿ ಆಲೋಚಿಸಲು ಪ್ರಯತ್ನ ಪಟ್ಟೆ. ದೂರದಲ್ಲಿ ಆಕಾಶವೋ ಸಾಗರವೋ ಎಂದು ಭ್ರಾಂತಿ ಹುಟ್ಟಿಸುವ ಸಮುದ್ರರಾಜನ ಮಹಾ ವೈಭವವನ್ನು ಕಂಡು ಮೂಕ ವಿಸ್ಮಿತನಾದೆ. ಕೊನೆಗೆ ಏನೂ ತೋರದೆ 'ಗಗನಂ ಗಗನಾಕಾರಂ ಸಾಗರಸ್ಸಾಗರೋಪಮಂ' ಎಂದು ವಾಲ್ಮೀಕಿಯೊಡನೆ ಹೇಳಿಕೊಂಡು ಸುಮ್ಮನಾದೆ.

ಆದರೆ ಅಚ್ಚರಿ ಎಂದರೆ ಇಂತಹ ಆಚ್ಚರಿಯ ಜಲರಾಶಿಯ ಎದುರು ನಿಂತರೂ ನನಗೆ ತುಂಗೆಯ ನೆನಪು ಬಂದುದು. ವಿಸ್ತಾರವಾದ ಮಾನದಂಡದಿಂದ ಅಳೆದರೆ "ತುಂಗೆ" ಈ ಮಹಾಸಾಗರದ ಎದುರಿಗೆ ತೃಣಸಮಾನ. ಆದರೆ ಎಷ್ಟಾದರೂ ತುಂಗೆ ನನ್ನ ತಾಯಿ. ನಾನು ಚಿಕ್ಕಂದಿನಲ್ಲಿ ಬೆಳೆದದ್ದು ಆಕೆಯ ಮಡಿಲಲ್ಲಿ. ಅಂದು ಸಾಗರದೆದುರು ನಿಂತಾಗ ತುಂಗೆಯ ನೆನಪು ಗರಿಗೆದರಿ ನರ್ತಿಸಲಾರಂಭಿಸಿತು ನನ್ನ ಮನದಲ್ಲಿ. ಹಾಗೆ ನೋಡಿದರೆ ನಾನು ತುಂಗೆಯ ಮಡಿಲನ್ನು ಬಿಟ್ಟು ಬಹಳ ವರ್ಷಗಳೇ ಆಗಿವೆ. ಆದರೂ ಚಿಕ್ಕಂದಿನಲ್ಲಿ ಆಕೆಯ ಸಾನ್ನಿಧ್ಯದಲ್ಲಿ ಮರಳಾಟವಾಡಿದ ನೆನಪು ಹಸಿರಾಗಿದೆ. ಮುತ್ತಿನಂತೆ ಹೊಳೆಯುವ ಗುಂಡುಕಲ್ಲುಗಳ ರಾಶಿಯ ಮೇಲೆ ನಿಧಾನವಾಗಿ ಹರಿಯುವ ತುಂಗೆ, ಮುಳುಗುವ ಸೂರ್ಯನ ಕೆಂಪು ಕಿರಣಗಳಲ್ಲಿ ತೊಯ್ದಿದ್ದ ತುಂಗೆಯ ಸೆರಗು, ಅದೇ ತಾನೇ ಮೂಡಿ ಮೇಲೇರುತ್ತಿರುವ ಚಂದ್ರನ ಮಾಸಲು ಪ್ರತಿಬಿಂಬ, ಇವುಗಳನ್ನು ನೋಡಿದ ನನ್ನ ಮೈಯಲ್ಲಿ ಎದ್ದ ಪುಳಕ – ಇವುಗಳ ನೆನಪು ಅಳಿಸಿಲ್ಲ ಇನ್ನೂ.

ಈಗ ಸಾಗರದೆದುರು ನಿಂತ ನನಗೆ ಅವೆಲ್ಲ ಮತ್ತೊಮ್ಮೆ ಮನದಲ್ಲಿ ಸುಳಿಯುತ್ತವೆ. ಈ ಮಹಾಸಾಗರ ನನಗೆ ತುಂಗೆಯಂತೆ ಮನಸ್ಸಿಗೆ ಶಾಂತಿಯನ್ನು ತರುತ್ತಿಲ್ಲ, ಬದಲಾಗಿ ಈ ಸಮುದ್ರರಾಜನ ಆರ್ಭಟ ಮನದಲ್ಲಿ ಯಾವುದೋ

ಕಲಮಲ ಎಬ್ಬಿಸುತ್ತದೆ; ಹೃದಯ ಭಾರವಾಗುತ್ತದೆ; ಬಗೆ ಕದಡುತ್ತದೆ, ಆದರೆ ತುಂಗೆ ಹಾಗಲ್ಲ. ಆಕೆಯ ಸಾನ್ನಿಧ್ಯದಲ್ಲಿ ನನ್ನ ಮನಸ್ಸು ಹೂವಾಗಿ ಅರಳುತ್ತದೆ. ತಾಯ ಜೋಗುಳದಂತೆ ಆಕೆಯ ಸಂಗೀತದಲ್ಲಿ ಯಾವುದೋ ಹಿತವಾದ ಮಾಧುರ್ಯವಿದೆ. ಬೇಸರವೆಲ್ಲ ಮರೆಸಿ, ತಲೆತಟ್ಟಿ ನಿದ್ರೆ ಬರಿಸುವಂತಹ ಮಂಜುಳ ನಾದವಿದೆ. ಈತನಂತೆ ಆಕೆ ಆರ್ಭಟಿಸುವುದಿಲ್ಲ, ಗುಡುಗುವುದಿಲ್ಲ, ಉಂಟೆ ? ತನ್ನ ಮಗುವಿಗೆ ನಿದ್ರಾಭಂಗ ಆಗಬಾರದಲ್ಲ !

ಆದರೆ ಈ ಸಮುದ್ರರಾಜನ ಸಂಗೀತ (?) ವನ್ನು ಕೇಳಿದಾಗ ಇದರಲ್ಲಿ ಯಾವುದೋ ಎಚ್ಚರಿಸುವ ದನಿಯಿದೆ ಎನಿಸುತ್ತದೆ ನನಗೆ. ಜನದ ಶಕ್ತಿ, ಸಾಮರ್ಥ್ಯಗಳು ಸುಪ್ತವಾಗಿರುವುದನ್ನು ಈತ ಸಹಿಸಲಾರ, ಯುದ್ಧಕ್ಕೆ ಹೊರಟ ಸಿಪಾಯಿಯನ್ನು ಹುರಿದುಂಬಿಸುವಂತೆ 'ನಿದ್ರಿತ ಭಾರತ ಜಾಗೇ !' ಎಂದು ಸುಪ್ತಶಕ್ತಿಯನ್ನು ಉದ್ದೀಪಿಸುವಂತಹ ಈ ರವದಲ್ಲಿ ಶಾಂತಿಗೆ ಸ್ಥಳವೆಲ್ಲಿ ? 'ಏಳು, ಎದ್ದೇಳು' ಎನ್ನುವ ವೀರಘೋಷವಿದು. ಆದುದರಿಂದ ಇದು ಉದಯರಾಗ, ತುಂಗೆಯದು ಸಂಧ್ಯಾರಾಗ ! ಇದರಲ್ಲಿ ಸೌಂದರ್ಯ ಉಂಟು – ಇಲ್ಲ ಎಂದು ಹೇಳುವುದು ಹೇಗೆ ? ಆದರೆ ನನ್ನಂತಹ ಶಾಂತಿಪ್ರಿಯ ಅಲಸಿಗೆ ಸಮುದ್ರರಾಜನ ಈ ಉಷಾಗಾನಕ್ಕಿಂತ ತುಂಗೆಯ ನಿಶಾಗೀತವೇ ಸೊಗಸು.

'ಆಕಾಶಾತ್ ಪತಿತಂ ತೋಯಂ ಯಥಾಗಚ್ಛತಿ ಸಾಗರಂ' ಎಂಬಂತೆ ತುಂಗೆ ಹರಿಯುತ್ತ ತನ್ನ ಇನಿಯನನ್ನೇ ಸೇರುವಳೇನು ? ಇರಬಹುದು, ಆದರೆ ಹಾಗೆ ಸೇರುವ ಗತಿಯಲ್ಲಿ ಅಕೆ ತಣಿಸುವ ಹೃದಯಗಳೆಷ್ಟು ? ನಿಂತಲ್ಲಿ ನಿಲ್ಲದೆ ಜುಳು ಜುಳು ಹರಿಯುವಾಗ ಎಷ್ಟು ಕಠಿಣವಾದ ಭೂಮಿಯ ಎದೆಯನ್ನು ಆಕೆ ಕರಗಿಸಿಲ್ಲ ! ಯಾವುದೋ ಅವ್ಯಕ್ತ ಮಧುರಗಾನವನ್ನು ಹಾಡುತ್ತಾ ತಪ್ತ ಹೃದಯಗಳಿಗೆ ಶಾಂತಿಯನ್ನು ತಂದಿಲ್ಲ ! ಬಂಜರು ಬಿದ್ದ ಭೂಮಿಯ ಗರ್ಭದಲ್ಲಿ ನಗುನಗುವ ಸಸ್ಯರಾಶಿಯನ್ನು ಬೆಳಸಿಲ್ಲ ! ಬಾಳಿದರೆ ಹೀಗೆ ಬಾಳಬೇಕು. ನಿಜ, ತುಂಗೆ ಸೇರುವುದು ಸಾಗರವನ್ನೇ, ಜೀವಾತ್ಮನ ದಾರಿ ಎಂದೂ ಪರಮಾತ್ಮನನ್ನು ಕುರಿತದ್ದೇ – ಆದರೆ ಹಾಗೆಂದು ಬದುಕುವಷ್ಟು ದಿನ 'ಭೂಮಿಗೆ ಭಾರವಾಗಿ ಅನ್ನಕ್ಕೆ ದಂಡವಾಗಿ' ಬದುಕೋಣವೇ ? ಬದುಕಿದರೆ ತುಂಗೆಯಂತೆ ಬದುಕಬೇಕು ! ಇರುವಷ್ಟು ದಿನವೂ ಎಂತಹ ಹಾಡು ! ಎಂತಹ ನಗೆ ! ಎಂತಹ ಶಾಂತಿ ! ಜೀವನವೆಂದರೆ ಇದು ಜೀವನ.

ತುಂಗೆಯೇನೂ, ಸಾಗರದಷ್ಟು ವಿಶಾಲವಾಗಿಲ್ಲ, ನಿಜ. ಆದರೆ ಆಕೆಯ ಎದೆ ಹಾಲಿನ ರುಚಿ ಈ ಸಮುದ್ರದ ನೀರಿಗೆ ಬಂದೀತೆ ? ಒಂದು ಬಾರಿ ಬಾಯಿಗೆ ಹಾಕಿ ನೋಡಿ, ತಿಳಿಯುತ್ತದೆ. ಏನು ಪ್ರಯೋಜನ ಇಂತಹ ದೊಡ್ಡ ಜಲ ರಾಶಿಯನ್ನಿಟ್ಟುಕೊಂಡು ? ಅಗೋ, ಅಲ್ಲೊಬ್ಬ ಮಾರ್ಗಾಯಾಸದಿಂದ ಬಳಲಿ ಬೆಂಡಾದವನು ಕುಳಿತಿದ್ದಾನೆ. ಈ ಅನಂತ ಜಲರಾಶಿಯಿಂದ ಅವನ ದಾಹ ಹಿಂಗುವುದಿಲ್ಲ. ಬೊಗಸೆಯಲ್ಲಿ ನೀರು ಹಿಡಿದು ನಿರಾಶೆಯಿಂದ, ಬೇಸರದಿಂದ ಅವನು ಹಾಡುತ್ತಾನೆ.

ಯದ್ವೀಚಿಭಿ: ಸ್ಪೃಶಸಿ ಗಗನಂ ಯಚ್ಛಪಾತಾಲ ಮೂಲಂ
ರತ್ನೈರುದ್ದೀಪಯಸಿ ಪಯಸಾ ಯತ್ಪಿದಸ್ಯೇ ಧರಿತ್ರೀಂ
ಧಿಕ್ ! ಸರ್ವಂ ತತ್ತವ ಜಲನಿಧೇ ಯದ್ವಿಮುಚ್ಯಾಶ್ರುಧಾರಾಂ
ತೀರೇ ನೀರಗ್ರಹಣ ರಸಿಕೈರಧ್ವಗೈರುಜ್ಜಿತೋಸಿ !

ನಿಶಾಚರಗಳು

ಕು. ಶಿ. ಹರಿದಾಸ ಭಟ್ಟ

ನಮ್ಮ ಹಿರಿಯರು ರಾತ್ರಿ ಕಾಲದಲ್ಲಿ ಮನುಷ್ಯಮಾತ್ರರಾದ ನಾವು ಸಂಚರಿಸಕೂಡದೆಂದು ನಿರ್ಬಂಧಿಸಿದ್ದಾರೆ. ಒಂದು ಕಾರಣ : ರಾತ್ರಿ ಕಾಲದಲ್ಲಿ ಪ್ರೇತ ಪಿಶಾಚಿಗಳೂ, ದೆವ್ವಗಳೂ, ಭೂತ ಬೇತಾಳಗಳೂ ನಿರ್ದಾಕ್ಷಿಣ್ಯವಾಗಿ ಸಂಚರಿಸಬೇಕು ಎಂಬುದಕ್ಕಾಗಿ. ಎರಡನೆ ಕಾರಣ : ಹಗಲೂ ರಾತ್ರಿ ಸಂಚಾರ ಮಾಡಿದರೆ ಆರೋಗ್ಯಕ್ಕೆ ಒಳಿತಲ್ಲ ಎಂಬುದರಿಂದ. ಸೂರ್ಯಾಸ್ತ ಕಾಲಕ್ಕೆ ಯಾವುದೋ ಛತ್ರವನ್ನೋ ಮರದ ಕಟ್ಟೆಯನ್ನೋ ಮನೆಯ ಮಾಡನ್ನೋ ಅರಸಿ ಪೂರ್ವಕಾಲದ ಪಾಂಥ ವಿಶ್ರಾಂತನಾಗುತ್ತಿದ್ದ. ನಡೆದುಕೊಂಡೇ ದಾರಿಯ ಉದ್ದ ತಿಳಿಯಬೇಕಾಗಿದ್ದ ಆ ಕಾಲದಲ್ಲಿ ಹಗಲೆಲ್ಲ ನಡೆದವನು ರಾತ್ರಿ ಕಾಲುಗುಂದಿ ನಿಲ್ಲದೇ ಉಪಾಯವಿರಲಿಲ್ಲ. ಆದರೆ ಇಂದಿನ ಯಂತ್ರಯುಗದಲ್ಲಿ ಇದು ಅಗತ್ಯವಿಲ್ಲ: ಯಂತ್ರಗಳಿಗೆ ಹಗಲೇನು ರಾತ್ರಿಯೇನು ? ಯಂತ್ರಗಳನ್ನು ಹಚ್ಚಿದ ವಾಹನಗಳಿಗೂ ಹಾಗೆಯೆ. ಮನುಷ್ಯ ಜೀವನವೂ ಯಾಂತ್ರಿಕವಾಗುತ್ತ ಬರುತ್ತಿದೆ ಎಂದು ಹೇಳುತ್ತಾರೆ. ಹಾಗಾದರೆ ಅಂಥ ಮನುಷ್ಯರಿಗೂ ಇರುಳಂಜಿಕೆ ತೊಲಗಹತ್ತಿದೆ. ಇದಕ್ಕೆ ನಮ್ಮ ರಾಜ್ಯದಲ್ಲಿ ಈಗ ರಾತ್ರಿಹೊತ್ತು ಓಡಾಡುವ ನಿಶಾಚರ ಬಸ್ಸುಗಳೇ ಸಾಕ್ಷಿ. ಹಿಂದೆ "ನಿಶಾಚರ' ಎಂಬ ಪದವನ್ನು ಕೆಟ್ಟ ಅರ್ಥದಲ್ಲಿ-'ರಾಕ್ಷಸ' ಎಂಬರ್ಥದಲ್ಲಿ-ಬಳಸುತ್ತಿದ್ದರಂತೆ. ಈಗ ರಾಕ್ಷಸರೆ ಮೇಲೆ ನಮಗೆ ಕನಿಕರ ಬರತೊಡಗಿದೆ-ನಾವೂ ನಿಶೆಯಲ್ಲಿ ಪಯಣಿಸತೊಡಗಿದ ಮೇಲೆ, ನಾವೂ ನಿಶಾಚರರಾದ ಮೇಲೆ.

ಅಖಿಲ ಭಾರತದಲ್ಲಿಯೇ ಔದ್ಯಮಿಕ ಕ್ರಾಂತಿಗಿಂತಲೂ ಹೆಚ್ಚು ವೇಗದಲ್ಲಿ ಸಾರಿಗೆ ಕ್ರಾಂತಿ-ವಾಹನಸೌಕರ್ಯ ಕ್ರಾಂತಿ-ನಡೆದಿದೆ. ಜನ ಅಲೆದಾಡಲು ಆರಂಭಿಸಿದ್ದಾರೆ. ಇದು ಒಳ್ಳೆಯ ಲಕ್ಷಣ ಎಂದು ಅರ್ಥಶಾಸ್ತ್ರಜ್ಞರು ಹೇಳುತ್ತಾರೆ. ಯಾತಕ್ಕಾಗಿ ಹೀಗೆ ಅಲೆಯುತ್ತಾರೆ ಎಂದು ಕೇಳಬೇಡಿ. ಯಾತಕ್ಕಾಗಿ ಹುಟ್ಟಿದ್ದೇವೆ ? ಯಾತಕ್ಕಾಗಿ ಸಾಯಬೇಕು ? ಇತ್ಯಾದಿ ಮಾನವ ಜೀವನದ ಮಹತ್ವದ ಪ್ರಶ್ನೆಗಳಿಗೆ ಎಂತೆಂಥ ಮಹರ್ಷಿಗಳಿಗೂ ಇನ್ನೂ ಉತ್ತರದೊರೆತಿಲ್ಲ.

ಆದ್ದರಿಂದ ಯಾತಕ್ಕಾಗಿ ಅಲೆಯುತ್ತಾರೋ ಎಂದು ಕೊರಗಲೇಕೆ ? 'ಅಲೆಮಾರಿತನ' (Nomadic Instinct) ಮನುಷ್ಯ ಜಾತಿಯ ಮೂಲ ಭೂತ ಪ್ರೇರಣೆಗಳಲ್ಲಿ ಒಂದು ಎಂದು ಮಾನವ ಶಾಸ್ತ್ರಜ್ಞರು ಹೇಳಿದ್ದಾರೆ. ಗುಹೆಯೋ, ಗುಡಿಸಲೋ, ಗೂಡಾರವೋ, ಮನೆಯೋ, ಅರಮನೆಯೋ, ಮಠವೋ, ಯಾವುದಾದರೇನಂತೆ ಅಲ್ಲಿಂದ ದೂರ, ಬಲು ದೂರ ಹೋಗುವ ಆಸೆ ಯಾರಿಗಿಲ್ಲ ? ಎಂಟು ದಿನ ಸತತವಾಗಿ ಪ್ರಯಾಣ ಮಾಡದೆ ಮನೆಯೊಳಗೆ ಕೂತರೆ ವಿಲಿವಿಲಿ ಒದ್ದಾಡುವ ಪ್ರವಾಸಪ್ರಿಯ ಜೀವಗಳಿದ್ದಾರೆ. ಮನೆ ಇರುವು ದಕ್ಕಲ್ಲ, ಬರುವುದಕ್ಕೆ-ಎಲ್ಲಿಂದಲೋ ಅಲೆದಲೆದು ದಣಿವಾದಾಗ ಎರಡು ದಿನ ಇರಲಿಕ್ಕಾಗಿ ಬರುವುದಕ್ಕೆ-ಎಂದು ತಿಳಿದವರಿದ್ದಾರೆ. ಮಠದ ಗುರುಗಳು ವರ್ಷದ ಹನ್ನೆರಡು ತಿಂಗಳಲ್ಲಿ ಎಂಟು ತಿಂಗಳು ಮತಪ್ರಚಾರ ಮಾಡುತ್ತ ಅಲೆಯಬೇಕೆಂಬ ಕಡ್ಡಾಯವುಂಟು. ಪರಿವ್ರಾಜಕ ಪರಮಹಂಸರಾದ ಇವರು 'ಚಾತುರ್ಮಾಸ್ಯ'ವನ್ನಾಚರಿಸುತ್ತಾರೆ ಎಂಬುದರಿಂದ ಒಂದಾನೊಂದು ಕಾಲ ದಲ್ಲಿ ಎಂಟು ತಿಂಗಳೂ ಇವರು ಅಲೆದಾಡುತ್ತಿದ್ದರೆಂಬುದು ಖಚಿತವಾಗುತ್ತದೆ. ಇವರಲ್ಲಿಯೂ ಕೆಲವರಿಗೆ ನಾಲ್ಕು ತಿಂಗಳು ಒಂದೇ ಸ್ಥಳದಲ್ಲಿರುವುದು ಅಸಾಧ್ಯ ವಾಗಿ 'ಚಾತುರ್ಮಾಸ್ಯ'ವೆಂಬ ಪದ ಕೇವಲ ಅಲಂಕಾರಕ್ಕಾಗಿ ಬಳಸಲ್ಪಡುತ್ತದೆ. ಎರಡು ತಿಂಗಳಲ್ಲೇ ಅವರು ಕಾಲಿಗೆ ಬುದ್ಧಿ ಹೇಳಿದರೂ ಹೇಳಿದರೆ. ದಶ ದಿಕ್ಕು ಗಳಲ್ಲಿ ಚದರಿಕೊಂಡ ತಮ್ಮ ಶಿಷ್ಯೋತ್ತಮರಲ್ಲಿ ಮುಖ್ಯವಾಗಿ ಮುಂಬಯಿ, ಬೆಂಗಳೂರು ಮುಂತಾದ ಮಹಾ ನಗರಗಳಲ್ಲಿ ಐಹಿಕ ಸುಖಲೋಲುಪರಾಗಿ ನರಕದ ದಾರಿ ಹಿಡಿದಿರುವ ಶಿಷ್ಯರ ಉದ್ಧಾರದಲ್ಲಿ ಅವರಿಗೆ ತೀವ್ರತರವಾದ ಆಸ್ಥೆ. ಈ ಕರ್ತವ್ಯಕ್ಕಾಗಿ ಚಾತುರ್ಮಾಸ್ಯವನ್ನು ಮೊಟಕುಗೊಳಿಸಿ ವರ್ಷವೆಲ್ಲ ತಿರುಗಿ ದರೂ ಸಾಧುವಾದದ್ದೆ. ನಾವಾದರೂ ಈ ಗುರುಗಳ ಹೆಜ್ಜೆಯಲ್ಲೆ ನಡೆದು ರಾಜ ಧಾನಿ ದರ್ಶನಕ್ಕಾಗಿ ಕಾತರರಾಗಿದ್ದೇವೆ.

ಮಂಗಳ ಗ್ರಹದಿಂದಲೋ, ಅಥವಾ ಅಷ್ಟು ದೂರ ಬೇಡವಾದರೆ, ಮಾನವ ನಿರ್ಮಿತ ಉಪಗ್ರಹ, ಸೆಟಿಲ್ಲೈಟಿನಿಂದಲೋ ರಾತ್ರಿಯ ಹೊತ್ತು ನೋಡಿದರೆ ಬೆಂಗಳೂರು ಒಂದು ಮಹಾ ಲೋಹಚುಂಬಕದಂತೆ, ಅಷ್ಟ ದಿಕ್ಕು ಗಳಿಂದಲೂ ನಿಶಾಚರ ಬಸ್ಸುಗಳನ್ನು ಆಕರ್ಷಿಸುವಂತೆ ತೋರೀತು. ಮಂಗಳೂರು, ಬೆಳಗಾವಿ, ಬಳ್ಳಾರಿ, ರಾಯಚೂರು, ಗುಲ್ಬರ್ಗ, ಶಿವಮೊಗ್ಗ

ಮುಂತಾದ ರಾಜಧಾನಿಗೆ ೧೫೦ ರಿಂದ ೩೦೦ ಮೈಲು ದೂರದ ಗಡಿನಾಡ ಊರುಗಳಿಂದ ಪಚ್ಚೆ, ಹಳದಿ, ಕೆಂಪು ದೀಪಗಳಿಂದಲೂ, ಮೆತ್ತನೆಯ ಸುಖಾಸನಗಳಿಂದಲೂ, ರಂಗುರಂಗಿನ ಬಣ್ಣದ ತಗಡುಗಳಿಂದಲೂ, ಸುಸಜ್ಜಿತವಾದ ವಾಹನಗಳು ಬೆಂಗಳೂರಿಗೆ ಮುಖ ಮಾಡಿ ಹೊರಟುಬಿಡುತ್ತವೆ. ಬೆಂಗಳೂರಿನ ನಾಗರೀಕರು ಏಳುವ ಯೋಚನೆ ಮಾಡುವ ಮೊದಲೇ ಅಲ್ಲಿಗೆ ಮುಟ್ಟಿಸಿ ಬಿಡುತ್ತವೆ. ಈ ನಿಶಾಚರ ಬಸ್ಸುಗಳು ಹಗಲಿನ ಬಸ್ಸುಗಳಿಗಿಂತ ರೂಪದಲ್ಲಿ ಹೇಗೊ ಹಾಗೆ ಶೀಲದಲ್ಲಿಯೂ ಭಿನ್ನವಾದುವು. ಅವು ಓಡುವ ವೇಗವನ್ನು ನೋಡಿದರೆ ಕಂಪೆನಿಯವರು ಒಳಗಿನ ಪ್ರಯಾಣಿಕರಿಗೆ ತಲಾ ಒಂದು ಲಕ್ಷದ ವಿಮೆ ತಮ್ಮ ಖರ್ಚಿನಲ್ಲೇ ತೆಗೆಸಿಕೊಟ್ಟ ಹಾಗೆ ತೋರುತ್ತದೆ. ಕೆಲವು ಕಂಪೆನಿಗಳು ನಮ್ಮ ಧೈರ್ಯಕ್ಕಾಗಿ ಎರಡೆರಡು ಚಾಲಕರನ್ನಿಟ್ಟಿರುತ್ತಾರೆ. ಅರ್ಧಹಾದಿ ಒಬ್ಬ ಅರ್ಧಹಾದಿ ಇನ್ನೊಬ್ಬ ಚಕ್ರ ತಿರುಗಿಸಲಿ ಎಂದು. ಆದರೆ ಈ ಇಬ್ಬರೂ ಸ್ನೇಹಿತರಾದರೆ ಇಬ್ಬರೂ ಸೇರಿಯೇ ಬಹಳ ದೂರ ಕಿವಿಮಾತು ಲಲ್ಲೆ, ಸರಸ ಮಾಡುತ್ತ ದಾರಿ ಸಾಗಿಸುತ್ತಾರೆ.

ಬಸ್ಸಿನೊಳಗೆ ಕುಡಿಯುವ ನೀರಿನ ಏರ್ಪಾಟೂ ಇದೆ. (-ಆದರೆ ಇದರ ಉಪಯೋಗವನ್ನು ಕಾಯಿಲೆಯವರು ಮಾತ್ರ ಮಾಡಿಕೊಳ್ಳುವುದನ್ನು ನಾನು ಕಂಡೆ). ಹೆಚ್ಚಿನ ಪ್ರವಾಸಿಗಳು ನಡುವಿನ ಕಾಫಿ-ನಿಲ್ದಾಣಕ್ಕಾಗಿ ಕಾಯುವುದರಿಂದ ನೀರಿನ ಹೂಜೆ ಅವರಿಗೆ ಕಾಣಿಸುವುದಿಲ್ಲ. ಬಸ್ಸು ಮತ್ತು ಅದರೊಳಗಿನ ಪ್ರವಾಸಿಗಳು ನಿಶಾಚರರಾದಂತೆ ನಡುದಾರಿಯ ಕೆಲ ಹೋಟೆಲುಗಳೂ ನಿಶಾಚರರಾಗಿಬಿಟ್ಟಿವೆ. ಬಸ್ಸಿಗೆ ಎರಡು ಡ್ರೈವರಿದ್ದಂತೆ ಇಡ್ಲಿ ಕಾಫಿಗೆ ಎರಡು ಪಟ್ಟು ದರ. ಅರೆನಿದ್ದೆಯ ನಿಮ್ಮ ಮುಸುಡಿ ಕಂಡ ತಕ್ಷಣ ನೀವು ಬೇಡದೆಯೇ ನಿಮ್ಮ ಮುಂದೆ ನವನೀತ ಸಹಿತವಾದ ಇಡ್ಲಿ ಪ್ರತ್ಯಕ್ಷವಾಗುತ್ತದೆ, ಅಷ್ಟು ಹತ್ತಿರದಲ್ಲಿ ನಡು ರಾತ್ರಿಯ ಈ ಇಡ್ಲಿಯನ್ನು ಕಂಡ ಮೇಲೆ ಅದನ್ನು ತಿರಸ್ಕರಿಸುವುದು ಪುರುಷ ಲಕ್ಷಣ (ಮುಖ ತೊಳೆಯದಿದ್ದರೂ) ಅಲ್ಲವೆಂದು ಇಡ್ಲಿಯನ್ನು ನುಂಗಿ ಕಾಫಿಯಿಂದ ಹಲ್ಲುಜ್ಜಿ ಶುಚಿರ್ಭೂತರಾಗಿ ಪ್ರಸನ್ನ ಚಿತ್ತರಾಗಿ ನೀವು ಮತ್ತೆ ನಿಮ್ಮ ಸೀಟು ಹಿಡಿಯುತ್ತೀರಿ. ಈ ಸಂದರ್ಭದಲ್ಲಿ ಒಂದು ಜಾಗ್ರತೆ ಬೇಕಾಗುತ್ತದೆ—ನೀವು ಮಂಗಳೂರು—ಹಾಸನ—ಬೆಂಗಳೂರು ಪ್ರಯಾಣಿಕರಾದರೆ ಈ ಜಾಗ್ರತೆ ಬಲು ಅವಶ್ಯ. ನೀವು ಕಾಫಿ ಮುಗಿಸುವ ವೇಳೆಗೆ ಆರೆಂಟು

ನಿಶಾಚರಗಳು ನಿಮ್ಮ ಬಸ್ಸಿನ ಹಿಂದೋ ಮುಂದೋ ನಿಂತು ಕಾರ್ಗತ್ತಲಲ್ಲಿ ನಮ್ಮ ಬಸ್ಸು ಯಾವುದೆಂದು ನೀವು ಸಂಶೋಧನೆ ಮಾಡಬೇಕಾಗುತ್ತದೆ. ನಿಮ್ಮ ನಿದ್ದೆ ಗಣ್ಣಿಗೆ(ಗೂ) ಎದ್ದು ತೋರಿದ ಯಾವಳೊ ಒಬ್ಬ ಮಹಿಳಾ ಮಣಿಯ ಗುರುತು ಹಿಡಿದು ನೀವು ನಿಮ್ಮ ಬಸ್ಸನ್ನು ಅರಸುವುದರಲ್ಲಿ ಯಶಸ್ವಿ ಯಾಗಬಹುದು. ಆದರೆ ನಿಮ್ಮ ನಿದ್ದೆ ಕೆಡಿಸುವಷ್ಟು ಚೆಲುವೆ ಯಾರಾದರೂ ಇನ್ನೊಂದು ಬಸ್ಸಿನಲ್ಲಿದ್ದರೆ ಮಾತ್ರ ನೀವು ಫಜೀತಿಯಲ್ಲಿ ಬೀಳುತ್ತೀರಿ. ತಪ್ಪಿ ಆ ಇನ್ನೊಂದು ಬಸ್ಸು ಹಿಡಿದು ನಿಮ್ಮ ಗುರಿ ಮುಟ್ಟಿದರೂ ನಿಮ್ಮ ಸೂಟ್‌ಕೇಸು, ಬ್ರೇಫ್‌ಕೇಸು ಇತ್ಯಾದಿ ಕಳೆದುಕೊಂಡು ಪಾಡು ಪಡುತ್ತೀರಿ. ಆದ್ದರಿಂದ ನಡು ಹಾದಿಯಲ್ಲಿ ಇಳಿಯುವುದು ಅಪಾಯಕರವೆಂದು ಸೀಟಗಂಟ ಕೂಡುವ ಪ್ರವಾಸಿಗಳೂ ಇದ್ದಾರೆ.

ಇದರಲ್ಲಿ ನಿದ್ದೆಯೇ ಬರುವುದಿಲ್ಲ ಎನ್ನುವವರುಂಟು. ಬಾರದಿದ್ದರೆ ಒಳ್ಳೆ ಯದು—ಎಂದು ಸೃಷ್ಟಿಶೀಲ ಕವಿ ಹೇಳಬಹುದು. ರಾತ್ರಿಯ ಕಾಲದಲ್ಲಿ ಕವಿ ಯಲ್ಲದ ನಾನೂ ಈ ಬಸ್ಸಿನೊಳಗೆ ಬೆಂಗಳೂರಿನಿಂದ ಕುಣಿಗಲ್ಲಿನವರೆಗೆ ಒಂದು ನವ್ಯಕಾವ್ಯ ರಚಿಸಿದ್ದೇನೆ. ಯೋಚನೆ ಮಾಡಿ ನೋಡಿದರೆ—ಇಷ್ಟು ಮೈಲು ದ್ದದ ಖಂಡ ನವ್ಯ ಕಾವ್ಯ ಯಾವ ಇದುವರೆಗಿನ ನವ್ಯ ಕವಿ ರಚಿಸಿದ್ದಾನೆ? ಇನ್ನೊಂದು ಸಾರಿ ಮಹಾಛಂದಸ್ಸಿನಲ್ಲಿ ಸಕಲೇಶಪುರದಿಂದ ಸುಳ್ಯದವರೆಗೆ ಒಂದು ಬೃಹತ್ಕಾವ್ಯ ರಚಿಸಿದೆ. ಮರುದಿನವೇ ಅದನ್ನು ಬರೆದಿಟ್ಟಿದ್ದರೆ ಕನ್ನಡ ಸಾಹಿತ್ಯದಲ್ಲಿ ನನ್ನ ಸ್ಥಾನ ಭದ್ರವಾಗುತ್ತಿತ್ತು. ಆದರೆ ನನ್ನೂರು ಕಂಡ ತಕ್ಷಣ ಈ ಹವ್ಯಾಸಿ ಕಾವ್ಯ ಮರೆತುಹೋಗಿ ಊರಿಗೆ ಉಪಕಾರವಾಗಿದೆ ಎಂದು ನನ್ನ ತಿಳಿವಳಿಕೆ.

ಘನಘೋರವಾಗಿ ಆಕ್ರೋಶ ಮಾಡುತ್ತ, ಘಟ್ಟದ ತಿರುವಿನಲ್ಲಿ ಗರಗರನೆ ತಿರುಗುತ್ತ, ದೈತ್ಯ ಪ್ರಕಾಶವನ್ನು ಸೂಸುತ್ತ ಸುತ್ತಲ ಕತ್ತಲ ಮೊತ್ತವನ್ನು ಲೆಕ್ಕಿಸದೆ ಸಾಗುವ ಈ ಬಸ್ಸಿನಲ್ಲೂ ಗಾಢವಾಗಿ ನಿದ್ದೆ ಹೋಗಲು ಅಭ್ಯಾಸ ಮಾಡಿಕೊಂಡ ಮಹಾನುಭಾವರಿದ್ದಾರೆ. ಅವರು ಬೆಂಗಳೂರಲ್ಲಿಳಿದು ಕನ್ನಡಿ ನೋಡಿದರೆ ಅವರ ಹಣೆಗೆ ಒಂದು ಕೋಡೇ ಮೂಡಿರುತ್ತದೆ—ಪಕ್ಕದ ಲೋಹ ಭಾಗಕ್ಕೆ ಅಷ್ಟು ಹಣೆ ಬಡಿದರೂ ಉಳಿದ ಆ ಹಣೆಗಾಗಿ ಅವರು ತಮ್ಮ ನಿರ್ಮಾ

ಸಕನಿಗೆ ಧನ್ಯವಾದ ಕೊಡುತ್ತಾರೆ. ಕೆಲವು ಬಸ್ಸುಗಳಲ್ಲಿ ನೀವು ಕಾಲು ಕೆಳಗೆ ಹಾಕಿದರೆ ಅದು ನೇತಾಡುತ್ತಲೇ ಇರಬೇಕಾದಂಥ ಜೋಕಾಲಿ ಸೀಟುಗಳನ್ನು ಹಚ್ಚಿದ್ದಾರೆ. ಸ್ವಲ್ಪ ದೂರ ಹೋಗುವಾಗ ನಿಮಗೆ ಈ ಕಾಲುಗಳ ಆವಶ್ಯಕತೆಯೇ ಇಲ್ಲವಲ್ಲಾ, ದೇವರು ಇದನ್ನು ಯಾಕೆ ಕೊಟ್ಟನೋ ಅನಿಸುವುದುಂಟು. ಇನ್ನು ಕೆಲವಲ್ಲಿ ನಿಮ್ಮ ಕೈಗಳು ನಿಮಗೆ ಬಿಡಿ ಭಾಗಗಳಂತೆ ಕಳಚಿ ಮೇಲಿನ ರ್‍ಯಾಕಿನಲ್ಲಿಡಲು ಬರುವಂತಿದ್ದರೆ ಚೆನ್ನಾಗಿತ್ತಲ್ಲಾ ಅನಿಸಬಹುದು. ತಲೆಯೇ ಅಗತ್ಯವಿಲ್ಲವೆಂದು ಕಾಣಬೇಕಾದರೂ ನೀವು ಈ ನಿಶಾಚರಗಳನ್ನು ಹತ್ತಿಕೂರಬೇಕು. ನೆಲಮಂಗಲ ಬರುವಷ್ಟಕ್ಕೆ ಹಿಂದಿನ ಮೆತ್ತನ್ನ ಉಂಡೆ ನಿಮ್ಮ ತಲೆಯನ್ನು ಅಮುಕಿ ಅಮುಕಿ ನಿಮಗೆ ತಲೆ ಯಾತಕ್ಕೆ ಎಂದು ಅನಿಸುತ್ತದೆ: ಇದರಲ್ಲಿ ತಪ್ಪು ನಿಮ್ಮದೇ. ನಿಮ್ಮ ಕುತ್ತಿಗೆಯ ಆಧಾರಕ್ಕಾಗಿ ಮಾಡಿದ ದಿಂಬು ಇರುವ ಸ್ಥಾನದಲ್ಲಿ ನಿಮ್ಮ ತಲೆ ಬರುವಷ್ಟು ನೀವು ಕುಬ್ಜರು. ಬರಬರುತ್ತ ವಿಕಾಸವಾದಕ್ಕೆ ಅನುಗುಣವಾಗಿ ನಿಮ್ಮ ಕುತ್ತಿಗೆ ಉದ್ದವಾಗಿ ದಿಂಬಿನ ಸ್ಥಾನಕ್ಕೆ ಸರಿಯಾಗಿ ಬಂದು ನಿಂತೀತು. ನಿಶಾಚರ ಬಸ್ಸುಗಳಲ್ಲಿ ತಿಂಗಳುಗಟ್ಟಲೆ ಸೀಟು ರಿಜರ್ವ್ ಮಾಡಿಸಿದ ನಮ್ಮ ಗೆಳೆಯರೊಬ್ಬರ ಕೊರಳು ಒಂದಂಗುಲ ಬೆಳೆದದ್ದು ಈ ಎರಡು ವರ್ಷದಲ್ಲೇ ಗೋಚರಕ್ಕೆ ಬಂದಿದೆ.

ಸಮಾಜವಾದದ ಸವಾಲಿಗೆ ನಿಶಾಚರ ಬಸ್ಸುಗಳು ಒಂದು ಪ್ರಬಲವಾದ ಉತ್ತರ. ರಾತ್ರಿ–ಹಗಲುಗಳೊಳಗಿನ ತಾರತಮ್ಯವನ್ನೂ ಸಂಘರ್ಷಗಳನ್ನೂ ಗೆದ್ದು ನಿಂತ ನಿಶಾಚರ ಬಸ್ಸುಗಳು ರಾಷ್ಟ್ರೀಕೃತ ಮಾರ್ಗಗಳಲ್ಲೇ ಸಂಚರಿಸಿದರೂ ಇವುಗಳಿಂದ ರಾಷ್ಟ್ರೀಕರಣಕ್ಕೆ ಬಾಧೆ ಇಲ್ಲ. ರಾಷ್ಟ್ರೀಕೃತ ಬಸ್ಸುಗಳೊಡನೆ ಇವು ಸೈಪೋಟಿ ನಡೆಸುವುದಿಲ್ಲ. ಸೂರ್ಯಾಸ್ತವಾದೊಡನೆ – ಬೆಂಗಳೂರಿನ ಕಛೇರಿಗಳಲ್ಲಿ ಕೆಲಸ ನಿಂತೊಡನೆ—ರಾಷ್ಟ್ರೀಕರಣವೂ ನಿಲ್ಲುತ್ತದೆ. ಮರುದಿನ ಹನ್ನೊಂದರ ವರೆಗೆ ಎಲ್ಲರಿಗೂ ಸ್ವಾತಂತ್ರ್ಯ. ಕಛೇರಿ ಗುಮಾಸ್ತೆಯರನ್ನು ನೋಡಲು ಹಗಲು ಬಸ್ಸಿನಲ್ಲಿ ಸೀಟು ಸಿಗದವರು ರಾತ್ರಿಗಾದರೂ ನಿಶಾಚರ ಬಸ್ಸುಗಳಲ್ಲಿ ಹೊರಟು 'ಪತ್ರ ವ್ಯವಹಾರಕ್ಕಿಂತ ಭೆಟ್ಟಿ ಉತ್ತಮ' ಎಂಬ ವಾರಭವಿಷ್ಯದ ಮಾತನ್ನು ನಿಜಮಾಡಿ ಪುಣ್ಯಸಂಪಾದಿಸಬೇಕು. ಹಗಲು ಹೊತ್ತಿನ ರಾಷ್ಟ್ರೀಕರಣ ದಿಂದಲೇ ನಮ್ಮ ದೇಶ ಅಭಿವೃದ್ಧಿಗೊಂಡದ್ದು ಸಾಲದೆ (ಮೊನ್ನಿನ ಖಾನೆ

ಸುಮಾರಿಯಲ್ಲಿ ಜಳ ಕೋಟಿ ?) ರಾತ್ರಿ ಪ್ರವಾಸಿಗಳು ಸುಖವಾಗಿ ನಿದ್ದೆಕೆಟ್ಟು ಪ್ರಯಾಣ ಮಾಡಿ ರಾಜಧಾನಿಗೆ ಹೋಗಿ ವಿಧಾನಸೌಧದ ಕಾರಿಡಾರಿನಲ್ಲೊ ಕೆಂಪೇಗೌಡ ರಸ್ತೆಯ ಸಿನಿಮಾ ಥಿಯೇಟರುಗಳಲ್ಲೋ ಮಜಾ ಉಡಾಯಿಸಲಿ ಎಂದು ಸೌಕರ್ಯ ಏರ್ಪಡಿಸಿಕೊಟ್ಟ ನಿಶಾಚರ ಕಂಪೆನಿಗಳಿಗೆ ನಾನಂತೂ ಕೃತಜ್ಞನಾಗಿರುತ್ತೇನೆ.

ಮಾತು—ಅರ್ಥ

ಬೀChi

"ಅಪ್ಪಾ ತೇರಿಗೆ ಒಂದು ಹೊಸ ಅಂಗಿ ಹೊಲಿಸಪಾ."

ತಿಂಮ ತನ್ನ ತಂದೆಯನ್ನು ಕೇಳಿದ ನಾಲ್ಕಾರು ಬಾರಿ.

ಈ ಮಾತಿನ ಅರ್ಥ ತಿಂಮನಿಗೆ ಗೊತ್ತಿಲ್ಲವೆ ? ತಿಂಮನ ತಂದೆಗೆ ಆಗಲಿಲ್ಲವೇ ? ಆಯಿತು, ಯಾರಿಗಾದರೂ ಆಗುವಂತೆ- ತೇರಿಗೆ ಎಂದರೆ ತೇರಿನ ಸಮಯಕ್ಕೆ ಎಂದಷ್ಟೆ ಅರ್ಥ. ಇದರಲ್ಲೇನು ತಪ್ಪು ?

ಒಬ್ಬ ವ್ಯಾಕರಣಪಂಡಿತ ನೂರೆಂಟು ಕೋಶಗಳನ್ನು ಹುಡುಕಿ, ಪ್ರತ್ಯಯಗಳ ಪ್ರಯೋಗಗಳನ್ನು ನೆನಪಿಸಿಕೊಂಡು, ಶಬ್ದಾರ್ಥವನ್ನು ಗ್ರಹಿಸಿ-ಮುಖ್ಯವಾಗಿ ಭಾವಾರ್ಥವನ್ನು ತ್ಯಜಿಸಿ-ಕೇಳಿಯೇಬಿಟ್ಟ ; ನಕ್ಕುಬಿಟ್ಟ ಕೂಡ ಅನ್ನಿ.

"ತೇರಿಗೆ ಅಂಗಿ ! ಯಾರಾದರೂ ತೇರಿಗೆ ಅಂಗಿ ತೊಡಿಸುತ್ತಾರೆಯೇ ? ಎಷ್ಟು ಥಾನುಗಳ ಬಟ್ಟೆ ಬೇಕಾದೀತು ? ಇದು ಹುಚ್ಚರು ಮಾಡಬೇಕಾದ ಕೆಲಸ, ತಿಂಮಾ ನಿನ್ನನ್ನು ಹುಚ್ಚಾಸ್ಪತ್ರೆಗೆ ಸೇರಿಸಬೇಕು, ಅಷ್ಟೆ, ಏನು ನಿನ ತಲೆ, ಹಾಗೆಂದರೆ ?"

ಇದಕ್ಕೆ ಜವಾಬು ಇಲ್ಲವೆ, ತಿಂಮನ ತಲೆಯಲ್ಲಿ !

"ಹುಚ್ಚಾಸ್ಪತ್ರೆ ! ಹುಚ್ಚಾಸ್ಪತ್ರೆ ಎಂದರೇನು ? ಹುಚ್ಚುನಾಯಿ ಎಂದರೇನು ಪಂಡಿತರೇ ? ಹುಚ್ಚು ಹಿಡಿದಿರುವ ನಾಯಿಗೆ ಹುಚ್ಚುನಾಯಿ ಎನ್ನುವದುಂಟು. ಹಾಗಾದರೆ ಹುಚ್ಚಾಸ್ಪತ್ರೆ ಎಂದರೆ ಹುಚ್ಚು ಹಿಡಿದ ಆಸ್ಪತ್ರೆ ಎಂದು ಹೇಳಬೇಕಾಯಿತು. ಅಲ್ಲವೇನು ಸ್ವಾಮೀ ? ಆಸ್ಪತ್ರೆಯ ಕಟ್ಟಡ, ಗೋಡೆ, ಕಂಬ, ಮಾಳಿಗೆ, ಬಂಡೆಗಳಿಗೆ ಹುಚ್ಚು ಹಿಡಿಯುವದುಂಟೆ ? 'ಹುಚ್ಚಾಸ್ಪತ್ರೆ' ಎನ್ನುವದನ್ನು ತಿದ್ದಿಕೊಂಡು 'ಹುಚ್ಚರ ಆಸ್ಪತ್ರೆ' ಎನ್ನಬಹುದು, ನೀವು. ಹಾಗಾದರೆ ಅಲ್ಲಿರುವವರೆಲ್ಲರೂ—ಡಾಕ್ಟರುಗಳು, ನರಸಮ್ಮಗಳು—ಎಲ್ಲರೂ ಹುಚ್ಚರೇ ಏನು ? ಇನ್ನೊಂದು ಮಾತೂ ಇದೆ. ಹುಚ್ಚಾಸ್ಪತ್ರೆಯ ಒಳಗಿರುವವರು ಹುಚ್ಚರು ಎಂದ ಮಾತ್ರಕ್ಕೆ ಅದರ ಹೊರಗಿರುವ ನಾವು ನೀವೆಲ್ಲರೂ—

ಅತಿ ಮುಖ್ಯವಾಗಿ ಪಂಡಿತರುಗಳು–ಹುಚ್ಚರಲ್ಲ ಎಂದು ಹೇಳಲು ಸಾಧ್ಯವೆ? ಹಾಗೆ ಹೇಳಿದರೆ ಶುದ್ಧ ತಪ್ಪು ಆದೀತು. ಸಾಮಾನ್ಯ ಜ್ಞಾನದ 'ರ ಕ' ಸಹ ನಿಮಗೆ ತಿಳಿಯದು ಎಂಬುದು ಶತಸ್ಸಿದ್ಧವಾಗಿಬಿಡುತ್ತದೆ ಛೆ! ಉಂಟೆ ಎಲ್ಲಿಯಾದರೂ? ಕೇವಲ ಗುಣವಾಗಬಹುದಂತಹ ಹುಚ್ಚರನ್ನಷ್ಟೆ ಆ ಆಸ್ಪತ್ರೆಯಲ್ಲಿಟ್ಟುಕೊಳ್ಳುತ್ತಾರೆ. ಗುಣವಾಗಲಾರದಂತಹ ಹುಚ್ಚರೆಲ್ಲರೂ ಹೊರಗೇ ಇರುತ್ತಾರೆ. ಅವರಲ್ಲಿ ಕೆಲವರು ಮಾತ್ರವೇ ಚುನಾವಣೆಗೆ ನಿಲ್ಲುತ್ತಾರೆ; ಕೆಲವರು ಪಂಡಿತರಾಗುತ್ತಾರೆ, ಉಳಿದವರಿಗೆಲ್ಲ ಬೇರೆ ಬೇರೆ ಜಾತಿಯ ಹುಚ್ಚು ಗಂಟು ಬಿದ್ದಿರುತ್ತದೆ...."

"ಹೋಗಲಿ ಬಿಡೋ ತಿಮ್ಮಾ. ಪಂಡಿತನಾದ ನನಗೆ ವ್ಯಾಕರಣದ ಹುಚ್ಚು, ಪಾಮರನಾದ ನಿನಗೆ ಭಾಷಣದ ಹುಚ್ಚು. ನೀನು ಇಷ್ಟುದ್ದ ಮಾತನಾಡುವದನ್ನು ನೋಡಿ ನನ್ನ ನಾಲಿಗೆ ಒಣಗಿತು. ಹೋಗು, ಒಂದು ಲೋಟ ಕುಡಿಯುವ ನೀರನ್ನು ತಾ."

ತಿಮ್ಮ ತಿರುಮಂತ್ರ ಆರಂಭ ಮಾಡಿದ.

"ಕುಡಿಯುವ ನೀರು! ಅಯ್ಯೊ, ದೇವರೆ! ಸ್ವಾಮಿ ಪಂಡಿತರೆ! ಆಡುವ ಮಗು, ಓಡುವ ಕುದುರೆ, ನೋಡುವ ಕಂಣು ಎಂಬ ಪದಗಳ ಅರ್ಥ ಗೊತ್ತು ತಾನೆ ತಮಗೆ? ಹಾಗೆಯೆ ಏನು ಕುಡಿಯುವ ನೀರು ಎಂದರೂ, ನೀರು ಕುಡಿಯುತ್ತದೆಯೆ? ಒಂದು ಲೋಟ ಕುಡಿಯಲ್ಪಡುವ ನೀರನ್ನು ತಾ ಎನ್ನಬೇಕಿತ್ತು ತಾವು."

ಆ ಮಾತು ಈ ಮಾತು ಆಡಿ ತಿಮ್ಮ ಪಂಡಿತರನ್ನು ವಿಷಯದಿಂದ ದೂರ ತಂದು ಅದೆಲ್ಲಿಯೊ ಕೈಬಿಟ್ಟ. ಲೋಕಾಭಿರಾಮವಾಗಿ ಮಾತನಾಡಿ ಕ್ಷೇಮಸಮಾಚಾರಕ್ಕೆ ಬಂದ.

"ನಿಮ್ಮ ಮಕ್ಕಳು ಎಲ್ಲಿ ಸ್ವಾಮೀ, ಕಾಣುವುದೇ ಇಲ್ಲವಲ್ಲ."

"ಮಗನು ಓದಲು ಕಾಶಿಗೆ ಹೋಗಿದ್ದಾನೆ. ಮಗಳ ಲಗ್ನವಾಯಿತು, ಗಂಡನ ಮನೆಯಲ್ಲಿದ್ದಾಳೆ."

"ಆಹುದಾ? ನನಗೆ ಗೊತ್ತೇ ಇಲ್ಲ, ನಿಮ್ಮ ಮಗಳ ಮದುವೆ ಆದುದು."

"ಹೋದ ವರ್ಷವೇ ಆಯಿತಲ್ಲ? ಆಕೆಯನ್ನು ಬೆಂಗಳೂರಿಗೆ ಕೊಟ್ಟು ಮದುವೆ ಮಾಡಿದೆ."

ತಿಂಮ ಗಾಬರಿಯಾದ ; ಹಣೆ ಹಣೆ ಬಡಿದುಕೊಂಡ.

"ಏನೋ ತಿಂಮಾ, ಏನಾಯಿತೋ ?"

"ಛೆ! ತಾವು ಇಂತಹ ಮಾತನಾಡಬಾರದು, ರಾಮ ರಾಮಾ !"

"ಏಕೋ, ನಾನೇನು ಆಡಿದೆನೋ ? ನನ್ನ ಮಗಳನ್ನು ಬೆಂಗಳೂರಿಗೆ ಕೊಟ್ಟಿದ್ದೇನೆ ಎಂದೆ..."

ಕಿವಿಯ ಮೇಲೆ ಕೈ ಇಕ್ಕಿಕೊಂಡ ತಿಂಮ.

"ಅನ್ನಬೇಡಿ ಪಂಡಿತರೆ, ಆ ಮಾತನ್ನು. ಬೆಂಗಳೂರಲ್ಲಿರುವ ಒಬ್ಬ ವರನಿಗೆ ಕೊಟ್ಟಿದ್ದೀರಿ. ಇಡೀ ಬೆಂಗಳೂರಿಗೇ..."

"ಥೂ ಅವಿವೇಕಿ."

ಪಂಡಿತರು ಹೇಳದೆ ಕೇಳದೆ ಕಾಲುಕಿತ್ತಿದ್ದರು.

* * *

ಆ ಆದಿಕವಿ, ಮಹಾಕವಿ, ವರಕವಿ, ವಾಲ್ಮೀಕಿ ಆಗಲೇ ಸತ್ತುದೇ ಒಳಿತಾಯಿತು ; ಬದುಕಿದ್ದರೆ ಏನು ಗತಿ ? ಆತ್ಮಹತ್ಯ ಮಾಡಿಕೊಳ್ಳಬೇಕಿತ್ತು ಅಷ್ಟೆ, ಈ ಸಂಭಾಷಣೆಯನ್ನು ಕೇಳಿದ್ದರೆ; ಸಮಯಕ್ಕೆ ಸರಿಯಾಗಿ ಹಗ್ಗವೂ ಸಿಗದಿದ್ದಲ್ಲಿ, ಹೇಗೂ ಇದ್ದಿತಲ್ಲ ತನ್ನ ಕೈಯಲ್ಲಿಯೇ ಹನುಮನ ಬಾಲ.

"ಬಂದನಯ್ಯ ಪುಣ್ಯಾತ್ಮ, ನಾವು ಮನೆ ಕಂಡಂತೆಯೆ ಇದೆ ಇವತ್ತು. ನಾವೇ ಇಲ್ಲಿಂದ ಗಾಡಿ ಬಿಡೋಣ ನಡೆ."

"ಅವನು ಬಂದರೆ ನಿನಗೇನಯ್ಯ ಅಂಜಿಕೆ ? ಬಂದರೆ ಬರಲಿ. ಅವನೇನು ಮಾಡುತ್ತಾನೆ ?"

"ಏನು ಮಾಡುತ್ತಾನೇ ? ಮಹಾ ಭೈರಗಿಯಯ್ಯಾ ಅ ವ ನು. ರಾಮಾಯಣವನ್ನು ಸುರು ಮಾಡಿದನೆಂದರೆ ಮುಗಿಯಿತು, ಒಂದು ಡಜನ್ ಅಮೃತಾಂಜನದ ಡಬ್ಬಿಗಳಾದರೂ ಸಾಲದು."

ಆ ದಶರಥಪುತ್ರ, ಪುಣ್ಯಚರಿತ್ರ, ಶ್ರೀರಾಮನ ಕತೆಯಾದ ರಾಮಾಯಣಕ್ಕೆ ಈ ಅರ್ಥವು ಬರಬೇಕೆ! ಯಾವ ದುರ್ದೈವ—ಬರೆದ ವಾಲ್ಮೀಕಿಯದೋ, ಬರೆಯಿಸಿಕೊಂಡ ಶ್ರೀರಾಮನದೋ ?

"ಇನ್ನೂ ಸಂಬಳ ಬಂದಿಲ್ಲವೇ. ಮುಂದಿನ ವಾರದವರೆಗೂ ಬರುವಂತೆಯೂ ಇಲ್ಲ. ನಾಲ್ಕು ದಿನಗಳು ತಡೆದು ಬಾ ಎಂದು ಹೇಳು ಮನೆ ಬಾಡಿಗೆಯವನಿಗೆ."

ನನ್ನ ಮಕ್ಕಳ ಮಾತೆಯಲ್ಲಿ ಮನವಿ ಮಾಡಿಕೊಂಡೆ ದೈನ್ಯದಿಂದ.

ಮುಖ ಗಂಟು ಹಾಕಿ, ಹುಬ್ಬೇರಿಸಿ ಉತ್ತರಿಸಿಯೇ ಬಿಟ್ಟಳು ಹಿಂದೆಯೆ.

"ನನ್ನ ಕೈಯಿಂದ ಸಾಧ್ಯವಿಲ್ಲ, ಅವನಿಗೆ ಹೇಳುವುದು—"

ಪುನಃ ಸುರುವಾಯಿತಲ್ಲ ಮಾತು—ಅರ್ಥ! ನಡುವೆಯೇ ಬಾಯಿ ಹಾಕಿದೆ.

"ಕೈಯಿಂದ ಹೇಳಬೇಡವೆ, ಬಾಯಿಂದ ಹೇಳು,"

"ಹೇಗೆ ಹೇಳಿದರೂ ಅವನು ಕೇಳುವದಿಲ್ಲರೀ. ನಡುರಸ್ತೆಯಲ್ಲಿ ನಿಂತು ಬಾಯಿ ಮಾಡುತ್ತಾನೆ, ಆ ಮುಟ್ಠಾಳ. ಅವನ ರಾಮಾಯಣ ಯಾರು ಕೇಳಬೇಕು ?"

ರಾಮಾಯಣ! ಅಯ್ಯೊ, ರಾಮಾಯಣವೇ !! ನಿನಗೂ ಈ ಗತಿಯೇ !!!

ಕುಂಭಕೋಣಂ ಎಂಬ ಊರಿನ ಹೆಸರಿಗೆ ರೂಢಿಯಲ್ಲಿ ಎಂತಹ ಅರ್ಥವು ಬಂದಿದೆ ನೋಡಿ!

"ಅಲ್ಲವಯ್ಯಾ, ನೀನು ಕೆಲಸಕ್ಕೆ ಸೇರಿ ಈಗಾಗಲೆ ಹತ್ತು ವರ್ಷಗಳಾದುವು; ಇನ್ನೂ ಇಲ್ಲಿಯೇ ಅಳುತ್ತ ಕೂತಿರುವಿ. ಆ ರಾಜಗೋಪಾಲನನ್ನು ನೋಡು; ಮೂರೇ ವರ್ಷಗಳಲ್ಲಿ ಹೇಗೆ ಮೇಲೆ ಹೋದ? ನೀನು ಬಿ.ಎ., ಪಾಸು ಮಾಡಿರುವಿ, ಅದೂ ಫಸ್ಟ್ ಕ್ಲಾಸಿನಲ್ಲಿ. ಅವನಿಗೆ ಇಂಟರು ಸಹ ಆಗಿಲ್ಲ. ಕತ್ತೆಯಂತೆ ದುಡಿಯುತ್ತಿ ರಾತ್ರಿಯವರೆಗೂ ಆಫೀಸಿನಲ್ಲಿ. ಏನು ಪ್ರಯೋಜನ?"

ತಂದೆ ಒಂದು ಸಲ ಮಗನನ್ನು ಥರಾಟೆಗೆ ತೆಗೆದುಕೊಂಡರು.

ಒಂದೇ ಮಾತಿನಲ್ಲಿ ಮುತ್ತಿನಂತಹ ಉತ್ತರವನ್ನಿತ್ತು ತನ್ನ ದಾರಿಯನ್ನು ತಾನು ಹಿಡಿದ ಆ ಹುಡುಗ.

"ಸರಿ, ಚೆನ್ನಾಗಿಯೆ ಹೇಳಿದಿರಿ. ಆ ರಾಜಗೋಪಾಲ ಮಾಡುವ ಕುಂಭಕೋಣಗಳನ್ನೆಲ್ಲ ನನ್ನನ್ನೂ ಮಾಡಿ ಎಂದಿರೇನು ?"

ದಕ್ಷಿಣ ಭಾರತದ ಅಂತಹ ಒಂದು ಉಚ್ಚಮಟ್ಟದ ಕ್ಷೇತ್ರಸ್ಥಳದ ಹೆಸರಿಗೆ ಇಂತಹ ಕೆಳಮಟ್ಟದ ಅರ್ಥ ಬರಲು ಏನಾದರೂ ಕಾರಣವಿದೆಯೆ ?

ಇಲ್ಲದಿರಲು ಸಾಧ್ಯವೆ ? 'ಕುಂಭಕೋಣ ಮಾಡುತ್ತಾನೆ' ಎನ್ನುವ ಬದಲು 'ಬಳ್ಳಾರಿ ಮಾಡುತ್ತಾನೆ' ಇಲ್ಲವೆ 'ಹುಬ್ಬಳ್ಳಿ ಮಾಡುತ್ತಾನೆ' ಎನ್ನಬಹುದಿತ್ತಲ್ಲ ? ಊಹುಂ, ಸಾಧ್ಯವೇ ಇಲ್ಲ, ಕುಂಭಕೋಣಂ ಎಂದರೆ ಕುಂಭಕೋಣಂ, ಅಷ್ಟೆ. ಬೇರಿನ್ನಾವ ಊರಿಗೂ ಈ ಅದ್ವಿತೀಯ ಗೌರವ ಸಲ್ಲಲು ಸಾಧ್ಯವೆ ಇಲ್ಲ. ಭಾರತದಲ್ಲಿ (ಆಗ ಇದು ಇನ್ನೂ ಇಂಡಿಯಾ) ಮೊಟ್ಟಮೊದಲು ಫೋರ್ಜರಿ ಆದುದೇ ಕೊಯಮತ್ತೂರಿನಲ್ಲಿ ಎಂದು ಹೇಳುತ್ತಾರೆ.

ಕೊಯಕ ಎಂದರೆ ಕುಹಕ ಅಥವಾ ಕಪಟ ಎಂದು ಅರ್ಥಕೋಶ ಹೇಳುತ್ತಿದೆ. ಕೊಯಕ ಎಂಬ ಶಬ್ದಕ್ಕೆ ಈ ಅರ್ಥವು ಬರುವುದಕ್ಕೆ ಕೊಯಂಬತ್ತೂರೇ ಕಾರಣವೆಂದು ಹೇಳಿದರೆ ಕುದುರೆಯ ಮುಂದೆ ಗಾಡಿಯನ್ನು ತಂದಂತಾಗುವುದಲ್ಲವೆ ?

ಇಬ್ಬರು ಹಳ್ಳಿಗರ ಮಧ್ಯೆ ಸಾಗಿದ್ದ ಸಂಭಾಷಣೆಯೊಂದು ಆಕಾಸ್ಮಾತ್ತಾಗಿ ಕಿವಿಗೆ ಬಿದ್ದಿತು. ಒಬ್ಬ ಕೊಂಚ ಕೋಸದಲ್ಲಿದ್ದ, ಹಿರಿಯ ಇನ್ನೊಬ್ಬ ತಪ್ಪಿತಸ್ಥನಂತೆ ಮುಖಮಾಡಿದ್ದ, ಕಿರಿಯ ?

"ನಿನಗೆ ಬುದ್ಧಿ ಬರಾಕಿಲ್ಲಲೇ. ಒಂದು ಸಾವಿರ ಬಾರಿ ಏಳಿದ್ನಿ ನಿಂಗೆ, ಆ ಖದೀಮನ್ನ ಮನ್ಯಾಗೆ ಬಿಟುಗೊಳ್ಳಬ್ಯಾಡ ಅಂತ. ಮತ್ತೆ ತಂದು ತಂದು ಜಗಲೀಮ್ಯಾಗೆ ಕುಂಡ್ರಸ್ಕೋಳ್ತಿ. ನನ್ನ ಮಾತು ಅಂದರೆ ನಿನಗೆ ಆಟು ತಾಕ್ಸಾರಾನೇ ?...."

"ಅಲ್ಲ ತಿಂಮಣ್ಣಾ, ನಾನೇನು ಕರೀತೀನೆ ಆಯಪ್ಪನ್ನ, ಬಾರಪ್ಪಾ ಅಂತ ? ಅವನಾಗೆ ಬಂದ್ರೇನು ಮಾಡಾಕೆ ಆಯ್ತತೆ ? ಕುಂಡ್ರಥನ್ನೆ, ಓಗ್ಥನ್ನೆ. ಅವನೇನು ಮಾಡೋದೈತಿ ನನಗೆ ?"

"ಅವನೇನು ಮಾಡ್ತನ್ನೆ ! ಏನು ತಿಳಿದೀ ಕಣೋ, ಅವನೂ ಅಂದ್ರೆ ? ಸಕ್ಕಾ ಚಾಂಡಾಳ, ಖದೀಮ ಅವ್ನು. ಒಳಗೇ, ಏನಾರೆ ಕಾಂಗ್ರೆಸ್ಸು ಮಾಡೋ ಮಗ ಅವನು."

ಮಂಣಿನಿಂದ ಮಾನವರನ್ನು ಮಾಡಿ, ಮೂರು ಶತಮಾನಗಳಿಂದ ದಾಸ್ಯದಲ್ಲಿ ನರಳುತ್ತಿದ್ದ ರಾಷ್ಟ್ರವನ್ನು ಸ್ವತಂತ್ರವಾಗಿ ಮಾಡಿ, ನಮಗೂ ಒಂದು ಧ್ವಜವನ್ನು ಇತ್ತು, ಆತ್ಮಗೌರವದ ಅರಿವನ್ನು ಇತ್ತು, ಬಾಳು ಸಾರ್ಥಕ

ಮಾಡಿಕೊಟ್ಟ ಆ ಪೂಜ್ಯ ಬಾಪೂಜಿಯ ಕೈ ಕೂಸಾಗಿದ್ದ ಪವಿತ್ರ 'ಕಾಂಗ್ರೆಸ್' ಎಂಬ ಶಬ್ದಕ್ಕೆ ಈ ಅರ್ಥವೇ? ನಿಜವಾಗಿಯೂ ದುರ್ದೈವ—ಯಾರದು ?

ಹಳೆಯ ಮೈಸೂರಿನಲ್ಲಿ ಮಗನು ತಂದೆಯನ್ನು ಅಣ್ಣ ಎಂದು ಸಂಬೋಧಿಸುವ ವಾಡಿಕೆ ಇದೆ-ಹೊಸ ಮೈಸೂರಿನ ಹಲವು ಭಾಗಗಳಲ್ಲಿಯೂ ಇರಬಹುದು ಈ ದುರಭ್ಯಾಸ. ಲವ-ಕುಶರಿಗೆ ರಾಮ ಅಂಣನಾದರೆ, ಈ ಇಬ್ಬರು ಮಕ್ಕಳ ತಾಯಿಯಾದ ಸೀತಮ್ಮನಿಗೆ ಆ ರಾಮ ಏನಾಗಬೇಕಾಯಿತು ? ಹಿರಿಮಗ ! ತನ್ನ ತಾಯಿಯ ಗಂಡನೇನು ರಾಮ ! ಅಯ್ಯೋ ತಾಯಿಗ್ಗಂಡ !

'ಸೀತಾರಾಂ' ಅಂದರೇನು ಬಲ್ಲಿರಾ ?

"ಎಷ್ಟು ನಿಜವೋ. ಎಷ್ಟು ಸುಳ್ಳೋ ಬಲ್ಲವರಾರಯ್ಯ ? ಊರತುಂಬವಂತೂ ಅದೇ ಸುದ್ದಿ ಹರಡಿದೆ."

"ಯಾವ ಸುದ್ದಿ ?"

"ಇನ್ನಾವ ಸುದ್ದಿ, ಅದೇ. ಆ ಪುಣ್ಯಾತ್ಮ ಇವನನ್ನೂ ಚಹಾ ಪಾರ್ಟಿಗೆ ಕರೆದಿದ್ದನಂತೆ. ಇವನು ಅಲ್ಲಿಗೆ ಹೋಗಿದ್ದುದಂತೂ ನಿಜ. ಇವರೀರ್ವರ ಮಧ್ಯೆ ಹಳೆಯ ದ್ವೇಷವಿರುವದಂತೂ ಲೋಕಕ್ಕೇ ಗೊತ್ತು. ಚಹಾದಲ್ಲಿ ಒಂದೆರಡು ತೊಟ್ಟು ಅದೇನೋ ಬೆರೆಸಿ ಅವನೇ ಇವನನ್ನು ಸೀತಾರಾಂ ಮಾಡಿಬಿಟ್ಟ ಎಂಬ ಗುಜಗುಜ ಊರಲ್ಲೆಲ್ಲ ಹಬ್ಬಿ ಬಿಟ್ಟಿದೆ."

"ಅವನು ಅಂದೇ ಸತ್ತನೇನು ?"

"ಅಂದೇ ಏನು ಬಂತು. ಆಸ್ಪತ್ರೆಗೆ ಸಾಗಿಸುವ ಒಳಗಾಗಿಯೇ ಸೀತಾರಾಂ ಆಗಿಬಿಟ್ಟಿದ್ದ ಅಂದರೆ."

ಈ ಅರ್ಥ ಹುಟ್ಟಿದೆ ಸೀತಾರಾಂ ಎಂಬ ಶಬ್ದಕ್ಕೆ. ಅದಾವ ಮಹಾನುಭಾವನ ಸೃಷ್ಟಿಯೋ ಇದು : ಅವನನ್ನು ಹೆತ್ತ ತಾಯಿಯ ಹೊಟ್ಟೆ ತಣ್ಣಗಿರಲಿ. ಆಕೆ ಇನ್ನೂ ಸೀತಾರಾಂ ಆಗದೆ ಉಳಿದಿದ್ದರೆ.

* * *

"ನಾನಿನ್ನೂ ಹಾಸಿಗೆಯಲ್ಲಿ ಇದ್ದೆ, ಸಾರ್. ಆಗಲೇ ಬಂದು ಗಂಟೇ ಬಿದ್ದ ಆ ಒಂಭತ್ತು."

"ಒಂಭತ್ತು ! ಒಂಭತ್ತು ಅಂದರೆ ಯಾರಯ್ಯ ? ಅದು ಒಬ್ಬ ಮನುಷ್ಯನ ಹೆಸರೇ ?"

"ನೀವು ಈಗ ಹೇಳಿದಿರಲ್ಲ, ನಿನ್ನೆ ನಿಮ್ಮ ಮನೆಗೂ ಬಂದಿದ್ದನೆಂದು."

"ಯಾರು ಚನ್ನಬಸಪ್ಪನೇ ? ಅವನಿಗೆ ನಾವು ಮಹಾ ಭೈರಗಿ ಎನ್ನುತ್ತೇವೆ. ಒಂಭತ್ತು ಎಂದರೆ ?"

"ಒಂಭತ್ತರ ವಿಷಯ ತಮಗೆ ಗೊತ್ತಿಲ್ಲವೆಂದು ಕಾಣುತ್ತದೆ. ಒಂದು ಬಾರಿ ಅದು ಗಂಟು ಬಿದ್ದರೆ ಮುಗಿಯಿತು, ಅದು ಬಿಡುವುದೇ ಇಲ್ಲ. ಈಗ ನೋಡಿ ಸಾರ್, ಒಂಭತ್ತನ್ನು ಯಾವ ಸಂಖ್ಯೆಯಿಂದಲಾದರೂ ಗುಣಿಸಿನೋಡಿ. ಬಂದ ಗುಣಲಬ್ಧದ ಅಂಕೆಗಳನ್ನೂ ಕೂಡಿಸಿ ; ಮೊತ್ತ ಮತ್ತೆ ಒಂಭತ್ತೆ.

೯×೩ = ೨೭ ; ೨+೭ = ೯

೯×೯ = ೮೧ ; ೮+೧ = ೯

೯×೨೦ = ೧೮೦ ; ೧+೮+೦ = ೯

೯+೧೦೨ = ೯೧೮ ; ೯+೧+೮ = ೧೮ ; ೧+೮=೯."

ಅಂತೂ ಒಂಭತ್ತು ಎಂಬ ಶಬ್ದಕ್ಕೆ ನಮ್ಮ ಚನ್ನಬಸಪ್ಪನಂತಹ ಮಹಾ ಭೈರಗಿ ಎಂಬ ಅರ್ಥವು ಬಂದಿದೆ. ಸಕಾರಣವಾಗಿದೆಯಲ್ಲವೆ ?

ಕೆಲವು ಶಬ್ದಗಳಿಗೆ ಪ್ರಾದೇಶಿಕವಾಗಿ ಬೇರೆ ಬೇರೆ ವಿಶಿಷ್ಟ ಅರ್ಥಗಳಿರುವುದೂ ಉಂಟು. ತಮಿಳು ನಾಡಿನಲ್ಲಿ ಮಾತ್ರವೇ 'ಕಾಕಾಪುಡಿ' ಎಂಬ ಮಾತು ಪ್ರಯೋಗದಲ್ಲಿದೆ-ಅಲ್ಲಿ ಅದು ಹೆಚ್ಚು ಇದೆಯೋ ಏನೋ ಯಾರು ಬಲ್ಲರು?

"ಅವನಿಗೆ ಮಾತ್ರವೇ ಸಾಧ್ಯ ಸಾರ್ ಅದು. ನಮ್ಮಂಥಹವರಿಗೆ ಸ್ವಪ್ನದಲ್ಲಿಯೂ ಆಗದು."

"ಅವನಿಗೆ ಸಾಧ್ಯವಾದರೆ ನಿನಗೇಕಯ್ಯಾ ಸಾಧ್ಯವಿಲ್ಲ ? ನೀನೂ ಶ್ರಮಪಟ್ಟು ದುಡಿ. ನಿನಗೂ ಪ್ರಮೋಶನ್ ಬರುತ್ತದೆ."

"ಆ ಕಾಲ ಹೋಯಿತು, ಸಾರ್. ನಿಮ್ಮ ದುಡಿತ, ನಿಮ್ಮ ಶ್ರದ್ಧೆ ಯಾರಿಗೆ ಬೇಕು ? ಈಗ ಬೇಕಾದುದು ಒಂದೇ—ಕಾಕಾಪುಡಿ."

ಈ 'ಕಾಕಾಪುಡಿ' ಎಂಬ ತಮಿಳು ಶಬ್ದವನ್ನು ಕನ್ನಡದಲ್ಲಿ ಹೇಗೆ ಭಾಷಾಂತರಿಸಿದರೂ ತೃಪ್ತಿಯೇ ಆಗುವುದಿಲ್ಲ. ಮರ್ಜಿ ಹಿಡಿಯುವುದು ಎನ್ನಬೇಕು-ಮರ್ಜಿಯೂ ಕನ್ನಡವಲ್ಲ-ಅದೂ ಸಪ್ಪೆಯೇ. ಹಲ್ಲು ಕಿರಿಯುವುದು, ಮುಂಗೈ ತಿಕ್ಕಿಕೊಳ್ಳುವುದು, ಅವರ ಹಿಂದೆಯೇ ಸುತ್ತಾಡುವದು, ಅವರು ನಕ್ಕಾಗ ತಾನು ನಕ್ಕು, ಅವರು ಅತ್ತಾಗ ತಾನೂ ಅತ್ತು, ಆನೆ ಇರಿಬಿಯಕಿಂತ ಬಹು

ಚಿಕ್ಕದು ಎಂದು ಅವರು ಅಂದರೆ, ಅಹುದು ಸಾರ್ ವಿಪರೀತ ಚಿಕ್ಕದ್ದು ಎಂದು, ಈ ಬೆಳುದಿಂಗಳು ಚೆನ್ನಾಗಿದೆ ಎಂದು ಅವರು ಮಟಮಟ ಮಧ್ಯಾಹ್ನದಲ್ಲಿ ಹೇಳಿದರೆ, ಅಹುದು ಸಾರ್ ಹಿಟ್ಟು ಚೆಲ್ಲಿದ ಹಾಗಿದೆ ಎಂದು ತಾನೂ ಅಂದು, ಇತ್ಯಾದಿ ಇತ್ಯಾದಿಗಳನ್ನು ಕಾರ್ಯಸಾಧನೆಗಾಗಿ ಮಾಡುವುದಕ್ಕೆ 'ಕಾಕಾಪುಡಿ' ಎನ್ನುವ ಅರ್ಥ ಬಂದಿದೆ ಕನ್ನಡದಲ್ಲಿ ಈ ಮಹಾ ತಪಸ್ಸಿಗೆ ಒಂದೇ ಒಂದು ಶಬ್ದವಿಲ್ಲ–ಕನ್ನಡಿಗರಲ್ಲಿ ಈ 'ಕಾಕಾಪುಡಿ'ಯೇ ಕಡಿಮೆ ಎಂದು ಕಾಣುತ್ತದೆ. ಇದರ ಶಬ್ದಾರ್ಥವಂತೂ ಬಹು ಸ್ವಾರಸ್ಯವಾಗಿದೆ.

ಕಾಕಾ ಅಂದರೆ ಕಾಗೆ, ಪುಡಿ ಎಂದರೆ ಹಿಡಿ. ಕಾಗೆ ಹಿಡಿಯುವದು ಎಂದರೇನು ? ಎಂದಾದರೂ ತಾವು (ಕ್ಷಮಿಸಿ ದಯವಿಟ್ಟು) ಕಾಗೆ ಹಿಡಿದಿದ್ದೀರಾ ? ಇಲ್ಲವೆ ? ಯಾರಾದರೂ ಹಿಡಿಯುವುದನ್ನು ನೋಡಿದ್ದೀರಾ ? ಅದೂ ಇಲ್ಲವೇ ? ಹಾಗಾದರೆ ಈ ಮಾತಿನ ಅರ್ಥವಾಗುವುದು ಬಹು ಕಷ್ಟ.

ಕಾಲಿನ ಸದ್ದು ಆಗದಂತೆ, ಮೆಲ್ಲನೆ ಹೆಜ್ಜೆಯ ಮೇಲೆ ಹೆಜ್ಜೆ ಇಕ್ಕುತ್ತ, ಹಾಗೆಯೆ ಅದನ್ನು ಹಿಂಬಾಲಿಸಬೇಕು. ಅದು ಥಟ್ಟನೆ ಹಾರಿದಂತೆ ಮಾಡಿ, ಕುಣಿಯುತ್ತ, ಗೋಣು ಹೊರಳಿಸಿ ಸೋಗು ಮಾಡುತ್ತ ಮುಂದೆ ಹೋಗಿ ಮತ್ತೆ ಕೂಡುತ್ತದೆ. ಅದನ್ನು ಪುನಃ ಬೆನ್ನು ಹತ್ತಬೇಕು, ಹಾಗೆಯೆ. ಈ ಮಹಾ ಕಾರ್ಯವೇನು ಅಷ್ಟು ಸುಲಭವೆ ? ಎಲ್ಲರಿಗೂ ಸಾಧ್ಯವೆ ? ಶ್ರದ್ಧೆಯಿಂದ, ದಕ್ಷತೆಯಿಂದ, ಶ್ರಮವಹಿಸಿ ದುಡಿಯಲಾರದವನಿಗೂ ದೊರೆಯಲಾರದ ಪ್ರಮೋಶನ್ (ಬಡತಿ), ತನ್ನ ಮೇಲಧಿಕಾರಿಗಳಿಗೆ 'ಕಾಕಾಪುಡಿ' ಮಾಡಿದರೆ ದೊರೆಯುತ್ತದೆ ಎಂದು ಅವನ ಅರ್ಥ. ಇದು ಕಾಕಾಪುಡಿ !

ಮಾತಿಗೂ, ಅರ್ಥಕ್ಕೂ ಸಂಬಂಧವು ಅದೆಷ್ಟೂ, ಇರದಿರುವುದು ಬೈಗಳಲ್ಲಿ. ಬೈಯುವಾಗ ಶಬ್ದಾರ್ಥ ಮಾಡಿಕೊಳ್ಳುತ್ತ ಕೂಡಲು ಯಾರಿಗೆ ತಾನೆ ಸಾಧ್ಯ ?

"ಹತ್ತು ಗಂಟೆಯಾದರೂ ಇನ್ನೂ ನಿದ್ರೆ ಮುಗಿಯಲಿಲ್ಲವೇನೋ, ತಿಂಮಾ ? ರಾತ್ರಿ ಉಂಡ ಕೂಡಲೆ ಎಂಟು ಗಂಟೆಗೇ ಮಲಗಿದೆಯಲ್ಲವೋ. ಇದೇನು ನಿದ್ರೆಯೋ, ಕುಂಭಕರ್ಣನ ಮಗ ನೀನು."

ತಾಯಿ ಒಟಗುಟ್ಟಿದ್ದಳು.

ತಿಂಮನ ತಂದೆ ಕಣ್ಣು ಕಿಸಿದ, ಕೋಪದಿಂದ.

"ಏನೇ, ನನ್ನನ್ನು ಕುಂಭಕರ್ಣ ಎಂದು ಬೈಯುತ್ತೀಯಾ ? ಇಡೀ ರಾತ್ರಿಯಲ್ಲಿ ಮೂರು ಗಂಟೆ ಸಹ ಮಲಗಿಲ್ಲ ನಾನು...."

ತಿಮ್ಮನ ತಂದೆಗೆ ಬುದ್ಧಿ ಇದೆ ಎನ್ನಬೇಕೆ ?

ಹಾಗಾದರೆ ಕುಂಭಕರ್ಣನ ಮಗನಾರು ? ಯಾರಿಗೆ ಗೊತ್ತು ಯಾವನೋ ಲಂಬಕರ್ಣ.

ನನ್ನ "ಏಕೋದರರು" ಎಂಬೊಂದು ರೇಡಿಯೋ ಪ್ರಹಸನ ಹೀಗೆ ಆರಂಭವಾಗುತ್ತದೆ. ತಮ್ಮ ಅಂಣನನ್ನು ಬೈಯುತ್ತಾನೆ.

"ನನ್ನ ತಾಯಿಯನ್ನು ಕತ್ತೆಯೆಂದು ಬಯ್ಯುತ್ತೀಯಾ, ಕತ್ತೇ ಮಗನೆ..."

ಇಂತಹ ಸುಪುತ್ರರಿಗೆ ಜನ್ಮವಿತ್ತ ತಾಯಿಯನ್ನು ಕತ್ತೆ ಎಂದರೆ ಯಾರನ್ನು ಬೈದಂತಾಯಿತು—ಆ ತಾಯಿಯನ್ನೋ, ಕತ್ತೆಯನ್ನೋ !

ಬೈಯುವ ಮಾತಿಗೆಲ್ಲ ಶಬ್ದಾರ್ಥ ಹುಡುಕುವದುಂಟೆ ? ಜಗತ್ತಿನಲ್ಲಿರುವ ಎಲ್ಲ ಬೈಗಳಿಗೂ ಇರುವದು ಒಂದೇ ಒಂದು ಅರ್ಥ ಬೈ=ಬೈ !

ತಿಮ್ಮನ ಪರಿಚಿತರಲ್ಲಿ ಒಬ್ಬ ಸುಸಂಸ್ಕೃತ ಸತ್ಪುರುಷರಿದ್ದರು. ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡಿದ್ದ ಆ ಶಾಸ್ತ್ರಿಗಳು ಜಾಣರೂ ಅಹುದು ; ಆದರೆ ಬೈಗಳಿಗೆಲ್ಲ ಶಬ್ದಾರ್ಥವನ್ನು ಮಾಡಿಕೊಂಡು ತುಂಬ ಪೇಚಿನಲ್ಲಿ ಬೀಳುತ್ತಿದ್ದರು. ಅದು ಅವರ ಸ್ವಭಾವ. ಕೊಂಚ ಶೀಘ್ರ ಕೋಪಿಗಳು ಕೂಡ ಅಹುದು ಅವರು. ದಿನಕ್ಕೆ ಇಪ್ಪತ್ತು ಸಲ ಮಡದಿಯ ಮೇಲೆ ರೇಗಿಕೊಳ್ಳುತ್ತಿದ್ದರು. ಆದರೆ ಏನೆಂದು ಬೈಯ್ಯುವುದು ? ನಿಜವಾದ ಧರ್ಮಸಂಕಟ. ಬೈಯದಲೆಯೆ ಕುಳಿತರೆ ಕೋಪವು ಶಮನವಾಗುವದೆಂತು ? ಅಹುದು, ಬೈಯಲೇ ಬೇಕು-ಆದರೆ ಏನೆಂದು ?

ಮತ್ತೆ ಅದೇ, ಕತ್ತೆ ಎನ್ನಬೇಕು. ಆಗ ತಾವು ? ಬರೀ ಪಶುಪತಿಯಷ್ಟೇ ಅಲ್ಲ-ಗಾರ್ದಭಪತಿ ! ಬೇರಿನ್ನೇನು ಇದೆ ? ಕೀಳುಮಟ್ಟದವರಂತೆ ರಂಡೆ, ಮುಂಡೆ ಎನ್ನಬೇಕು. ಆಗ ತಾವೇ, ಢಂ.

"ನಿನ್ನ ಮುಖಕ್ಕೆ ಬೆಂಕಿ ಇಕ್ಕ."

ಮರುದಿನದಿಂದ ತಾವೇ ಅಡುಗೆ ಒಲೆಯ ಮುಂದೆ ಬಗ್ಗಬೇಕಾಗುತ್ತದೆ. ಇನ್ನೊಂದು ಲಗ್ನವಾಗುವ ವಯಸ್ಸೂ ದಾಟಿದನಂತರ ಇದ್ದೊಬ್ಬೇ ಹೆಂಡತಿ

ಯನ್ನೂ ಕಳೆದುಕೊಂಡು ಮಾಡುವುದೇನಿದೆ ? ಇದಾವುದೂ ಬೇಡವೇ ಬೇಡ ಎಂದು ಬರೀ 'ನಿನ್ನ ಮುಖ ನಿನ್ನ ಮುಖ' ಎಂದಿಷ್ಟೆ ಅನ್ನುತ್ತ ಕೂಡುತ್ತಿದ್ದರು. ಕೋಪವು ಇಳಿಯುವವರೆಗೂ.

ಮಾಮೂಲು ಮಾತುಗಳ ಪೀಕಲಾಟವೇ ಹೀಗೆ ಇರುವಾಗ ಇನ್ನು ಸಂಕೇತ ಶಬ್ದಗಳ ಸ್ವಾರಸ್ಯ ಹೇಗಿರಬೇಡ ? ಇದರ ಮಾದರಿಯನ್ನು ನೋಡೋಣ.

"ಬಹು ದಿನಗಳಿಂದ ಕರೆಯುತ್ತಲಿರುವಿ, ಪಾಪ ! ನಾಳೆ ಹೇಗೂ ರಜೆ; ನಿನ್ನ ಊರಿಗೆ ಬರುತ್ತೇನೆ. ಏನು ಅಡಿಗೆ ಮಾಡಿಸುತ್ತಿ, ಹೇಳು."

"ತಾವು ಏನು ಅಪ್ಪಣೆ ಕೊಡಿಸಿದರೆ ಆದು, ಸ್ವಾಮಿ. ಆದರೆ ಸೈಕಲ್ ಮಾತ್ರ ಬಿಟ್ಟು–ಅದು ಒಂದು ನಮ್ಮಲ್ಲಿ ದೊರೆಯುವುದಿಲ್ಲ."

"ಅರೆ ! ನಿನ್ನ ಮನೆಯಲ್ಲಿಯೇ ಇದ್ದುವಲ್ಲ ?"

"ಆ ಕತೆ ಬೇರೆ ಬಿಡಿ. ಒಂದಕ್ಕೆ ರೋಗ ಬಂದರೆ ಮುಗಿಯಿತು ! ಎಲ್ಲವೂ ಫೈಸಲ್. ಒಂದೂ ಉಳಿಯದಂತೆ ಸತ್ತು ಹೋದವು."

ಸೈಕಲ್ ಸಾಯುವುದೆಂದರೇನು ! ಈ ಸಂಕೇತ ಭಾಷೆ ಅರಿಯದವರು ಕಕ್ಕಾಬಿಕ್ಕಿಯಾಗುತ್ತಾರೆ.

"ಮೋಟಾರ್ ಮಾತ್ರ ಅನುಗಾಲವೂ ರೆಡಿ, ಸ್ವಾಮೀ."

"ಮೋಟಾರ್ ಎಂದು ಹೇಳಿ, ಮತ್ತೆ ಲಾರಿ ತರಿಸಬೇಡಯ್ಯ."

ಛೆ ! ಉಂಟೆ ಎಲ್ಲಿಯಾದರೂ ? ನಮ್ಮ ಮನೆಯ ಕಾಂಪೌಂಡಿನಲ್ಲಿಯೆ ಲಾರಿ ಬರುವಂತಿಲ್ಲವಲ್ಲ ?"

"ಅಲ್ಲವಯ್ಯಾ, ಇಷ್ಟು ಊರುಗಳನ್ನು ಸುತ್ತುತ್ತಿ, ಒಂದು ಹಡಗವನ್ನು ತರಲಾರೆಯಾ ?"

"ನಿಮ್ಮದು ಚೆನ್ನಾಗಿದೆ, ಸ್ವಾಮಿ. ಅದೇನೋ ಹೇಳುತ್ತಾರಲ್ಲ ಹಾಗಿದೆ ನಿಮ್ಮ ಮಾತು, ಕುಡಿಯಲು ನೀರು ಸಿಗುವಂತಿಲ್ಲ ಸುತ್ತುಮುತ್ತಲೂ. ಇನು ಹಡಗ ಎಲ್ಲಿಂದ ಬಂದೀತು, ಅಲ್ಲ ಸ್ವಾಮೀ, ನಿಮಗೆ ಏರೋಪ್ಲೇನ್ ಇಷ್ಟವೆ ?"

ಹುಟ್ಟಿನಿಂದಲೂ ಜುಟ್ಟಿನಿಂದಲೂ ಸಸ್ಯಾಹಾರಿಗಳಾದರೂ ಸತ್ಸಹವಾಸದಿಂದಲೋ ಸ್ವಂತ ಅಭಿರುಚಿಯಿಂದಲೋ ಮಾಂಸಾಹಾರಿಗಳಾದ ಹಲ ಕೆಲವು ಬ್ರಾಹ್ಮಣ, ವೀರಶೈವ ಮತ್ತಿತರ ಪುಣ್ಯಾತ್ಮರು ತಮ್ಮ ತಮ್ಮ ಅನುಕೂಲಕ್ಕಾಗಿ ಸೃಷ್ಟಿಸಿದ ಸಂಕೇತ ಭಾಷೆ ಇದು. ಬಲ್ಲವನೇ ಬಲ್ಲ ಈ ಮರಕೋಶವನ್ನು !

ಸೈಕಲ್ಲು, ಮೋಟಾರು, ಲಾರಿ, ಹಡಗ, ಏರೋಪ್ಲೇನು ಎಂದರೆ ಕ್ರಮ ವಾಗಿ ಕೋಳಿ, ಕುರಿ, ದನ, ಮೀನು, ಹಕ್ಕಿ ಎಂದರ್ಥ.

ಪಾನಪ್ರತಿಬಂಧ ಕಾಯದೆ ಇರುವಲ್ಲಿಯೂ ಇದರಂತೆಯೇ ಒಂದು ಭಾಷ್ಯ ಇದೆ ಪ್ರೈವೇಟ್ ಕುಡುಕರ ಕೋಶದಲ್ಲಿ.

ವಿಷ್ಣು, ಬ್ರಾಹ್ಮಣ, ಮಹಾಬ್ರಾಹ್ಮಣ, ಜನಾರ್ಧನ, ವಿನಾಯಕ, ಬೃಹಸ್ಪತಿ, ರಾಮಂಣ. ಇನ್ನೂ ಒಂದಿದೆ ಗಾಂಧಿ—ಇದನ್ನು ಘಾಂಧಿ ಎಂದು ಉಚ್ಚರಿಸುವವರೇ ಹೆಚ್ಚು, ಆ ದೇಶೀ ಭಕ್ತರುಗಳಲ್ಲಿ. ವ್ಹಿಸ್ಕಿ, ಬ್ರಾಂಡಿ, ದೊಡ್ಡ ಬಾಟಲ್ ಬ್ರಾಂಡಿ, ಜಿನ್ನು, ವೈನು, ಬೀರು, ರಂ ಮತ್ತು ಭಟ್ಟಿ ಸರಾಯಿ ಎಂದು ಇದ್ದಕ್ಕಿದ್ದಂತೆ ಸ್ಪಷ್ಟವಾಗಿ ಮಾತನಾಡಿದರೆ ಅಧಿಕಾರಿಗಳು ಬಿಟ್ಟಾರೆಯೇ-ಹಿಡಿದೇಬಿಡುತ್ತಾರೆ, ನಮಗೂ ಕೊಂಚ ಕೊಡಿ ಎಂದು ?

* * *

ಶಬ್ದಕ್ಕೂ ಅರ್ಥಕ್ಕೂ ಇರುವ ಸಂಬಂಧದಲ್ಲಿ ಇನ್ನು ಶಬ್ದದ ಬರೆವಣಿಗೆ ಯಲ್ಲಿ ತಪ್ಪುಗಳಾದರೆ ಕೇಳುವದೇನು ?

ಒಂದು ವೃತ್ತ ಪತ್ರಿಕೆಯಲ್ಲಿ ಈ ಜಾಹಿರಾತು :

"ನಿಮಗೆ ಸುಖ ಮತ್ತು ಶಾಂತಿ ಬೇಕೋ ? ಹಾಗಾದರೆ ಕಾಂಗ್ರೆಸ್ ಬಿಡಿ."

ಏನಿರಬಹುದು ಇದರ ಅರ್ಥ ಎಂದು ಅರ್ಥಗಂಟೆ ಯೋಚಿಸಿದೆ. ಸುಖ ಮತ್ತು ಶಾಂತಿ ಇಂದು ದೊರೆಯುತ್ತಿರುವುದೇ ಕಾಂಗ್ರೆಸ್ಸಿನಿಂದ, ಅನೇಕರಿಗೆ. ಕಾಂಗ್ರೆಸ್ ಬಿಡಿ ಎಂದೇಕೆ ಹೇಳುತ್ತಿದೆ ಈ ಜಾಹೀರಾತು ? ಒಂದೇ ಒಂದು ದೀರ್ಘ ಬಿಟ್ಟು ಹೋದುದರಿಂದ ಈ ಪ್ರಮಾದ-ಕಾಂಗ್ರೆಸ್ ಬಿಡಿ ಅಲ್ಲ ಅದು, ಕಾಂಗ್ರೆಸ್ ಬೀಡಿ !

ಅಷ್ಟೇಕೆ ? ಮೊನ್ನೆ ಮೊನ್ನೆ ಒಬ್ಬ ಮಹಾನುಭಾವರು ಚುನಾವಣೆಯಲ್ಲಿ ಸ್ಪರ್ಧಿಸಿ, ಹುರಿಯಾಳಾಗಿ ನಿಂತು ಒಂದು ಮಾದರಿಯ ಕರಪತ್ರವನ್ನು ಹಂಚಿ ದರು. ಅದರಲ್ಲಿಯ ಕಡೇ ವಾಕ್ಯವು ಇಷ್ಟೇ : "ಪವಿತ್ರವಾದ ನಿಮ್ಮ ಎರಡೂ ಮಗಳನು ನನಗೇ ಕೊಡಿ ; ನನ್ನದು ಕಾಡುಕೋಣದ ಗುರುತು."

ಎಷ್ಟು ಸಂತೋಷದಿಂದ ಕೊಡಬೇಕು ಮಗಳನ್ನು, ಇವನ ಗುರುತನ್ನು ಗುರುತಿಸಿದ ಮೇಲಂತು !

'ಮತಗಳನ್ನು' ಎಂಬಲ್ಲಿಯ 'ತ' ಇಲ್ಲದಾಗಿದೆ.

ನಮ್ಮೂರಲ್ಲಿಯ ಪೇಟೆಯಲ್ಲಿ ಒಂದು ಅಂಗಡಿಯ ಮುಂದೆ ಹಳೆಯ ದೊಂದು ಬೋರ್ಡು ನೇತಾಡುತ್ತಿದ್ದಿತು ; ದೊಡ್ಡ ಅಕ್ಷರಗಳು.

"ಖಾದೀ ಭಂಡರು."

ಕನ್ನಡ ಬಾರದ ತೆಲುಗು ಮನುಷ್ಯ ಬರೆದಿದ್ದನಂತೆ 'ಖಾದೀ ಭಂಡಾರ'ದ ಬೋರ್ಡನ್ನು !

ಇಷ್ಟು ಮಾತು ಆಯಿತು, ಅರ್ಥ ? ದೇವನೇ ಬಲ್ಲ ಎನ್ನುತ್ತೇವೆ. ಅವನಾದರೂ ಬಲ್ಲನೋ ಇಲ್ಲವೋ ಯಾರಿಗೆ ಗೊತ್ತು ? ಅಂತೂ ಮಾತಿಗೆ ಮಾತು–ಅರ್ಥಕ್ಕೆ ಅರ್ಥ, ಅನರ್ಥ !

ಕನಸುಗಾರರು

ಎಸ್. ಅನಂತನಾರಾಯಣ

ವಸಂತಳ ಮುನಿಸು ನನಗೆ ಅರ್ಥವೇ ಆಗಲಿಲ್ಲ !

ನಮ್ಮದು ಹೊಸಜತೆ. ಈಚೆಗಿನ್ನೂ ಸಪ್ತಪದಿ ಸುತ್ತಿದುದು. ಮದುವೆಯಾಗಿ ಇನ್ನೂ ಕೆಲವೇ ತಿಂಗಳಾಗಿತ್ತು. ನಮ್ಮಿಬ್ಬರ ಒಲವು ಮಾತ್ರ ಯುಗಯುಗಗಳ ಆಳದ್ದು. ಇನ್ನೂ ನಮ್ಮ ಮನೆಗೆ ಕರೆತಂದಿರಲಿಲ್ಲ. ಆದರೆ ವಾರಕ್ಕೊಮ್ಮೆಯೋ ಎರಡು ಬಾರಿಯೋ ಅವಳನ್ನು ಕಾಣಲು ನಾನು ಬರುತ್ತಿದ್ದೆ. ಎಂದಿನಂತೆ ನಗುನಗುತ್ತ ಹೂವಾಗಿ ಬಳುಕುತ್ತಾ ಬೆಡಗು ಸುರಿಸುವ ವಸಂತ ಈ ದಿನ ಮಾತ್ರ ಮುನಿಸಾಗಿದ್ದಳು. ನನಗಂತೂ ಅವಳ ಮುನಿಸು ಅರ್ಥವೇ ಆಗಲಿಲ್ಲ.

ಎಷ್ಟೆಷ್ಟು ಪ್ರಯತ್ನಪಟ್ಟರೂ ಅವಳು ಮೌನ ಮುರಿಯಲಿಲ್ಲ. ಮಾತು ಬರಲಿಲ್ಲ. ನಮ್ಮ ಪ್ರೇಮ ಕಂಡು ಆಗದವರ ಹೊಟ್ಟೆಯುರಿಯ ಹೊಗೆ ತಾಗಿ ಹೀಗೆ ಮಂಕಾದಳೋ ಎಂದು ನನಗೆ ಗಾಬರಿಯಾಯಿತು. ಕೊನೆಗೆ ಏನೇನೋ ಸಮಾಧಾನದ ಮಾತಾಡಿದ ಮೇಲೆ ಅವಳ ಕೋಪವೆಲ್ಲ ಕಣ್ಣೀರಾಯಿತು, ನನ್ನೆದೆಯ ಮೇಲೊರಗಿ ಬಿಕ್ಕಿಬಿಕ್ಕಿ ಅತ್ತಳು. ಅತ್ತು ಸಮಾಧಾನಗೊಳ್ಳಲಿ ಎಂದು ನಾನೂ ತಲೆಯ ಕುರುಳನ್ನು ನೇವರಿಸುತ್ತ ಸುಮ್ಮನಿದ್ದೆ. ಮುಗ್ಧೆ ! ಕಣ್ಣೀರು ಹರಿಸುತ್ತ ಬಿಕ್ಕುವ ದನಿಯಲ್ಲಿ "ನಾನು ನಿಮಗೆ ಬೇಡವಾಗಿದ್ದರೆ ಯಾಕೆ ಮದುವೆಯಾಗಬೇಕಾಗಿತ್ತು" ಎಂದಳು. ನನಗಂತೂ ದಿಕ್ಕೇ ತೋಚಲಿಲ್ಲ. ಯಾರು ತಾನೆ ಚಾಡಿ ಹೇಳಿರಬಹುದು. ಇಂತಹ ಮಾತಿಗೆ ಅವಕಾಶವೇ ಇಲ್ಲವಲ್ಲ. ಇದೆಲ್ಲಿಯ ಗ್ರಹಚಾರ ಬಂತಪ್ಪಾ ಎಂದು ನಾನು ವಿಲವಿಲನೆ ಒದ್ದಾಡಿದೆ ವಸಂತ ಮತ್ತೆ ಕೊಂಚ ಅತ್ತು "ನನ್ನನ್ನು ಒಪ್ಪಿದುದು ಇದಕ್ಕೇನೇ ?' ಎಂದಳು. ಯಾರನ್ನೂ ಒಪ್ಪದ ನಾನು ಇವಳ ಬಲೆಗೆ ಬಿದ್ದೆನಲ್ಲಾ ಎಂದು ನಮ್ಮ ತಾಯಿ ಹಾಸ್ಯಮಾಡುತ್ತಿದ್ದರು. ಅಂತಹ ಚೆಲುವೆ ವಸಂತ. ಮತ್ತೆ ಇದೆಂತಹ ಮಾತು. "ನಿಮ್ಮ ಅಭಿಪ್ರಾಯದಲ್ಲಿ

ನಾನಷ್ಟು ಕುರೂಪಿ-ಅಸಹ್ಯವಾಗಿದ್ದರೆ ನನ್ನನ್ನೇಕೆ ಒಪ್ಪಿದಿರಿ? ಯಾಕೆ ಮದುವೆಯಾದಿರಿ?" ಎಂದು ಮತ್ತೆ ಮತ್ತೆ ಬಿಕ್ಕಿಬಿಕ್ಕಿ ಅಳಲಾರಂಭಿಸಿದಳು, ನನ್ನ ಬುದ್ಧಿಯನ್ನೆಲ್ಲಾ ಖರ್ಚುಮಾಡಿದ ಮೇಲೆ, ನನ್ನ ಜೇಬಿನಲ್ಲಿ ಅವಳಿಗಾಗಿ ತಂದಿದ್ದ ಕೊಬ್ಬರಿಮಿಠಾಯಿಯ ಪೊಟ್ಟಣ ಖಾಲಿಯಾದ ಮೇಲೆ, ಕೊಂಚ ಕೊಂಚವಾಗಿ ಕಾರಣ ಹೊರಬಿತ್ತು.

ಹಿಂದಿನ ಸಂಜೆ ನಾನು ವಸಂತಳನ್ನು ಕಾಣಲು ಹೋಗಿದ್ದಾಗ ಬಹಳ ಹಿಗ್ಗಿನಿಂದ ಕುಣಿಯುತ್ತಿದ್ದಳು. ಅವಳ ಹಿಗ್ಗು ಕಣ್ಣಿನಿಂದ ತುಳುಕಿ ತುಟಿಗಳಿದು ನನ್ನ ತುಟಿಗೆ ಸಾಗಿಬಂದಿತ್ತು. ಆ ಆನಂದದಲ್ಲಿ ನಾನು ದೊಡ್ಡ ಕವಿಯಾಗಿಬಿಟ್ಟೆ. ಅವಳನ್ನು ಕಾವ್ಯಲಹರಿಯಲ್ಲಿ ಸೌಂದರ್ಯದ ಅಧಿದೇವತೆಯೆನಿಸಿ ಹೊಗಳಿಕೆಯ ಹಾಯಿಹಡಗಿನಲ್ಲಿ ಕೂರಿಸಿ ತೇಲಿಸಿದೆ. ನಿನ್ನ ಕಣ್ಣುಗಳು ಮೀನುಗಳಂತಿವೆ, ನಿನ್ನ ಮುಖ ಚಂದ್ರನಂತಿದೆ, ನಿನ್ನ ಎಳಸು ಮೂಗು ಸಂಪಿಗೆಯ ಮೊಗ್ಗಿನಂತಿದೆ, ಹುಬ್ಬುಗಳು ಬಾಗಿದ ಕಬ್ಬಿನಜಲ್ಲೆಯಂತಿವೆ. ಅದೂ ಕಾಮನಬಿಲ್ಲಿನ ಆಕಾರ! ಮೈ ಬಳ್ಳಿಯಂತೆ ಬಳುಕುತ್ತಿದೆ, ಹಸುರು ರವಿಕೆ ತೊಟ್ಟ ಕಮಲದ ಮೊಗ್ಗಿನಂತಿದೆ. ನೀಳವಾದ ಕೂದಲು ಹಾವಿನಂತಿದೆ, ಹೀಗೆಲ್ಲಾ ಕವಿಗಳ ಹಾಗೆ ಉಪಮಾನಗಳನ್ನು ಕೊಟ್ಟು ಅವಳನ್ನು ಬಣ್ಣಿಸಿದೆ. ತುಟಿಗಳು ಕಳಿತ ತೊಂಡೆಹಣ್ಣಿನಂತಿವೆ, ಕಿತ್ತಲೆ ಹಣ್ಣಿನಂತಿದೆ ಕೆನ್ನೆಯೆಂದು ಹೇಳುವುದನ್ನೂ ಮರೆಯಲಿಲ್ಲ. ಆ ಹೊಗಳಿಕೆಯೆಲ್ಲ ಅಮೃತದುಣಿಸಾಯಿತು ಅವಳಿಗೆ. ನನ್ನಂತಹ ಚಲುವೆ ಜಗತ್ತಿನಲ್ಲೇ ಇಲ್ಲವೆಂದು ಅವಳಿಗೆ ಅನಿಸಿತು. ಅವಳ ಹಿಗ್ಗು ನನ್ನ ಭಾಗ್ಯ! ನಾನೂ ನನ್ನಂತಹ ಕವಿಯಿನ್ನಿಲ್ಲವೆಂದು ಬೀಗಿದೆ! ಮತ್ತೆ ಮರುದಿನ ಬರುವುದಾಗಿ ಹೇಳಿ ಮನಸ್ಸಿಲ್ಲದ ಮನಸ್ಸಿನಿಂದ ಅಲ್ಲಿಂದ ಕಾಲುಕಿತ್ತೆ!

ರಾತ್ರಿಯೆಲ್ಲಾ ಮಲಗುವ ಮೊದಲು ನನ್ನ ಹೊಗಳಿಕೆಯ ಗುಂಗಿನಲ್ಲೇ ಇದ್ದಳು ವಸಂತ. ನಾನು ಕೊಟ್ಟ ವರ್ಣನೆಯನ್ನೆಲ್ಲಾ ಮನಸ್ಸಿನಲ್ಲೇ ಚಪ್ಪರಿಸಿಕೊಳ್ಳುತ್ತಿದ್ದಂತೆಯೇ ಹಾಗೆಯೇ ನಿದ್ರೆಬಂತು. ಆಗಲೇ ಕನಸು ಬಿದ್ದುದು, ನಾನು ಹೇಳಿದ್ದ ವರ್ಣನೆಯೇ ಕನಸಾಗಿ ಅವಳನ್ನು ಭಯಗೊಳಿಸಿದುದು ಹಾವು, ಕಮಲ, ಕಬ್ಬಿನಜಲ್ಲೆ, ಮೊಸಳೆ, ಮೀನು, ಬಳ್ಳಿ ಮುಂತಾದುವೆಲ್ಲ ಸೇರಿ ಕನಸಿನಲ್ಲಿ ಕಂಡ ರೂಪು ಭಯಾನಕವಾಗಿತ್ತು. ಹೊಗಳುವ

ಸೋಗಿನಲ್ಲಿ ನಾನು ಅವಳನ್ನು ತೆಗಳಿದೇನೆ. ಅವಳನ್ನು ಕಂಡರೆ ನನಗೆ ದ್ವೇಷ. ನನ್ನ ದೃಷ್ಟಿಯಲ್ಲಿ ಅವಳು ಕುರೂಪಿ ಎಂದೆಲ್ಲ ಅವಳಿಗೆ ಈ ಕನಸಿನಿಂದ ಅನಿಸಿತು. ಹೀಗಾಗಿ ನಾನು ಕವಿಯಾಗಲು ಬಯಸಿ ಕಪಿಯಾದೆ. ನನ್ನ ಪ್ರಣಯದ ಜಗತ್ತನ್ನು ಈ ಕನಸು ಒಂದೇ ಬಾರಿಗೆ ಒಡೆಯಿತು. ಈ ಕನಸಿನ ಶಕ್ತಿ ಅಂತಹುದು! ಅವಳನ್ನು ಸಮಾಧಾನಗೊಳಿಸಲು ನಾನು ಪಟ್ಟ ಕಷ್ಟ ನನಗೇ ಗೊತ್ತು. ಅಂದಿನಿಂದ ಏನೇ ಆಗಲಿ ಅವಳನ್ನು "ನೀನು ಚೆಲುವೆ" ಎಂದಷ್ಟೇ ಹೇಳುವೆನೇ ಹೊರತು "ನೀನು ಕಡಲಿನ ಹಾಗೆ, ಆಕಾಶದ ಹಾಗೆ" ಎಂದೆಲ್ಲ ಹುಚ್ಚುತನದ ಮಾತಿಗೆ ಹೋಗುವುದಿಲ್ಲ. ಇಷ್ಟಕ್ಕೂ ಪ್ರೇಮದ ಅತಿಮಧುರ ಮಾತು ಮೌನವೇ ಅಲ್ಲವೆ! ನಿಮ್ಮಲ್ಲಿ ಯಾರಾದರೂ ನಿಮ್ಮ ಒಲವಿನ ಹುಡುಗಿಯನ್ನು ಕವಿತನದಿಂದ ಹೊಗಳಲು ಹೋದೀರಿ, ಜೋಕೆ!

ಕನಸಿನ ಶಕ್ತಿ ಎಂತಹುದೆಂದರೆ ಜೀವನವನ್ನೆ ತಲೆಕೆಳಕು ಮಾಡಿಬಿಡುತ್ತದೆ. ಇದೇ ನನ್ನ ಜೀವನ ಒಂದೇ ಒಂದು ಕನಸಿನಿಂದ ಒಡೆದು ಹೋಗುವುದರಲ್ಲಿತ್ತು. ಕನಸಿನ ಈ ಶಕ್ತಿಯನ್ನರಿತೇ ಕನಸುಗಾರ, ಕ್ರಾಂತಿಗಾರನೆಂದು ಹೇಳುವುದು. ಕ್ರಾಂತಿಯ ಮೂಲವೂ ಕನಸಿನ ಮೂಲವೂ ಒಂದೇ— ಇಂದಿನ ಜೀವನದ ಬಗ್ಗೆ ಇರುವ ಅತೃಪ್ತಿ, ಯಾವುದೋ ಒಂದು ಬಗೆಯ ಬದುಕು ಬೇಸರವಾಗಿ, ಅದರಿಂದ ಮನಸ್ಸು ಭಾರವಾದಾಗ ಬೇರೆ ಒಂದು ಜೀವನದ ಕನಸನ್ನು ನಾವು ಕಾಣಲು ಆರಂಭಿಸುತ್ತೇವೆ. ಹಾಗೆಯೇ ಈಗಿರುವ ಬದುಕಿನ ಬಗೆಯಿಂದ ಬೇಸರವಾಗಿ ಅದರಿಂದ ಮನಸ್ಸು ಗಾಸಿಗೊಂಡಾಗ ಬೇರೊಂದು ಜೀವನವನ್ನು ಅಲ್ಲಿಗೆ ತರಲು ಪ್ರಯತ್ನಿಸುತ್ತೇವೆ. ಹೀಗೆ ಕನಸು ಕ್ರಾಂತಿಗಳು ಅಣ್ಣತಮ್ಮನೆನ್ನಬಹುದು. ಇಲ್ಲವೆ ಅವಳಿಗಳೆಂದೂ ಕರೆಯಬಹುದು. ಕನಸು ಕ್ರಾಂತಿಗೆ ಬಹಳ ಸಹಾಯವಾಗುತ್ತದೆ. ಕ್ರಾಂತಿಯಿಂದ ಕನಸಿನ ಸಾಧನೆಯಾಗುತ್ತದೆ. ಆದರೆ ಎಷ್ಟೋ ಬಾರಿ ಕನಸು, ಕ್ರಾಂತಿಗಳೆರಡರ ಉರುವೂ ಉಳಿಯುವುದಿಲ್ಲ. ನನ್ನ ಸ್ನೇಹಿತನೊಬ್ಬ ಬಹಳ ದೊಡ್ಡ ಕ್ರಾಂತಿಕಾರ. ಮೂರ್ತಿ ಸಣ್ಣದಾದರೂ ಸ್ಫೂರ್ತಿ ಹಣ್ಣಾದ ಬಾಳು ಅವನದು. ಭೂಮಿಯಲ್ಲಿ ಸ್ವರ್ಗವನ್ನಿಳಿಸುವ ಕನಸು ಆತನದು. ಈ ಕನಸಿನ ಮತ್ತೊಂದು ಮುಖವೇ ಕ್ರಾಂತಿಯಾಗಿ ಅವನೊಬ್ಬ ಕ್ರಾಂತಿಕಾರಿಯಾದ. ಆದರೆ ಈಗ

ಕ್ರಾಂತಿಯೂ ಒಂದು ಕನಸಾಗಿ ಕ್ರಾಂತಿಕಾರನ ಸಾವು ಎಂದೋ ಆಗಿ, ಅವನು ಸಾಧಾರಣ ಕನಸುಗಾರನಾಗಿಯೇ ಉಳಿದಿದ್ದಾನೆ.

ಜೀವನ ಆರಂಭದಿಂದಲೇ ಅಪೂರ್ಣವಾಗಿದೆ. ಅದರಿಂದಲೇ ಚಿಕ್ಕತನದಲ್ಲಿಯೇ ಅತೃಪ್ತಿ ಮೂಡಿ ನಾವು ಕನಸು ಕಟ್ಟಲಾರಂಭಿಸುತ್ತೇವೆ. ಮಗು ಯಾವ ಕನಸು ಕಾಣುತ್ತದೋ ನಾವು ಹೇಳಲು ಕಷ್ಟ. ತೊಟ್ಟಿಲಲ್ಲಿ ನಿರ್ಲಿಪ್ತವಾಗಿ ಮಲಗಿದ ಕೂಸು ಪ್ರಳಯದಲ್ಲಿ ಆಲದ ಎಲೆಯಮೇಲೆ ಮಲಗಿದ ಕೃಷ್ಣನಂತೆ! ಚಿಕ್ಕಮಕ್ಕಳ ಕನಸುಗಳೆಲ್ಲ ಆಟದ ಸಾಮಾನುಗಳು, ತಿಂಡಿಗಳ ಮೇಲೆಯೇ ಹರಿಯುತ್ತವೆ. ಕೊಂಚ ವಯಸ್ಸು ಬಂದಾಗ ಶಾಲಾ ಕಾಲೇಜುಗಳಿಗೆ ಬಂದಾಗ ಕನಸೂ ಬಲಿಯುತ್ತದೆ. ನಾನು ಶಾಲೆಯಲ್ಲಿ ಓದುತ್ತಿದ್ದಾಗ ಒಬ್ಬ ಉಪಾಧ್ಯಾಯರಿದ್ದರು. ಅವರು ಕತೆಗಳನ್ನು ಬಹಳ ಸೊಗಸಾಗಿ ಹೇಳುತ್ತಿದ್ದರು. ಅಲ್ಲಾವುದೀನನ ಮಾಯಾದೀಪದ ಕತೆ ಕೇಳಿದಾಗಿನಿಂದ ನನಗೆ ಆ ಮಾಯಾದೀಪದ ಕನಸೇ! ಆ ಮಾಯಾದೀಪದಿಂದ ನಾನು ವಿಶ್ವದಿಗ್ವಿಜಯದ ಯೋಚನೆ ಮಾಡಲಿಲ್ಲ. ಬಹಳ ದಿನಗಳಿಂದ ಕೊಬ್ಬರಿಮಿಠಾಯಿ ತಿನ್ನುವ ಆಸೆಯಿತ್ತು. ಆದರೆ ಕಾಸು ಮಾತ್ರ ಕಾಣೆ. ಆ ಮಾಯಾದೀಪ ನನಗೆ ಸಿಕ್ಕಿದಂತೆ–ಆಗ ಕೊಬ್ಬರಿ ಮಿಠಾಯಿಯ ಸುಗ್ಗಿ! ಚಾಮುಂಡಿ ಬೆಟ್ಟವನ್ನು ಆ ಮಾಯಾದೀಪದಿಂದ ಕೊಬ್ಬರಿಮಿಠಾಯಿ ಬೆಟ್ಟ ಮಾಡಿಬಿಡುವೆ. ಯಾರು ಬೇಕಾದರೂ ಎಷ್ಟು ಬೇಕಾದರೂ ತಿನ್ನಲಿ! ಮೈಸೂರಿನ ನಲ್ಲಿಗಳಲ್ಲೆಲ್ಲ ದಿನಕ್ಕೆ ಬೆಳಗ್ಗೆ ಒಂದು ಗಂಟೆ, ಸಾಯಂಕಾಲ ಒಂದು ಗಂಟೆ ಕಾಫಿ ಬರುವಂತೆ ಮಾಡುತ್ತೇನೆ. ಈಗ ಅಲ್ಲಿ ನೀರು ಬರುವುದೇ ಕಷ್ಟ ಅನ್ನಿ! ನಾನು ಮಾಯವಾಗಿ ನಮ್ಮ ಮೇಷ್ಟರ ಜೂಪು ಮೂಗನ್ನು ಎಳೆದರೆ-ಅವರು ಯಾರು ಯಾರೆಂದು ಸುತ್ತನೋಡಿ ಗಾಬರಿಪಟ್ಟುಕೊಂಡು ಕಕ್ಕಾವಿಕ್ಕಿಯಾಗುವುದನ್ನು ನಾನು ನೋಡಬೇಕು. ಮಾಯವಾಗಿ ಬೀದಿಯಲ್ಲಿ ನಡೆದುಬಂದು ಅವರನ್ನು ರೇಗಿಸುವುದು-ಹೀಗೆಯೇ ಮಾವಿನ ತೋಪಿಗೆ ಹೋಗಿ ಬೇಕಾದಷ್ಟು ಕಾಯಿ ಹೊಡೆದು ತಿನ್ನಬಹುದು; ಕಾವಲುಗಾರನ ಹೆದರಿಕೆಯಿಲ್ಲದೆ! ಜಟ್ಕಾಗಳಲ್ಲಿ, ರೈಲಿನಲ್ಲಿ ದುಡ್ಡಿಲ್ಲದೆ ಪ್ರಯಾಣ ಮಾಡಬಹುದು-ಹೀಗೆಲ್ಲ ಕನಸು ಕಾಣುತ್ತಿದ್ದೆ. ನನ್ನ ಎಳೆತನಕ್ಕೆ ಸರಿಯಾಗಿಯೇ ಆ ಕನಸುಗಳೂ ಹೀಚುಹೀಚು.

ಯೌವನದಲ್ಲಿ ನಾವು ಕಾಣುವ ಕನಸು ಬೇರೆಯ ಬಗೆಯದು ! ಆ ಕನಸು ಯಾವುದೋ ಒಂದು ಮಿಡಿತದಲ್ಲಿ ಕೇಂದ್ರವಾಗುತ್ತದೆ. ಪ್ರಣಯ, ಪ್ರೇಮ, ಸಂಗಾತಿ ಸಂಸಾರಗಳ ಸುಂದರ ಸೌಧಗಳನ್ನು ಗಾಳಿಯಲ್ಲಿ ನಿರ್ಮಿಸಿ ಉರುಬಿ ಹಾರಿಸಿಬಿಡುತ್ತೇವೆ. ಯೌವನಕ್ಕೆ ಬಂದ ಹೆಣ್ಣುಮಕ್ಕಳು ಬರಿಯ ಒಂದು ಪ್ರಣಯವನ್ನೇ ಅಲ್ಲದೆ ತಾಯ್ತನದ ಕನಸನ್ನು ಕಾಣುತ್ತಾರೆ. ಆದರೆ ಯೌವನದ ಹುಡುಗರು ಬರಿಯ ಪ್ರಣಯದ ಕತೆ ಬಯಸುತ್ತಾರೆ. ಹೂವಿಗೆ ಹಣ್ಣಾಗುವ ಕನಸು. ದುಂಬಿಗೆ ಮಾತ್ರ ಬರಿಯ ರಸಾಸ್ವಾದನೆಯ ಕನಸು. ಈ ಕಾಲದಲ್ಲಿ ನಾವು ಎಲ್ಲವನ್ನೂ ಮರೆತು ಕನಸಿನ ನಾಡಿನಲ್ಲಿ ವಿಹರಿಸುತ್ತೇವೆ. ಕಣ್ಣು ತೆರೆದಂತೆ ತೆರೆದಿರುತ್ತದೆ. ಆದರೆ, ಮನಸ್ಸು ಮಾತ್ರ ಕಿನ್ನರರ ರೆಕ್ಕೆಗಳ ಮೇಲೆ ಹಾರುವ ಬಿಳಿಯ ಮೋಡಗಳ ಪಾಲಕಿಯಲ್ಲಿ ಕುಳಿತು ಯಾತ್ರೆ ಹೊರಡುತ್ತದೆ. ಅಲ್ಲಿ ಯಾವಳೋ ಒಬ್ಬ ಅಪ್ಸರೆಯ ಜತೆಯಲ್ಲಿ ಸುರಸ್ವನ ಕೇಳಿ-ಕೇಳಿಯಲ್ಲಿ ಲೀನವಾಗಿ—ಮೊಳಕೈ ಮೇಜಿನಿಂದ ಜಾರಿ ಮುಖ ಅಂಚಿಗೆ ಹೊಡೆದಾಗ ಮತ್ತೆ ಈ ಜಗತ್ತಿನ ಕಟುಸ್ಪರ್ಶ! ಈ ಕನಸೆಲ್ಲ ದೋರಹಣ್ಣಿನಂತೆ -ಹುಳಿ ಸಿಹಿಗಳ ಮಿಶ್ರಣ. ಆದರೆ ವಯಸ್ಸು ಇಳಿಮುಖವಾದಂತೆ ಬಾಳು ಕಳಿಯುತ್ತದೆ, ಕನಸೂ ಕಳಿಯುತ್ತದೆ. ಬಂಗಾರದ ಬಣ್ಣ ಮಾವಿನಕಾಯಿಗೆ ಹಣ್ಣಾದಾಗ ಬರುವಂತೆ ನಮ್ಮ ಕನಸಿಗೂ ಬಂಗಾರದ ಬಣ್ಣ ವಿಳಿಯುತ್ತದೆ. ತಾತ್ವಿಕತೆ, ಸಾರ್ಥಕ್ಯಗಳ ಕನಸು ಆಗ ಬರುತ್ತದೆ. ಹೀಗೆ ಜೀವನದ ಎಲ್ಲಾ ಹಂತಗಳಲ್ಲಿಯೂ ಕನಸು ಮನುಷ್ಯನನ್ನು ಬಿಟ್ಟುದೇ ಅಲ್ಲ.

ಅಜೀರ್ಣವಾದರೆ ಕನಸಾಗುತ್ತದೆಂದು ಸಾಮಾನ್ಯವಾಗಿ ಹೇಳುತ್ತಾರೆ. ನನಗಂತೂ ಅದು ಹೇಗೋ ತಿಳಿಯುವುದೇ ಇಲ್ಲ. ಮೂರುದಿನ ಉಪವಾಸ ಮಾಡಿದವನಿಗೆ ಕನಸಾಯಿತು. ನಾನು ಆ ಕನಸಿನಲ್ಲಿ ಕಂಡುದೆಲ್ಲ ರಾಜ ಭೋಜನ ! ನನಗೆ ಅಜೀರ್ಣವಾಗಿ ಆ ಕನಸಾಯಿತೆ ಅಥವಾ ಆ ಕನಸಿನಿಂದ ಅಜೀರ್ಣವಾಯಿತೆ ? ಮನಶ್ಶಾಸ್ತ್ರಿಗಳು ಕನಸು ನಿದ್ದೆಯ ಕಾವಲುಗಾರನೆಂದು ಹೇಳುತ್ತಾರೆ. ನಿದ್ದೆ ಚೆನ್ನಾಗಿ ಬರುವಂತೆ ಈ ಕನಸು ಕಾಯ್ದುಕೊಂಡಿರುತ್ತವೆಯಂತೆ. ಅದು ಹೇಗೋ ನನಗಂತೂ ತಿಳಿಯುವಂತಿಲ್ಲ ! ಚೆನ್ನಾಗಿ ನಿದ್ದೆ ಮಾಡುವ ನಮ್ಮ ತಂದೆ ರಾತ್ರಿ ಕನಸು ಕಾಣಲಾರಂಭಿಸಿದರೆ ನಮ್ಮೆಲ್ಲರ

ನಿದ್ದೆಗೂ ಸಂಚಕಾರ ಬಂದಂತೆಯೇ. ಅವರು ಯಾವಾಗಲೂ ಕನಸಿನಲ್ಲಿ ಕಾಣುವುದು ಕಳ್ಳರು ದರೋಡೆಕೋರರನ್ನೇ.

ನಮ್ಮ ತಂದೆ ಬಹಳ ಸಾತ್ವಿಕರು. ಬಹಳ ವಿನಯದ ಸ್ವಭಾವ. ಯಾರಿಗೂ ಕೆಟ್ಟದ್ದನ್ನು ಎಣಿಸದವರು. ಆದರೆ ಕಳ್ಳರೇ ಅವರ ಕನಸಿನಲ್ಲಿ ಸಾಮಾನ್ಯ! ಹೋಗಲಿ, ಕಳ್ಳರಿಗೆ ಸಿಗುವಂತಹುದು ಏನಾದರೂ ನಮ್ಮ ಮನೆಯಲ್ಲಿದೆಯೇ ಎಂದರೆ ನಾವು ಶುದ್ಧ ಬಡವರು. ನಾವೇ ನಮ್ಮ ಆಸ್ತಿ! ನಮ್ಮ ತಂದೆ ಕನಸು ಬಿದ್ದೊಡನೆಯೇ "ಕಳ್ಳ, ಕಳ್ಳ" ಎಂದು ಕೂಗಿ ಎದ್ದು ಓಡಾಡಿ ಕೈಗೆ ಸಿಕ್ಕಿದವರನ್ನು ಹಿಡಿದು ಹೊಡೆದುಬಿಡುತ್ತಾರೆ. ಈ ಕನಸಿನಿಂದ ನಮ್ಮ ನಿದ್ದೆಯೂ, ಅವರ ನಿದ್ದೆಯೂ ಎರಡೂ ಒಡೆದು ಹೋಗುತ್ತವೆ. ತಿರುಗಿ ಆ ರಾತ್ರಿ ನಾವು ಯಾರೂ ನಿದ್ದೆ ಮಾಡುವಂತಿಲ್ಲ. ಅಂತಹುದರಲ್ಲಿ ಕನಸು ನಿದ್ದೆಯ ಕಾವಲು ಎಂದು ನಾನಂತೂ ಒಪ್ಪುವಂತಿಲ್ಲ. ಸುಪ್ತವಾಗಿರುವ ಬಯಕೆಗಳೆಲ್ಲಾ ಒಡೆದು ಕನಸಾಗುತ್ತದೆಂಬ ಮಾತು ನಿಜವೆಂದು ಅನಿಸುತ್ತೆ. ನಮ್ಮ ಜೀವನದಲ್ಲಿ ನಮಗೆ ಅಂತಹ ಸಾವಿರಾರು ಬಯಕೆಗಳಿರುತ್ತವೆ. ಅವುಗಳನ್ನು ನಾವು ಆಡುವುದಿಲ್ಲ. ಮಾಡಲು ಸಾಗುವುದಿಲ್ಲ. ಅಂತಹುದು ಕನಸಿನಲ್ಲಿ ಪೂರ್ಣವಾಗುತ್ತವೆ. ಹೀಗೆ ಕನಸು ಜೀವನದ ಅಪೂರ್ಣತೆಯನ್ನು ಪೂರೈಸುವ ಸಂಜೀವಿನಿ. ಅದರಿಂದಲೇ ನಾವು ಕಲ್ಪವೃಕ್ಷ, ಕಾಮಧೇನು, ಮಾಯಾದೀಪಗಳನ್ನು ಸೃಷ್ಟಿಸಿರುವುದು. We must make of life a dream and of that dream a reality— ನಾವು ಬದುಕನ್ನು ಒಂದು ಕನಸಾಗಿ ಮಾಡಿ. ಆ ಕನಸನ್ನು ನೈಜಗೊಳಿಸಬೇಕು ಎಂದು ಪ್ರಖ್ಯಾತ ವಿಜ್ಞಾನಿ ಜೋಲಿಯೊ ಕ್ಯೂರಿ ಹೇಳಿದುದನ್ನು ನೆನೆಯಬೇಕು. ಎಲ್ಲಿಯತನಕ ಮನುಷ್ಯನಿಗೊಂದು ಮನಸ್ಸು ಉಂಟೋ, ಮನಸ್ಸಿಗೊಂದು ತಡೆಯುಂಟೋ ಅಲ್ಲಿಯತನಕ ಬಾಳಿಗೆ ಕನಸು ಅವಶ್ಯಕ. ಬಾಳು ಕನಸುಗಾರ.

ಕಾಲುಹಾದಿಹೋಕರು

ಹಾ. ಮಾ. ನಾಯಕ

ನನ್ನ ಕಛೇರಿಕೊಠಡಿಯ ಕಿಟಕಿಯಲ್ಲಿ ಹೊರಗೆ ಕಣ್ಣು ಹಾಯಿಸಿದರೆ, ವಿಶಾಲವಾದ ಹಸಿರು ಹುಲ್ಲಿನ ಅಂಗಳ ಕಾಣಿಸುತ್ತದೆ. ಒಂದೆರಡು ಹದ ಮಳೆ ಬಿದ್ದೊಡನೆಯೇ ಗರಿಕೆ ಕುಡಿಗಳಿಗೆ ಹೊಸ ಜೀವ ಬಂದಂತಾಗಿ, ಕಣ್ಣಿಗೆ ಆಕರ್ಷಕವಾದ ಹಸಿರನ್ನು ತುಂಬಿಸುತ್ತದೆ. ಅಲ್ಲೊಂದು ಇಲ್ಲೊಂದು ಮೂಲೆಯಲ್ಲಿ ಒಂದೆರಡು ಒಂಟಿ ಗಿಡ ಮರಗಳು ಅಸಹಾಯಕ ಕಾವಲುಗಾರರಾಗಿ ನಿಂತಿರುತ್ತವೆ. ಹಸಿರು ಹುಲ್ಲಿನ ಶುಭ್ರ ಅಂಗಳ ನೋಡಿದವರಿಗೆ ಮತ್ತೊಮ್ಮೆ ನೋಡಲು ಆಹ್ವಾನಿಸುತ್ತದೆ.

ಕೆಲವೇ ದಿನಗಳಲ್ಲಿ ಆ ಹಸಿರು ಹಾಸಿನ ಮೇಲೆ ಒಂದನ್ನು ಇನ್ನೊಂದು ಕತ್ತರಿಸಿಕೊಂಡು ನಾಲ್ಕಾರು ಕಾಲುದಾರಿಗಳ ಅಸ್ಪಷ್ಟ ಗುರುತು ಕಾಣತೊಡಗುತ್ತದೆ; ಮತ್ತೆ ಕೆಲವು ದಿನಗಳಲ್ಲಿ ಗುರುತು ಸ್ಪಷ್ಟವಾಗುತ್ತದೆ. ಕ್ರಮೇಣ ಹಸಿರು ಅಂಗಳದ ಚೆಲುವು ವಿಕೃತಗೊಳ್ಳತೊಡಗುತ್ತದೆ.

ತೋಟಗಾರಿಕೆ ಇಲಾಖೆಯವರು ಎಚ್ಚರಾಗುತ್ತಾರೆ. 'ಹುಲ್ಲಿನ ಮೇಲೆ ನಡೆಯಬೇಡಿ' ಎಂಬ ಸೂಚನಾಫಲಕವನ್ನು ನೆಡುತ್ತಾರೆ. ಅದನ್ನು ಓದುತ್ತಾ, ನಗುತ್ತಾ ಕೆಲವರು ಅಲ್ಲೇ ನಡೆಯುತ್ತಾರೆ; ಕೆಲವರು ಅದನ್ನು ಕಿತ್ತು ಹಾಕಿ ನಡೆಯುತ್ತಾರೆ; ಎರಡು ದಿನಗಳಲ್ಲಿ ಆ ಫಲಕವೇ ಮಾಯವಾಗುತ್ತದೆ.

ಇಲಾಖೆಯವರು ಹಾದಿಯಲ್ಲಿ ಮುಳ್ಳಿನ ಒಡ್ಡು ಹಾಕುತ್ತಾರೆ. ಕಾಲುಹಾದಿ ನಡೆಯುವವರು, ಗೊಣಗಿಕೊಳ್ಳುತ್ತಾ ಮುಳ್ಳುಗಳನ್ನು ಸರಿಸಿ ಪಕ್ಕಕ್ಕೆ ಹಾಕಿ ಓಡಾಡತೊಡಗುತ್ತಾರೆ; ಅಷ್ಟನ್ನೂ ಮಾಡದೆ ಮತ್ತೆ ಕೆಲವರು ಪಕ್ಕದಲ್ಲಿ ಹೊಸ ದಾರಿ ಮಾಡಿಕೊಂಡು ನಡೆಯುತ್ತಾರೆ. ನಾಲ್ಕು ದಿನಗಳಾದ ಮೇಲೆ ಒಂದೋ ಎರಡೋ ಎಳೆಯ ತಂತಿಬೇಲಿ ಕಾಣಿಸಿಕೊಳ್ಳುತ್ತದೆ. ಕಾಲುಹಾದಿಗರು ಅದನ್ನು ದನಕರುಗಳಿಗೆ ಹಾಕಿದ್ದೆಂದು ಭಾವಿಸಿ ತಾವೇ ತೊಂಡುದನಗಳಾಗುತ್ತಾರೆ; ತಂತಿಬೇಲಿಯನ್ನು ನೆಗೆದು ದಾಟುತ್ತಾರೆ. ವಾರ

ಕಳೆಯುವ ಮೊದಲೇ ತಂತಿಬೇಲಿ ಕುಸಿದುಬಿದ್ದು, ತಂತಿಗಳೂ ಉಕ್ಕಿನ ಗೂಟಗಳೂ ಕಾಣದಾಗುತ್ತವೆ. ಕಾಲುಹಾದಿಯ ನಡಿಗೆ ಎಂದಿನಂತೆ ಯಾವ ಅಡೆತಡೆಯೂ ಇಲ್ಲದೆ ಮುಂದುವರಿಯುತ್ತದೆ.

ಕೆಲವು ಸಲ ಇಲಾಖೆಯ ಜವಾನರು ಕಾಲುಹಾದಿಹೋಕರನ್ನು ನೋಡಿ ಕೂಗುತ್ತಾರೆ; 'ಅಲ್ಲಿ ನಡೆಯಬೇಡಿ' ಎಂದು ಗದರಿಸುತ್ತಾರೆ. ಆದರೆ ಕಾಲುಹಾದಿಹೋಕರು ಈ ಮಾತುಗಳನ್ನು ಲಕ್ಷಿಸುವುದಿಲ್ಲ. ಅವಾಚ್ಯವನ್ನಾಡಿ ಜವಾನರ ಬಾಯಿ ಮುಚ್ಚಿಸುತ್ತಾರೆ. ಒಮ್ಮೊಮ್ಮೆ ಈ ಜನ ನನ್ನ ಕಣ್ಣಿಗೆ ಬೀಳುತ್ತಾರೆ. 'ಏನ್ರಿ, ನೀನೇ ಹೀಗೆ ಮಾಡುವುದೆ ?' ಎಂದು ಛೇಡಿಸುತ್ತೇನೆ; ನಿಧಾನವಾಗಿ ಅಣಕಿಸುತ್ತೇನೆ, ಮಾತಿನಲ್ಲೆ. ಕೆಲವರು ಮಾರ್ಮಿಕವಾಗಿ ನಕ್ಕು ರಾಜಮಾರ್ಗಕ್ಕೆ ಇಳಿಯುತ್ತಾರೆ; ಇನ್ನು ಕೆಲವರು ನಾಚಿ, ತಲೆ ತಗ್ಗಿಸಿಕೊಂಡು ಕಾಲುಹಾದಿಯನ್ನು ಬಿಡುತ್ತಾರೆ; ಮತ್ತೆ ಕೆಲವರು ಕೇಳಿಯೂ ಕೇಳಿಸದಷ್ಟು ನಿಧಾನವಾಗಿ 'ಸಾರಿ' ಎನ್ನುತ್ತಾರೆ. ಆ ಉದ್ಗಾರಕ್ಕೆ ಅರ್ಥವಿಲ್ಲ. ಅದು ಸವೆದು ಹಳಸಿಹೋದ ಒಂದು ಪದ, ಅಷ್ಟೆ. ಉಚ್ಚಾರಣೆ ಸುಲಭ. ಆದ್ದರಿಂದಲೇ ಅವರು 'ಕ್ಷಮಿಸಿ' ಎನ್ನಲಾರರು. ಕ್ಷಮೆ ಕೇಳುವಷ್ಟು ದೊಡ್ಡ ತಪ್ಪನ್ನು ತಾವು ಮಾಡಿಲ್ಲ ಎಂಬ ದೃಢವಾದ ನಂಬಿಕೆಯಿದೆ, ಅವರಿಗೆ,

ಇಷ್ಟೆಲ್ಲ ಆಗಿ ನಾನು ಬೆನ್ನು ತಿರುಗಿಸಿದೊಡನೆಯೇ ಮತ್ತೆ ಅವರೆಲ್ಲ ಹಿಡಿಯುವುದು ಕಾಲುಹಾದಿಯನ್ನೇ. ಕೆಲವರು ಆ ಕಾಲು ದಾರಿಗಳಲ್ಲೇ ಸೈಕಲ್ ಓಡಿಸುತ್ತಾರೆ; ಇನ್ನೂ ಕೆಲವರು ಕಷ್ಟಪಟ್ಟುಕೊಂಡು ಸ್ಕೂಟರನ್ನೂ ಬಿಡುತ್ತಾರೆ.

ಇದೆಲ್ಲ ನಡೆಯುವುದು ಯಾವುದೋ ಹಳ್ಳಿಯ ಬಯಲಿನಲ್ಲಲ್ಲ; ಸಾರ್ವಜನಿಕ ಅನಾಥ ಉದ್ಯಾನದಲ್ಲಲ್ಲ. ವಿಶ್ವವಿದ್ಯಾನಿಲಯದ ಕ್ಷೇತ್ರದಲ್ಲಿ. ಹೀಗೆ ಕಾಲುಹಾದಿ ನಡೆಯುವವರು ಅಸಂಸ್ಕೃತರಲ್ಲ, ಅನಾಗರಿಕರಲ್ಲ, ಅನಕ್ಷರಸ್ಥರಲ್ಲ, ಹಳ್ಳಿಯ ಗಮಾರರಲ್ಲ. ವಿಶ್ವವಿದ್ಯಾನಿಲಯದ ಆವರಣದ, ತಮ್ಮನ್ನು ತಾವೇ ಮಹಾ ನಾಗರಿಕರೆಂದು ವರ್ಣಿಸಿಕೊಳ್ಳುವ, ಸುಸಂಸ್ಕೃತ ಸೋಗಿನ ಜನ. ರಸ್ತೆ ಆಚೆಯ ಬೀಡಿ ಅಂಗಡಿಗೊ, ಕ್ಯಾಂಟೀನ್ನಿಗೊ ಹೋಗುವ ಈ ಜನ ನೇರವಾದ ದಾರಿಯಲ್ಲಿ ಹೋಗಲು ಸುತ್ತು ಬಳಸಬೇಕಾಗಿಲ್ಲ; ಇಪ್ಪತ್ತು ಹೆಜ್ಜೆ

ಹೆಚ್ಚಿಗೆ ನಡೆದರೆ ಸಾಕು. ಆದರೆ ಅವರಿಗೆ ಇಪ್ಪತ್ತಲ್ಲ ಹತ್ತು ಹೆಜ್ಜೆ ಹಾಕುವುದೂ ಕಷ್ಟವೆನಿಸುತ್ತದೆ. ನಾಲ್ಕು ಹೆಜ್ಜೆ ಆಚೀಚೆ ನಡೆಯಲಾರರು ಅವರು. ಅವರಿಗೆ ಕಾಲುದಾರಿಯೇ ಬೇಕು. ಹುಲ್ಲಿನ ಅಂಗಳದಲ್ಲಿ ಬೈತಲೆಯ ಚಿತ್ತಾರ ನಿರ್ಮಿಸಿ ಸುಖಪಡೆಯುವ ಸೋಮಾರಿಗಳಿವರು; ಮೊದಲೆ ಮಾಡಿಟ್ಟ ದಾರಿಯನ್ನೂ ನಡೆಯದ ಆಲಸಿ ವಿದ್ಯಾವಂತರು.

ಯಾವುದೇ ಉದ್ಯಾನ ನೋಡಿ, ತೋಟ ಬಯಲುಗಳನ್ನು ನೋಡಿ. ಅಲ್ಲೆಲ್ಲ ಈ ತೊಂಡು ಮಾನವ ದನಗಳು; ಸೋಮಾರಿ ಕಾಲುಹಾದಿಹೋಕರು.

ಈ ಕಾಲುಹಾದಿಯ ನಡೆ ಕೇವಲ ಹುಲ್ಲು ಹಾಸಿಗೇ ಸೀಮಿತವಲ್ಲ. ಸಮಾಜ ಜೀವನದಲ್ಲಿ. ರಾಷ್ಟ್ರಜೀವನದಲ್ಲಿ ಕಾಲುಹಾದಿಗಳು ಈಗ ಅಸಂಖ್ಯಾತ. ದಿಢೀರ್ ಪ್ರಸಿದ್ಧಿ, ದಿಢೀರ್ ಯಶಸ್ಸು, ದಿಢೀರ್ ಪ್ರತಿಫಲ ಎಲ್ಲರಿಗೂ ಬೇಕು. ರಾಜಮಾರ್ಗದಲ್ಲಿ ನಡೆಯುವವರಿಗೆ ಇದು ಸಿಕ್ಕುವುದು ಕಷ್ಟ. ಸಿಕ್ಕಿದರೂ ಕಾಯಬೇಕು. ಕಾಲುಹಾದಿಹೋಕರಿಗೆ ಕಾಯುವ ತಾಳ್ಮೆಯಿಲ್ಲ; ಕಾಯಬೇಕಾದ ಅಗತ್ಯವಿಲ್ಲ. ಗುರಿ ಮುಟ್ಟಿದರೆ ಸಾಕು; ಮಾರ್ಗದ ಬಗೆಗೆ ಚಿಂತೆಯಿಲ್ಲ. ಇದರಿಂದ ಸಮಾಜದ ಹಾಸು ಕೆಡುತ್ತದೆ; ರಾಷ್ಟ್ರದ ಅಂಗಳ ರೂಪಹೀನವಾಗುತ್ತದೆ.

ಮನೆಯ ಅಂಗಳದಲ್ಲಿ ಕಾಲುದಾರಿಮಾಡಿ ನಡೆಯುವವರು, ಬದುಕಿನಲ್ಲೂ ರಾಜಮಾರ್ಗ ಹಿಡಿಯಲಾರರು. ಉದ್ಯಾನಗಳಲ್ಲಿ ಕಾಲುದಾರಿ ಮಾಡದಿರುವ ಪಾಠ ನಮಗೆ ಈಗ ಅಗತ್ಯವಾಗಿದೆ.

ಮನೆ ಕಟ್ಟಿ ನೋಡಿ

ಎಚ್ಚೆಸ್ಕೆ

ಹೌದು ! ಮನೆ ಕಟ್ಟಿ ನೋಡಿ.

ಅದಕ್ಕೆ ಬೇಕಾದ ಹಣ, ಮಣ್ಣು, ಕಲ್ಲು, ಕಬ್ಬಿಣ ಇಲ್ಲವೆನ್ನುವಿರೇನೋ. ಅದರೇನು ? ಮನೆ ಕಟ್ಟುವವರೆಲ್ಲಾ ಆರಂಭಿಸುವುದು ಹೀಗೆಯೇ.

ಕೇಳಿಲ್ಲವೆ ಕವಿ ಹಾಡಿರುವುದನ್ನು—

'ಇಲ್ಲ ಇಲ್ಲ ಏನೊಂದನು ಮಾಡಲಿಲ್ಲ ಇವನು !'

ಹುಟ್ಟಿದ ಮೇಲೆ ಏನಾದರೂ ಮಾಡಲೇ ಬೇಕಷ್ಟೆ ? ಏನೊಂದನು ಮಾಡಲಿಲ್ಲ ಇವನು—ಎನಿಸಿಕೊಳ್ಳುವುದು ಸರಿಯೆ ? ಇನ್ನೇನೂ ಆಗದಿದ್ದರೂ ಮನೆಯನ್ನಾದರೂ ಕಟ್ಟಬಹುದಲ್ಲ ?

"ಮನೆ ಕಟ್ಟಿಸುವುದು ಏನೂ ಕಷ್ಟವಿಲ್ಲಾಂದ್ರೆ. ನಿವೇಶನಕ್ಕೆ ಒಂದು ಅರ್ಜಿ ಹಾಕಿಕೊಂಡರಾಯಿತು. ಸಂಬಳದಲ್ಲಿ ತಿಂಗಳಿಗೆ ಅಷ್ಟಷ್ಟು ಹಣ ಕಟ್ಟಲೊಪ್ಪಿದರೆ ಸೈಟು ನಿಮ್ಮದಾದ ಹಾಗೆಯೇ. ಆಮೇಲೆ ಸಾಲಕ್ಕೆ ಅರ್ಜಿ ಹಾಕಿಕೊಂಡರಾಯಿತು. ತಿಂಗಳಿಗೆ ಅಷ್ಟಷ್ಟು ಕಂತು ಕಟ್ಟಿದರೆ ಸಾಲ ತೀರಿ ಹೋಗುತ್ತದೆ. ಮನೆ ನಿಮ್ಮದಾಯಿತು. ನೀವು ಕೊಟ್ಟಿರುವ ಬಾಡಿಗೆಯಲ್ಲಿ ಈ ವೇಳೆಗೆ ಮನಸ್ಸು ಮಾಡಿದ್ದರೆ ಎರಡು ಮನೆ ಕೊಳ್ಳಬಹುದಾಗಿತ್ತು. ಅಲ್ಲವೇ ? ಹೇಳಿ."

ನಡು ಬೇಸಗೆಯ ಮಟಮಟ ಮಧ್ಯಾಹ್ನ ನಿಮ್ಮ ಮನೆಗೆ ಬಂದ ಹಿರಿಯ ಮಿತ್ರರು, ನೀವು ಕೊಟ್ಟ ಉಪ್ಪಿಟ್ಟನ್ನು ಕಾಫಿಯಲ್ಲಿ ಕರಗಿಸುತ್ತಾ ಹೀಗೆ ಹೇಳಿದರೆ ನೀವು ಆ ಮಾತನ್ನು ತಳ್ಳಿಹಾಕುವುದು ಸಾಧ್ಯವೆ ? ತಳ್ಳಿಹಾಕುವುದಿರಲಿ, ಒಪ್ಪದೆ ಇರುವುದು ತಾನೆ ಸಾಧ್ಯವೆ ?

ನಿಮ್ಮ ಮಿತ್ರರು ನಿಧಾನವಾಗಿ ನಿಮ್ಮಿಂದ ಬೀಳ್ಕೊಂಡ ಮೇಲೆ ನಿಮ್ಮ ಕೈ ತಾನಾಗಿಯೇ ಲೇಖನಿ ಹುಡುಕುವುದು. ಕಾಗದದ ಮೇಲೆ ನೀವು ಲೆಕ್ಕ ಹಾಕಿಯೇ ಹಾಕುತ್ತೀರಿ—ನೀವು ಈ ವರೆಗೆ ಕೊಟ್ಟ ಬಾಡಿಗೆಯನ್ನು. ನೀವು

ಕೊಟ್ಟ ಬಾಡಿಗೆ, ಮನೆಯಿಂದ ಮನೆಗೆ ಸಾಮಾನು ಸಾಗಿಸಲು ತೆತ್ತ ಗಾಡಿಯ ವೆಚ್ಚ, ಸೋರುವ ಮನೆಯಲ್ಲಿ ವಾಸ ಮಾಡಿ, ನೆಗಡಿ ಶೀತ ಜ್ವರ ಬರಿಸಿಕೊಂಡು ಡಾಕ್ಟರಿಗೆ ತೆತ್ತ ಹಣ, ಶಿಥಿಲವಾದ ಮನೆಗೆ ನುಗ್ಗಿದ ಕಳ್ಳರ ಕೈಗೆ ಅನಾಯಾಸ ವಾಗಿ ಸಿಕ್ಕಿದ ಪದಾರ್ಥಗಳ ಮೌಲ್ಯ—ಇವನ್ನೆಲ್ಲಾ ಲೆಕ್ಕ ಹಾಕಿದರೆ, ಈ ಹಣಕ್ಕೆ ಎರಡೇಕೆ, ನಾಲ್ಕು ಮನೆಗಳನ್ನೇ ಕಟ್ಟಿಸಬಹುದಾಗಿತ್ತೆಂಬುದು ನಿಮಗೆ ಸ್ಪಷ್ಟವಾಗುತ್ತದೆ. ಯಾವುದೋ ಮಹತ್ವದ ನಿತ್ಯಸತ್ಯ ಹೊಳೆದು ಆರ್ಕಿ ಮಿಡೀಸ್ ಥಟ್ಟನೆ ಎದ್ದಂತೆ ನೀವು ಥಟ್ಟನೆ ನಿರ್ಧಾರ ಮಾಡಿ ಏಳುವಿರಿ. ನಿಜ. ನಿಮ್ಮ ಆ ಹಿರಿಯ ಮಿತ್ರರು ಹೇಳಿದ ಮಾತು ನಿಜ. ನಿಮ್ಮದೇ ಆದ ಮನೆ ನಿಮಗಿರಬೇಕು. ಆಗ ಮಾತ್ರ ದೇಹಕ್ಕೂ ಮನಸ್ಸಿಗೂ ನೆಮ್ಮದಿ. ಮುಪ್ಪಿ ನಲ್ಲಿ ಆಶ್ರಯ.

ಆದರೆ ಮತ್ತೆ ನಿಮ್ಮ ಮನಸ್ಸು ಹೊಯ್ದಾಡುವುದು. ಈಗಲೇ ಏಕೆ ಮನೆಯ ಚಿಂತೆ? ನಿವೃತ್ತಿ ಹೊಂದಿದ ಮೇಲೆ ಈ ಯೋಚನೆ ಮಾಡಿದರೆ ಆಗದೆ. ಆಗ ನಿಮ್ಮದೇ ಆದ ಮನೆಯಲ್ಲಿ ಪ್ರಶಾಂತವಾದ ಜೀವನ ನಡೆಸ ಬಹುದು.

ಆದರೆ ಮುಪ್ಪು ಅಡರಿದ ಮೇಲೆ, ಜೀವನ ಸಂತೋಷ ಅನುಭವಿಸುವ ಶಕ್ತಿಯೆಲ್ಲ ಕುಗ್ಗಿದ ಮೇಲೆ, ಮಕ್ಕಳ ಅಳು ನಗು ಕೇಕೆಗಳೆಲ್ಲ ದೂರ ಸರಿದ ಮೇಲೆ, ಕಣ್ಣು ಮಂಕಾದ ಮೇಲೆ, ರವಿ ಪಡುವಣದತ್ತ ವೇಗವಾಗಿ ಪಯಣ ಮಾಡಲಾರಂಭಿಸಿದ ಮೇಲೆ ಏಕೆ ಮನೆ? ಆಮೇಲೆ ಎಷ್ಟು ವರ್ಷ? ಮಕ್ಕಳು ಮೊಮ್ಮಕ್ಕಳು ಎಲ್ಲಾ ಎಲ್ಲೋ. ಅವರು ಖಂಡಿತ ಈ ಮನೆಯಲ್ಲಿ ವಾಸ ಮಾಡುವುದಿಲ್ಲ. ಬೆನ್ನ ಮೇಲೆ ಕುಳಿತ ಸವಾರ ಮೂತಿಯ ಮುಂದೆ ಹಿಡಿದ ಮೂಲಂಗಿಯ ಆಸೆಗೆ ನಾಲಗೆ ಚಾಚಿ ಮುಂದೆ ನಡೆಯುವ ಕತ್ತೆಯಂತೆ ಇವರೆಲ್ಲ ಜೀವನ ನಿರ್ವಹಣೆಗಾಗಿ ಎಲ್ಲೆಲ್ಲಿ ಸಾಗುವರೋ! ಆಗ ಈ ಮನೆಯಲ್ಲಿ ಇರುವವರು ಯಾರು? 'ಪೆದ್ದರು ಮನೆ ಕಟ್ಟುತ್ತಾರೆ; ವಿವೇಕಿಗಳು ಅದರಲ್ಲಿ ವಾಸ ಮಾಡುತ್ತಾರೆ,' ಎಂಬ ಗಾದೆ ನಿಜವಾಗದೆ? ಉಹುಂ! ಮನೆ ಕಟ್ಟಿಸುವು ದಿದ್ದರೆ ಈಗಲೇ ಕಟ್ಟಿಸಬೇಕು....

ಮನೆ, ಬಾಗಿಲು ಎಂದೆಲ್ಲ ಚಿಂತೆಯಿಂದ ಮಗ್ನರಾಗುವುದು ತಪ್ಪಲ್ಲವೆ? ಜೀವನದ ಕೆಸರಿನಲ್ಲಿ ಹೀಗೆ ಹೂತು ಹೋಗುವುದು ಏನು ಸುಖ? ಕೊಚ್ಚೆ

ಯಲ್ಲಿ ಒದ್ದಾಡುವ ಎಮ್ಮೆಯಂತೆ ! ಇಲ್ಲ, ಮನಸ್ಸು ಏಕೋ ಒಗ್ಗದು. ಇದು ಸ್ವಾರ್ಥ, ಸಂಕುಚಿತ ಮನೋಭಾವ.

"ಎಲ್ಲಿಯೂ ನಿಲ್ಲದಿರು,
ಮನೆಯನೆಂದು ಕಟ್ಟದಿರು."

ಆದರೂ....ಮನೆ ಕಟ್ಟದೇನಂತೆ ? ಕವಿ ಈ ಮಾತು ಹೇಳಿರುವುದೇ ಬೇರೆ ಅರ್ಥದಲ್ಲಿ. ಚೇತನ ಅನಿಕೇತನನಾಗಬೇಕು—ಎಂಬುದು ಕವಿಯ ಅಭಿಪ್ರಾಯವೇ ಹೊರತು, ವಾಸ ಮಾಡಲು ಮನೆ ಕಟ್ಟಬೇಡವೆಂದು ಹೇಳಿರಲಾರರು. ಸ್ವಂತದ್ದೋ, ಬಾಡಿಗೆಯದೋ ಅಂತೂ ವಾಸಮಾಡಲು ಮನೆ ಬೇಡವೇ....ಬದುಕಿರುವ ತನಕ ? ಹೆಂಡತಿ, ಮಕ್ಕಳು, ಮನೆ, ಮಠ—ಎಲ್ಲವೂ ಇದ್ದರೂ ಇವಕ್ಕೆಲ್ಲ ಅಂಟಿಯೂ ಅಂಟದ ಹಾಗೆ ಇರುವುದು ಸಾಧ್ಯವಿಲ್ಲವೆ ?

ಹೀಗೆ ಸಮಾಧಾನ ಮಾಡಿಕೊಂಡರೂ ಮನೆ ಕಟ್ಟಿಸಲು ಮನಸ್ಸು ತಕ್ಷಣ ಒಡಂಬಡುವುದಿಲ್ಲ. ದೇಶದಲ್ಲಿ ಇರುವ ಸಂಪತ್ತು ಸಮಾಜದಲ್ಲಿ ಸಮವಾಗಿ ಹಂಚಿಕೆಯಾಗಬೇಕೆಂಬ ಕೂಗು ಕೇಳಿಬರುತ್ತಿರುವ ಈ ಯುಗದಲ್ಲಿ, ಮನೆ ಆಸ್ತಿ ಮಾಡಿಕೊಳ್ಳುವುದೆಂಬ ವಿಚಾರ ಅಷ್ಟೇನೂ ಮನಸ್ಸಿಗೆ ಒಗ್ಗುವುದಿಲ್ಲ.

ಆದರೂ ವಾಸ ಮಾಡಲು ಮನೆ ಕಟ್ಟಿಸುವುದರಲ್ಲೇನು ತಪ್ಪು ? ಹಕ್ಕಿ, ಇರುವೆ, ಕಣಜ ಇವು ಕೂಡ ಗೂಡು ಕಟ್ಟಿಕೊಳ್ಳುವುದಿಲ್ಲವೆ ? ಇದರಲ್ಲೇನು ಅಸಹಜ ? ಇವುಗಳೆಲ್ಲ ಮುಪ್ಪಿನವರೆಗೆ ಈ ಕೆಲಸವನ್ನು ಮುಂದೂಡುವುದೂ ಇಲ್ಲ. ಗುಬ್ಬಚ್ಚಿಯನ್ನೇ ನೋಡಿ. ಪ್ರೇಮ ಫಲಿಸುವ ವೇಳೆಗೆ ಮರಿಗಳನ್ನು ಸಾಕಲು ಗೂಡು ಬೇಕೇ ಬೇಕು. ಬೇರೆ ಯಾರೋ—ಅಥವಾ ಯಾವುದೋ ಪ್ರಾಣಿ—ಕಟ್ಟಿದ ಗೂಡಿನಲ್ಲಿ ಅದು ವಾಸಿಸುವುದೇ ಇಲ್ಲ. ಅದು ತನ್ನ ಕೊಕ್ಕಿನಿಂದಲೇ ಹೆಕ್ಕಿ ತಂದ ಕಸ ಕಡ್ಡಿ ಕೂಡಿಸಿ ಕಟ್ಟಿದ ಗೂಡಿನಲ್ಲಿ ವಾಸಿಸುತ್ತದೆ. ಹೀಗೆಯೇ ಹಲವು ಪ್ರಾಣಿಗಳು. ಕೋಗಿಲೆ ಮಾತ್ರ ಕಾಗೆಯ ಗೂಡಿನಲ್ಲಿ ಮೊಟ್ಟೆ ಇಕ್ಕುತ್ತದಂತೆ. ಆದ್ದರಿಂದಲೇ ಪರಪುಟ್ಟ ಎಂಬ ಹೆಸರು ಅದಕ್ಕೆ. ಅದು ಎಷ್ಟೇ ಮಧುರವಾಗಿ ಕೂಜನ ಮಾಡಿದರೂ ಯಾರಿಗೂ ಕಾಣಿಸದೆ ಮುಖ ಮರೆಸಿಕೊಂಡು ಇರಬೇಕಾದ ಪಾಡು ಬಂದಿದೆ ಅದಕ್ಕೆ.

ಹೀಗೆ ನಾನಾ ಬಗೆಯಾಗಿ ನಿಮ್ಮ ಮನಸ್ಸು ಆಲೋಚನೆಗೆ ಒಳಗಾಗುತ್ತದೆ. 'ಮನೆ ಕಟ್ಟಿ ನೋಡಿ', ಎಂದು ಹೇಳಿದಾಗ. ಅದಕ್ಕೆ ಬೇಕಾದ ಹಣ, ಮಣ್ಣು, ಕಲ್ಲು, ಕಬ್ಬಿಣ ಇಲ್ಲವೆಂದು ಹೇಳಿದಿರಲ್ಲವೆ ನೀವು ? ಆದರೆ ಈಗ ನೋಡಿ. ಆ ವಿಚಾರವನ್ನೇ ಮರೆತಿದ್ದೀರಿ. ಅವು ಮುಖ್ಯವೇ ಅಲ್ಲವೇನೋ, ಅವೆಲ್ಲಾ ಸುಲಭವಾಗಿ ದೊರುಕುವುವೇನೋ ಎಂಬಂತೆ ಆ ವಿಚಾರವನ್ನು ಬದಿಗೊತ್ತಿ, ಮನೆ ಕಟ್ಟುವುದನ್ನು ಕುರಿತ ನೀತಿ ನಡವಳಿಕೆಗಳ ತಪ್ಪು ಒಪ್ಪುಗಳನ್ನು ಕುರಿತು ವಿಚಾರಿಸಲಾರಂಭಿಸಿದ್ದೀರಿ !

ಹೀಗೆ ಚಿಂತಿಸುತ್ತಾ ಅಂದಿನ ಪತ್ರಿಕೆಯನ್ನು ಅನ್ಯಮನಸ್ಕತೆಯಿಂದ ನೋಡುತ್ತಿರುವಾಗ, ಅದರಲ್ಲಿ ಪ್ರಕಟವಾದ ಒಂದು ಜಾಹೀರಾತು ಸೂಜಿಗಲ್ಲಿನಂತೆ ನಿಮ್ಮ ಮನಸ್ಸನ್ನು ಸೆಳೆಯುತ್ತದೆ. ಬೇರೇನು ? ಸೈಟುಗಳ ಮಾರಾಟ. ಅರ್ಜಿ ಹಾಕಿಕೊಳ್ಳಲು ಕೊನೆಯ ದಿನ...

ಕೂಡಲೆ ನಿಮ್ಮ ಕೈ ಲೇಖನಿಯನ್ನು ಹಿಡಿಯುತ್ತದೆ. ಕಾಗದದ ಮೇಲೆ ಸರಸರನೆ ಗೀಚಿ ಅದನ್ನು ಲಕೋಟೆಯಲ್ಲಿಟ್ಟು ಅಂಟಿಸಿ, ಅಂಚೆ ಪೆಟ್ಟಿಗೆಯಲ್ಲಿ ಹಾಕುತ್ತೀರಿ. ಅಲ್ಲಿಗೆ ನಿಮ್ಮ ಸ್ವಾತಂತ್ರ್ಯ ತೀರಿತು. ಅಲ್ಲಿಂದ ಮುಂದೆ ನೀವು ಯಾವು ಯಾವುವೋ ಘಟನಾವಳಿಗಳ ಅಧೀನ.

ಅದೃಷ್ಟವಶಾತ್—ಅಥವಾ ದುರದೃಷ್ಟವಶಾತ್ ? —ನಿಮ್ಮ ಅರ್ಜಿ ಮಧ್ಯದಲ್ಲೆಲ್ಲೂ ಕಳೆದುಹೋಗದೆ ಅಧಿಕಾರಿಗಳ ಕೈ ತಲಪಬೇಕೆ ? ಅಭ್ಯರ್ಥನ ಪತ್ರ ಕೊಟ್ಟ ಸಾವಿರಾರು ಜನರ ಪೈಕಿ, ನಿವೇಶನ ಮುಂಜೂರಾದ ಕೆಲವೇ ಜನರಲ್ಲಿ ನೀವೂ ಒಬ್ಬರಾಗಬೇಕೆ ?

ಸರಿ, ನೀವು ಮನೆ ಕಟ್ಟಿಸಬೇಕೆಂಬುದು ದೈವ ಸಂಕಲ್ಪವಾದರೆ, ಅದನ್ನು ನೀವು ಹೇಗೆ ತಾನೆ ನಿವಾರಿಸಬಲ್ಲಿರಿ ? ವಿಧಿ ಸೆಳೆದತ್ತ ತೇಲಲೇ ಬೇಕಲ್ಲವೇ ?

"ತರಗೆಲೆಗಳು ಅಲೆಯುತಿಹವು ಗಾಳಿಯಲ್ಲಿ ಅತ್ತ ಇತ್ತ ;
ತೊರೆಯ ಮೇಲೆ ಕಸವು ಕಡ್ಡಿ ಮರದ ತುಂಡು ಕೊಳೆಯು ನೊರೆ
ತೇಲುತಿಹುವು, ತೇಲುತಿಹುವು."

ನಿವೇಶನ ಕೊಂಡದ್ದೇ ತಡ, ಮನೆ ಕಟ್ಟಿಸಬೇಕೆಂದು ನಾನಾ ಕಡೆಯಿಂದ ನಿಮಗೆ ಒತ್ತಾಯ ಬರುತ್ತದೆ. ಏಕೆ ಇನ್ನೂ ಮನೆ ಕಟ್ಟಿಸುವ ಯೋಚನೆ

ಮಾಡಿಲ್ಲ ? ಕುಳಿತಾಗ, ನಿಂತಾಗ, ಊಟ ಮಾಡುವಾಗ, ಹೊರಗೆ ಹೊರಟಾಗ ಮನೆಗೆ ಮರಳಿದಾಗ, ಕಚೇರಿಯಲ್ಲಿ—ಎಲ್ಲೆಲ್ಲೂ ಇದೇ ಮಾತು. ಮನೆ ಕಟ್ಟುವ ವಿಚಾರವಾಗಿ ಯಾರಾದರೂ ಮಾತನಾಡುತ್ತಿದ್ದರೆ ನಿಮ್ಮ ಕಿವಿ ನಿಮಿರುತ್ತದೆ. ನಿಮಗೆ ಈ ವಿಚಾರದಲ್ಲಿ ಆಸಕ್ತಿ ಇದೆಯೆಂಬ ವಿಚಾರ ತಿಳಿದ ನಿಮ್ಮ ಮಿತ್ರರಂತೂ, ಈ ವಿಚಾರವಾಗಿ ಸರ್ವದಾ ದೊಡ್ಡ ಭಾಷಣಗಳನ್ನೇ ಕೊಡುತ್ತಾರೆ. "ಮನೆ ಎಂದರೆ ಹೀಗಿರಬೇಕಯ್ಯ. ಸುತ್ತಲೂ ಕೈತೋಟ. ವಿಶಾಲವಾದ ಕೈಸಾಲೆ. ಮದುವೆ ಮುಂಜಿ ಆದಾಗ ಹತ್ತಾರು ಜನ ಕೂಡಲು ಸಾಧ್ಯವಾಗುವ ಹಾಗೆ ಹಜಾರ. ದೊಡ್ಡ ಕೊಠಡಿಗಳಂತೂ ಇರಲೇ ಬೇಕಲ್ಲ, ಈಗಿನ ಕಾಲದಲ್ಲಿ. ಅಡಿಗೆ ಮನೆ, ಬಚ್ಚಲು ಮನೆ, ಇತ್ಯಾದಿ—ಹೇಳಲೇ ಬೇಕಿಲ್ಲ. ಆದರೆ ಇವೆಲ್ಲಾ ನವೀನವಾಗಿರಬೇಕು. ಸೌದೆ ಇದ್ದಿಲುಗಳ ಗಲಾಟೆಯೇ ಇಲ್ಲದ ಹಾಗೆ ಏರ್ಪಾಡು ಮಾಡಬೇಕು. ತುಂತುರು ಸ್ನಾನ ವ್ಯವಸ್ಥೆ, ಸ್ನಾನದ ತೊಟ್ಟಿ, ಇವೆಲ್ಲಾ ಇಲ್ಲದಿದ್ದರೆ ಅದೆಂಥಾ ಮನೆಯಯ್ಯ?" ಎನ್ನುವರು ಒಬ್ಬರು.

"ಎಷ್ಟೋ ಜನ ಮನೆ ಕಟ್ಟಿಸಿರುವುದನ್ನು ನಾನು ನೋಡಿದ್ದೇನೆ. ಮನೆಯೇನೋ ಚೆನ್ನಾಗಿರುತ್ತದೆ. ಆದರೆ ಅದನ್ನ ಚೆನ್ನಾಗಿ ಇಟ್ಟುಕೊಳುವುದು ಬರಬೇಕಲ್ಲ ಅವರಿಗೆ ? ಬಟ್ಟೆ ಬರೆ, ಸಾಮಾನು ಸರಂಜಾಮು—ಎಲ್ಲಾ ಚೆಲ್ಲಾಪಿಲ್ಲಿ. ಇದೊಂದೂ ಹೊರಗೆ ಕಾಣಿಸದ ಹಾಗೆ ಓರಣವಾಗಿ ಇಡುವುದಕ್ಕೆ ತಕ್ಕಂಥ ವ್ಯವಸ್ಥೆ ಮಾಡಬೇಕು," ಎಂದು ಇನ್ನೊಬ್ಬರ ಸಲಹೆ.

"ಮನೆ ಎಂದರೆ ಅಂದ ಚೆಂದಕ್ಕೆ ಲಕ್ಷ್ಯ ಕೊಡದೆ ಇರಬಾರದು. ಕೆಲವರು ಮಾಡುತ್ತಾರೆ ನೋಡಿ : ತಮ್ಮ ಕುಲದೇವರ ವಿಗ್ರಹವನ್ನು ಮನೆಯ ಮುಂದೆ ಎತ್ತರದಲ್ಲಿ ಕೆತ್ತಿಸುತ್ತಾರೆ. ಕಣ್ಣಿಗೆ ರಾವು ಬಡಿಯುವ ಹಾಗೆ ಅದರ ಮೇಲೆ ಬಣ್ಣ ಮೆತ್ತಿಸುತ್ತಾರೆ. ದೇವರನ್ನ ತೆಗೆದುಕೊಂಡು ಹೋಗಿ ಮನೆಯ ಮೇಲೆ ಹೊರಗೆ ಕೂರಿಸುವುದೇ ? ದೇವರು ಹೊರಗೇ ಇರಲಿ. ಮನೆಯ ಒಳಗೆ ಬರುವುದು ಬೇಡ— ಎಂಬುದು ಇವರ ಇಚ್ಛೆಯೋ ಏನೋ."

ದೇವರು ಮನೆಯ ಹೊರಗೇ ಇರಲಿ—ಎಂದು ಹೇಳಿದಾಗ ನನಗೆ ಒಂದು ಸಂಗತಿ ಜ್ಞಾಪಕಕ್ಕೆ ಬರುತ್ತದೆ. ಕೆಲವರು ಹೆಬ್ಬಾಗಿಲ ಮೇಲೆ ಬೀದಿಗೆ ಕಾಣುವ

ಹಾಗೆ, ಮೂರು ನಾಮವನ್ನೂ, ಆಚೆ ಈಚೆ ಗರುಡ ಹನುಮಂತರ ಚಿತ್ರವನ್ನೂ ಕೆತ್ತಿಸಿರುತ್ತಾರೆ."

"ಓ! ಅದೇ? ಹಿಂದೆ ಈ ಚಿತ್ರವನ್ನ ಯಾವ ದೃಷ್ಟಿಯಿಂದ ಕೆತ್ತಿಸುತ್ತಿದ್ದರೊ. ಈಗಂತೂ ಅದರ ಅರ್ಥಕ್ಕೆ ಯಾರೂ ಗಮನ ಕೊಡುವುದೇ ಇಲ್ಲ. ಕೈಲಾಸಂ ಹೇಳಿದ್ದು ಗೊತ್ತಿಲ್ಲವೆ? ಇವರ ಮನೆಯಲ್ಲಿ ಹನುಮಂತನೂ ಬಾಲ ಬಿಚ್ಚಲಾರನಂತೆ; ಗರುಡನೂ ಕೊಕ್ಕು ಇಕ್ಕಲಾರನಂತೆ. Neither Garuda can poke his nose nor Anjaneya wag his tail—ಅಂತ. ಮನೆಯವರ ಪ್ರತಾಪ ಎಂಥದು ಎಂಬುದನ್ನು ಈ ಚಿತ್ರ ತಿಳಿಸುವುದಂತೆ."

"ಹೋಗಲಿ ಬಿಡಿ. ಆ ವಿಚಾರ ಬೇಡ. ಅದು ಅವರವರ ನಂಬಿಕೆಯ ವಿಚಾರ. ಆ ವಿಚಾರವಾಗಿ ನಾವು ಏಕೆ ಎತ್ತಿ ಆಡಬೇಕು? ಮುಖ್ಯವಾಗಿ ಮನೆ ಚೊಕ್ಕವಾಗಿ, ಆಡಂಬರವಿಲ್ಲದೆ ಆಕರ್ಷಕವಾಗಿರಬೇಕು."

"ಮನೆ ಆಡಂಬರವಿಲ್ಲದೆ ಇರಬೇಕು ಎನ್ನುವುದೇನೋ ಸರಿ. ಕೆಲವರು ಮಾಡುತ್ತಾರೆ ನೋಡಿ. ಮನೆಯ ಮುಂದೆಲ್ಲ ಏನೇನೋ ಚಿತ್ತಾರ ಕೆತ್ತಿಸುತ್ತಾರೆ. ಪ್ರಯೋಜನ ಇರಲಿ, ಇಲ್ಲದಿರಲಿ, ಕಂಬಗಳ ಹಾಗೆ, ಬೋದುಗೆಗಳ ಹಾಗೆ ಏನೇನೋ ರಚಿಸುತ್ತಾರೆ. ಮನೆಯ ಮೇಲೆ ಗೋಪುರಗಳ ಹಾಗೆ ಬುರುಡೆಯನ್ನು ಕೆತ್ತಿಸುತ್ತಾರೆ. ಇವೆಲ್ಲಾ ಮನೆಯನ್ನು ಚೆಂದಗೆಡಿಸುತ್ತವೆ. ಪ್ರಯೋಜನ ಇಲ್ಲದ್ದರಲ್ಲಿ ಸೌಂದರ್ಯವಿಲ್ಲ."

"ಮನೆಗೆ ಹೆಸರು ಇಡಿಸುವ ವಿಚಾರ ಹೇಳಿ. ಉಚಿತವಾದ ಹೆಸರು ಇಡಿಸುವುದೂ ಒಂದು ಕಲೆ. 'ಸುಂದರವಿಲ್ಲಾ' ಎಂದು ಬೋರ್ಡು ಬರಸಿ ಹಾಕಿದ್ದವರುಂಟು. 'ಶಾಂತಾ' ಎಂದು ಮನೆಯಲ್ಲಿ ಬೆಸರಿಟ್ಟು, ಮನೆಯವರು ಸರ್ವದಾ ಕಾಗೆಗಳ ಹಾಗೆ ಕಚ್ಚಾಡುತ್ತಿರುವುದನ್ನು ನೋಡಿದ್ದೇನೆ."

ಹೀಗೆ ನಿಮ್ಮ ಮಿತ್ರರು ತಲೆಗೆ ಒಂದರಂತೆ ಮಾತಾಡುತ್ತಾರೆ. ನಡುವೆ ನೀವು ಮಾತು ಎತ್ತುತ್ತೀರಿ. "ಇದೆಲ್ಲಾ ಸರಿ. ಮನೆ ಹೇಗೆ ಕಟ್ಟಬೇಕು ಎನ್ನುವ ವಿಚಾರ ಇರಲಿ. ಅದಕ್ಕೆ ಬೇಕಾದ ಹಣ ಎಲ್ಲಿಂದ ತರುವುದು?"

"ನಿಮಗೇನಪ್ಪ ಹಣಕ್ಕೆ? ಬ್ಯಾಂಕಿನಲ್ಲಿ ಇಟ್ಟಿರುವುದನ್ನು ತೆಗೆದರೆ ಆಯಿತು. ಸಾಲದೆ ಹೋದರೆ ಸೊಸೈಟಿ ಇದ್ದೇ ಇದೆಯಲ್ಲ. ಅಲ್ಲದೆ ಈಗೇನು?

ಮನೆ ಕಟ್ಟುತ್ತೇವೆ—ಎಂದು ಹೇಳಿದರಾಯಿತು. ಸರಕಾರ ಸ್ಥಾಪಿಸಿರುವ ನಾ ನಾ ಸಂಸ್ಥೆಗಳು ನಾ ಮುಂದು ತಾ ಮುಂದು ಎಂದು ಹಣ ಸಾಲಕೊಡಲು ಬರುತ್ತವೆ. ಅದಕ್ಕೆ ಮುಂಚೆ ಮನೆ ಹೇಗಿರಬೇಕೆಂದು ಒಂದು ನಕ್ಷೆ ಬರೆಯಿಸಿ."

ಸಾಲ ತೆಗೆಯುವುದಾಗಲಿ, ನಕ್ಷೆ ತಯಾರಿಸುವುದಾಗಲಿ ಅಷ್ಟೇನೂ ಸುಲಭವಲ್ಲವೆಂಬುದು ನಿಮಗೆ ಕ್ರಮೇಣ ಅರಿವಾಗುತ್ತದೆ. ಊರಿನಲ್ಲಿರುವ ಪುಸ್ತಕದ ಅಂಗಡಿಗಳಿಗೆಲ್ಲಾ ಭೇಟಿ ಇತ್ತು, ಅವರಲ್ಲಿ ದೊರಕುವ ಮನೆಯ ನಕ್ಷೆಯ ಪುಸ್ತಕಗಳನ್ನೆಲ್ಲಾ ಕೊಂಡು ತಿರುವಿಹಾಕುತ್ತೀರಿ. ಊರಿನಲ್ಲಿ ಹೊಸದಾಗಿ ಕಟ್ಟುತ್ತಿರುವ, ಕಟ್ಟಿರುವ ಮನೆಗಳನ್ನೆಲ್ಲಾ ನೀವು ನೋಡುತ್ತೀರಿ. ಆದರೆ ಒಂದೂ ನಿಮಗೆ ಒಪ್ಪುವುದಿಲ್ಲ. ನೀವು ಲೆಕ್ಕಹಾಕಿಕೊಂಡ ಹಣಕ್ಕೆ ನೀವು ಬಯಸುವ ಬಗೆಯ ಮನೆ ಆಗುವುದಿಲ್ಲ. ಕಡಿಮೆ ಹಣಕ್ಕೆ ಮನೆ ಕಟ್ಟಿಸುವುದಾದರೆ ನಿಮ್ಮ ಕನಸು ನನಸಾಗಲಾರದು. ನೀವೂ ನಿಮ್ಮ ಮನೆಯವರೂ ಹಲವು ದಿನಗಳ ಕಾಲ–ಸಭೆ ನಡಸಿ, ಯಾವ ತೀರ್ಮಾನಕ್ಕೂ ಬರದೇ ಹೋಗುವಿರಿ. ನೀವು ಒಪ್ಪಿದ್ದು ನಿಮ್ಮವರಿಗೆ ಒಪ್ಪಿಗೆಯಾಗದು. ನಿಮ್ಮ ಆರೋಗ್ಯವೇ ಕೆಡುವ ಪರಿಸ್ಥಿತಿ ಬರುತ್ತದೆ. ಆದರೆ ಈ ಘಟ್ಟದಲ್ಲೇ ನೀವು ಆರೋಗ್ಯ ಕೆಡಿಸಿಕೊಂಡರೆ ಹೇಗೆ? ಮುಂದೆ, ಮನೆ ಕಟ್ಟಿಸುವಾಗ, ಬರುವ ನಾನಾ ತೊಡಕುಗಳನ್ನು ಎದುರಿಸಬೇಕಾದರೆ ಮನಸ್ಸನ್ನು ಸರಿಯಾದ ಸ್ಥಿತಿಯಲ್ಲಿ ಇಟ್ಟುಕೊಳ್ಳಬೇಕು. ಅಂತೂ ಮನೆಯ ನಕ್ಷೆ ತಯಾರಿಸುವ ವಿಚಾರಕ್ಕೆ ಇಷ್ಟೊಂದು ತಲೆ ಏಕೆ ಕೆಡಿಸಿಕೊಳ್ಳಬೇಕು? ನಕ್ಷೆ ತಯಾರಿಸುವವರ ಬಳಿಗೆ ಹೋಗಿ, ನಮ್ಮ ಅಗತ್ಯಗಳು ಏನೆಂಬುದನ್ನು ಅವರಿಗೆ ತಿಳಿಸಿ, ಇಂತಿಷ್ಟೇ ವೆಚ್ಚದಲ್ಲಿ ಮನೆ ಆಗಬೇಕೆಂಬುದನ್ನು ಅವರಿಗೆ ಹೇಳಿದರಾಯಿತು. ಅವರು ಎಲ್ಲವನ್ನೂ ಪರಿಶೀಲಿಸಿ ನಕ್ಷೆ ತಯಾರಿಸಿ ಕೊಡುವರು. ಆಗಬಹುದಾದ ವೆಚ್ಚದ ತಪಶೀಲನ್ನೂ ರಚಿಸಿಕೊಡುವರು. ಅನಂತರ ಉಳಿದ ವಿಚಾರ.

ನೀವು ಹೀಗೆಯೇ ಮಾಡುವಿರಿ. ನಕ್ಷೆ ತಯಾರಕರು ನಕ್ಷೆಯನ್ನೂ, ಇದಕ್ಕೆ ತಗುಲುವ ವೆಚ್ಚದ ವಿವರವನ್ನೂ ತಯಾರಿಸಿ ಕೊಡುವರು. ಆದರೆ ನೀವು ಬಯಸಿದ್ದೆಲ್ಲಾ ನಕ್ಷೆಯಲ್ಲಿ ಇರುವುದಿಲ್ಲ. "ಇದೇನು ಹೀಗೆ ಮಾಡಿದ್ದೀರಿ?" ಎಂದು ನೀವು ಅವರನ್ನು ಕೇಳುವಿರಿ." "ನೀವು ಬಯಸಿದ ಹಾಗೆಯೇ ಮನೆ ಕಟ್ಟಿಸುವುದಾದರೆ ಇನ್ನೂ ಹೆಚ್ಚು ಹಣಬೇಕು. ನೀವು ಹೇಳಿದಷ್ಟು

ಹಣಕ್ಕೆ ಮನೆ ಕಟ್ಟುವುದಾದರೆ ಅದು ಇನ್ನೂ ಚಿಕ್ಕದಾಗುವುದು. ನಾನು ಇವೆರಡರ ಮಧ್ಯಸ್ಥವಾದ ನಕ್ಷೆ ತಯಾರಿಸಿದ್ದೇನೆ. ಇನ್ನೇನು ಮಾಡುವುದೂ ಸಾಧ್ಯವಿಲ್ಲ" ಎನ್ನುವರು.

ಇನ್ನೇನು ಮಾಡುವುದು ? ವಿಧಿಯಿಲ್ಲದೆ ಅವರಿಗೆ ಅವರ ಶುಲ್ಕವನ್ನು ತೆತ್ತು ನಕ್ಷೆ ಪಡೆದು ಮನೆಗೆ ಮರಳುವಿರಿ.

ಮತ್ತೆ ಮನೆಯಲ್ಲಿ ಸಭೆ ಸಮಾಲೋಚನೆ ಪ್ರಾರಂಭ. ನಿಮ್ಮ ಮನೆಯವರಿಗೆ ಆಗಿರುವ ಅಸಮಾಧಾನವಂತೂ ಹೇಳತೀರದು. ಇಂಥ ಮನೆ ಕಟ್ಟಿಸುವುದಕ್ಕಿಂತ ಸುಮ್ಮನಿರುವುದು ಮೇಲು—ಎನ್ನುವರು ಅವರು. ಅಂತೂ ನಿಮ್ಮ ಬುದ್ಧಿಯನ್ನೆಲ್ಲ ಖರ್ಚುಮಾಡಿ ಅವರನ್ನು ಸಮಾಧಾನಪಡಿಸಬೇಕಾಗುವುದು. "ನಕ್ಷೆ ಹೀಗೆ ಇರಲಿ. ಹಣ ಕೊಟ್ಟು ಅದನ್ನು ಮಾಡಿಸಿದ್ದಾಯಿತಲ್ಲ. ಮನೆ ಕಟ್ಟಿಸಲು ಪೌರಸಭೆಯ ಒಪ್ಪಿಗೆ ಪಡೆಯಲು ಕೊಡುವ ಅರ್ಜಿಯ ಜೊತೆಗೆ ಕಳಿಸುವ ಮನೆಯ ಒಂದು ನಕ್ಷೆ ಬೇಕು. ಅದಕ್ಕೆ ಇದನ್ನು ಕಳಿಸೋಣ. ಮನೆ ಕಟ್ಟಿಸುವಾಗ ನಮಗೆ ಬೇಕಾದ ಹಾಗೆ ಬದಲಾವಣೆ ಮಾಡಿಕೊಂಡರಾಯಿತು," ಎನ್ನುವಿರಿ. ನಿಮ್ಮವರು ಹಾಗೂ ಹೀಗೂ ಸುಮ್ಮನಾಗುವರು.

ನಿಮಗೆ ಆಗಿರುವ ಅಸಮಾಧಾನವೂ ಕೂಡ ವರ್ಣನಾತೀತ. ಮನೆಯಲ್ಲಿ ಓದಿ ಬರೆಯಲು ನಿಮ್ಮದೇ ಆದ ಒಂದು ಕೊಠಡಿ ಇರಬೇಕೆಂದು ನಿಮ್ಮ ಇಚ್ಛೆ. ಆ ಕೊಠಡಿ ಗುಂಡಗೆ ಇರಬೇಕು. ಗೋಡೆಯ ಬದಿಯಲ್ಲಿ ವರ್ತುಲಾಕಾರವಾಗಿ ಪುಸ್ತಕದ ಕಪಾಟು. ನಡುವೆ ಮೇಜು, ಕುದುರೆಯ ಲಾಳದ ಆಕಾರ; ಸುತ್ತುವ ಕುರ್ಚಿ. ಏನೇನೊ ಆಸೆ. ಆದರೆ ಈ ಬಗೆಯ ಕೊಠಡಿ ಕಟ್ಟುವುದು ಸಾಧ್ಯವಿಲ್ಲ–ಎಂದು ಹೇಳುತ್ತಾರೆ ನಕ್ಷೆ ತಯಾರಕರು. ಅದೆಲ್ಲಾ ಚೆನ್ನಾಗಿಯೂ ಇರುವುದಿಲ್ಲ—ಎನ್ನುವರವರು. (ನಿಜವಾಗಿ ಹೇಳುವುದಾದರೆ, ಅವರಿಗೆ ಇಂಥ ಹೊಸ ವಿಚಾರಗಳು ಅರ್ಥವಾಗುವುದಿಲ್ಲ.) ಇರಲಿ, ಮನೆ ಕಟ್ಟುವಾಗ ನೋಡೋಣ—ಎಂದುಕೊಳ್ಳುವಿರಿ.

ಅನಂತರ ಮನೆ ಕಟ್ಟುವುದಕ್ಕೆ ಹಣದ ಏರ್ಪಾಟು. "ನಿಮಗೇನಪ್ಪ ಹಣಕ್ಕೆ ? ಬ್ಯಾಂಕಿನಲ್ಲಿ ಇಟ್ಟಿರುವುದನ್ನು ತೆಗೆದರೆ ಆಯಿತು." ಎಂದು ನಿಮ್ಮ ಮಿತ್ರರು ಹೇಳಿದರೂ, ನೀವು ಬ್ಯಾಂಕಿನಲ್ಲಿ ಎಷ್ಟು ಇಟ್ಟಿರುವಿರೆಂಬುದು

ನಿಮಗೆ ಗೊತ್ತು. ನೀವು ಬ್ಯಾಂಕಿನಲ್ಲಿ ಹಣ ಇಟ್ಟಿದ್ದೀರೆಂದು ಹೇಳಿದವರು ಅಸೂಯೆಯಿಂದ ಹಾಗೆ ಹೇಳಿದ್ದು. ಅವರು ನಿಮ್ಮ ವಿಚಾರವಾಗಿ ಯಾವಾಗಲೂ ಕೊಂಕಾಗಿಯೇ ಮಾತಾಡುವರು. ಅವರ ವಿಚಾರ ಬಿಡಿ. ಅದನ್ನು ಯೋಚಿಸಿ ಏಕೆ ತಲೆ ಕೆಡಿಸಿಕೊಳ್ಳುವಿರಿ ? ಮನೆ ಕಟ್ಟಿಸುವ ವಿಚಾರ ಆಲೋಚಿಸಿ.

ಅಂತೂ ಆರಂಭವಾಗುತ್ತದೆ ಹಣದ ಬೇಟೆ. ನಿಜಕ್ಕೂ ಹೇಳುವುದಾದರೆ, ನಿಮ್ಮಲ್ಲಿ ಏನೂ ಇರುವುದಿಲ್ಲ—ಮನೆ ಕಟ್ಟಬೇಕೆಂಬ ಆಸೆಯೊಂದನ್ನುಳಿದು. ಆಸೆಗೆ ಅನುಗುಣವಾಗಿ ಯಾರಾದರೂ ಹಣ ಕೊಡಬಹುದಾಗಿದ್ದರೆ! ಸಾಲಕ್ಕಾಗಿ ಸೊಸೈಟಿಗೋ ಸರ್ಕಾರಕ್ಕೋ ಅರ್ಜಿ ಕೊಡುವುದೆಂದರೆ ನಿಮ್ಮ ಮನಸ್ಸಿಗೆ ಏಕೋ ಹಿಡಿಸುವುದಿಲ್ಲ. ನಿಮ್ಮ ಊರು, ನಿಮ್ಮ ಕುಲ, ನಿಮ್ಮ ಆಸ್ತಿ, ನಿಮ್ಮ ತಾಪತ್ರಯ—ಎಲ್ಲವೂ ವಿಚಾರಣೆಗೆ ಬರುತ್ತವೆ. ನಿಮಗೆ ಸಾಲ ಕೊಡಬಹುದೇ ಬೇಡವೇ ಎಂಬುದನ್ನು ತೀರ್ಮಾನಿಸಲು ಹಲವು ಸದಸ್ಯರ ಒಂದು ಸಮಿತಿಯೇ ಕೂಡುತ್ತದೆ ! ನಿಮ್ಮ ಒಳಗನ್ನು ಹೊರಗೆ ಒದರುವ ಇಂಥ ಕ್ರಮ ನಿಮಗೆ ಸ್ವಲ್ಪವೂ ಒಗ್ಗದು. ಆದರೇನು ಮಾಡುವುದು ? ನಿವೇಶನ ಕೊಂಡ ತಪ್ಪಿಗೆ ಈ ಅಪಮಾನವನ್ನೆಲ್ಲ ಸಹಿಸಿಕೊಳ್ಳಬೇಕಾಗುವುದು. ಆದರೆ ಒಂದು ಸಮಾಧಾನ. ಇವರು ನಿಮ್ಮ ವಿಚಾರವನ್ನು ವಿಮರ್ಶಿಸುವಾಗ, ನಿಮಗೆ ಸಾಲ ತೀರಿಸುವ ಶಕ್ತಿ ಪ್ರವೃತ್ತಿಗಳು ಇವೆಯೋ ಎಂಬುದನ್ನು ವಿಚಾರಿಸುವಾಗ, ಇವರೆದುರಿಗೆ ನೀವು ಇರುವುದಿಲ್ಲವಲ್ಲ.

ಅಂತೂ ಮನಸ್ಸಿಲ್ಲದ ಮನಸ್ಸಿನಿಂದ ಅರ್ಜಿ ಸಲ್ಲಿಸುತ್ತೀರಿ. ಅಂತೂ ಇಂತೂ ಸಾಲ ದೊರಕುತ್ತದೆ. ಆದರೆ ಅವರು ಕೊಡಲು ಒಪ್ಪಿದ ಹಣದ ಅರ್ಧದಷ್ಟು ಹಣವನ್ನು ನೀವು ಒದಗಿಸಿಕೊಳ್ಳಬೇಕು. ಹೇಗಾಗುವುದೋ ! ಇರಲಿ, ಬಿಡಿ. ದೇವರಿದ್ದಾನೆ. ಅನಂತರ ಆರಂಭ—ಮನೆ ಕಟ್ಟುವ ಗುತ್ತಿಗೆದಾರನ ಅನ್ವೇಷಣೆ. ಅದೂ ಅಯಿತೆನ್ನಿ. ಆದರೆ ಒಮ್ಮೆ ಅವನ ಕೈಗೆ ಸಿಕ್ಕಿದರೆ ತೀರಿತು. ಅವನು ಹೇಳುವುದೊಂದು, ಮಾಡುವುದೊಂದು. ನಿಮ್ಮ ಆಸೆ ಆಕಾಂಕ್ಷೆಗಳನ್ನು ಅರ್ಥಮಾಡಿಕೊಳ್ಳುವ, ನಿಮ್ಮ ನವೀನ ಸಲಹೆಗಳನ್ನು ಕಾರ್ಯರೂಪಕ್ಕೆ ತರುವ ಶಕ್ತಿ ಅವನಿಗೆಲ್ಲಿ ? ತಳಹದಿಯಿಂದ ಛಾವಣಿಯವರೆಗೆ ಘಟ್ಟ ಘಟ್ಟದಲ್ಲೂ ಕೋಟಲೆ, ಏರುವ ವೆಚ್ಚ. ಪ್ರತಿ ಘಟ್ಟದಲ್ಲಿಯೂ ನಿಮ್ಮ

ಮನೆಯ ಪ್ರಗತಿಯನ್ನು ನೋಡಲು ಬರುವ ಮಿತ್ರರ, ಬಂಧುಗಳ ತಂಡ. ಬಚ್ಚಲು ಇಲ್ಲಿರಬೇಕು, ಕಿಟಕಿ ಇಲ್ಲಿರಬೇಕು—ಎಂಬ ನೂರೆಂಟು ಸಲಹೆ. "ಹೇಗಿದ್ದರೂ ಮನೆ ಕಟ್ಟಿಸುತ್ತಾ ಇದ್ದೀರಿ. ಉತ್ತರೋತ್ತರ ಮಹಡಿ ಕಟ್ಟಿಸಬೇಕು. ಆಗ ಗೋಡೆ, ಛಾವಣಿ ಏಕೆ ಒಡೆಸಬೇಕು ? ಈಗಲೇ ಮೆಟ್ಟಿಲು ಇಡಿಸಿಬಿಡಿ," ಎಂಬ ಉಪದೇಶ. ಹೀಗಾಗಿ ನಿಮಗೆ ತಬ್ಬಿಬ್ಬಾಗುವುದು. ದೇವರೇ, ಈ ಬಹು ವಿಧ ಸಂಕಟದಿಂದ ಪಾರು ಮಾಡಪ್ಪಾ !—ಎನ್ನುವಿರಿ. ಈ ನಡುವೆ ನೀವು ಪ್ರತಿಯೊಂದು ಬದಲಾವಣೆ ಮಾಡಿದಾಗಲೂ ವೆಚ್ಚ ಮಾತ್ರ ಏರುತ್ತಲೇ ಹೋಗುತ್ತದೆ. ಮಾಡುವುದೇನು ? ವಿಧಿಯಿಲ್ಲ. ಸ್ವಯಂ ಕೃತಾಪರಾಧ.

ಅಂತೂ ಮನೆಯೆಲ್ಲ ಕಟ್ಟಿ ಮುಗಿದು ಅದರ ಪ್ರವೇಶೋತ್ಸವ ನಡಸುವ ವೇಳೆಗೆ ನೀವು ಸೋತ ಮನುಷ್ಯರಾಗುತ್ತೀರಿ. ನೀವು ಗೆದ್ದಿರೆನ್ನುತ್ತಾರೆ, ಇತರರು. ಅಂತೂ ನಿಮ್ಮ ಕನಸಿನ ಮನೆ ಕನಸಿನಲ್ಲಿಯೇ ಉಳಿಯುವುದು. ಇಂದ್ರನ ಮೈಯ ಸಾವಿರ ಕಣ್ಣುಗಳಂತೆ ನಿಮ್ಮ ಮೈಯೆಲ್ಲಾ ಸಾಲವಾಗುವುದು. ಆದರೂ ಮನೆಯೆಂಬುದು ಒಂದಾಯಿತಲ್ಲ.

ಆದರೇನು ? ಬಚ್ಚಲು ಮನೆಯಲ್ಲಿ ನೀರು ಸರಿಯಾಗಿ ಹೋಗುವುದಿಲ್ಲ ; ಅಡಿಗೆ ಮನೆಯ ಹೊಗೆ ಮನೆಯಲ್ಲೆಲ್ಲಾ ಆಡ್ಡಾಡುತ್ತದೆ ; ಇರಲು ಜಾಗ ಏನೇನೂ ಸಾಲದು—ಎಂಬ ನೂರೆಂಟು ಕೊರತೆ. ನಿಮಗೂ ನಿಮ್ಮವರಿಗೂ ಈ ವಿಚಾರವಾಗಿ ಪ್ರತಿದಿನವೂ ವಾಗ್ವಾದ.

ಬಾಡಿಗೆ ಮನೆಯಲ್ಲಿ ಬಳಸುತ್ತಿದ್ದ ಒಡಕು ಕುರ್ಚಿ, ಮುರುಕು ಮೇಜು, ಕೀರಲಿಡುವ ರೇಡಿಯೋ ಇವನ್ನೂ ತಂದು, ಹೊಸ ಮನೆಯಲ್ಲಿ ಇದ್ದುದರಲ್ಲೇ ಓರಣವಾಗಿ ಜೋಡಿಸಿ, ರೇಡಿಯೋ ತಿರುಗಿಸುವಿರಿ. ಅದು ಹಾಡುತ್ತದೆ—

"ಓ ನನ್ನ ಚೇತನ
ಆಗು ನೀ ಅನಿಕೇತನ.
ಎಲ್ಲಿಯೂ ನಿಲ್ಲದಿರು,
ಮನೆಯನೆಂದು ಕಟ್ಟದಿರು."

ಮನೆಯನ್ನು ಕಟ್ಟದಿದ್ದರೇ ಚೆನ್ನಾಗಿರುತ್ತಿತ್ತೋ ಏನೋ. ಮುಂದೆ ತೆರಬೇಕಾದ ಸಾಲದ ಕಂತನ್ನು ನೆನೆದಾಗ ಎದೆ ನಡುಗುವುದು. "ಅವರಿಗೇನು ?

ಮನೆ ಕಟ್ಟಿಸಿದರೆಷ್ಟು ಸರಿಯಾಯಿಲ್ಲ." ಎನ್ನುವರು ಕೆಲವರು. "ಚೆನ್ನಾಗಿ ಡೊಡ್ಡು ಹೊಪಾಡಿಸಬೇಕು. ಇಲ್ಲದಿದ್ದರೆ ಮನೆ ಕಟ್ಟಿಸುವುದು ಸಾಧ್ಯವೇ ?" ಎನ್ನುವರು ಇನ್ನು ಕೆಲವರು. ಆರತೂ ಕೊನೆಗೆ ಉಳಿಯುವುದು ಈ ಅಸೂಯೆಯ ನುಡಿ ಮಾತ್ರ. ಮನೆ ಉಳಿಯುವ ವಿಚಾರ ಯಾರಿಗೆ ಗೊತ್ತು ? ಸಾಲದ ಕಂತುಗಳನ್ನೆಲ್ಲಾ ಕ್ರಮವಾಗಿ ತೆತ್ತಮೇಲೆ ತಾನೇ ಆ ವಿಚಾರ ?

ಆದರೂ, "ಮನೆ ಕಟ್ಟಿ ನೋಡಿ," ಎಂಬ ಗಾದೆಯ ಮಾತಿನಂತೆ ನಡೆದಿರಲ್ಲ. ಅಷ್ಟೇ ಸಮಾಧಾನ.

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. .....2045.....

ಪರಿಹಾಸ

ಎಂ. ಎಸ್. ಸುಂಕಾಪುರ

ಮಾನವನಲ್ಲಿ ಹೆಚ್ಚು ಮೃದುವಾಗಿ, ಮನೋಹರವಾಗಿ ಶೋಭಿಸುವ ನಗೆಯೆಂದರೆ ಪರಿಹಾಸ ; ಅದು ನಕ್ಕುನಗಿಸುವಾ ನಗೆ, ಲೇಸುನಗೆ. ಮೃದು ಹಾಸವೇ ಪರಿಹಾಸದ ಜೀವಜೀವಾಳ. ಇಂತಹ ನಗೆಯಲ್ಲಿ ಯಾರಿಗೂ ನೋವಿಲ್ಲ. ಸುಸಂಸ್ಕೃತ ಜೀವಿಗಳು ಮೆಚ್ಚಿಕೊಳ್ಳುವ ನಗೆಯ ಬಗೆ ಇದು. ಸುಸಂಸ್ಕೃತ ಜೀವಿಗಳಲ್ಲಿ ಅದು ಮನೆಮಾಡಿಕೊಂಡಿರುವುದನ್ನು ಕಾಣಬಹುದು.

ಗುಂಡನೊಬ್ಬ ನಗೆಗಾರ : ಪ್ರಸಂಗಬಂದರೆ ತಾನೇ ನಗೆಗೆ ಗುರಿಯಾಗುವ ಪ್ರಾಣಿ. ಅವನು ಒಂದು ರೀತಿಯಿಂದ ಸರ್ವತ್ರ ಸಂಚಾರಿ. ನಗು ಎಂದಾಗ ನಗುತ್ತ ಬರುತ್ತಾನೆ ಗುಂಡ. ಸಣ್ಣವನಿದ್ದಾಗ ಅವನು ಶಾಲೆಯನ್ನು ಸೇರಿ ಒಂದನೆಯ ಕ್ಲಾಸಿನಲ್ಲಿ ಓದತೊಡಗಿದ. ಸಾಹೇಬರು ಆ ಶಾಲೆಯ ಪರೀಕ್ಷೆಗೆಂದು ಬಂದಾಗಲೂ ಅದೇ ಕ್ಲಾಸಿನಲ್ಲಿದ್ದ. ಪರೀಕ್ಷೆ ಪ್ರಾರಂಭವಾಯಿತು. "ಒಂದು ದುಡ್ಡಿಗೆ ಎರಡು ಬಾಳೆಹಣ್ಣು ; ಎರಡು ದುಡ್ಡಿಗೆ ಎಷ್ಟು ಬರುತ್ತವೆ?" ಎಂದು ಸಾಹೇಬರು ಕೇಳಿದೊಡನೆ, ಎಲ್ಲ ವಿದ್ಯಾರ್ಥಿಗಳು ನಾಲ್ಕು ನಾಲ್ಕು ಎಂದು ಕೂಗಿದವು. ಕೂಗದೇ ನಿಂತವನು ಗುಂಡನೊಬ್ಬನೆ. ಸಾಹೇಬರು ಬೆಪ್ಪು-ತಕ್ಕಡಿಯಂತಿರುವ ಗುಂಡನನ್ನು ಕೇಳಿದರು : "ಎಷ್ಟು ಹಣ್ಣು ಬರುತ್ತವೆ ? ಹೇಳು" ಅಂದರು. ಗುಂಡನು ಧೈರ್ಯದಿಂದ ಕೈಕಟ್ಟಿ ನಿಂತು, "ಐದು" ಎಂದ. ಕಲಿಸಿದ ಮಾಸ್ತರರು ಭೂಮಿಗೆ ಇಳಿದಿರಬೇಕು. "ಹೇಗೆ ಮಾಡಿದೆ ಹೇಳು ?" ಎಂದು ಸಾಹೇಬರು ಕೇಳಿದಾಗ "ಸಾರ್, ದುಡ್ಡಿಗೆ ಎರಡಾದರೆ ಎರಡು ದುಡ್ಡಿಗೆ ನಾಲ್ಕು ಎನ್ನುವದೇನೋ ಸರಿ; ನಾನು ಹಗಲೆಲ್ಲ ಒಂದೇ ಅಂಗಡಿಗೆ ಹೋಗುತ್ತೇನೆ. ಆದ್ದರಿಂದ ನನಗೆ ಮೇಲೊಂದು ಸಿಗುತ್ತದೆ" ಎಂದುಬಿಟ್ಟ. ಕೇಳಿದವರೆಲ್ಲರೂ ನಕ್ಕರು. ಇಲ್ಲಿ ಯಾರಿಗೆ ನೋವಿದೆ ? ಇದೇ ಪರಿಹಾಸ.

ಪರಿಹಾಸ ತನ್ನನ್ನೇ ಕುರಿತು ಇರಬಹುದು; ಇಲ್ಲವೆ ಅನ್ಯರನ್ನು ಕುರಿತು ಇರಬಹುದು. ಒಮ್ಮೊಮ್ಮೆ ಅಲ್ಲಿ ಚುಚ್ಚುತನ ಅಲ್ಪಮಟ್ಟಿಗೆ ಸೇರಿರಬಹುದು.

ನ್ಯೂಟನ್ ಮಹಾತತ್ವಶೋಧಕ, ಮೇಧಾವಿ. ಅವನ ಮನೆಯಲ್ಲಿ ಒಂದು ಬೆಕ್ಕು; ಅದಕ್ಕೊಂದು ಮರಿ. ನ್ಯೂಟನ್ ಮನೆಯ ಬಾಗಿಲು ಮುಚ್ಚಿಕೊಂಡು ಹೊರಗೆ ಹೋದಾಗ; ಅವೆರಡೂ ಬಡಪಾಯಿ ಬೆಕ್ಕುಗಳು ಹೊರಗೆ ಹೋಗಲು ದಾರಿಯಿಲ್ಲದೆ ಒಳಗೆ ಇರಬೇಕಾಗುತ್ತಿತ್ತು. ಅವುಗಳ ತೊಂದರೆಯನ್ನು ಕಂಡು ನ್ಯೂಟನ್ ತನ್ನ ಮನೆಯ ಕದದಲ್ಲಿ ಎರಡು ಕಿಂಡಿಗಳನ್ನು ಮಾಡಿಸಿದ: ಒಂದು ದೊಡ್ಡದು. ಇನ್ನೊಂದು ಚಿಕ್ಕದು. ಆಗ ಬೆಕ್ಕುಗಳಿಗೆ ಸ್ವಾತಂತ್ರ್ಯ ದೊರೆಯಿತು. ಒಮ್ಮೆ ಅವೆರಡೂ ಕಿಂಡಿಗಳನ್ನು ಕಂಡ ಗೆಳೆಯನೊಬ್ಬ ನ್ಯೂಟನ್ನನಿಗೆ ಕೇಳಿದ: "ಈ ಎರಡು ಕಿಂಡಿಗಳೇಕೆ?" "ಈ ಕಿಂಡಿ ದೊಡ್ಡ ಬೆಕ್ಕು ಹಾಯುವದಕ್ಕಾಗಿ. ಚಿಕ್ಕದು ಅದರ ಮರಿಗಾಗಿ"—ಎಂದು ಗಂಭೀರವಾಗಿ ಉತ್ತರ ಬಂತು. "ದೊಡ್ಡ ಕಿಂಡಿಯೊಂದರಲ್ಲಿಯೇ ಚಿಕ್ಕದು ಹಾಯುವುದಿಲ್ಲವೆ?" ಎಂದು ಕೇಳಿದ ಗೆಳೆಯನಿಗೆ ನ್ಯೂಟನ್ ಉತ್ತರ ಕೊಡಲಿಲ್ಲ; ಬಿದ್ದು ಬಿದ್ದು ನಕ್ಕ. ಗೆಳೆಯನೂ ನಕ್ಕ. ಇಲ್ಲಿ ನ್ಯೂಟನ್ನನ ಮೌಢ್ಯಕ್ಕಾಗಿ ನಗೆ. ಅದು ಅವನಿಗೆ ನೋವು ಮಾಡಲಿಲ್ಲ; ನಗೆ ನೀಡಿತು.

ಜೀವನದಲ್ಲಿ ಕಣ್ಣಿಟ್ಟು ನೋಡುವಾಗ-ತೋರಿಬರುವ ವೈಪರೀತ್ಯ ನಗೆಗೆ ಕಾರಣವಾಗುವುದುಂಟು. ಗುಂಡನೊಮ್ಮೆ ಶಹರಕ್ಕೆ ಹೋಗಿದ್ದ. ಹಸಿವೆಯಾದ್ದರಿಂದ ಖಾನಾವಳಿಯನ್ನು ಅರಸಿಕೊಂಡು ನಡೆದ. ಬೀದಿಗುಂಟ ದೊಡ್ಡ ದೊಡ್ಡ ಬಂಗ್ಲೆಗಳು. ಪ್ರತಿಯೊಂದು ಕಟ್ಟಡಕ್ಕೂ ಒಂದೊಂದು ಹೆಸರಿನ ಬೋರ್ಡು. ಯಾವ ಮನೆ ನೋಡಿದರೂ 'ಜ್ಞಾನವಿಲ್ಲಾ' 'ಸುಖವಿಲ್ಲಾ' ಎನ್ನುವ ಬೋರ್ಡುಗಳೇ. ಮುಂದೆ ಹೋಗುತ್ತಲೇ ಒಂದು ಸಮಗಾರನ ಅಂಗಡಿ: ಗುಂಡ ಬೋರ್ಡು ಓದಿದ. "ಗದುಗಿನ ಚಪ್ಪಲು, ಹೊಸದಾಗಿ ಬಂದಿವೆ; ಒಂದು ಸಲ ಉಪಯೋಗಿಸಿರಿ, ಅನುಭವ ಪಡೆಯಿರಿ." ಗುಂಡನ ಕಾಲಲ್ಲಿ ಜೋಡು ಇದ್ದವು. "ಕಾಲಿಗೆ ಉಪಯೋಗವಿಲ್ಲ" ಎಂದುಕೊಂಡು ಮುಂದೆ ಸಾಗಿದ. ಪಕ್ಕದಲ್ಲಿಯೇ ಒಂದು ದೊಡ್ಡ ಕಟ್ಟಡ. ಬೋರ್ಡು ನಿಂತಿದೆ: "ಹೆಣ್ಣುಮಕ್ಕಳ ಹೆರಿಗೆ ಆಸ್ಪತ್ರೆ"—ತಲೆತುರಿಸಿಕೊಂಡು, ಗಂಡುಮಕ್ಕಳಿಗೂ ಒಂದು....ವ್ಯವಸ್ಥೆ ಇರಬಹುದೇ ಎಂದು ನಡೆದ. ಕಣ್ಣೆದುರಿಗೆ ಮತ್ತೊಂದು ದೊಡ್ಡ ಬೋರ್ಡು ನೇತಾಡುತ್ತಿತ್ತು. ಗುಂಡನಿಗೆ ಬೇಕಾದದ್ದೇ ಅದು. "ಊಟ ವಸತಿಗಾಗಿ ಇಲ್ಲಿಗೇ ಬನ್ನಿರಿ." ಮೈಮೇಲೆ ಕಾರು ಹಾದರೂ

ಎಚ್ಚರವಿಲ್ಲದವನ ಹಾಗೆ ಅಲ್ಲಿಯೇ ನಿಂತ. ಹೊಟ್ಟೆಯ ಉರಿ ಕೇಳುತ್ತದೆಯೇ ? ಗುಂಡ ಒಳಗೆ ನುಗ್ಗಿ ಮ್ಯಾನೇಜರನ ಮುಂದೆ ನಿಂತು.

"ಏನ್ರಿ ನಿಮ್ಮಲ್ಲಿ ಊಟ ಹೇಗಿರುತ್ತದೆ ?"

"ಫಸ್ಟ್‌ಕ್ಲಾಸ ! ಮನೆಯ ಊಟ ಇದ್ದಂತೆ"

"ಅಯ್ಯೋ, ಮನೆಯ ಊಟ ಬೇಸರ ಅಂತ ಬಂದರೆ ಇಲ್ಲಿಯೂ ಅದೇ ?" ಎಂದು ಹೊರಗೆ ಪಲಾಯನ ಮಾಡಿದ. ಅಂದು, ನಗೆಯೇ ಅವನಿಗೆ ಆಹಾರ.

ಗುಂಡನೊಮ್ಮೆ ಜಡ್ಡಿಗೆ ಬಿದ್ದ. ಡಾಕ್ಟರರಲ್ಲಿ ಹೋಗಿ ಔಷಧ ತೆಗೆದು ಕೊಂಡ.

ಡಾಕ್ಟರ :—"ಇದು ದೊಡ್ಡ ಜಡ್ಡು, ಪತ್ಯೆ ಚೆನ್ನಾಗಿ ಮಾಡಬೇಕು. ಹಾಲು, ಹಣ್ಣು, ಮಜ್ಜಿಗೆ ಇಷ್ಟನ್ನೇ ಸಾಕಷ್ಟು ತೆಗೆದುಕೊಳ್ಳಿ."

ಗುಂಡ: - "ಇದನ್ನೆಲ್ಲ ಉಂಡಮೇಲೆ ತಕ್ಕೊಳ್ಳಬೇಕೋ ? ಏನು ಊಟ ಕ್ಕಿಂತ ಮೊದಲೋ ?"

ಡಾಕ್ಟರರು ಮಾತ್ರ ನಗುತ್ತ ನಿಂತರು. ಗುಂಡ ಅದೇ ತಮ್ಮ ಫೀ ಎಂದ.

ಗುಂಡನ ಜೀವನವೇ ನಗುವದಾಗಿದೆ, ನಗಿಸಿಕೊಳ್ಳುವದಾಗಿದೆ. ಅವನು ತನ್ನಲ್ಲಿರುವ ಲೋಪದೋಷಗಳನ್ನೂ ಬೈಲಿಗಿಟ್ಟು ನಕ್ಕದ್ದುಂಟು ; ನಗಿಸಿ ದ್ದುಂಟು. ಬುದ್ಧಿ ಬೆಳೆಯುತ್ತಲೇ ಓದಿ, ಪಾಸಾಗಿ ಇದ್ದ ಡಿಗ್ರಿಗಳನ್ನೆಲ್ಲ ನುಂಗಿ ನೀರು ಕುಡಿದ. ಇವನ ಡಿಗ್ರಿಗಳನ್ನು ನೋಡಿ ಸಹಿಸಲಾರದ ಯಾರೋ ಇವನಿಗೆ ಪ್ರೊಫೆಸರ್ ಕೆಲಸ ಕೊಟ್ಟರು. ಉಂಡಾಡಿ ಗುಂಡ ಈಗ ಪ್ರೊ. ಗುಂಡ ಅನಿಸಿಕೊಳ್ಳುತ್ತಿದ್ದಾನೆ. ಅವನಿಗೆ ಎಲ್ಲ ವಿಷಯದ ಅರಿವೂ ಇದೆ. ಮರವೆಯ ವಿಷಯದಲ್ಲಂತೂ ನಿಷ್ಣಾತನಾಗಿದ್ದಾನೆ. ಬಹುತರ ಎಲ್ಲ ಅಧ್ಯಾಪಕರೂ ಇದನ್ನು ಸಾಧಿಸುತ್ತಾರೆಂದು ಕೆಲವರ ಹೇಳಿಕೆ. ಕೆಲವು ಅಧ್ಯಾಪಕರು ಈ ವಿಶಿಷ್ಟ ಗುಣ ದಿಂದಲೇ ಮುಂದೆ ಬಂದಿದ್ದಾರೆ. ಅವರಲ್ಲಿ ಗುಂಡನಿಗೆ ಪ್ರಥಮಪಟ್ಟ.

ಪ್ರೊ. ಗುಂಡ ಕ್ಲಾಸಿಗೆ ಹೊತ್ತಾಯಿತೆಂದು ಗಡಿಬಿಡಿ ಮಾಡದ ದಿನವೇ ಇಲ್ಲ. ಕ್ಲಾಸಿಗೋಡಬೇಕು ; ಆಗ ಏನನ್ನೋ ಮರೆಯುವುದುಂಟು. ಎಷ್ಟೋ ಸಲ, ತನ್ನ ನಲ್ಲೆಯನ್ನು ಕರೆಯಲುಹೋಗಿ ಮರೆತು ಪರಿಚಾರಿಕೆಯ

ಹೆಸರು ಜಪಿಸಿದ್ದುಂಟು. ಕ್ಲಾಸಿನಲ್ಲಿ, ಕಾಳಿದಾಸನ ಕಾಲವನ್ನೂ ಹರಿಹರನು ಹುಟ್ಟಿದ ವೇಳೆಯನ್ನೂ ನಿಶ್ಚಯಪಡಿಸುವ ಗುಂಡನಿಗೆ ನಿತ್ಯದಲ್ಲಿ ಅಂದಿನ ದಿನ, ತಾರೀಖು, ವೇಳೆಗಳನ್ನೆಲ್ಲ ಹೆಂಡತಿ ಹೇಳಿಹೇಳಿ ನಿಶ್ಚಿತಪಡಿಸಬೇಕು. ಒಂದು ದಿನ ಕ್ಲಾಸಿನಲ್ಲಿ ಭರ್ಜರಿಯಾಗಿ ಲೆಕ್ಚರು ಸಾಗಿತ್ತು. ಪ್ರೊ. ಗುಂಡನಿಗೆ ಯಾವಾಗಲೂ ಕೈಯಲ್ಲೊಂದು ಕರವಸ್ತ್ರ ಇರಲೇಬೇಕು—ಮುಖದ ಬೆವರು ಒರೆಸಿಕೊಳ್ಳಲು. ಲೆಕ್ಚರಿನ ಭರಾಟೆಯಲ್ಲಿ ಬೋರ್ಡಿನಮೇಲೆ ಏನೋ ಬರೆಯ ಬೇಕಾಯಿತು; ಅವಸರದಲ್ಲಿ ಡಸ್ಟರಿಗೆ ಕೈಹಾಕಿ-ಮರೆತಾಗ ಕರವಸ್ತ್ರದ ಕೈ ಬೋರ್ಡಿಗೆ ಹೋಯಿತು. ಡಸ್ಟರ ಹಿಡಿದ ಕೈ ಮುಖವನ್ನೊರಸಿತು. ಹುಡು ಗರನ್ನು ಕೇಳಬೇಕೆ? ಗೊಳ್ಳೆಂದು ನಕ್ಕರು. ಪ್ರೊ. ಗುಂಡನ ಕ್ಲಾಸು ಆಗಲೇ ನಿಂತುಹೋಯಿತು.

ಸಂಜೆಯಾಗುತ್ತಲೆ ಗುಂಡಸಾಹೇಬರು ಕತ್ತೆಹೊರಲಾರದಷ್ಟು ಹೊತ್ತಗೆ ಗಳನ್ನು ಬಗಲಲ್ಲಿ ಎತ್ತಿಕೊಂಡು ಮನೆಗೆ ಬರುವುದು ರೂಢಿ. ಅಂದು ಸ್ವಲ್ಪ ಹೊತ್ತಾಯಿತು-ತನ್ನ ಮನೆಯೇ ತನಗೆ ಮರವೆಯಾಗಿತ್ತೋ ಏನೋ? ಅಂತು ಮನೆಗೆ ಬಂದ; ಬಂದವನೇ ಬಾಗಿಲು ತಟ್ಟಿದ. ಅದು ತನ್ನ ಮನೆಯೆಂಬು ದನ್ನು ಆಗ ಮರೆಯಬೇಕೆ? ಒಳಗಿನಿಂದ ಕೂಗು ಕೇಳಿ ಬಂತು "ಪ್ರೊಫೆಸರರು ಇನ್ನೂ ಬಂದಿಲ್ಲ." "ಅಯ್ಯೋ ಹೀಗೋ" ಎಂದುಕೊಂಡು ಗುಂಡ ಹೊರಟೇ ಬಿಟ್ಟ. ಪುನಃ ಅವನ ಮನೆಯನ್ನು ಯಾರಾದರೂ ತೋರಿಸಿರಬೇಕು. ಅಂದಿ ನಿಂದ ತಮ್ಮ ಮನೆಗೆ ಬರುತ್ತಿದ್ದಾರೆ ಸಾಹೇಬರು!

ಒಂದು ದಿವಸ, ಪ್ರೊ. ಸಾಹೇಬರು ನಸುಕಿನಲ್ಲಿಯೇ ಎದ್ದರು. ಯಾರಿಗೋ ಒಂದು ಕಾಗದ ಬರೆದರು. ಅದನ್ನು ತಾವೇ ಪೋಸ್ಟಿಗೆ ಕಳಿಸಿಬರ ಬೇಕೆಂದು ಸಿದ್ಧರಾದರು. ಕುತ್ತಿಗೆಗೆ ಟಾಯ್ ಬಿಗಿದುಕೊಂಡು ಹೊರಗೆ ಹೋಗದಿದ್ದರೆ ಪ್ರೊ. ಎಂದು ಯಾರು ಕರೆಯಬೇಕು? ಕನ್ನಡಿಯ ಮುಂದೆ ನಿಂತುದಾಯಿತು. ತಾಸು ಕಳೆಯಿತು. ಪ್ರೊ. ಮಡದಿ "ಇದೇನು ಕನ್ನಡಿಯ ಮುಂದೆ ತಾಸುಗಟ್ಲೆ ನಿಲ್ಲುವುದೇ?" ಎಂದು ಬೆಲ್ಲು ಬಾರಿಸಿದಂತೆ ಕೂಗಿದರು. ಪ್ರೊ. ಗುಂಡ ಸಾಹೇಬರು ಕನ್ನಡಿಯನ್ನೇ ನೋಡುತ್ತ "ಅಲ್ಲೇ, ಇಲ್ಲಿ ನಿಂತ ವರು ಯಾರು ಎಂಬುದು ಹೊಳೆಯಲೇ ಒಲ್ಲದು: ಎಲ್ಲಿಯೋ ನೋಡಿದ ಹಾಗಿದೆ" ಎಂದರು. "ಅಯ್ಯೋ ದೈವವೇ, ಅವರು ನೀವೇ ಅಲ್ಲವೇ?"

ಅಂದಾಗ ನಾಚಿ, ಪ್ರೊಫೆಸರರು ಕೈಯಲ್ಲಿ ಲಕೋಟಿ ಹಿಡಿದುಕೊಂಡು ಹೊರ ಬಿದ್ದರು.

ಪೋಷ್ಟ ಆಫೀಸಿನಲ್ಲಿಯೇ ಮಾಸ್ತರರ ಮನೆ. ಅಲ್ಲಲ್ಲ; ಪೋಷ್ಟ ಮಾಸ್ತರರ ಮನೆಯ ಒಂದು ಖೋಲಿಯೇ ಆಫೀಸು. ಆ ಹೊಡೆದರೂ ಆಫೀಸು ತೆಗೆದಿಲ್ಲವೆಂದು ಪ್ರೊಫೆಸರರ ಗೊಣಗಾಟ. ಆಗ ಮಾಸ್ತರರು ಹೊರಗೆ ಬಂದು ವಿನಯದಿಂದ ಹೇಳಿದರು, "ಸಾರ್, ಇಂದು ರವಿವಾರ. ಸೂಟಿ". ಪಾಪ! ಶ್ರೀ ಗುಂಡನಿಗೆ ಅದೆಲ್ಲಿ ನೆನಪು! "ಏನೇ ಇರಲಿ; ಮಾಸ್ತರ ಸಾಹೇಬ, ಲೆಟರ ಅರ್ಜಂಟ ಹೋಗಬೇಕಾಗಿದೆ; ಒಂದು ಸ್ಟ್ಯಾಂಪ ಕೊಡಿ; ಪ್ಲೀಜ್" ಎಂದರು. ಪ್ಲೀಜ್ ಅಂದರೆ ಆಗಬಾರದ ಕೆಲಸ ಆಗುತ್ತೆ; ಮಾಸ್ತರರು ಚೀಟಿಯೊಂದನ್ನು ಕೊಡುತ್ತಲೇ ಮಾತಿಗೆ ಪ್ರಾರಂಭಿಸಿದರು, ಅವರಿಗೂ ಒಂದು ಚಟ. ಮಾತಿಗೆ ನಿಂತರೆ ಜಗತ್ತನ್ನೇ ಮರೆಯುವ ವ್ಯಕ್ತಿ ಅತ. ಮಾತಿನ ಭರದಲ್ಲಿ ಪ್ರೊ. ಹೋದಾರೆಂದು ತಿಳಿದು, ಅವರ ಕೋಟಿನ ಗುಂಡಿಯೊಂದನ್ನು ಗಟ್ಟಿಯಾಗಿ ಹಿಡಿದುಕೊಂಡು ಭಾಷಣ ಬಿಗಿಯ ಹತ್ತಿದರು, ಮಾಸ್ತರರು! ನಮಾಜಿಗೆ ಹೋದರೆ ಮಸೂತಿ ಕೊರಳಿಗೆ ಬಿದ್ದಂತಾಯಿತು, ಪ್ರೊ. ಅವರಿಗೆ. ಒಂದು ಯುಕ್ತಿ ಮಾಡಿ, ಕಿಸೆಯಲ್ಲಿದ್ದ ಚಾಕು ಶೋಧಿಸಿ ಪ್ರೊ. ಗುಂಡಿಯಿಂದ ಬಿಡು ಗಡೆ ಹೊಂದಿದರು. ಮಾತಿನಲ್ಲಿ ಮಗ್ನರಾದ ಮಾಸ್ತರರಿಗೆ ಪ್ರೊ. ಹೋದದ್ದೇ ತಿಳಿಯಲಿಲ್ಲ. ಇನ್ನೂ ಭಾಷಣ ಬಿಗಿಯುವದರಲ್ಲಿಯೇ ಇದ್ದರು. ಮಾಸ್ತರರ ಕೈಯಿಂದ ಜಾರಿಕೊಂಡ ಪ್ರೊ. ಅವರು ಹತ್ತಿರದಲ್ಲಿಯೇ ಇದ್ದ ಸಾಯಕಲ್ಲನ್ನೇರಿ ಮನೆ ಸೇರಿದರು. ಮನೆಯಲ್ಲಿ ಸಾಯಕಲ್ಲು ಇಡುತ್ತಲೇ ನೋಡುತ್ತಾರೆ— ಎರಡು ಸಾಯಕಲ್ಲುಗಳು. ತಾವು ಹೋಗುವಾಗ ನಡೆದು ಹೋದುದನ್ನೇ ಮರೆತು, ಪೋಷ್ಟಮಾಸ್ತರರ ಸಾಯಕಲ್ಲು ಏರಿ ಬಂದಿದ್ದರು. ಹೀಗೆ ಪರರ ಸಾಯಕಲ್ ತರಬಾರದೆಂದು ತಮಗೇ ತಿಳಿಹೇಳಿಕೊಂಡು, ಸಾಯಕಲ್ಲನ್ನೇರಿ ಪೋಷ್ಟಿಗೆ ನಡೆದರು. ಹೋಗಿ ನೋಡುತ್ತಾರೆ–ಮಾಸ್ತರರು ತಮ್ಮ ಕೈಯಲ್ಲಿ ಗುಂಡೀ ಹಿಡಿದುಕೊಂಡು ಇನ್ನೂ ಭಾಷಣ ಮಾಡುತ್ತಲೇ ಇದ್ದಾರೆ. ಪ್ರೊ. ಅವರು "Sorry, sir, ಇದು ನಿಮ್ಮ ಸಾಯಕಲ್ಲು; ಬರುತ್ತೇನೆ—ನಮ ಸ್ಕಾರ!" ಎಂದು ಕೆಳಗೆ ಇಳಿದದ್ದು ಮಾಸ್ತರರಿಗೆ ಕೇಳಿಸಿತೊ ಇಲ್ಲವೋ! ದೇವ ರಿಗೆ ಗೊತ್ತು? ಅಷ್ಟರಲ್ಲಿ ಪ್ರೊ. ಗುಂಡರಿಗೆ ಪುನಃ ಮರವೆ! ತಾವು ಕೊಡಲು

ತಂದ ಸಾಯಕಲ್ಲನ್ನೇ ಏರಿ, ತಮ್ಮ ಮನೆಗೆ ಬಂದರು. ಮನೆಯಲ್ಲಿ ನಿಂತು ನೋಡುತ್ತಾರೆ—ಪುನಃ ಎರಡು ಸಾಯಕಲ್ಲುಗಳು.

ಆಗ ಪ್ರೊ. ಗುಂಡರಿಗೆ ತುಂಬಾ ಆಯಾಸ; ಅವರು ಶ್ರಮ ಜೀವಿಗಳಲ್ಲ, ಬುದ್ಧಿ ಜೀವಿಗಳು. ಒಮ್ಮಿಂದೊಮ್ಮೆಲೇ ಎದೆ ನೋವಾದಂತೆ ಅನಿಸಿತು. ಹಾರ್ಟ್‌ಫೇಲ್ ಆಗಿ ಜನ ಸಾಯುವುದನ್ನು ಪತ್ರಿಕೆಯಲ್ಲಿ ಓದಿದ್ದ ಅವರು ಪಕ್ಕದ ಬೀದಿಯಲ್ಲಿಯೇ ಇದ್ದ ಡಾಕ್ಟರರಲ್ಲಿಗೆ ಓಡಿದರು. ಡಾಕ್ಟರರ ಸ್ವಭಾವ: ಯಾವುದೇ ಪೇಶಂಟ ಬರಲಿ–ಪೇಶಂಟಾಗಿ ಮುಂಗೈ ಹಿಡಿದು ನೋಡುವುದು. ಬಹುತರವಾಗಿ ನಾಡೀ ಪರೀಕ್ಷೆ ಮಾಡುತ್ತಿರಬಹುದೆಂದು ಪ್ರೊಫೆಸರರಿಗೆ ಅನಿಸಿತು. ಬಿಲ್ಲುಕೊಡುವ ಯೋಗ್ಯತೆ ಅವರ ಕೈಯಲ್ಲಿ ಇದೆಯೋ ಇಲ್ಲವೋ ಎಂದು ನೋಡಿದ್ದರೂ ನೋಡಿರಬೇಕು ಡಾಕ್ಟರರು. ಆ ಮೇಲೆ ನಾಲಗೆಯ ತಪಾಸಣೆ! ಇದೇಕೆ ನಡೆಯಬೇಕು? ಬಿಲ್ಲುಕೊಡುವ ವ್ಯಕ್ತಿಗೆ ಒಂದೇ ನಾಲಗೆ ಇದ್ದುದನ್ನು ಕಾಣುವದಕ್ಕಾಗಿ ಇರಬಹುದೆ? ಅಂತು ಡಾ. ಅವರು ಪ್ರೊ. ಅವರ ನಾಲಗೆ ಹೊರಗೆ ತೆಗೆಸಿದರು. ಅದನ್ನು ನೋಡುತ್ತಲೇ ಗಾಬರಿಯಾದ ಡಾಕ್ಟರರು:

"ಏನು ಪ್ರೊಫೆಸರ್?"

"ಏನಾಗಿದೆ ಸರ್?"

"ಅಯ್ಯೋ ಡೇಂಜರಸ್ಸು; ತಮ್ಮ ನಾಲಗೆಯಲ್ಲಿ ೧೫ ನ. ಪೈ ಸ್ಟಾಪು"

"ಅಯ್ಯೋ ನನ್ನ ಪತ್ರ ನಾಟ್‌ಪೇಡ್" ಎಂದು ಕೊಂಡು ಪ್ರೊ. ಜಿಗಿದೇ ಬಿಟ್ಟರು. ಪಾಪ! ಪೋಷ್ಟಮಾಸ್ತರರಿಂದ ತೆಗೆದುಕೊಂಡ ಚೀಟಿ ಅದು; ಹಚ್ಚುತ್ತಿದ್ದಾಗ ಮರೆತು ಅಲ್ಲಿಯೇ ಉಳಿದಿರಬೇಕು? ಇಂತಹ ನಗುವಿನಲ್ಲಿ ನೋವು ಕಡಮೆ

ಜೀವನವೇ ನಗೆಯಾಗಿರುವಾಗ ಆರಿಸಿ ಉದಾಹರಣೆ ಕೊಡುವುದು ಒಳಿತೆ? ಅತಿಯಾದರೆ ಅಜೀರ್ಣ ಸಿದ್ಧ!

ಆಸ್ತ್ಮಾ – ಅರ್ಧಷಷ್ಟ್ಯಬ್ದಿ

ಲಾಂಗೂಲಾಚಾರ್ಯ

ಈ ವರ್ಷ ನಾನು ನನ್ನ ಆಸ್ತ್ಮಾ ಅಥವಾ ಗೂರಲುಬ್ಬಸದ ಅರ್ಧ ಷಷ್ಟ್ಯಬ್ದಿಯನ್ನು ಆಚರಿಸಲು ನಿರ್ಧರಿಸಿದ್ದೇನೆ. ನನಗೆ ಆಸ್ತ್ಮಾ ಪ್ರಾರಂಭ ವಾಗಿ ಈ ನವಂಬರಿಗೆ ಸರಿಯಾಗಿ ಮೂವತ್ತು ವರ್ಷಗಳು ತುಂಬುತ್ತಿವೆ. ಈ ಸಂದರ್ಭದಲ್ಲಿ ನಾನು ಈ ಮೂವತ್ತು ವರ್ಷಗಳಲ್ಲಿ ನುಂಗಿದ, ಮೂಸಿದ ಮತ್ತು ಚುಚ್ಚಿಸಿಕೊಂಡ ಹೋಮಿಯೋಪಥಿ, ಅಲ್ಲೋಪಥಿ, ಆಯುರ್‌ಪಥಿ ಮೊದ ಲಾದ ಪಥಿಗಳ ಒಟ್ಟು ೩೭ ಬಗೆಯ ಔಷಧಗಳ ಒಂದು ಪ್ರದರ್ಶನವನ್ನು ಏರ್ಪಡಿಸಬೇಕೆಂದಿದ್ದೇನೆ; ಮತ್ತು ಆಸ್ತ್ಮಾಕ್ಕೆ ನಾನು ಪ್ರಯೋಗಿಸಬೇಕಾದ ರಾಮಬಾಣೋಪಾಯಗಳಾವುವೆಂಬ ಬಗ್ಗೆ ನನಗೆ ವಿವಿಧ ಮಿತ್ರರಿಂದ ಬಂದ ಉಪದೇಶಗಳ ಸಂಗ್ರಹವನ್ನು ಪ್ರಕಟಿಸಬೇಕೆಂದಿದ್ದೇನೆ. ಈ ಉಪಾಯಗಳು ದೀರ್ಘಶ್ವಾಸ ಬಿಡುವುದರಿಂದ ಬೀಡಿ ಸೇದುವವರೆಗೆ, ಮಂತ್ರ ಹಾಕಿಸಿಕೊಳ್ಳು ವುದರಿಂದ ಮೀನು ನುಂಗುವುದರ ವರೆಗೆ ಬಹುಮುಖವಾಗಿವೆ. ಇದೇ ಸಂದರ್ಭ ದಲ್ಲಿ ನಾನು ಆಸ್ತ್ಮಾಕ್ಕಾಗಿ ಮಧ್ಯರಾತ್ರಿಯಲ್ಲಿ ಕರೆಸಿದ ಒಟ್ಟು ೨೬ ಡಾಕ್ಟರರಿ ಗೊಂದು ಪಾರ್ಟಿಯನ್ನೂ ಕೊಡಬೇಕೆಂದಿದ್ದೇನೆ.

ನನ್ನ ಯೋಚನೆಯನ್ನು ಕೇಳಿ ನನ್ನ ಹೆಂಡತಿ ಸ್ವಲ್ಪ ಸೆಟೆದುಕೊಂಡಳು. "ನನ್ನನ್ನು ಮದುವೆಯಾಗಿ ಮೂವತ್ತೈದು ವರ್ಷಗಳಾದರೂ ನೀವು ಯಾವ ಸಮಾರಂಭವನ್ನೂ ಮಾಡಲಿಲ್ಲ. ಈಗ ಆಸ್ತ್ಮಾಕ್ಕೆ ಅರ್ಧಷಷ್ಟ್ಯಬ್ದಿ ಮಾಡ ಮಾಡಬೇಕೆನ್ನುತ್ತೀರಿ! ನನಗಿಂತ ಗೂರಲೇ ಮೇಲಾಗಿ ಹೋಯಿತು ನಿಮಗೆ!" ಎಂದು ದೂರಿಕೊಂಡಳು.

"ಪ್ರಿಯೆ! ಸ್ವಲ್ಪ ನ್ಯಾಯಾನ್ಯಾಯ ನೋಡು. ನಿನ್ನನ್ನು ಹೊರಗೆ ಹಾಕಲು ನಾನು ಎಂದೂ ಪ್ರಯತ್ನಿಸಲಿಲ್ಲ. ಆದರೆ ಈ ಆಸ್ತ್ಮಾ ನೋಡು. ನಾನು ಎಂಥೆಂಥ ಉಚ್ಚಾಟನ ಪ್ರಯೋಗಗಳನ್ನು ಮಾಡಿದರೂ ನನ್ನನ್ನು ಬಿಡದೆ ಈ ವಯಸ್ಸಿನಲ್ಲಿಯೂ ನನ್ನನ್ನು ಸೇವಿಸುತ್ತಿದ್ದಾಳೆ. ನಿಮ್ಮಿಬ್ಬರಲ್ಲಿ

ಯಾರ ಪಾತಿವ್ರತ್ಯ ಹೆಚ್ಚು ನೀನೇ ಹೇಳು. ಸವತಿ ಮತ್ಸರ ಬೇಡ," ಎಂದು ಸಬೂಬು ಹೇಳಿದೆ. ಇದಕ್ಕೆ ಅವಳ ಹೆಣ್ಣು ಬತ್ತಳಿಕೆಯಲ್ಲಿಯೂ ಯಾವ ಪ್ರತ್ಯಸ್ತ್ರ ಇರಲಿಲ್ಲ.

ಪ್ರಥಮ ಸಲ ನನಗೆ ಆಸ್ತ್ರಾ ಬಂದದ್ದು ೧೯೪೩ ರ ಅಕ್ಟೋಬರ್ ೧೭ರ ರಾತ್ರಿ. ಅಂದಿನಿಂದ ಈ ಒಲಿದು ಬಂದ ನಾರಿ ವರ್ಷಕ್ಕೆ ಎರಡು ಸಲ–ಮೇ–ಜೂನ್ ಮತ್ತು ಅಕ್ಟೋಬರ್–ನವಂಬರಿನಲ್ಲಿ–ತಪ್ಪದೇ ಬಂದು ನನ್ನ ಯೋಗಕ್ಷೇಮ ವಿಚಾರಿಸಿಕೊಳ್ಳುತ್ತಾ ಇದ್ದಾಳೆ. ಮಳೆ ಬಂದು ಬಿಸಿಲು ಕಾದರೆ ಮತ್ತು ಬಿಸಿಲು ಕಾದು ಮಳೆ ಬಂದರೆ ಅವಳಿಗೆ ನನ್ನನ್ನು ಸೇರುವ ಹಂಬಲ ತಡೆಯುವುದಾಗುವುದಿಲ್ಲ. ಅವಳು ಬರುವ ದಾರಿಗಳು ಹಲವು. ಅವಳು ಕಸ ಗುಡಿಸುವಾಗಿನ ಧೂಳಿನ ಬೆನ್ನೇರಿ ಬರುತ್ತಾಳೆ, ಹಾಲಿನ ಸಂಗಡ ಬರುತ್ತಾಳೆ. ಬಟಾಟೆ ಪಲ್ಯದಲ್ಲಿ ಹೊಕ್ಕು, ಟೊಮ್ಯಾಟೋ ಸಾಲಿನಲ್ಲಿ ಈಸುತ್ತ ಬರುತ್ತಾಳೆ. ಅವಳಿಂದ ತಪ್ಪಿಸಿಕೊಳ್ಳಬೇಕೆಂದು ನಾನು ಇವೆಲ್ಲವನ್ನೂ ವರ್ಜಿಸಿದರೆ ಬೆಳಗಿನ ಜಾವದ ಮಂಜಿನ ಪರದೆಯ ಹಿಂದೆ ಬಂದು ಬಿಡುತ್ತಾಳೆ.

ಎಲ್ಲಾ ನಲ್ಲೆಯರ ಹಾಗೆ ನನ್ನ ಆಸ್ತ್ರಾದೇವಿ ಲಹರಿಯವಳು. ದೀರ್ಘ ಕಾಲದ ಒಡನಾಟದಿಂದ ನಾನು ಅವಳ ಅನೇಕ ಸ್ವಭಾವ ವೈಚಿತ್ರ್ಯಗಳನ್ನು ತಿಳಿದುಕೊಂಡಿದ್ದೇನೆ; ಅವಳ ಬೇಕು–ಬೇಡಗಳನ್ನು ಅರ್ಥಮಾಡಿಕೊಂಡಿದ್ದೇನೆ. ಉದಾಹರಣೆಗೆ ಮೆಣಸಿನ ಕಾಳೆಂದರೆ ಅವಳಿಗೆ ಭಲೆ ಸಿಟ್ಟು. ಲವಂಗಕ್ಕೆ ಸ್ವಲ್ಪ ಮಣಿಯುತ್ತಾಳೆ. ತಂಪು ಪದಾರ್ಥ ಅವಳನ್ನು ಉದ್ರಿಕ್ತಗೊಳಿಸುತ್ತದೆ, ಇತ್ಯಾದಿ, ಆದರೆ ಅವಳ ಚಿತ್ತ ಹೇಳಲು ಬಾರದು. ಒಮ್ಮೊಮ್ಮೆ ಒಂದು ಗುಟುಕು ತಣ್ಣೀರು ಕುಡಿದರೆ ಸಾಕು, ಅವಳು ಶೀನುಗಳ ಗರ್ಜನೆಯೊಡನೆ, ಸೋರುವ ಮೂಗಿನ ಪ್ರಳಯಧಾರೆಯೊಡನೆ ಬಂದುಬಿಡುತ್ತಾಳೆ. ಮತ್ತೊಮ್ಮೆ ತಟ್ಟೆತಟ್ಟೆ ಐಸ್‌ಕ್ರೀಮ್ ತಿಂದು ನಾಲಗೆ ಚಪಲ ತೀರಿಸಿಕೊಂಡ ಮೇಲೆ ಇಂದು ರಾತ್ರಿ ಹಾಸಿಗೆ ಮೂಸಿದೊಡನೆ ಉಸಿರು ಕಟ್ಟುವ ಹಾಗೆ ಅಪ್ಪಿಕೊಂಡು ಬಿಡುತ್ತಾಳೆ ಎಂದು ನಿರೀಕ್ಷಿಸುತ್ತಿರುವಾಗ ಅವಳ ಸುಳಿವೇ ಇಲ್ಲ. ಎಫಿಡ್ರಿನ್ ನುಂಗಿದರೆ ಒಮ್ಮೆ ಸದ್ದಿಲ್ಲದೆ ಹೊರಟು ಹೋಗುತ್ತಾಳೆ; ಇನ್ನೊಮ್ಮೆ ಎದೆಯನ್ನೆಲ್ಲಾ ಒಣಗಿಸಿ ಉಸಿರನ್ನೇ ಕಸಿದುಕೊಳ್ಳುವಂತೆ ಕತ್ತು ಹಿಸುಕುತ್ತಾಳೆ. ಕೆಲವೊಮ್ಮೆ ಕಿಟಕಿ ತೆರೆದಿಟ್ಟುಕೊಳ್ಳಬೇಡ ಎಂದು ನಾಚುಗುಳಿ ಮೊದಲಗಿತ್ತಿ

ಯಂತೆ ಹಟ ತೊಡುತ್ತಾಳೆ; ಇನ್ನೊಮ್ಮೆ ಮಾನಗೆಟ್ಟವಳ ಹಾಗೆ ಕಿಟಕಿಯನ್ನು ತೆಗೆದಿಟ್ಟುಕೊಳ್ಳದಿದ್ದರೆ ನಿನ್ನ ಕತ್ತು ಹಿಸುಕುತ್ತೇನೆನ್ನುತಾಳೆ.

ಬೆಂಗಳೂರು, ಬೆಳಗಾವಿ ಮೊದಲಾದ ಬಕಾರಾದಿ ಹೆಸರುಗಳುಳ್ಳ ಸ್ಥಳಗಳು ಅವಳ ಪ್ರೇಮವನ್ನು ಉದ್ರೇಕಿಸುತ್ತವೆಂದು ನನಗೆ ಸಂಶಯವಿದೆ. ಬೆಂಗಳೂರಿನಲ್ಲೊಮ್ಮೆ ನನ್ನನ್ನು ಹಿಡಿದುಕೊಂಡವಳು ಮದ್ರಾಸ್ ದಾರಿಯಲ್ಲಿ ಕೋಲಾರ ಹತ್ತಿರವಾದೊಡನೆ ತೊರೆದು ಹೋದಳು. ಬೆಳಗಾವಿಯಲ್ಲೊಮ್ಮೆ ಬಂದ ಡಾಕ್ಟರರನ್ನೆಲ್ಲ ಸೋಲಿಸಿ ಹುಬ್ಬಳ್ಳಿಗೆ ಓಡಿಸಿದಳು. ಧಾರವಾಡದಲ್ಲಿ ಅವಳು ಯಾಕೆ ನನ್ನ ಸುದ್ದಿಗೆ ಬರುವುದಿಲ್ಲವೆಂದು ನನಗಿನ್ನೂ ಅರ್ಥವಾಗಿಲ್ಲ. ಕಾರವಾರದಲ್ಲಿ ಅವಳೇಕೆ ನನ್ನನ್ನು ತಬ್ಬಿಕೊಳ್ಳುತ್ತಾಳೆಂಬುದು ಇನ್ನೂ ಕಡಿಮೆ ಅರ್ಥವಾಗಿದೆ.

ನಿನ್ನ ಈ ಅನಿಷ್ಟ ಪ್ರಿಯಕರಿಯ ವಿಷಯ ಏನು ಬೋರು ಹೊಡೆಯುತ್ತೀಯಪ್ಪ, ಸಾಕುಮಾಡು, ಅಂತ ನೀವು ಯೋಚಿಸುತ್ತಿದ್ದೀರಿ—ನಾ ಬಲ್ಲೆ. ಆದರೆ, ಅದೀಗ ಸ್ವಾರಸ್ಯ. ನಮ್ಮ ಮಕ್ಕಳು ಮೊಮ್ಮಕ್ಕಳ ಲೀಲೆಗಳನ್ನು ಹೇಳಿಕೊಳ್ಳುವ ಹಾಗೆ ನಾವು ನಮ್ಮ ರೋಗಗಳ ಲೀಲೆಗಳನ್ನು ಕೂಡ ಬಾಯಿ ಚಪ್ಪರಿಸಿಕೊಂಡು ಹೇಳಿಕೊಳ್ಳಲು ಕಲಿಯುತ್ತೇವೆ. ಇದಕ್ಕೆ ಇತರರ ಸಹಾನುಭೂತಿಯನ್ನು ಗಳಿಸುವುದೇ ಆಂತರಿಕ ಉದ್ದೇಶವೆಂದು ಹೇಳುವ ಮನೋವಿಜ್ಞಾನಿಗಳ ಮಾತನ್ನು ನಾವು ಒಪ್ಪುವುದಿಲ್ಲ. ಸಹಾನುಭೂತಿಯ ಸಾನ್ನಿಧ್ಯದಲ್ಲಿ ನಾನು ಯಾವಾಗಲೂ ಸಂಕೋಚದಿಂದ ಮುದುಡಿಕೊಳ್ಳುತ್ತೇನೆ. ನನಗೆ ಅಕಸ್ಮಾತ್ತಾಗಿ ಬಂದುಹೋದ ನ್ಯುಮೋನಿಯ, ಟೈಫಾಯ್ಡ್, ಪ್ಲೂರಸಿ ಮೊದಲಾದ ರೋಗಗಳನ್ನು ಕುರಿತು ನಾನು ಹೀಗೆ ವರ್ಣಿಸುವುದಿಲ್ಲ.

ವಿಷಯ ಹಾಗಿಲ್ಲ. ಕ್ರಿಸ್ತದೇವ ನಿಮ್ಮ ಶತ್ರುವನ್ನು ಪ್ರೀತಿಸಿರಿ ಎಂದು ಬೋಧಿಸಿದ್ದಾನೆ. ಇದು ಒಮ್ಮೆಲೇ ಸಾಧಿಸಲು ಕಷ್ಟವೆಂದು ನಾನು ಯಾಕೆ, ಕ್ರಿಸ್ತನೇ ಒಪ್ಪಬಹುದು. ಆದರೆ ನಿಮ್ಮ ದೀರ್ಘ ಶತ್ರುವನ್ನು ನೀವು ಪ್ರೀತಿಸಲು ಕಲಿತೀ ಕಲಿಯುತ್ತೀರಿ, ಒಮ್ಮೆಲೇ ಅವನೇನಾದರೂ ಸತ್ತುಹೋದರೆ ನೀವು ಬಹಳವಾಗಿ ಗಾಬರಿಗೊಳ್ಳುತ್ತೀರಿ. ನಿಮಗೆ ಭಣಭಣ ಎನಿಸತೊಡಗುತ್ತದೆ. ಒಬ್ಬ ಶತ್ರುವಿಗೆ ಬಹಳ ಕಾಲ ಒಗ್ಗಿಕೊಂಡ ಮೇಲೆ ಹೊಸ ಶತ್ರುವಿಗೆ ಒಗ್ಗಿಕೊಳ್ಳುವುದು ತುಂಬಾ ಕಷ್ಟ. ರೋಗಗಳ ವಿಷಯವೂ ಹಾಗೆಯೇ.

ನನ್ನ ಆಸ್ತ್ಮಾ ಅರ್ಧಶತಾಬ್ದಿಯ ವಿಚಾರ ಸುಳಿದದ್ದೇ ಹೀಗೆ. ಕಳೆದ ಇಷ್ಟೆಲ್ಲಾ ವರ್ಷಗಳಿಂದ ವರ್ಷಕ್ಕೆರಡು ಬಾರಿ ಬಂದು ಹೋಗುತ್ತಿದ್ದ ಆಸ್ತ್ಮಾ ವನ್ನು ಈ ಸಲದ ನಾಡಹಬ್ಬದ ಕಾಲದಲ್ಲಿಯೂ ನಾನು ನಿರೀಕ್ಷಿಸುತ್ತಿದ್ದೆ. ಆದರೆ ಅದು ಬರುವ ಲಕ್ಷಣವೇ ಕಾಣಿಸಲಿಲ್ಲ. ನಮ್ಮ ಜೋಯಿಸರೊಮ್ಮೆ ಹೇಳಿದ್ದರು, ಕೆಲವು ದೀರ್ಘ ರೋಗಗಳು ಮೂವತ್ತು ವರ್ಷಗಳ ನಂತರ ಬಿಟ್ಟುಹೋಗುವುದುಂಟು ; ಏಕೆಂದರೆ ಮೂವತ್ತು ವರ್ಷಗಳಲ್ಲಿ ಶನಿ ರಾಶಿ ಚಕ್ರದಲ್ಲಿ ಒಂದು ಪ್ರದಕ್ಷಿಣೆ ಮುಗಿಸಿರುತ್ತಾನೆ—ಅಂತ. ಅದು ನೆನಪಾಗಿ ಆಸ್ತ್ಮಾ ನನ್ನನ್ನು ತೊರೆದುಹೋಗಿರಬಹುದೇ ಎಂದು ಸಂಶಯವಾಯಿತು. ಈ ಆಸ್ತ್ಮಾ ಸೀಜನ್ನಿಗಾಗಿ ನಾನು ಅಣಿಗೊಳಿಸಿಟ್ಟಿದ್ದ ಜೀಟ್, ಎಫಿಡ್ರಿನ್, ಕಾರ್ಟಕೋಸ್ಟಿರಾಯ್ಡ್ ಗುಳಿಗೆಗಳು, ಸ್ವಚ್ಛಗೊಳಿಸಿ ತಯಾರಿಸಿಟ್ಟಿದ್ದ ಇನ್ ಹೇಲರ್, ಹೊಸದಾಗಿ ತಂದಿಟ್ಟಿದ್ದ ಬಿಸಿನೀರ ಚೀಲ, ಆಯುರ್ವೇದದ ದಶ ಮೂಲಾರಿಷ್ಟ, ದ್ರಾಕ್ಷಾರಿಷ್ಟ, ಅಗಸ್ತ್ಯರಸಾಯನ ಇವೆಲ್ಲ ವ್ಯರ್ಥವಾಗುವವೇ? ಈ ಮೂವತ್ತು ವರ್ಷಗಳಲ್ಲಿ ನಾನು ಆಸ್ತ್ಮಾ ಚಿಕಿತ್ಸೆಗಾಗಿ ಖರ್ಚುಮಾಡಿದ್ದ ಹಣವನ್ನೆಲ್ಲ ಲೆಕ್ಕ ಮಾಡಿದೆ. ಐದು ಸಾವಿರ ಚಿಲ್ಲರೆ ಆಗಿತ್ತು. ಆ ಮೇಲೆ ಒಮ್ಮಿಂದೊಮ್ಮೆಲೆ ನನ್ನ ಹೆಂಡತಿಗೆ ಇದೇ ಅವಧಿಯಲ್ಲಿ ನಾನು ತಂದುಕೊಟ್ಟ ಸೀರೆಗಳ ಬೆಲೆ ಇದಕ್ಕಿಂತ ಸುಮಾರು ಕಡಿಮೆಯಾಗಿದೆ ಎಂಬ ಅರಿವು ಬಂತು. ಇಷ್ಟು ಖರ್ಚು ಮಾಡಿ ಅದನ್ನು ಸಾಕಿದ ಮೇಲೆ ಅದು ನನ್ನನ್ನು ಬಿಟ್ಟು ಹೋಯಿತೆ ? ನಾನು ಈ ಯೋಚನೆಯಿಂದ ಕಣ್ಣೀರು ಸುರಿಸಿದೆ ಎಂದು ಹೇಳಿದರೆ ಸ್ವಲ್ಪ ಅತಿಶಯೋಕ್ತಿಯಾದೀತು. ಆದರೆ ಖಂಡಿತವಾಗಿ ನನಗೆ ಏನನ್ನೋ ಕಳೆದುಕೊಂಡ ಹಾಗೆ ಅನ್ನಿಸಿತು. ನನ್ನ ಮಿತ್ರರೂ ಹಿತೈಷಿಗಳೂ ಆಸ್ತ್ಮಾದ ಗುಣಗಳನ್ನು ಬಣ್ಣಿಸಿದ್ದು ನೆನಪಾಯಿತು. ಒಬ್ಬರು ಆಸ್ತ್ಮಾ ಇದ್ದವರಿಗೆ ಆಯುಷ್ಯ ಹೆಚ್ಚು ಅಂದಿದ್ದರು. ಇದು ನನಗಿಂತ ನನ್ನ ವಿಮಾ ತೆಗೆದುಕೊಂಡ ಕಂಪನಿಗೆ ಹೆಚ್ಚು ಸುವಾರ್ತೆಯಾಗಿತ್ತಾದ್ದರಿಂದ ನಾನೇನೂ ಉಬ್ಬಲಿಲ್ಲ. ಆಸ್ತ್ಮಾ ಬಲು ತ್ರಾಸದ ಕಾಯಿಲೆಯೋನೋ ನಿಜ, ಆದರೆ ಆಸ್ತ್ಮಾ ಇದ್ದವರಿಗೆ ಕ್ಷಯರೋಗ ಬರುವುದಿಲ್ಲ ಎಂದು ಇನ್ನೊಬ್ಬರು ಆಶ್ವಾಸನೆ ನೀಡಿದ್ದುದನ್ನು ನೆನೆದುಕೊಂಡಾಗ ನನಗಿನ್ನು ಕ್ಷಯರೋಗ ಬಂದೀತೆ, ಈ

ವಯಸ್ಸಿನಲ್ಲಿ ಈ ಹೊಸ ರೋಗದೊಡನೆ ಒಗತನ ನನಗೆ ಸಾಧ್ಯವಾದೀತೇ ಎಂದು ಯೋಚನೆಗೆ ಬಿದ್ದೆ.

ಮತ್ತೊಂದು ವಿಷಯ ನನ್ನ ವಿಷಾದವನ್ನು ಭಯದ ರೂಪಕ್ಕೆ ತಿರುಗಿಸಿತು. ಪ್ರತಿ ಆಸ್ಪ್ರಾ ಸೀಜನ್ನಿನಲ್ಲಿ ಉಲ್ಬಣಿಸಿದ ಉಬ್ಬಸದಿಂದ ಸಾವಿನ ದವಡೆಯನ್ನು ಹೊಕ್ಕಂತಾಗಿ ನನ್ನ ಹೆಂಡತಿಯ ಆರೈಕೆಯಿಂದ ನಾನು ಮರಳಿ ಬರುತ್ತಿದ್ದೆ. ಇಂತಹ ಪ್ರತಿಯೊಂದು ಹೋರಾಟದೊಡನೆ ನನ್ನ ಹೆಂಡತಿಗೆ ನಾನು ಹೆಚ್ಚು ಜೀವದಗಂಟೆನಿಸುತ್ತ ಬಂದಿದ್ದೇನೆ. ಆಸ್ಪ್ರಾ ಹೋಗಿಬಿಟ್ಟರೆ ನನ್ನ ಹೆಂಡತಿಯ ದೃಷ್ಟಿಯಲ್ಲಿ ನನ್ನ ಮೌಲ್ಯ ಕಡಿಮೆಯಾದೀತೆ?

ಆದರೆ ಇಲ್ಲ. ನನ್ನ ಶಂಕೆಗಳು ನಿರಾಧಾರವಾಗಿದ್ದವು. ನಿನ್ನೆ ರಾತ್ರಿ ನಾನು ಅಕಸ್ಮಾತ್ತಾಗಿ ಶೀನತೊಡಗಿದೆ. ಬೆಳಗಿನ ಜಾವದಲ್ಲಿ, ಚೌಡಯ್ಯನವರ ಹದಿನೇಳು (ಅಥವಾ ಹತ್ತೊಂಬತ್ತೊ?) ತಂತಿಯ ಸಿಟೇರಿನ ಮೇಲೆ ಲಘುವಾಗಿ ಕಮಾನು ಆಡಿಸಿದಂತೆ ನನ್ನೆದೆಯಿಂದ ನಾದಸಂದೋಹ ಹೊರಹೊಮ್ಮಲಾರಂಭಿಸಿತು. ಐದು ಗಂಟೆಗೆ ಒಣ ಕೆಮ್ಮು ಪ್ರಾರಂಭವಾಯಿತು. ನನ್ನ ಹೆಂಡತಿ ಗಡಬಡಿಸಿ ಎದ್ದು ಬಿಸಿ ಬಿಸಿ ಕಾಫಿ ಮಾಡಿತಂದಳು. ನನ್ನ ತಿದಿಯೊತ್ತುವ ಎದೆಯನ್ನು ಪೂಸುತ್ತ, "ಬಹಳ ತ್ರಾಸಾಗುತ್ತಾ? ಡಾಕ್ಟರರಿಗೆ ಹೇಳಿಕಳಿಸಲಾ?" ಎಂದು ಕೇಳಿದಳು.

ನಾನು ಆಸ್ಪ್ರಾ ಅರ್ಧಷಷ್ಟ್ಯಬ್ದಿ ಆಚರಿಸಲು ನಿರ್ಧರಿಸಿದೆ.

ನಾರದಾವತಾರ

ಟಿ. ಸುನಂದಮ್ಮ

ಮೊನ್ನೆ ಒಂದು ಚಿತ್ರ ನೋಡಿದೆ, ಪೌರಾಣಿಕದ್ದು. ಓಹ್! ಏನು ಸತ್ಯಲೋಕ, ಏನು ವೈಕುಂಠ, ಎಂತಹ ಕೈಲಾಸ—ಬಣ್ಣ ಬಳಿದ ಕಾಗದದ ಕಮಲದ ಮಧ್ಯೆ ಕೂತಿರುವ ಸರಸ್ವತಿ; ಶರಾವತಿ ವಿದ್ಯುಚ್ಛಕ್ತಿಯ ನೂರಾರು ದೀಪಗಳಿಂದ ಬೆಳಗುತ್ತಿರುವ ಕಾರ್ಡ್‌ಬೋರ್ಡ್ ಆದಿಶೇಷನ ಮೇಲೆ ಸ್ಲೀವ್ ಬ್ಲೌಸಿನ ಮಹಾಲಕ್ಷ್ಮಿ; ನೈಲಾನುಡಿಗೆಯುಟ್ಟ ಶ್ರೀಮನ್ನಾರಾಯಣ; ಸಮ ಕೋಣದಲ್ಲಿ, ಸಮಾನಾಂತರದಲ್ಲಿ, ನಿಂತಿರುವ ಪ್ಲಾಸ್ಟಿಕ್ ಹುತ್ತಗಳ ಬಳಿ ಜಟಾಧಾರಿಗಳ ನಡುವೆ, ಬೆನಾರಸ್ ಸುತ್ತಿ, ನಡುಕಟ್ಟಿ, ಉಸಿರು ಹಿಡಿದು, ದೊಂಬರ ಹೆಣ್ಣಿನಂತೆ ಕಾಣುತ್ತಿರುವ ಪಾರ್ವತಿ; ಮೈಗೆ ಸುತ್ತಿದ ರಬ್ಬರ್ ಹಾವಿಗೇ ಬೆದರಿ, ಬೆಪ್ಪು ಕಳೆಯ ಮುಖಹೊತ್ತ ಪರಮೇಶ್ವರ!

ಅಸಹಜವೆನ್ನಿಸಿತ್ತೇ?—ಸಹಜವೆನ್ನಿಸುವುದಕ್ಕೆಂದೇ ಎಲ್ಲೆಂದರೆ ಅಲ್ಲಿ, ಯಾವಾಗಾದರೆ ಆಗ, ಪ್ರತ್ಯಕ್ಷನಾಗುತ್ತಿದ್ದನಲ್ಲ ನಾರದ—ವೀಣಾಪಾಣಿಯಾಗಿ?

ಅದರಲ್ಲೇನಾಶ್ಚರ್ಯ? ನಮ್ಮಲ್ಲೂ ಇಲ್ಲವೇ ಫೋಟೋಗ್ರಾಫರು? ಎಲ್ಲೆಂದರೆ ಅಲ್ಲಿ, ಯಾವಾಗಾದರೆ ಆಗ, ಪ್ರತ್ಯಕ್ಷನಾಗುವನಲ್ಲ—ಕ್ಯಾಮರಾ ಪಾಣಿಯಾಗಿ!....ಸೋಲು, ಗೆಲುವು, ಸಾವು, ಬದುಕು, ಬೆಂಕಿ, ನೀರು, ಆಕಸ್ಮಿಕ, ಅಪಘಾತ, ಖೂನಿ, ಕಳ್ಳತನ,—ಎಲ್ಲೆಡೆ ಇರುವನೀತ, ಕಲಿ ಕಾಲದ ನಾರದಾವತಾರ ನರ!....ಆತನ ಹಾಜರಿ ನಮಗೆ ಎಲ್ಲಿಯವರೆಗೆ ಮೈ ಅಂಟಿಬಿಟ್ಟದೆಯೆಂದರೆ—ಆತನಿಲ್ಲದ ಸಭೆ, ಸತ್ಕಾರ ಸಮಾರಂಭ, ಸಂತೋಷ ಕೂಟ, ಸಂಭ್ರಮ—ಬೆಣ್ಣೆಯಿಲ್ಲದ ಇಡ್ಲಿಯಂತೆ, ಸುಣ್ಣವಿಲ್ಲದ ತಾಂಬೂಲ ದಂತೆ, ಮಸಾಲೆಯಿಲ್ಲದ ದೋಸೆಯಂತೆ, ಸಕ್ಕರೆಯಿಲ್ಲದ ಕಾಫಿಯಂತೆ—ಸಪ್ಪೆ, ನೀರಸ, ನಿರುಚಿ!

ಮಾನವನಿಗೇಕೆ ಈ ದೌರ್ಬಲ್ಯ? ತನ್ನ ರೂಪ (ಕುರೂಪ?) ವನ್ನು ಪ್ರತಿಬಿಂಬಿಸಿ ಕಾಣುವುದರಲ್ಲೇನು ಖುಷಿ? ಕನ್ನಡಿಯಲ್ಲಿ ನೋಡಿ ಸಂತಸವೋ ವ್ಯಸನವೋ ಪಟ್ಟರೆ ಸಾಲದೆಂದು, ಸ್ವರೂಪವನ್ನು ಪ್ರತಿಬಿಂಬಿಸಿ, ಪ್ರದರ್ಶಿಸುವ ಚಪಲವೇಕೆ?

ನಮ್ಮ ಅಜ್ಜಿಯವರ ಮನೆಯಲ್ಲಿ, ಆಗಿನಕಾಲದ ಮದುವೆಯದೊಂದು "ಗ್ರೂಪ್ ಫೋಟೋ' ಇದೆ. ಅದರಲ್ಲಿ, ಮುಂದಿನ ಸಾಲಿನಲ್ಲಿ ಕುರ್ಚಿಯಲ್ಲಿ ಕೂತಿರುವ ಪ್ರತಿಯೊಬ್ಬರೂ, ಹೆಜ್ಜೆಗಳನ್ನು ಜೋಡಿಸಿ, ಕೈಗಳನ್ನು ತೊಡೆಯ ಮೇಲೆ ಐದು ಬೆರಳೂ ಬಿಡಿಸಿ, ಇಟ್ಟಿದ್ದಾರೆ! ಒಂದು ಬೆರಳು ಎಲ್ಲಿಯಾದರೂ ಫೋಟೋದಲ್ಲಿ ತಪ್ಪಿಹೋದೀತೆಂದು ಭಯವೇನೋ? ಮುಂದೆ ಮಂಡಿಸಿರುವ ಮಕ್ಕಳ ಮುಖದಲ್ಲಂತೂ, ಫೋಟೋಗ್ರಾಫರ್ ಮತ್ತು ಅವನ ಯಂತ್ರದ ಬಗ್ಗೆ, ದೊಡ್ಡದಾಗಿ ತೆರೆದ ಬೆರಳುಗಣ್ಣುಗಳು!

ಫೋಟೋಕ್ಕೆ "ಪೋಸ್" ಕೊಡುವುದೂ ಕೆಲವರಿಗೊಂದು ಕಲೆ. ಕ್ಯಾಮರಾದ ವಾಸನೆಯನ್ನು ದೂರದಿಂದಲೇ ಕಂಡುಹಿಡಿಯುತ್ತಾರೆ; ಕಣ್ಣಿಗದು ಬಿದ್ದೊಡನೆ, ಟೋಪಿಯನ್ನೋ, (ಸೀರೆ ಸೆರಗು ನೆರಿಯನ್ನೋ) ನೇರಮಾಡಿ, ದಂತಧಾವನ ಚೂರ್ಣದ ಜಾಹಿರಾತಿನ ನಗೆ ಮೂಡಿಸುತ್ತಾರೆ. ಅವ "ಫೋಕಸ್" ಮಾಡಿ 'ಕ್ಲಿಕ್ಕೆ'ನಿಸುವವರೆಗೂ ಹಾಗೆಯೇ ಇರುತ್ತಾರೆ!

ಘನವ್ಯಕ್ತಿಯೊಬ್ಬ ಸಮಾರಂಭ ಮುಗಿಸಿ ಮನೆಗೆ ಬಂದ; ಬಹು ಕಾಯಿಲೆ ಯಿದ್ದ ಮಡದಿಯ ಮುಂದೆ ಹಲ್ಲು ಕಿರಿದೇ ನಿಂತ. ಆಕೆ ಅಸಮಾಧಾನದಿಂದ, "ನಾನು ಸಾಯುತ್ತ ಬಿದ್ದಿದ್ದರೂ ನೀವು ನಗುತ್ತಿದ್ದೀರಲ್ಲ?" ಎಂದಾಗ, ಆತ ಉತ್ತರ ಕೊಟ್ಟದ್ದು—"ನಾನೇನು ಮಾಡಲಿ?" ನೂರಾರು "ಫ್ಲಾಷ್‌ಬಲ್ಬು" ಗಳೆದುರು ಬಿಚ್ಚಿದಬಾಯಿ; ಈಗ ಮುಚ್ಚಲು ಆಗುವುದೇ ಇಲ್ಲ!...."

ಇತ್ತೀಚೆಗೆ, ಈ ಅಭಿನಯ ನಾರದರದು ಇನ್ನೊಂದು ದುರಭ್ಯಾಸ; ವೇದಿಕೆಯ ಮೇಲಿರುವ ವ್ಯಕ್ತಿಗಳನ್ನು ಪೀಡಿಸಿದ್ದು ಸಾಲದೆಂದು, ಪ್ರೇಕ್ಷಕರನ್ನೂ ಅನಿರೀಕ್ಷಿತವಾಗಿ ಹಿಡಿದುಬಿಡುತ್ತಾರೆ! ಭಾಷಣದ ಬಿರುಸಿಗೆ ತೂಕಡಿಸುತ್ತಿರುವ ವರಿಗೂ, ಆಕಳಿಸುತ್ತಿರುವವರಿಗೂ, ಅಕ್ಕ ಪಕ್ಕದವರೊಂದಿಗೆ Aside ಸಂಭಾ ಷಣೆ ನಡೆಸುತ್ತಿರುವವರಿಗೂ ಇದೊಂದು ಮಾನಹಾನಿಯ ಪ್ರಸಂಗ!

ಕೆಲವರಿಗಂತೂ ಫೋಟೋ ಹಿಡಿಸಿಕೊಳ್ಳುವ ಹುಚ್ಚು ; ನಮ್ಮ ಮಹಿಳಾ ಸಮಾಜದ ಸದಸ್ಯೆಯೊಬ್ಬರಿದ್ದಾರೆ ; ಅವರು, ಕಾರ್ಯದರ್ಶಿನಿಯ ಕೈಕಾಲು ಹಿಡಿದು, (ಅಭಿನಯದ ಗಂಧವೇ ಇಲ್ಲದಿದ್ದರೂ) ; ವಾರ್ಷಿಕೋತ್ಸವದ ನಾಟಕದಲ್ಲಿ "ಆಯಾಳ" ಪಾತ್ರವನ್ನಾದರೂ ಗಿಟ್ಟಿಸುತ್ತಾರೆ....ಫೋಟೋ ಹಿಡಿಸಿಕೊಳ್ಳುವ ಸಲುವಾಗಿ !.....ತಮಗೆ, ಸೂಜಿಗೆ ದಾರ ಪೋಣಿಸುವ ಸಾಹಸ ಸ್ಪರ್ಧೆಯಲ್ಲಿ, ಸಮಾಧಾನ ಬಹುಮಾನವಾಗಿ ಸಿಕ್ಕಿದ ನಲವತ್ತು ಪೈಸೇ ಪಾಲಿಥಿನ್ ಕುಡಿಕೆಯನ್ನು, ಅಧ್ಯಕ್ಷಿಣಿಯ (ಅಮೃತ !) ಹಸ್ತದಿಂದ ಸ್ವೀಕರಿಸುತ್ತಿರುವ ಸವಿನೆನಪಿಗಾಗಿ—ಫೋಟೋಗ್ರಾಹಕನಿಗೆ ಮೊದಲೇ ಹೇಳಿಟ್ಟದ್ದು ಆರು ರೂಪಾಯಿ ಖರ್ಚು ಮಾಡುತ್ತಾರೆ !

ಒಮ್ಮೊಮ್ಮೆ, ಆ ಫೋಟೋಗ್ರಾಫರನ ಕಾಟ ಸಾಕೆನ್ನಿಸುತ್ತದೆ!.... ಅಂದಿನ ಸಭೆಗೆ ನೀವೇ ಸಂಚಾಲಕರೆನ್ನಿ. ವೆಚ್ಚವಿಲ್ಲದೆ ಕೆಲಸ ನಡೆಸುವ ಪ್ರಯತ್ನದ ಕೆಚ್ಚೆದೆಯಿಂದ, ಕಂಡ ಕಂಡಲ್ಲಿ ಅಲೆದು ಜಮಖಾನೆ ತಂದು ಹಾಸಿರುತ್ತೀರಿ ; ಗಂಟಲು ಕಟ್ಟಿದ ನಾರದನಿಗೆ ಗುಳಿಗೆ ನುಂಗಿಸಿ, ಪ್ರಾರ್ಥನಾ ಗೀತೆ ಹಾಡಲು ಒಪ್ಪಿಸಿರುತ್ತೀರಿ ; ಹಾದಿ ಬೀದಿಯವರನ್ನು ಕೈಮುಗಿದು, ಹಿಡಿದು, ತಂದು ತುಂಬಿಸಿರುತ್ತೀರಿ !....ಭಾಷಣಕಾರ ಬಂದಿದ್ದಾನೆ ; ಆದರೆ ಅಧ್ಯಕ್ಷ ನಾಪತ್ತೆ !....

ಮೂಲದೇವರಿಲ್ಲದೆ ಉತ್ಸವದೇವರಿಗೇನು ಬೆಲೆ ?....ಬೇಸರಹೊಂದಿ, ಜಮಖಾನೆಯ ಪಕ್ಕದ ನೆಲದಲ್ಲಿ 'ಹುಲಿ-ಕುರಿ, ದಚ್ಚಿ-ಬಾರ' ಆಡಿ ಸೋತ ಸಭಾಸದರು (?) ಎದ್ದು ಹೋಗುವೆವೆಂದು ಬೆದರಿಕೆ ಹಾಕುತ್ತಿರುವಾಗ, ಆರಾಮವಾಗಿ ಮಧ್ಯಾಹ್ನದ ನಿದ್ದೆ ತೆಗೆದು, ಹದವಾಗಿ ಟಿಫನ್ ಉಂಡು, ಹೆಂಡತಿ ಮಡಚಿಕೊಟ್ಟ ತಾಂಬೂಲ ಮೆಲುಕುತ್ತ, ಅಧ್ಯಕ್ಷಮಹಾಶಯ ಆಗಮಿಸುತ್ತಾನೆ !....ಆತನನ್ನು ನುಂಗಿಬಿಡುವಷ್ಟು ಕೋಪ ನಿಮಗೆ ಬಂದಿರುವಾಗ, "ನೋಡಿ....ಎಲ್ಲಿ ಸಾರ್....ಮೂರು ಜನವೂ, ಹಾಗೆ; ನಿಂತ್ಕೊಳ್ರಿ....ಹಿಹಿ" ಎಂದು ಕ್ಯಾಮರಾಧಾರಿ ಅಂದಾಗ, ನಗೆಯ ಮುಖವಾಡ ಧರಿಸಿ ನಿಲ್ಲುವುದು ನಿಮಗೆಂತಹ ಪ್ರಯಾಸ ?

ಅಂತೆಯೇ ಮಂತ್ರಿಪದವಿಯ ಆಶೆಯಲ್ಲಿ ಮನೆಮಾರು ಒತ್ತೆಯಿಟ್ಟು ಚುನಾವಣೆಗೆ ನಿಂತು ಸೋತವರನ್ನು—ವಿಜಯಿಯಾದ ಪ್ರತಿಸ್ಪರ್ಧಿಯ ಮಗ್ಗು

ಲಲ್ಲಿ ನಿಲ್ಲಿಸಿ ಫೋಟೋ ತೆಗೆದು, ಚಿತ್ರಹಿಂಸೆ ಕೊಡುವುದೋ? ಟೆನ್ನಿಸ್ಸೋ ಬ್ಯಾಟ್‌ಮಿಂಟನ್ನೋ, ಹಾಕಿಯೋ ಆಡಿ ಅಪಜಯ ಹೊಂದಿದಾಗಲೂ ಬಿಡುಗಡೆಯಿಲ್ಲ. ಗೆದ್ದವನ ಕೈ ಹಿಡಿಸಿ (ಕೈ ಹಾಗಿರಲಿ, ಕುತಿಗೆಯನ್ನೇ ಹಿಸುಕಿ ಹಾಕಿಬಿಡಲೇ ಎನ್ನುವ ಮನೋಪರಿಸ್ಥಿತಿ ಇರುವಾಗ!) ದೇಶಾವರದ ನಗೆ ನಗಿಸಿ, "ಫ್ಲಾಷಿ" ಸುವರಲ್ಲ?

ಸಂಗೀತಗಾರನನ್ನು ನಾನು ಸಿಂಪತ್ಯೈಸುತ್ತೇನೆಂದ್ರೆ!.....ಮೊದಲೇ, ಅವನು ಹಾಡುವಾಗ—ಬಾಯಿ ಕಿವಿಗೆ ಹೋಗಿ, ಮೂಗು ಹಣೆಗೆ ಮುಟ್ಟಿ, ಜುಟ್ಟು ಕಥಕ್ಕಳಿ ಕುಣಿದು, ದೇಹಕ್ಕೆ ಅದುರುವಾಯುವಿನ ಅಪಾಯವೇನೋ ಎನ್ನಿಸುತ್ತಿರುವಾಗ— ಪಕ್ಕನೆ ಕಣ್ಣಿಗೆ ದೀಪ ಬಿಟ್ಟರೆ, ಮೂಡಿದ ಚಿತ್ರ ನೋಡಿದ ಮಕ್ಕಳು 'ಗೊಗ್ಗಯ್ಯ'ನೆಂದು ಹೆದರದಿರಲು ಸಾಧ್ಯವೇ?

ಮಗುವಿನ ಹುಟ್ಟಿದ ಹಬ್ಬವೆಂದರೆ, ಅಭಿನವ ನಾರದನ ಅವತರಣಿಕೆಯಿಲ್ಲದೆ ಸಂಭ್ರಮ ಪರಿಪೂರ್ಣವಾಗುವಂತೆಯೇ ಇಲ್ಲ!....ಅದರ ಕಾಲಿಗೆ ಚೀಲ ತೊಡಿಸಿ, ಬೂಟ್ಸು ತುರುಕಿ; ಹೊಸ ಬಟ್ಟೆ ಉಡಿಸಿ, ತಲೆಗೆ ಎಣ್ಣೆ ಬಳಿದು, ತಿಲಕ ತಿದ್ದಿ, ಚಿತ್ರ ಹಿಂಸೆ ಮಾಡಿರುತ್ತೀರಿ; (ಹೆಣ್ಣು ಮಗುವಾದರೆ, ಅಮ್ಮನ ನೆಕ್‌ಲೇಸಿನ ಭಾರವನ್ನೂ ಆ ದಿನ ಹೊರಬೇಕು!)

ಬೆವರುತ್ತ, ಬೇಸತ್ತು, ಹಠಹಿಡಿದಿರುವ ಆ ಕೂಸನ್ನೂ ನಗಿಸಿ ಚಿತ್ರ ಬಿಡಿಸಲೇಬೇಕೆನ್ನುವುದು ನಿಮ್ಮ ಹಠ!—ಮಿಠಾಯಿ ಕೊಡಿಸಿ, ಬಿಸ್ಕತ್ ಪೊಟ್ಟಣದ ಲಂಚದಾಶೆಯಿಟ್ಟು, ಮುಖದ ಮುಂದೆ ಬೊಂಬೆ ಆಡಿಸಿ, "ನಾಯಿ ಬೌಬೌ", 'ಕೋಲಿ ಕುಕ್ಕು' "ಚಾಕೇಟು ಪೆಪ್ಪೆಂಟು"—ಎಂದೆಲ್ಲ ಬಾಲಭಾಷೆಯನ್ನೂ ಅಪ್ಪ ಅಮ್ಮಂದಿರೇ ಆಡಿ, ಅದರ ಮನವೊಲಿಸಲು ಮಾಡಿದ ಭಗೀರಥ ಪ್ರಯತ್ನದಲ್ಲಿ ವಿಫಲರಾದಾಗ ಸೋತು—'ಹೋಗಲಿ ಹಾಗೇ ತೆಗೆದ್ಬಿಡ್ರೀ' —ಎಂದು, ಆ ಅಳುಮೂಂಜಿಗೇ ಫೋಟೋ ತೆಗೆಸುತ್ತೀರಿ!...ಅಷ್ಟೇ, ಅಲ್ಲ, "ನಮ್ಮಗು ಯಾವಾಗ್ಲೂ ನಗ್ತಿರತ್ತೆ; ಅದ್ಯಾರ ಕಣ್ಣು ಬಿತ್ತೋ ಏನೋ, ಹಠ ಹಿಡಿದ್ಬಿಡ್ತು" ಎನ್ನುತ್ತ, ಆ ಅವಲಕ್ಷಣದ ಪಠವನ್ನೇ ಎಲ್ಲರ ಮೂತಿಗೂ ಹಿಡಿಯುತ್ತೀರಿ!

ದೊಡ್ಡ ಮನುಷ್ಯರ ಮಕ್ಕಳಾದರೆ, ಸಿನಿಮಾತಾರೆಯಾದರೆ, ಅವರಿಗಿಂತಲೂ ದೊಡ್ಡದಾದ "ಕೇಕ್"ನೆದುರು ನಿಲ್ಲಿಸಿ, ಖೂನಿಗೆ ಹೊರಟಿರುವಂತೆ ಕೈಗೆ ಚೂರಿ ಕೊಟ್ಟು, ಫೋಟೋ ಇಳಿಸಿ ಪ್ರತಿಕೆಗಳಲ್ಲಿ ಪ್ರಕಟಿಸುತ್ತಾರೆ!

ಎಲ್ಲವನ್ನೂ ಮೀರಿಸಿದ್ದೆಂದರೆ, ಮದುವೆ ಮನೆಯಲ್ಲಾಗುವ ಫೋಟೋ ಮಂತ್ರಪುಷ್ಪ ! ಬಹುತೇಕ, ಹದಿನೆಂಟರಿಂದ ಮೂವತ್ತರ ಒಳಗಿನ ಪ್ರಾಯದ ಹುಡುಗ ಹುಡುಗಿಯರ ಭುಜಕ್ಕೆ ಇಳಿಬಿದ್ದಿರುತ್ತದೆ—ಈ "ತಂಬೂರಿ ಭೂಮಿಗಿಳಿದ ಭಗವಂತನ (ಅರ್ಥಾತ್, ಬಸ್ಸಿನಿಂದಿಳಿದ ವರ–ದೇವರ) ಅವತಾರವಾದಾಗಿನಿಂದ, ಅವನು ಕೇವಲ 'ದಂ' ಆಗಿದ್ದು, ದಂ–ಪತಿ ಆಗಿ (ಇದ್ದ "ದಂ"ನ್ನೂ ಕಳೆದುಕೊಂಡು ?) ಹಿಂದಿರುಗುವವರೆಗೂ ಬೆನ್ನುಹತ್ತುವವರು—ಈ ಭೇ (ಫೋ) ತಾಳರು !

ಫೋಟೋ ತೆಗೆಸಿಕೊಳ್ಳುವುದರಲ್ಲಿ, ವಧೂವರರಿಗಿಂತ ಪುರೋಹಿತರದು ಹೆಚ್ಚಿನ ಆಸಕ್ತಿ. ಮಾಂಗಲ್ಯ ಕಟ್ಟಿಸುತ್ತಿದ್ದವರು, ಮಂತ್ರ ನಿಲ್ಲಿಸಿ— "ಕೊಂಚ ತಡೀರ್ರಪ್ಪ !"—ಎಂದು ಗುಡುಗಿ, ಶಲ್ಯ ನೆಟ್ಟಗೆ ಹೊದ್ದು, ಜುಟ್ಟು ಓರಣವಾಗಿ ಕಟ್ಟಿ, ಮಂತ್ರ ಮುಂದುವರಿಸುತ್ತಾರೆ ! ಅನೇಕ ಸಾರಿ, ಫೋಟೋ ಸರಿಯಾಗಿ ಬರಲೆಂದೋ ಮತ್ತಿನ್ನೂ ನಾಲ್ಕಾರು ಕ್ಯಾಮರಾ ಧಾರಿಗಳ ಉಪಕಾರಕ್ಕೆಂದೋ ವರ–ಮೂರು ಸಾರಿ ಮಾಂಗಲ್ಯ ಕಟ್ಟುವುದೂ ಉಂಟು !....ಎಷ್ಟೋ ಮದುವೆಗಳಲ್ಲಿ, ಈ 'ಫೋ'ತಾಳರ ಕೋಟಿಯಿಂದ ಸುತ್ತುವರಿದ ವಧೂವರರನ್ನೂ ಕಾಣದೆಯೇ, ಸುತ್ತುವರಿದ ಈ ನಕ್ಷತ್ರಕರ ಬೆನ್ನುಗಳನ್ನೇ ನೋಡಿ, ಹಿಂದಿರುಗಿದ ಅನುಭವ—ನಿಮಗೂ ಆಗಿರಬಹುದು !

ಎರಡು ಸಂಗಡಕ್ಕೂ, ಬೀಗರಲ್ಲಿ ಪೈಪೋಟಿ ಸಹ ನಡೆಯುವುದುಂಟು. ಅಕ್ಕ–ತಂಗಿ, ಅಣ್ಣ–ತಮ್ಮ, ಅಜ್ಜಿ–ಮೊಮ್ಮಕ್ಕಳು, ಹಳೆ ದಂಪತಿ, ಒಂದೊಂದೇ ಫ್ಯಾಮಿಲಿ,–ಈ ರೀತಿ ಗ್ರೂಪ್‌ವಾರಿ ಫೋಟೋಗಳನ್ನು ಗಂಡಿನವರು ಹಿಡಿದರೆ, ನಾವೇನು ಕಡಿಮೆ ಎನ್ನುವ ಹೆಣ್ಣಿನ ಕಡೆಯವರು, ಬಂದಿರುವ ಬಾದರಾಯಣ ಬಳಗವನ್ನೆಲ್ಲಾ ಪತ್ತೆ ಹಚ್ಚಿ, ಕಲೆ ಹಾಕಿ, ವಿಂಗಡಿಸಿ, ಮುಂಗೂಡಿಸಿ, ನಿಲ್ಲಿಸಿ–'ಕ್ಲಿಕ್ಕೆ'ನ್ನಿಯೇ ಬಿಡುತ್ತಾರೆ !

ಒಂದು ಮದುವೆಯಲ್ಲಿ, ಗಂಡಿನವರು ಅರವತ್ತು ಮಂದಿ ತಮ್ಮ ಪಡೆಯ ಗ್ರೂಫ್ ಫೋಟೋಗ್ರಾಫ್ ಹಿಡಿಸಿದಾಗ ಕೆರಳಿದ ವಧುವಿನ ತಮ್ಮ, ತಮ್ಮ

ಪಡೆಯವರನ್ನು—ನಿದ್ದೆಹೊಗಿದ್ದವರನ್ನೂ, ಜ್ವರ ಬಂದವರನ್ನೂ, ಮುಸುರೆ ಯವರನ್ನೂ, ಅಡಿಗೆ ಭಟ್ಟರನ್ನೂ ಬಿಡದೆ—ಸಂಖ್ಯೆ ಅರವತ್ತೈದಕ್ಕೇರಿಸಿ, ಕ್ಯಾಮರಾ ಕಣ್ಣಿಗಂಟಿಸಿಕೊಂಡು—(ಎಲ್ಲರೂ ಕೇಳಿಸಿಕೊಳ್ಳಲೆಂದು) ಜೋರಿ ನಿಂದ ಹತ್ತು ಬಾರಿ ರೆಡಿ, ಸ್ಟೆಡಿ, ಹೇಳಿ—ಕ್ಲಿಕ್ಕಿಸಿದ!...ತಿಂಗಳ ಮೇಲೆ ತಿಳಿ ಯಿತು—ಕ್ಯಾಮರಾದಲ್ಲಿ ಫಿಲಂ ಇರಲಿಲ್ಲವೆಂದು!

ಫೋಟೋಗ್ರಾಫರ್, ಸರ್ವಾಂತರ್ಯಾಮಿ—ನಾರದನಂತೆ. ವನ ಮಹೋತ್ಸವ, ದನಮಹೋತ್ಸವ, ಉದ್ಘಾಟನೆ, ಉಚ್ಚಾಟನೆ, ಪ್ರಾರಂಭ. ಮುಕ್ತಾಯ, ಕಟ್ಟಡದ ಅಸ್ಥಿಭಾರ, ಗೋಪುರದ ಪುನರುದ್ಧಾರ, ಬಸ್ಸಿನ ಪೂಜೆ, ಕಂಬಿ ತಪ್ಪಿದ ರೈಲು, ಡಿಕ್ಕಿ ಹೊಡೆದ ಕಾರು, ಉರುಳಿದ ಲಾರಿ, ಬಾಗಿಲು ತೆಗೆದ ಹೊಟೇಲು, ಬಂದಾದ ಥಿಯೇಟರು,—ಶುಭ ಸನ್ನಿವೇಶವಾಗಲೀ, ಅಶುಭ ಘಟನೆಯಾಗಲೀ, ವಾಸನೆ ಹಿಡಿದು ಹಾಜರಾತಿ ಹಾಕಿಯೇ ಬಿಡುತ್ತಾನೆ!

'ನಾರದಾವತಾರ' ಪುರಾಣಕ್ಕೆ ಇನ್ನೂ ಎಷ್ಟೋ ಅಧ್ಯಾಯಗಳಿವೆ; ಆದರೆ, ಹೇಳಲು ನನಗೆ ಅವಕಾಶವಿಲ್ಲ! ಏಕೆಂದರೆ.....ಹಿಹಿ.....ನಾಳೆ... ನಾನೂ ನನ್ನ "ಬರ್ತ್‌ಡೇ" ಸಮಾರಂಭ ಏರ್ಪಡಿಸಿಕೊಂಡಿದ್ದೇನೆ—ಜೀವನ ದಲ್ಲಿ ಮೊದಲ ಬಾರಿಗೆ (ವಯಸ್ಸು ಮಾತ್ರ ಕೇಳಬೇಡಿ!) ಹಿಹಿ ಫೋಟೋ ಗ್ರಾಫರನಿಗೆ ಹೇಳಿಬರಬೇಕು, ಹೊತ್ತಾಯ್ತು!

ಬೆಕ್ಕು

ಎನ್. ಎಸ್. ಗದಗಕರ

"ಇದೇನು! ಬೆಕ್ಕಿನ ಮರಿ ಹಾಂಗ ಚಿನ್ನಾಟ ನಡಿಸೀಯೋ, ಬಾಳೂ" ಎಂದು ತಂದೆ ಮಗನ ಬಗ್ಗೆ ಆಕ್ಷೇಪವೆತ್ತುವಾಗ, ಚಿಕ್ಕ ಮಗು ಯಾವುದೋ ಒಂದು ವಸ್ತುವಿನ ಆಶೆಗಾಗಿ ಹೀಗೆ ಮಾಡುತ್ತಿರಬಹುದೆಂದು ತಂದೆಗೆ ಖಚಿತ ವಾಗಿರುವದು. ಹಾಗೆಯೇ ಹುಡುಗನು ಮುಂದೆ ಕೆಲ ನಿಮಿಷಗಳಲ್ಲಿಯೇ ತಂದೆಗೆ ದುಂಬಾಲು ಬಿದ್ದು ಓ-ಲ ನಯೆಪೈಸೆಗಳ ಪೆಪ್ಪರಮೆಂಟ ಇಲ್ಲವೆ ಚಾಕ್ ಲೇಟ್‌ಗಳ ಮಾಗಣಿ ಮುಂದುವರಿಸುವನು. ತಂದೆ ಎಷ್ಟು ಚಾಣಾಕ್ಷನಿದ್ದರೂ ಮಗನ ಬುದ್ಧಿಮತ್ತೆಗೆ ಮನಸೋಲದೆ ಗತಿ ಇಲ್ಲ.

ಇಂತಹ ಬೆಕ್ಕು ನಾಯಿಯಷ್ಟು ನಂಬಿಗಸ್ತವಲ್ಲವೆಂದು ನಿತ್ಯ ಜೀವನದಲ್ಲಿ ನಾವು ಕಂಡುಂಡ ಸಂಗತಿ. ಹಿಲೇರ್ ಬೆಲಾಕ್ ಎಂಬ ಆಂಗ್ಲ ಪ್ರಬಂಧಕಾರ ತನ್ನ "Conversation with a cat" ಎಂಬ ಪ್ರಬಂಧದಲ್ಲಿ ಈ ಮಾತನ್ನು ನನಗೆ ಮನದಟ್ಟಾಗಿಸಿ ಕೊಟ್ಟಂದಿನಿಂದ ನನಗೆ ಬೆಕ್ಕಿನ ಬಗೆಗೆ ದ್ವೇಷವಿಲ್ಲ. ಆದರೆ ಪ್ರೀತಿಯ ಅತಿವೃಷ್ಟಿಯನ್ನು ನಾನೆಂದಿಗೂ ಮಾಡಲಾರೆ. ಆದರೆ ಮನೆ ಯಲ್ಲಿಯ ನಮ್ಮ ಹುಡುಗರು ನಮ್ಮ ಮನೆಯ (?) ಬೆಕ್ಕಿಗಾಗಿ ಜೀವ ಕೊಡುತ್ತಾರೆ. ತಾವು ತಿನ್ನುವದನ್ನು ಮೊದಲು ಅದಕ್ಕೆ ತಿನಿಸುತ್ತಾರೆ. ಇಷ್ಟಾ ದರೂ ಅದು ತಿನ್ನುವದಾದೊಡನೆ ನೆರೆಹೊರೆಯವರ ಮನೆ ಸೇರುವದು. ಆ ಜಾತಿಯ ಪ್ರಾಣಿಗಳ ಗುಣಧರ್ಮವೇ ಇದು! ಮನುಷ್ಯನ ವಿವೇಕ ಬುದ್ಧಿ ಪ್ರಾಣಿವರ್ಗಕ್ಕೆ ಬರುವದು ಸಾಧ್ಯವೆಂತು? "Man is most rational animal" ಎಂಬ ವ್ಯಾಖ್ಯೆ ಕೂಡ ವಿಡಂಬನೆಗೆ ಗುರಿಯಾಗುತ್ತಿತ್ತು— ತಾರತಮ್ಯವಿಲ್ಲದಿದ್ದಲ್ಲಿ!

ಪ್ರಾಣಿ ಶಾಸ್ತ್ರಜ್ಞರು ಬೆಕ್ಕಿನ ಜಾತಿಯ ವ್ಯಾಪ್ತಿಯನ್ನು ರಂಜಕವಾಗಿ ವಿವರಿಸುವರು. ಕರಡಿ, ಹುಲಿ, ಚಿರ್ಚುಗ, ಸಿಂಹ—ಮುಂತಾದವು ಅದರ ನಿಕಟವರ್ತಿ ಬಳಗ. ಅದು ಉಳಿದೆಲ್ಲ ಪ್ರಾಣಿಗಳಿಗೆ ಎಲ್ಲ ವಿದ್ಯೆ ಕಲಿಸಿ ಕೊನೆಗೆ

ಮರ ಏರುವದನ್ನು ಮಾತ್ರ ಬಿಟ್ಟಿದ್ದರಿಂದ ಪ್ರಾಣಿ ವರ್ಗದಲ್ಲಿ ಎಲ್ಲರ ಪ್ರೀತಿಗೆ ಪಾತ್ರವಾಗಿ ಶ್ರೇಷ್ಠ ಎನಿಸಿಕೊಂಡಿತೆಂದು ಹಿರಿಯರು ಮಕ್ಕಳಿಗೆ ರುಚಿಕಟ್ಟಾಗಿ ಕತೆಮಾಡಿ ಹೇಳುತ್ತಾರೆ. ಆದರೆ ಮಂಗನ ಮುಂದೆ ಬೆಕ್ಕು ಜಾಣವಲ್ಲ ಎಂದು ಹಿತೋಪದೇಶ ಪಂಚತಂತ್ರಗಳು ಕತೆಮಾಡಿ ಹೇಳುತ್ತವೆ. ಎರಡು ಬೆಕ್ಕುಗಳು ಒಮ್ಮೆ ಬೆಣ್ಣೆ ಕದ್ದು ಜಗಳ ತೀರಿಸೆಂದು ಮಂಗನ ಕಡೆಗೆ ಹೋದವಂತೆ. ಅದು ಬೆಣ್ಣೆಯ ಮುದ್ದೆಯನ್ನು ತೀರಿಸಿಬಿಟ್ಟಿತಂತೆ, ಇರಲಿ ಬಹುಶಃ ಇಬ್ಬರ ಜಗಳದಲ್ಲಿ ಮೂರನೆಯವರಿಗೆ ಲಾಭ ಎಂಬ ಸಿದ್ಧಾಂತಮಂಡಿಸುವ ಭರದಲ್ಲಿ ಬೆಕ್ಕಿನ ಜಾತಿಯನ್ನು ಕತೆಯಲ್ಲಿ ಬಳಸಿರಬೇಕು.

ಬೆಕ್ಕು ಎಷ್ಟೇ ಸಲುಗೆಗೆ ಪಾತ್ರವಾದ ಪ್ರಾಣಿಯಾದರೂ, ಅದರ ಉಗುರಿನಿಂದ ನಂಜು ಏರುವದು. ಅದು ಚಿನ್ನಾಟಕೆಯಾಡಿದರೂ, ಅದರೊಡನೆ ಜಾಗರೂಕರಾಗಿರುವದೇ ವಿಹಿತ. ಅರ್ಥ ಮರ್ಥ ಉಳಿದ ಕ್ರೂರ ಕಾಡು ಪ್ರಾಣಿಗಳ ಲಕ್ಷಣಗಳೇ ಅದರಲ್ಲಿರುವವು. ಜನರಿರುವ ಮನೆಗಳಲ್ಲಿ ಅಲೆದಾಡುವದೆಂದು ಮಾತ್ರ ಅದಕ್ಕೆ ಸಾಕಿದ ಪ್ರಾಣಿ ಎಂದು ನಾವು ಮನ್ನಿಸಬೇಕಾಗುವದು. ಅದು ನಿಜಕ್ಕೂ ಶಿಸ್ತಿನ ಪ್ರಾಣಿ. ಅಚ್ಚುಕಟ್ಟು ಚಟಗಳು. ಆಗೀಗ ತನ್ನ ಮೈಯನ್ನು ಸ್ವಚ್ಛ ಇಲ್ಲವೆ ಹಸನಮಾಡಿಕೊಳ್ಳುವದು. ಅಸ್ವಚ್ಛತೆಯ ಆಗರವಾದ ಹಲವಾರು ಚಿಕ್ಕ ಮಕ್ಕಳಿಗೆ ಇದರ ಆದರ್ಶ ಹೇಳಿದರೆ ತಪ್ಪಲ್ಲ. ಅದರ ಕಣ್ಣಿನ ಹೆಸರು ಬಣ್ಣ ಭಾರತೀಯರಿಗೆ ಅಂದಗೇಡಿ ಅನಿಸಿದರೂ, ಪಾಶ್ಚಿಮಾತ್ಯರಿಗೆ ಆ ಬೆಕ್ಕಿನ ಕಣ್ಣು ಮೆಚ್ಚಿನದು. ಮನೆಯಲ್ಲಿ ಅದರ "ಕಾಥುಳಿ" ಹೆಚ್ಚಿನದು. ಇದನ್ನು ನೋಡಿಯೇ ಕನ್ನಡದ ವರಕವಿ ಬೇಂದ್ರೆಯವರು "ಬೆಕ್ಕು ಹಾರುತಿದೆ ನೋಡಿದಿರಾ ?" ಎಂಬ ಅಣಕುವಾಡು ಬರೆದು ಅದರ ಅಖಂಡ ಲೀಲಾಜಾಲವನ್ನು ವಿಸ್ತೃತವಾಗಿ ರಸವತ್ತಾಗಿ ನಿರೂಪಿಸಿರುವರು. ಅವರೇ ರಚಿಸಿದ "ಹಕ್ಕಿ ಹಾರುತಿದೆ ನೋಡಿದಿರಾ ?" ಎಂಬ ಪದ್ಯದ ಗಾಂಭೀರ್ಯವೆತ್ತ ? ಉಡಾಳತನದ ಈ ಬೆಕ್ಕಿನ ಬಗೆಗಿನ ಕವಿತೆಯೆತ್ತ ? ಎರಡೂ ಅಜಗಜಾಂತರ ; ಆದರೆ ವಿಡಂಬನೆಯ ಸೊಬಗನ್ನು ಹೀಗಳೆಯುವದುಂಟೆ ? ವಿಡಂಬನೆಗೆ ನಾವು ರೋಸಿ ಹೋಗುವಷ್ಟು ಶ್ರೀಮದ್ ಗಾಂಭೀರ್ಯ ತೋರಿದರೆ ಅವ್ಯವಹಾರಿಗಳಾದೇವು ! ಅದೇ ಶ್ರೀ ಅಂಬಿಕಾತನಯದತ್ತರು "ವರದಾ ಕಂಚಿ ವರದಾ" ಎಂಬ ಭಕ್ತಿ ಪ್ರಪೂರ್ಣ ಹಾಡನ್ನು ಕೂಡ ವಿಡಂಬಿಸಿರುವರು. ಅದು "ತಗಣಿ

ಒದಾವಾ" ಎಂದು ವಿಖ್ಯಾತವಾಗಿದೆ. ಕವಿಯ ಪ್ರಾಸದ ಮೋಹಕತೆ, ಕಲ್ಪನೆಯ ಕುಸುರನ್ನು ವಿನೋದ ಬುದ್ಧಿಯನ್ನು ನಾವು ಅರಿತರೆ ಚೆನ್ನು !

ಬೆಕ್ಕು ಬಲು ನಾಜೂಕಾದ ಪ್ರಾಣಿ. ಅದರ ಹರಿದಾಟ ಸರಿದಾಟ ಬಲುಮೃದು. ಅದೇ 'ಧಡಪಡ' ಮಾಡಿದರೆ ಅದು ಬದುಕುವದೆಂತು ? ಅದಕ್ಕೆ ದಿನೇ ದಿನೇ ಇಲಿ ಹೆಗ್ಗಣ ಹೇಗೆ ಸಿಕ್ಕಾವು ? ಇಂತಹ ಬೆಕ್ಕಿಗೆ ಗಂಟೆ ಕಟ್ಟ ತಾವು ಉಳಿದುಕೊಳ್ಳಬೇಕೆಂದು ಹಪಾಪಿಸಿದ ಮೂಷಕ ವ್ರಾತದ ಕತೆ ನಮಗೆ ಕೇಳಿಗೊತ್ತು. "Who can bell the cat ?" ಎಂಬುದು ಅತೀವ ಲೋಕಪ್ರಿಯ ಉಕ್ತಿಯಾಗಿ ಪರಿಣಮಿಸಿದೆ. ಒಂದು ಗಾದೆಮಾತಿನ ಭಾವ ಗರ್ಭಿತತೆ ಅದರಲ್ಲಿ ಅಡಕವಾಗಿದೆ.

ಬೆಕ್ಕುಗಳಲ್ಲಿ ಹಲವು ಮಲೆನಾಡಿನಲ್ಲಿ ಹುಟ್ಟಿ ಬೆಳೆದು 'ಮಂಟ ಬೆಕ್ಕು' ಎಂದು ಭಯಾನಕವಾಗಿ ಪರಿಣಮಿಸಿವೆ. ಪುನುಗಿನ ಬೆಕ್ಕಂತೂ ಸುಗಂಧಮಯ ವಾಗಿರುವದು. ಅತಿ ರೌದ್ರ ರೂಪ ತಳೆಯುವ ಅನಾಗರಿಕ ಬೆಕ್ಕಿಗೆ ಬಾವುಗ ಎನ್ನುವರು. ಅದು ಮರಿಗಳನ್ನು ತಿಂದು ಬದುಕುವಷ್ಟು ದುಷ್ಟವಾಗಿದೆ. ಎಷ್ಟೋ ಸಲ ಇರುಳು ಬೆಕ್ಕಿನ ಕೋಲಾಹಲವನ್ನು ಕಂಡು ಕಳ್ಳರೇ ಬಂದರೆಂದು ಹುಯಿಲೆಬ್ಬಿಸಿ ಹುಚ್ಚರಾದ ಸನ್ನಿವೇಶ ನಾವು ಕಂಡದ್ದುಂಟು.

ಮುಖ್ಯವಾಗಿ ಬೆಕ್ಕು ಕುತ್ಸಿತ ನಿರುಪಯೋಗಿ ಪ್ರಾಣಿಯೆಂದರೆ ನಾವು ಒಪ್ಪಲಾಗದ ಮಾತು. ಪಾಶ್ಚಿಮಾತ್ಯ ದೇಶಗಳಲ್ಲಿ ಅದಕ್ಕೆ ಮನ್ನಣೆ ಉಂಟು. ನಾಯಿಯಂತೆ ಅದನ್ನು ಪ್ರೀತಿಸುವರು. ಇಲಿಗಳ ಕೋಡಿಯನ್ನು ಹಣ್ಣು ಮಾಡುವ, ನಿರ್ನಾಮಿಸುವ ಸೊತ್ತು ಅದರದು. ಪಾಪ ! ಒಂದು ಒಳ್ಳೆ ಬೆಕ್ಕು ಸಿಕ್ಕುಬಿಟ್ಟದ್ದರೆ ತುಂಗಾತೀರದ ಕಿಂದರಜೋಗಿ ದುರ್ಗತಿಗೀಡಾಗುತ್ತಿರಲಿಲ್ಲ. ಊರ ಮಕ್ಕಳು ಗುಡ್ಡದ ಗವಿಸೇರದೆ ಜೀವಂತ ಉಳಿಯುತ್ತಿದ್ದವು ಪಾಪ! ಅಲ್ಲಿಯ ಇಲಿಗಳು ಕತೆಯೊಳಗಿನವು. ಅತಿ ಪ್ರಚಂಡ ! ಬೆಕ್ಕೇ ಅವುಗಳ ಮುಂದೆ ನಿಲ್ಲಲು ಅಂಜಿ ಸಾಯುತ್ತಿದ್ದವಂತೆ ! ಅವು ವಿಷ್ಣುವಿನ ಪಾಂಚಜನ್ಯ ಕಸಿದು ಕೊಂಡು ಭೌಂ ಭೌಂ ಊದಿದವಂತೆ. ಇಷ್ಟೊಂದು ಖ್ಯಾತಿ ಪಡೆದ ಶ್ರೀ ಮಹಾವಿಷ್ಣುವಿನ ಚಕ್ರದ ಹಲ್ಲುಗಳನ್ನೆ ಮುರಿದು ಮೊಂಡುಗೊಳಿಸಿದವಂತೆ! ಶಿಶುಪಾಲನನ್ನು ವಧಿಸಿದ ಚಕ್ರ ಅದು ! ಜಗತ್ತನ್ನು ರಕ್ಷಿಸುವ ಸಾಧನವದು. ಕುರುಕ್ಷೇತ್ರ ರಣರಂಗದಲ್ಲಿ ಕೃಷ್ಣ ಅರ್ಜುನನಿಗೆ ಉತ್ಸಾಹ ಅಭಿಮಾನ ತುಂಬಲು

ಭೀಷ್ಮರ ಮೇಲೆ ಪ್ರಯೋಗಿಸಿದ ಅಸ್ತ್ರ. ಅಸುರರನ್ನು ನೆಲಕ್ಕೆ ಹಾಕಿದ ಸುಕುಮಾರ ಆಯುಧ!

ಇರಲಿ. ಮಾನವ ಜನಾಂಗಕ್ಕೆ ಉಪಕಾರ ಮಾಡಿಯೂ ಬೆಕ್ಕು ಆಹಾರ ಕ್ಕಾಗಿ ಪೂರ್ಣ ಅವನನ್ನು ಅವಲಂಬಿಸುವದಿಲ್ಲ. ಅದು ಸಸ್ಯಾಹಾರಿಯೂ ಅಹುದು ; ಮಾಂಸಾಹಾರಿಯೂ ಅಹುದು. ಚಿಕ್ಕ ಮಕ್ಕಳಿಗಂತೂ ಅದನ್ನು ಕಂಡರೆ ಪಂಚಪ್ರಾಣ. ಕೇವಲ ಮಕ್ಕಳ ಪ್ರೀತಿಗೆ ಪಾತ್ರವಾಗಿದೆ ಇದು ಎಂಬ ಕಾರಣದಿಂದಲಾದರೂ ಇದನ್ನು ಹಿರಿಯರು ಹೊರಗೆ ಓಡಿಸುವದಿಲ್ಲ. ಬಹುಶಃ ನಾಯಿಗಿಂತ ಇದು ಭಾರತೀಯರಿಗೆ ಮೆಚ್ಚುಗೆಯದು. ಮನೆಯಲ್ಲಿ ಬೇಕಾದ ಲ್ಲೆಲ್ಲ ಆಡ್ಡಾಡಿ ಬರುವದು. ಯಾರೂ ಅಡೆ ತಡೆ ಉಂಟುಮಾಡರು. ನಾಯಿ ಹಾಗಲ್ಲ, ಅದು ಕೀಳು ಎನಿಸುವದು. ಹೆಚ್ಚೆಂದರೆ ಅದನ್ನು ಮನೆ ಕಾಯಲು ಬಾಗಿಲಿಗೆ ನಿಯಮಿಸಿ ಬಿಡುವರು. ಮನೆಯ ಹೊರಗೇ ಅದರ ಕಾರ್ಯರಂಗ. ಅಡಿಗೆಯ ಮನೆಯವರೆಗೆ ಇದು ಬರುವದು ಕನಸು. ಮಡಿ ಮೈಲಿಗೆಯ ಭೇದ ಪ್ರಭೇದ ಸೂಕ್ಷ್ಮವಾಗಿ ಪಾಲಿಸುವವರು ಅದಷ್ಟು ಮನೆಯ ಆವಾರದಿಂದ ನಾಯಿಯನ್ನು ದೂರ ಇಡುವರು. ಆದರೆ ಅದನ್ನೂ ಹೊರದೂಡುವದಿಲ್ಲ. ಈ ಸೃಷ್ಟಿಯಲ್ಲಿ ಎಲ್ಲ ಚರಾಚರ ವಸ್ತುಗಳಿಗೆ ಸ್ಥಾನವಿರುವಂತೆ ನಾಯಿಗೂ ವಿಶಿಷ್ಟ ಉಪಯುಕ್ತ ಸ್ಥಾನವಿದೆ. ಆದರೆ ಅತ್ಯುಪಕಾರಿಯಾದ ಅಂತಹ ಕೆಲಸ ವನ್ನೇನೂ ಗೈಯ್ಯದ ಬೆಕ್ಕು ಮನೆ ಮನೆಯಲ್ಲಿ ಮನಬಂದಂತೆ ನೆಲಸುವದು. ಅದು ಯಾರಲ್ಲಿ ತನ್ನ ಆಹಾರ ಪಡೆದರೂ ಯಾರಿಗೂ ತನ್ನ ಸ್ವಾತಂತ್ರ್ಯ ಮಾರಿ ಕೊಳ್ಳದೆ ಸ್ವಚ್ಛಂದವಾಗಿ ಜೀವನ ಕಳೆಯುವುದು. ಲೋಕಕಲ್ಯಾಣ ಬುದ್ಧಿ ಇದಕ್ಕಿಷ್ಟು ಜಾಗೃತವಿರುವದಿಲ್ಲವಲ್ಲವೆ ?

ಎಷ್ಟು ಸಿಟ್ಟು ಬಂದರೂ, ಸ್ವಾರ್ಥಿಯೆಂದು ಕರೆದರೂ, ಮನೆಯೊಡೆಯ ಬೆಕ್ಕನ್ನು ಹೊರದೂಡಲಾರ. ಕನಿಷ್ಠ ಮಕ್ಕಳ ರಂಜನೆಗಾಗಿಯಾದರೂ ಅದನ್ನು ಇಟ್ಟುಕೊಳ್ಳದಿದ್ದರೆ ನಡೆಯದು. ಚಿಕ್ಕ ಮಕ್ಕಳು ಅದಕ್ಕೆ ಅಲಂಕಾರ ಮಾಡುವರು. ನಾನಾ ರೀತಿಯ ಭಾವಪೂರ್ಣ ಹೆಸರುಗಳಿಂದ ಅದನ್ನು ಕರೆಯು ವರು. ಅದೂ ಹಾಗೆಯೇ ಏರಿ ತೊಡೆಯ ಮೇಲೆ ಕೂಡ್ರುವದು. ತನ್ನ ಪ್ರೀತಿಯ ತಿನಿಸಿಗೆ ಮಾತ್ರ ಬಾಯಿ ಹಾಕುವದು. ಉಳಿದದ್ದನ್ನು ಮುಟ್ಟುವ ದಿಲ್ಲ ಕೂಡ. ಬೆಕ್ಕಿನ ಬಣ್ಣ ಆಕಾರ ಅಂದವಾಗಿದ್ದರೆ ಅದರ ಕೊರಳಿಗೆ ಬೇರೆ

ಬೇರೆ ಬಗೆಯ ಹೊಳಪಿನ ಬಳೆಗಳನ್ನು ತೊಡಿಸುವರು. ಆದರೆ ಏಕೋ ಪಾಶ್ಚಿಮಾತ್ಯರಲ್ಲಿ ನಾಯಿಗೆ ಮೇಲಿನ ಪಟ್ಟಿ ದೊರೆತಿದೆ. ಅವರು ಬೆಕ್ಕನ್ನಷ್ಟು ವಿಶೇಷವಾಗಿ ಹಚ್ಚಿಕೊಂಡಂತಿಲ್ಲ. ನಾಯಿಯನ್ನು ತಾವು ಹೋದೆಡೆಯಲ್ಲಿ ಒಯ್ಯುತ್ತಾರೆ. ರಾಜ ಮಹಾರಾಜರು ವಿಶಿಷ್ಟ ಜಾತಿಯ ಸುಂದರ ನಾಯಿಯನ್ನು ಬಹು ಬೆಲೆಕೊಟ್ಟು ತಂದು ಮನೆಯ ಮಕ್ಕಳಂತೆ ಪ್ರೇಮದಿಂದ ಪೋಷಿಸುತ್ತಾರೆ. ಇದಕ್ಕೆಲ್ಲ ನಾಯಿಯ ವಿಶ್ವಾಸದ ಪ್ರವೃತ್ತಿ ಕಾರಣವಿರಬಹುದೆ? ಆ ಮಾನದಲ್ಲಿ ಬೆಕ್ಕು ಕೇವಲ ವಿಲಾಸಿ ವಸ್ತು ಎನ್ನಬಹುದೆ?

ಮಾತಿಗೆ ರೇಷನಿಂಗ್ ಬಂದರೆ ?

ಎಂ. ರಾಮರಾವ್,

ನಿನ್ನೆ ರಾತ್ರಿ ನಾನು ಮನೆಗೆ ಬಂದಾಗ ಹೊತ್ತು ಬಹಳವಾಗಿತ್ತು. ಮಕ್ಕಳಿಬ್ಬರೂ ಉಂಡು ಮಲಗಿದ್ದರು. ಬಂದವನೆ ಅಂಗಿಯನ್ನು ಗೂಟಕ್ಕೆ ಎಸೆನು ಕಾಲು ತೊಳೆದು ಎಲೆಯ ಮುಂದೆ ಕುಳಿತೆ. ಮಜ್ಜಿಗೆ ಅನ್ನ ತಿನ್ನುವ ಸಮಯದಲ್ಲಿ ನನಗೂ ನಮ್ಮ ಯಜಮಾನಿಗೂ ಸ್ವಲ್ಪ ಬಿಸಿ ಬಿಸಿ ಮಾತು ನಡೆಯಿತು. ನಾನು ಇನ್ನೊಂದು ತುತ್ತು ಅನ್ನ ಬೇಕು ಎಂದಾಗ ಅವಳು ಸೌಟನಿಂದ ತಪ್ಪಲೆಯ ತಳವನ್ನು ಕೆರೆದು ಅಲ್ಲಿ ಅಂಟಿಕೊಂಡಿದ್ದ ನಾಲ್ಕಾರು ಅಗುಳುಗಳನ್ನು ಎಲೆಯ ಮೇಲೆ ಉದುರಿಸಿದ್ದೇ ಕಾರಣ. "ಇದೇನೇ, ಇಷ್ಟು ಕೊಂಚ ಮಾಡಿದೀಯ ? ನೀನು ಊಟಮಾಡುವುದಿಲ್ಲವೇ ?" ಎಂದೆ. "ಇದೇನೇ ಇಷ್ಟು ಕೊಂಚ ಮಾಡಿದೀಯ ಅಂತ ಕೇಳೋಕೆ ಮಾತ್ರ ಬರುತ್ತೆ. ಮನೇಲಿ ಒಂದು ಕಾಳು ಅಕ್ಕಿ ಇಲ್ಲ. ನೀವು ಬೆಳಗ್ಗೆ ಎದ್ದರೆ ಆಫೀಸು, ಮಧ್ಯಾಹ್ನ ಆಫೀಸು. ಆಮೇಲೆ ಗಾಳಿ ಸಂಚಾರ ಅಂತ ಊರಲ್ಲೆಲ್ಲಾ ಅಲೆದಾಡಿ ಹತ್ತು ಗಂಟೆಗೆ ಮನೆಗೆ ಬಂದರೆ ಇಲ್ಲಿ ರೇಷನ್ ಅಂಗಡೀಗೆ ಹೋಗಿ ಸಾಮಾನು ತರುವವರು ಯಾರಿದ್ದಾರೆ ? ಬೇಕುಬೇಕಾದಾಗ ಅಂಗಡೀಗೆ ಕಳಿಸೋಕೆ ಏನು ಅಳಿಟ್ಟಿದೀರಾ ? ನಿನ್ನೆ ಮೊನ್ನೆ ಕಣ್ಣು ತೆರೆದ ಮಕ್ಕಳು, ಅವುಗಳ ಕೈಲಿ ಏನು ವ್ಯಾಪಾರ ಮಾಡುವುದಕ್ಕಾದೀತು ? ಅನ್ನು ಅಕ್ಕಿ ಬೇಳೆ ತರುವುದಕ್ಕೆಲ್ಲಾ ನಾನು ಹೆಗಲಿಗೆ ಚೀಲ ಏರಿಸಿಕೊಂಡು ಹೊರಟರೆ ಬೀದಿಯ ಜನ ನೋಡಿ ಏನೆಂದಾರು ? ಇಲ್ಲಿ ಮನೆ ಗತಿ ಏನು ? ನಿಮಗಂತೂ ಮಾವನ ಮನೆ ಹೋಟಲಿದೆ. ಬೆಳಗ್ಗೆ ದೋಸೆ, ಮಧ್ಯಾಹ್ನ ಪೂರಿ, ಸಂಜೆ ಇಡ್ಲಿ ಅಂತ ತಂದು ತಿಂಗಳಿಗೆ ಹದಿನೈದು ರೂಪಾಯಿ ಅವರ ಬಾಯಿಗೆ ಸುರಿದು ನಿಮ್ಮ ಯೋಗಕ್ಷೇಮ ನೀವು ನೋಡಿಕೊಂಡುಬಿಡುತ್ತೀರಿ. ನಾನು ಉಂಡರೆಷ್ಟು ಉಪವಾಸ ಸತ್ತರೆಷ್ಟು, ನಿಮಗೇನು ಹೇಳ ? ನಾನು ಹೋದರೆ ಇನ್ನೊಬ್ಬಳು ಬರುತ್ತಾಳೆ. ಸಾಕಪ್ಪ ಸಾಕು ; ನಿಮ್ಮಂಥವರ ಸಹವಾಸದಲ್ಲಿ ಸಿಕ್ಕಿಕೊಂಡು

ನುರಿಯುವುದಕ್ಕಿಂತಲೂ ಅನ್ನ ಇಲ್ಲದೆ ಕಣ್ಣು ಮುಚ್ಚಿಕೊಂಡರೆ ಪುಣ್ಯ ಮಾಡಿದ್ದೆ!" ಎಂದು ವಾಗ್ಬಾಣಗಳನ್ನು ಒಂದರಮೇಲೊಂದರಂತೆ ಬಿಟ್ಟಳು. ನಾನು "ಏನೇ ಇಷ್ಟು ಕೂಗಾಡ್ತೀಯಾ ಕುಡಿದೋಳ ಹಾಗೆ? ನಾನು ಸಾಮಾನು ತರದೇನೇ ಸಂಸಾರ ನಡಿತಾ ಇದೆಯೇನೋ! ಎಲ್ಲಾ ನಿನ್ನಿಂದಲೇ ಸಾಗ್ತಾಯಿದೆ ಅನ್ನೋ ಹಾಗೆ ಮಾತಾಡ್ತಾ ಇದೀಯಲ್ಲ! ಇಲ್ಲಿಯವರೆಗೂ ನೀನೂ ನಿನ್ನ ಮಕ್ಕಳೂ ತಿಂದ ಅಕ್ಕಿ ನಾನು ತಂದದ್ದಲ್ಲದೆ ನೀನು ಹಿತ್ತಲಲ್ಲಿ ಬತ್ತ ಬೆಳೆಸಿ ಕುಟ್ಟಿ ಮಾಡಿದ್ದೇನೇ? ಏನೋ ಇದೊಂದು ಸಾರಿ ಪುರಸತ್ತಿಲ್ಲದೆ ಸುಮ್ಮನೆ ಇದ್ದುದಕ್ಕೆ ಇಷ್ಟೊಂದು ಹಾರಾಡ್ತಾಳೆ! ಆಫೀಸಿನಲ್ಲಿ ಮೈ ಮುರಿಯೋ ಹಾಗೆ ಚಾಕರಿ ಬೊಗಳಿ ಬಂದು ಇಲ್ಲಿ ನಿನ್ನ ಕೈಯಲ್ಲಿ ಬೇರೆ ಹೆಣಗಬೇಕು! ತಿನ್ನೋ ಅನ್ನಕ್ಕೆ ರೇಷನ್ ಮಾಡಿದ ಮಹರಾಯರು ನಿನ್ನ ಮಾತಿಗೆ ಒಂದಿಷ್ಟು ರೇಷನ್ ಮಾಡಿ ಪುಣ್ಯ ಕಟ್ಟಿಕೊಳ್ಳಬಾರದೆ?" ಎಂದೆ. "ನಾಳೆ ನೀವು ಮಂತ್ರಿಗಳಾಗುತ್ತೀರಲ್ಲಾ, ಆವಾಗ ಹಾಗೇ ಮಾಡುವಿರಂತೆ; ಲೋಕ ಉದ್ಧಾರವಾಗೋದೇ ನಿಮ್ಮಂಥವರಿಂದ!" ಎಂದು ಉತ್ತರ ಬಂತು. ಇವಳ ಹತ್ತಿರ ಇನ್ನು ಹೆಚ್ಚು ಮಾತನಾಡಬಾರದು; ಅಲ್ಲದೆ ಪಾಪ ಹಸಿದಿದ್ದಾಳೆ; ತಪ್ಪು ನನ್ನದೆ; ಮೌನೇ ಕಲಹಂ ನಾಸ್ತಿ ಎಂದುಕೊಂಡು ತೆಪ್ಪಗೆ ಎದ್ದು ಹೋಗಿ ಕೈ ತೊಳೆದುಕೊಂಡೆ.

ನಾನು ಬಚ್ಚಲ ಮನೆಯಿಂದ ನಡುಮನೆಗೆ ಬರುವ ಹೊತ್ತಿಗೆ ಎಲೆ ಅಡಿಕೆ ತಟ್ಟೆಯಲ್ಲಿ ಸಿದ್ಧವಾಗಿತ್ತು. ಅವಳಿಗೆ ನನ್ನ ಮೇಲೆ ಕೋಪ ಬಂದಿದ್ದರೂ ನಿತ್ಯಗಟ್ಟಳೆಯ ಉಪಚಾರ ಲೋಪವಿಲ್ಲದೆ ನಡೆಯುತ್ತಿದ್ದುದನ್ನು ಕಂಡು ನನಗೆ ನಗು ಬಂತು. ಪ್ರತಿದಿವಸವೂ ಇಬ್ಬರೂ ತಾಂಬೂಲ ಚರ್ವಣ ಮಾಡುತ್ತ ನಿದ್ದೆ ಬರುವವರೆಗೂ ಮಾತಾಡುತ್ತ ಕುಳಿತಿರುತ್ತಿದ್ದೆವು. ಈದಿನ ಅದಿಲ್ಲದಾಯಿತು. ಅವಳು ಅಡಿಗೆಯ ಮನೆಯ ಕೆಲಸವನ್ನು ಮುಗಿಸಿಕೊಂಡು ಬಂದು ನನ್ನ ಕಡೆಗೆ ತಿರುಗಿ ನೋಡದೆ ಕೋಣೆಯೊಳಕ್ಕೆ ಹೋಗಿ ತನ್ನ ಹಾಸಿಗೆಯನ್ನು ದೂರಕ್ಕೆ ಎಳೆದುಕೊಂಡು ಮಲಗಿ ಮುಸುಕಿಟ್ಟಳು. ನಾನು ಎಲೆ ಅಡಿಕೆ ಅಗಿಯುತ್ತ ಸ್ವಲ್ಪ ಹೊತ್ತು ಸುಮ್ಮನೆ ಗೋಡೆಗೆ ಒರಗಿ ಕುಳಿತಿದ್ದೆ. ಮನಸ್ಸು ಸ್ತಿಮಿತವಾಗಿರಲಿಲ್ಲ. ನನ್ನ ಅಜಾಗರೂಕತೆಯಿಂದ ಈ ಹೊತ್ತು ಇವಳಿಗೆ ಅನ್ನವಿಲ್ಲದಾಯಿತು; ಮಕ್ಕಳೂ ಹೊಟ್ಟೆ ತುಂಬ ತಿಂದರೋ

ಇಲ್ಲವೋ ಎಂದು ನನ್ನನ್ನು ನಾನೇ ನಿಂದಿಸಿಕೊಳ್ಳತೊಡಗಿದೆ. ಊಟ ಮಾಡುವಾಗ ನಮ್ಮಿಬ್ಬರಿಗೂ ನಡೆದಿದ್ದ ಮಾತುಗಳು ಒಂದೊಂದಾಗಿ ನೆನಪಿಗೆ ಬಂದವು ತಿನ್ನೋ ಅನ್ನಕ್ಕೆ ರೇಷನ್ ಮಾಡಿದ ಮಹರಾಯರು ನಿನ್ನ ಮಾತಿಗೆ ಒಂದಿಷ್ಟು ರೇಷನ್ ಮಾಡಬಾರದೆ ?" ಎಂದು ಸಿಟ್ಟಿನ ಭರದಲ್ಲಿ ನಾನು ಆಡಿದ್ದ ವಾಕ್ಯ ಮನಸ್ಸಿಗೆ ಮತ್ತೆ ಬಂದಾಗ ನನಗೆ ಹೃದಯ ಹಿಡಿಸಲಾರದಷ್ಟು ಹೆಮ್ಮೆಯಾಯಿತು. ಆಹಾ ! ಎಂತಹ ಯೋಚನೆ ! ಮಾತಿಗೆ ರೇಷನ್ ಬಂದರೆ ! ಇಷ್ಟು ದಿವಸವೂ ಯಾರ ತಲೆಗೂ ಇದು ಹೊಳೆದೇ ಇರಲಿಲ್ಲ ! ಈ ಯೋಜನೆಯನ್ನು ಜಾರಿಗೆ ತಂದರೆ ಅದರ ಫಲಿತಾಂಶ ಏನೇನಾದೀತು, ಎಷ್ಟು ಸ್ವಾರಸ್ಯವಾಗಿದ್ದೀತು !" ಎಂದುಕೊಳ್ಳುತ್ತ ಹಾಗೆಯೇ ಅರ್ಧ ನಿದ್ರಾವಸ್ಥೆಗಿಳಿದು ಕಡೆಗೆ ನಿದ್ದೆಯ ಜೋಂಪು ಬಲವಾಗಲು ದೀಪ ಆರಿಸಿ ಎದ್ದು ಹೋಗಿ ಹಾಸಿಗೆಯಲ್ಲಿ ಉರುಳಿಕೊಂಡೆ. ಹಗಲೆಲ್ಲಾ ದುಡಿದಿದ್ದುದರಿಂದ ಮಲಗಿದ ಮರುಕ್ಷಣವೇ ಬಾಹ್ಯಪ್ರಪಂಚದ ಅರಿವು ಅಳಿಯಿತು.

ಅನಂತರ ಎರಡು ನಿಮಿಷ ಕಳೆದುವೋ ಎರಡು ಮೂರು ಘಂಟೆ ಕಳೆದವೋ ಹೇಳಲಾರೆ. ನಾನು ಕನಸಿನ ರಾಜ್ಯದ ಪ್ರಜೆಯಾಗಿದ್ದೆ. ನಮ್ಮ ಊರು, ನಮ್ಮ ಮನೆ ಎಂದು ಅಲ್ಲಿಯೂ ಇದ್ದುವು. ಆದರೆ ಪ್ರತಿ ವಾರವೂ ಅಂಗಡಿಗೆ ಹೋಗಿ ರೇಷನ್ ಅಕ್ಕಿ ತರುವ ತಾಪತ್ರಯ ಇರಲಿಲ್ಲ ; ಆ ರಾಜ್ಯದಲ್ಲಿ ಅನ್ನಕ್ಕೆ ರೇಷನಿಂಗ್ ಇರಲಿಲ್ಲ ; ಎಷ್ಟು ಬೇಕಾದರೂ ತಿಂದು ತೇಗಬಹುದಾಗಿತ್ತು. ಮಳೆಬೆಳೆಗಳು ಸಮೃದ್ಧಿಯಾಗಿದ್ದವು ; ಪದಾರ್ಥಗಳ ಬೆಲೆ ಅತ್ಯಲ್ಪವಾಗಿತ್ತು. ಎಲ್ಲೆಲ್ಲಿಯೂ ತೃಪ್ತಿ ತಾಂಡವಾಡುತ್ತಿತ್ತು. ಆದರೆ ಮನಸ್ಸಿಗೆ ಬಂದಂತೆ ಮಾತಾಡುವುದಕ್ಕೆ ಮಾತ್ರ ಅಲ್ಲಿ ಸ್ವಾತಂತ್ರ್ಯವಿರಲಿಲ್ಲ. ದವಸ ಧಾನ್ಯಗಳು ಚೆನ್ನಾಗಿ ಬೆಳೆದು ಆಹಾರ ಯಥೇಚ್ಛವಾಗಿ ದೊರೆಯಬೇಕಾದರೆ ಜನರೆಲ್ಲರೂ ಮೈಬಗ್ಗಿಸಿ ಕೆಲಸಮಾಡಬೇಕು ; ಮಾತು ಹೆಚ್ಚಿದಂತೆಲ್ಲಾ ಕೆಲಸ ಕಡಿಮೆಯಾಗುತ್ತದೆ ; ಆದ್ದರಿಂದ ದೇಶದ ಸಂಪದಭ್ಯುದಯದ ಹಿತದಲ್ಲಿ ಪ್ರಜೆಗಳೆಲ್ಲರೂ ಆದಷ್ಟು ಸ್ವಲ್ಪ ಮಾತಾಡುವ ಅಭ್ಯಾಸ ಮಾಡುವುದು ಅಗತ್ಯವೆಂದು ತೀರ್ಮಾನಿಸಿ ಸರ್ಕಾರದವರು ಮಾತಿಗೆ ರೇಷನಿಂಗ್ ಏರ್ಪಡಿಸಿದ್ದರು. "ಸೆನ್ಸಸ್" ನಡೆಸಿ ಒಬ್ಬೊಬ್ಬ ಮನುಷ್ಯನೂ ಒಂದೊಂದು ವಾರಕ್ಕೆ ಎಷ್ಟು ಮಾತಾಡಬೇಕೆಂದು ನಿಶ್ಚಯಿಸಿ ಅದಕ್ಕೆ ತಕ್ಕ ಹಾಗೆ ರೇಷನ್

ಕಾರ್ಡುಗಳನ್ನು ಕೊಟ್ಟಿದ್ದರು. ಕಾರ್ಡಿನ ಮೇಲೆ ಒಂದು ವಾರದ ಮಾತಿನ ಮಿತಿ ನಿರೂಪಿತವಾಗಿರುತ್ತಿತ್ತು. ತನಗೆ ಲಭಿಸಿದ್ದ ಪಡಿಯನ್ನು ಮೀರಿ ಯಾರೊಬ್ಬನೂ ಮಾತಾಡದಂತೆ ಆ ಸ್ವಪ್ನಲೋಕದಲ್ಲಿ ಯಾವುದೋ ಒಂದು ಅವರ್ಣನೀಯವಾದ ಯಕ್ಷಿಣಿರೂಪದ ಮೇಲ್ವಿಚಾರಣಾ ಪದ್ಧತಿಯಿತ್ತು. ಒಬ್ಬನ ಕಾರ್ಡನ್ನು ಇನ್ನೊಬ್ಬನು ಉಪಯೋಗಿಸುವ ಪ್ರಮೇಯವೇ ಅಲ್ಲಿ ಒದಗುವ ಹಾಗಿರಲಿಲ್ಲ. ಒಬ್ಬನು ತನಗೆ ಅವಕಾಶವಿದ್ದುದಕ್ಕಿಂತಲೂ ಕಡಿಮೆ ಯಾಗಿ ಮಾತುಗಳನ್ನು ಉಪಯೋಗಿಸಿ ಕೆಲವನ್ನು ಉಳಿಸಿಕೊಂಡರೆ ಹಾಗೆ ಉಳಿಸಿದ ಮಾತುಗಳನ್ನು ಇನ್ನೊಬ್ಬರಿಗೆ ಕೊಡುವಂತೆಯೂ ಇರಲಿಲ್ಲ. ಕಾಳಸಂತೆ ವ್ಯಾಪಾರದ ಹೆಸರೇ ಅಲ್ಲಿರಲಿಲ್ಲ. ಹದಿನೈದು ವರ್ಷಕ್ಕಿಂತಲೂ ಕೆಳಗಿನ ವಯಸ್ಸಿನ ಹುಡುಗರಿಗೆ ಅಳುವ ಹಕ್ಕು ಇರುವುದರಿಂದಲೂ ಅವರು ಹೆಚ್ಚುಕಾಲ ಆಟಪಾಟಗಳಲ್ಲಿ ಉದ್ಯುಕ್ತರಾಗಿರುವುದರಿಂದಲೂ ಅವರಿಗೆ ದೊಡ್ಡವರಾಡುವುದರಲ್ಲಿ ಅರ್ಧದಷ್ಟು ಮಾತ್ರ ಮಾತಾಡಲು ಅನುಮತಿಯಿತ್ತು. ಮುದುಕರು ಕೆಲಸಮಾಡಬೇಕಾದುದಿಲ್ಲವಾದ ಪ್ರಯುಕ್ತ ಅವರು ಇತರರ ಎರಡರಷ್ಟು ಮಾತಾಡಬಹುದಾಗಿತ್ತು. ಹೆಂಗಸರಿಗೆ ಮಾತಿನ ಚಾಪಲ್ಯ ಬಹಳವಾದುದರಿಂದ ಅವರು ಗಂಡಸರ ಒಂದೂವರೆಯಷ್ಟು ಮಾತಾಡಬಹುದಾಗಿತ್ತು. ಮಾತಾಡುವುದೇ ಉದ್ಯೋಗವಾಗಿರುವ ಉಪಾಧ್ಯಾಯರು, ನಟನಟಿಯರು; ಮೇಸ್ತ್ರಿಗಳು ಮೊದಲಾದವರಿಗೆ ಸಾಧಾರಣ ಕಾರ್ಡುಗಳ ಜೊತೆಗೆ ವಿಶೇಷ ತರದ ಕಾರ್ಡುಗಳನ್ನು ಕೊಟ್ಟಿದ್ದರು. ರಾಜ್ಯದಲ್ಲೆಲ್ಲಾ ಅತ್ಯಂತ ಹೆಚ್ಚು ಸಂಖ್ಯೆಯ ಮಾತುಗಳನ್ನಾಡಲು ಅವಕಾಶ ಹೊಂದಿದ್ದವರು ವಿಶ್ವವಿದ್ಯಾನಿಲಯದ ಅಧ್ಯಾಪಕರು.

ನಾನು ಸ್ವಭಾವತಃ ಮಿತಭಾಷಿಯಾದ ಕಾರಣ ಈ ರೇಷನ್ ವ್ಯವಸ್ಥೆಯಿಂದ ನನಗೆ ಯಾವ ಬಗೆಯ ತೊಂದರೆಯೂ ಉಂಟಾಗಲಿಲ್ಲ. ಅನುಕೂಲವಾಯಿತೆಂದೇ ಹೇಳಬೇಕು. ಏಕೆಂದರೆ ಮೊದಲಿಗಿಂತಲೂ ಹೆಚ್ಚಾಗಿ ಆಡುವುದನ್ನೆಲ್ಲಾ ಚೆನ್ನಾಗಿ ಯೋಚಿಸಿ ಆಡುವ ಅಭ್ಯಾಸ ಇನ್ನೂ ಬಲವಾಯಿತು. ಆದರೆ ಹರಟೆಯೇ ಜೀವನದ ಹೆಗ್ಗುರಿ ಎಂದು ತಿಳಿದಿದ್ದ ಅನೇಕರಿಗೆ ಈ ಏರ್ಪಾಟಿನಿಂದ ಆಗುತ್ತಿದ್ದ ಕಷ್ಟ ಅಷ್ಟಿಷ್ಟಲ್ಲ. ಅವರು ತಮ್ಮ ಒಂದು ವಾರದ ಪಡಿಯನ್ನು ಒಂದೇ ದಿವಸದಲ್ಲಿ—ಕೆಲವರು ಕೇವಲ ಒಂದೆರಡು

ಗಂಟೆಗಳಲ್ಲಿ—ಮುಗಿಸಿಬಿಟ್ಟು, ಅನಂತರ ಆರು ದಿನಗಳು ಬಾಯಿ ಬಿಡುವುದಕ್ಕಿಲ್ಲದೆ ಪಡುತ್ತಿದ್ದ ಪರಿತಾಪ ಹೇಳತೀರದು. "ಅನ್ನಾಹಾರಗಳನ್ನಾದರೂ ಬಿಟ್ಟೇವು, ಸ್ವೇಚ್ಛೆಯಾಗಿ ಮಾತಾಡುವ ಸ್ವಾತಂತ್ರ್ಯವನ್ನು ಕೊಡಿಸು" ಎಂದು ಇವರು ದೇವಾಧಿದೇವನನ್ನು ಪ್ರತಿದಿನವೂ ಮನಸ್ಸಿನಲ್ಲೇ ಬೇಡುತ್ತಿದ್ದಿರಬೇಕು. ಇವರಲ್ಲಿ ಎಷ್ಟೋ ಜನಕ್ಕೆ ಬೇಗನೆ ಮುದುಕರಾಗುವುದು ವಾಸಿ, ಆಗ ಮಾತಿನ ಪಡಿಯಾದರೂ ಹೆಚ್ಚುತ್ತದೆ ಎನ್ನಿಸುತ್ತಿತ್ತು. ಒಂದು ವೇಳೆ ಮಾತಿನ ರೇಷನಿಂಗ್ ನಿಲ್ಲುವ ಕಾಲ ಬಂದರೆ ಇವರೆಲ್ಲರೂ ಪರಮಾನಂದಭರಿತರಾಗಿ ಹುಚ್ಚೆದ್ದು ತಿಂಗಳುಗಟ್ಟಳೆ ಒಂದೇ ಸಮನಾಗಿ ಮಾತಿನ ಮಳೆಗರೆಯುವುದು ಖಂಡಿತ.

ಒಂದು ದಿನ ಊರ ಪುರಸಭೆಗೆ ಸದಸ್ಯರ ಚುನಾವಣೆ ನಡೆಯಬೇಕಾಯಿತು. ಅದಕ್ಕೆ ಪೂರ್ವಭಾವಿಯಾಗಿ ಅಲ್ಲಲ್ಲಿ ಸಾರ್ವಜನಿಕ ಸಭೆಗಳಾದವು. ಚುನಾವಣೆಗೆ ನಿಂತಿದ್ದ ಉಮೇದುವಾರರು ಅಲ್ಲಿ ಭಾಷಣ ಮಾಡಬೇಕಾಗಿತ್ತು. ಆದರೆ ಹೆಚ್ಚು ಮಾತಾಡಲು ಇವರಿಗೆ ಸರ್ಕಾರದಿಂದ ವಿಶೇಷ ಅನುಮತಿ ದೊರೆಯಲಿಲ್ಲ. ಆದ್ದರಿಂದ ಪ್ರತಿಯೊಬ್ಬ ಭಾಷಣಕಾರನೂ ಒಂದೆರಡು ಮಾತುಗಳನ್ನು ಮಾತ್ರ ಆಡಿ, ಅನಂತರ ಕೈಸನ್ನೆ ಮುಖಚರ್ಯೆಗಳ ಮುಖಾಂತರ ತನ್ನ ಅಭಿಪ್ರಾಯಗಳು ಸಭಿಕರಿಗೆ ತಿಳಿಯುವಂತೆ ಮಾಡಬೇಕಾಯಿತು. ಇದರಲ್ಲಿ ಕೆಲವರ ಮುಖಭಂಗಿಯನ್ನೂ ವಕ್ರಚೇಷ್ಟೆಗಳನ್ನೂ ನೋಡಿದರೆ ಎಂತಹ ಗಂಭೀರ ಸ್ವಭಾವದವನಿಗಾದರೂ ಹೊಟ್ಟೆ ಹುಣ್ಣಾಗುವ ಹಾಗೆ ನಗು ಬರುತ್ತಿತ್ತು. ಆ ರಾಜ್ಯದಲ್ಲಿ ಒಬ್ಬನು ಇನ್ನೊಬ್ಬನನ್ನು ದ್ವೇಷಿಸಿದರೆ ತನ್ನ ಪ್ರಭಾವವನ್ನೆಲ್ಲಾ ಉಪಯೋಗಿಸಿ ಸರ್ಕಾರದವರು ಶತ್ರುವಿನ ಮಾತಿನ ರೇಷನ್ ಕಾರ್ಡನ್ನು ಬಲವಂತದಿಂದ ಹಿಂದಕ್ಕೆ ತೆಗೆದುಕೊಳ್ಳುವಂತೆ ಮಾಡಿಬಿಡುತ್ತಾನೆ. ಆಮೇಲೆ ಹಾಗೆ ಕಾರ್ಡು ಕಳೆದುಕೊಂಡವನು ತನ್ನ ಜೀವಾವಧಿ ಮೂಕಸನ್ನೆಗಳನ್ನು ಮಾಡಿಯೇ ಇತರರೊಡನೆ ವ್ಯವಹಾರ ನಡೆಸಬೇಕಾಗುತ್ತದೆ. ಅಲ್ಲಿ ಮಾತಿನ ರೇಷನ್ ತಪ್ಪಿಸುವುದಕ್ಕಿಂತಲೂ ಹೆಚ್ಚು ಉಗ್ರವಾದ ಶಿಕ್ಷೆ ಮತ್ತೊಂದಿಲ್ಲ.

ಈ ಮಿತ ಭಾಷಣದ ನಿರ್ಬಂಧದಿಂದ ಎಲ್ಲರಿಗಿಂತಲೂ ಹೆಚ್ಚು ಕಷ್ಟ ಅನುಭವಿಸಿದವರು ನೂತನ ಪ್ರಣಯಿಗಳು. ಹೊಸದಾಗಿ ಮದುವೆಯಾದ

ಅಥವಾ ಆಗಬೇಕೆಂದಿರುವ ದಂಪತಿಗಳಿಗೇನೋ ಮೌನವೇ ಮಾತಿಗಿಂತಲೂ ಮಧುರವಾಗಿರುತ್ತದೆ. ಅವರು ಪರಸ್ಪರ ಸ್ಪರ್ಶನ, ಚುಂಬನಗಳಿಂದಲೇ ತಮ್ಮ ಪ್ರೇಮವನ್ನು ತೋರಿಕೊಳ್ಳಬಲ್ಲರು. ಆದರೆ ಅವರು ತಮ್ಮ ಬಾಳ್ವೆಗಳ ಭವಿಷ್ಯವನ್ನು ಕುರಿತು ಮಾತಾಡಬೇಕಾದಾಗ ತೊಂದರೆಗಿಟ್ಟುಕೊಳ್ಳುತ್ತದೆ. ಪ್ರಿಯ ಪ್ರೇಯಸಿಯರಾದಮಾತ್ರಕ್ಕೇ ಮೂರು ಹೊತ್ತೂ ಒಬ್ಬರನ್ನೊಬ್ಬರು ಮುದ್ದಾಡುತ್ತಾ ಕೈಹಿಡಿದುಕೊಂಡು ಬಾಯಿ ಬಿಡದೆ ಕುಳಿತಿರುವುದು ಸಾಧ್ಯವೆ? ಎಳೆಯೊಲ್ಮೆಯ ಬೆಳಕಿನಲ್ಲಿ ತಮ್ಮೆದೆಗಳಲ್ಲಿ ಹೊಮ್ಮುವ ಮುದ್ದು ಭಾವನೆಗಳನ್ನು ಮೃದು ಮಾತುಗಳಲ್ಲಿ ಹೊರಗೆಡವಲು ಅವರ ಮನಸ್ಸು ತವಕಪಡುವುದಿಲ್ಲವೆ?

ಈ ಮಾತಿನ ರೇಷನಿಂಗ್ ಏರ್ಪಾಟಿನಿಂದ ಆದ ಪರಿಣಾಮ ಕೆಲವು ಸಮಯಗಳಲ್ಲಿ ವಿಚಿತ್ರವಾಗಿರುತ್ತಿತ್ತು. ಬಹಳ ದಿನ ಒಬ್ಬರನ್ನೊಬ್ಬರು ಅಗಲಿದ್ದ ಗೆಳೆಯರೋ ಬಂಧುಗಳೋ ಮತ್ತೆ ಸಂದರ್ಶಿಸಿದಾಗ ಹೆಚ್ಚು ಮಾತಾಡುವುದಕ್ಕಿಲ್ಲದೆ ಪರಸ್ಪರ ಕಚ್ಚಾಡುತ್ತಿದ್ದುದೂ ಉಂಟು. ಹೊರಗಿನವರು ಯಾರಾದರೂ ಆ ಊರಿಗೆ ಬಂದು ನೆಲೆಸಿದರೆ ಅವರು ರೇಷನಿಂಗ್ ಅಧಿಕಾರಿಗಳನ್ನು ಹುಡುಕಿ ಅವರಿಂದ ಅನುಮತಿಯ ಕಾರ್ಡನ್ನು ಪಡೆಯುವವರೆಗೂ ಒಂದು ಮಾತನ್ನೂ ಆಡುವಂತಿರಲಿಲ್ಲ. ರೇಷನಿಂಗ್ ಕಛೇರಿಯಿಂದ ಕಾರ್ಡು ಬರುವುದಕ್ಕೆ ಎಂಟು ದಿನಗಳಾದರೆ ಅಷ್ಟು ದಿನವೂ ಅವರಿಗೆ ಬಲವಂತದ ಮೌನವ್ರತವೇ ಗತಿ. ಅಂಗಡಿಗಳಿಗೆ ಸಾಮಾನು ತರಲು ಹೋದವರೊಡನೆ ಅಂಗಡಿಯವರು ಮಾತಾಡುವುದೇ ಅಪರೂಪವಾಗಿತ್ತು. ಒಬ್ಬರಿಬ್ಬರೊಡನಾದರೆ ಅವರು ಮಾತಾಡಿಯಾರು. ಬಂದ ಗಿರಾಕಿಗಳೊಡನೆಲ್ಲಾ ಒಂದೊಂದು ಮಾತಾಡಿದರೂ ಅವರ ಒಂದು ವಾರದ ಪಡಿಯೆಲ್ಲಾ ಒಂದೇ ಗಂಟೆಯಲ್ಲಿ ಮುಕ್ತಾಯವಾಗುತ್ತಿತ್ತು. ಆದಕಾರಣ ಸಾಮಾನು ಬೇಕಾದವರು ಆ ಪದಾರ್ಥ ಇದ್ದ ಕಡೆಗೆ ಹೋಗಿ ಅದನ್ನು ಮುಟ್ಟಿ ಸನ್ನೆಮಾಡಿ ತೋರಿಸುತ್ತಿದ್ದರು. ಎಷ್ಟು ಬೇಕು ಎನ್ನುವುದಕ್ಕೆ ಆ ಉದ್ದೇಶದಿಂದಲೇ ಒಂದು ಕಡೆ ಇಟ್ಟಿದ್ದ ಸೇರು, ಅಚ್ಚೇರು, ಪಾವು ಮೊದಲಾದ ಅಳತೆಯ ಪಾತ್ರೆಗಳನ್ನೋ ಅಳತೆಯ ಕಲ್ಲುಗಳನ್ನೋ ಮುಟ್ಟಿ ತೋರಿಸುತ್ತಿದ್ದರು. ಹೋಟೇಲುಗಳಲ್ಲಿ ಇದೇ ರೀತಿ ತಮಗೆ ಬೇಕಾದ ತಿಂಡಿಗಳನ್ನು ಕೈ ಬೆರಳಿನಿಂದ ನಿರ್ದೇಶಿಸಿ ತೋರಿಸಿ ತರಿಸಿಕೊಳ್ಳುವ ಅಭ್ಯಾಸ ಎಲ್ಲರಿಗೂ ಬಂದುಹೋಗಿತ್ತು. ಒಂದೊಂದು

ವೇಳೆ ಹೋಟೇಲಿನ ಪರಿಚಾರಕನಿಗೆ ಗಿರಾಕಿಯ ಮನಸ್ಸಿನಲ್ಲಿರುವ ಪದಾರ್ಥ ಯಾವುದು, ಎಷ್ಟು ಕೊಡಬೇಕು ಎಂದು ಸರಿಯಾಗಿ ಅರ್ಥವಾಗದೆ ತಿಂಡಿ ಬರುವುದು ತಡವಾದರೆ, ಜನ ತಾವೇ ಒಳಕ್ಕೆ ನುಗ್ಗಿ ತಮಗೆ ಬೇಕುಬೇಕಾದು ದನ್ನೆಲ್ಲಾ ದೋಚಿಕೊಳ್ಳುವುದೂ ನಡೆಯುತ್ತಿತ್ತು. ಆದರೆ ಸಿನಿಮಾ ಮಂದಿರ ಗಳಲ್ಲೂ ರೈಲ್ವೆಗಾಡಿಗಳಲ್ಲೂ ಅನಾವಶ್ಯಕವಾದ ವಾಗ್ವಾದಗಳೂ ಕಾದಾಟಗಳೂ ಕಾಡುಹರಟೆಗಳೂ ಇಲ್ಲದೆ ಎಷ್ಟೋ ಉಪಕಾರವೂ ಆಗಿತ್ತು. ಅಕ್ಷರಾಭ್ಯಾಸ ಅನಿವಾರ್ಯವಾಗಿ ದೇಶದಲ್ಲಿ ಹೆಚ್ಚು ಕಡಿಮೆ ಎಲ್ಲರೂ ಓದು ಬರಹ ಬಲ್ಲವ ರಾಗಿದ್ದರು ಅಥವಾ ಆಗಲೆಳಸುತ್ತಿದ್ದರು.

ಇದೆಲ್ಲಕ್ಕಿಂತಲೂ ಹೆಚ್ಚು ಸ್ವಾರಸ್ಯದ ಸಂಗತಿ ನಡೆದುದು ನಮ್ಮ ಪಕ್ಕದ ಮನೆಯಲ್ಲಿದ್ದ ದಾಸಪ್ಪನ ಕುಟುಂಬದಲ್ಲಿ. ಅವನು ನನ್ನಂತೆಯೇ ಮೌನ ವ್ರತಾಚಾರಿ, ಅಲ್ಪಭಾಷಿ. ಆದರೆ, ದೇವರು ಅವನಿಗೆ ಒಬ್ಬ ಮಾತಿನ ಮಲ್ಲಿಯನ್ನು ಗಂಟುಹಾಕಿದ್ದ. ರೇಷನಿಂಗ್ ಆಚರಣೆ ಬರುವುದಕ್ಕೆ ಮೊದಲು ಹೆಂಡತಿಯ ವಾಚಾಳಿತನಕ್ಕೆ ಹೆದರಿ ದಾಸಪ್ಪ ತತ್ತರಿಸುತ್ತಿದ್ದನಂತೆ. ಅಕ್ಕಪಕ್ಕದ ಮನೆಯವರಿಗೆಲ್ಲಾ ಅವಳ ಕೂಗಾಟವನ್ನು ಕೇಳಿ ಬೇಸರ ಬಂದುಹೋಗಿತ್ತಂತೆ. "ಇವಳನ್ನು ಬೀದಿಯಿಂದ ಓಡಿಸಬೇಕು, ಇಲ್ಲ ನಾವೇ ಹೋಗಬೇಕು" ಎಂದು ಎಲ್ಲರೂ ಹೇಳುತ್ತಿದ್ದರಂತೆ. ಇಂತಹ ಸಂದರ್ಭದಲ್ಲಿ ರೇಷನಿಂಗ್ ಬಂದುದರಿಂದ ಎಲ್ಲರಿಗೂ ಒಳ್ಳೆಯದಾಯಿತು. ದಾಸಪ್ಪ "ಬದುಕಿದೆಯಾ ಬಡ ಜೀವವೇ!" ಎಂದು ನಿಟ್ಟುಸಿರೆಳೆದಿರಬೇಕು ಆ ದಿನ. ಅಂದಿನಿಂದ ಅವನದೇ ಮೇಲುಗೈ ಯಾಯಿತು. ತನ್ನ ಕಾರ್ಡಿನಲ್ಲಿ ಬರೆದಿದ್ದಷ್ಟು ಮಾತುಗಳನ್ನೆಲ್ಲಾ ಆಕೆ ಒಂದೇ ದಿನವೇ ಅವನ ಕಿವಿಗಳ ಮೇಲೆ ಸುರಿದುಬಿಡುತ್ತಿದ್ದಳು. ಇನ್ನು ಆರು ದಿನಗಳು ದಾಸಪ್ಪ ಸ್ವಸ್ಥಚಿತ್ತದಿಂದ ಇರುವಂತಾಯಿತು. ಅವನ ಸಂತೋಷಕ್ಕೆ ಪಾರವಿಲ್ಲದಾಯಿತು.

ಆದರೆ ಒಂದು ದಿನ ಆಕೆಯ ಸಿಟ್ಟು ಮಿತಿಮೀರಿತು. ಗಂಡನನ್ನು ಕೆಂಗಣ್ಣುಗಳಿಂದು ದುರುಗುಟ್ಟಿಕೊಂಡು ನೋಡುತ್ತ ಬೈಗಳ ಪ್ರಹಾರಮಾಡಲು ಹೋಗುತ್ತಾಳೆ — ಅವಳಿಗೆ ಅವಕಾಶವಿದ್ದಷ್ಟು ಮಾತುಗಳು ಆಗಲೇ ವೆಚ್ಚ ವಾಗಿಬಿಟ್ಟಿದ್ದವು. ಕಾರ್ಡಿನಲ್ಲಿ ಬರೆದಿದ್ದುದಕ್ಕಿಂತಲೂ ಹೆಚ್ಚು ಮಾತಾಡಿದರೆ ಸರ್ಕಾರದವರು ಕಾರ್ಡನ್ನು ಹಿಂದಕ್ಕೆ ತೆಗೆದುಕೊಂಡುಬಿಡುವರು ; ಮುಂದೆ

ಒಂದು ಮಾತನ್ನೂ ಆಡುವ ಹಾಗಿರುವುದಿಲ್ಲ. ನಾಲಗೆಯನ್ನೇನೋ ಬಿಗಿ ಹಿಡಿದಳು, ಹಾಗೆಯೇ ಮನಸ್ಸಿಗೆ ಏನೋ ಹೊಳೆದು ಅಟ್ಟಣಿಗೆಯ ಮೇಲಿನಿಂದ ಒಂದು ಪಾತ್ರೆಯನ್ನು ತೆಗೆದು ಅವನ ಮೇಲೆ ಬೀಸಿ ಎಸೆದಳು. ಅಂದಿನಿಂದ ಪಕ್ಕದ ಮನೆಯವರಿಗೆ ದಾಸಪ್ಪನ ಮನೆಯಲ್ಲಿ ದಿನಕ್ಕೆ ಒಂದು ಸಾರಿಯಾದರೂ ಪಾತ್ರೆ ಬಿದ್ದ ಸದ್ದು ಕೇಳಿಸುತ್ತಿತ್ತು. ಅವನ ಸ್ನೇಹಿತರಿಗೆಲ್ಲಾ ಅವನ ಮುಖದ ಮೇಲೆ ಏಕೆ ಅಷ್ಟೊಂದು ಗಾಯಗಳಾಗುತ್ತವೆ ಹಿಂದೆ ಎಂದೂ ಇಲ್ಲದ್ದು ಎಂದು ಅಚ್ಚರಿ. "ಸದ್ಯ ನೂರು ಜನರ ಮಾತನ್ನು ಇವಳೊಬ್ಬಳೇ ಆಡುವಂತೆ ಅವಕಾಶಕೊಟ್ಟರೆ ನಾನು ಉಳಿದುಕೊಳ್ಳುತ್ತೇನೆ; ಎಷ್ಟು ಮಾತು ಬೇಕಾದರೂ ತಡೆದುಕೊಳ್ಳಬಹುದು. ಪಾತ್ರೆಗಳಿಂದ ಮುಖ ಮೂತಿ ಚಚ್ಚಿಸಿಕೊಳ್ಳುವ ಈ ಕೆಲಸ ಮಾತ್ರ ಬೇಡ" ಎಂದು ಅವನೆನ್ನತೊಡಗಿದ.

ಅಡಿಗೆ ಮನೆಯಲ್ಲಿ "ದಢಂ ದಢಂ" ಎಂದು ಸದ್ದಾಯಿತು. ಕನಸೊಡೆದು ಎಚ್ಚತ್ತೆ. ನೋಡಲು ಬೆಕ್ಕು ಪಾತ್ರೆಗಳನ್ನು ಉರುಳಿಸಿತ್ತು. ಆಗ ಹೊಳೆಯಿತು — ನಡುಮನೆಯಿಂದ ಕೋಣೆಗೆ ಎದ್ದು ಹೋದಾಗ ಕಿಟಕಿ ಮುಚ್ಚುವುದನ್ನು ಮರೆತುಬಿಟ್ಟಿದ್ದೆನೆಂದು.

ಪಂಡಿತನ ಸಂಕಟ

ಅ. ರಾ. ಮಿತ್ರ

"ನಂಗೆ ಹುಚ್ಚೂ ಇಲ್ಲ-ಬೆಪ್ಪೂ ಇಲ್ಲ ಡಾಕ್ಟ್ರೆ. ನಾನೊಬ್ಬ ಬಡ ವ್ಯಾಕರಣ ಪಂಡಿತ. ನನ್ನನ್ನ ಯಾಕೆ ಈ ಹುಚ್ಚಾಸ್ಪತ್ರೆಗೆ ಸೇರಿಸಿಕೊಂಡು ತೊಂದ್ರೆ ಕೊಡ್ತಾ ಇದೀರೋ ನನಗಂತೂ ಅರ್ಥವಾಗ್ತ ಇಲ್ಲ. ದಯವಿಟ್ಟು ನನ್ನನ್ನು ಬಿಡಿಸಿ ಪುಣ್ಯ ಕಟ್ಟಿಕೊಳ್ಳಿ" ಎಂದು ಒಂದು ಸಣ್ಣ ಲೆಕ್ಚರನ್ನೇ ಕೊಟ್ಟರು ಹೊಸದಾಗಿ ಎರಡು ದಿನಗಳ ಹಿಂದೆ ತಾನೇ ನಮ್ಮ ಹುಚ್ಚಾಸ್ಪತ್ರೆಗೆ ದಾಖಲ್ ಮಾಡಲ್ಪಟ್ಟಿದ್ದ ಗುಂಡೂ ಪಂಡಿತರು. ಆದರೆ ಹುಚ್ಚಾಸ್ಪತ್ರೆ ಡಾಕ್ಟರುಗಳ ಜಾತಿ, ಸುಂಕದ ಅಧಿಕಾರಿಗಳ ಜಾತಿ ಒಂದೇ ಅನ್ನೋದು ಗೊತ್ತಿಲ್ಲದೆ ನನ್ನ ಮುಂದೆ ಗುಂಡೂ ಪಂಡಿತರು ತಮ್ಮ ಸುಖದುಃಖವನ್ನು ಹೇಳಿಕೊಂಡಿದ್ದರು. ಮೆಂಟಲ್ ಆಸ್ಪತ್ರೆಯಲ್ಲಿ ಡಾಕ್ಟರಾದ ತಪ್ಪಿಗೆ ಇಂತಹವರ ಜತೆಗೆ ಏಗುವುದು ನಮಗೇನೂ ಹೊಸದಾಗಿರಲಿಲ್ಲ. ಅಲ್ಲದೆ ಪಂಡಿತರ ಹೆಂಡತಿ ಹಿಂದಿನ ದಿನ ಬಂದು 'ನಮ್ಮ ಯಜಮಾನರಿಗೆ ಏನೇನೋ ಆಗಿದೆ. ಹುಚ್ಚು ಹುಚ್ಚಾಗಿ ಮಾತಾಡ್ತಾರೆ. ನಮಗೆಲ್ಲಾ ಎಂಟು ದಿನದಿಂದ ಕಣ್ ಕಣ್ ಬಿಡಿಸಿಬಿಟ್ಟರು. ಈಗ ನಿಮ್ಮ ಬಳಿ ಕರೆತಂದಿದ್ದೇವೆ. ನಮ್ಮ ಮರ್ಯಾದೆ ಉಳಿಸಿ-ಅವರ್ನ ಮೊದಲಿನ ಹಾಗೆ ಮಾಡಿ, ನಿಮ್ಮ ದಮ್ಮಯ್ಯ' ಎಂದು ಬೇಡಿಕೊಂಡಿದ್ದರು. ಆದ್ದರಿಂದ ನಾನು ಪಂಡಿತರ ಮಾತಿಗೆ ಅಷ್ಟಾಗಿ ಲಕ್ಷ್ಯ ಕೊಡದೆ "ಪರವಾಗಿಲ್ಲ ಪಂಡಿತರೇ ಏನೂ ಕಾಳಜಿ ಮಾಡಿಕೊಳ್ಳಬೇಡಿ, ನಿಮ್ಮನ್ನು ಆದಷ್ಟು ಬೇಗ ಗುಣಪಡಿಸಿ ಬಿಡುಗಡೆ ಮಾಡುತ್ತೇವೆ" ಎಂದು ಹೇಳಿದೆ. ಆದರೆ ಆ ಮಹಾರಾಯ ನನ್ನನ್ನು ಅಷ್ಟಕ್ಕೇ ಬಿಡುವಹಾಗೆ ಕಾಣಲಿಲ್ಲ. ನನಗಾಗಲೇ ವೇಳೆ ಮೀರಿ ಹೋಗಿತ್ತು. ನನ್ನ ಜತೆಯ ವೈದ್ಯರೆಲ್ಲಾ ಆಗಲೇ ಕೆಲಸ ಮುಗಿಸಿ ಹೊರಟುಹೋಗಿದ್ದರು. ನಾನೂ ಹೊರಡೋಣವೆಂದರೆ ಈ ರೋಗಿ ನನ್ನ ಕೈ ಹಿಡಿದು ನಿಂತುಬಿಟ್ಟಿದ್ದಾರೆ. ವಯಸ್ಸಾದವರು, ಏನು ಮಾಡಲಿ ಎಂದು ಯೋಚಿಸುತ್ತಿದ್ದೆ. ಗುಂಡೂ ಪಂಡಿತರು ಮತ್ತಷ್ಟು ದೀನ ಸ್ವರದಲ್ಲಿ ಮತ್ತೆ ಆರಂಭಿಸಿದರು.

"ನನಗೆ ಹುಚ್ಚೂ ಇಲ್ಲ ಬೆಪ್ಪೂ ಇಲ್ಲ ಡಾಕ್ಟ್ರೆ. ನಾನೊಬ್ಬ ಬಡ ಪಂಡಿತ. ನಾನು ಹೇಳೋ ಅಷ್ಟು ಕೇಳಿಬಿಡಿ" ಎಂದು ಅಂಗಲಾಚುತ್ತಾ ನನ್ನನ್ನು ಬಲವಂತದಿಂದ ಕುರ್ಚಿಯ ಮೇಲೆ ಕುಳ್ಳಿರಿಸಿಬಿಟ್ಟರು. ಇನ್ನು ಪಾರಾಗುವ ಸೂಚನೆ ಕಂಡುಬರಲಿಲ್ಲ. ಅವರನ್ನು ತಡೆದಷ್ಟೂ ನಾನು ಮನೆಗೆ ಹೋಗುವುದೇ ತಡವಾದೀತು ಎಂದು ಹೆದರಿ ಅವರ ಮಾತನ್ನು ಕೇಳಲು ಸಿದ್ಧನಾದೆ. ಅವರಿಗೆ ಬಹಳ ಸಂತೋಷವಾಯಿತು. ಸ್ವಲ್ಪ ಕಾಲ ನನ್ನ ಗುಣಗಾನ ಮಾಡಿ ಆಮೇಲೆ ತಮ್ಮ ಪ್ರವಚನವನ್ನು ಆರಂಭಿಸಿದರು-

"ಇಪ್ಪತ್ತೈಂಟು ವರ್ಷಗಳ ಹಿಂದಿನ ಅಂದರೆ ಭೂತಕಾಲದ ಮಾತು ಡಾಕ್ಟರೇ. ಆಗ ನಾನು ಯುವಕನಾಗಿದ್ದೆ. ನಮ್ಮ ಮನೆ ಇದ್ದದ್ದು ಆಂಜನೇಯನ ಗುಡಿಯ ಮೂಲೆಯಲ್ಲಿ. ಪ್ರತಿ ದಿನವೂ ಅಲ್ಲಿಗೆ ದೇವರ ಪೂಜೆಗೆಂದು ಒಬ್ಬಳು ಹುಡುಗಿ ಬರುತ್ತಿದ್ದಳು. ನಮ್ಮಿಬ್ಬರ ದೃಷ್ಟಿಗಳೂ ಪರಸ್ಪರ "ಸಂಧಿ" ಸುತ್ತಿದ್ದವು ಸಂಧಿಸು ಎನ್ನುವುದು ವ್ಯಾಕರಣದ ಶಬ್ದ ಅಲ್ಲವೆ! ಇನ್ನು ಸಂಧಿಸಿದಾಗ ಆಗಬೇಕಾದ ವ್ಯಾಕರಣದ ನಿಯಮಗಳೆಲ್ಲಾ ಆಗಿಯೇ ಹೋದುವು. ನಾವಿಬ್ಬರೂ ಪರಸ್ಪರ ಮಾತನಾಡಲಾರಂಭಿಸಿದೆವು. ಸ್ವರಕ್ಕೆ ಸ್ವರ ಸೇರಿತು. ಬುದ್ಧಿ "ಲೋಪ"ವಾಯಿತು, ಹುಚ್ಚು ಅತಿರೇಕಗಳ (ಇದನ್ನು ಕವಿಗಳು ಪ್ರಣಯ ಎನ್ನುತ್ತಾರೆ) ಆಗಮವಾಯಿತು.

"ಕೊನೆಗೆ ಆ ಹುಡುಗೀ ಜತೆಗೆ ಮದುವೇನೂ ಆಯ್ತು?"

"ಹೌದು ಡಾಕ್ಟ್ರೆ. ನನ್ನ ಕರ್ಮ ಸವೆಯಬೇಕಲ್ಲ! ಮದುವೇನೂ ಆಯ್ತು. ಆದರೆ ಆಮೇಲಿನ ನನ್ನ ಪಾಡು ಏನು ಹೇಳಲಿ ಡಾಕ್ಟ್ರೆ?

ಮದುವೆಗೆ ಮೊದಲು ಎನ್ನ ನುಡಿ "ಟಾ ತ ಡಾ ಢ ಣಂ" ಅಂತ ಭೀಮನ ಹಾಗೆ ಕೂಗ್ತಾ ಇದ್ದೆ. ಈಗ ಕೇವಲ ಅಮ್ಮಾವ್ರ ಗಂಡನಾಗಿ ಉಳಿಯ ಬೇಕಾಯ್ತು. 'ಯಜಮಾನಿತಿಯ ಮುಂದೆ ನನ್ನ ಮಾತು ಏನೂ ನಡೆಯ ಲಿಲ್ಲ. ಹಳಗನ್ನಡದ ಟಿಟಿ ಶಕಟರೇಫಗಳ ಹಾಗೆ ನನ್ನ ಗರ್ವ ಜಬರುದಸ್ತು ಗಳ ಉಪಯೋಗ ಬಹಳ ಕಡಮೆ (ಅಂದರೆ ಶಾಲೆಯ ಜವಾನರ ಮೇಲೆ ಮಾತ್ರ) ಬಳಕೆಯಲ್ಲಿ ನಿಂತಿತು ಅಷ್ಟೆ. ಮಾತು ಮಾತಿಗೆ ಅವಳ ಬಾಯಲ್ಲಿ ವಿಕಾರ ಶಬ್ದಗಳು ಆದೇಶವಾಗಿ ಬರತೊಡಗಿದವು. ವ್ಯಂಜನಾಕ್ಷರಗಳ ಹಾಗೆ

ನನಗೆ ಮನೆಯಲ್ಲಿ ಸ್ವಾತಂತ್ರ್ಯ ಕಡಿಮೆಯಾಗತೊಡಗಿತು. ನನ್ನ ಸ್ನೇಹಿತರು ಮನೆಗೆ ಬಂದಾಗ "ಕಾಫಿ ತಿಂಡಿ ಮಾಡಿಕೊಡು" ಎಂದು ಕೇಳಿದರೆ ನನ್ನ ಹೆಂಡತಿಯಿಂದ "ಕರ್ತ್ಯೋಷ್ಮ್ಯ" ಗಳ ಉತ್ತರ ದೊರೆಯುತ್ತಿತ್ತು. ನಾನು ನನ್ನ ಸ್ನೇಹಿತರು ಮನೆಯಲ್ಲಿ ಸೇರಿದಾಗ ಗಟ್ಟಿಯಾಗಿ ಮಾತಾಡುವಂತೆ ಆಗದ ಹಾಗೆ ನನ್ನ ಮಾತಿಗೆಲ್ಲಾ ಶಿಥಿಲದ್ವಿತ್ವದ ಕಾಯಿಲೆ ಬರತೊಡಗಿತು. ಆದರೆ ಅವಳ ಸ್ನೇಹಿತೆಯರು ಗಂಟಿಗಟ್ಟಲೆ ನಮ್ಮ ಮನೆಯಲ್ಲೇ ಠಿಕಾಣಿ ಹೂಡಿದಾಗ ಅವರೆಲ್ಲಾ ಸವರ್ಣದೀರ್ಘ ಸಂಧಿಯಂತೆ ಊರಗಲ ಬಾಯ್ಬಿಟ್ಟು ಮಾತಾಡುತ್ತಿದ್ದರು.

ಅದು ಹೋಗಲಿ ಡಾಕ್ಟ್ರೆ! ನನ್ನ ಹಣಕಾಸಿನ ಪರಿಸ್ಥಿತಿ ಹೇಗಿದೆ ಎಂಬುದನ್ನು ಅವಳು ಲಕ್ಷ್ಯಕ್ಕೇ ತಂದುಕೊಳ್ಳುತ್ತಿರಲಿಲ್ಲ. ಮನೆಯ 'ಆಯವ್ಯಯ' ಆಯವೆಲ್ಲಿಂದ ಬಂತು, ವ್ಯಯವೇ, ಒಂದೇಸಮನೆ ಮುಗಿಲಿಗೇರುತ್ತಿದ್ದರೂ ಅವಳು ಮಾತ್ರ 'ಅವ್ಯಯ'ದ ಹಾಗೆ ಅಬಾಧಿತಳಾಗಿ ಇದ್ದುಬಿಟ್ಟಳು. ಇಷ್ಟಾದರೂ ನಾನು ಈ ವಿಷಯದಲ್ಲಿ 'ಚ'ಕಾರ ಎತ್ತುವಂತಿರಲಿಲ್ಲ. ಏಕೆಂದರೆ ಆಕ್ಷೇಪಣೆ ಮಾಡಲು ಹೋದರೆ ಅನುನಾಸಿಕದಲ್ಲಿ ಗೊಣಗಾಡುತ್ತಿದ್ದಳು.

ಅವಳ ನಾಲಗೆಯ ಮುಂದೆ ಯಾರೂ ನಿಲ್ಲಲು ಸಾಧ್ಯವಿಲ್ಲ ಡಾಕ್ಟ್ರೆ. ಹೊಕ್ಕುಳು ಸೀಳಿದ ಅಕ್ಷರಗಳ ಹಾಗೆ ಅವಳ ನಾಲಗೆ ಯಾವಾಗಲೂ ಚಾಚಿಕೊಂಡೇ ಇರುತ್ತೆ. ಒಂದು ದಿವಸವಂತೂ ನೋಡಿ, ಅದೇ ತಾನೆ ರಾಮಾ ಕೃಷ್ಣಾ ಅಂದ್ಕೊಂಡು ಶಾಲೆಯಿಂದ ಬರ್ತಾ ಇದೀನಿ. ಒಳಗೆ ನನ್ನ ಹೆಂಡತಿ ರಂಗಮ್ಮನ ಹತ್ತಿರ ಮಾತಾಡ್ತಾ ಇದ್ದಳು. ರಂಗಮ್ಮನೋರು ಗೊತ್ತಿಲ್ವೆ ಡಾಕ್ಟ್ರೆ, ಪಕ್ಕದಮನೆ ಹೆಂಗಸು, ಧಡೂತಿ ಹೆಂಗಸು. ಒಳ್ಳೇ ಒಟ್ಟರಸುಳಿ ಇದ್ದಾಂಗೆ ಇದ್ದಾಳೆ. ಅವಳು,

"ನಾನಿನ್ನು ಬರ್ತೀನ್ರೀ, ನಿಮ್ಮ ಯಜಮಾನ್ರು ಬರೋ ಹೊತ್ತಾಯ್ತು ಅಂತ ಕಾಣುತ್ತೆ" ಅಂತ ಹೇಳ್ತಾಯಿದ್ಳು. ಅದಕ್ಕೆ ಇವಳು ಕೊಡೋ ಉತ್ತರ ನೋಡಿ ಡಾಕ್ಟ್ರೆ :

"ಅದು ಈಗಲೇ ಬರೋಲ್ಲ ರಂಗಮ್ನೋರೆ. ಒಂದು ವೇಳೆ ಬಂದ್ರೂ ಮತ್ತೆ ಮಾರ್ಕೆಟ್ಟಿಗೆ ಹೋಗುತ್ತೆ. ನೀವು ಕೂತ್ಕೊಳ್ಳಿ." ನೀವೇ ಹೇಳಿ

ಡಾಕ್ಟರ್! ಹೀಗೆ ನನಗೆ ಕೇಳಿಸುವ ಹಾಗೆ ಲಿಂಗ ವಚನಗಳನ್ನು ಪಲ್ಲಟ ಮಾಡಿ ಹೇಳಬಹುದೆ?

ಇವಳಿರಲಿ, ಆ ಮಕ್ಕಳಿಂದೇನಾದರೂ ಸುಖ ಇದೆಯೆ? ಅಮ್ಮನ್ನೇ ಹೋತುಕೊಂಡಿವೆ ವರ್ಗದ ಅಂತ್ಯಾಕ್ಷರಗಳ ಹಾಗೆ! ನಾನು ಹೊರಗೆ ಹೊರಟರೆ ಸಾಕು. ಒಂದು ಪಿಳ್ಳೆ ನಾನೂ ಬರ್ತೇನೆ ಅಂತ ನನ್ನ ಕಾಲಿಗೇ ಸುತ್ತಿಕೊಳ್ಳುತ್ತೆ 'ಊ' ಕಾರದ ಹಾಗೆ. ಎರಡನೆಯ ಮಗುವಿಗೋ "ಖಟಿಲ" ಗಳ ಹಾಗೆ ತಲೆಕೊಟ್ಟೇ ನೆಟ್ಟಗಿಲ್ಲ. ಕೊನೇ ಹುಡುಗ ಶುದ್ಧ ತಲೆಹರಟೆ. ಬಿಂದುವಿನ ಹಾಗೆ ಎಲ್ಲಾ ವಿಷಯಗಳಲ್ಲೂ ತಲೆಹಾಕಿಕೊಂಡೇ ಬರ್ತಾನೆ. ಸಾಲದ್ದಕ್ಕೆ ತತ್ಸಮಗಳ ಹಾಗೆ ನಮ್ಮ ಬೀದೀಲಿರೋ ಹುಡುಗರ ಪಾಳ್ಯಾನೆಲ್ಲಾ ಕಟ್ಟಿಕೊಂಡು ಬರ್ತಾನೆ. ಆ ಹುಡುಗರಂತೂ ಏನು ಗಲೀಜು ಅಂತೀರಿ ಹೊಲಸುಕೈ ಬರಹದ ಹಾಗೆ!

ನನಗೆ ಯಾಕೋ ಸಂಸಾರ ಅಂದರೆ ರೋಸಿಹೋಗಿದೆ ಡಾಕ್ಟ್ರೆ. ಅವಳ ಹಾಗೂ ಮಕ್ಕಳ ಬದುಕಿನಲ್ಲಿ ಇಷ್ಟೊಂದು ಕಾಗುಣಿತದ ದೋಷ ಇದ್ದರೆ ಹೇಗೆ ಸಹಿಸುವುದು. "ಹೇ ಡಾಕ್ಟರ್ ಮಹಾಶಯ! ಕನ್ನಡದಲ್ಲಿ ಅಪರೂಪವಾದ ಸಂಬೋಧನ ಪ್ರಥಮದಲ್ಲಿ, ನಿಮ್ಮನ್ನು ಬೇಡಿಕೊಳ್ಳುತ್ತೇನೆ. ಭೂತಕಾಲದಲ್ಲಿ ನಾನು ಅಕಸ್ಮಾತ್ ತಲೆಗೆಟ್ಟು ಈಕೆಯನ್ನು ಕಟ್ಟಿಕೊಂಡೆ. ಈಗ ಈಕೆಯ ಸಹವಾಸದಿಂದ ಬಿಡುಗಡೆ ಹೊಂದುವಂತೆ ಮಾಡಿ. ಈ ನನ್ನ ಪ್ರಾರ್ಥನೆಗೆ ನಿಷೇಧಾರ್ಥಕ ಪ್ರತ್ಯಯವನ್ನು ಹಾಕದೆ ಸಹಾಯಮಾಡಿ. ನನ್ನ ಭವಿಷ್ಯದ ಕರ್ಮಕ್ಕೆ ಕರ್ತೃ ನೀವೇ. ಈಗ ನಿಮ್ಮನ್ನೇ ನಂಬಿದ್ದೇನೆ."

ಪಂಡಿತರ ವಿಷಯದಲ್ಲಿ ಯಾವ ತೀರ್ಮಾನಕ್ಕೂ ಬರದೆ ಸುಸ್ತಾಗಿ ಆ ದಿನ ನಾನು ಮನೆಗೆ ಹಿಂತಿರುಗಿದಾಗ ರಾತ್ರಿ ಹನ್ನೊಂದುಗಂಟೆ ಆಗಿತ್ತು. ಕಿಂಗ್‌ಲಿಯರನ ಹುಚ್ಚು, ಹ್ಯಾಮ್ಲೆಟನ ಹುಚ್ಚು, ಯಕ್ಷನ ಉನ್ಮತ್ತಾಲಾಪ ಇವೆಲ್ಲಾ ಬಹಳ ಮಂಕು ಎಂದು ಆ ದಿನದ ಮಟ್ಟಿಗೆ ನನಗೆ ಅನ್ನಿಸಿದ್ದರೆ ಆಶ್ಚರ್ಯವಿಲ್ಲ. ಗುಂಡೂ ಪಂಡಿತರ ಪ್ರಭಾವ ಅದು. "ಯಾಕ್ಕೂಗೂ ಇಷ್ಟು ಹೊತ್ತು?" ಎಂದು ಕೆಮ್ಮಿಕೊಂಡೇ ಕೇಳಿದರು ನಮ್ಮ ತಂದೆ. ನಮ್ಮ ತಂದೆ ಕನ್ನಡ ವಿದ್ವಾನ್ ಟ್ರೈನಿಂಗ್ ಸ್ಕೂಲಿನಲ್ಲಿ ಛಂದಶ್ಶಾಸ್ತ್ರದ ಪಂಡಿತರಾಗಿ ರಿಟೈರಾಗಿದ್ದವರು. ಆದ್ದರಿಂದ ಆ ಪಂಡಿತರ ವಿಷಯವನ್ನೆಲ್ಲಾ ತಂದೆಯವರಿಗೆ

ತಿಳಿಸಿದೆ. ತಂದೆಯವರಾದರೂ ತಮ್ಮ ಅನುಭವದಿಂದ ನಾಲ್ಕು ಮಾತು ತಿಳಿಸಿಯಾರು ಎಂದು ನನ್ನ ಭಾವನೆ. ಆದರೆ ತಂದೆಯವರು ಪಂಡಿತರ ಕಥೆಯನ್ನು ಸಾವಧಾನವಾಗಿ ಕೇಳಿ ಸಂಕಟಪಟ್ಟು ಕೊಂಡು ಹೇಳಿದರು :

"ಏನು ಮಾಡೋದು ಮಗು, ಪಾಪ ಗ್ರಹಚಾರ. ಆತನನ್ನು ನಾನು ಬಲ್ಲೆ. ಅನೇಕ ವರ್ಷಗಳವರೆಗೆ ನಾವು ಜತೆಜತೆಯಾಗಿ ಕೆಲಸಮಾಡಿದ್ದೇವೆ. ವ್ಯಾಕರಣ ಎಂದರೆ ಪ್ರಾಣ ಅವರಿಗೆ. ಊಟ ತಿಂಡಿ ಎಲ್ಲಾ ಬಿಟ್ಟು ಸೂತ್ರ ಗಳನ್ನು ಹಿಡಿದು ಕುಳಿತುಕೊಳ್ಳುತ್ತಿದ್ದರು. ಆದರೆ ಅವರ ದಾಂಪತ್ಯ ಜೀವನ ದಲ್ಲಿ 'ಸಾಂಗತ್ಯ'ವಿಲ್ಲ. ಅವರ ಬದುಕು ಲಲಿತ ಅಥವಾ ಸರಳ ರಗಳೆಯ ಹಾಗೆ ಉತ್ಸಾಹದಿಂದ ಸಾಗಲಿಲ್ಲ. ಎಷ್ಟಾದರೂ ಅವರು 'ಗುರು' ಗಳಲ್ಲವೆ ! ಅವರ ಹೆಂಡತಿ ಕೂಡ ಅಲ್ಪ ಪ್ರಾಣಗಳ ಹಾಗೆ ಗಂಡನನ್ನು ಅಷ್ಟು ಲಘುವೆಂದು ಎಣಿಸಬಾರದಿತ್ತು. ಒಟ್ಟಿನಲ್ಲಿ ಮದುವೆಯಾದಂದಿನಿಂದ ಭಾಮಿನೀಷಟ್ಪದಿ ಅವರಿಗೆ ಒಗ್ಗಲಿಲ್ಲ ಎಂದು ನನಗೆನ್ನಿಸುತ್ತದೆ. ಆದರೆ ವಾರ್ಧಕ್ಯದಲ್ಲೂ ಅವರಿಗೆ ತೊಂದರೆ ಎಂದರೆ ಗ್ರಹಚಾರ ಅಷ್ಟೆ !"

ಅಪ್ಪನ ಮಾತು ಕೇಳಿ ನನಗೆ ಬಂದದ್ದು ನಿದ್ದೆಯಲ್ಲ—ಮೂರ್ಛೆ.

ಚಳವಳಿ

ಅ. ರಾ. ಸೇ.

ವಿಶ್ವಾಮಿತ್ರನು ರೇವಾನದಿಯ ತೀರದಲ್ಲಿ ಕುಳಿತಿದ್ದನು. ವಾಮದೇವನು ಅಲ್ಲಿಗೆ ಬಂದನು. ಅರ್ಘ್ಯ ಪಾದ್ಯಾದಿಗಳನ್ನು ಅತಿಥಿಗೆ ನೀಡಿ, ಸತ್ಕರಿಸಿದ ಬಳಿಕ ವಿಶ್ವಾಮಿತ್ರನು

"ಭಗವಂತ" ಎಂದನು.

"ಏನುಹೇಳು?" ಎಂದ ವಾಮದೇವ.

"ನಾನೊಂದು ಚಳವಳಿ ಹೂಡಬೇಕೆಂದಿದ್ದೇನೆ."

"ಏನು ಹಾಗೆಂದರೆ?"

"ಅದೊಂದು ಕನ್ನಡ ಶಬ್ದ. ಪಾಣಿನಿಯ ಜವಾಬ್ದಾರಿ–ಅದರ ನಿಷ್ಪತ್ತಿ. ಒಂದು ಅಸಾಧ್ಯವೆನ್ನಿಸಬಹುದಾದ ಕೆಲಸ....."

"ಸಾಧ್ಯವಲ್ಲದುದರ ಮಾತೇಕೆ?"

"ನನ್ನ ನಿಘಂಟನಲ್ಲಿ ಅಸಾಧ್ಯವೆನ್ನುವ ಶಬ್ದವಿಲ್ಲ–ಭಗವಂತ. ಅನ್ಯ ಮಿಂದ್ರಂ ಕರಿಷ್ಯಾಮಿ ಎಂದುದು ಹಳೆಯ ಕತೆ. ಕೃಣ್ವಂತು ವಿಶ್ವಮಾರ್ಯಂ ಎಂಬುದು ಇಂದಿನ ಚಳವಳಿ. ಹೇಗಿದೆ?"

"ವಿಶ್ವಾಮಿತ್ರ, ಜಗತ್ತು ಅನಾರ್ಯ. ಪೂಜ್ಯವಾದುದು ಪರಬ್ರಹ್ಮ ವೊಂದೇ."

"ಅದರ ಲಾಭಕ್ಕಾಗಿ ಗಾಯತ್ರಿಯನ್ನು ಕಂಡುಹಿಡಿದಿದ್ದೇನೆ."

"ವಿಶ್ವಾಮಿತ್ರ—ನಾನೊಲ್ಲೆ ಎಂದರೆ ನಮ್ಮಪ್ಪ ಯಾರಿಗೆ ಮದುವೆ ಮಾಡುತ್ತಾನೆ ಎಂಬ ಗಾದೆಯನ್ನು ನೀನು ಕೇಳಿಲ್ಲವೇ" ಎಂದ—ವಾಮದೇವ.

೨

ಉತ್ತರ ಕುರುವರ್ಷದುತ್ತರದೊಳ್, ದುಃಖಕಾರಿಯೆನಿಪ್ಪ ಹ್ವಾಂಗ್ ಹೋ ನದೀ ಪ್ರದೇಶದೊಳ್ ಪಿಕಿಂಗಮೆಂಬ ಪತ್ತನಂ ವಿರಾಜಿಸುತಿರ್ಕುಂ. ಅಲ್ಲಿ ನಿರಂತರ ರುಧಿರಧಾರಾಪಾತ ಪರಿಣತ ಮತಿಯುಂ, ಸಮಸ್ತ ಬಜ್ರ್ಯಾಜನ

ಹೃತ್ಪಟಲ ಭೇದನಕಾರಿಯುಂ ಪಾಶ್ಚಾತ್ಯ ಸಾಮ್ರಾಜ್ಯ ಶಿಲ್ಪಿಜನ ಹೃದಯ ಪರ್ವತದಂಭೋಳಿಯುಂ, ತ್ರಿವಿಷ್ಟಪ ಭಕ್ಷಣ ಪ್ರವೀಣನುಂ ನಿರಂತರ ಕ್ರಾಂತಿ ದುರಂತ ಚಿಂತನ ವ್ಯಗ್ರನುಗ್ರಮತಿಯುಮಪ್ಪ ಮೋತ್ಸೆಟಂಗನಿರ್ದಂ. ಆತನ ಬಳಿಗೆ ಆತನ ತಾತ್ಕಾಲಿಕ ದಕ್ಷಿಣ ಹಸ್ತೋಪಮನಪ್ಪ ಲಿನ್ಪಿಯಾವೋ ಪೆಸರಾಂತಾ ತನ ದಂಡನಾಯಕನ್ ಪೋಗಿ ಆನತಶಿರನಾದಂ. ಬಳಿಕಮಾಲಿನ್ಪಿಯಾವೋ ಪೇಳ್ದುದೆಂತೆನೆ "ಏನೆಂಬೆನ್ ದೇಶಮಂತರಿಸಿ ಪೋದಂತಿಕ್ಕುಂ. ಭಾರತಂ ವಿರೋಧಿ ವಿಯಟ್ನಾಂ ಟೈವಾನುಗಳಿನ್ನುಮಿರ್ಕುಂ. ಜಾಪಾನ ಮುದಿತೋದಿತಂ ಸುಕರ್ಣಂ ಮುಗ್ಗಿದಂ. ಕಟಕಟಾ ಉಪಾಯಮೇನ್ ?"

ಮೋತ್ಸೆಟಂಗನಿಂತೆಂದಂ "ಎಂತಕ್ಕುಂ ? ವಿರೋಧಿಗಳಂ ತರಿಸದೆ ನಾಮಿಂತು ಚಿಂತಿಸುತಂ ಕುಂತಿರ್ಪುದು ತರಮೆ ? ಬಲಾಚ ಪೃಥ್ವೀ ಎಂದರಿಯೆಯಾ ? ದ್ರೋಹಿಗಳಂ ತರಿದು, ಅವರ ರುಧಿರಮಂ ನದಿಯೋಪಾದಿಯೊಳ್ ಹರಿಸುವುದು. ಮಾನದಿಂದಮೆ ಮಾನವರಲ್ತೆ. ಈ ಲೋಕದೊಳ್ ಮುಂದಿನ್ನು ಮಾನಮೆ ವರ್ಜಿತಂ. ಅರಳದ ಸಾಸಿರ ಕುಸುಮಂಗಳ್ ಹುಡಿಯೊಳ್ ಪೊರಳ್ಗೆ. ಕ್ರಾಂತಿ ನಿರಂತರಮಕ್ಕೆ ! ವಿಶ್ವಮನಾರ್ಯಮಕ್ಕೆ !"

ಲಿನ್ಪಿಯಾವೋ "ಭೂಲೋಕಂ ಸುವ್ವರ್ ಲೋಕಮಕ್ಕೆ" ಎಂದಂ.

೩

ಸಬರ್ಮತೀ ತೀರದಲ್ಲಿ ಗಾಂಧೀಜಿ ಕುಳಿತಿದ್ದರು. ಭವಿತವ್ಯವು ಸಾಕಾರವಾಗಿ ಅವರೆದುರು ಬಂತು.

ಅದು "ಮಹಾತ್ಮರೇ ನಾನು ಹೀಗಿದ್ದೇನೆ ನೋಡಿರಿ. ಹಿಂದಿನ ಮಹಾತ್ಮರ ಬೋಧನೆಗಳು ಅಳಿಸಿಹೋಗಲು ಹಲವು ಶತಮಾನಗಳು ಬೇಕಾದವು. ಆದರೆ ನಿಮ್ಮ ಕಾಲ ಕೆಳಗೇ, ಬೆನ್ನ ಹಿಂದೆಯೇ, ಎದುರಿನಲ್ಲೇ ಸಹಸ್ರ ವಂಚಕರಿದ್ದಾರೆ. ಅರ್ಥ ಸಹಿತವಾದ ಸ್ವಾತಂತ್ರ್ಯವು ಆತ್ಮನಿಷ್ಠರಿಗೆ ಮಾತ್ರ ಸಾಧ್ಯ. ನಿಮ್ಮ ಅನುಯಾಯಿಗಳು ಆತ್ಮನಿಷ್ಠರೋ ಸ್ವಾರ್ಥನಿಷ್ಠರೋ ಹೇಳಿ" ಎಂದಿತು.

ಗಾಂಧೀಜಿ "ನಾನು ನಿರಾಸಕ್ತ ಕರ್ಮವನ್ನು ಮಾಡುತ್ತಿದ್ದೇನೆ. ಹಿಂಸೆಯಿದ್ದಲ್ಲಿ ಸದಾಚಾರವಿಲ್ಲ. ಅಹಿಂಸೆಯೊಂದೇ ಸತ್ಯಕ್ಕೆ ಸಾಧನೆ. ಆದುದರಿಂದ ಸತ್ಯಾಗ್ರಹವೇ ತಾರಕ." ಎಂದರು.

ಭವಿಷ್ಯ ಹೇಳಿತು. "ನೀವು ನಿರಪೇಕ್ಷ ಸತ್ಯವನ್ನು ನಂಬಿದ್ದೀರಿ. ಸ್ವಲಾಭ ಸಾಧಕವೇ ಸತ್ಯ ಎಂಬುದು ನನ್ನ ಅರ್ಥ. ಸರ್ವಭೂತಗಳನ್ನೂ ಸಮವಾಗಿ ಕಾಣುವ ನೀವು, ನಾಸ್ತಿಕ ಭೂತಗಳಿಗೂ ಆಶ್ರಯದಾತರಾಗುವಿರಿ. ವ್ಯವಹಾರ ಮೂಢತೆ, ಶಕ್ತಿಹೀನತೆಗಳಿಗೆ ಆಲಿಪ್ತತೆಯೆಂದೂ, ದುರಾಗ್ರಹಕ್ಕೆ ಸತ್ಯಾಗ್ರಹವೆಂದೂ ಹೆಸರು ಬಂದೀತು, ಶಿಷ್ಯರಿಂದಭಿವರ್ಧಿಸದ ಗುರುವಿನಂತೆ ನಿಮಗೆ ಕೆಟ್ಟ ಹೆಸರು ಬಂದೀತು".

ಗಾಂಧೀಜಿ: ಹೃದಯ ಪರಿವರ್ತನೆಯಾದರೆ.....

ಭವಿಷ್ಯ: ಹಣ, ಕೀರ್ತಿ, ಅಧಿಕಾರಗಳ ದಾಹ ತುಂಬಿದಾಗ ಗಾಂಧೀಜಿ.....

ಗಾಂಧೀಜಿ: ಹಾಗಾಗಲಾರದೆಂಬ ನಂಬಿಕೆ ನನಗಿದೆ. ನನ್ನ ಕರ್ತವ್ಯವನ್ನು ನಾನು ಮಾಡುತ್ತೇನೆ.

ಭವಿಷ್ಯ: ಅವರ ಕರ್ತವ್ಯವನ್ನು ಅವರು ಮಾಡುತ್ತಾರೆ. ರಾಜ್ಯವನ್ನೊಡೆಯಲು, ಶಿಷ್ಯರನ್ನು ಭಕ್ಷಿಸಲು, ದುಷ್ಟರನ್ನು ಪರಿಪಾಲಿಸಲು, ಕಾಫಿ ಬೆಲೆಯನ್ನಿಳಿಸಲು, ಕಾಲೇಜು ಬಾಗಿಲು ಮುಚ್ಚಿಸಲು, ಪಕ್ಕದ ಮನೆಯವರು ಸುಖವಾಗಿರುವುದನ್ನು ವಿರೋಧಿಸಿ, ಕಾನೂನು ಭಂಗಿಸಲು, ವರ್ಗದ್ವೇಷಕ್ಕಾಗಿ, ಖಾಯಂ ಆಗಿ ನಮ್ಮನ್ನು ಹಿಂದುವರಿಸಿ ಎಂದು, ನಮಗೆ ಕೆಲಸ ಕೊಡಿ ಎಂದು, ಕೊಡಬೇಡಿ ಎಂದು, ಕೆರೆ ಕಟ್ಟಿಸಿ ಎಂದು, ಕಟ್ಟಿಸಬೇಡಿ ಎಂದು ಸತ್ಯಾಗ್ರಹ ಹೂಡುತ್ತಾರೆ.

"ಹಾಗಾಗದು ಎಂದು ನನ್ನ ನಂಬಿಕೆ."

"ಇನ್ನೂ ಕೇಳಿ. ಸ್ವಜನ ದ್ವೇಷಕ್ಕಾಗಿ, ನಮ್ಮೂರಿಗೆ ಕಾರ್ಖಾನೆ ಬೇಡ ಎಂದು, ದೇವರಿಗೆ ಧಿಕ್ಕಾರ ಎಂದು, ಸತ್ಯ ಸಾಯಲಿ ಆಗ್ರಹ ಚಿರಾಯುವಾಗಲಿ ಎಂದು, ನಾವು ಹೇಳಿದವನೇ ಮಹಾಕವಿ, ಮಹನೀಯ, ಮಹಾನಾಯಕ ಎಂದು....."

"ಭಾರತೀಯರು ಅಂತಹ ಸಂಸ್ಕೃತಿ ಬಾಹಿರರಲ್ಲ. ನಾನು ಹೇಳಿದ ಹೃದಯ ಪರಿವರ್ತನೆ....."

"ಕಾದಂಬರಿಯಲ್ಲಿ ಸಿನಿಮಾದಲ್ಲಿ ಮಾತ್ರ ಹೃದಯ ಪರಿವರ್ತನೆಯಾಗುತ್ತದೆ."

ಗಾಂಧೀಜಿ "ನನ್ನ ಕರ್ತವ್ಯ ನಾನು ಮಾಡುತ್ತಾ ಹೋಗುತ್ತೇನೆ." ಎಂದರು.

ಭವಿಷ್ಯ "ನೋಡಿ!" ಎನ್ನುತ್ತಾ ಶೂನ್ಯವಾಯಿತು.

೪

ಮುಗಿಲುಹಳ್ಳಿಯ ಸರ್ಕಲ್ ರೆಸ್ಟೋರೆಂಟಿನ ಮೂರನೆ ಅಂತಸ್ತಿನ ಮೆಟ್ಟಿಲ ಮೇಲೆ ರಾಯ ಕುಳಿತಿದ್ದ. ಹೋಟಲು ಬಾಗಲು ಮುಚ್ಚಿತ್ತು. ವೀರಣ್ಣ ಅಲ್ಲಿಗೆ ಹೋಗಿ

"ಏನೋ ಮೆಟ್ಲು ಕಾಯ್ತಿಯಾ?" ಎಂದ. ರಾಯ "ಇನ್ನೇನ್ಮಾಡನೋ?" ಎಂದ.

ವೀರಣ್ಣ "ಥತ್" ಎಂದ.

ರಾಯ "ಯಾಕಲೇ, ಲಾಭ ಹೆಚ್ಚಾತೇನು?" ಎಂದ.

"ಯಾಪಾರ್ನಿಂತು ಹದಿನೈದ್ದಿನಾತು. ಕಾರ್ತಿಕ ಹೋಗಿ ಆಷಾಢಾಗೆತೆ"

"ಯಾಕಲೇ ಏನಾತು?"

"ಹೋದ ಸ್ವಾಮಾರದ ಹಿಂದಿನ ಸ್ವಾಮಾರ ಈ ಊರಿನ ಮೆಡಿಕಲ್ ಕಾಲೇಜಿನ ಸೀಟಿಗೆ ಒಳಲಂಚ ಹೆಚ್ಚಾತು ಅಂತ ಸ್ಟೈಕು. ತಿರುಗಿನ್ದಿನ ಎಂಜಿನೀರಿಂಗ್ ಕಾಲೇಜ್ ಸೀಟು ಬಲ್ಸ್ಸಲ್ಬ ಸಿಗದು ಅದಕ್ಕೆ ಲಂಚಿಲ್ಲ ಅಂತ."

"ಒಳಲಂಚ ಅಂದ್ರೆ."

"ಕ್ಯಾಪಿಟೇಸನ್ ಸೀಜಿರ್ತಲ್ಲ. ಅದನ್ಕೊಟ್ಟು ಸೇರ್ಕಂಬಕ್ಕೆ ಅವಕಾಶ ಸಿಗಕ್ಕೆ ಕೊಡ ಲಂಚ. ಆ ಮ್ಯಾಲೆ ಸೀಜು ಹೆಚ್ಚಾತು ಅಂತ, ಮರುದಿನ ಲಾಠೀ ಛಾರ್ಜಾತು ಅಂತ. ತಿರಗ್ದಿನ ಸಹಾನುಭೂತಿ ಅಂತ. ಮತ್ತೆ ಲಾಠೀ ಚಾರ್ಜು ಅಂತ, ಇಷ್ಟು ಹರತಾಳಗಳಾದವು."

"ಆಮ್ಯಾಲೆ"

ಒಂದು ಹರಿತಾಳ".

"ಹೌದಲೇ ಅದ್ದೂ ಹೊಡ್ತ!"

"ಆಮ್ಯಾಲೆ ಅಮೆರಿಕಾದ ನೀಗ್ರೊಗಳಿಗೆ ಎಂಥದೋ ಹಕ್ಕಿಲ್ಲ ಅಂತ. ಚೀನಾದಗೆ ಅದೆಂಥದೋ ರೆಡ್ ಗಾರ್ಡುಗಳಂತೆ, ಅವರಿಗೆ ಧಿಕ್ಕಾರ ಅಂತ,

ಬಕ್ಕಪ್ಪನ ಗುಡಿ ಮುಂದಿನ ಸಾಲ್ಮೆಗೆ ನೀರು ಬರ್ಲಿಲ್ಲ ಅಂತ, ಕನ್ನಡ ಆಡಳಿತ ಭಾಷೆ ಆಗ್ಲಿ ಅಂತ, ಮುನ್ಸಿಪಾಲ್ಟಿ ಒಳಜಗಳ ವಿರೋಧಿಸಿ ಹರಿತಾಳಗಳಾದವು."

"ಅಮ್ಯಾಲೆ ?"

"ಆಲೆ ಇವ್ನಾಷ್ಟ. ಇಷ್ಟಕಂದು ಹರಿತಾಳ ಆದ್ವೇ ಅಂತ ಒಂದು ಹರ ತಾಳ."

"ಹೌದೋ ನನ ಸರ್ಧರ. ಇವತ್ಯಾಕೆ ಹೋಟ್ಲು ಬಂದು ?"

"ನಾವೇನ್ಮಮ್ಮಿ. ಇನ್ಕಂಟ್ಯಾಕ್ಸ್, ಸೇಲ್ಸ್‌ಟ್ಯಾಕ್ಸ್, ವೆಯ್ಟ್ & ಮೆಷರ್ಸ್, ಲೇಬರ್ ಇನ್ಸ್‌ಪೆಕ್ಟ್ರ ಇವರೆಲ್ಲರ ವಿರುದ್ಧ ಹೇಳಲಾರದ ರೊಚ್ಚು ತೋರಿಸಲು ನಾವೇ ಮುಗಿಲಳ್ಳಿ ಬಂದ್ ಮಾಡೆದಿವಿ."

"ವೆರಿಗುಡ್ ದುಬ್ಬೀರ್ಗ. ನಾಳೆ ನಾವಿಬ್ರೂ ಒಂದು ಚಳವಳಿ ಹೂಡನ."

"ಎನಂತ ?"

"ಏನಾರ ಚಳವಳಿ ಮಾಡ್ರಿ, ಯಾವೂರಾನ ಬಂದಾಗ್ಲಿ ಚಳವಳಿಗಾರರೇ ಕಾಫಿ ಸಿಗುವ ವ್ಯವಸ್ಥೆ ಮಾಡಿಸಿರಿ ಅಂತ."

"ರಿಯ್ರೈಟ್!" ಎಂದ ವೀರಣ್ಣ.

ರಿಪೇರಿ

ಹಂಪ. ನಾಗರಾಜಯ್ಯ

ಭಾನುವಾರದ ಬದುಕು ನಿಧಾನವಾದರೂ ಭಾರವಲ್ಲ. ವಾರದ ಬೇಸರ ವೆಲ್ಲ ಸೋರಿ ಹೊಸ ಹುರುಪು ಸಂಗ್ರಹಿಸುವ ಶುಭ ದಿನವದು. ರವಿವಾರದ ಆರಾಮ ಅನುಭವವೇದ್ಯ. ಯಾವುದರಲ್ಲೂ ಆತುರವಿಲ್ಲ, ಅಂದು ಬೆಳಗ್ಗೆ ತಡವಾಗಿ ಎದ್ದರೂ ಜಡವಿಲ್ಲ.

ನಾನು ಅಥವಾ ನನ್ನ ಅಜ್ಜಪಜ್ಜರು ಸೂರ್ಯವಂಶಸ್ಥರಿರಬೇಕು. ನಾನಂತೂ ಸರ್ಯೋದಯಕ್ಕೆ ಮೊದಲು ಏಳುವುದು ನಮ್ಮ ಸೂರ್ಯವಂಶದ ಗೌರವಕ್ಕೆ ಚ್ಯುತಿಯೆಂದು ತಿಳಿದು ಅನುಸರಿಸುತ್ತಿದ್ದೇನೆ. ಸೂರ್ಯೋದಯಾ ನಂತರ ಕೆಲವು ಘ(ಗ)ಳಿಗೆಗಳಲ್ಲಿ ಏಳುವುದು ನಾನು ಹುಟ್ಟಿದಾರಭ್ಯ ಅಚ್ಯುತ ವಾಗಿ ಪಾಲಿಸಿಕೊಂಡು ಬಂದ ಪ್ರಾತರ್ವಿಧಿ. ಒಂದು ವಿಧದಲ್ಲಿ ಇದು ನನ್ನ ಪುರುಷವ್ರತ. ಹುಟ್ಟುವ ಮೊದಲು ನನಗೆ ಬಲು ಆತುರವಿತ್ತು. ಆದರಿಂದ ಒಂಬತ್ತು ತಿಂಗಳು ನನ್ನ ತಾಯಿಗೆ ತುಂಬುವ ತನಕ ನಾನು ತಾಳಲಾರದೆ ಆತುರದಿಂದ ಏಳೇ ತಿಂಗಳಿಗೆ ಧಾವಿಸಿ ಬಂದೆ. ಆದರೆ ಹುಟ್ಟಿದ ಮೇಲೆ ನನಗೆ ಯಾವುದರಲ್ಲೂ ಆತುರವಿಲ್ಲ. ನನ್ನದು ನಿಧಾನ ಜಾತಕ, ವಿಳಂಬ ನಕ್ಷತ್ರ.

ಹೋದ ಭಾನುವಾರ ಹೀಗೇ ಯಥಾಪ್ರಕಾರ ಸವಿಸರಸ್ಸಿನಲ್ಲಿ ಕ್ರೀಡಿಸು ತ್ತಿದ್ದಾಗ "ರಿಪೇರಿ....ರಿಪೇರಿ..." ಅಂತ ನಮ್ಮ ಮನೆ ಬೀದಿಯಲ್ಲಿ ಜೋರಾಗಿ ಕೂಗಿದ್ದು ಕೇಳಿ ನನ್ನ ವ್ಯಾಸಂಗ ಕೋಣೆಯಿಂದ ಹೊರಬಂದೆ. ಆ ಗಟ್ಟಿ ಕೂಗಿನ ಆಸಾಮಿಯನ್ನು ನೋಡಿದೆ. ಆತ ತನ್ನ ಬೆನ್ನಲ್ಲಿ ತನ್ನ ಒಟ್ಟು ಕುಟುಂಬವನ್ನೇ ಗಂಟುಕಟ್ಟಿ ಇಳಿಬಿಟ್ಟಿದ್ದ. ಆ ಸಂಚಾರೀ ಕುಟುಂಬಿಯನ್ನು ಕೇಳಿದೆ "ಏನಪ್ಪಾ ನಿನ್ನ ಹೆಸರು ? ನೀನು ಏನೇನು ರಿಪೇರಿ ಮಾಡುತ್ತೀ ?" ಅಂತ. "ಬುದ್ಧೀ, ನಾನು ರಹೀಮು. ಛತ್ರೀ, ಜರಡೀ ರಿಪೇರಿ ಮಾಡ್ತೀನಿ" ಎಂದು ಆತ ಗೌರವಪುರಸ್ಸರವಾಗೇ ಉತ್ತರಿಸಿದ. "ಬಾ ಕೂತ್ಕೊ" ಅಂತ

ಕರೆದು ಮನೆ ಮುಂದೆ ಜಗತಿ ಮೇಲೆ ಕೂಡಿಸಿದೆ. ಅವನು, ಶೆಟ್ಟಿ ಬಿಟ್ಟಲ್ಲೇ ಬಿಡಾರ ಅಂತ ಕುಳಿತಲ್ಲೇ ತನ್ನ ಮುಚ್ಚಂಗಡಿಯನ್ನು ಬಿಚ್ಚಂಗಡಿಯಾಗಿ ಬಿಚ್ಚಿ ಹರಡಿದ.

ಮನೆಯಲ್ಲಿ ಎಲ್ಲೋ ಎಂಥೊ ಸಂಪಾದಿಸಿದ ಹಳೇ ಕೊಡೆ ತನ್ನ ಕಾಯಕ ವಾಗಿ ಇನ್ನು ತನಗೆ ಕೈಲಾಗುವುದಿಲ್ಲವೆಂದು ಮೂಲೆ ಸೇರಿತ್ತು. ಮನೆಯಲ್ಲಿ ಅದು ಯಾರದೇ ಆಗಿರಲಿ, ಒಂದೇ ಕೊಡೆ ಇದ್ದರೆ ಕಡು ಕಷ್ಟ. ಆಗ ಯಾರಾದರೂ ಬಂದು ಕೊಡೆ ಬೇಕೆಂದು ಕೇಳಿದರೆ ನಾಮಪದ ಕೊಡೆ ಹೋಗಿ ಕ್ರಿಯಾರ್ಥಕ "ಕೊಡೆ" ಎಂದು ಹೇಳಬೇಕಾಗುತ್ತದೆ. ಎರಡು ಕೊಡೆ ಇದ್ದರೆ ವಾಸಿ, ಮಳೆಗಾಲದಲ್ಲೂ ಹೇಗೂ ನಿಭಾಯಿಸಬಹುದು; ಒಂದು ಕಣ್ಣು ಕಣ್ಣಲ್ಲ. ಒಬ್ಬ ಮಗ ಮಗನಲ್ಲ ಎಂಬ ಗಾದೆ ಜಾತಿಗೆ ಒಂದು ಕೊಡೆ ಕೊಡೆಯಲ್ಲ ಎಂದು ಹೊಸದಾಗಿ ಸೇರಿಸಬೇಕು. ಅಂತೂ ಒಂದು ಸ್ಪೇರ್ ಇರುವುದು ಕಡುಲೇಸು. ಕಾರು. ಬಸ್ಸು, ಸ್ಕೂಟರಿನವರು ಸ್ಟೆಪ್ನಿ ಇಟ್ಟಿರುತ್ತಾರೆ. ಅಂತೆಯೇ ಮನೆ ಯವರು ಒಂದೆರಡು ಕೊಡೆ ಇಡುವುದು ಧರ್ಮ, ನ್ಯಾಯವೇ ಹೊರತು ಅತಿ ಯಾಸೆ ಅಲ್ಲ. ಇಂಥ ಮಿತ ಪರಿಗ್ರಹ ಇಲ್ಲವಾದರೆ ಗ್ರಹಚಾರ ತಪ್ಪಿದ್ದಲ್ಲ. ಅಂದಹಾಗೆ ಶಾಸನಗಳಲ್ಲಿ ಬರುವ ಮುಕ್ಕೊಡೆಗಳ ಪ್ರಸ್ತಾಪ ನೆನಪಾಯಿತು. ಜಿನನಿಗೂ ಮುಕ್ಕೊಡೆಗಳ ಚಿತ್ರವಿದೆ. ಮುಕ್ಕೊಡೆಯನೇ ನಿಜವಾದ ಸುಖಿ. ಒಂದಲ್ಲ ಅಂತ ಎರಡು ಕೊಡೆ ಕಳೆದುಕೊಂಡರೂ ಕಡೆಗೆ ಅವನಿಗಾಗಿ ಇನ್ನೂ ಒಂದು ಕೊಡೆ ಉಳಿದಿರುತ್ತೆ.

ರಹೀಮನನ್ನು ಹೊರಗೆ ಕೂಡಿಸಿ ನಾನು ಹೀಗೆ ಯೋಚಿಸುತ್ತಾ ಒಳಗೆ ಹೊರಟೆ. ಚಿಕ್ಕಮನೆಯಲ್ಲಿದ್ದ ಹಳೆಯ ಮುಕ್ಕಾದ ಕೊಡೆ, ಇದೂ ಒಂದು ರೀತಿಯ ಮುಕ್ಕೊಡೆಯೇ, ನೆನಪಾದ ಕೂಡಲೆ ಒಳಗೋಡಿ ತಂದುಕೊಟ್ಟೆ. ಅದು ಇನ್ನು ಯಾವುದಕ್ಕೂ ನಾಲಾಯಕ್ಕು ಎಂದು ನನ್ನ ಭಾವನೆ. "ಯಾವ ಗುಜರಿಯಂಗಡಿಯವನೂ ಮುಟ್ಟದಷ್ಟು ಈ ಕೊಡೆ ಅಡಾಸು" ಎಂದು ನನ್ನ ಹನ್ನೊಂದು ವರ್ಷದ ಹರ್ಷ ಮುಟ್ಟದೆ ವಾಪಸ್ಸು ಮಾಡಿದ್ದ. ಆದ್ದರಿಂದ ನಾನು ಅದನ್ನು ಈ ರಹೀಮನಿಗೆ ಉಚಿತವಾಗಿ ಉಡುಗೊರೆ ಓದಿಸೋಣ ಎಂದು ತಂದುಕೊಟ್ಟೆ. ಆದರೆ ಅವನು ಕೊಟ್ಟ ಉತ್ತರ ನನ್ನನ್ನು ಆಶ್ಚರ್ಯಾಘಾತದಿಂದ

ನಿರುತ್ತರನನ್ನಾಗಿ ಮಾಡಿತು. "ಸಾರು, ಕಡ್ಡಿಗಳೆಲ್ಲಾ ಗಟ್ಟಿಯಾಗೇ ಮಜ ಬೂತಾಗಿವೆ. ಮೇಲಿನ ಬಟ್ಟೆ ಹೊದಿಕೆ ಮಾತ್ರ ಹರಿದು ಚಿಂದಿಯಾಗೈತೆ. ದುಸರಾ ನವಾ ಬಟ್ಟೆ ಹಾಕಿ, ಕಡ್ಡಿಗಳನ್ನು ಕ್ರಮವಾದ ಅಳತೆಗೆ ಸೇರಿಸಿ ಹೊಲಿದುಕೊಡುತ್ತೇನೆ, ಎಂಬುದು ರಹೀಮ ಉವಾಚ. ಆಗಲಿ ಅಂದೆ. ಕೇವಲ ಮುಕ್ಕಾಲು ಗಂಟೆಯಲ್ಲಿ ಆತ ರಿಪೇರಿ ಮುಗಿಸಿ ಕೊಡೆ ಕೊಟ್ಟ.

ನನಗೆ "ಇದು ನನ್ನ ಕೊಡೆಯೇ !" ಎಂದು ನಾನೇ ಹುಬ್ಬೇರಿಸುವಂತಾಯಿತು. ಲಕಲಕ ಅಂತ ಹೊಸದಾದ ಸೂರ್ಯನ ಗುರುತಿನ ಇಲ್ಲವೇ ಜಿಂಕೆ ಗುರುತಿನ ಕೊಡೆಯನ್ನು ನೀವಳಿಸುವಂತೆ ಕಂಗೊಳಿಸಿತು. ಒಂದು ಕ್ಷಣ ಅದು ರಾಜನ ಕಣ್ಣಿಗೆ ಕಾಣುವ ಬೆಳ್ಗೊಡೆಯಂತೆ ನನ್ನ ಕಣ್ಣಿಗೂ ಹೊಳೆಯಿತು. ರಹೀಮನನ್ನು ನೋಡಿದೆ. ಮೊದಲು ಅವನು ತೀರ ಸಾಮಾನ್ಯನಂತೆ ಕಂಡಿದ್ದ ಈಗ ಅವನು ಶ್ರೀಸಾಮಾನ್ಯನಾಗಿದ್ದ ! ಈ ಜೀರ್ಣೋದ್ಧಾರಕ ಸಾಮಾನ್ಯನಲ್ಲ ಎಂದು ಅನ್ನಿಸಿತು. ನಾನು ನಿಷ್ಪ್ರಯೋಜಕವೆಂದು ಮೂಲೆಗೆಸೆದಿದ್ದ ಯಃಕಶ್ಚಿತ್ ಪದಾರ್ಥವನ್ನು ಮತ್ತೆ ಶ್ರೀವಿಯಿಂದ ಎಲ್ಲರೆದುರೂ ಹಿಡಿದು ಹೊರಡುವಂತೆ ರಿಪೇರಿ ಮಾಡಿಕೊಟ್ಟ ರಹೀಮ ಮರಿಬ್ರಹ್ಮನೇ ಆಗಿದ್ದ. ಕಳೆದ ತಿಂಗಳ ಘಟನೆ ನೆನಪಾಯಿತು.

ನನ್ನ ಚಿಕ್ಕ ಮಗಳು ಆರತಿ ಹಿಂದಿನ ದಿನವಷ್ಟೇ ಹೊಸದಾಗಿ ನನ್ನ ಸ್ವಯಾರ್ಜಿತ ಹಣ ಕೊಟ್ಟು ತಂದ ಬೊಂಬೆಯನ್ನು ಸಲೀಸಾಗಿ ಮುರಿದು ಹಾಕಿದ್ದಳು. ಬೊಂಬೆಯ ಕೈಕಾಲುಗಳನ್ನು ಸ್ಪೇರ್ ಪಾರ್ಟುಗಳಂತೆ ಬೇರ್ಪಡಿಸಿಟ್ಟು ಅವನ್ನು ಮತ್ತೆ ಕೂಡಿಸಲು ಎಷ್ಟೆಷ್ಟೋ ಪ್ರಯತ್ನಿಸಿದಳು. ಉಹು, ಆಗಲಿಲ್ಲ. ಸರಿ, ಕಡೆಗೆ ಸರಿಪಡಿಸಿಕೊಡುವಂತೆ ಅಳುತ್ತಾ ನನ್ನ ಬಳಿ ತಂದಳು. ಹಾಳು ಮಾಡಿದವಳೂ ಅವಳೇ, ಅಳುತ್ತಾ ಬಂದವಳೂ ಅವಳೇ ! ನಾನೇನೂ ಕೋಪಿಸಿಕೊಳ್ಳಲಿಲ್ಲ. ಕೊಟ್ಟ ಆಟದ ಬೊಂಬೆಗಳನ್ನು ಹಾಳುಮಾಡಿ ಮತ್ತೆ ಸರಿಪಡಿಸಬೇಕೆಂದು ಪ್ರಯತ್ನಿಸುವ ಸ್ವಭಾವ ನನಗೆ ಇಷ್ಟವೇ. ಅಂದು ನಾನು ಬಹಳ ಕಷ್ಟಪಟ್ಟು ಹಾಗೂ ಹೀಗೂ ರಿಪೇರಿ ಮಾಡಿದೆ. ಪ್ಲಾಸ್ಟಿಕ್ ಬೊಂಬೆಗೆ ಕಿರು ಶಸ್ತ್ರಚಿಕಿತ್ಸೆ ಮುಗಿಸಿ ಮತ್ತೆ ಮೊದಲಿನ ನೋಟ ಅಷ್ಟಿಷ್ಟು ಬರುವಂತೆ ಮಾಡಿಕೊಟ್ಟೆ. ಆಗ ಆ ಮುಗ್ಧ ಎಳೆಯ ಮುಖದಲ್ಲಿ ಹರ್ಷ ವೀಚಿಗಳು ನರ್ತಿಸಿದವು. ಅವಳು ಅಂದು ನನ್ನನ್ನು ನೋಡಿದ ರೀತಿ

ಹೇಗಿತ್ತೆಂದರೆ, ಇಂದು ನಾನು ರಹೀಮನನ್ನು ನೋಡಿದಂತಿತ್ತು ! ಆ ದಿನ ಮಗು ನನ್ನನ್ನು ಪವಾಡಪುರುಷನೆಂದು ಭಾವಿಸಿತ್ತೆಂಬುದು ತಿಳಿಯಲಿಲ್ಲ. ಈ ದಿನ ನನ್ನ ಅನುಭವದಿಂದ ಅದು ತಿಳಿಯಿತು. ನಿಜ, ಎಷ್ಟೋ ವಿಚಾರಗಳನ್ನು ತಿಳಿಯಲು ಅನುಭವ ಬೇಕು. ರಹೀಮನಿಗೆ ಕೊಡಬೇಕಾದ ಹಣವನ್ನು ಸಂತೋಷದಿಂದ ಕೊಟ್ಟು ಕಳಿಸಿದೆ. ಅವನೇನೋ ಸ್ಥಿತಪ್ರಜ್ಞನ ಲಕ್ಷಣಗಳನ್ನು ಆಮೂಲಾಗ್ರ ರೂಢಿಸಿಕೊಂಡವನಂತೆ ನಿರ್ಲಿಪ್ತನಾಗಿ ಕರ್ಮಯೋಗಿಯಾಗಿ ನಡೆದೇಬಿಟ್ಟ, ಆದರೆ ಅವನು ನನ್ನ ವಿಚಾರದೋಹನವನ್ನು ಉದ್ದೀಪಿಸಿ ನನ್ನನ್ನು ತನ್ನ ಕಡೆಗೆ ಎಳೆದುಕೊಂಡ. ಆದರ ಪರಿಣಾಮ ಬುದ್ಧಿಯ ಸಂಚಾರ, ವಿಚಾರದ ವರ್ತುಲ.

ಕೊಡೆ ರಿಪೇರಿ ಘಟನೆ ನಡೆದಂದಿನಿಂದೀಚೆಗೆ ಇಂಥ ಸದೃಶ ಪ್ರಸಂಗ ಗಳನ್ನು ಹತ್ತಾರು ಕಂಡೆ. ನಮ್ಮ ನೆರೆಹೊರೆಯಲ್ಲೇ ನಡೆದ ರಿಪೇರಿ ಘಟನೆ ಗಳು ನೆನಪಾಗುತ್ತವೆ. ಸೈಕಲ್. ಸ್ಕೂಟರ್, ಕಾರು, ರಿಕ್ಷಾ ಮೊದಲಾದ ವಾಹನಗಳ ರಿಪೇರಿಯಿಂದ ಹಿಡಿದು ನಾನಾ ರಿಪೇರಿಗಳು ನಿತ್ಯ ಕಣ್ಣೆದುರು ನಡೆದಿವೆ. ಮನೆಯಲ್ಲೇ ಹಾಸಿಗೆ ರಿಪೇರಿ, ಬಟ್ಟೆಬರೆ ರಿಪೇರಿ, ಮರಮಟ್ಟುಗಳ ರಿಪೇರಿ, ಪಾತ್ರೆ ಪಡಗಗಳ ರಿಪೇರಿ— ಹೀಗೆ ಹತ್ತಾರು ರಿಪೇರಿಗಳು ನಡೆದಿದೆ. ಪ್ರತಿಯೊಂದು ಪದಾರ್ಥವೂ ಹರಿಯುವುದೊ, ಮುರಿಯುವುದೊ, ಒಡೆಯು ವುದೊ, ನುಗ್ಗಾಗುವುದೊ, ಬಿರಿಯುವುದೊ ಉಂಟೇ ಉಂಟು. ಹಾಗೆಂದು ಅವನ್ನೆಲ್ಲ ಬಿಸಾಕಿ ನಿತ್ಯವೂ ಮುಕ್ಕಿಲ್ಲದ ಹೊಸ ಪದಾರ್ಥಗಳನ್ನೇ ಕೊಳ್ಳಬೇಕೆಂ ದರೆ ಆಗದ ಮಾತು. ಉತ್ತರ ಭಾರತದಲ್ಲಿ ಕೆಲವು ಕಡೆ ಮೊಸರನ್ನು ಸಣ್ಣ ಮಣ್ಣಿನ ಕುಡಿಕೆಗಳಲ್ಲಿ ಕೊಡುತ್ತಾರೆ. ಮೊಸರನ್ನು ಕುಡಿದು ಮಡಕೆಯನ್ನು ಎಸೆದುಬಿಡಬಹುದು; ಹಾಗೆಂದು ಸ್ಟೀಲಿನ ಪಾತ್ರೆಯಲ್ಲಿ ಬೆಳ್ಳಿ ಲೋಟದಲ್ಲಿ ಕೊಟ್ಟಾಗ ಅವನ್ನು ಬಿಸಾಡುವುದೆಂದರೆ, ಸಾಧ್ಯವಿಲ್ಲ, ಅವು ಮುಕ್ಕಾದರೆ ? ಆಗ ಓರೆಕೋರೆಗಳನ್ನು ನೇರಮಾಡಿ ರಿಪೇರಿಸಿ ಬಳಸಬೇಕು. ಹೊಸದಾಗಿ ಕೊಂಡುತಂದ ಗೊದ್ರೆಜೊ, ನವತಾಲೊ—ಯಾವುದೋ ಒಂದು ದಪ್ಪ ಬೀಗದ ಕೈ ಕಳೆದು ಹೋಯಿತೆನ್ನಿ. ಕಳದುಕೊಳ್ಳುವುದು ಮಾನವನ ಹುಟ್ಟುಗುಣ. ಹಾಗೆಂದು ಬೀಗವನ್ನೇ ಒಡೆದುಹಾಕುತ್ತೇವೆಯೇ ? ಬೀಗ ರಿಪೇರಿಗಾರನಿಗೆ

ಹೇಳಿಕಳಿಸಿ ಕರೆಸಿ ರಿಪೇರಿಸುತ್ತೇವೆ. ಕಳೆದುಕೊಂಡುದನ್ನು ಸರಿಪಡಿಸಿಕೊಳ್ಳುವುದು ಮಾನವನು ಕಲಿತ ಜಾಣಗುಣ.

ವಾಸದ ಮನೆಯಲ್ಲಿ ಗೋಡೆ ಕುಸಿಯಿತೆನ್ನಿ, ಬಿರುಕು ಬಿಟ್ಟಿತೆನ್ನಿ ಸೋರಿತೆನ್ನಿ. ಆಗ ಇಡೀ ಮನೆಯನ್ನೇ ಕೆಡವಿದರೆ ಹೆಡ್ಡನೆಂದಾರು. ಕುಸಿಯದಂತೆ ಬಿರಿಯದಂತೆ ಸೋರದಂತೆ ಸರಿಪಡಿಸಿ ರಿಪೇರಿ ಮಾಡಬೇಕು. ಹಳೆ ಮನೆಗೆ ಅಲ್ಲಿ ಇಲ್ಲಿ ಗಾರೆ ಸಿಮೆಂಟು ಮೆತ್ತಿ ಸುಣ್ಣ ಬಣ್ಣ ಹೊಡೆಸಿ ಸಾರಣೆ ಕಾರಣೆ ಮಾಡಿಸಿದರೆ ಅದಕ್ಕೆ ಮತ್ತೆ ಹೊಸ ಕಳೆ ಬರುತ್ತೆ. ಎಲ್ಲಿಯತನಕ ಹೀಗೆ ರಿಪೇರಿಯಲ್ಲೇ ತೂಗಿಸಿಕೊಂಡು ಹೋಗುವುದು ಸಾಧ್ಯವೊ ಅಲ್ಲಿಯವರೆಗೆ ಹಾಗೇ ಅನುಸರಿಸಿಕೊಳ್ಳಬೇಕು. ರೇಡಿಯೊ ಕೆಟ್ಟಿದೆಯೆಂದು ಬಿಟ್ಟರುಂಟೆ ? ಒಟ್ಟು ಪದಾರ್ಥದ ಬೆಲೆಯ ನೆಚ್ಚದ ಐವತ್ತನೆಯ ಒಂದು ಭಾಗದಷ್ಟು ಹಣದಿಂದಲೇ ಮೊದಲಿನ ಗುಣ ಪಡೆಯುವುದು ಸಾಧ್ಯವಿರುವಾಗ ಅದೊಂದೇ ಸುಗಮ ಹಾದಿ, ಸುಭಗ ಬಾಳಿಗೆ.

ಮಾನವನಿಗೆ ಸೇವೆ ಮಾಡುವವರು ಇದ್ದೇ ಇರುತ್ತಾರೆ. ಇಲ್ಲವಾದರೆ ಇವನ ಬದುಕು ಹೇಗೆ ಸಾಧ್ಯ ? ವೈದ್ಯರಿಗಿಂತ ರಿಪೇರಿಗಾರರು ಬೇಕೆ ? ದೂರದಲ್ಲಿ ಇರುವುದನ್ನು ಕಾಣುವುದು ಈ ಕಣ್ಣಿಗೆ ಅಸಾಧ್ಯವಾದಾಗ ಚರ್ಮ ಚಕ್ಷುವಿಗೊಂದು ಗಾಜಿನ ಕಣ್ಣು, ಕನ್ನಡಕ ಹಾಕಿ ರಿಪೇರಿ ಮಾಡುತ್ತಾರೆ ನೇತ್ರ ವೈದ್ಯರು. ಮೈ ಚರ್ಮವೆಲ್ಲಾ ಬಾತು ಗಾಯಗಳಾದಾಗ, ಬೆಂಕಿ ತಗುಲಿ ಚರ್ಮ ಸುಟ್ಟಾಗ, ಅದೆಂಥದೊ ಚುಚ್ಚುಮದ್ದಿತ್ತು, ಮುಲಾಮು ಹಚ್ಚಿ ಮಾಮೂಲಿನ ರೂಪಕ್ಕೆ ತರುತ್ತಾರೆ ಚರ್ಮ ತಜ್ಞರು. ಹಲ್ಲು ನೋವಿನಿಂದ ಲೋಕವೇ ನೋವಿನ ಕಂತೆಯೆಂಬಂತೆ ತೋರಿದಾಗ ಅದನ್ನು ಕಿತ್ತು ಅದರ ಸ್ಥಾನದಲ್ಲಿ ಇನ್ನೊಂದನ್ನು ಕಟ್ಟುತ್ತಾರೆ ದಂತವೈದ್ಯರು. ಮರದಿಂದಲೊ ಮಹಡಿಯಿಂದಲೊ ಅಂತೂ ಎತ್ತರದಿಂದ ಬಿದ್ದೊ ಅಪಘಾತಕ್ಕೆ ಸಿಕ್ಕೊ ಕೈಕಾಲು ಜಜ್ಜಿ ಹೋದುವೆನ್ನಿ. ಅದೆಂತಹುದೋ ಪ್ಲಾಸ್ಟಿಕ್ ಸರ್ಜರಿಯಂತೆ, ಅದನ್ನು ಮಾಡುತ್ತಾರೆ ಶಸ್ತ್ರಚಿಕಿತ್ಸಕರು. ಶಸ್ತ್ರಚಿಕಿತ್ಸೆಯ ಮೂಲಕ ದೇಹದ ಮುರಿದ ಮೂಳೆಗಳ, ಭಾಗಗಳ ರಿಪೇರಿ. ಅಬ್ಬಾ, ಇದಲ್ಲವೇ ರಿಪೇರಿ. ಅಚ್ಚರಿ; ಹೃದಯ ಕೆಟ್ಟರೆ ಬೇರೆ ಹೃದಯವನ್ನೆ ಹಾಕಿ ಹೊಲಿದು ಬದಲಿ ಹೃದಯವನ್ನು ಸೃಷ್ಟಿಸುವ ರಿಪೇರಿ ಜಾದೂವನ್ನು ಏನೆಂದು ಎಷ್ಟೆಂದು

ಕೊಂಡಾಡುವುದು! ಬುದ್ಧಿಭ್ರಮಣೆಯಿಂದ ತಪ್ತಜೀವಿಗಳಿಗೂ ಹುಚ್ಚು ಹಿಡಿದವರಿಗೂ ಪುನರ್ಜನ್ಮ ಕರುಣಿಸುವ ಮನಸ್‌ಶಾಸ್ತ್ರಜ್ಞರಿದ್ದಾರೆ. ದಾರಿ ತಪ್ಪಿದವರಿಗೆ ಪುನಃ ಸರಿ ದಾರಿಗೆ ತಿದ್ದುವ ಶಾಲೆಗಳೂ ಆಶ್ರಮಗಳೂ ಇವೆ. ಬುದ್ಧ ಮಹಾವೀರರು ಕ್ರಿಸ್ತ ಪೈಗಂಬರರು ಶಂಕರ ವಿವೇಕಾನಂದರು ಮಾನವ ವರ್ಗದ ಹರುಕು ಮುರುಕುಗಳನ್ನು ಸರಿಪಡಿಸಲೆನ್ನಿಸಿದ ದೊಡ್ಡ ರಿಪೇರಿಗಾರರು.

ಬದುಕು ರಿಪೇರಿಯನ್ನು ಬಯಸುತ್ತಲೇ ಇರುತ್ತದೆ. ರಿಪೇರಿಯಿಲ್ಲದೆ ನಡೆಯುವ ಯಂತ್ರ, ಅದು ವಿದ್ಯುತ್ ಚಾಲಿತವೇ ಆಗಿದ್ದರೂ, ಅಪರೂಪ. ಗಡಿಯಾರ ನಿಂತಾಗ ಕೀ ಕೊಡುತ್ತೇವೆ, ಕೆಟ್ಟಾಗ ರಿಪೇರಿ ಮಾಡಿಸುತ್ತೇವೆ. ಈ ದೇಹಯಂತ್ರವೂ ಅಷ್ಟೆ. ಕೆಲವೊಮ್ಮೆ ದೌರ್ಜನ್ಯದ ದಾಳಿ ದಬ್ಬಾಳಿಕೆಗಳನ್ನು ಸಹಿಸಿಕೊಳ್ಳಲಾರದೆ ಸೊರಗಿದ ದೇಹಕ್ಕೆ ಪ್ರೀತಿ ವಾತ್ಸಲ್ಯ ವಿಶ್ವಾಸ ಆತ್ಮೀಯತೆಗಳ ರಿಪೇರಿ ಹಿತಸ್ಪರ್ಶದ ಆಗತ್ಯವಿರುತ್ತವೆ. ಈ ಸುಖೋಷ್ಣ ರಿಪೇರಿಯಿಂದ ಮತ್ತೆ ಲವಲವಿಕೆ ಪುಟಿಯುತ್ತದೆ. ಒಂದು ಕ್ಷಣ ಬೇಡವೆಂದ ಬದುಕು, ಈ ಜೀವ (ನ) ಇಲ್ಲಿಗೆ ಸಾಕು ಎಂದ ಭಾವ ಈಗ ವಿಪರೀತ ವೃತ್ತಿಗಿಳಿಯುತ್ತದೆ. ವೈರಾಗ್ಯವೆಲ್ಲ ಬೆಂಕಿ ತಾಕಿದ ಕರ್ಪೂರವಾಗುತ್ತದೆ. ಈ ವಿಧವಾದ ನರಜೀವನ ಕರುಣಿಸಿದ ರಿಪೇರಿಗಾರನ ಮಹಿಮೆ ಭಗವಂತನ ಲೀಲೆಗಳಿಗಿಂತ ಕಿಂಚಿದೂನ!

ಚಿಂತಿಸುವುದಾದರೆ ಎಷ್ಟು ಥರಾ ರಿಪೇರಿಗಳು! ಎಷ್ಟು ಜನ ರೀಪೇರಿಗಾರರು! ನಮ್ಮ ನಿಸ್ತೇಜ ಬದುಕನ್ನು ಮೂರಾಬಟ್ಟೆಯಾಗಿಸದೆ ರಿಪೇರಿಯ ವಜ್ರಗಾರೆ ಹಾಕಿಯೊ ಮೆತ್ತಿಯೋ ಸರಿಪಡಿಸಲು ಎಷ್ಟು ವಿಧಾನಗಳಿವೆ!

ಎನಿತು ಜನ್ಮದಲಿ ಎನಿತು ಜೀವರಿಗೆ
ಎನಿತು ನಾವು ಋಣಿಯೊ
ತಿಳಿದು ನೋಡಿದರೆ ಬಾಳು ಎಂಬುದಿದು
ಋಣದ ರತ್ನಗಣಿಯೊ

ಎಂಬ ಮಾತು ಸಾವಿರದ ಸತ್ಯ. ಇಷ್ಟಿದ್ದೂ ನಮ್ಮ ಬದುಕು ಸರಿಹೋಗಿಲ್ಲವೆಂದರೆ ತಪ್ಪು ಯಾರದು? ರಿಪೇರಿಗಾರನದೆ? ರಿಪೇರಿಗೆ ಆಶಿಸದೆ ಹೋದವನ(ಳ)ದೆ? ರಾಮಾಯಣ ಹಾಗೂ ಮಹಾಭಾರತಗಳಲ್ಲಿ ಇಂಥ ರಿಪೇರಿ ಕಾರ್ಯ ಉದ್ದಕ್ಕೂ ನಡೆದಿದೆ. ರಿಪೇರಿಗೊಪ್ಪಿದ ಭೂಪರು ಗೆದ್ದರು, ರಿಪೇರಿಗೊಪ್ಪದವರು

ಬಿದ್ದರು. ಆಂಜನೇಯನ ರಿಪೇರಿಲಹರಿಗೋಗೊಡದ ರಾವಣ ಮಣ್ಣು ಮುಕ್ಕಿದ, ಓಗೊಟ್ಟ ವಿಭೀಷಣ ಪಟ್ಟಾಭಿಷಿಕ್ತನಾದ. ಕೃಷ್ಣ ಭೀಷ್ಮದ್ರೋಣಾದಿಗಳ ರಿಪೇರಿ ನುಡಿಗಳಿಗೆ ಕಿವಿಗೊಡದ ದುರ್ಯೋಧನಾದಿಗಳು ಹತರಾದರು. ಹತಾಶರಾದರೂ ಪಾಂಡವರು ರಿಪೇರಿಗೊಪ್ಪಿ ರಾಜ್ಯಾಭಿಷಿಕ್ತರಾದರು.

ಹೀಗೆ ಸಾಗಿತ್ತು ನನ್ನ ಯೋಚನೆಯ ಧಾಟಿ. ಇವೆಲ್ಲ ನಿಜ ತಾನೆ ? ಅದಕ್ಕೇ ರೀಪೇರಿಗಾರರನ್ನು ಕಂಡಾಗಲೆಲ್ಲಾ ನನಗೆ ಆದರ, ಪೂಜ್ಯಭಾವ. ಅವರು ಹೊಟ್ಟೆಗೆ ಹಿಟ್ಟಿಲ್ಲದೆ ಹೊಟ್ಟೆಪಾಡಿಗಾಗಿ ಬೀದಿಬೀದಿ ಅಲೆಯುವ ಅಲೆಮಾರಿಗಳಲ್ಲ. ಶರಣರಂತೆ ದಾಸರಂತೆ ಉದಾತ್ತ ಭಾವನೆಗಳದ್ದು ವರ್ಷಿಸುವ ಚಾರಣರು. ಸೃಷ್ಟಿಯನ್ನೇ ತಬ್ಬಿಕೊಳ್ಳುವ ವಿಚಾರತರಂಗಗಳಿಗೆ ಅವರು ಎಡೆ ಮಾಡಿಕೊಡುತ್ತಾರೆ, ಅಳವಲ್ಲದ ತಲ್ಲೀನತೆಯ ಉಲ್ಲಾಸ ತಂದುಕೊಡುತ್ತಾರೆ.

ನೀವು ಇನ್ನು ಸಾಧ್ಯವಿಲ್ಲ ಎಂದು ನಿರಾಶರಾದಾಗ, ಸೋತು ಕುಸಿದಾಗ, ಅನಾಥ ಪ್ರಜ್ಞೆ ನಿಮಗೆ ಆವರಿಸಿದಾಗ ಈ ರಿಪೇರಿಗಾರರನ್ನು ಜ್ಞಾಪಿಸಿಕೊಳ್ಳೋಣವಾಗಲಿ. ಆಗ ನೆನಪಿಗೆ ಬಂದ ಇವರು ನನ್ನಂತೆ ನಿಮಗೂ ಒಂದು ಹೊಸ ತತ್ವವನ್ನು ತಲೆಗೆ ಹಾಕಿ ಹೋಗುತ್ತಾರೆ. ರಿಪೇರಿಗಾರರುಸುರುವ ಸಿದ್ಧಾಂತದ ಮುಂದೆ ಮಹಾಮಹೋಪಾಧ್ಯಾಯರ, ದಾರ್ಶನಿಕರ, ತತ್ವಜ್ಞಾನಿಗಳ ಸಿದ್ಧಾಂತಗಳು ಕೆಳಗಿಳಿದು ಎರಡನೆಯ ಪಾಳಿಗೆ ಸೇರುತ್ತವೆ. ಸೋಲು ಎಂಬುದು ಅವರ ನಿಘಂಟಿನಲ್ಲಿಲ್ಲ. ಅಸಾಧ್ಯ ಎಂಬುದು ಅವರಿಗೆ ಅರಿಯದು. ಅವರ ಸ್ಫೂರ್ತಿ, ಸತತ ಪ್ರಯತ್ನ ಶ್ರದ್ಧೆ—ಇವನ್ನು ಆಶ್ರಯಿಸಿ ಅಂಕುಡೊಂಕುಗಳನ್ನು ನೇರಗೊಳಿಸಿ ಗೆಲವಿನತ್ತ ನಡೆದೇಬಿಡುತ್ತಾರೆ. ವಸ್ತುವಿನ, ವಿಷಯದ ಯಥಾಸ್ಥಿತಿಯ ಪರಿಜ್ಞಾನ ಅವರಿಗೆ ಕರತಲಾಮಲಕ.

ನಿಜ, ಲೋಕದಲ್ಲೇ ಹಾಗೆ. ವಸ್ತು ಸ್ಥಿತಿಯ ಸರಿಯಾದ ಸ್ವರೂಪ ತಿಳಿಯದ್ದರಿಂದಲೇ ಮಾರಾಮಾರಿಗೆ ಕಾರಣ. ಅಕಾಲ ವೃಷ್ಟಿಯಿಂದ, ಪೊಯ್ನೀರಿಂದ ಸಮೃದ್ಧ ಬೆಳೆ ತೆಗೆಯುತ್ತೇನೆಂಬ ದುಡುಕು ಸ್ವಾರ್ಥಕ್ಕೆ ರಿಪೇರಿ ಅವಶ್ಯ ಆಗಬೇಕು. ನಡೆವರೆಡಹದೆ ಕುಳಿತವರೆಡಹುವರೆ ? ನಡೆಯುವ ಜೀವ ನಿಸ್ತೇಜವಾಗುತ್ತಾ ಬರುತ್ತೆ. ದುಡಿಯುವ ದೇಹ ನಿರ್ವೀರ್ಯವಾಗುತ್ತಾ ಬರುತ್ತೆ. ಈ ಶೈಥಿಲ್ಯದ ತಡೆಗೆ ಕಾಯಕಲ್ಪ ಅಗತ್ಯ. ಹಿಂದಿನ ಋಷಿಗಳು ಯಾವ ಟಾನಿಕ್ಕನ್ನೂ ಕುಡಿಯದೆ ಅನ್ನಾಂಗಗಳ ಮಾತ್ರೆಯನ್ನು ತಿನ್ನದೆ,

ಸೊಪ್ಪು ಸದೆ ತಿಂದುಕೊಂಡು ಹಣ್ಣು ಹಾಲು ಆಹಾರ ಪಡೆದು ಸೆಂಚುರಿ ನಾಟ್‌ಔಟ್ ಆಗಿ ಬಾಳಿದರು. ಅವರು ದೀರ್ಘಾಯುಗಳಾಗಿ ಜೀವಿಸಿದ್ದುದರ ರಹಸ್ಯ ರಿಪೇರಿಯಲ್ಲಡಗಿದೆ. ಹೆಚ್ಚು ಕಡಮೆಯಾಗದಂತೆ ಸಮತೋಲವನ್ನು ಧನ್ವಂತರಿ ನಿಯಮ ಪಾಲನೆಯ ಮೂಲಕ ಕಂಡುಕೊಂಡ ಶತಾಯುಗಳವರು. ನಮಗೂ ಅಷ್ಟೆ. ರಿಪೇರಿ ಉತ್ತಮ ಸಂಜೀವಿನಿ. ಎಲ್ಲಿ ಕೆಟ್ಟಿದೆ ಏನು ಕೆಟ್ಟಿದೆ ಎಂಬುದನ್ನು ಗುರುತಿಸಬೇಕು. ವಿವೇಕದ ಸುತ್ತಿಗೆಯಿಂದ ವಕ್ರವಿಚಾರಗಳನ್ನು ಬಡಿಯಬೇಕು. ಅಜ್ಞಾನದ ತಲೆಯ ಮೇಲೆ ಹೀಗೆ ನಾಲ್ಕು ಮಟ್ಟಿದಾಗ ವ್ಯಕ್ತಿ ತಾನಾಗಿ ಮತ್ತೆ ನೆಟ್ಟಗಾಗುತ್ತಾನೆ.

ಗುರು ಮಾಡುವ ಕೆಲಸ ಇದೇನೆ. ಆತ ಅಜ್ಞಾನವೆಂಬ ಕತ್ತಲೆಯನ್ನು ಜ್ಞಾನವೆಂಬ ಶಲಾಕೆಯಿಂದ ಚುಚ್ಚಿ ಕಣ್ಣನ್ನು ಬೆಳಕಿನೆಡೆಗೆ ತುಳುಕಿಸುತ್ತಾ ಉನ್ಮೀಲನಗೊಳಿಸುತ್ತಾನೆ. ನ ಗುರೋರಧಿಕಂ ಎಂಬುದು ನನ್ನಿಯ ನನ್ನಿ. ಗುರುವಿಗಿಂತ ದೊಡ್ಡ ರಿಪೇರಿಗಾರ ಇಲ್ಲ. ಅಜ್ಞಾತ ಅಧ್ಯಾಪಕವೃಂದ ದೇಶದ ಮುಂದಿನ ಪೀಳಿಗೆಯನ್ನು ತಿದ್ದಿ ರೂಪಿಸಿ ರಿಪೇರಿಸಿ ಪವಿತ್ರ ಕಾಯಕವೆಸಗುತ್ತಿರುತ್ತದೆ. ಮಹತ್ತಾಗಿ ಮೆರೆಯಬಲ್ಲ ಚೇತನಗಳನ್ನು ತಯಾರಿಸಿ ತಾವು ಮಾತ್ರ ಮರೆಯಲ್ಲೇ ಉಳಿಯುತ್ತಾರೆ. ಅವರಿಗಾಗಿ ಯಾರೂ ತುತೂರಿ ಊದರು, ಕಹಳೆ ಮೊಳಗಿಸರು. ತಮಟೆ ಸದ್ದು, ಓಲಗ ವಾದ್ಯ—ಯಾವುದೂ ಇಲ್ಲ. ಅವರನ್ನು ಕರೆತರಲು ಬಂಗಾರ ಬೆಳ್ಳಿ ರಥವಿರಲಿ, ನಾಲ್ಕು ಚಕ್ರದ ಆಧುನಿಕ ವಾಹನವೂ ಬರದು. ಅವರಿಗೆ ಸ್ವಾಗತವೇ ಇಲ್ಲ, ಸ್ವಾಗತಿಸಲು ತಳಿರು ತೋರಣ ಚಪ್ಪರ ಷಾಮಿಯಾನಗಳ ಅಲಂಕಾರದ ಮಾತೇಕೆ ?

ಹಾಗೆಂದು ಆಚಾರ್ಯ ಎಂದೂ ನಿರಾಶನಲ್ಲ, ನಿರುತ್ಸಾಹಿಯಲ್ಲ. ಆಚಾರ್ಯವರ್ಗ ಸದಾ ಇರುವೆಗಳಂತೆ ಕಾರ್ಯೋನ್ಮುಖವಾಗಿರುತ್ತದೆ. ಅರಳುವ ಪ್ರತಿಭೆಗಳನ್ನು ತಮ್ಮ ದೃಷ್ಟಿಯ ಕಕ್ಷೆಯಲ್ಲಿರಿಸಿ ಮಾತೃ ಹೃದಯದ ಗರ್ಭರಕ್ಷೆ ನೀಡಿ ರಿಪೇರಿಕಾರ್ಯ ನಡೆಸುತ್ತಾರೆ. ಮೌಢ್ಯದೆದುರು ಅವರ ನಿರಂತರ ಚಟುವಟಿಕೆ. ತಾರುಣ್ಯದ ಶತ್ರುಗಳು ತಮ್ಮ ತರುಣ ಶಿಷ್ಯರ ಹತ್ತಿರ ಸುಳಿಯದಂತೆ ಅವರ ನೆರಳು ಮುಟ್ಟದಂತೆ ಎಚ್ಚರ ಕೊಡುತ್ತಾರೆ. ಸುಪ್ತ ಪ್ರಜ್ಞೆ ಪ್ರತಿಭೆಗಳನ್ನು ಜಾಗೃತಗೊಳಿಸುತ್ತಾರೆ. ಜಡತೆಯನ್ನು ಕೊಡವಿ ಹುರುಪು ತಾಳಲು ಹುರಿದುಂಬಿಸುತ್ತಾರೆ, ಉತ್ಸಾಹ ಆರೋಹಣರೂಪದಲ್ಲಿರ

ಬೇಕೇ ಹೊರತು ಅವರೋಹಣ ರೂಪದಲ್ಲಿ ಅಲ್ಲ. ಅದರಿಂದ ಚಂಚಲತೆಯ ಯುವಚಿತ್ತಕ್ಕೆ ಅಚಂಚಲ ದೃಢತೆಯನ್ನು ಸ್ಥಾಪಿಸಿಕೊಳ್ಳುವ ದಾರಿಗೆ ಕೈಗಂಬ ವಾಗುತ್ತಾರೆ. ಜ್ಞಾನದ ದೀಪ ಹಚ್ಚುವ ಗುರುಗಳು ಗುರುತ್ವಕ್ಕೆ ಅರ್ಹರು.

ಸತ್ತವನು ಎದ್ದು ಬಂದ ಎಂಬ, ಚಿರಂಜೀವಿ ಎಂಬ ಪುರಾಣ ಕಥೆಗಳೆಲ್ಲ ಕೇವಲ ಕಥೆಗಳಲ್ಲ. ಇವು ಅರ್ಥಗರ್ಭಿತ ಪ್ರತಿಮೆಗಳು. ಆ ಸಂಕೇತಗಳ ಸುತ್ತ ಗೂಡು ಕಟ್ಟಿ ಅರ್ಥಕೋಶಗಳ ಅನಾವರಣಮಾಡಬಲ್ಲ ಪ್ರಾಜ್ಞನಿಗೆ ಅದರ ಅಂತರ್ಯ ದರ್ಶನವಾಗುತ್ತದೆ. ಅರ್ಥವರ್ತುಲವನ್ನು ಮುಚ್ಚಿಕೊಂಡ ಕವಚಗಳನ್ನು ಸುಲಿಯುವ ಬುದ್ಧಿವಂತಿಕೆಯನ್ನು ಕೈವಶಮಾಡಿಕೊಳ್ಳಬೇಕು. ರಿಪೇರಿಯೇ ಅಗತ್ಯವಿಲ್ಲದಂತಹ ಬಾಳು ಉತ್ತಮೋತ್ತಮ. ಆದರೆ ರಿಪೇರಿಗೆ ಅವಕಾಶವೇ ಇಲ್ಲದಂತೆ ನೋಡಿಕೊಳ್ಳುವ ಮಹಾತ್ಮರು ಕಡಿಮೆ. ಬೆರಳೆಣಿಕೆಯ ಅಂಥ ಬಲ್ಲಿದರನ್ನು ಬಿಟ್ಟು ಬಿಡೋಣ. ರಿಪೇರಿ ಎಲ್ಲರಿಗೂ ಬೇಕು. ಸಕಾಲಿಕ ರಿಪೇರಿ ಉತ್ತಮ. ತಡವಾದ ರಿಪೇರಿ ಮಧ್ಯಮ. ರಿಪೇರಿಯಾಗಬೇಕಾದುದು ಇದ್ದೂ ರಿಪೇರಿ ಬಯಸದಿರುವುದು ಅಧಮ. ರಿಪೇರಿ ಮಾಡುತ್ತೇನೆಂದು ಹೋಗಿ ಇರುವುದನ್ನೂ ಹಾಳು ಮಾಡುವವನು ಅಧಮಾಧಮ.

ರಿಪೇರಿ ಭಾವಿಸಿದಷ್ಟು ಸುಲಭವಲ್ಲ, ಪರಿಭಾವಿಸಿದಷ್ಟೂ ಇದೆ. ಜರ್ಜರಿತ, ಸೋತ, ಕುಸಿದ ಕೆಟ್ಟ ಭಾಗ(ವ)ಗಳನ್ನು ಮೊದಲು ಮನಗಾಣಬೇಕು ಇದು ನಾಡಿಯನ್ನು ಹಿಡಿದು ಒಟ್ಟು "ಬಾಡಿ"ಯನ್ನೇ ಅಳೆಯುವ ಆಯುರ್ವೇದದಂತೆ. ಆದರೆ ಈ ಸೂತ್ರ ನೆನಪಿರಲಿ! ನಾಡಿ ಮಿಡಿತ ತಿಳಿಯುವ ತಾಕತ್ ಎಚ್ಚರ ಸಿದ್ಧತೆ ಅರ್ಹತೆ ಪರಿಜ್ಞಾನ ಇರಬೇಕು.

ಸ್ಟೆಪ್ನಿ

ಎಂ. ಎಸ್. ನರಸಿಂಹಮೂರ್ತಿ

'ಸ್ಕೂಟರಿಗೆ ಎಷ್ಟು ಚಕ್ರ ಇರುತ್ತೆ ?' ಎಂದು ಒಮ್ಮೆ ವಿಶ್ವ ನನ್ನನ್ನು ಕೇಳಿದ್ದ. ಕೆಲವು ಸಲ ತೀರಾ ಸಿಲ್ಲಿಯಾದ, ಸಿಂಪಲ್ಲಾದ ಪ್ರಶ್ನೆ ಹಾಕಿ ಬಿಡುತ್ತಾನೆ. ಆದರೆ ಉತ್ತರ ಹೇಳುವಾಗ ಮಾತ್ರ ನಾವು ಜಾಣ್ಮೆ ವಹಿಸಬೇಕು.

'ಎರಡು ಚಕ್ರ' ಎಂದೆ. ಅವನು ಗೊಳ್ಳನೆ ನಕ್ಕು 'ಅಲ್ಲಿ ನೋಡು' ಎಂದ. ರಸ್ತೆಯಲ್ಲಿ ಸ್ಕೂಟರೊಂದು ಓಡುತ್ತಿತ್ತು. ನೋಡುತ್ತೇನೆ. ಮೂರು ಚಕ್ರಗಳು! ವಾಹನ ಓಡುವುದು ಎರಡೇ ಚಕ್ರಗಳ ಮೇಲಾದರೂ ಒಂದು ಚಕ್ರವನ್ನು ಸ್ಟೆಪ್ನಿಯಾಗಿ ತೆಗಿದಿರಿಸಿರುತ್ತಾರೆ. ಅದನ್ನು ಹಿಂಬದಿಯ ಸೀಟಿನ ಬಳಿ ಇಟ್ಟಿರುತ್ತಾರೆ. ಇಷ್ಟು ಹೇಳಿದ ಮೇಲೆ ಜೀಪಿಗೆ ಎಷ್ಟು ಚಕ್ರಗಳಿವೆ ಎಂಬ ಪ್ರಶ್ನೆಯನ್ನು ಉತ್ತರಿಸುವುದು ಸುಲಭ. ವಾಸ್ತವವಾಗಿ ಎಷ್ಟಿರುತ್ತದೋ ಅದರ ಜೊತೆಗೆ ಒಂದನ್ನು ಸೇರಿಸಿ ಹೇಳುವುದು. ವಾಹನದ ಮೇಲೆ ಒಂದು ಚಕ್ರ ಸ್ಟೆಪ್ನಿಯಾಗಿ ತೆಗೆದಿರಿಸಲೇಬೇಕಲ್ಲವೆ ? ಜೀಪಿಗೆ ಐದು ಚಕ್ರವಾಯಿತು; ಬಸ್ಸಿಗೆ ಏಳು ಚಕ್ರವಾಯಿತು. ಅಂತೆಯೇ ಮನುಷ್ಯನಿಗೆ ಮೂರುಕಾಲು ಎಂದರೆ ಮಹಾಪರಾಧವಾದೀತು. ಮನುಷ್ಯನಿಗೆ ಕಾಲು ಎರಡೇ. ಮೂರು ಅಥವಾ ನಾಲ್ಕು ಕಾಲುಗಳಿರಲು ಅವನೇನೂ ದನವಲ್ಲ. ಸ್ಟೆಪ್ನಿಯಾಗಿ ತೆಗೆದಿರಿಸಲು ಸ್ಪೇರ್ ಪಾರ್ಟು ಸಿಗಬೇಕಲ್ಲ ?

ನಮ್ಮ ಕೈ, ಕಾಲುಗಳು ಮತ್ತು ಬಾಯಿ ಇತ್ಯಾದಿಗಳಿಗೆ ಸ್ಟೆಪ್ನಿಗಳು ಜೋಡಿಸುವಂತಿದ್ದರೆ ನಾವು ಹೆಚ್ಚು ಪ್ರಗತಿಪರರಾಗಬಹುದಿತ್ತು. ಹೆಚ್ಚಿನ ಫಲಿತಾಂಶವನ್ನು ತೋರಿಸಬಹುದಿತ್ತು. ಬರೆಯುತ್ತಾ ಕೂತಾಗ ಕೈ ಸೋತರೆ ತೋಳಿನ ಬಳಿ ಬೋಲ್ಟು ನೆಟ್ಟುಗಳನ್ನು ಕಳಚಿ ಬೇರೆ ಕೈಯನ್ನು ಅಳವಡಿಸಿಕೊಳ್ಳುವುದು. ಅನಂತರ ಮತ್ತೆ ಮಾಮೂಲಾಗಿ ಎಷ್ಟುಬೇಕಾದರೂ ಬರೆಯಬಹುದಲ್ಲ ? ಫ್ಯಾಕ್ಟರಿಯ ಜನವಾದರೆ ಎಷ್ಟು ಗಂಟೆ ಬೇಕಾದರೂ ಓವರ್ ಟೈಂ ಕೆಲಸ ಮಾಡಬಹುದಲ್ಲ ?

ಮೊನ್ನೆ ನಮ್ಮ ವಿಶ್ವನ ಫ್ಯಾಕ್ಟರಿಯಲ್ಲಿ ಎಂಥದ್ದೋ ಸಮಾರಂಭಕ್ಕೆ ಯಾರನ್ನೋ ಕರೆಸಿದ್ದರಂತೆ. ಬಂದಿದ್ದ ಶ್ರೀಯುತರು ಮಾತಾಡುತ್ತಾ,

ನಿಮ್ಮ ಫ್ಯಾಕ್ಟರಿ ದಿನಕ್ಕೆ ಇಪ್ಪತ್ನಾಲ್ಕು ಗಂಟೆ ಕೆಲಸ ಮಾಡುತ್ತದೆ. ಎಂಬುದು ಕೇಳಿ ಮಹದಾನಂದವಾಯಿತು. ನಿಮ್ಮ ಅವಿರತ ಸೇವೆಯಲ್ಲಿ ದೇಶದ ಏಳಿಗೆ ಅಡಗಿದೆ. ನಾನು ಮುಂದಿನ ವರ್ಷ ಭಾಷಣಕ್ಕೆ ಬರುವ ವೇಳೆಗೆ ನೀವೆಲ್ಲಾ ದಿನಕ್ಕೆ ನಲವತ್ತೆಂಟು ಗಂಟೆಗಳು ಕೆಲಸ ಮಾಡುವಂತಹರಾಗಿರ ಬೇಕು' ಎಂದರಂತೆ !

ದಿನಕ್ಕೆ ನಲವತ್ತೆಂಟು ತಾಸು ಕೆಲಸ ಮಾಡಲು ಕಾರ್ಮಿಕರಿಗೆ ಕೈಕಾಲು ಗಳನ್ನು ಒದಗಿಸಿದರೂ ಸಾಧ್ಯವಾಗದ ಮಾತು. ಆದರೆ ಧಾರಾಳವಾಗಿ ಸದಾ ಉಪದೇಶ ನೀಡುವ ಶ್ರೀಯುತರ ಬಾಯಿಗೆ ಒಂದು ಸ್ಟೆಪ್ಪಿ ಜೋಡಿಸುವ ಸಾಧ್ಯತೆಗಳಿದ್ದಿದ್ದರೆ ಎಂಥ ಚೆನ್ನಿರುತ್ತಿತ್ತು ! ಶ್ರೀಯುತರ ಮನೆಯವರ ಹೆಸರು ರಮಾಬಾಯಿಯೋ, ಕೌಸಲ್ಯಬಾಯಿಯೋ ಆಗಿದ್ದರೆ ಆ 'ಬಾಯಿ' ಗಳಿಗೆ ಸ್ಟೆಪ್ಪಿ ಜೋಡಿಸುವ ಕಲೆ ರಾಜಕೀಯ ಮುಂದಾಳಾಗಿರುವ ಶ್ರೀಯುತರಿಗೆ ತಿಳಿ ಯದೆ ? ಆದರೆ ಮಾತಾಡಿ ದಣಿಯುವ ತಮ್ಮ ಬಾಯಿಗೆ ಬಿಡುವು ನೀಡಬಲ್ಲ ಬಾಯಿ ಮತ್ತೊಂದು ದೊರೆಯುವುದಾದರೆ ದಿನಕ್ಕೆ ನಲವತ್ತೆಂಟು ತಾಸು ಮಾತಾಡಲು ಶ್ರೀಯುತರು ಸಿದ್ಧ ! ಬಾಯೊಳಗಿನ ದಂತಪಂಕ್ತಿಗಳಿಗೆ ಸ್ಟೆಪ್ಪಿ ಜೋಡಿಸಿಕೊಂಡಿದ್ದಾರೆ. ಅದೂ ಅವರು ಜೋಡಿಸಿಕೊಂಡಿರುವುದಿಲ್ಲ. ಶ್ರೀಯುತರ ಭಾಷಣಗಳು ಕೇಳಿದ ಮಹಾಜನಗಳು ಜೋಡಿಸಿಕೊಟ್ಟಿರುವುದು ಎಂದು ನನ್ನ ಅನ್ನಿಸಿಕೆ. ಏನೇ ಆಗಲಿ, ಬಾಯಿಗೆ ಒಂದು ಸ್ಟೆಪ್ಪಿ ಬೇಕು. ಹಾಗೆಯೇ ಒಂದು ಬ್ರೇಕು. ತಮ್ಮ ಅರಿವಿಲ್ಲದೆಯೇ ಮಾತುಗಳು ಅಂಕೆ ತಪ್ಪಿ ಓಡಿದಾಗ ಚಕ್ಕನೆ ವಿಷಯ ನಿಲ್ಲಿಸಲು, ಮಾತಿನ ವೇಗ ಕಡಿಮೆಮಾಡಲು ಒಂದು ಬ್ರೇಕಿದ್ದರೆ ಅನೇಕ ಗಂಡಾಂತರಗಳಿಂದ ಪಾರಾಗಬಹುದು. ಸ್ಕೂಟರಿ ಗಿರುವಂತೆ ಕಾಲಿನ ಬಳಿ ಬ್ರೇಕ್ ಇದರೆ ಸುಲಭ. ಅಥವಾ ಕೋಟಿನ ಕಿಸೆ ಯಲ್ಲಿ ಇಟ್ಟುಕೊಳ್ಳುವ ವ್ಯವಸ್ಥೆ ಮಾಡಬಹುದಾದರೆ ಮತ್ತಷ್ಟು ವಾಸಿ.

ನಮ್ಮ ದೇಹದ ಬಿಡಿಭಾಗಗಳು ದೊರೆಯುವಂತಿದ್ದರೆ ಇನ್ನೂ ಹೆಚ್ಚಿನ ಕೆಲಸಗಳನ್ನು ಸಾಧಿಸಬಹುದಿತ್ತು ಎಂಬ ಮಾತನ್ನು ಅಲ್ಲವೆನ್ನುವಂತಿಲ್ಲ. ಕಣ್ಣಿಲ್ಲದವನಿಗೆ ಬೇರೆಯವನ ಕಣ್ಣನ್ನು ಅಳವಡಿಸುತ್ತಿದ್ದಾರೆ. ಮೂಳೆ

ಮುರಿದವರಿಗೆ ಮೂಳೆಗಳು ಜೋಡಿಸುತ್ತಿದ್ದಾರೆ. ದೇಹವೆಂಬ ಗಾಡಿಯಲ್ಲಿನ ರಕ್ತವೆಂಬ ಡೀಸೆಲ್ ಕಡಮೆಯಾದರೆ ಬ್ಲಡ್ ಬ್ಯಾಂಕಿನಿಂದ ಸಹಾಯ ಪಡೆಯ ಬಹುದು. ಮುಖದ ಮೇಲೆ ಚರ್ಮ ಸುಟ್ಟು ಹಾಳಾದರೆ ತೊಡೆಯ ಮೇಲಿನ ಚರ್ಮವನ್ನು ತೆಗೆದು ಪ್ಯಾಚ್ ಹಾಕಬಹುದು. ಆಗ ತೊಡೆ ಮೇಲೆ ಗಾಯ ಆಗುತ್ತದೆ. ಅದನ್ನು ವಾಸಿ ಮಾಡಲು ಹೊಟ್ಟೆ ಮೇಲಿನ ಚರ್ಮ ಬಳಸ ಬಹುದು. ಹೊಟ್ಟೆ ಹುಣ್ಣಾದರೆ ಕಾಲಿನ ಮೇಲಿನ ಚರ್ಮ ತಗೆದು ಸರಿಮಾಡಿ. ಈ ವೇಳೆಗೆ ಮುಖದ ಗಾಯ ಪೂರ್ಣ ಮಾಯವಾಗಿರುತ್ತದೆ. ಕಾಲನ್ನು ಸರಿಪಡಿಸಲು ಅಲ್ಲಿಂದಲೇ ಚರ್ಮ ತೆಗೆದುಕೊಳ್ಳಬಹುದು. ಇದೊಂದು ಸತತ ಕ್ರಿಯೆ. ಜೀವನವಿಡೀ ಮೈಗೆ ಹೊಲಿಗೆ ಹಾಕಿಸಿಕೊಳ್ಳುತ್ತಿರುವುದೇ ಕೆಲಸ.

ಹೃದಯಗಳನ್ನೇ ಬದಲಿಸುವುದರಲ್ಲಿ ಯಶಸ್ವಿಯಾಗಿರುವ ಜನ ಕೈ ಕಾಲುಗಳಿಗೆ ಸ್ಪೇರ್ ಪಾರ್ಟುಗಳನ್ನು ಹುಡುಕಬಹುದಿತ್ತು. ಪೆಟ್ರೋಲಿನ ಅಭಾವ ಇರುವ ಈ ಕಾಲದಲ್ಲಿ ಎಲ್ಲ ಸ್ಥಳಗಳನ್ನೂ ನಡೆದೇ ಸೇರಬಹುದಿತ್ತು. ಒಂದೆರಡು ಸ್ಟೆಪ್ಸಿ ಕಾಲುಗಳನ್ನು ಬ್ಯಾಗಿನಲ್ಲಿ ಹಾಕಿಕೊಂಡು ನಡೆಯುತ್ತಾ ಹೋಗುವುದು. ಹತ್ತು ಮೈಲಿ ನಡೆಯುವ ವೇಳೆಗೆ ಕಾಲುಗಳಲ್ಲಿನ ತ್ರಾಣ ಕಡಮೆ ಆದರೆ ಅಲ್ಲೇ ಮರವೊಂದರ ಅಡಿ ಕೂತು ಬ್ಯಾಗನ್ನು ಬಿಡಿಸಿ ಕಾಲು ಗಳನ್ನು ಕಳಚಿ, ಬೇರೆ ಅಳವಡಿಸಿಕೊಂಡರೆ ಮತ್ತೆ ಹತ್ತು ಮೈಲಿ ನಡೆಯ ಬಹುದು. ಲೋಕೋ ಮುಷ್ಕರ ಲೋಕದಾದ್ಯಂತ ಆಚರಿಸುತ್ತಿದ್ದರೂ ತೊಂದರೆಯಾಗುವುದಿಲ್ಲ. ಆದರೆ ಈಗಿನ ಪರಿಸ್ಥಿತಿಯಲ್ಲಿ ಮೈಸೂರಿಂದ ಬೆಂಗಳೂರಿಗೆ ಹೊರಟ ರೈಲು ಗಾಡಿಯನ್ನು ಮಂಡ್ಯಕ್ಕೆ ಮೂರು ಮೈಲಿ ದೂರದ ಕಾಡೊಂದರಲ್ಲಿ ನಿಲ್ಲಿಸಿ ಹಠಾತ್ ಮುಷ್ಕರ ಪ್ರಾರಂಭಿಸಿದರೆ ಪ್ರಯಾಣ ಕರ ಸ್ಥಿತಿ ಚಿಂತಾಜನಕ. ಆಮ್ಲಜನಕ ಒದಗಿಸುವಷ್ಟು ಚಿಂತಾಜನಕ.

ದೇಹದ ಭಾಗಗಳಿಗೂ ಸ್ಟೆಪ್ಸಿಗಳನ್ನು ಜೋಡಿಸಿದರೆ ಆಗುವ ಅನುಕೂಲ ಗಳು ಎಷ್ಟಿವೆಯೋ ಅನಾನುಕೂಲಗಳೂ ಅಷ್ಟೇ ಇವೆ. ಎರವಲು ಪಡೆಯುವು ದನ್ನೇ ಜೀವನದ ಧ್ಯೇಯವಾಗಿಸಿಸಿಕೊಂಡಿರುವ ಜನಕ್ಕೆ ತುಂಬಾ ಸುಲಭವಾಗಿ ಬಿಡುತ್ತದೆ. ನಾನು ಒಂದು ಭಾನುವಾರ ನಿಶ್ಚಿಂತೆಯಿಂದ ಮನೆಯಲ್ಲಿ ಇರುವ ದಿನ ಪಕ್ಕದ ಮನೆಯ ರಾಮಣ್ಣನವರು ಬಂದು,

"ಈವತ್ತು ನಿಮಗೆ ಆಫೀಸು ಇಲ್ಲವಲ್ಲ ? ಸ್ವಲ್ಪ ಕಾಲುಗಳನ್ನು ಕೊಟ್ಟೆರಿ ಮಲ್ಲೇಶ್ವರದ ಮಾರ್ಕೆಟ್ಟಿನವರೆಗೆ ಹೋಗಿ ಬರಬೇಕಾಗಿದೆ. ಈಗಷ್ಟೇ ಮೆಜಸ್ಟಿಕ್ ಎಲ್ಲಾ ಸುತ್ತಾಡಿ ಬಂದ ನನ್ನ ಕಾಲುಗಳಿಗೆ ತುಂಬಾ ದಣಿವಾಗಿವೆ' ಎಂದರೆ ಏನು ಮಾಡುವುದು ? ಕೊಡುವಂತಿಲ್ಲ ಬಿಡುವಂತಿಲ್ಲ. ಕೊಟ್ಟರೆ, ಎಲ್ಲೆಲ್ಲಿ ಸುತ್ತಾಡಿ ಬರುತ್ತಾರೋ ಯಾರಿಗೆ ಗೊತ್ತು ?

ಸ್ಟೆಪ್ಪಿ ಅಳವಡಿಸುವುದು, ದೇಹದ ಭಾಗಗಳನ್ನು ಕಳಚಿ ಬೇರೆಯವರ ಬಾಡಿಗೆ ಜೋಡಿಸುವುದು ಸುಲಭಸಾಧ್ಯ ಆಗಿಬಿಟ್ಟ ದಿನ ಇಲ್ಲದ ಆಭಾಸಗಳ ಪರಂಪರೆ ಕಾಣಿಸಿಕೊಳ್ಳುವುದಂತೂ ಸುಸ್ಪಷ್ಟ. ನಮಗಿರುವ ಕೆಟ್ಟ ಮನಸ್ಸಿಗೆ ಮಹಾತ್ಮರೊಬ್ಬರ ಮನಸ್ಸನ್ನು ಸ್ಟೆಪ್ಪಿಯಾಗಿ ಬಳಸಿಕೊಳ್ಳೋಣ. ಅವರ ತತ್ವ, ಆದರ್ಶತೆಗಳನ್ನು ರೂಢಿಸಿಕೊಳ್ಳೋಣ. ಆದರೆ ದಣಿದ ಕೈ-ಕಾಲುಗಳಿಗೆ ಪರರ ಮೈ ಭಾಗಗಳನ್ನು-ಜೋಡಿಸಿಕೊಳ್ಳುವುದು ಸಾಧ್ಯವಾಗಿ ಬಿಟ್ಟರೆ ಬಡವ ದುಡಿಯುತ್ತಲೇ ಹೋಗುತ್ತಾನೆ. ಧನಿಕ ಬೆಳೆಯುತ್ತಲೇ ಹೋಗುತ್ತಾನೆ. ಕೈಕಾಲು ಮುರಿದು ಹಾಕ್ತೀನಿ ಎಂದು ಯಾರಾದರೂ ಹೆದರಿಸಿದರೆ ಈಗ ಸುಮ್ಮನಾಗುತ್ತೇವೆ. ಆದರೆ 'ಸ್ಟೆಪ್ಪಿ' ಕಾಲದಲ್ಲಿ ಹೆದರುವುದೇ ಇಲ್ಲ. 'ಮುರಿದು ಹಾಕು ; ಬೇರೆ ಒಂದು ಜೊತೆ ನಮ್ತುಂದೆಗೆ ಹೇಳಿ ತಗೊಳ್ತೀನಿ.' ಎಂಬ ಉತ್ತರವೂ ನಿರೀಕ್ಷಿತವೇ. ಪ್ರತಿ ದಿನ ಒಂದೇ ಜೊತೆ ಕಾಲುಗಳಲ್ಲಿ ಓಡಾಡಿ ತನಗೆ ಬೇಜಾರು ಬಂದಿದೆಯೆಂದು ಮಗು ಚಂಡಿ ಹಿಡಿದು ಹೊಸ ಜೊತೆ ಕಾಲುಗಳು ತರಿಸಿಕೊಡಲು ಹಟ ಮಾಡಲೂ ಬಹುದು.

ಆ ಕಾಲವೂ ಬಂದೇ ಬಿಟ್ಟಿತು ಎಂದಿಟ್ಟುಕೊಳ್ಳೋಣ.

ಒಂದು ರಾತ್ರಿ ಮಲಗಿರುತ್ತೇನೆ. ಬೆಳಿಗ್ಗೆ ಕಣ್ಣು ಬಿಡುತ್ತಿದ್ದಂತೆಯೇ ಕಣ್ಣುಜ್ಜಿಕೊಳ್ಳಲು ಪ್ರಯತ್ನಿಸುವೆ, ಆದರೆ ಕೈಗಳೇ ಇಲ್ಲ. ಮೈ ಉರಿಯುತ್ತದೆ. ಕೂತಲ್ಲಿಂದಲೇ ಕಿರುಚುತ್ತೇನೆ, ನರ್ಮದೆ ಬರುತ್ತಾಳೆ

"ನನ್ನ ಕೈಗಳು ಏನಾದವು ?"

"ಪಕ್ಕದ ಮನೆ ಅಲಮೇಲಮ್ಮನವರು ಸ್ವಲ್ಪ ಅವಲಕ್ಕಿ ಕುಟ್ಟಬೇಕಿದೆಯಂತೆ. ನಾನೇ ನಿಮ್ಮ ಕೈಗಳು ಕಳಚಿ ಕೊಟ್ಟೆ. ಈಗ ತಂದುಕೊಡ್ತಾರೆ."

ಅಲಮೇಲಮ್ಮನವರು ನನ್ನ ಅನುಮತಿ ಇಲ್ಲದೆ ನನ್ನ ದೇಹದ ಬಿಡಿ ಭಾಗಗಳನ್ನು ಒಯ್ಯುವಷ್ಟು ಸದರ ಬಂದರೆ ಮುಂದೆ ನೆಮ್ಮದಿಯಿಂದ ಬದುಕುವುದು ಹೇಗೆ ಎಂದು ತಿಳಿಯದೆ ತಬ್ಬಿಬ್ಬಾಗುತ್ತೇನೆ.

ಸುಖದ ಅನ್ವೇಷಣೆ

ಅನಂತ ಕಲ್ಲೋಳ

'ಕುಲವಂ ನಾಲಗೆಯರುಹಿತು' ಎಂಬಂತೆ "ವೃತ್ತಿಯಂ ನಾಲಗೆಯರುಹಿತು" ಎಂಬುದೂ ಸತ್ಯ! ಅಲ್ಲಿ, ಲಕ್ಷ್ಮೀದಿಬ್ಬದ ಕಡೆಗೆ ವಾಕಿಂಗಿಗೆ ನಡೆದಿದ್ದಾರಲ್ಲ, ಅವರಿಬ್ಬರೂ ಸ್ಥಳೀಯ ಕಾಲೇಜಿನಲ್ಲಿಯ ಪ್ರಾಧ್ಯಾಪಕರು ಎಂಬುದು ಅವರ ಮಾತಿನಿಂನಲೇ ಗೊತ್ತಾಗುತ್ತದೆ. ಒಬ್ಬರು ಫಿಲಾಸಫಿಯ ಪ್ರಾಧ್ಯಾಪಕರು; ಮತ್ತೊಬ್ಬರು ಅರ್ಥಶಾಸ್ತ್ರದ ಪ್ರೊಫೆಸರರು. ಅವರ ಚರ್ಚೆಯ ವಿಷಯ, 'ಸುಖ ಎಂದರೇನು?" ಎಂಬುದು.

"ಅಲ್ಲ; ಮಿ.—ರವರೇ, ನಿಮ್ಮ ದೃಷ್ಟಿಯಲ್ಲಿ ಸುಖ ಎಂದರೇನು?" ಫಿಲಾಸಫಿಯ ಪ್ರಾಧ್ಯಾಪಕರು ತಮ್ಮ ಸಹೋದ್ಯೋಗಿಯನ್ನು ಕೇಳಿದರು.

"ಸುಖ ಎಂದರೆ ನಮ್ಮ 'ಬೇಕು' ಗಳನ್ನು, 'wants' ಗಳನ್ನು ತೃಪ್ತಿಪಡಿಸಿದ ಮೇಲೆ ನಮ್ಮಲ್ಲಿ ಉಂಟಾಗುವ ಸಮಾಧಾನದ ಭಾವನೆ. ಮನುಷ್ಯನೆಂದರೆ 'bundle of instincts'—ಅದು ಬೇಕು, ಇದು ಬೇಕು ಎಂದು ಬಾಯ್ಬಿಡುವ ಪ್ರಾಣಿ. ಅವನು ತಾನು ಬಯಸಿದ್ದನ್ನೆಲ್ಲ ಪಡೆದರೆ ಅವನೇ ಸುಖೀಪುರುಷ" ಅರ್ಥಶಾಸ್ತ್ರದ ಪ್ರಾಧ್ಯಾಪಕರು ಉತ್ತರಿಸಿದರು.

"ನೀವು ಹೇಳಿದ್ದು ಸರಿ, ಎಂದು ಒಂದು ಚಣ ಭಾವಿಸುವಾ. ನೀವು ಹೇಳಿದ ತತ್ವವನ್ನು ಪರಿಕಿಸೋಣ. ನಮ್ಮೂರಿನ ಗಣ್ಯವ್ಯಕ್ತಿ—ರಾಯರು ಗೊತ್ತಿರಬೇಕಲ್ಲ? ಅವರಂಥ ಆಗರ್ಭ ಶ್ರೀಮಂತರು ವಾಂಛಿಸಿದುದು ಅವರ ಕೈಗೂಡಲು ಏನು ತಡ? ಆ ಮಹಾಶಯನಿಗೆ ಬೇಕಾದುದಾದರೂ ಏನು? ಸದಾ ಸರ್ವದಾ ಕುಡಿಯಲು ಮದಿರೆ ದುಡ್ಡಿದೆ. ದಿನದ ೨೪ ಗಂಟೆಯೂ ಕುಡಿದು ಲೋಲಾಡುತ್ತಾನೆ. ಇಚ್ಛಿಸಿದುದನ್ನು ಉಪಭೋಗಿಸಲು ಸಮರ್ಥನೂ ಇದ್ದಾನೆ. ಈಗ ನೀವೇ ಹೇಳಿ, ಆತ ಸುಖಿಪ್ರಾಣಿಯೇ?"

"ಆಂ, ಆಂ; ಆತನನ್ನು ಸುಖಿ ಎಂದು ಕರೆಯುವುದು ಧಾಷ್ಟ್ಯದ ಮಾತೇ ಸರಿ." ಸೀಗರೇಟಿನ ಹೊಗೆ ಬಿಡುವ ಅರ್ಥಶಾಸ್ತ್ರದ ಪ್ರೊಫೆಸರರು ಮೆಲ್ಲಗೆ ಹೇಳಿದರು.

"ಮತ್ತೆ ನೋಡಿ, ನಿಮ್ಮ ಇಕನಾಮಿಕ್ಸ್‌ನಲ್ಲಿ ಒಂದು ತತ್ವ ಇದೆಯಲ್ಲ 'ಲಾ ಆಫ್ ಡಿಮಿನಿಷಿಂಗ್ ಯುಟಿಲಿಟಿ' ಅದರ ಪ್ರಕಾರ, ನಮ್ಮ 'ಬೇಕು' ಗಳನ್ನು ಪೂರೈಸುತ್ತ ಹೋದಂತೆ ಬರಬರುತ್ತ, ಪೂರೈಕೆಯು ಹೆಚ್ಚುತ್ತ ಹೋದಂತೆ, ಪ್ರತಿಫಲದಲ್ಲಿ ದೊರೆಯುವ ಸಮಾಧಾನ ಪ್ರಮಾಣ ಕಡಮೆ ಯಾಗುತ್ತದೆ, ಅಲ್ಲವೆ ?" ಫಿಲಾಸಫಿಯ ಪ್ರೊಫೆಸರರು ಕ್ರಾಸ್ ಎಕ್ಸಾಮಿ ನೇಷನ್ ಮಾಡುವ ವಕೀಲನ ಶೀವಿಯಲ್ಲಿ ಕೇಳಿದರು.

"ಅಹುದು. 'ಲಾ ಆಫ್ ಡಿಮಿನಿಷಿಂಗ್ ಯುಟಿಲಿಟಿ'ಯ ಥಿಯರಿಯ ಪ್ರಕಾರ ಪೂರೈಕೆ ಹೆಚ್ಚುತ್ತ ಹೋದಂತೆ ಸಿಗುವ ಸಮಾಧಾನದ ಪರಿಮಾಣ ಉಡುಗುತ್ತದೆ. ಅರ್ಥಶಾಸ್ತ್ರದ ಪ್ರೊಫೆಸರರು ಮತ್ತೊಂದು ಸಿಗರೇಟ್ ಹೊತ್ತಿಸುತ್ತ ಸಮ್ಮತಿಸಿದರು. ಅವರು ಒಂದಾದ ಮೇಲೊಂದು ಸಿಗರೇಟ್ ಹಚ್ಚುವುದನ್ನು ನೋಡಿದರೆ ಅವರು ಈ 'ಲಾ ಆಫ್ ಡಿಮಿನಿಷಿಂಗ್ ಯುಟಿಲಿಟಿ' ಥಿಯರಿಗೆ ಅಪವಾದವಿದ್ದಂತೆ ತೋರುತ್ತಿತ್ತು. ಸಿಗರೇಟಿನ ಹೊಗೆಯು ಗುಳುತ್ತ ಅವರು ಫಿಲಾಸಫಿಯ ಪ್ರೊಫೆಸರರನ್ನು ಕೇಳಿದರು, "ನಿಮ್ಮ ದೃಷ್ಟಿ ಯಲ್ಲಿ ಸುಖದ ಕಲ್ಪನೆಯೇನು ?" ಎಂದು.

"ಹಾಂ! ಅದೇ ನನಗೂ ಸಮಸ್ಯೆಯಾಗಿದೆ. ನೋಡಿ; 'ಪರಮಾತ್ಮ ನೆಂದರೇನು ?' ಎಂಬ ಪ್ರಶ್ನೆಗೆ ಕೆಲವು ಪಂಡಿತರು "ನೇತಿ–ನೇತಿ" ಎಂಬ ಅ–ಭಾವ (negative) ವ್ಯಾಖ್ಯೆಯನ್ನು ಕೊಡುತ್ತಾರೆ. ಪರಮಾತ್ಮ ನೆಂದರೆ ಇದು ಅಲ್ಲ, ಹೀಗೆ ಅಲ್ಲ ಎಂಬ ನಿಷೇಧಾತ್ಮಕ ವರ್ಣನೆಯನ್ನು ಸೂರೆ ಗೊಳ್ಳುತ್ತಾರೆಯೇ ವಿನಾ ಪರಮಾತ್ಮನೆಂದರೆ ಹೀಗೆ ಎಂದು ಖಂಡಿತವಾಗಿ ನಿರ್ದೇಶಿಸುವುದಿಲ್ಲ, ಏಕೆಂದರೆ ಪರಮಾತ್ಮನನ್ನು ಹೋಲಿಸಲು ತಕ್ಕಂಥ ವಸ್ತುವೇ ಈ ಚರಾಚರ ಸೃಷ್ಟಿಯಲ್ಲಿಲ್ಲ. ಈ ವಾದಕ್ಕೆ "ನೇತಿ–ನೇತಿ" ವಾದ ಎಂದು ಹೆಸರು. ನನಗನಿಸುತ್ತದೆ, ಸುಖದ ವ್ಯಾಖ್ಯೆಯನ್ನು ಕೂಡ ನಾವು ಹೀಗೇ, ಅ–ಭಾವಾತ್ಮಕವಾಗಿ ಮಾಡಬೇಕಾಗುತ್ತದೆ."

ಅಸಹಾಯ ಮನೋಭಾವದಿಂದ ಫಿಲಾಸಫಿಯ ಪ್ರಾಧ್ಯಾಪಕರು ಉತ್ತ ರಿಸಿದರು. ಅರ್ಥಶಾಸ್ತ್ರದ ಪ್ರೊಫೆಸರರು ಈ ಚರ್ಚೆಯನ್ನು ಮುಂದುವರಿಸುವ

ಗೋಜಿಗೆ ಹೋಗಲಿಲ್ಲ. ಸಿಗರೇಟ್ ಸೇದುವುದನ್ನು ಮಾತ್ರ ಅವ್ಯಾಹತವಾಗಿ ಮುಂದುವರಿಸಿದ್ದರು; ತಮ್ಮ 'ಬೇಕು'ವನ್ನು ನಿರಂತರವಾಗಿ ಪೂರೈಸುವುದರಲ್ಲಿ ತೊಡಗಿದ್ದರು. ಹೀಗಾಗಿ ಅವರಿಬ್ಬರಲ್ಲಿಯೂ ದೀರ್ಘಕಾಲದವರೆಗೆ ಮೌನ ವ್ಯಾಪಿಸಿತು. ಈ ಮೌನವನ್ನು ಭೇದಿಸಿ ಬಂದ ಧ್ವನಿ ಇಬ್ಬರನ್ನೂ ಬೆರಗು ಗೊಳಿಸಿತು.

"ಹೀಂಗ ಮಾಡಿದರ ಸುಖಾ ಆಗತೈತಿ."

ಯಾರೋ ಮಾತನಾಡುತ್ತಿದ್ದರು. ಇಬ್ಬರೂ ಪ್ರೊಫೆಸರರಿಗೆ ವಿಸ್ಮಯ. ಕುತೂಹಲದಿಂದ ಧ್ವನಿ ಕೇಳಬಂದಲ್ಲಿಗೆ ಸಾಗಿನೋಡಿದರು. ಪಕ್ಕದಲ್ಲಿಯ ಒಂದು ಗುಡಿಸಿಲಿನ ಮುಂದೆ ಮುದುಕ. ಮುದುಕಿ ಮಾತಾಡುತ್ತ ಕುಳಿತಿದ್ದರು. ಆಗಂತುಕರನ್ನು ನೋಡಿ ಮುದುಕ ಮತ್ತು ಮುದುಕಿ ತಮ್ಮ ಮಾತನ್ನು ನಿಲ್ಲಿಸಿದರು. ಫಿಲಾಸಫಿಯ ಪ್ರಾಧ್ಯಾಪಕರು ಆ ಮುದುಕನನ್ನು ಕೇಳಿದರು.

"ಅಲ್ಲಪ್ಪಾ, ಯಜ್ಜಾ; ಇದೀಗ ನೀ ಅಂದ್ಯಲ್ಲ, 'ಹೀಂಗ ಮಾಡಿದರ ಸುಖಾ ಆಗತೈತಿ'ಯಂತ, ಹ್ಯಾಂಗ ಮಾಡಿದರ ಸುಖಾ ಆಗತೈತಿ? ನಮಗಷ್ಟು ಹೇಳು, ನೋಡೋಣ."

"ಯಾನ ಸಾಹೇಬ್ರ? ಇದೊಳ್ಳೇ ತಮಾಷೆ ಆಯ್ತಲ್ಲ. ಅಲ್ಲಾ ಬೆಳಗಿನಿಂದ ಹೊತ್ತ ಮುಣುಗೋತನಕ ಕಲ್ಲು ಕಟೆದೂ ಕಟೆದೂ ನನ್ನ ಅಂಗೈ ಮ್ಯಾಲೆಲ್ಲ ಗುಳ್ಳಿ ಬಂದು ಒಡೆದಾವ. ಅಂಗೈ 'ಚುರ್-ಚುರ್' ಅನ್ನಾಕ್ಹತ್ತಿತ್ತು. ಅಂತ್ಹೇಳಿ ಕೈಮ್ಯಾಲ ಊದಿ-ಊದಿ ತಂಪ ಮಾಡಕೋತ ಕುಂತಿದ್ನಿ. ನನ್ನ ಹ್ಯಾಣ್ತಿ ಬಂದು ಕೇಳಿದ್ಲು, ಹಿಂಗ್ಯಾಂಕೆ 'ಫಸ್-ಫಸ್' ಅಂತ ಊದಾಗ ಹತ್ತೀದಿ ಅಂತ. ಆಕೀಗೆ ನಾನು ಹೇಳತಿದ್ದೆನ್ರಿ; 'ಹೀಂಗ ಮಾಡಿದ್ರ ಸುಖಾ ಆಗತೈತಿ' ಅಂತ."

ಪ್ರೊಫೆಸರರಿಬ್ಬರೂ ಒಬ್ಬರನ್ನೊಬ್ಬರು ನೋಡಿ ಪುನ: ದಾರಿಗಿಳಿದರು. ಸ್ವಲ್ಪ ಹೊತ್ತಾದ ಮೇಲೆ 'ನೇತಿ-ನೇತಿ' ಮಹಾಶಯರು 'ಡಿಮಿನಿಷಿಂಗ್ ಯುಟಿಲಿಟಿ' ಸಾಹೇಬರಿಗೆ ಅಂದರು:

"ಬಹುಶ: ಸುಖವೆಂದರೆ ತಾನು ವಹಿಸಿಕೊಂಡ ಕಾರ್ಯವನ್ನು ಪ್ರಾಮಾಣಿಕವಾಗಿ ಮತ್ತು ಸತತೋದ್ಯೋಗದಿಂದ ಪೂರ್ತಿಗೊಳಿಸಿದ ಮೇಲೆ ಉಮ್ಮಳಿಸಿ ಬರುವ ಕೃತಾರ್ಥ ಭಾವವಿರಬಹುದು."

ಅರ್ಥಶಾಸ್ತ್ರದ ಪ್ರೊಫೆಸರರು ಸಮ್ಮತಿದರ್ಶಕವಾಗಿ ತಲೆ ಅಲ್ಲಾಡಿಸಿದರೇ ಹೊರತು ಬಾಯಿತೆರೆಯಲಿಲ್ಲ! ಏಕೆಂದರೆ ಅವರ ಬಾಯಿ ಘೂಮವಲಯವನ್ನು ರಚಿಸಲು ಪ್ರಯತ್ನಿಸುತ್ತಿತ್ತು.

ಪುಸ್ತಕಗಳು

ಗಿರಡ್ಡಿ ಗೋವಿಂದರಾಜ

'ಹಣ, ಪುಸ್ತಕ, ಹೆಂಡತಿ—ಈ ಮೂರು ವಸ್ತುಗಳು ಒಮ್ಮೆ ಪರರ ಕೈಗೆ ಹೋದರೆ ತಿರುಗಿ ಬರುವದಿಲ್ಲ ; ಬಂದರೂ ಉಪಯೋಗವಾಗದೇ ಬರುವದಿಲ್ಲ' ಎಂದು ಸಂಸ್ಕೃತದಲ್ಲಿ ಒಂದು ಸುಭಾಷಿತವಿದೆ. ಇವುಗಳಲ್ಲಿ ಮೂರನೆಯ ವಸ್ತುವಿನ ಬಗ್ಗೆ ತಲೆ ಕೆಡಿಸಿಕೊಳ್ಳುವ ಪ್ರಸಂಗ ನನಗಿನ್ನೂ ಬಂದಿಲ್ಲ. ಉಳಿದೆರಡು ವಸ್ತುಗಳ ವಿಷಯದಲ್ಲಿ ಮಾತ್ರ ಈ ಸಂಸ್ಕೃತ ಸುಭಾಷಿತಕಾರನಷ್ಟು ನಾನು ಸುದೈವಿಯಲ್ಲ. ಅನೇಕರು ನನ್ನಿಂದ ಹಣ ಒಯ್ದಿದ್ದಾರೆ. ಪುಸ್ತಕ ಒಯ್ದಿದ್ದಾರೆ. ಉಪಯೋಗಿಸಲಿಕ್ಕೆಂದೇ ಕೊಟ್ಟದ್ದು. ಅಂದಮೇಲೆ ಉಪಯೋಗವಾಗದೇ ತಿರುಗಿ ಬರುವದಿಲ್ಲ ಎಂದು ಹಾಸ್ಯ ಮಾಡುವದಾಗಲಿ, ಚಿಂತೆ ಗೀಡಾಗುವದಾಗಲಿ ಜಾಣತನದ ಕೆಲಸವಲ್ಲ. ನನ್ನ ಸಮಸ್ಯೆಯೆಂದರೆ, ಪರರ ಕೈಗೆ ಹೋದ ಈ ವಸ್ತುಗಳು ತಿರುಗಿ ಬರುವದೇ ಇಲ್ಲ. ಈ ಲೇಖನವನ್ನು ಓದುವ ಎಲ್ಲರೂ ನನ್ನ ಅನುಭವವನ್ನು ಅನುಮೋದಿಸುತ್ತಾರೆಂಬುದರಲ್ಲಿ ನನಗೆ ಸಂದೇಹವೇ ಇಲ್ಲ. ಆದರೆ ಇದರಲ್ಲೊಂದು ಮೋಜಿನ ಸಂಗತಿಯೆಂದರೆ, ನಿಮ್ಮ ಗೆಳೆಯರಿಗೆ ಪುಸ್ತಕ ಕಡಕೊಟ್ಟ ನೀವೂ, ನಿಮಗೆ ಕಡಕೊಟ್ಟ ನಿಮ್ಮ ಗೆಳೆಯರೂ ಒಂದೇ ಬಗೆಯ ಅನುಭವ ಹೊಂದಿರುವದು.

ಇವೆರಡರಲ್ಲಿ ಹಣದ ವಿಷಯ ಎಷ್ಟೋ ನೆಟ್ಟಗೆ. ನಿಮ್ಮಿಂದ ಯಾರೋ ಹತ್ತೋ ನೂರೋ ಅಡಚಣೆಯಿದೆಯೆಂದು ತೆಗೆದುಕೊಂಡು ಹೋಗುತ್ತಾರೆ. ತಿಂಗಳೋ ನಾಲ್ಕು ತಿಂಗಳೋ ನೀವು ದಾರಿ ನೋಡುತ್ತೀರಿ. ಹಣ ತಿರುಗಿ ಬರುವದಿಲ್ಲ. ನೇರವಾಗಿ ಕೇಳುವದಕ್ಕೆ ನಿಮಗೆ ಸಂಕೋಚ. ಒಯ್ದವರಾದರೋ ಹಾಗೆ ಎಂದೂ ಒಯ್ದದ್ದೇ ಇಲ್ಲ ಎನ್ನುವವರಂತೆ ನಿಶ್ಚಿಂತರಾಗಿದ್ದಾರೆ. ಆಗ ಬಹಳ ಅರ್ಜೆಂಟಿದೆಯೆಂದು ನೀವು ಕೊಟ್ಟದ್ದಕ್ಕಿಂತ ಇಪ್ಪತ್ತು ಹೆಚ್ಚಿಗೆ ಕೇಳುತ್ತೀರಿ. ಅವರು ನೀವು ಕೊಟ್ಟಷ್ಟೇ ಹಣ ವಾಪಸು ಕೊಡುತ್ತಾರೆ. ಅಲ್ಲಿಗೆ ವ್ಯವಹಾರ ಮುಗಿಯಿತು. ಎಷ್ಟಾದರೂ ಇದು ದುಡ್ಡಿನ ವ್ಯವಹಾರ.

ಆದರೆ ಪುಸ್ತಕದ ವಿಚಾರ ಖಂಡಿತ ಹಾಗಲ್ಲ. ನಿಮಗೆ ತುಂಬ ಪರಿಚಯದ ಗೆಳೆಯರು ನಿಮ್ಮ ಮನೆಗೆ ಬರುತ್ತಾರೆ. ಅವರ ಜೊತೆಗೆ ಅವರ ಪರಿಚಯದ-ನಿಮಗೆ ಹೊಸಬರಾದ—ಒಬ್ಬಿಬ್ಬರು ಬಂದಿರುತ್ತಾರೆ. ನಿಮ್ಮ ಅಮೂಲ್ಯವಾದ ಪುಸ್ತಕ ಸಂಗ್ರಹವನ್ನು ಅವರು ನೋಡಿಯೇ ನೋಡುತ್ತಾರೆ. ಅದರಲ್ಲಿ ನಾಲ್ಕಾರು ಪುಸ್ತಕಗಳಾದರೂ ಅವರ ಕಣ್ಣು ಸೆಳೆಯುತ್ತವೆ. ಕೆಲವಂತೂ ಅವರು ವರ್ಷಗಟ್ಟಲೆ ಹುಡುಕಿ ಯಾವ ಕಡೆಗೂ ಸಿಗದೆ ಕೊನೆಗೆ ಅಂಥ ಪುಸ್ತಕ ಇತ್ತೋ ಇಲ್ಲವೋ ಎಂದುಕೊಂಡ ಪುಸ್ತಕಗಳು. ಹಾಗೆ ಅವರು ನಿಮ್ಮ ಮುಂದೆ ಹೇಳಿದಾಗ ನಿಮ್ಮ ಅಪೂರ್ವ ಪುಸ್ತಕಭಂಡಾರದ ಬಗ್ಗೆ ನಿಮಗೆ ಹೆಮ್ಮೆ ಯೆನಿಸುವದು ಸಹಜ. ಕೇವಲ ನಾಲ್ಕು ದಿನಗಳ ಮಟ್ಟಿಗೆ ಅವುಗಳನ್ನು ಕೊಡಲು ಕೇಳಿದಾಗ ನಿಮಗೆ ಜೀವದ ಸುತ್ತು ಬರುತ್ತದೆ. ನಿಮ್ಮ ಆತ್ಮೀಯ ಗೆಳೆಯರಿಗೆ ನೀವು ಕೊಡುವದಿಲ್ಲವೆಂದು ಹೇಳಿದರೂ ಅವರು ಸ್ನೇಹದ ಸಲಿಗೆ ಯಿಂದ ಒಯ್ದೇ ಒಯ್ಯುತ್ತಾರೆ. ಹೊಸಬರಿಗೆ ನಿಷ್ಠುರವಾಗಿ ಇಲ್ಲವೆನ್ನಲು ಸಂಕೋಚ. ಅಂತೂ ನೀವು ಪುಸ್ತಕ ಕೊಡುತ್ತೀರಿ. ಅವು ಪರರ ಕೈಗೆ ಹೋದವು. ಉಪಯೋಗವಾದ ಮೇಲೆ ಅವು ತಿರುಗಿ ಬಂದರೆ ನಿಮ್ಮಂಥ ಪುಣ್ಯ ವಂತರು ಇನ್ಯಾರೂ ಇಲ್ಲ. ಆ ಪುಸ್ತಕಗಳನ್ನು ಮರಳಿ ದೊರಕಿಸುವಲ್ಲಿ ನೀವು ನಡೆಸಿದ ಪ್ರಯತ್ನಗಳನ್ನು, ಖರ್ಚುಮಾಡಿದ ಚಾತುರ್ಯವನ್ನು ನಾನು ಊಹಿಸ ಬಲ್ಲೆ. ಆದರೆ ನೂರಕ್ಕೆ ತೊಂಬತ್ತೊಂಬತ್ತು ಪ್ರಸಂಗಗಳಲ್ಲಿ ಪುಸ್ತಕ ತಿರುಗಿ ನಿಮ್ಮ ಕೈಗೆ ಬರುವದೇ ಇಲ್ಲ.

ಎಂದರೆ ನೂರಕ್ಕೆ ಒಂದರಷ್ಟು ಪ್ರಸಂಗಗಳಲ್ಲಿ ತಿರುಗಿ ಬರುತ್ತವೆಯೆಂದಾ ಯಿತಲ್ಲ! ನನ್ನ ಅನುಭವದ ಮಾತನ್ನೇ ಹೇಳುವದಾದರೆ ನನ್ನ ಬಳಿ ಅನೇಕ ಅಮೂಲ್ಯ ಗ್ರಂಥಗಳಿವೆಯೆಂದು ನನಗೆ ವಿಪರೀತ ಹೆಮ್ಮೆ. ಅಂದರೆ ಅಕ್ಷರಶಃ ಆ ಪುಸ್ತಕಗಳ ನಿಜವಾದ ಮುಖಬೆಲೆ ಎಷ್ಟಿತ್ತೆಂದು ನನಗೆ ಗೊತ್ತಿಲ್ಲ. (ಬಹ ಳಷ್ಟು ಅಮೂಲ್ಯ ಪುಸ್ತಕಗಳನ್ನು ಸಂಗ್ರಹಿಸುವ ವಿಧಾನವೆಂದರೆ ಹೊಸ ಪುಸ್ತಕ ಗಳನ್ನು ಕೊಳ್ಳುವದಲ್ಲ. ಮೋಡಕಾಬಜಾರದಲ್ಲಿ ಕೈಯಾಡಿಸುವದೆಂದೇ ನನ್ನ ನಂಬಿಕೆ.) ಅವನ್ನೆಲ್ಲ ಕಿತ್ತಾಡಿ ನನ್ನ ಗೆಳೆಯರು ತಮಗೆ ಬೇಕಾದ ನಾಲ್ಕಾರು ಪುಸ್ತಕಗಳನ್ನು ಒಯ್ಯುತ್ತಾರೆ. ಒಂದು ತಿಂಗಳ ನಂತರ ನಾನು ಅವುಗಳನ್ನು ತಿರುಗಿ ಕೇಳಲು ಆರಂಭಿಸುತ್ತೇನೆ. ದಾರಿಯಲ್ಲಿ ಕಂಡಾಗೊಮ್ಮೆ ಆ ಪುಸ್ತಕಗಳು

ಅರ್ಜೆಂಟಾಗಿ ಒಂದು ಲೇಖನದ ರೆಫರನ್ಸಿಗಾಗಿ ಬೇಕಾಗಿವೆಯೆಂದು ಹೇಳುತ್ತೇನೆ. ಮೊದಲು ಕೆಲವು ಸಲ ಅವರು "ಅಯ್ಯೋ ಈ ದಿನವೂ ಮರೆತು ಹೋಯಿತು. ನಾಳೆ ಖಂಡಿತ ತಂದುಕೊಡುತ್ತೇನೆ" ಎನ್ನುತ್ತಾರೆ. ಮರು ದಿನವೂ ಮತ್ತೆ ಕೇಳುತ್ತೇನೆ. "ಓಹೋ ತರಬೇಕೆಂದು ಕಡೆಗೆ ತೆಗೆದು ಇಟ್ಟಿದ್ದೆ. ಅವಸರದಲ್ಲಿ ಹಾಗೇ ಬಂದುಬಿಟ್ಟೆ" ಎಂದು ಗೋಗರೆಯುತ್ತಾರೆ. ನಾಲ್ಕಾರು ದಿನ ಅವರಿಗೆ ಹೀಗೇ ಅವಸರವಾಗುತ್ತದೆ. ನಾನು ಮತ್ತೂ ಕೇಳುತ್ತೇನೆ. "ಓ, ಆ ಪುಸ್ತಕ ವಲ್ಲವೆ? ಇನ್ನೊಂದಿಷ್ಟು ನೋಟ್ಸ್ ಮಾಡಿಕೊಳ್ಳುವದಿದೆ. ಮತ್ತೆ ಒಯ್ಯುವ ದಕ್ಕಾಗಲಿಕ್ಕಿಲ್ಲ. ಇನ್ನೆರಡು ದಿನಕ್ಕೆ ಅದರ ಕೆಲಸ ಮುಗಿಸಿಯೇ ಕೊಡುತ್ತೇನೆ" ಎಂಬ ಉತ್ತರ ಬರುತ್ತದೆ. ಮತ್ತೆ ಹದಿನೈದು ದಿನ ಅವರು ನೋಟ್ಸು ತೆಗೆದೇ ತೆಗೆಯುತ್ತಾರೆ. ನಂತರ ಮತ್ತೆ ಶ್ರುತಿ ಹಿಡಿಯುತ್ತೇನೆ. "ಅದನ್ನು ಎಲ್ಲೋ ಶೆಲ್ಫಿನ ಮೇಲೆ ಇಟ್ಟಿದ್ದೆ. ನಿನ್ನೆ ಎಷ್ಟು ಹುಡುಕಿದರೂ ಕಾಣಲಿಲ್ಲ. ನಾಳೆ ಅದನ್ನು ಎಲ್ಲಿದ್ದರೂ ಹುಡುಕಿ ತಂದುಕೊಡುತ್ತೇನೆ" ಎನ್ನುತ್ತಾರೆ. ಆಯಿತು. ಮತ್ತೆ ವಾರಗಟ್ಟಲೆ ಅವರು ಹುಡುಕುತ್ತಾರೆ. ಈ ಬಾರಿ ಅದನ್ನು ಬಹುಶಃ ನಾನೇ ಯಾರಿಗಾದರೂ ಕೊಟ್ಟೆನೋ, ಅಥವಾ ನನ್ನ ಹೆಂಡತಿ ಕೊಟ್ಟಿದ್ದಾಳೋ ನೆನಪಿಲ್ಲ, ವಿಚಾರಿಸಿ ನೋಡುತ್ತೇನೆ" ಎಂಬ ಆಶ್ವಾಸನ ಬರುತ್ತದೆ. ಇಷ್ಟಕ್ಕೆ ಆ ಪುಸ್ತಕ ಕೈಬಿಟ್ಟಿತೆಂದು ಖಾತ್ರಿ. ಮರ್ಯಾದೆಯಿಂದ ಸುಮ್ಮನಿರುವದು ಒಳ್ಳೆಯದು. ಆದರೂ ಅವರು ತಮ್ಮ ಗೆಳೆಯರನ್ನೂ ಹೆಂಡತಿಯನ್ನೂ ಈ ಬಗ್ಗೆ ವಿಚಾರಿಸಿರಬಾರದೇಕೆ ಎಂಬ ಆಸೆ ಹೋಗುವದಿಲ್ಲ. ಮತ್ತೆ ಕೇಳುತ್ತೇನೆ. "ಒಂದು ಸೊಟ್ಟ ಹರಕು ಪುಸ್ತಕಕ್ಕಾಗಿ ನಿನ್ನದೆಷ್ಟು ಕಾಟ ಮಾರಾಯ! ಹೋದರೆ ಹೋಗಲಿ ಬಿಡು. ಒಂದು ಹೊಸದು ಕೊಂಡು ಕೊಡುತ್ತೇನೆ" ಎನ್ನುತ್ತಾರೆ. ಇಲ್ಲಿಗೆ ಈ ವ್ಯವಹಾರ ಮುಗಿಯಿತು ಎಂದರ್ಥ. ಇನ್ನೇನು ಹೊಸ ಪುಸ್ತಕ ಕೊಂಡಿರಾ? ಎಂದು ಕೇಳುವುದಕ್ಕಾಗುತ್ತದೆಯೆ? ಅವರನ್ನು ದೂರದಿಂದ ಕಂಡರೆ ನಾಚಿ ನಾವೇ ಕಾಣದಂತೆ ಹೋಗಬೇಕಾಗುತ್ತದೆ. ಅಂತೂ ಪುಸ್ತಕ ಹೋಯಿತು. ಆದರೆ ಇಂಥ ಪುಸ್ತಕ ತಿರುಗಿ ನಮ್ಮ ಕೈಗೆ ಬರುವ ಒಂದು ಆಕಸ್ಮಿಕ ಮಾರ್ಗ ಮಾತ್ರ ಇನ್ನೂ ಬಂದಾಗಿರುವದಿಲ್ಲ. ಯಾವಾಗಲೋ ಒಂದು ದಿನ ಮೋಡಕಾಬಾಜಾರಿನಲ್ಲಿ ಮತ್ತೆ ನಮ್ಮ ಮಾಲ್ಕೀ ಹೆಸರಿನ ಪುಸ್ತಕ ಆಕಸ್ಮಾತಾಗಿ ನಮ್ಮ ಕೈಗೇ ಬೀಳಬಹುದು. ಕಳೆದುಹೋದು

ವೆಂದು ನಾನು ಆಸೆಯನ್ನೇ ಬಿಟ್ಟಿದ್ದ ನಾಲ್ಕೆಂಟು ಪುಸ್ತಕಗಳು ಹೀಗೆ ನನಗೆ ಮರಳಿ ದೊರೆತದ್ದುಂಟು

ಇದು ದಿನವೂ ಭೆಟ್ಟಿಯಾಗುವ ಮಿತ್ರರ ವಿಷಯವಾಯಿತು. ಬೇರೆ ಊರಿಂದ ಬಂದವರ ಮಾತಂತೂ ಗೊತ್ತಿದ್ದದ್ದೇ ಇದೆ. ಇನ್ನು ವಾರದೊಳ ಗಾಗಿ ತಪ್ಪದೇ ಪೋಸ್ಟಿನ ಮೂಲಕ ಕಳಿಸಿಕೊಡುವದಾಗಿ ನೂರು ಸಲ ನಿಮಗೆ ಆಶ್ವಾಸನ ಕೊಡುತ್ತಾರೆ. ಅಷ್ಟು ಪುಸ್ತಕಗಳನ್ನು ರಜಿಸ್ಟರ್ ಮೂಲಕ ಕಳಿಸಲು ಅವರಿಗೆ ಎಷ್ಟು ಅಂಚೆವೆಚ್ಚ ತಗಲೀತು ಎಂದು ನೀವು ಯೋಚಿಸುತ್ತೀರಿ. ವರ್ಷೆರಡು ವರ್ಷ ಕಳೆದ ಮೇಲೆ ಅವರು ಅಂಚೆ ವೆಚ್ಚವನ್ನು ಉಳಿಸಿಕೊಂಡ ರೆಂದು ನಿಮಗೆ ಖಾತ್ರಿಯಾಗುತ್ತದೆ.

ಇನ್ನು ಕೆಲವರು ಬೇರೊಂದು ಊರಿಗೆ ವರ್ಗವಾಗಿ ಹೋಗುವಾಗ ತಪ್ಪದೇ ನಿಮ್ಮ ಮನೆಗೆ ಬಂದು ನಿಮ್ಮಲ್ಲಿದ್ದ ತಮ್ಮ ಪುಸ್ತಕಗಳನೆಲ್ಲ ಹುಡುಕಿ ಕೊಂಡು ಒಯ್ಯುತ್ತಾರೆ. ಅವರಲ್ಲಿಯೂ ನಿಮ್ಮ ಕೆಲವು ಪುಸ್ತಕಗಳಿರುವದು ನಿಮಗೆ ತಟ್ಟನೇ ನೆನಪಾಗಿ ಕೇಳುತ್ತೀರಿ. "ಎಲ್ಲಾ ಸಾಮಾನುಗಳನ್ನು ಎಲ್ಲೆಲ್ಲೋ ಕಿತ್ತಾಡಿ ಕಟ್ಟುವ ಗೊಂದಲದಲ್ಲಿ ಅವು ಈಗ ಸಿಗಲಿಕ್ಕಿಲ್ಲ. ಊರಿಗೆ ಹೋದ ತಕ್ಷಣ ಅವನ್ನೂ ಇವನ್ನೂ ಕೂಡಿಯೇ ರಜಿಸ್ಟರ್ ಮಾಡಿಕಳಿಸುತ್ತೇನೆ" ಎಂದು ಮತ್ತೆರಡು ಎತ್ತಿಕೊಳ್ಳುತ್ತಾರೆ. ಅವರೂ ಅಂಚೆ ವೆಚ್ಚಕ್ಕಾಗಿ ಹಣ ಹಾಳು ಮಾಡುವವರಲ್ಲ.

ಕೆಲವರು ತಡವಾಗಿಯಾದರೂ ಚಿಂತೆಯಿಲ್ಲ, ತಂದು ತಿರುಗಿ ಕೊಡುವ ಇಲ್ಲವೆ ನೀವೇ ಅವರ ಮನೆಗೆ ಹೋಗಿ ಹುಡುಕಾಡಿ ತೆಗೆದುಕೊಂಡರೆ ಸುಮ್ಮ ನಿರುವ ಸಂಭಾವಿತರೂ ಇರುತ್ತಾರೆ. ಆದರೆ ನಿಮ್ಮ ಪುಸ್ತಕ ನೀವು ಕೊಟ್ಟ ಸ್ವರೂಪದಲ್ಲೇ ತಿರುಗಿ ಬಂದೀತೆಂದು ಮಾತ್ರ ನಿರೀಕ್ಷಿಸಬಾರದು. ನೀವು ಪುಸ್ತಕ ವನ್ನು ಅಂದವಾಗಿ ಹೊಂದಿಸಿಟ್ಟುಕೊಳ್ಳುವ ಲೋಭಿಗಳಾಗಿದ್ದರಂತೂ ಆ ಪರಿ ಸ್ಥಿತಿ ನೋಡಲಾಸಲ್ಲ. ಮೇಲಿನ ರಟ್ಟು ಕಳೆದುಕೊಂಡು, ಇಲ್ಲವೆ ನಾಯಿ ಯಂತೆ ಕಿವಿ ಮಡಚಿಕೊಂಡು ಬರುವ ಪುಸ್ತಕ ಅತ್ಯಂತ ಒಳ್ಳೇ ಪರಿಸ್ಥಿತಿಯಲ್ಲಿ ಬಂದ ಹಾಗೆ. ಇನ್ನು ಕೆಲವರು ಅತ್ಯಂತ ಕಾಳಜಿಯಿಂದ ವರ್ತಮಾನ ಪತ್ರದ ಕವರು ಹಾಕಿ ತಂದುಕೊಡುತ್ತಾರೆ. ಇದು ನೀರಲ್ಲಿ ಎಮ್ಮೆ ನಿಲ್ಲಿಸಿ ಮಾಡುವ

ವ್ಯಾಪಾರದಂತೆ. ಆ ಕವರು ಬಿಚ್ಚಿ ನೋಡಿರಿ. ಅಂದರೆ ಅದಕ್ಕೆ ಕವರು ಹಾಕುವ ಅಗತ್ಯ ಯಾಕೆ ಬಿತ್ತು ಎಂದು ಗೊತ್ತಾದೀತು. ಇನ್ನು ಕೆಲವು ಪುಸ್ತಕಗಳಲ್ಲಿ ಮುಖಪುಟದ ಒಳಗಡೆಗಿರುವ ಖಾಲೀ ಹಾಳೆ ಹೋಗಿಬಿಟ್ಟಿರುತ್ತದೆ. ಅವಸರದ ಹೊತ್ತಿನಲ್ಲಿ ಚೀಟಿ ಬರೆಯುವ ಪ್ರಸಂಗ ಬಂದರೆ ಇಂಥ ಪುಸ್ತಕಗಳ ಉಪಯೋಗ ಎಷ್ಟೆಂದು ಹೇಳುವಂತಿಲ್ಲ. ಇನ್ನು ಕೆಲವರಿಗೆ ಪುಸ್ತಕದಲ್ಲಿ ನೋಟ್ಸು ಬರೆದಿಡುವ ಅಭ್ಯಾಸಪ್ರಿಯತೆ ಮಂದಿಯ ಪುಸ್ತಕವನ್ನು ಕಂಡರಂತೂ ಭುಗಿಲ್ಲೆಂದು ಮೇಲೇಳುತ್ತದೆ. ಪುಸ್ತಕದಲ್ಲಿ ಮಾರ್ಜಿನ್ನು ಬಿಡುವದು ಯಾಕೆ ಎಂದು ಅವರು ಹಟದಿಂದ ಕೇಳುತ್ತಾರೆ. ಒಂದು ಸಲ ನನ್ನ ಗೆಳೆಯರೊಬ್ಬರು "Macbeth" ನಾಟಕದ ಮೇಲೆ ಒಂದು ನಿಬಂಧ ಬರೆಯಬೇಕೆಂದು ನನ್ನ ಪುಸ್ತಕವನ್ನು ಒಯ್ದಿದ್ದರು. ಕೆಲದಿನಗಳ ಮೇಲೆ ನಾನೂ ಅದನ್ನು ಓದಬೇಕಾಯಿತು. ನನ್ನ ಗೆಳೆಯರು ಮಾರ್ಜಿನ್ನಿನಲ್ಲಿ ಬರೆದ ಟಿಪ್ಪಣಿಗಳನ್ನು ಓದುವ ಅನಿವಾರ್ಯ ಕೆಲಸ ನನಗೆ ಬಂತು. ಮ್ಯಾಕ್‌ಬೆಥ್‌ದಂಥ ರುದ್ರಗಂಭೀರ ನಾಟಕದ ಓದಿನಲ್ಲೂ ಈ ಟಿಪ್ಪಣಿಗಳಿಂದಾಗಿ ಹಾಸ್ಯರಸದ ಸವಿಯನ್ನುಣುವ ಭಾಗ್ಯ ನನ್ನದಾಯಿತು. ಆ ನಾಟಕವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ನಾನು ಮತ್ತೊಂದು ಪ್ರತಿಯನ್ನು ಕೊಂಡುತರಬೇಕಾಯಿತು. ಎರಡನೆಯವರ ಕೈಗೆ ಹೋದ ಪುಸ್ತಕಗಳು ಸಚಿತ್ರವಾಗಿ ಬರುವದಂತೂ ಎಲ್ಲರಿಗೂ ಇರುವ ಸಾಮಾನ್ಯ ಅನುಭವ. ಚಿಕ್ಕಮಕ್ಕಳು ತಮ್ಮ ಚಿತ್ರಕಲಾಪ್ರಾವೀಣ್ಯವನ್ನು ತೋರಿಸುವದಕ್ಕೆ ಪುಸ್ತಕಗಳನ್ನೇ, ಅದರಲ್ಲೂ ನನ್ನ ಪುಸ್ತಕಗಳನ್ನೇ, ಯಾಕೆ ಆರಿಸಿಕೊಳ್ಳುತ್ತಿರಬಹುದೆಂಬ ವಿಷಯ ನನಗಿನ್ನೂ ಸೋಜಿಗವಾಗಿಯೇ ಉಳಿದಿದೆ. ನನ್ನಲ್ಲಿಂದ ಕಾಯಮ್ಮಾಗಿ ಪುಸ್ತಕ ಒಯ್ಯುವ, ಹಾಗೂ ನಿಯತ್ತಿನಿಂದ ತಿರುಗಿ ಕೊಡುವ ಗೆಳೆಯರೊಬ್ಬರ ಮಗನ ಚಿತ್ರಾಕಲಾವೈಖರಿ ಬೆಳೆಯುತ್ತ ಹೋದುದರ ನಿರ್ದಿಷ್ಟ ಹಂತಗಳನ್ನು ನನ್ನ ಪುಸ್ತಕಗಳಲ್ಲಿ ನೀವು ನೋಡಬಹುದು. ಮುಂದೊಂದು ದಿನ ಅವನೊಬ್ಬ ಶ್ರೇಷ್ಠ ಕಲಾವಿದನಾಗುತ್ತಾನೆಂದು ಅವನ ತಂದೆಯವರು ನಂಬಿದ್ದಾರೆ.

ಒಂದು ಸಲ ವಾಚನಾಲಯದಿಂದ ದಿ. ಗೌರಮ್ಮನವರ ಒಂದು ಪುಸ್ತಕ ತಂದಿದ್ದೆ. ಪರಿವಿಡಿಯಲ್ಲಿ ಇಂಥ ಪುಟದ ಮುಂದೆ ಗೌರಮ್ಮನವರ ಭಾವಚಿತ್ರ ಎಂದಿತ್ತು. ಸಹಜ ಕುತೂಹಲದಿಂದ ಆ ಪುಟ ತೆರೆದೆ. ಭಾವಚಿತ್ರ ಅಲ್ಲಿರಲಿಲ್ಲ.

ಪುಸ್ತಕವನ್ನೆಲ್ಲ ತಿರುವಿ ಹಾಕಿದರೂ ಅದು ಸಿಗಲಿಲ್ಲ. ಸಂಶಯದಿಂದ ಪರಿವಿಡಿಯನ್ನು ಮತ್ತೊಮ್ಮೆ ನೋಡಿದೆ. ಗೌರಮ್ಮನವರ ಭಾವಚಿತ್ರ ಎಂಬ ಶಬ್ದಗಳ ಮುಂದೆ ಒಂದು ಚಿಕ್ಕೆಯ ಗುರುತು ಹಾಕಿದ್ದು ಗಮನಕ್ಕೆ ಬಂತು. ಆ ಚಿಕ್ಕೆಗೆ ವಿವರಣೆಯಾಗಿ ಅಡಿಟಿಪ್ಪಣಿಯಲ್ಲಿ ಮುದ್ದಾದ ಅಕ್ಷರಗಳಿಂದ "ಎಲ್ಲಿದೆ? ನಾನು ಹರಿದುಕೊಂಡಿದ್ದೇನೆ" ಎಂದು ಬರೆದಿತ್ತು. ಇಂಥ ಪ್ರಾಮಾಣಿಕತೆಯನ್ನು ಮೆಚ್ಚುವ ರಸಿಕತೆ ಇಂದಿನ ದಿನಗಳಲ್ಲಿ ವಿರಳವಾಗುತ್ತಿರುವದು ವಿಷಾದದ ಸಂಗತಿ.

ಇಷ್ಟೆಲ್ಲ ಅನ್ನಾವುನ್ನಿಯಾಗಿಯಾದರೂ ಪುಸ್ತಕ ತಿರುಗಿ ಬರುವ ಸಂಭವ ಬಹಳ ಕಡಿಮೆ. ಒಂದು ಸಲ ಪುಸ್ತಕ ಕೈಬಿಟ್ಟಿತೆಂದರೆ ಅದು ಕೊನೆಯ ಬಾರಿ ನಿಮ್ಮ ಕೈಬಿಟ್ಟಿತೆಂದೇ ನೀವು ತಿಳಿಯಬೇಕು. ನನ್ನಂಥ ಪುಸ್ತಕಲೋಭಿಗಳು ಪುಸ್ತಕ ಕೊಡುವಾಗಲೇ ಇನ್ನೊಂದು ಸಲ ಚೆನ್ನಾಗಿ ನೋಡಿಕೊಂಡೇ ಕೊಡುವದು ಒಳ್ಳೆಯದು. ನನ್ನ ಗೆಳೆಯರೊಬ್ಬರಿದ್ದಾರೆ. ಯಾರಿಗೂ ಪುಸ್ತಕ ಕಡ ಕೊಡುವುದಿಲ್ಲವೆಂದು ಅವರು ಪ್ರಮಾಣ ಮಾಡಿದ್ದಾರೆ. ನಾನೂ ಒಂದೊಂದು ಪುಸ್ತಕ ಕಳೆದುಕೊಂಡಾಗಲೂ ಇಂಥ ಪ್ರಮಾಣ ಮಾಡುತ್ತಲೇ ಇದ್ದೇನೆ. ಆದರೆ ಪುಸ್ತಕಗಳ ವಿಷಯ ಬಹಳ ಕೆಟ್ಟದ್ದು. "Neither a lender, nor a borrower be" ನೀತಿಯು ಪುಸ್ತಕಗಳ ವಿಷಯದಲ್ಲಿ ಸಾಧ್ಯವಿಲ್ಲ. ಗಟ್ಟಿ ಜೀವಮಾಡಿ ಪುಸ್ತಕದ ಕಡ ಕೊಡುವದನ್ನು ನೀವು ಹೋಗೋ ತಪ್ಪಿಸಿಕೊಂಡಿದ್ದೀರಿ ಎನ್ನೋಣ. ಆದರೆ ಮತ್ತೊಬ್ಬರಿಂದ ಕಡ ತರುವ ಚಪಲವನ್ನು ಹೇಗೆ ತಡೆದುಕೊಳ್ಳಲಿಕ್ಕಾದೀತು?

ಅಂದ ಹಾಗೆ ಪ್ರಮಾಣ ಮಾಡಿದ ನನ್ನ ಗೆಳೆಯರ ವಿಷಯ ಹೇಳಲು ಹೊರಟಿದ್ದೆನಲ್ಲ. ಒಂದು ಸಲ ಅವರ ಕೋಣೆಯಲ್ಲಿ ಒಂದು ಪುಸ್ತಕ ನೋಡಿದೆ. ನಿಜ ಹೇಳುವದಾದರೆ ನನಗೇನೂ ಆ ಪುಸ್ತಕ ಬೇಕಾಗಿದ್ದಲ್ಲ. ಆದರೆ ನನ್ನ ಕೆಲವು ಪುಸ್ತಕಗಳನ್ನು ಅವರು ಮುಳುಗಿಸಿದ್ದರ ಸಿಟ್ಟಿನಿಂದ ಹಾಗೂ ಅವರ ಪ್ರತಿಜ್ಞಾಭಂಗದ ಉದ್ದೇಶದಿಂದ ಅವರಿಂದ ಒಂದೆರಡಾದರೂ ಪುಸ್ತಕ ಒಯ್ದು ತಿರುಗಿ ಕೊಡಬಾರದೆಂಬ ಹಟದಿಂದ ಆ ಪುಸ್ತಕವನ್ನೆತ್ತಿಕೊಂಡೆ. ಅವರು ಎಷ್ಟು ಚಡಪಡಿಸಿ ಒದ್ದಾಡಿದರೂ ಕೇಳದೆ ಎರಡೇ ದಿನದಲ್ಲಿ ತಿರುಗಿ ಕೊಡುವದಾಗಿ ಹೇಳಿ ಎದ್ದೇ ಬಿಟ್ಟೆ. ಅಲ್ಲಲ್ಲಿ ಅಡ್ಡಾಡಿ ಮನೆಗೆ ಬರುವಷ್ಟರಲ್ಲಿ ಅವರೇ ನನ್ನ

ಮನೆಯ ಮುಂದೆ ಹಾಜರಾಗಿದ್ದರು. "ಅಯ್ಯಾ, ನನಗೆ ಈ ರಾತ್ರಿಯೆಲ್ಲ ನಿದ್ದೆ ಹತ್ತಲಿಕ್ಕಿಲ್ಲ. ದಯಮಾಡಿ ಆ ಪುಸ್ತಕ ಕೊಟ್ಟುಬಿಡು" ಎಂದು ಇನ್ನೂ ನನ್ನ ಕೈಯಲ್ಲೇ ಇದ್ದ ಪುಸ್ತಕವನ್ನು ಹಾಗೇ ಕಿತ್ತುಕೊಂಡು ಹೊರಟು ಹೋದರು. ಪುಸ್ತಕದ ವಿಷಯವಾಗಿ ಹೀಗೆ ಪ್ರತಿಜ್ಞೆಯನ್ನು ಪಾಲಿಸುವದು ಸರಳ ಕೆಲಸವಲ್ಲ.

ತಾವು ಓದದಿದ್ದರೂ ಚಿಂತೆಯಿಲ್ಲ, ತಮ್ಮ ಪುಸ್ತಕ ಮಾತ್ರ ಮಾಸಿರ ಬಾರದು ಎಂದು ಅತ್ಯಂತ ಕಠಿಣವಾದ ನಿಯಮಗಳನ್ನು ಪಾಲಿಸುವ ಕೆಲವ ರನ್ನು ನಾನು ಕಂಡಿದ್ದೇನೆ. ತಮ್ಮ ಸ್ವಂತದ ಪುಸ್ತಕವಿದ್ದರೂ ಅದನ್ನು ಅಂದ ವಾಗಿ ಕಪಾಟನಲ್ಲಿರಿಸಲಿಕ್ಕಷ್ಟೇ ಉಪಯೋಗಿಸಿ, ತಾವು ಓದಬೇಕಾದರೆ ವಾಚ ನಾಲಯದಿಂದ ಬೇರೊಂದು ಪ್ರತಿ ತರುವ ಕಡುಲೋಭಿಗಳ ಜಾತಿಗೆ ನಾನು ಸೇರಲಾರೆ. ವರ್ಷಗಟ್ಟಲೆ ಅಭ್ಯಾಸ ಮಾಡಿದರೂ ಪಠ್ಯಪುಸ್ತಕ ಒಂದು ಕಡ್ಡಿ ಯಷ್ಟೂ ಮಾಸದಂತೆ ನೋಡಿಕೊಳ್ಳುವ ಇನ್ನೊಂದು ವರ್ಗದ ಲೋಭಿಗಳನ್ನು ಕಂಡರೂ ನನಗೆ ಆಗುವುದಿಲ್ಲ. ನನ್ನ ಹತ್ತಿರ ಇರುವತನಕ ಪುಸ್ತಕದ ಮೇಲೆ ನನ್ನ ಹತೋಟಿ. ಎರಡನೆಯವರ ಕೈಗೆ ಹೋದ ಮೇಲೆ ಅವರಿಗೆ ಯಾತರ ಹಂಗು ? ಕೆಲವರಂತೂ ತಾವು ತುಂಬಾ ಆಲಸಿಗಳು, ವಸ್ತುಗಳನ್ನು ಇಟ್ಟಲ್ಲೇ ಮರೆಯುವವರು, ಕಾಳಜಿಯಿಲ್ಲದೆ ಉಪಯೋಗಿಸುವವರು ಎಂದು ಅತ್ಯಂತ ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ತುಸು ತಡವಿದರೆ ಸಾಕು, ಅವಕ್ಕೆ ಸಂಬಂಧಿಸಿದ ಹತ್ತಾರು ರುಚಿಕಟ್ಟಾದ ಕಥೆ ಹೇಳಿ ನಿಮ್ಮನ್ನು ರಂಜಿಸಬಲ್ಲರು. ಇತ್ತೀಚೆಗೆ ತಡವಾಗಿ ಏಳುವದೇ ಸಾಮಾನ್ಯ ಫ್ಯಾಷನ್ನಾದಾಗಿನಿಂದ ಬೆಳಗಿನ ಏಳು ಗಂಟೆಗೇ ಏಳುವವರು ಹಾಗೆ ಹೇಳಿಕೊಳ್ಳಲು ನಾಚುತ್ತಿರುವಂತೆ, ಈ ಆಲಸಿಗಳ ಮುಂದೆ ಪುಸ್ತಕ ಚೆನ್ನಾಗಿ ಇಟ್ಟುಕೊಳ್ಳುವವರು ನಾಚಬೇಕಾಗಿದೆ. ಇಂಥವರ ಕೈಗೆ ನಿಮ್ಮ ಪುಸ್ತಕ ಹೋದರೆ ತಿರುಗಿ ನಿಮ್ಮ ಕೈಗೆ ಪುಸ್ತಕ ಬರುವ ದೊತ್ತಟ್ಟಿಗಿರಲಿ, ಬಂದ ಮೇಲೆ ಅದನ್ನು ಅಂದವಾಗಿ ಹೊಂದಿಸಿಡುವ ಆಶೆ ಯನ್ನೇ ಬಿಟ್ಟುಬಿಡುವದು ಕ್ಷೇಮ. ಆದರೆ ವಿಚಿತ್ರವೆಂದರೆ ಈ ಮಹಾ ಆಲಸಿ ಗಳೂ, ಮರಗುಳಿಗಳೂ, ನಿಷ್ಕಾಳಜಿಗಳೂ ಅವರಿಂದ ನಾವು ತಂದ ಪುಸ್ತಕಗಳ ವಿಷಯದಲ್ಲಿ ತುಂಬ ಚಾಕಚಕ್ಯತೆಯಿಂದ, ನೆನಪಿನಿಂದ, ಕಾಳಜಿಯಿಂದ ವ್ಯವ ಹರಿಸುತ್ತಾರೆ.

ಕೆಲವರಿಗೆ ತಾವು ಓದದಿದ್ದರಷ್ಟೇ ಹೋಯಿತು, ಪುಸ್ತಕಗಳನ್ನು ಸುಮ್ಮನೆ ಸಂಗ್ರಹಿಸುತ್ತ ಹೋಗುವ ಚಟ. ಅಂಥ ಚಟದಲ್ಲಿರುವವ ನಾನೊಬ್ಬ. ನನ್ನ ಎಲ್ಲಾ ಪುಸ್ತಕಗಳು, ಉಪಯೋಗವಾಗಲಿ ಇಲ್ಲದಿರಲಿ, ಹತ್ತಿರ ಇದ್ದರೆ ಏನೋ ಒಂದು ಸಮಾಧಾನ. ಹಾಗಾಗಿ ಮನೆ ಬದಲಾಯಿಸುವಾಗಲೆಲ್ಲ ಆ ಪುಸ್ತಕಗಳನ್ನು ಹೇಗೆ ಸಾಗಿಸುವುದು ದೇವರೆ ಎಂದು ಒದ್ದಾಡಿದ್ದೇನೆ. ಕಾಳು ತುಂಬುವ ಚೀಲದಲ್ಲಿ ತುರುಕಿ ಬಾಯಿಕಟ್ಟಿ ಚಕ್ಕಡಿಗೆ ಹೇರುವ ದೃಶ್ಯ ಬಹಳ ಕರುಣಾಜನಕವಾದದ್ದು. ಬೇಂದ್ರೆಯವರು ಒಂದು ಸಲ ಗದಗಿನಿಂದ ಧಾರವಾಡಕ್ಕೆ ತಮ್ಮ ಪುಸ್ತಕಗಳನ್ನು ಸಾಗಿಸುವಾಗ ಕಳೆದುಹೋದ, ಕೆಟ್ಟುಹೋದ ಪುಸ್ತಕಗಳನ್ನು ನೆನೆಸಿಕೊಂಡು ಕಣ್ಣೀರು ತೆಗೆದರಂತೆ. ಇದನ್ನು ರೋಮ್ಯಾಂಟಿಕ್ ಕವಿಗಳ ಶುದ್ಧ ಭಾವಾತಿರೇಕದ ಪರಮಾವಧಿ ಎಂದು ಬೇಕಾದರೆ ನನ್ನ ವಿಮರ್ಶಕರು ಕರೆದುಕೊಳ್ಳಲಿ. ಬೇಂದ್ರೆಯವರ ಪ್ರತಿಕ್ರಿಯೆಗೆ ನನ್ನ ಸಂಪೂರ್ಣ ಸಹಮತವಿದೆ.

ಈ ಪುಸ್ತಕಚೋರರ ಹಾವಳಿಯಿಂದ ತಪ್ಪಿಸಿಕೊಳ್ಳಲಿಕ್ಕೆ ಏನಾದರೂ ಉಪಾಯಗಳುಂಟೇ ? ಎಂದು ನಾನು ಬಹಳ ಯೋಚಿಸಿದ್ದೇನೆ. ಕೆಲವರು ಒಂದೆರಡು ಸೂಚನೆಗಳನ್ನು ಮಾಡಿದ್ದಾರೆ.

ಮೊದಲನೆಯದಾಗಿ, ಹತ್ತಿರ ಯಾವಾಗಲೂ ಒಂದು ನೋಟ್‌ಬುಕ್ ಇಟ್ಟುಕೊಂಡು ಪುಸ್ತಕ ಕಡ ಒಯ್ಯುವವರ ಹೆಸರು, ಪುಸ್ತಕದ ಹೆಸರು, ತಾರೀಖು ಮುಂತಾದುವನ್ನು ಬರೆದಿಟ್ಟುಕೊಳ್ಳುವುದು. ಇದು ತೀರಾ ವ್ಯವಹಾರದ ರೂಪ ತಾಳಿತು ಎಂದು ಮೇಲುನೋಟಕ್ಕೆ ಕಾಣುತ್ತದೆ. ಪುಸ್ತಕ ಒಯ್ಯುವವರ ಎದುರಿಗೇ ಬರೆದಿರೋ, "ಎಂಥಾ ನಂಬಿಗೆಯಿಲ್ಲದ ಮನುಷ್ಯನೋ ನೀನು ! ನಾನೇನು ಮುಳುಗಿಸುತ್ತೇನೆಂದು ತಿಳಿದೆಯಾ ?" ಎನ್ನುತ್ತಾರೆ ನಿಮ್ಮ ಸ್ನೇಹಿತರು. ತುಸು ಅಪರಿಚಿತರಿದ್ದರೆ ಸಂದೇಹಾಸ್ಪದ ವ್ಯವಹಾರವನ್ನು ಅವರೆದುರಿಗೇ ನಡೆಸುವುದು ಸಜ್ಜನಿಕೆಯ ಲಕ್ಷಣವಲ್ಲ. ಹಾಗೆಂದು ಅವರು ಹೋದಮೇಲೆ ಬರೆದಿಡುವುದಕ್ಕೆ ಹೋದರೆ ನೆನೆಪೇನು ನಮ್ಮ ಮನೆಯ ಕೆಲಸದ ಆಳೇ ಕರೆದಾಗ ಬರಲು ? ಕೈಯೊಳಗಿನ ಆಳೇ ಮಾತು ಕೇಳುವುದಿಲ್ಲ ಎಷ್ಟೋ ಸಲ. ಅಷ್ಟಾಗಿಯೂ ನೀವು ನೆನಪಿನಿಂದ ತಪ್ಪದೇ ಬರೆದುಕೊಂಡಿರಿ ಎನ್ನೋಣ. ಪುಸ್ತಕವನ್ನೊಯ್ದವರು ಪ್ರಾಮಾಣಿಕವಾಗಿ ತಂದು ತಿರುಗಿ

ಕೊಟ್ಟರೆ ಹಾಗೆ ಬರೆದಿಟ್ಟುಕೊಂಡು ಇಂಥವರ ಬಗೆಗೆ ಸುಮ್ಮನೇ ಸಂಶಯ ತಾಳಿದೆನಲ್ಲ ಎಂದು ನಿಮಗೆ ನಾಚಿಕೆಯಾಗುತ್ತದೆ. ಕೆಲವು ಪುಸ್ತಕ ಎಷ್ಟೋ ಸಲ ನೀವು ತಿಪ್ಪರಲಾಗ ಹೊಡೆದರೂ ತಿರುಗಿ ಬರುವುದಿಲ್ಲ. ಅಂಥವರ ಹೆಸರು-ದೆಸೆ ಬರೆದಿಟ್ಟುಕೊಂಡು ಏನು ಮಾಡಿದಂತಾಯಿತು ? ಇಂಥವರು ಈ ಪುಸ್ತಕ ಮುಗಿಸಿದರು ಎಂದು ನೆನೆಪಿಟ್ಟುಕೊಂಡು ಒಳಗೊಳಗೇ ಗ್ಲಾನಿ ಪಡುವುದಕ್ಕಿಂತ ಅವರು ಪುಸ್ತಕಗಳನ್ನೊಯ್ದಿದ್ದರೆಂಬುದನ್ನೇ ಮರೆತುಬಿಡುವುದು ಸುಖವಲ್ಲವೇ? ಅಲ್ಲದೆ ಪುಸ್ತಕ ಒಯ್ಯುವವರು ನಿಮ್ಮ ನೋಟ್‌ಬುಕ್ಕು ಇದ್ದಲ್ಲಿಗೇ ಬಂದು ಒಯ್ಯುತ್ತಾರೆಯೇ ? ಕೈಯಲ್ಲಿ ಚೆಂದ ಕಾಣಲಿಕ್ಕೆ ಒಂದೆರಡು ಒಳ್ಳೆಯ ಪುಸ್ತಕ ವಿರಲಿ ಎಂದು ಸುಮ್ಮನೇ ಹಿಡಿದುಕೊಂಡು ಹೊರಗೆ ಹೋಗಿರುತ್ತೀರಿ. ಅಲ್ಲೇ ಅದನ್ನವರು ಹಾರಿಸಬಹುದು. ಪುಸ್ತಕದ ಅಂಗಡಿಯಲ್ಲಿ ನಿಂತಾಗ ತಾವು ಓದ ಬೇಕೆನಿಸಿದ ಪುಸ್ತಕವನ್ನು ಹೊಗಳಿ ಹೊಗಳಿ, ಅದು ನಿಮ್ಮ ಹತ್ತಿರ ಇರಲೇ ಬೇಕಾದ ಪುಸ್ತಕವೆಂದು ಸಿಫಾರಸು ಮಾಡಿ, ಅದನ್ನು ನೀವು ಕೊಳ್ಳುವಂತೆ ಪುಸಲಾಯಿಸಿ, ಕೊಂಡ ಮೇಲೆ ನೀವದಕ್ಕೆ ಹೆಸರು ಹಾಕುವುದಕ್ಕಿಂತ ಮೊದಲೇ ಅಲ್ಲಿಂದಲೇ ಒಯ್ದುಬಿಡುವ ಚತುರರಿರುತ್ತಾರೆ. ಇಂಥವರ ಮುಂದೆ ನೀವು ಓದ ಲಾರಿರಿ. ಇಂಥವರ ಸಲುವಾಗಿ ಎಲ್ಲೆಲ್ಲಿ ನೋಟ್‌ಬುಕ್ಕು ಇಡುತ್ತೀರಿ ? ಅದೂ ಅಲ್ಲದೆ ನೀವು ಹೀಗೆ ಹೆಸರು ಬರೆದುಕೊಂಡ ಪುಸ್ತಕ ಕೊಡುವ ಪದ್ಧತಿಯನ್ನಿ ಟ್ಟುಕೊಂಡುದು ಗೊತ್ತಾದರೆ, ಕೇಳುವವರು "ಅಲ್ಲೋ ಹೇಗೂ ಹೆಸರು ಬರೆದು ಕೊಂಡಿದ್ದೀ. ನೆನಪಂತೂ ಹಾರುವದಿಲ್ಲ. ಪುಸ್ತಕ ಕೊಡಲಿಕ್ಕೆ ಯಾಕೆ ಹಿಂದೆ ಮುಂದೆ ನೋಡುತ್ತಿ ?" ಎಂದು ಈ ಮಾತನ್ನು ನಿಮ್ಮ ಹಿತಾಸಕ್ತಿಗಳ ವಿರುದ್ಧ ಉಪಯೋಗಿಸಬಹುದು. ಊದುವುದನ್ನು ಕೊಟ್ಟು ಬಾರಿಸುವದನ್ನು ತೆಗೆದುಕೊಳ್ಳಲು ಯಾರು ಹೇಳಿದ್ದಾರೆ? ಈ ಪದ್ಧತಿಯಲ್ಲಿ ಇನ್ನೂ ಒಂದು ಗಂಭೀರ ದೋಷವಿದೆ. ಒಯ್ಯುವವರೇನೋ ಮನೆಗೆ ಬಂದಾಗ ಇಸಿದುಕೊಂಡು ಪುಸ್ತಕದಲ್ಲಿ ಹೆಸರು ಹಚ್ಚಿಸಿ ಒಯ್ಯಬಹುದು. ಆದರೆ ಕೊಡುವಾಗಲೂ ಮನೆಗೆ ಬಂದು ಕೊಟ್ಟು ಹೆಸರು ತೆಗೆಸಿ ಹೋದಾರೆಂಬ ನಿಯಮವಿಲ್ಲ. ನಿಮ್ಮ ಸಹೋ ದ್ಯೋಗಿಯಾಗಿದ್ದರೆ ಕಾಲೇಜಿನಲ್ಲೋ ಆಫೀಸಿನಲ್ಲೋ ಕೊಟ್ಟು ಬಿಡಬಹುದು. ಅಲ್ಲೇ ಮತ್ತೆ ಯಾರೋ ಅದನ್ನು ಒಯ್ಯುತ್ತಾರೆ. ನೀವು ಪುಸ್ತಕದಲ್ಲಿ ಮೊದಲಿ ನವರ ಹೆಸರು ತೆಗೆಯಲು ಮರೆತುಬಿಡುತ್ತೀರಿ. ಕೆಲದಿನದ ನಂತರ ಆ ಪುಸ್ತಕ

ಬಾರದಿರುವದನ್ನು ಕಂಡು ಮತ್ತೆ ಅವರನ್ನೇ ನೀವು ಕೇಳಬಹುದು. ಕೊಟ್ಟಿದ್ದೇ ನೆಂದು ಅವರು, ಇಲ್ಲವೆಂದು ನೀವು ಪರಸ್ಪರ ಸಂಶಯ ತೆಗೆದುಕೊಳ್ಳುವ ಸಂಭವವೂ ಈ ವ್ಯವಸ್ಥೆಯಲ್ಲಿ ಇಲ್ಲದೆ ಇಲ್ಲ. ಒಂದು ಪುಸ್ತಕಕ್ಕಿಂತ ಗೆಳೆತನ ಹೆಚ್ಚಿನದು ಎಂದು ಒಪ್ಪುವದಾದರೆ ಈ ವ್ಯವಸ್ಥೆ ವ್ಯಾವಹಾರಿಕವಲ್ಲವೆಂದು ಮೇಲೆಯೇ ಕಾಣುತ್ತದೆ.

ಎರಡನೆಯದಾಗಿ, ಮನೆಗೆ ಬಂದವರಿಗೆ ಕಾಣುವಂತೆ ತೆರೆದ ಕಪಾಟನಲ್ಲಿಟ್ಟು ಡ್ರಾಯಿಂಗ್ ರೂಮಿನಲ್ಲಿ ಪುಸ್ತಕಗಳನ್ನು ಪ್ರದರ್ಶಿಸಬಾರದೆಂದು ಕೆಲವರು ಸಲಹೆ ಮಾಡುತ್ತಾರೆ. ಸ್ವಂತದ ಪುಸ್ತಕ ಭಾಂಡಾರವನ್ನು ಇಟ್ಟುಕೊಳ್ಳುವ ಮೂಲಭೂತ ಉದ್ದೇಶವನ್ನೇ ಈ ವ್ಯವಸ್ಥೆ ಅಲ್ಲಗಳೆಯುತ್ತದೆ. ಇಷ್ಟು ಹಣ ಹಾಳು ಮಾಡಿಕೊಂಡ, ಚೆಂದಚೆಂದದ, ನಿಜವಾಗಿಯೂ ಉಪಯುಕ್ತವಾದ ಇಂಥ ಸಂಗ್ರಹವನ್ನು ಮನೆಯಲ್ಲಿ ಮುಚ್ಚಿಟ್ಟುಕೊಂಡರೆ ಏನು ಬಂದ ಹಾಗಾಯಿತು? ಮನೆಗೆ ಬಂದ ಗೆಳೆಯರು ನಿಮ್ಮ ಬೆಲೆ ಬಾಳುವ ಸಂಗ್ರಹವನ್ನು ನೋಡಿ ಮೆಚ್ಚಬೇಡವೆ? ನಿಮ್ಮ ಗ್ರಂಥಪ್ರಿಯತೆಯನ್ನು, ಓದುವ ಅಭ್ಯಾಸವನ್ನು, ಜ್ಞಾನದಾಹವನ್ನು ಹೊಗಳಬೇಡವೆ? ಒಳಗೊಳಗೇ ಅಸೂಯೆ ಪಡಬೇಡವೆ? ಇಲ್ಲವಾದರೆ ನೀವಿಷ್ಟು ಪುಸ್ತಕ ಕೊಂಡದ್ದಕ್ಕೆ ಏನು ಸಾರ್ಥಕ? ನಾವಿಂಥ ಸ್ವಂತ ಗ್ರಂಥ ಭಂಡಾರವನ್ನು ಬೆಳೆಸಿದ್ದಾದರೂ ಯಾಕೆ? ಬಂದವರು ನಿಮ್ಮ ಪುಸ್ತಕವನ್ನು ನೋಡಿ ಮೆಚ್ಚಬೇಕು, ಕೈಗಡ ಮಾತ್ರ ಕೇಳಬಾರದು ಎನ್ನುವುದು ಅಕ್ಕಿಯ ಮೇಲೆ ಆಶೆ, ನೆಂಟರ ಮೇಲೆ ಇಷ್ಟ ಎಂದಷ್ಟೇ ಅಸಂಬದ್ಧವಾದ ಮಾತು. ಆಗಿಷ್ಟು ಈಗಿಷ್ಟು ಪುಸ್ತಕ ಹೋದರೂ ಚಿಂತೆಯಿಲ್ಲ, ನಾನಂತೂ ಪುಸ್ತಕಗಳನ್ನು ಮುಚ್ಚಿಡುವ ಕಡು ಲೋಭಿಯ ಜಾತಿಗೆ ಸೇರಲಾರೆ. ನಾಲ್ಕು ಜನ ಸೇರಿ ಚರ್ಚಿಸುವಾಗ ಒಂದು ಒಳ್ಳೆಯ ಪುಸ್ತಕದ ಮಾತು ಬರುತ್ತದೆ. ಆ ಪುಸ್ತಕ ನಿಮ್ಮ ಹತ್ತಿರವಿದ್ದರೆ ನಿಮಗೆ ಸಹಜವಾಗಿ ಹೆಮ್ಮೆಯುಕ್ಕಲಾರದೆ? ಅದು ಬೇರೆಲ್ಲೂ ಸಿಗುತ್ತಿಲ್ಲವೆಂದು ಉಳಿದವರು ಹೇಳಿದರೆ ನನ್ನ ಹತ್ತಿರವಿದೆಯೆಂದು ಹೆಮ್ಮೆಯಿಂದ ಉಗ್ಗಡಿಸುವ ಅವಕಾಶವನ್ನು ಕಳೆದುಕೊಳ್ಳಲಿಕ್ಕಾದೀತೆ? ಅದನ್ನು ಉಳಿದವರು ತಕ್ಷಣ ಕೇಳಬಹುದು ಎಂಬ ಹೆದರಿಕೆ ಇದ್ದರೂ ಈ ಚಪಲವನ್ನು ನಾನಂತೂ ತಡೆದುಕೊಳ್ಳಲಾರೆ.

ನನ್ನ ಹತ್ತಿರ ಪುಸ್ತಕ ಕೇಳಲು ಯಾರಾದರೂ ಬಂದಾಗ "ಅಯ್ಯಾ ಅದು ಅತ್ಯುತ್ತಮ ಪುಸ್ತಕ. ಅದಿಲ್ಲದೆ ನಡೆಯುವುದಿಲ್ಲ. ಅದರ ಬೆಲೆಯೂ ಹೆಚ್ಚಿಗಿಲ್ಲ. ಒಂದು ಸಲ ಚಹ ಕುಡಿದರೆ ಅಷ್ಟು ಕಳೆಯುತ್ತೀ. ಒಂದು ಕೊಂಡು ಬಿಡು. ಹತ್ತಿರವಿರಲೇಬೇಕಾದ ಪುಸ್ತಕ ಅದು" ಎಂದು ಮುಂತಾಗಿ ಉಪದೇಶ ಮಾಡಲು ಕೆಲವು ದಿನ ಯತ್ನಿಸಿದೆ. ಇದಕ್ಕೆ ಉತ್ತರರೂಪವಾಗಿ ನನಗೆ ಬಂದ ಕೆಲವು ಮಾತುಗಳು ತುಂಬ ಉದ್ಬೋಧಕವಾಗಿದ್ದವು. ಅವುಗಳಿಂದ ನಾನು ಬಹಳಷ್ಟು ಕಲಿತೆನೆಂದು ಪ್ರಾಂಜಲ ಮನಸ್ಸಿನಿಂದ ಒಪ್ಪಬೇಕು. ಮೊದಲನೆಯ ದಾಗಿ, ಅತ್ಯುತ್ತಮವೆನ್ನಬಹುದಾದ ಪುಸ್ತಕಗಳು ಈ ಜಗತ್ತಿನಲ್ಲಿ ಎಷ್ಟಿಲ್ಲ? ಅವನ್ನೆಲ್ಲ ಕೊಳ್ಳುತ್ತ ಹೋಗಲಿಕ್ಕಾದೀತೆ? ವಾಚನಾಲಯಗಳಿರುವದು ಯಾತಕ್ಕೆ ಮತ್ತೆ? ಎರಡನೆಯದಾಗಿ, ನೀವು ಸ್ವತಃ ಕೊಂಡ ಪುಸ್ತಕವನ್ನು ಓದಲಿಕ್ಕೇ ಆಗುವದಿಲ್ಲ. ಹೇಗೂ ಹತ್ತಿರವಿದೆಯಲ್ಲ, ಯಾವಾಗಲಾದರೂ ಓದಿ ದರಾಯಿತು ಎಂಬ ಆಲಸ್ಯದಲ್ಲಿ ಕೊನೆಗೂ ಅದು ಹಾಗೇ ಉಳಿದಿರುತ್ತದೆ. ಈ ಮಧ್ಯೆ ಅದನ್ನು ಯಾರಾದರೂ ತೆಗೆದುಕೊಂಡು ಹೋದರಂತೂ ತೀರಿಯೇ ಹೋಯಿತು. ಬೇರೆಯವರಿಂದ ತಂದ ಪುಸ್ತಕವಾದರೆ ಓದಿ ಬೇಗ ತಿರುಗಿ ಕೊಡಬೇಕೆಂಬ ಆತುರದಿಂದ—ಆ ಮೇಲೆ ಕೊಡಲಿ, ಬಿಡಲಿ—ಅದನ್ನು ತಕ್ಷಣ ಓದಿಬಿಡಬಹುದು. ನನ್ನ ದೀರ್ಘಕಾಲದ ಅನುಭವದಲ್ಲಿ ಈ ಮಾತು ಬಹಳ ಸತ್ಯವೆಂದು ನಾನು ಮನಗಂಡಿದ್ದೇನೆ.

ಅಂತೂ ಪುಸ್ತಕಗಳು ಕಳೆದು ನಮ್ಮ ಮನೆಯ ವಾಚನಾಲಯ ಕ್ಷೀಣಿ ಸುತ್ತ ಹೋಗುವದನ್ನು ತಡೆಯಲು ಯಾವ ಉಪಾಯವೂ ಇಲ್ಲವೆ? ಎಂದು ನೀವು ಕೇಳಬಹುದು. ನಿರಾಶರಾಗುವ ಕಾರಣವಿಲ್ಲ. ಇದಕ್ಕೊಂದು ರಾಮ ಬಾಣ ಉಪಾಯವನ್ನು ನಾನು ಕಂಡು ಹಿಡಿದಿದ್ದೇನೆ. ಅದೆಂದರೆ, ಬೇರೆಯವ ರಿಂದ ನಾವೂ ಪುಸ್ತಕ ಕಡ ತರಲು ಆರಂಭಿಸುವದು.

ರುಚಿ

ಸುನಂದಾ ಬೆಳಗಾಂವಕರ

ಧಾರವಾಡದ ವಿಶಾಲ ಮನೆ. ಇದ್ದಿಲು ಒಲೆಯ ಮುಂದೆ ಕಸುರಿನ ಹಿತ್ತಾಳೆ ಬುಟ್ಟಿಯಲ್ಲಿ ಜೋಳದ ಹಿಟ್ಟು ಇಟ್ಟು, ಅದರ ಹೊಟ್ಟೆಯಲ್ಲಿ ತೂತು ಕೊರೆದು ಎಸರನ್ನು ಸುರವಿ, ಆ ತೂತು ಮುಗುಚುವ ಕಟ್ಟಿಗೆಯಿಂದ ಮುಚ್ಚುತ್ತ ಕೈಬಳೆಗಳ ಸದ್ದು ಮಾಡಿ ಹಿಟ್ಟನ್ನು ಒತ್ತಿ, ಸ್ವಲ್ಪ ಎಸರು ಹಾಕಿದ ಹಿಟ್ಟನ್ನು ಪರಾತದಲ್ಲಿ ಹಾಕಿ ನಾದಿ ಸುಣ್ಣ ಸವರಿದ ಕಬ್ಬಿಣ ತೆಗ್ಗು ಹಂಚನ್ನು ಎಡಗೈಯಿಂದ ಎತ್ತಿ ಒಲೆಯ ಮೇಲಿಟ್ಟು, ಭಕ್ಕರಿ ಬಡಿದು ಹಂಚಿನ ಮೇಲೆ ಹಾಕಿ ಇನ್ನೊಂದು ಭಕ್ಕರಿಗಾಗಿ ಹಿಟ್ಟು ನಾದುತ್ತಿದ್ದ ಲಕ್ಷ್ಮೀರೂಪದ ತಾಯಿ.

ಅಡಿಗೆಯ ಮನೆಯ ಬಾಗಿಲ ಬಳಿ ಅದೇ ಸ್ನಾನ ಮುಗಿಸಿ ಧಾರವಾಡದ ಕೆಮ್ಮಣ್ಣಿನಂತೆ ಕೆಂಪಗಾದ ಮೈಯಿಂದ ಬಿಸಿ ಹೊಗೆಹಾರುತ್ತಿದ್ದ ಆಜಾನುಬಾಹು ಕನ್ನಡ ಗಂಡಸು ಶುಭ್ರದೋತ್ತರ ಉಟ್ಟುನಿಂತ ತಂದೆ.

ಗಂಡನ ಮನೆಯ ರಾಜ ಜೇಲುವಾಸದಿಂದ ತವರು ಮನೆಗೆ ಬಂದ ನಾನು ಕಾಲು ಚಾಚಿ ತಾಯಿ ಅಡಿಗೆ ಮಾಡುವಲ್ಲಿ ಮೈ ಚಳಿಬಿಟ್ಟು ಮುಂದೆ ಕುಳಿತಿದ್ದೆ. ತಂದೆಯವರ ಆಗಮನದಿಂದ ಕಾಲು ಮಡಚಿಕೊಂಡೆ, ಅದನ್ನು ಗಮನಿಸಿದ ಅವರು "ಇಲ್ಲೆವ್ವಾ ಕೂಡು" ಅಂದರು.

ಲಗ್ನವಾದಂದಿನಿಂದ ತಂದೆಯವರನ್ನು ಕಂಡರೆ ಗಂಡಸರೆನ್ನುವ ಮರ್ಯಾದೆ ಕೊಡುವ ಆಶೆ, ಆ ತಂದೆಯ ತೊಡೆಯ ಮೇಲೆ, ಬೆನ್ನಮೇಲೆ ಹತ್ತಿ ಆಡಿದ ನೆನಪು. ಏನೋ ಚೇಷ್ಟಿಸಿದಾಗ ಮುನಿಸಿನಿಂದ ತಿಳಿಯದೇ ಅವರ ಕೆನ್ನೆಗೆ ಕೈಯಿಟ್ಟು ನೆನಪು.

ತಾಯಿಯವರು ತಂದೆಯವರು ಬಂದದ್ದನ್ನು ನೋಡಿ ನನಗೆ "ಅಲ್ಲ ಅಡಿಗಿ ಆಗೇದ ಊಟಕ್ಕ ಕೂಡ್ರಿ ಅಂತ ಹೇಳು" ಅಂದರು.

ನಾನಲ್ಲಿರುವುದು ಅವರಿಬ್ಬರ ಮಧ್ಯಕ್ಕೆ ಮಧ್ಯಸ್ಥಿಕೆ ವಹಿಸಲಿಕ್ಕೆ ಅನಿಸಿತು. ಆದರೆ ತಂದೆ-ತಾಯಿ ಈ ರೀತಿ ಹೊಸದೇನೂ ಅಲ್ಲ ನನಗೆ. ತಂದೆ "ನೀನೂ ಊಟಕ್ಕ ಕೂಡಲ್ಲ" ಅಂದರು.

"ನಿಮ್ಮದಾಗಲಿ ನಾನೂ ಅವ್ವಾ ಕೂಡೇ ಕೂಡತೀವಿ" ಅಂದೆ.

"ಇಲ್ಲ ಕೂಡು ಬಿಸಿಬಿಸಿ ಭಕ್ಕರಿ ತಿನ್ನು" ಅಂದರು. ತಾಯಿ ತಂದೆಯವರ ಮಾತಿಗೆ ಧ್ವನಿಗೂಡಿಸಿದರು. ಕಬ್ಬಿಣ ಸೌಟಿನಲ್ಲಿ ಒಗ್ಗರಣೆ 'ಚೊಂಯ್' ಅಂದಿತು. ಬಳ್ಳೊಳ್ಳಿ ಒಗ್ಗರಣೆ ವಾಸನೆ ಅಡಿಗೆಯ ಮನೆಯಲ್ಲಿ ನಡೆದ ಅಡಗಿಯ ಸುದ್ದಿಯನ್ನು ಇಡೀ ಮನೆಗೂ ಅಂಗಳಕ್ಕೂ ಮುಟ್ಟಿಸಿತ್ತು. ಹೊಟ್ಟೆಯಲ್ಲಿ ಹಸಿವಿತ್ತು. ತಾಯ ಕೈಯ ರುಚಿ ರಸನೇಂದ್ರಿಯದ ಚಪಲ ಇಮ್ಮಡಿಸಿತ್ತು. ತಂದೆಯವರ ಪಕ್ಕದ ಮಣೆಯ ಮೇಲೆ ನಾನೂ ಊಟಕ್ಕೆ ಕುಳಿತೆ.

ತಾಯಿ ಹಂಚಿನ ಮೇಲಿನ ಭಕ್ಕರಿಗೆ ನೀರು ಹಚ್ಚಿ ಬಿಳಿ ಹೊಗೆ ಬರುವವರೆಗೆ ಕಾದು ಭಕ್ಕರಿ ತಿರುವಿ ಹಾಕಿದರು. ಕೆಂಡಕ್ಕೆ ಹಚ್ಚಿದ ಉಬ್ಬಿದ ಭಕ್ಕರಿ 'ಉಫ್ ಉಫ್' ಎಂದು ಊದುತ್ತ ತುದಿಬಟ್ಟೆನಿಂದ ಎತ್ತಿ ತಂದೆಯವರ ಎಲೆಯಲ್ಲಿಟ್ಟರು. ಪುಂಡಿಯ ಪಲ್ಲೆ ಬಡಿಸಿ ಅದರ ಮೇಲೆ ತಂದೆಯವರಿಗಾಗಿ ಖಾಸ ತಯಾರಿಸಿದ ಬಳ್ಳೊಳ್ಳಿ ಒಗ್ಗರಣೆ ಹಾಕಿದರು. ಮನೆಯಲ್ಲಿ ಕಡೆದ ತಾಜಾ ಎಮ್ಮೆ ಬೆಣ್ಣೆಯ ಮುದ್ದೆ ಎಲೆಯಲ್ಲಿ ಬಿತ್ತು. ಪುಠಾಣಿ ಚಟ್ನಿಪುಡಿ, ಮೊಸರು ಹಾಕಿದರು. ಹಸೀಸೌತೆಯ ಕಾಯಿ, ಉಳ್ಳಾಗಡ್ಡಿಯ ತುಣುಕುಗಳು ಎಲೆಯಲ್ಲಿ ಓಡಾಡಿದವು.

"ಬದನೀಕಾಯಿ ತುಂಬಗಾಯಿ ಮಾಡೇನಿ ಹಾಕಲೇನು" ಎಂದು ಕೇಳಿದರು.

"ವ್ಹಾ ಹಾಕಲ್ಲ. ತುಂಬಗಾಯಿ ಪಲ್ಲ್ಯಾ ಭಕ್ಕರಿ ಯಾರ ಒಲ್ಲ್ಯಂತಾರ" ಅಂದರು.

ಬದನಿಕಾಯಿ ರಸ ನಾಲಿಗೆಗೆ ಹಚ್ಚಿಕೊಂಡು "ಭಾಳ ರುಚಿಯಾಗೇದ, ತಾಜಾ ಮಸಾಲೇನು ?" ಸ್ವಲ್ಪ ನಿಧಾನಿಸಿ, "ಅಲ್ಲ ನನಗೊಬ್ಬಾವಗ ಭಕ್ಕರಿ ಹಾಕಿದೆಲ್ಲ ಆಕಿಗೂ ಹಾಕು" ಅಂದರು.

"ಹಂಚಿನಮ್ಯಾಲ ಅದ ತರ್ತೀನಿ" ಅಂದರು ತಾಯಿ.

"ಬದನಿಕಾಯಿ ಪಲ್ಲ್ಯಾಂದ್ರ ಹಿಂಗ ಇರಬೇಕು. ಎಣಿಗಾಯಿ ಅಂದ್ರ ಎಣ್ಣ್ಯಾಗ ಬೇಯಬೇಕು. ಇಲ್ಲಾಂದ್ರ ಏನದು ಬೆಂದುರಾಡಿ ಆಗಿರತದ. ಮಸಾಲಿ ಬದನೇಕಾಯಿ ರುಚಿ ಕೊಲ್ಲಬಾರದು. ಅಡಿಗೆಗೆ ಮಸಾಲಿ ಮಾದಕ ಕಣ್ಣಿಗೆ ಸುರಮಾ ಇದ್ದಾಂಗ ಇರಬೇಕು. ಸುರಮಾ ಕಣ್ಣಿನ ಸೌಂದರ್ಯ ವರ್ಧಿಸಬೇಕು ಹೊರತು ಅಂದಗೆಡಿಸಬಾರದು."

ತಾಯಿ ತನ್ನ ಎಲೆಗೂ ಎಲ್ಲ ಬಡಿಸಿ ಭಕ್ಕರಿ ಹಾಕಿದರು. ತಂದೆಯವರು ಭಕ್ಕರಿ ಮುರಿದು ಆ ತುಂಡನ್ನು ಚಮಚೆಯಂತೆ ಉಪಯೋಗಿಸಿ ಕುಕ್ಕಿ ಕುಕ್ಕಿ ಪುಂಡಿಯ ಸಲ್ಲೆ ಒಗ್ಗರಣೆ ಬೆರಸಿದರು. ಅದನ್ನು ಬಾಯಿಗೆ ಹಾಕಿಕೊಂಡರು.

ಒಂದೆರಡು ತುತ್ತನ್ನು ತಿಂದು "ಭೇಶ್ ಭಕ್ಕರಿ ಇಳಕಲ್ ಸೀರಿ ಆಗೇದ, ಎರಡೂ ಪದರ ಒಂದ ಸಮಾ. ಭಕ್ಕರಿ ಮಾಡಿದ್ರ ಹಿಂಗ ಮಾಡಬೇಕು. ಭಕ್ಕರಿ ಕರವಿನಹಲ್ಲೆ ಆಗಬಾರದು" ಎಂದು ನನ್ನನ್ನುದ್ದೇಶಿಸಿ ಹೇಳುತ್ತ ತಮ್ಮ ಹೊಗಳಿಕೆಯನ್ನು ತಾಯಿಗೆ ಮುಟ್ಟಿಸಿದರು.

ತಾಯಿ ಮುಖ ಯಜಮಾನರ ಹೊಗಳಿಕೆಯಿಂದ ಅರಳಿತ್ತು. ನಾಚಿಕೆ ಆವರಿಸಿತ್ತು. ಕೆಂಡದ ಝಳಕ್ಕೆ ಕೆಂಪಾಗಿದ್ದ ಆವರ ಮುಖ ತಂದೆಯವರ ಮಾತಿನಿಂದ ಇನ್ನೂ ಕೆಂಪಾಗಿತ್ತು, ಬೆವರಹನಿಯ ಸಾಲು ಬಾಸಿಂಗವಾಗಿ ಮುಖದ ಮೇಲೆ ನಿಂತಿತ್ತು.

"ಅಲ್ಲ ನಿನಗ ಭಕ್ಕರಿ ಬರ್ತಾವೇನು ?" ಎಂದು ನನ್ನನ್ನು ಪ್ರಶ್ನಿಸಿದರು.

"ಅಲ್ಲೆ ಎಲ್ಲೆ ಭಕ್ಕರಿ. ಚಪಾತಿ ಮಾಡ್ತಾರ ಆತು. ಭಕ್ಕರಿ ಜೋಳ ಸಿಗಬೇಕಲ್ಲ".

"ನಿನ್ನ ಗಂಡಾ ದಿನಾ ಆ ಕೃಷ್ಣಾಜಿನದಂತಹ ಚಪಾತಿ ತಿಂತಾನ. ಭಕ್ಕರಿ ಮಾಡಲಿಕ್ಕೆ ಕಲಿ. ಅವನೂ ಜೋಳನಾಡಿನವ. ಭಕ್ಕರಿ ಬೇಕು. ಹಿಟ್ಟು ಇಲ್ಲಿಂದ ಕಳಿಸಿ ಕೊಡ್ತೀವಿ. ಪಾಪ ಛಲೋ ಮನಶ್ಯಾ ಇರಬೇಕು. ನೀವ ಮಾಡಿದ್ದ ಅಮೃತ ಅಂತ ತಿಳಿದು ಉಣ್ಣತಾನ ಆತು.

"ಅವಗ ಹೇಳ್ತೀನಿ 'ಈಕಿ ಕಡಿಂದ ವ್ಯವಸ್ಥ ಸೀರ ಅಡಿಗಿ ಮಾಡಿಸಿ ಉಣ್ರಿ' ಅಂತ" ಅಂದರು.

"ಛೀ ಛೀ ಇಲ್ಲದ್ದ ಏನಾದ್ರು ಹೇಳಬ್ಯಾಡ್ರಿ. ಪಾಪ ಆಕಿಗೆ ಬಂದದ್ದು ಮಾಡಿ ಹಾಕ್ತಾಳ. ಇಲ್ಲೆ ಇರೋತನಕ ಮಗಳಿಗೆ ಅಚ್ಚಾ ಮಾಡಿ ಗಂಡ ಹುಡಗರ ಹಾಂಗ ಉದ್ದಕ್ಕ ಕಲಿಸಿದ್ರಿ, ಈಗ ಅಡಿಗಿ ಬಾ ಅಂದ್ರ ಹ್ಯಾಂಗ ಬರ್ತದ. ಒಲಿ ಕಾದ್ಯು ಹುಲಿ ಕಾದಿ ಅಂತ ಶಾಸ್ತ್ರ ಅದ" ಎಂದು ತಾಯಿ ನನ್ನ ಸರವಾಗಿ ಮಾತನಾಡಿದಾಗ ತಂದೆಯವರಿಗೆ ಹೊಳೆದಿತ್ತು ತಮ್ಮ ಮಗಳನ್ನು ಬೆಳೆಸಿದ ರೀತಿ ಹೆಣ್ಣಾಗಿ ಅಲ್ಲ ಗಂಡಾಗಿ ಎಂದು.

"ಇರ್ಲೇಳು, ಭಕ್ಕರಿ ಮಾಡಲಿಕ್ಕೆ ಕಲಿ, ಅಡಿಗೆ ಬರೂದಿಲ್ಲಾಂತ ಗಂಡನ ಮನ್ಯಾಗೆ ಅನಿಸಿಗೋಬಾರದು. ಹೆಂಗಸೂರಿಗೆ ಅಡಿಗಿ ಬರಲಿಕ್ಕೆ ಬೇಕು.

"ನನಗ ಭಕರಿ ಬರ್ತಾವ. ಅಡಿಗಿ ಮಾಡಲಿಕ್ಕೂ ಬರ್ತದ" ಅಂದೆ.

ತಂದೆಯವರು ಆನಂದದಿಂದ "ಕೇಳಿದೇನು ನಿನ್ನ ಮಗಳಿಗೆ ಭಕ್ಕರಿ ಬಡೀಲಿಕ್ಕೆ ಬರ್ತವಂತೆ. ಅಡಿಗೆ ಬರ್ತದಂತೆ" ಎಂದು ನಕ್ಕರು.

"ಈಗಿನ ಹುಡಿಗೇರು ಶಾಣ್ಯಾರಿರ್ತಾರ. ಅವರಿಗೆ ಓದು-ಬರಹಾನೂ ಬರ್ತದ. ಈಗೇನೂ ಅಡಿಗಿ ಪುಸ್ತಕಾನೂ ಇರ್ತಾವ".

"ಛೇ ಅಡಿಗಿ ಪುಸ್ತಕ ನೋಡಿ ಅಡಿಗಿ ಮಾಡಬ್ಯಾಡ ತಿಳಿತೇನು" ಅಂದರು ತಂದೆ. "ಸಂಗೀತ ಯಾರಾದ್ರೂ ಪುಸ್ತಕ ಓದಿ ಕಲೀತಾರ. ಅದು ಗುರು ಮುಖೇನ ಬರಬೇಕು. ಅಡಿಗಿ ತಾಯಿಯಿಂದ ಕಲೀಬೇಕು, ಪ್ರತಿಯೊಂದು ಅಡಿಗಿಗೆ ಅದರದ ರುಚಿ ಅದ. ಸಂಗೀತಕ್ಕೆ ಘರಾಣಾ ಇದ್ದಾಂಗ ಅಡಿಗಿಗೆ ಅದರ ಕುಲ ಅದ".

ಸಂಗೀತ ಪ್ರಿಯರಾದ ತಂದೆಯವರಿಗೆ ಸಂಗೀತವೂ ರುಚಿ. ಮಾತು ಮುಂದುವರಿಸಿದರು.

"ಯಾಕಿನೋ ಒಬ್ಬಾಕಿ ನಿನ್ನಂಥಾಕಿ ಅಡಿಗಿ ಪುಸ್ತಕ ನೋಡಿ ಖೀರ ಮಾಡಲಿಕ್ಕಿ ಹತ್ತಿದಳಂತೆ. ಗಾಳಿಗೆ ಪುಟ ತಿರುವಿದಾಗ ಖೀರ ಸಾರಾಗಿ ಉಪ್ಪು ಹಾಕಿದಳಂತೆ ಎಂದು ನಕ್ಕರು. ನಾವಿಬ್ಬರೂ ನಕ್ಕೆವು.

ತಂದೆಯವರು ಬೆಣ್ಣೆಯನ್ನೂ ಪುತಾಣಿ ಚಟ್ಟಿಯನ್ನೂ ಜೊತೆಗೆ ಹಚ್ಚಿಕೊಂಡು ಭಕ್ಕರಿ ತುಣುಕೊಂದನ್ನು ಬಾಯಿಗೆ ಹಾಕಿಕೊಂಡರು. ಉಳ್ಳಾಗಡ್ಡಿ ಕಡಿದುಕೊಂಡರು. ಸುರ್ರ್ ಅಂತ ಹುಳಿ ಸುರಿದುಕೊಂಡರು ತಾಯಿಗೆ "ಬ್ಯಾಡಗಿ ಹಸಿಮೆಣಸಿನಕಾಯಿ ಇದ್ರ ಹಾಕು" ಅಂದರು.

ಪುಂಡಿಯ ಪಲ್ಲೆ ಹಚ್ಚಿಕೊಂಡು ಇನ್ನೊಂದು ತುಣುಕು. ಬಾಯಲ್ಲಿ ಹಾಕಿಕೊಂಡು ಮೆಣಸಿನಕಾಯಿ ಕಟ್ಟನೇ ಕಡಿದರು. "ವ್ಹಾ ಏನ ರುಚಿ" ಎಂದರು.

"ಈ ಪುಂಡೀಪಲ್ಲ್ಯಾ ಮಾಡಿದವರ ಕೈಗೆ ಬಂಗಾರದ ಕಟ್ಟ ಹಾಕಿಸಬೇಕು. ಭಾಳ ರುಚಿ ಅಗೇದ" ಅಂದರು.

"ಅಮರಗೋಳ ಹೊಲದ ಪಲ್ಲ್ಯಾ" ಅಂದರು ತಾಯಿ.

"ಇದನ್ನ ಬ್ರಹ್ಮ ತಿಂದ್ರ ಸರಸ್ವತಿಗೆ ಓದೋದ ಬಿಟ್ಟು ಬರೇ ಅಡಿಗಿ ಕಲಿ ಅಂತಾನ. ಅವನ ನಾಲ್ಕ ರಸನೇಂದ್ರಿಯದ ಚಸಲ ತೀರಬೇಕಲ್ಲ" ಅಂದರು.

"ದೇವರೇನು ಉಳ್ಳಾಗಡ್ಡಿ ಬಳ್ಳೊಳ್ಳಿ ತಿಂತಾರ" ಅಂದರು ತಾಯಿ.

"ಉಳ್ಳಾಗಡ್ಡಿ, ಬಳ್ಳೊಳ್ಳಿ ಒಗ್ಗರಣಿ ಹಾಕಿದ ಪುಂಡೀಪಲ್ಲ್ಯಾ ತಿನದೇ ಇದ್ರ ದೇವರಾದ್ರೇನು ಆತ ಹತಭಾಗಿ. ಏನ ರುಚಿ ಆ ಪಲ್ಲ್ಯಾಽದಾಗ."

ತಂದೆಯವರ ಮಾತು ಮುಂದುವರಿದೇ ಇತ್ತು.

"ದೇವರಿಗೆ ಎಲ್ಲಾ ತರದ್ದು ನೈವೇದ್ಯ ಮಾಡಬೇಕು. ಉಳ್ಳಾಗಡ್ಡಿ, ಬಳ್ಳೊಳ್ಳಿ ಆತ ಹುಟ್ಟಿಸಿದ್ದು. ಅವುಗಳ ರುಚಿ ಗೊತ್ತಿರ್ದ ಹುಟ್ಟಿಸ್ಯಾನೇನು ? ಮೀನ ಗಂಗಾಫಲ, ಮೀನ ಸುದ್ದಾ ಪವಿತ್ರ. ಆತನ ಹತ್ತಾವತಾರದಾಗ ಮೊದಲನೇ ಅವತಾರನ ಮತ್ಸ್ಯ ಅದರ ರುಚಿ ಅವಗ ಗೊತ್ತಿರಲಿಕ್ಕಿಲ್ಲ".

"ಊಟಕ್ಕೆ ಕೂತಾಗ ಏನು ಮೀನ ಮೊಸಳಿ ಮಾತು".

"ಎಲಾ ಇವಳ, ಮೀನಾನ ಒಂದು ದೊಡ್ಡ ಆಹಾರ" ಎಂದು ತಾಯಿಗೆ ಹೇಳುತ್ತ ನನ್ನನ್ನುದ್ದೇಶಿಸಿ "ಅಲ್ಲಽ ನಿನ್ನ ಗಂಡ ಮೀನ ತಿಂತಾನೇನು?" ಎಂದು ನನ್ನನ್ನು ಕೇಳಿದರು.

"ತಿಂತಾರ" ಎಂದೆ ತಾಯಿ ಕಡೆಗೆ ನೋಡುತ್ತ.

"ಛೇ ಏನು ನಮ್ಮವ್ವ" ಅಂದರು ತಾಯಿ.

"ಮೀನ ಜೀವಕ್ಕ ಭಾಳ ಒಳ್ಳೇದು. ಜಗತ್ತಿನ್ಯಾಗ ಮೀನಾ ತಿನ್ನೋವವರು ಇಲ್ಲದಿದ್ರ ಸಮುದ್ರದ ತುಂಬೆಲ್ಲ ಮೀನ ಆಗಿಬಿಡತಿದ್ದವು".

"ಮೀನ ತಿನ್ನೋವವರಿಗೆ ಅದ ರುಚಿ" ನಾನೆಂದೆ.

"ಹೌದು, ಅದರ ಒಂದ ವಾಸನೆಯಿಂದ ಗುಡ್ಡ ಅನ್ನ ಉಣ್ಣೋವವರು ಇದ್ದಾರ" ಎಂದು ಹೇಳುತ್ತ ತಮ್ಮ ಮಿತ್ರ ಮತ್ಸ್ಯ ವಂಶಿಯೊಬ್ಬನ ಬಗ್ಗೆ ಭಾವನಾಪರವಶರಾಗಿ ಮಾತನಾಡಿದರು. ಒಳ್ಳೇ ಜಾತಿ ಕರಿದ ಮೀನ ಹಸಿ ಕೊಬ್ಬರಿ ತಿರುವಿ ರಸ ತೆಗೆದು, ಅವಸೋಲ ಹಾಕಿ ಮಾಡಿದ ಕಡಿ, ಅಂಬೇ ಮೂರ ಅಕ್ಕಿ ಅನ್ನ ಭಾಳ ಆಸ್ಥಾ ವಹಿಸಿ ಉಣತಿದ್ದ ನನ್ನ ಕವಿ ಮಿತ್ರ ಹೇಳುತ್ತಿದ್ದ, 'ಎಲಾ ಇದರಂಥ ಊಟ ಬ್ಯಾರೆ ಇಲ್ಲಲಾ. ಆತನ ಅಂತಿಮ ಇಚ್ಛಾ 'ನಾ ಸತ್ತಮ್ಯಾಲ ನನ್ನ ಸಮಾಧಿ ಸಮುದ್ರದಾಗ ಮಾಡಬೇಕು. ಯಾಕಂದ್ರ ಯಾ-

ಮೀನ ಇಷ್ಟ ದಿವಸ ನನಗ ಆಹಾರ ಆಗ್ಯಾವ, ಆ ಮೀನಕ್ಕ ನಾ ಸತ್ತ ಮ್ಯಾಲರ ಆಹಾರ ಆಗಲಿ"' ಎಂದು.

"ಹೌದು ಭಿನ್ನ ರುಚಿ ಲೋಕ. ನಾನಾ ತರಹದ ರುಚಿ ಜಗತ್ತಿನ್ಯಾಗ. ನಾವು ಕಾಯಿ ಸಲ್ಲ್ಯಾ ತಿಂದ್ರ ಕೆಲವರು ಮೀನ, ಕೋಳಿ, ಮಾಂಸ ತಿಂತಾರ. ಅವಕ್ಕೂ ರುಚಿ, ಅವೂ ಆಹಾರ ಅದಕ್ಕೇನು "? ಅಂದೆ ನಾನು.

"ಹೋಗ ನಮ್ಮ ವ್ಯಾ ನೀ ತಿನ್ನ ಬ್ಯಾಡ ಮತ್ತ" ಅಂದರು ತಾಯಿ.

"ನಾಲ್ಕು ದೇಶ ತಿರುಗುವವರು ಎಲ್ಲಾ ತಿನ್ನಬೇಕು. ಎಲ್ಲಾದರದು ರುಚಿ ಗೊತ್ತಿರಬೇಕು. ಇನ್ನ ಹೇಸಿಕಿ ಬರತಿದ್ರ ಮಾತ್ರ ತಿನ್ನಬಾರದು" ಎಂದರು ತಂದೆ.

"ಹೊಟ್ಟಿ ಅಂದ್ರೆ ಕಸದ ಡಬ್ಬಿ ಅಂತ ತಿಳಿದು ಊಟ ಉಣಬೇಕು ಅಂತ ಉಣ್ಣುವವರಿದ್ದಾರ, ಊಟ ಆರೋಗ್ಯದ ಸಲುವಾಗಿ ಉಣ್ಣುವವರಿದ್ದಾರ. ಊಟ ಉಂಡು ರುಚಿ ತಿಳಿದು ತೃಪ್ತಿಪಡುವವರೂ ಇದ್ದಾರೆ. ಈ ಮೂರನೆಯ ಜಾತಿಯ ಜನ ರಸಿಕರು. ರುಚಿ ತಿಳಿದವರು."

"ದೇವರ ದೇಣಿಗೆ ರಸನೇಂದ್ರಿಯ. ಎಲ್ಲ ರಸಗಳ ರುಚಿಯಿರಬೇಕು ಸಿಹಿ, ಕಹಿ, ಹುಳಿ, ಉಪ್ಪು, ಖಾರ ಸಮ್ಮಿಶ್ರಣವೇ ರುಚಿ. ಆ ರುಚಿ ತಿಳಿಯದೇ ಊಟ ಮಾಡುವದು ಅನಾರೋಗ್ಯದ ಲಕ್ಷಣ. ರಸಾಸ್ವಾದನ ಮಾಡದವ ಅರಸಿಕಪ್ರಾಣಿಗಳಿಗೂ ರುಚಿ ಗೊತ್ತದ. ಮಾಂಸದ ರುಚಿ ಯಿದ್ದ ಹುಲಿಸಿಂಹ ಹುಲ್ಲುತಿನ್ನೋದಿಲ್ಲ."

ತಂದೆಯವರ ಮಾತು ರುಚಿಯ ಲೇಖನಕ್ಕೆ ಸಾಹಿತ್ಯ ಒದಗಿಸಿತ್ತು.

"ನಿಮ್ಮ ಎಲ್ಯಾಗಿನ ಭಕ್ಕರಿ ತೀರೇದಲ್ಲ ಅನ್ನ ಹಾಕಲೇನು ? ಅಂದರು ತಾಯಿ.

"ಇನ್ನೊಂದು ಭಕ್ಕರಿ ಬರ್ಲಿ" ಅಂದರು ತಂದೆ.

"ಸಂಜಿಗೆ ಭೇಲಪುರಿ ಪ್ರೋಗ್ರಾಮ ಅದ".

"ನೀ ಭೇಲಪುರಿ ಮಾಡ್ತೀಯಾ? ಮಹಾರಾಯಳ ಆ ತಿನಿಸು ನಿನ್ನ ಸುಕೋಮಲ ಕೈಯಿಂದ ಹ್ಯಾಂಗ ರುಚಿ ಆದೀತು ಅಂತೀನಿ".

"ಯಾಕ?" ಅಂದೆ ನಾನು ಉತ್ಸುಕತೆಯಿಂದ.

ಅಲ್ಲವಾ, ಭೇಲಪುರಿ ಮಾಡಬೇಕು ಚೌಪಾಟಿ ಭೇಲವಾಲಾ ಭಯ್ಯಾ. ಆತ ತನ್ನ ರೋಮ ತುಂಬಿದ, ಗಡ್ಡಾ ಮೀಸೆ ಮ್ಯಾಲ ಆಡಿಸಿಕೊಂಡು ಆದ ಕೈಲೆ ಭೇಲ ಕಲಿಸಿದ ಅಂದ್ರ ಅದಕ ಬರೋ ರುಚಿ ನಿಮ್ಮವ್ವನ ಶುಚಿಯಾದ ಕೈಯಿಂದು ಹ್ಯಾಂಗ ಡಂದೀತು ?" ಅಂದರು.

"ಥೂ ಹೇಸಿಕಿ" ಅಂದರು ತಾಯಿ ನಾಚಿಕೊಂಡು ನಗುತ್ತ.

"ಹಾಂಗಾದ್ರ ಭೇಲಪುರಿ ನೀವ ಮಾಡ್ರಿ" ಅಂದೆ ನಾನು,

ಅದಕ್ಕೆ ತಂದೆ ನಗುತ್ತ "ಗಡ್ಡ ಮೀಸಿ ಇದ್ದ ಮಾತ್ರಕ್ಕ ನಿಮ್ಮಪ್ಪ ಹೇಸಿ ಭಯ್ಯಾ ಅಂತ ತಿಳದಿಯೇನು ?" ಅಂದರು.

"ಪಾಣೀಪುರಿ ನಿಂತ ತಿನಬೇಕು. ಭೇಲಪುರಿ ಚೌಪಾಟಿ ಉಸುಕಿನ ಮ್ಯಾಲ ಕೂತು ಮುತ್ತುಗದ ಎಲ್ಯಾಗ ಭೇಲವಾಲಾ ಭಯ್ಯಾನ ಕೈಯಿಂದ ಕಲಸಿ ತಿನ್ನಬೇಕು. ಖಾರ ಖಾರಾಗಿ ಮೂಗಿನಿಂದ ನೀರ ಸುರಿತಿರಬೇಕು. ಆಗ ಪಂಚೇಂದ್ರಿಯಗಳ ನೆನಪಾಗತಿರಬೇಕು" ಎಂಬ ತಂದೆಯವರ ಮಾತಿಗೆ,

"ಈಗೇನು ಸ್ವಚ್ಛ ಭೇಲಪುರಿ ಅಂಗಡಿ ಆಗ್ಯಾವ" ಅಂದೆ.

"ಭೇಲಪುರಿ ಎಂದೂ ಪ್ಲೇಟಿನ್ಯಾಗ ಹಾಕಿ ಚಮಚಾದ್ಲೆ ಟೇಬಲ್ಲಮ್ಯಾಲ ಕೂತು ತಿನ್ನಬಾರದು. ಹ್ಯಾಟ ಬೂಟ, ಪ್ಯಾಂಟ ಹಾಕ್ಕೊಂಡು ದೇವರ ಪೂಜೆಗೆ ಕೂತ್ಹಾಂಗ ಆಗ್ತದ" ಅಂದರು.

ತಂದೆಯವರಿಗೆ ವಿಶಿಷ್ಟ ಪದಾರ್ಥಗಳ ವಿಶಿಷ್ಟ ರುಚಿ. ಯಾವ ಸಮಯಕ್ಕ ಯಾವದನ್ನು ಹೇಗೆ ತಿನ್ನಬೇಕೋ ಎಲ್ಲಿ ತಿನ್ನಬೇಕೋ ಹಾಗೇ ತಿನ್ನಬೇಕು. ಬಟಾಟಿ ವಡಾ ಅವರೆಂದಿಗೂ ಮಧ್ಯಾಹ್ನ ಚಹಾ ಹೊತ್ತಿಗೆ ತಿನ್ನಲಿಲ್ಲ. ಬಟಾಟಾ ವಡಾ ತಿನ್ನುವ ವೇಳೆ ಸಂಜೆ 5 ಗಂಟೆ.

"ಭೇಲಪುರಿ ತಿಂದ ಆದಮ್ಯಾಲ ಒಂದು ಕುಲಫಿ ತಿನ್ನಬೇಕು, ಆದ್ರ ನಿಮ್ಮವ್ವ ಯಾವಾಗಲೂ ಭೇಲಪುರಿ ಫ್ರುಟ್‌ಸ್ಯಾಲಡ್ ಕೊಂಬಿನೇಶನ್ ಮಾಡ್ತಾಳ. ಹಣ್ಣಿನ ರುಚಿ ಕೆಡಿಸುವ ಪದಾರ್ಥ ಫ್ರುಟ್‌ಸ್ಯಾಲಡ್, ಹಣ್ಣಿನ ಸಜೀವ ಸಮಾಧಿ ಅದು. ಮಾವಿನ ಹಣ್ಣಿನ ಜೋಡಿ ಬಣ್ಣ ಅದ ಅಂತ, ಪಪಾಯಿ ಹಣ್ಣ ಕೂಡಿಸಿ, ಚಿಕ್ಕು, ಸಫರ, ದ್ರಾಕ್ಷಿ ಹಾಕಿ ಭಲೋ ಹಾಲು ಸಕ್ಕರಿ ಕೆಡಿಸಿ....ಮಹಾರಾಯಳ ಮರ್ಯೋ ಆ ಫ್ರುಟ್ ಸ್ಯಾಲಡ್ ಮಾಡಬ್ಯಾಡ. ಅದರ ಬದ್ಲಿ ಪ್ರತ್ಯೇಕ ಹಣ್ಣ ತಿನ್ನಲಿಕ್ಕೆ ಕೊಡು. ಆ ಬಂಗಾಲಿ ಜನರು ಭಲೋ

ಹಾಲ ಕೆಡಿಸಿ ರಸಗುಲ್ಲಾ, ಸಂದೇಶ ಮಾಡ್ತಾರ. ಬಿಹಾರದವರು ಹಾಲ ಲಟ್ಟಿಸಿ ರಬಡಿ ಮಾಡ್ತಾರ. ಅವರ ಈ ರಬಡಿ ಎರಡ ಚಮಚಾ ತಿಂದು ಜೀರ್ಣಿಸಿ ಕೊಂಡಾವ ಅಂದ್ರ ನಿಮ್ಮವ್ವನ ಫ್ರುಟ್‌ಸ್ಯಾಲಡ್ ತಿಂದ ಬದುಕಿದ ನಿಮ್ಮ ಅಪ್ಪ ಒಬ್ಬಾವನ" ಅಂದರು, ಅಡಿಗೆಮನೆ ನಗೆಗಡಲಿನಲ್ಲಿ ತೇಲಿತ್ತು.

ಹೌದು, ತಂದೆಯ ಮಾತು ನಿಜ. ಹಣ್ಣಿನ ನೈಜ ರುಚಿ ಕೆಡಿಸುವ ಪದಾರ್ಥ ಫ್ರುಟ್‌ಸ್ಯಾಲಡ್. ಅದರ ಬದಲು ಪ್ರತ್ಯೇಕವಾಗಿ ಹಣ್ಣನ್ನೇ ತಿಂದು ರುಚಿ ಸ್ವಾದಿಸಿ ಹೊಟ್ಟೆಯಲ್ಲಿಯೇ ಫ್ರುಟ್‌ಸ್ಯಾಲಡ್ ತಯಾರಿಸಿಕೊಳ್ಳಬಹುದಲ್ಲ.

ಧಾರವಾಡದ ಹಣ್ಣಿನ ರುಚಿ ಮನಸ್ಸು ಮೆಲಕು ಹಾಕಿತು. ಮಾಳಗುಡ್ಡ ಆಪೂಸ ಮಾವಿನ ಹಣ್ಣು, ಸಪ್ತಾಪುರ, ಸಾಧನಕೇರಿ, ಸ್ವಾರಸ್ವತಗುಡ್ಡ, ಕಲಮಿ ಸಕ್ಕರಿ ಗುಟ್ಟಲಿಗಳು, ಹಲಸಿನ ಹಣ್ಣುಗಳು, ಕವಳಿ ಪರಗಿ ಹಣ್ಣುಗಳು, ನೀರಲ ಹಣ್ಣುಗಳು, ಸೀತಾಫಲಗಳು, ನವಿಲೂರು ಪೇರಲಹಣ್ಣುಗಳು, ಎತ್ತಿನಗುಡ್ಡದ ದ್ರಾಕ್ಷಿ—ಧಾರವಾಡದ ಯಾವ ಹಣ್ಣು ತಿಂದರೇನು ? ಅದಕ್ಕೊಂದು ರುಚಿ.

ಧಾರವಾಡದ ಕಾಯಿ ಪಲ್ಲೆಗಳಿಗೂ ರುಚಿ. ಹಸಿರು ಮುರಿಯುವ ಹರವಿ, ರಾಜಗೀರಿ, ಹೊರ್ನಗನ್ನಿ ಪುಂಡಿ, ಮೆಂಥೆ, ಚಕ್ಕೋತ, ಹಕ್ಕರಕೆ, ಸಬ್ಬಸಿಗ, ಚಂದನ ಬಟವ, ಹುಣಚಿಕ್ಕ, ಕುಸಬಿ, ಕಡಲಿ ಪಲ್ಲೆಗಳು ಅಲ್ಲದೇ ಬದನೆ, ಪಡವಲ, ಭೆಂಡಿ, ಹೀರಿ, ಅವರೆ, ಕುಂಬಳಕಾಯಿಗಳು, ಎಳೆಯ ಸೌತೆಕಾಯಿ ಹೆಚ್ಚಿ ತಿಂದರೂ ರುಚಿ. ಕೊಚ್ಚಿ ಪಚಡಿ ಮಾಡಿದರೂ ರುಚಿ, ತುಂಬಿ ಪಲ್ಲೆ ಮಾಡಿದರಂತೂ ಮೂಗು ಕೊಯ್ದಿಡುವಷ್ಟು ರುಚಿ. ಧಾರವಾಡದ ಮಣ್ಣಿಗೇ ರುಚಿ. ಧಾರವಾಡದ ನೀರಿಗೆ ರುಚಿ.

ಧಾರವಾಡದ ಆ ಕೆಂಪುಮಣ್ಣು, ಸೋಮೇಶ್ವರದ ಬಳಿ ಹುಟ್ಟಿದ ಶಾಲ್ಮಲೆ, ಸೃಷ್ಟಿ ಸೌಂದರ್ಯ, ಮನೆಮನೆಗೂ ಸದೃಢ ಜೀವ, ಕಪಿಗಳ ಬೀಡು. ಕವಿಗಳ ಆಗರ. ಯಾರೋಒಬ್ಬರು ತಮಾಷಿಯಾಗಿ ನುಡಿದರು, "ಧಾರವಾಡದ ಸುತ್ತೆಲ್ಲ ಗೋಡೆ ಕಟ್ಟಿಸಿದರೆ ಸಾಕು, ಹುಚ್ಚರಾಸ್ಪತ್ರೆಯ ಅಗತ್ಯವೇ ಇಲ್ಲ". ಹೌದು. ಮನೆಮನೆಗೂ ಕವಿಗಳು, ಗಾಯಕರು, ನಾಟಕಕಾರರು, ಭಾಷಣ ಕಾರರು, ಕಲಾಕಾರರು, ನಾಟ್ಯಪ್ರವೀಣರು, ಕಲಾಕುಸುರಿನ ಕೆಲಸಗಾರರು, ಕಸೀದೆಗಾರರು ಇಷ್ಟಾಗಿ ಬಡವರು. ಬಣ್ಣಕ್ಕೆ ಕಣ್ಣುಂಟು. ಧಾರವಾಡ ಜನಕ್ಕೆ ಹತ್ತಿಕೊಳ್ಳ, ಸಾಧನಕೇರಿ, ನುಗ್ಗೀಕೇರಿ, ಸೋಮೇಶ್ವರ, ಸಪ್ತಾಪುರ,

ನವಿಲೂರು ಸಾರಸ್ವತಗುಡ್ಡ, ಮಾಳಗುಡ್ಡ, ವಿದ್ಯಾನಗರ, ಕರ್ನಾಟಕ ವಿಶ್ವ ವಿದ್ಯಾಲಯ ನಿಂತುಚಿಕ್ಕ ಮಹಾಬಳೇಶ್ವರ ತನ್ನದೇ ಆದ ರಾಜಗಾಂಭೀರ್ಯತೆ ಯನ್ನು ಈವರೆಗೂ ಕಾಯ್ದುಕೊಂಡು ಬಂದ ಕರ್ನಾಟಕ ಕಾಲೇಜಿನ ಪರಿಸರ, ತಂದೆಯವರ ಮಾತಿನಿಂದ ಮನಸ್ಸು ಧಾರವಾಡದ ಸೌಂದರ್ಯವನ್ನು ಚಿತ್ರಿಸು ತ್ತಲೇ ಇತ್ತು.

"ನಿನ್ನ ಕಣ್ಣ – ಕಡೆಗೋಲಿಂದ
ನನ್ನ ಹೃದಯ ಕಡಿಯೇ ತಾಯಿ
ಎನ್ನ ಹೃದಯ ಕಡಿ...
ಧಾರವಾಡದ ತಾಯಿ"—ಬೇಂದ್ರೆಯವರ ನೆನಪಾಯಿತು.

ನಾವಿನ್ನೂ ಎಲೆಯ ಮುಂದೆ ಕುಳಿತೇ ಇದ್ದೆವು. ತಾಯಿ ಒಂದರ ಮೇಲೊಂದು ಭಕ್ಕರಿ ಮಾಡುತ್ತಲೇ ಇದ್ದಳು. ಮಧ್ಯಮಧ್ಯಕ್ಕೆ ಹಂಚನ್ನು ಇಳಿಸಿ ಒಲೆಯಲ್ಲಿ ಇದ್ದಿಲು ಹಾಕುತ್ತಿದ್ದರು. ಚಟ್ ಪಟ್ ಎಂದು ಕೆಂಡದ ಕಿಡಿ ಹಾರುತ್ತ ಒಲೆ ಉರಿಯುತ್ತಿತ್ತು. ಉರಿಯ ನಾಲಿಗೆ ಹಂಚನ್ನು ಸುತ್ತಿತ್ತು.

ಮನೆಯ ಕೆಲಸದಳು ಮಧ್ಯಾಹ್ನ ಊಟ ಬೇಡಲು ಬಂದ. ತಾಯಿ ಮುತ್ತುಗದ ಎಲೆಯಲ್ಲಿ ಒಂದರ ಮೇಲೊಂದು ನಾಲ್ಕಾರು ಭಕ್ಕರಿ ಹಾಕಿದಳು. ಪುಂಡಿಯ ಪಲ್ಲೆ ಒಗ್ಗರಣೆ, ಬದನೆಕಾಯಿ ಬಡಿಸಿದಳು. ದ್ರೋಣದಲ್ಲಿ ಹುಳಿ ತುಂಬಿದರು. ಅನ್ನ ವಜ್ಜಿಗೆ ಹಾಕಿದರು. ಒಣ ಭಕ್ಕರಿ ಕೊಡಬಾರದು ಎಂಬ ಸಂಪ್ರದಾಯವಾಗಿ ಭಕ್ಕರಿಗೆ ಬೆಣ್ಣೆ ನೀಡಿದರು. ತಾಯ ವಿಶಾಲ ಮನಸ್ಸಿನ ಅರಿವಾಯಿತು. ಮನೆಯಾಳಿಗಾಗಿಯೂ ಶ್ರಮವಹಿಸಿ ಭಕ್ಕರಿ ಬಡೆಯುವದು ಎಷ್ಟು ಶ್ರಮದ ಕೆಲಸ.

"ಅವ್ವಾರ, ಅಪ್ಪಾರ ಊಟ ಇನ್ನೂ ಮುಗದಿಲ್ಲೇನ್ರೀ" ಎಂದ ಕೆಲಸ ದಾಳು ಅಡಿಗೆಯ ಮನೆಯ ಬಾಗಿಲಿಗೆ ನಿಂತು.

"ಮುಗೀಲಿಕ್ಕೆ ಬಂದದ" ಎಂದೆನ್ನುತ್ತ ತಾಯಿ ಎಲೆಯನ್ನೆತ್ತಿ ಆತನ ತಟ್ಟೆಯಲ್ಲಿ ಇರಿಸಿದರು.

"ಅವ್ವಾರ ಇವತ್ತ ಪುಂಡಿಪಲ್ಲ್ಯಾ ಏನ್ರಿ. ಭೇಸ ಆತು ಬಿಡ್ರಿ, ನಮ್ಮ ಕಿಗೂ ಬಾಯಿಗೆ ರುಚಿಯಿಲ್ಲಾ ಅನ್ನಾಕಹತ್ತ್ಯಾಳು. ಅವ್ವಾರ ಮನಿ ಉಪ್ಪಿನ ಕಾಯಿ ತತಾ ಅಂದಳ್ರಿ. ಸ್ವಲ್ಪ ಉಪ್ಪಿನಕಾಯಿನೂ ರೊಟ್ಟಿಗೆ ಹಚ್ಚರಿ" ಅಂದ.

"ಯಾಕೋ, ಏನ ಗಡಬಿಡಿ ?" ಅಂದರು ತಾಯಿ.

"ಅವ್ವಾರ ಶಿವಾ ಕೊಟ್ಟದಾನ್ರಿ. ಆಕಿಗೂ ಮೂರು ತಿಂಗಳಾಗೇತ್ರಿ" ಅಂದ.

ಆ ಸಂಭಾಷಣೆ ಆಲಿಸುತ್ತಿದ್ದ ತಂದೆ "ಎಲಾ ಕಳ್ಳ, ಶಿವಾ ಏನ ಕೊಡ್ತಾನ? ನಾ ಕೊಟ್ಟೇನಿ ಅನ್ನು" ಎಂದು ನಕ್ಕು ನಮ್ಮೆಲ್ಲರನ್ನು ನಗಿಸಿ, "ಸರಕಾರದವರು ಜೇಲಿನ್ಯಾಗ ಹಾಕ್ತಾರ ಹಿಂಗ ಮ್ಯಾಲಿಂದ ಮ್ಯಾಲ ಪುಂಡಿಪಲ್ಲಾ ತಿಂದ್ರ" ಅಂದರು. ನಾನು ಬಿದ್ದು ಬಿದ್ದು ನಕ್ಕೆ.

"ಏನ ಮಾಡಬೇಕ್ರಿ ಅಪ್ಪಾರ ನಾಲ್ಕು ಹೆಣ್ಣ ಆದಾವ. ಗಂಡು ಸಂತತಿ ಒಂದು ಬೇಕಲ್ರೀ".

"ಏನ ಜಹಾಗಿರಿ ಆಳತದೋ ನಿಂದು" ಅಂದರು ತಂದೆ.

"ಅದ್ಯಾಂಗರಿ ಅಪ್ಪಾರ ಮನೆತನ ನಿಲ್ಲಾಕ ಬ್ಯಾಡೇನ್ರಿ ಮೂರು ತಲೆ ಮಾರಿಂದ ನಿಮ್ಮ ಮನಿ ಅನ್ನ ಉಂಡ ದೀಪ ಹಚ್ಚತೇವು. ಆ ದೀಪ ನನ್ನ ಮಗಾನು ಹಚ್ಚಾಕಬೇಕ್ರಿ'' ಅಂದ.

ತಂದೆಯವರು ಆತನ ಮಾತಿಗೆ ನಿರೋಧದ ವಿರೋಧಕರಾಗಿ ನಿರುತ್ತರ ರಾದರು. ಆದರೆ ನನ್ನ ಮನಸ್ಸು ಆತನ ವಿಶ್ವಾಸದ ರುಚಿ ಸ್ವಾದಿಸಿತು.

ಧಾರವಾಡ ಜನರ ವಿಶ್ವಾಸ, ಪ್ರೀತಿ, ಆ ವಿಶ್ವಾಸದಿಂದಲೇ ನಾವು ಬದುಕಿದ್ದು, ಧಾರವಾಡ ಶ್ರೀಮಂತರ ಊರಲ್ಲ. ಪೇನಶನ್‌ದಾರರ ವಸತಿ. ಇದ್ದ ಶ್ರೀಮಂತರೋ ವ್ಯಾಪಾರಿಗಳು. ಹೊಲ ಮನೆ ತೋಟ ಪಟ್ಟಿಯಿಂದ ಆಸ್ತಿವಂತರು. ಆದರೆ ಸಾಮಾನ್ಯ ಜನರ ಶ್ರೀಮಂತಿಕೆ ಅವರ ವಿಶ್ವಾಸದಲ್ಲಿ, ಮಾತುಮಾತಿಗೆ ಬೆಲೆ, ಮನೆಮನೆಗೆ ಆದರ, ಪ್ರೀತಿ.

"ನೀವು ಯಾವ ಊರಿನವರು ?" ಎಂದೊಬ್ಬ ನಮ್ಮ ಮಿತ್ರರಿಗೆ ಕೇಳಿದ

"ನಾವು ಧಾರವಾಡದವರು" ಅವರು ಉತ್ತರಿಸಿದರು,

''ನಿಮ್ಮ ಕನ್ನಡ ಬಲು ಬಿರುಸು'' ಎಂದ ಆತ.

"ಹೌದು ನಮ್ಮದು ಗಂಡು ಕನ್ನಡ" ಎಂದರು ಮಿತ್ರರು. ಆ ಅಧಿಕ ಪ್ರಸಂಗಿ ಅಷ್ಟಕ್ಕೇ ಸುಮ್ಮನಾಗದೆ,

"ಜನಾನೂ ಒರಟು" ಎಂದ. ಸಮಾಧಾನದಿಂದ ಮಿತ್ರರು ಉತ್ತರಿಸಿದರು,

"ಹಲಸಿನ ಹಣ್ಣಿನಂತೆ ಸಿಪ್ಪೆ ಅಷ್ಟೇ ಒರಟು. ತೊಳೆ ಜೇನಹನಿ." ಆ ಸಂಭಾಷಣೆ ನೆನಪಾಗಿ ನಮ್ಮೂರ ಜನರ ಹೃದಯ ವಿಶಾಲತೆಯ ಅರಿವಾಯಿತು.

ಮಧ್ಯಾಹ್ನ ಊಟದ ಹೊತ್ತಿಗೆ ಬಂದವರಿಗೆ ತುತ್ತು ಅನ್ನ ಹಾಕದೆ ಎಂದೂ ಕಳಸಿದವರಲ್ಲ. ತಾಮ್ರದ ಬಿಂದಿಗೆಯಲ್ಲಿ ಬಾವಿಯನೀರು ಯಾವಾಗಲೂ ದಾರಿ ಹೋಕರಿಗಾಗಿ ಸಿದ್ಧ. ಬೆಲ್ಲ ತಿನ್ನಲು ಕೊಟ್ಟೇ ನೀರು ಕುಡಿಯಲು ಕೊಡುವ ಪದ್ಧತಿ ಧಾರವಾಡದಲ್ಲಿ ಎಲ್ಲ ಮನೆಯಲ್ಲೂ ಉಂಟು. ಎಂಥ ಬಡವರ ಮನೆಗೇ ಹೋಗಿ ಹಚ್ಚಿದ ಅವಲಕ್ಕಿ, ಚಹಾ ಮೇಲೆ ಹಾಲಡಕಿಯ ಹೋಳು ಬಾಯಲ್ಲಿ ಹಾಕಿಕೊಂಡೇ ಅವರ ಮನೆಯಿಂದ ನೀವು ಹೊರಬರುವುದು. ಧಾರವಾಡದ ಜನಕ್ಕೆ ರುಚಿ ಹೆಚ್ಚು. ಕಾರಣ ಆ ಊರ ಮಣ್ಣುಗುಣ, ನೀರ ಗುಣ ಹವೆಯಗುಣ, ಜನ ರಸಿಕರು ಸರಸ್ವತಿ ಪೂಜಕರು.

ಖಾರದ ತಿಂಡಿ ಖಾರವಾಗಿರಬೇಕು. ಸಿಹಿ ತಿಂಡಿ ಬಾಯಿ ತುಂಬಾ ಸಿಹಿಯಾಗಿ ಇರಬೇಕು. ಒಂದು ಸಿಹಿ, ಒಂದು ಖಾರ ಮೇಲೆ ತಾಮ್ರವರ್ಣದ ಚಹಾ, ಪಾನ ಪಟ್ಟಿ ಸಿಗರೇಟು ಇಷ್ಟೊಂದು ಹಾಟೆಲ್ಲಿಗೆ ಹೋದರೆ ಆಗಲೇಬೇಕು ಧಾರವಾಡದ ಗಂಡಸರಿಗೆ. ಧಾರವಾಡದ ಊರಿಗೆ ವ್ಯಾಯಾಮದ ಅವಶ್ಯಕತೆ ಇಲ್ಲ. ಒಂದು ಗುಡ್ಡ ಹತ್ತಿ, ಇನೊಂದು ಗುಡ್ಡ ಇಳಿದರೆ ಸಾಕು ತಿಂದ ಅನ್ನ ಕರಗಿ ಮತ್ತೆ ಹಸಿವು.

ಹೋಳಿ ಹುಣ್ಣಿಮೆಯ ಹಲಗೆ ಬಾರಿಸಿದಾಗ ಕಾಮನ ದಹನ ಮಾಡಿ, "ಲಬೋ ಲಬೋ" ಎಂದು ಹೊಯಕೊಳ್ಳುತ್ತ ಹೊಯಕೊಂಡ ಬಾಯಿಗೆ ಹೋಳಿಗಿ ತುಪ್ಪ, ಶಿವರಾತ್ರಿಗೆ ಶಿವಭಕ್ತರ ಉಪವಾಸ, ವಿಷ್ಣುಭಕ್ತರಿಗೆ ಹೋಳಿಗೆ, ಕೃಷ್ಣ ಜನ್ಮಾಷ್ಟಮಿ. ಗಣೇಶ ಹಬ್ಬ, ರಾಮನವಮಿ, ನವರಾತ್ರಿ, ಯುಗಾದಿ ದೀಪಾವಳಿಗೆ ಹೋಳಿಗೆ ಕಡುಬುಗಳು, ಹೂರಣದ ಹೋಳಿಗೆ, ಶ್ಯಾವಿಗೆ ಪಾಯಸ, ಕಡಬು ಗೋಕುಪಾ (ಗೋದಿ ಕುಟ್ಟಿದ ಪಾಯಸ-ಗೋದಿಹುಗ್ಗಿ) ಇವೇ ಖಾಸ ಸಿಹಿ ಪದಾರ್ಥಗಳು ಧಾರವಾಡದ ಜನರಿಗೆ. ವರ್ಷಕ್ಕೊಮ್ಮೆ ಹೂರಣದ ಹೋಳಿಗೆ ಆಗದ ಮನೆ ಕನ್ನಡದ ಮನೆಯೇ ಅಲ್ಲ. ಲಕ್ಷ್ಮಿಯಷ್ಟು ಪುರಾತನ ಹೋಳಿಗೆ. ಅವಳದೇ ಸ್ಥಾನ ಅದಕ್ಕೆ. ಹೋಳಿಗೆ ಮಾಡುವ ಕೈ ನುರಿತ ಕೈಯಿರ ಬೇಕು. ಅಜ್ಜಿ ಮಾಡಿದ ಹೋಳಿಗೆ ಮುಟ್ಟಿಗೆಯಾಗುವಷ್ಟು ಮೆತ್ತಗೆ ತುಪ್ಪ ಹಾಲು ಜೊತೆಯಾಗಿ ಬೆರೆಸಿ ತಿಂದರೂ ರುಚಿ. ಬಿಸಿ ಹೋಳಿಗೆ ತುಪ್ಪ ತಿಂದರೂ

ರುಚಿ. ತಂಗಳ ಹೋಳಿಗೆ ಇನ್ನೂ ರುಚಿ. "ಹೆತ್ತುಪ್ಪ ಕರಿಗಡುಬಿನ ಬೀಡು ನನ್ನದು ಈ ಕನ್ನಡ ನಾಡು" ಎಂದು ಹಾಡಿದ ಕವಿಗೆ ಕಡುಬಿನ ರುಚಿ.

ಧಾರವಾಡದ ಲೈನಬಜಾರ ಫೇಡೆಯ ರುಚಿ ತಿಂದವರಿಗೆ ಎಂದೂ ಮರೆಯದು. ಅಂಥ ಫೇಡೆ ಜಗತ್ತಿನ ಯಾವ ಮೂಲೆಗೆ ಹೋದರೂ ಸಿಗದು. ಧಾರವಾಡದ ಹಚ್ಚಿದ ಅವಲಕ್ಕಿ, ಮೊಸರವಲಕ್ಕಿ, ಅಂಟಿನ ಉಂಡಿ, ತುಪ್ಪ ಬಸಿಯುವ ಶಿರಾದಿಂದಲೇ ಹಾಟೆಲ್ಲ ಮಾಲಿಕರು ಮಹಲು ಕಟ್ಟಿಸಿದರು.

ಮನೆಮನೆಗೂ ಗೌರಿಯ ಹೂವೀಳ್ಯ, ಹೊಸದಾಗಿ ಲಗ್ನವಾದ ಹೆಣ್ಣು ಮಕ್ಕಳು ಮುತ್ತೈದೆಯರ ಕಾಲು ತೊಳೆಯುವ ಸಂಭ್ರಮ. ತಲೆಗೆ ಘಮ ಘಮಿಸುವ ದುಂಡುಮಲ್ಲಿಗೆಯ ಮೊಗ್ಗಿನ ಮಾಲೆ. ಕೈಯಲ್ಲಿ ಹಸಿರು ಮುತ್ತುಗದ ಎಲೆಯಲ್ಲಿ ಕೋಸಂಬರಿ, ಕುಡಿಯಲು ಪಾನಕ, ಅರಿಶಿಣ ಕುಂಕುಮ ಸಂಜೆಗೆ ಹೊಸ ಸೀರೆಯಲ್ಲಿ ಲಲನಾಮಣಿಗಳ ಒಯ್ಯಾರ.

ನವರಾತ್ರಿಯಲ್ಲಿ ಲಕ್ಷ್ಮೀನಾರಾಯಣನಿಗೆ ಅವತಾರ ಹಾಕುತ್ತಾರೆ. ಜಾತ್ರೆ ನಡೆಯುತ್ತದೆ. ಸೇವಂತಿಗೆಯ ಹೂಗಳು, ಬಳೆಗಳು, ಶ್ರಾವಣಮಾಸ ದಲ್ಲಿ ಉಳವಿ ಬಸವಣ್ಣನ ಜಾತ್ರೆ. ಸಿದ್ಧಾರೂಢ ಮಠ. ಅಲ್ಲಿಯೂ ಜಾತ್ರೆ ನೀವು ತಿನ್ನಬೇಕು ಮೆಣಸಿನಕಾಯಿ, ಉಳ್ಳಾಗಡ್ಡಿ ಭಜಿ. ಕೇಳಬೇಕು ಮಲ್ಲಿಕಾರ್ಜುನ ಮನ್ಸೂರರ ಅಕ್ಕ, ಬಸವಣ್ಣನ ವಚನಗಳು.

ನಮ್ಮೂರ ರಸಿಕರಿಗೆ ಆ ಭಜಿ ರುಚಿ ಮನ್ಸೂರರ ಮನದುಂಬಿ ಹಾಡುವ ಭಜನೆ ರುಚಿ. ಮನ್ಸೂರರಿಗೆ ಯಾರೋ ಸಲಹೆ ನೀಡಿದರಂತೆ, "ಗುರುಗಳ, ರುಮಾಲು ಹಾಕ್ಕೊಂಡು ಕುಂತ ಹಾಡ್ರಿ" ಎಂದು. ಅದಕ್ಕೆ ಮನ್ಸೂರರು ಉತ್ತರಿಸಿದರಂತೆ, "ಎಲಾ ಮಳ್ಳ ನಾ ಹಾಡತೀನೋ ಏನ ನನ್ನ ರುಮಾಲು ಹಾಡತೈತ್ಯೊ !" ಎಂದು. ಆ ಶ್ರೇಷ್ಠ ಗಾಯಕರ ನಿರಾಡಂಬರವಾದ ಮಾತೂ ರುಚಿ.

ಧಾರವಾಡವೇ ರುಚಿ, ಧಾರವಾಡದ ಜನ ರುಚಿ, ಧಾರವಾಡದ ಹವೆ ರುಚಿ, ಧಾರವಾಡದ ನೀರು ರುಚಿ, ಧಾರವಾಡದ ಮಣ್ಣು ರುಚಿ, ಧಾರವಾಡದ ಹಣ್ಣು ರುಚಿ. ಧಾರವಾಡದ ಹೆಣ್ಣನ್ನು ಮದುವೆಯಾದ ಗಂಡಿಗೆ ಕೇಳಿ, ಧಾರವಾಡದ ಹೆಣ್ಣೂ ರುಚಿ.

ಕಾಂಕ್ರೀಟ್ ವ್ರತ ಮಹಾತ್ಮೆ

ಎಂ. ಪಿ. ಮನೋಹರಚಂದ್ರನ್

ತಮ್ಮ ಪ್ರಿಯ ಆಶ್ರಮವಾದ ರಂಗವಿಲಾಸದ ಹದಿನೈದನೆಯ ಕೊಠಡಿಯ ನಿವಾಸದಲ್ಲಿ, ದೋಸೇತ್ಯಾದಿ ಫಲಹಾರವನ್ನು ಸ್ವೀಕರಿಸಿ ಯುಗಧರ್ಮಕ್ಕೆ ಅನುಗುಣವಾದ ಕಾಫಿ ಎಂಬ ಸೋಮಪಾನವನ್ನು ಮಾಡಿ ಯಾವ ಆತ್ಮ ತೃಪ್ತಿಯ ಸಂಕೇತವಾದ ತೇಗುಗಳನ್ನು ಹೊರದೂಡುತ್ತಾ, ಅರೆ ಮುಚ್ಚಿದ ನೇತ್ರಗಳಿಂದ ಪರಮಾನಂದದ ಸಮಾಧಿ ಸ್ಥಿತಿಯಲ್ಲಿದ್ದ ಕಂಟ್ರಾಕ್ಟರ್ ವರ್ಯ ಗುರು ಕಲ್ಲೇಶಿ ಮಹಾಮುನಿಗಳ ಬಿಲ್ಲನ್ನು ತೆತ್ತ ನಾನು, ಅವರ ಪಾದ ಪಂಕಜಗಳಿಗೆರಗಿ ದಂಡಪ್ರಣಾಮಗೈದು ಅನಂತರ ಅಂಜಲೀಬದ್ಧನಾಗಿ ನಿಂತು ಅವರನ್ನು ಕುರಿತು ಇಂತು ಪ್ರಾರ್ಥಿಸಿದೆನು :

"ಸಕಲ ವಿದ್ಯೆಗಳಲ್ಲೂ ಪರಿಶ್ರಮಪಡೆದು ಕುಖ್ಯಾತರಾಗಿರುವ ಓ ಮುನಿವರ್ಯರೇ, ಲೋಕದಲ್ಲೆ ಮಾನವ ಜನ್ಮವು ಶ್ರೇಷ್ಠವು. ಅಂತಹ ಮಾನವ ಜನ್ಮವು ದೊರೆಯುವುದು ದುರ್ಲಭವು. ಆದರೆ ಕಾಲಗಳಲ್ಲಿ ಅತಿ ದುಷ್ಟವಾದಂತಹ ಈ ಕಲಿಗಾಲದಲ್ಲಿ ಮಾನವ ಜನ್ಮವೆಂಬುದು ನಾಯಿ ಜನ್ಮವು. ಯಾವ ಕಾರಣಕ್ಕೆಂದರೆ ಅತಿ ದುರ್ಲಭವಾದ ಮಾನವ ಜನ್ಮ ಲಭಿಸಿದರೂ ಉದ್ಯೋಗ ದೊರೆಯುವುದು ಅಸಂಭವವು. ನನ್ನ ವಿದ್ಯಾರ್ಜನೆಗೆ ವೆಚ್ಚ ಮಾಡಬೇಕಾಗುವ ದ್ರವ್ಯವು ಬಡ್ಡಿ ಸಮೇತ ವಸೂಲಾಗಲೆಂಬ ದೂರದೃಷ್ಟಿಯಿಂದ ತಾಂತ್ರಿಕ ಶಿಕ್ಷಣಕ್ಕೆ ಸೇರಿಸಿದರು. ಚಾತುರ್ವರ್ಷದ ಶಿಕ್ಷಣವನ್ನು ದಶಮ ವರ್ಷದ ಅಂತ್ಯದಲ್ಲಿ ಪೂರ್ಣಗೊಳಿಸಲು ಶಕ್ತನಾದೆ. ಅನಿತರೊಳಗೆ ತಾಂತ್ರಿಕ ಶಿಕ್ಷಣಕ್ಕೆ ಗ್ರಹಚಾರ ಕಾಲವು ಪ್ರಾಪ್ತವಾಗಿ ಅದರ ಪ್ರಭಾವವುಕರಗಿ, ಇಂಜಿನಿಯರುಗಳೆಲ್ಲ ನಿರುದ್ಯೋಗಿಗಳಾಗಿ ಅವರುಗಳಿಗೆ ಗಾಳಿ, ನೀರು, ತರಗೆಲೆಗಳೇ ಆಹಾರಗಳಾದವು. ಅತಿ ಆಸೆಯಿಂದ ದಶವರ್ಷಗಳು ನನ್ನ ಇಷ್ಟಾರ್ಥಗಳನ್ನೆಲ್ಲ ನೆರವೇರಿಸುತ್ತ ನನ್ನಿಂದ ದ್ರವ್ಯರಾಶಿಯನ್ನೇ ನಿರೀಕ್ಷಿಸಿ ನಿರಾಶೆ ಹೊಂದಿದ ನನ್ನ ಪಿತನು 'ಅಯ್ಯೋ, ನೀನೇ ನನ್ನ ನಾಪಿತನಾದೆ

ಯಲ್ಲೋ!' ಎಂದು ಹಲುಬಿ, ಇನ್ನಾವ ಮಾರ್ಗವೂ ತೋಚದ ಪ್ರಯುಕ್ತ ಸ್ವರ್ಗವಾಸಿಯಾದರು. ಸಂತತಿ ನಿಯಂತ್ರಣ ಇಲಾಖೆ ಜನ್ಮ ತಳೆಯುವುದ ಕ್ಕಿಂತ ಮುಂಚೆಯೇ ನನ್ನ ಮಾತಾಪಿತರ ವಿವಾಹವಾಗಿದ್ದ ಕಾರಣ ನನ್ನ ತಂದೆಯ ಬೃಹತ್‌ಸಂಸಾರದ ಭಾರ ನಿರುದ್ಯೋಗಿಯಾದ ನನ್ನ ಹೆಗಲಿಗಂಟಿತು. ಸಹಿಸಲಾರದ ತೊಂದರೆಗಳನ್ನು ಅನುಭವಿಸುತ್ತಿರುವ ನನಗೆ ನನ್ನ ಪಿತನ ಹಾದಿಯೇ ಸುಕ್ಷೇಮ ಎಂಬ ಅಭಿಪ್ರಾಯ ಉಂಟಾಗಿರುವುದು. ಆದರೆ ದಯಾನಿಧಿಯಾದ ಓ ಮಹಾತ್ಮನೇ, ತಮ್ಮ ದರ್ಶನ ಮಾತ್ರದಿಂದಲೇ ನನ್ನ ದುಃಖಗಳೆಲ್ಲವೂ ನಿವಾರಣೆಯಾದವು! ಆರ್ಯರೇ, ದುರಿತಗಳೆಲ್ಲವೂ ನಾಶವಾಗು ವಂತೆಯೂ ಉದ್ಯೋಗ ದೊರೆಯುವಂತೆಯೂ ಸಾಧ್ಯವಾಗುವ ಒಂದು ವ್ರತ ವನ್ನು ಅನುಗ್ರಹಿಸಬೇಕು."

ಈ ರೀತಿ ಪರಿಪರಿಯಾಗಿ ಬೇಡಿಕೊಳ್ಳುವ ಶಿಷ್ಯನನ್ನು ಸಂತೈಸುತ್ತ, ಆತನ ಸೇವೆಯಿಂದ ಸಂತುಷ್ಟರಾದ ಕಲ್ಲೇಶಿ ಮಹಾಮುನಿಗಳು ಹೇಳಿದರು,

"ನಾಯಿ, ಹಂದಿ, ಕತ್ತೆ, ಕಪಿ ಇತ್ಯಾದಿ ಹೀನ ಜನ್ಮಗಳಲ್ಲಿ ತೊಳಲಿ ನಾನಾವಿಧದ ಕಷ್ಟಗಳನ್ನು ಅನುಭವಿಸಿದ ಅನಂತರ ದೊರೆಯುವ ದುರ್ಲಭ ವಾದ ಮಾನವ ಜನ್ಮದ ಶ್ರೇಷ್ಠತೆ ಹಾಗು ಗುರಿಯನ್ನರಿಯದೆ ಮಾನವರಲ್ಲಿ ಹಿಂದಿನ ಜನ್ಮಗಳ ಶೇಷವಾಸನೆ ಉಳಿದುಹೋಗಿ, ಅವರು ಮಾನವರಾಗಿಯೂ ನಾಯಿ, ಹಂದಿ, ಕತ್ತೆಗಳಂತೆ ಜೀವಿಸುತ್ತಾರೆ. ಎಲೆ ಶಿಷ್ಯನೇ, ಗಮನವಿರಿಸಿ ಕೇಳುವಂಥವನಾಗು. ಅಶಾಶ್ವತವಾದ ಮಾನವ ಜನ್ಮದಲ್ಲಿ ಮರಣವೆಂಬು ದೊಂದೇ ನಿಶ್ಚಿತವು. ಹಾಗಾಗಿ ಕ್ಷಣಿಕವೂ ಅಲ್ಲದೆ ಭವಿಷ್ಯದಲ್ಲಿ ಮಾನವ ಜನ್ಮ ದೊರೆಯುವುದೆಂಬ ನುಬಿಕೆ ಇಲ್ಲದಿರುವುದರಿಂದಲೂ ಲಭ್ಯವಾಗಿರುವ ಈ ಜನ್ಮ ವನ್ನು ಪೂರ್ಣ ಉಪಯೋಗ ಮಾಡಿಕೊಳ್ಳಬೇಕಾದದು ನರನ ಕರ್ತವ್ಯವು. ಆದಕಾರಣ ನಾಯಿ, ಕತ್ತೆ ಇತ್ಯಾದಿಗಳಂತೆ ಜೀವಿಸದೆ ಮಾನವನಾಗಿ ಜೀವಿಸ ಬೇಕಾದ್ದು ತನ್ನ ಗುರಿಯಾಗಿರಬೇಕೆಂಬ ಅರಿವು ಅವನಿಗಿರಬೇಕಾದ್ದು ಅಗತ್ಯವು. ಸಮಸ್ತ ಇಷ್ಟಾರ್ಥಗಳನ್ನು ನೆರವೇರಿಸಿ ಸಂತೋಷಚಿತ್ತರನ್ನಾಗಿ ಮಾಡುವ ಸುಖಸಾಧನೆಗಳೆಲ್ಲವನ್ನೂ ಪಡೆದು ಈ ಕ್ಷಣಿಕ ಜನ್ಮವನ್ನು ಆನಂದ ದಿಂದ ಅನುಭೋಗಿಸಲು ದ್ರವ್ಯವೆಂಬುದು ಅತ್ಯವಶ್ಯವು. ಆ ಕಾರಣದಿಂದ ದ್ರವ್ಯಾರ್ಜನೆಯೇ ಸಕಲ ಮಾನವರ ಅಂತಿಮಗುರಿಯಾಗಿರಬೇಕೆಂದು ಈ ಕಲಿ

ಗಾಲದ ಸಕಲ ಮುನಿಶ್ರೇಷ್ಠರ ಅಭಿಪ್ರಾಯವಾಗಿದೆ. ಆ ಕಾರಣಕ್ಕಾಗಿಯೇ ಪ್ರತಿಯೋರ್ವ ಮುನಿಶ್ರೇಷ್ಠನೂ ತನ್ನ ತನ್ನ ಮಠಕ್ಕೋಸ್ಕರ ಹಗಲಿರುಳೆನ್ನದೆ ಕಾರಿನಲ್ಲಿ ಪ್ರಯಾಣಮಾಡಿ ಭಕ್ತಾದಿಗಳಿಂದ ದ್ರವ್ಯಸ್ವೀಕಾರ ಮಾಡುವುದು, ಶಿಷ್ಯೋತ್ತಮ ! ಈ ಗುರಿಯನ್ನು ತಲುಪುವ ಹಾಗೂ ಕಲಿಗಾಲದಲ್ಲೇ ಅತಿ ಶ್ರೇಷ್ಠವಾದ ಕಾಂಕ್ರೀಟು ವ್ರತ ಎಂಬುದೊಂದು ಉಂಟು. ಆ ವ್ರತಾ ಚರಣೆಯಿಂದ ಸಕಲ ಪಾಪಗಳೂ ಪರಿಹಾರವಾಗಿ, ದುರಿತಗಳೆಲ್ಲ ನಾಶವಾಗಿ ಧನ ಧಾನ್ಯ ಐಶ್ವರ್ಯಗಳೂ (ಅದರಿಂ) ಇಷ್ಟಾರ್ಥಗಳೂ ಸಿದ್ಧಿಸುವುವು."

ಉಕ್ಕಿ ಬಂದ ಕುತೂಹಲದಿಂದ ಉತ್ಸಾಹಿತನಾದ ಶಿಷ್ಯನಾದ ನಾನು ಗುರುಗಳ ಮಾತನ್ನು ಮಧ್ಯದಲ್ಲಿಯೇ ತುಂಡರಿಸುತ್ತಾ, ದೀನವಾಣಿಯಿಂದ ಬೇಡಿಕೊಂಡೆ.

"ಹೇ ಗುರುವೇ ! ಕಾಂಕ್ರೀಟು ವ್ರತವೆಂದರೇನು ? ಆ ವ್ರತ ವಿಧಾನ ಗಳೇನು ? ಯಾವ ಕಾಲದಲ್ಲಿ ಆಚರಿಸತಕ್ಕದ್ದು ? ಯಾರು, ಯಾರಿಗೆ, ಯಾವಾಗ ಈ ವ್ರತದ ಮಹಾತ್ಮೆಯನ್ನು ವಿವರಿಸಿದರು ? ಕ್ಷಣಿಕವಾದ ಈ ಜೀವನದಲ್ಲಿ ಪ್ರತಿ ಕ್ಷಣವೂ ಅಮೂಲ್ಯವಾದುದಾದ್ದರಿಂದ ಕಾಲವ್ಯರ್ಥಮಾಡದೆ ಈ ಕ್ಷಣವೇ ಸವಿಸ್ತಾರವಾಗಿ ಹೇಳಿ ನನ್ನನ್ನು ಧನ್ಯನನ್ನಾಗಿ ಮಾಡುವುದು."

ಆಗ ಗುರುಗಳು ನಸುನಗುತ್ತಾ ಶಿಷ್ಯನ ಬೆನ್ನಮೇಲೆ ಕೈಯಾಡಿಸಿ ಇಂತೆಂದರು : "ಎಲೈ ಶಿಷ್ಯನೇ ಕೇಳು. ಕಾಂಕ್ರೀಟುವ್ರತದ ಮಹತ್ತನ್ನು ಕೇಳು. ಈ ವ್ರತವನ್ನು ವಿಧಿಪುರಸ್ಸರವಾಗಿ ಯಾರು ಆಚರಿಸುತ್ತಾರೋ ಅವರು ಸಂಕಟಗಳಿಂದ ಜಾಗ್ರತೆಯಾಗಿ ಬಿಡಲ್ಪಡುವರು. ಈ ವ್ರತವನ್ನು ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರೆಂಬೀ ಚಾತುರ್ವರ್ಣದವರೂ ಆಚರಿಸ ಬಹುದು. ಕೇಳು, ವಿವಿಧ ಸ್ವರೂಪದಲ್ಲಿರುವ ಪರಮಾತ್ಮನನ್ನು ಒಂದೇ ಮನಸ್ಸಿ ನಿಂದ ಓಲೈಸಿ ಇಷ್ಟಾರ್ಥಗಳ ಸಿದ್ಧಿಪಡೆಯುವುದಕ್ಕೆ ವ್ರತವೆಂದು ಹೆಸರಿಸಿದ್ದಾರೆ. ವಿನಾಯಕವ್ರತ, ಮಂಗಳಗೌರೀ ವ್ರತ, ಸತ್ಯನಾರಾಯಣ ವ್ರತ ಇತ್ಯಾದಿ ಯಾಗಿ ವಿಧವಿಧ ವ್ರತಗಳು ಹಿಂದಿನ ಕಾಲದಲ್ಲಿ ರೂಢಿಯಲ್ಲಿದ್ದುವು. ಈ ಕಲಿ ಗಾಲದಲ್ಲಿ ದೇವರು ಇಂಜನಿಯರುಗಳಿಗೆ ಕಂಟ್ರಾಕ್ಟರುಗಳ ರೂಪದಲ್ಲೂ, ಕಂಟ್ರಾಕ್ಟರುಗಳಿಗೆ ಕಾಂಕ್ರೀಟಿನ ರೂಪದಲ್ಲೂ, ಡಾಕ್ಟರುಗಳಿಗೆ ಖಾಯಿಲೆಗಳ ರೂಪದಲ್ಲೂ, ರಾಜಕಾರಣಿಗಳಿಗೆ ಜನಬೆಂಬಲದ ರೂಪದಲ್ಲೂ ದೊರೆತು ಇಷ್ಟಾ

ರ್ಥಗಳನ್ನು ನೀಡುತ್ತಾನೆ. ಆದಕಾರಣ ಮೇಲೆ ಹೇಳಿದ ಸರ್ವರೂ ತಮತಮಗೆ ಬೇಕಾದವರನ್ನು ಓಲೈಸಿ ಇಷ್ಟಾರ್ಥಗಳ ಸಿದ್ಧಿ ಪಡೆಯುತ್ತಾರೆ. ಈಚೆಗೆ ಉದ್ಯೋಗಗಳು ವಿರಳವಾಗಿರುವ ಪ್ರಯುಕ್ತ ಇಂಜಿನಿಯರುಗಳೆಲ್ಲ ಕಂಟ್ರಾಕ್ಟರುಗಳಾಗಬೇಕಾದುದು ಸಹಜವು, ಹಾಗೂ ಸರಕಾರದ ಬೆಂಬಲವಿರುವ ಪ್ರಯುಕ್ತ ಅದು ಸುಲಭಸಾಧ್ಯವು. ಆದಕಾರಣ ಇಂಜಿನಿಯರಿಂಗನ್ನು ಅಭ್ಯಸಿಸಿದ ನೀನು ಕಂಟ್ರಾಕ್ಟರನಾಗಬೇಕಾದುದು ಧರ್ಮವು !

"ಎಲೈ ಶಿಷ್ಯಕುಲಕಳಂಕನೇ ! ಈ ಕಾಂಕ್ರೀಟು ವ್ರತಮಹಾತ್ಮೆಯನ್ನು ಯಾರು ಯಾರಿಗೆ ಮೊದಲು ಹೇಳಿದರೆಂಬುದು ಗತಕಾಲದಲ್ಲಿ ಹೂತುಹೋಗಿದೆ ಯಾದ್ದರಿಂದ ಅರಿಯುವುದು ಅಶಕ್ಯವು. ಅಲ್ಲದೆ ವ್ರತವಂ ಆಚರಿಸೆಂದರೆ ಯಾರು ಯಾರಿಗೆ ಮೊದಲು ಹೇಳಿದರೆಂದು, ಕೇಳಿದರೆಂದು ಕೇಳುವ ನಿನ್ನ ಪ್ರಶ್ನೆಯು ತಲೆಹರಟೆಯ ನಿದರ್ಶನವು ! ಆದರೂ ಗಾಂಪಶಿಷ್ಯೋತ್ತಮನೇ ! ವ್ರತದ ಆಚರಣೆ ಎಂದಿನಿಂದ ಆರಂಭವಾಯಿತೆಂದು ಹೇಳುವೆನು ಕೇಳು. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ಸಿಮೆಂಟೆಂಬುದು ಆವಿಷ್ಕಾರವಾಗಿ ಅನಂತರ ಪರಮಾತ್ಮನು ಕಾಂಕ್ರೀಟಿನ ರೂಪದಲ್ಲಿ ಭಕ್ತ ಕಂಟ್ರಾಕ್ಟುದಾರರ ಉದ್ಧಾರಕ್ಕಾಗಿ ಧರೆಗೈತಂದನು.

"ಇನ್ನು ಕಂಟ್ರಾಕ್ಟರನಾಗುವ ನಿನಗೆ ವ್ರತದ ನಿಯಮಗಳನ್ನು ವಿವರಿಸುವೆನು, ಗಮನವಿಟ್ಟು ಕೇಳು. ಯಾವುದೇ ವ್ರತವನ್ನಾದರೂ ವಿನಾಯಕಪೂಜೆಯಿಂದಾರಂಭಿಸುವುದು ಸೂಕ್ತವು. ನಿನಗೆ ಎ. ಇ. ಯೇ ಗಣಪತಿಯು. ಒಂದು ವೇಳೆ ನಿನ್ನ ಕ್ಷೇತ್ರವು ವಿಶಾಲವಾಗಿದ್ದಲ್ಲಿ ಆಗ ಎ. ಇ. ಯ ಅಧಿಪತಿಯಾದ ಇ. ಇ. ಯನ್ನು ಗಣಪತಿಯೆಂದು ಭಾವಿಸಿ ಪೂಜಿಸತಕ್ಕದ್ದು. ಇದರಿಂದ ಸರ್ವ ವಿಘ್ನಗಳೂ ನಿವಾರಣೆಯಾಗಿ ಅರ್ಥಾತ್ ನಿನ್ನ ಟೆಂಡರ್ ಒಪ್ಪಿಗೆಯಾಗಿ, ಸಕಾಲದಲ್ಲಿ ಬಿಲ್ಲುಗಳು ಪಾಸಾಗಿ ಮುಂದಿನ ವ್ರತಾಚರಣೆಯು ಸುಲಭಸಾಧ್ಯವಾಗುವುದು. ಇನ್ನು ಮುಂದಿನ ನವಗ್ರಹ ಪೂಜಾವಿಧಾನವನ್ನು ಕೇಳು. ಲೋಕೋಪಯೋಗಿ ಇಲಾಖೆಯ ಪ್ರತಿ ಶಾಖೆಯಲ್ಲೂ ಮೇಸ್ತ್ರಿ, ಸೂಪರ್‌ವೈಸರ್, ಜೂನಿಯರ್ ಇಂಜಿನಿಯರ್, ಅಕೌಂಟೆಂಟ್, ಮ್ಯಾನೇಜರ್ ಹಾಗೂ ಗುಮಾಸ್ತರು, ಜವಾನರು ಇತ್ಯಾದಿಯಾಗಿ ಲೋಕವಿಖ್ಯಾತ ನವಗ್ರಹಗಳುಂಟು. ಅವರವರ ಅಂತಸ್ತಿಗೆ, ಮಹಿಮೆಗೆ ತಕ್ಕಂತೆ ಪೂಜೆ ಸಲ್ಲಿಸಬೇಕಾದ್ದು ನಿನ್ನ ಕರ್ತವ್ಯ.

ಅವರವರ ಅಂತಸ್ತಿಗನುಗುಣವಾಗಿ ಪರ್ಸೆಂಟೇಜ್ ಎಂಬ ನೈವೇದ್ಯವನ್ನು ಅರ್ಪಿಸಿ ತೃಪ್ತಿಪಡಿಸಬೇಕು. ಈ ನಿಯಮಗಳನ್ನೆಲ್ಲ ಬಲು ಕಟ್ಟುನಿಟ್ಟಾಗಿ ಅನುಸರಿಸಬೇಕಾದುದು ನಿನ್ನ ಧರ್ಮವು. ಎಲ್ಲಾದರೂ ಲೋಪಉಂಟಾದಲ್ಲಿ ವ್ರತದ ಫಲವು ನಿನಗೆ ನಾನಾ ಕಷ್ಟಗಳನ್ನು ಕೊಡುವುದಲ್ಲದೆ ಒಮ್ಮೊಮ್ಮೆ ಬಂದೀಖಾನೆಯೆಂಬ ನರಕಕ್ಕೂ ನಿನ್ನನ್ನು ರವಾನಿಸುತ್ತದೆ.

"ಇನ್ನು ಕೊನೆಯದಾಗಿ ವ್ರತ ವಿಧಾನಗಳನ್ನು ಕೇಳು. ಮೊದಲನೆಯದಾಗಿ ಯಾವ ಕಾಂಕ್ರೀಟಿನ ಸಲುವಾಗಿ ಲೋಕೋಪಯೋಗಿ ಸ್ಟೋರ್ಸಿನಿಂದ ನಿನಗೆ ಸಿಮೆಂಟ್ ಚೀಲಗಳನ್ನು ಕೊಡುತ್ತಾರೋ, ಅವುಗಳನ್ನು ಮಧ್ಯದಾರಿಯಲ್ಲಿಯೇ ಬಿಚ್ಚಿ ಪ್ರತಿ ಚೀಲದಿಂದ ಕೊಂಚ ಭಾಗವನ್ನು ತೆಗೆದು ಬೇರೆ ಚೀಲಗಳಲ್ಲಿ ತುಂಬಿ ಹೊಲಿಯತಕ್ಕದ್ದು. ಬಹಿರಂಗಪೇಟೆಯಲ್ಲಿ ಹೆಚ್ಚಿನ ದರಕ್ಕೆ ಅವುಗಳನ್ನು ಮಾರಲು ಅನುಕೂಲವಾಗುವುದು. ಎರಡನೆದಾಗಿ ಕಾಂಕ್ರೀಟು ಹಾಕುವ ವೇಳೆಯಲ್ಲಿ ಪ್ರತಿ ಬ್ಯಾಚಿಗೂ ಸಾಧ್ಯವಾದಷ್ಟು ಚೀಲಗಳನ್ನು ಉಳಿಸಿಕೊಳ್ಳಬೇಕಾದುದು ನಿನ್ನ ಕರ್ತವ್ಯವು. ಇದು ನಿನ್ನ ಕೆಲಸವನ್ನು ಪರೀಕ್ಷಿಸುವ ಸೂಪರ್‌ವೈಸರ್ ಅಥವಾ ಜೂನಿಯರ್ ಇಂಜಿನಿಯರ್ ಎಂಬ ದೇವತೆಯ ಅನುಗ್ರಹವನ್ನು ಅವಲಂಬಿಸಿರುತ್ತದೆ ಆದಕಾರಣ ಅವರ ಪ್ರೀತ್ಯರ್ಥವಾಗಿ ಕಾಲ ಕಾಲಕ್ಕೆ ಕಾಫಿ, ಟೀ ಇತ್ಯಾದಿ ಪಾನೀಯಗಳಿಂದ ಅವರನ್ನು ಸುಪ್ರಸನ್ನರಾಗಿ ಮಾಡುವುದು ನ್ಯಾಯವು ಹಾಗೂ ಆದ್ಯ ಕರ್ತವ್ಯವು. ಮರಳಿನಲ್ಲಿ ನೀರಿನಂಶ ಸೇರಿ ಹಸಿ ಇದ್ದಲ್ಲಿ ಅದು ತನ್ನ ಗಾತ್ರವನ್ನು ಹದಿನೈದರಿಂದ ಮೂವತ್ತು ಪರ್ಸೆಂಟ್ ಹೆಚ್ಚಿಸಿಕೊಳ್ಳುತ್ತದೆಂಬುದನ್ನು ತಿಳಿದಿರಬೇಕಾದ ನೀನು ಒಣಮರಳಿಗೆ ಬದಲಾಗಿ ಆದಷ್ಟು ಹಸಿಮರಳನ್ನೇ ಉಪಯೋಗಿಸಬೇಕು. ಏತಕ್ಕೆಂದರೆ ಲಾಭದದೃಷ್ಟಿಯಿಂದ ಅತಿ ಮುಖ್ಯವಲ್ಲದಿದ್ದರೂ ಹನಿಕೂಡಿ ಹಳ್ಳವಾಗುತ್ತದೆಂಬುದನ್ನು ಮರೆಯಬಾರದು.

"ನಿನ್ನ ಕಾರ್ಯವೀಕ್ಷಣೆಗೆ ಬೇಜವಾಬ್ದಾರಿ ದೇವತೆಯು ಇದ್ದಲ್ಲಿ, ಆ ಅನುಕೂಲ ಪ್ರಸಂಗದ ಪೂರ್ಣ ಉಪಯೋಗ ಮಾಡಿಕೊಳ್ಳಬೇಕಾದ್ದು ನಿನ್ನ ಧರ್ಮವು. ಉದಾಹರಣೆಗೆ: ಆರು ಇಂಚು ದಪ್ಪ ಕಾಂಕ್ರೀಟಿನ ತಳಪಾಯ ಹಾಕುವುದಿದ್ದಲ್ಲಿ ತಳದಲ್ಲಿ ಕೇವಲ ಎರಡು ಅಂಗುಲ ಮರಳನ್ನು ಹಾಕಿ ಮೇಲೆ ನಾಲ್ಕು ಇಂಚು ಕಾಂಕ್ರೀಟನ್ನು ಸುರಿದು ನಯವಾಗಿ ತೀಡಿಬಿಡಬೇಕು.

ಭೂತಾಯಿಯು ನಿನ್ನ ಕೈಚಳಕವನ್ನು ತನ್ನಲ್ಲಿಯೇ ಹುದುಗಿಸಿಟ್ಟುಕೊಳ್ಳುವುದರಿಂದ ಅಂಜಬೇಕಾದ ಕಾರಣವಿಲ್ಲವು. ಕೊನೆಯದಾಗಿ ಈ ಮುಂಚೆಯೇ ವಿವರಿಸಿದ ವ್ರತದ ನಿಯಮಗಳಿಗೆ ಭಂಗ ಬರದಂತೆ ನಡೆದುಕೊಂಡಿದ್ದಲ್ಲಿ, ಸಂತುಷ್ಟನಾಗಿರುವ ಸೂಪರ್‌ವೈಸರ್ ಅಥವಾ ಜೂನಿಯರ್ ಇಂಜಿನಿಯರ್ ಯಾರೇ ಆಗಲಿ ಪೂರ್ಣಗೊಂಡಿರುವ ನಿನ್ನ ಕೆಲಸದ ಅಳತೆಗಳನ್ನು ತೆಗೆದುಕೊಳ್ಳುವುದರಲ್ಲಿ ನಿನಗೆ ರಿಯಾಯಿತಿ ದೊರೆಯುವುದರಲ್ಲಿ ಸಂಶಯವಿಲ್ಲವು.

"ಎಲೈ ಮಂಕುಶಿಷ್ಯ ಕುಲತಿಲಕನೇ, ಕಂಟ್ರಾಕ್ಟುದಾರನು ಭಕ್ತಿಯಿಂದ ಓಲೈಸುವ ಅನೇಕಾನೇಕ ವ್ರತಗಳಲ್ಲೊಂದಾದ ಕಾಂಕ್ರೀಟು ವ್ರತವೆಂಬುದರ ಆಚರಣೆಯ ನಿಯಮವಿಧಾನ ಇತ್ಯಾದಿಗಳನ್ನು ಕೂಲಂಕಷವಾಗಿ ವಿವರಿಸಿರುವೆ. ಯಾರು ದೃಢಭಕ್ತಿಯಿಂದಲೂ ನಿಷ್ಠೆಯಿಂದಲೂ ಆಚರಿಸುತ್ತಾರೋ ಅವರ ಕಷ್ಟ ನಿವಾರಣೆಯಾಗಿ ಧನಧಾನ್ಯ ಐಶ್ವರ್ಯಾದಿಗಳಿಂದಲೂ, ಪುತ್ರ ಪೌತ್ರ ಸಂಪದದಿಂದಲೂ ಒಡಗೂಡಿ ಅತ್ಯಾನಂದದಿಂದಿರುತ್ತಾರೆ.

"ಭಕ್ತಿಯಿಂದ ಈ ಕತೆಯನ್ನು ಯಾರು ಓದುವರೋ, ಯಾರು ಕೇಳುವರೋ, ಯಾರು ಪ್ರಚಾರ ಮಾಡುತ್ತಾರೋ ಅವರಿಗೆಲ್ಲ ಪರಮಾತ್ಮನು ಸಕಲ ಇಷ್ಟಾರ್ಥಗಳನ್ನು ನೀಡುವನು !"

ಇತಿ ಲೋಕೋಪಯೋಗಿ ಪುರಾಣೇ ಕಲ್ಲೇಶಿ ಮಹಾಮುನಿ ಸಂವಾದೇ ಕಾಂಕ್ರೀಟು ವ್ರತ ಕಲ್ಪ ಃ ಸಂಪೂರ್ಣ ಃ.

ದೋಣಿ ಹರಿಗೋಲುಗಳಲ್ಲಿ

ಶಿವರಾಮ ಕಾರಂತ

ನೆಲ, ಜಲ, ವಾಯು ಸಂಚಾರಗಳಲ್ಲಿ ಒಂದೊಂದರ ಸೊಗಸು ಒಂದೊಂದಕ್ಕಿದೆ. ಜೀವದ ಹೆದರಿಕೆ ಇರುವವರಿಗೆ ವಾಯು ಸಂಚಾರ ಸ್ವಪ್ನದಲ್ಲೇ ಒಳ್ಳೆಯದು. ಬೆನ್ನೆಲುಬಿನ ಆಸೆಯಿರುವವನಿಗೆ ನಮ್ಮ ಮುರುಕಲು ಮೋಟಾರು ರಸ್ತೆಗಳ ಪ್ರಯಾಣವೂ ಬೇಡ; ರೈಲಿನ ಗುದ್ದಾಟವೂ ಬೇಡ. ಸುಖ ಸಂತೋಷಗಳಿಗೆ ಹೇಳಿಸಿದ್ದು, ಜಲಯಾನ. ನೀವು ಸಪ್ತಸಾಗರಗಳನ್ನೇ ದಾಟಿಹೋಗಿ, ಊರಿನ ಹೊಳೆಯಲ್ಲೇ ತೇಲಿ ಹೋಗಿ, ಬೆನ್ನಿನ ಸೌಖ್ಯಕ್ಕೂ ಅದೇ ಬೇಕು; ಕಣ್ಣಿನ ಸುಖಕ್ಕೂ ಅದೇ ಬೇಕು. ಸಾಗರಯಾನದ ಯೋಗ ಎಷ್ಟು ಮಂದಿಗಿರುತ್ತದೆ? ಆದರೆ ನದಿಯಾನದ ಭೋಗ ನಾವು, ನೀವು ಎಲ್ಲರೂ ಉಣ್ಣಬಹುದಾದುದು. ವರ್ಷಕ್ಕೊಮ್ಮೆ ಸ್ನಾನ ಮಾಡುವವರಿಗೆ ನದಿಯೆಂದರೆ ಹೆದರಿಕೆಯಾದೀತು. ನಿತ್ಯ ಮೊಯುವವರಿಗೆ ನೀರಿನ ಭಯ ಬರಲಾರದಷ್ಟೇ. ಅದರಲ್ಲೇ ತೇಲಿಹೋಗುವ ಸುಖ ನಾವು ಅನುಭವಿಸಬಹುದಾದ ಮಾನವೀ ಸುಖಗಳಲ್ಲಿ ಅತ್ಯುತ್ತಮವಾದುದು.

ನಾನು ಎಳೆಯವನಾಗಿದ್ದಾಗ, ಒಂದು ರಾತ್ರಿ ಕಲ್ಯಾಣಪುರದಲ್ಲಿ ಹೊಳೆಯಲ್ಲಿ ದೋಣಿಯ ಮೇಲೆ ಕುಳಿತುಕೊಂಡೆ. ಬೆಳಗ್ಗೆ ಎದ್ದುದು ನಮ್ಮೂರಿನ ಕಡವು—ಮಣೂರಿನಲ್ಲಿ. ಎಂಟು ಗಂಟೆಗಳಲ್ಲಿ ಹೋದುದು ಹತ್ತೇ ಮೈಲು. ಸಾಮಾನ್ಯ ದೋಣಿಯಲ್ಲಿ ಕುಳಿತರೆ ತಾಸಿಗೆ ಎರಡು ಮೈಲು ಹೋಗಬಹುದು. ಅವಸರವಿದ್ದ ಪ್ರಾಣಿಗೆ ಅದು ಹೇಳಿಸಿದ ಕ್ರಮವಲ್ಲ. ಆತ ತಂತಿಯಲ್ಲೋ, ವಾಯರ್‌ಲೆಸ್ಸಿನಲ್ಲೋ ಪ್ರಯಾಣ ಬೆಳೆಸಬಹುದು. ನಿಮಗೆ ವಿರಾಮವಿದ್ದುದಾದರೆ ನಿಮಿಷ ನಿಮಿಷಕ್ಕೂ ಸುಖ ಉಂಡು, ಹೋಗಬಹುದಾದ ಪಯಣ ದೋಣಿಯದು. ಆ ದಿನ ನಾನು—ದೋಣಿಯಲ್ಲಿ ಚಾಪೆ ಹಾಸಿ, ನಿದ್ದೆ ಬರುವಾಗ ಒರಗುವುದಕ್ಕೆ ದಿಂಬಿಟ್ಟುಕೊಂಡು, ದೋಣಿಯ ಬಾನಿಗೆ ಒರಗಿ, ಕುಳಿತುಕೊಂಡೆ. ಅದು ತೊಳೆ ದೋಣಿಯಲ್ಲ, ಜಲ್ಲೆಯಿಂದ ಒತ್ತುವ ದೋಣಿ.

ಮಾಡು, ಮುಚ್ಚುಮರೆಗಳಿರಲಿಲ್ಲ. ಅದಕ್ಕೇನೆ ರಾತ್ರಿಯ ಪ್ರಯಾಣ ಆರಿಸಿದ್ದು. ನೀಲ ಬಾನಿಗಿಂತ ದೊಡ್ಡ ಮಾಡ್ಯಾವುದು ?—ಒಂದಲ್ಲ, ಎರಡಲ್ಲ ಸಾವಿರಾರು ಚುಕ್ಕೆಗಳು ಮೇಲಿಂದ ಮಿನುಗುತ್ತಿರುತ್ತವೆ. ಸಾಲದುದಕ್ಕೆ—ತಿಂಗಳು ಮಾಮ ಮೂಡಣದಲ್ಲಿ ತಲೆಯೆತ್ತಿ, ಮೇಲಕ್ಕೆ ಬಂದನೇ ಬಂದ. ಅವನ ಬೆಳಕಿನ ನಗು ನದಿಯ ಅಲೆಗಳಲ್ಲಿ ಮಿನುಗತೊಡಗಿತು. ಸಾವಿರ ಜನರು ಒಮ್ಮೆಗೇ ಹಲ್ಲುಕಿರಿದು, ನಿಷ್ಕಪಟವಾಗಿ ನಕ್ಕ ಹಾಗೆ ನದಿಗೆ ನದಿಯೇ ನಗತೊಡಗಿತು. ಆಗ ದೋಣಿ ದಡಬಿಟ್ಟು ಹೊರಟಿತು. ಇಕ್ಕಡೆಯ ತೆಂಗಿನ ತೋಟಗಳು ತೂಕಡಿಸುತ್ತ ನಿದ್ದೆ ಮಾಡುತ್ತ ನಿಂತಿದ್ದವು. ದೋಣಿಯ ಜಲ್ಲು, ನೀರನ್ನು ಹೊಕ್ಕು ಮೇಲೇಳುವಾಗ ಅದರ ಪರಿಯೇ ಬೇರೆ. ಆ ಪುಟ್ಟ ದೋಣಿ ನೀರನ್ನು ಸೀಳಿಕೊಂಡು ಮೀನಿನ ಹಾಗೆ ಓಡುವಾಗ ಅದರ ಲಾಸ್ಯವೇ ಬೇರೆ. ತಂಪಾದ ಹವೆ, ಸೊಂಪಾದ ನೋಟ, ಬಾನು ನೀರುಗಳ ಅನುಪಮ ಮೇಳವಿದು. ಬಾನನ್ನು ನೋಡುತ್ತ ಕುಳಿತರೆ ಒಂದೊಂದೇ ನಕ್ಷತ್ರ ಸಿಡಿದು ಬೀಳುವುದೂ ಕಾಣುತ್ತದೆ. ನಕ್ಷತ್ರವಲ್ಲ, ನ್ಯಾಯವಾಗಿ ಉಲ್ಕೆಗಳು ಆ ವಿಷಯವಾಗಿ ಅಜ್ಜಿಯ ಕತೆ ಬೇರೆಯೇ ಹೇಳುತ್ತದೆ. ಸ್ವರ್ಗವನ್ನೇರಿದ ಆತ್ಮಗಳು ನಕ್ಷತ್ರಗಳಾಗಿದ್ದು ತಮ್ಮ ಪುಣ್ಯ ಖರ್ಚಾಗುತ್ತಲೆ, ಕೆಳಕ್ಕೆ ಬಿದ್ದು ನರಕಕ್ಕೆ ಹೋಗುತ್ತವೆ ಎಂದು. ಆ ಒಂದು ರಾತ್ರಿ ನಾನು ಹತ್ತಿಪ್ಪತ್ತು ಜೀವರುಗಳ ಪುಣ್ಯ ಖರ್ಚಾಗಿ ಅವರು ಭೂಮಿಗೆ ಬಿದ್ದುದನ್ನು ನೋಡಿದೆ. ಆದರೆ ನನ್ನ ಪುಣ್ಯ ಖರ್ಚಾಗಿ ಕಂಡದ್ದು ನಾನು ದೋಣಿಯಿಂದ ಇಳಿಯಬೇಕಾಗಿ ಬಂದಾಗ ಮಾತ್ರ. ನಿದ್ದೆ ಬರಲಿ, ಬಾರದಿರಲಿ, ಮನಸ್ಸಿಗೆ ದೊರೆಯುವ ಜಲಯಾನದ ಶಾಂತಿ ಚಿರಸ್ಮರಣೀಯವಾದದ್ದು. ಇದೆಲ್ಲ ನನ್ನ ಎಳೆತನದ ಊಹೆ ಎಂದಿಟ್ಟುಕೊಂಡಿದ್ದೆ. ನಿಜಕ್ಕೂ ಹಾಗಲ್ಲ.

ಇನ್ನೊಮ್ಮೆ ನಾನು ಬೆಳೆದು ಬುದ್ಧಿ ಬಾರದಿದ್ದರೂ ಮೀಸೆ ಬಂದ ಮೇಲೆ, ಹೊನ್ನಾವರದಿಂದ ಗೇರುಸೊಪ್ಪೆಯ ತನಕ ಹದಿನೆಂಟು ಮೈಲು ದೂರ—ನದಿಯಲ್ಲಿ ಹೋಗಿ ಬಂದಿದ್ದೆ. ಮಧ್ಯಾಹ್ನ ಹೊನ್ನಾವರದ ಬಂದರದಲ್ಲಿ ಮೂರು ಘಂಟೆಯ ಹೊತ್ತಿಗೆ ದೋಣಿಯಲ್ಲಿ ಕುಳಿತೆ. ಹೊನ್ನಾವರದ ಹೊಳೆ ಅಗಲ ತುಂಬಿ ಕಡಲಿನೊಡನೆ ನದಿ ಸಂಗಮವಾಗುವ ಸ್ಥಳ ಅದು. ಅಲೆಗಳ ಹೊಡೆತ ಹೆಚ್ಚು ; ಮೇಲಿನ ಬಿಸಿಲು ಜೋರಾಗಿಯೇ ಇತ್ತು. ಆದರೆ ಒಮ್ಮೆ ದೋಣಿ

ಯಲ್ಲಿ ಕುಳಿತ ಮೇಲೆ ದೋಣಿಯ ಮಾಡಿನ ಒಳಗೆ ಕುಳಿತುಕೊಳ್ಳುವ ಮನಸ್ಸಾಗಲಿಲ್ಲ. ಉಯ್ಯಾಲೆಯ ತೂಗಾಟ ಸುಳ್ಳು, ದೋಣಿಯ ಓಲಾಟ ನಿಜ—ತೇಲಾಡುತ್ತಲೇ ಇತ್ತು ನಮ್ಮ ದೋಣಿ. ಚಿಕ್ಕ ಪುಟ್ಟ ಅಲೆಗಳು ಬಾಣಿಗೆ ಬಡಿಯುತ್ತಲೇ ಇದ್ದವು. ದೋಣಿ ದಡ ಬಿಡುತ್ತಲೇ, ದೋಣಿಯವ ಅದರ ಹಾಯಿ ಬಿಡಿಸಿದ. ಚುಕ್ಕಾಣಿ ಹಿಡಿದು ಭೂಪತಿರಂಗನ ಹಾಗೆ ಅದರ ಹಿಂಗೋಟಿನ ಮೇಲೆ ಹೋಗಿ ಕುಳಿತನು. ದೊಡ್ಡ ದೋಣಿ ಹೊರಟೇ ಬಿಟ್ಟಿತು. ನಮ್ಮೂರ ಜಟಕಾ ಗಾಡಿಯ ವೇಗವನ್ನು ಮೀರಿಸುವ ವೇಗದಲ್ಲಿ ಹೊರಟಿತು; ಹುರುಳಿ ಹಾಕಿದ್ದಿಲ್ಲ, ಪೆಟ್ರೋಲ್ ತುಂಬಿಸಿದ್ದಿಲ್ಲ; ದೋಣಿಯ ರಟ್ಟೆಗೂ ದಣಿವಿಲ್ಲ. ಹಾಯಿ ಬಟ್ಟೆಯ ಹೊಟ್ಟೆಗೆ ಪಡುವಣ ಗಾಳಿ ರುಮು ರುಮು ಬಡಿದಿದ್ದೇ ತಡ. ನೀರನ್ನು ಸೀಳಿಕೊಂಡು ದೋಣಿ ಸಾಗಿಬಿಟ್ಟಿತು. ಆ ನೀರೋ ! ಏನು ಬಣ್ಣ ಬೇಕು ಅದರಲ್ಲಿ. ಕಡು ನೀಲದಿಂದ ಹಿಡಿದು ಕಡು ಹಸುರಿನ ತನಕ ಎಲ್ಲವೂ ಇವೆ. ದಡದ ಗುಡ್ಡ, ತೆಂಗಿನ ತೋಟ, ಬಾನು, ಮುಗಿಲು ಇವೆಲ್ಲವುಗಳ ಬಣ್ಣ ಬೆಡಗುಗಳನ್ನು ನೀರು ಬಿಂಬಿಸುತ್ತಿತ್ತು, ತಾನೂ ಹೊಳೆಯುತ್ತಿತ್ತು. ದಂಡೆಗೆ ಮುಖ ಮಾಡಿದರೆ, ಎರಡೆರಡು ದಂಡೆಗಳು. ನದಿಯ ಇಬ್ಬದಿಗಳಲ್ಲಿ ಒಂದೇ ಕಡೆಯಲ್ಲಿ ಎರಡು ದಂಡೆಗಳು. ಮಗ್ಗುಲ ದಂಡೆ ಹೇಗೂ ಇದೆಯಲ್ಲ. ಅದರ ಕೆಳಗೆ ನೀರಲ್ಲಿ ತಲೆಕೆಳಗಾಗಿ ಕಾಣಿಸುವ ನೆಲ ಗುಡ್ಡ ಗಿಡಮರಗಳ ಸೊಬಗು ಸೃಷ್ಟಿ ಸೌಂದರ್ಯದ ಮುಖಕ್ಕೆ ಕನ್ನಡಿ ಹಿಡಿದ ಹಾಗಿತ್ತು. ಸಂಜೆಯಾದಂತೆ ದೋಣಿ ಸಾಗುತ್ತಲೇ ಇತ್ತು. ತೆಂಗಿನ ತೋಟಗಳನ್ನು, ಹಾದು, ನೀರಿನ ನಡುಗಡ್ಡೆಗಳನ್ನು ಹಿಂದಕ್ಕೆ ಬಿಟ್ಟು ಸಾಗುತ್ತಲೇ ಇತ್ತು. ಮುಂದೆ ಮುಂದೆ ಹೋದಂತೆ ಗುಡ್ಡ ಕಾಡುಗಳ ಸೊಬಗೆಲ್ಲ ಚಿತ್ರಪಟ ಹಿಡಿದ ಹಾಗೆ ಕಣ್ಣೆದುರಿಗೆ ಬರುತ್ತಲೇ ಇದ್ದುವು. ಸಂಜೆಯಾಗುತ್ತ ಬಂದಂತೆ ಸೃಷ್ಟಿಯ ಬಣ್ಣ ಬೇರೆಯಾಯಿತು. ಎಲ್ಲೆಲ್ಲೂ ಹೊಂಬಣ್ಣ ಚೆಂಬಣ್ಣಗಳು. ಮುಳುಗುವ ಸೂರ್ಯನ ಬೆಡಗನ್ನು ನೋಡಬೇಕಾದರೆ ನದಿಯಾನದ ವೇಳೆಯಲ್ಲೇ ನೋಡಬೇಕು. ನಾವು ಗೇರುಸೊಪ್ಪೆಯ ಊರು ಸೇರಿದ್ದು ಕತ್ತಲಾಗುವಾಗ. ಅಲ್ಲಿಂದ ಮುಂದೆ ಹದಿನೆಂಟು ಮೈಲು ನಡೆದು ಜೋಗಿಗೆ ಹೋದೆವು. ಜೋಗಿಯ ಹಾಗೆ ಜಲಪಾತ ಕಂಡೆ, ನೀರು ಬೀಳುವ ನೋಟ ಕಂಡೆ. ಆ ಕಡೆಯ ಜನ ಅದನ್ನು ಗೇರುಸೊಪ್ಪೆಯ

'ಥಬೆ ಥಬೆ' ಎನ್ನುತ್ತಾರೆ. ಗೇರುಸೊಪ್ಪೆಯಲ್ಲಿ ಜಲಪಾತವಾಗುವ ತಾಣ ಕ್ಕಿರುವ ಹೆಸರದು. ಹೆಚ್ಚಿನ ಶಬ್ದ ಕೇಳಿ 'ಥಬ ಥಬಾ' ಅಂದಿರಬೇಕು ಜನ. ಆದರೆ ಗೇರುಸೊಪ್ಪೆ ಊರಲ್ಲೇ ಕುಳಿತರೆ, ನದಿಯ 'ಥಬ ಥಬಾ' ಇಲ್ಲವೇ ಇಲ್ಲ. ಎಷ್ಟು ಪ್ರಶಾಂತ ನದಿಯದು ! ಮರುದಿನ ರಾತ್ರಿ ಅಲ್ಲಿಂದಲೇ ನಾವು ಬೆಳದಿಂಗಳ ಮರು ಪ್ರಯಾಣ ಹೂಡಿದೆವು ಮರಳಿ ಹೊನ್ನಾವರಕ್ಕೆ. ಹಿಂದಿನ ದಿನ ನಾವು ಹಾದು ಹೋದ ದಾರಿಯೇ ಬೇರೆ—ಈ ದಾರಿಯೇ ಬೇರೆ ಎನ್ನು ವಂತಿತ್ತು, ಆ ಒಂದೇ ದಾರಿ. ನದಿಯ ಹಗಲಿನ ಬಣ್ಣ ಬೆಡಗಿಗೂ, ರಾತ್ರಿಯ ಶಾಂತಿ ಸೊಬಗಿಗೂ ಎಷ್ಟು ಅಂತರ ಎನ್ನುತ್ತೀರಿ ! ತಲಾವೊಂದರ ನಾಲ್ಕಾ ರಾಣೆ ಕೊಟ್ಟು, ಎಂಟು ಹತ್ತು ತಾಸಿನ ಸ್ವರ್ಗಸೌಂದರ್ಯ ಕಾಣಲು ಬರುತ್ತದೆ ಅಂದರೆ ನೀವು ನಂಬಲಾರಿರಿ. ಆದರೆ ಗೇರುಸೊಪ್ಪೆಯಿಂದ ಹೊನ್ನಾವರಕ್ಕೆ ಹೋಗಲು ನಾವು ಕೊಟ್ಟದ್ದು ಅಷ್ಟೇ ಹಣ. ಅದಕ್ಕಿಂತ ಹೆಚ್ಚಲ್ಲ. ನಾನು ಮೂವತ್ತು ವರ್ಷಗಳ ಹಿಂದೆ ಪಡೆದ ಆ ಸುಖ ಈಗಲೂ ನೆನವರಿಕೆಯಾಗುತ್ತದೆ.

ಇನ್ನೊಮ್ಮೆ ನಾನು ಎರ್ನಾಕುಳಂನಲ್ಲಿ ಕುಳಿತೆ, ರಾತ್ರಿ ಮೋಟಾರ್ ಲಾಂಚಿನಲ್ಲಿ. ಕತ್ತಲಲ್ಲೇ ಲಾಂಚ್ ಹೊರಟಿತು. ಲಾಂಚಿಗೆ ಮಾಡೂ ಇತ್ತು. ನನ್ನ ಸುತ್ತಲಿನ ಜನ ಹೆಣ ಬಿದ್ದ ಹಾಗೆ ನಾಲ್ಕು ಸುತ್ತಲೂ ಮಲಗಿದ್ದರು. ಬೆಳಗ್ಗೆ ಏಳುವಾಗ ಎಲೆಪ್ಪಿಗೆ ನಾವು ಮುಟ್ಟಿದ್ದೆವು. ರಾತ್ರಿ ಕಂಡದ್ದೇನಿಲ್ಲ—ಸಜೀವ ಹೆಣಗಳ ಸಂತೆಯನ್ನು ಮಾತ್ರ. ಆ ಮುಂದೆ ಮಾತ್ರ, ಮಾಡಿನ ಈ ಕಡೆಗೆ ಬಂದು ಕುಳಿತಾಗ, ಕಿರಿದಾದ ಕಾಲುವೆಯಲ್ಲಿ ಅದು ಸಾಗಿ ಹೋದಾಗ, 'ಮುಂಬಯಿ ದೇಖೋ !.....ಮದ್ರಾಸ್ ದೇಖೋ' ಎನ್ನುತ್ತಾರಲ್ಲ—ಅಂಥಾ ನೋಟ ಹೆಜ್ಜೆ ಹೆಜ್ಜೆಗೂ ಕಾಣಿಸಿತು. ನಮ್ಮ ಮುಂದೆ—ಹಿಂದೆ, ಎದುರು—ಬದುರು ಎಷ್ಟು ದೋಣಿಗಳು ! ಗಾಳ ಹಾಕುವವರು, ಮೀನು ಹಿಡಿಯುವವರು, ಎಲ್ಲರೂ ದೋಣಿಯಲ್ಲೇ ಸಂಚರಿಸುತ್ತಿದ್ದರು.

ಬೇರೊಮ್ಮೆ ವಂಡ್ಸೆ ಎಂಬ ಊರಿಂದ ಕುಂದಾಪುರಕ್ಕೆ ದೋಣಿಯಲ್ಲಿ ಹೋಗಿದ್ದೆ. ಪುಟ್ಟ ದೋಣಿ, ಹತ್ತೆಂಟು ಜೀವಗಳು ಒಳಗೆ. ಬೆಳಗಾದ ಮೇಲೆಯೇ ಹೊರಟದ್ದು. ಉಬ್ಬಿದ ನದಿಯ ಕಾವಿ ಬಣ್ಣದ ನೀರಿನ

ಮೇಲೆಯೇ ನಮ್ಮ ಯಾನ. ತುಸು ದೂರ ಹೋಗುತ್ತಲೇ ಮುಗಿಲು ಕವಿಯಿತು. ಗುಡುಗು ಮಿಂಚು ಹೊಳೆಯಿತು. ಶಾಂತವಾಗಿದ್ದ ನದಿಯಲ್ಲಿ ಗಾಳಿಯು ಸಮುದ್ರದ ಕಲ್ಲೋಲವನ್ನು ಎಬ್ಬಿಸಿ ಬಿಟ್ಟಿತು. 'ಹೊಳೆಯಿಳಿದ ವಗೆ ಚಳಿಯೇನು ?' ಎಂಬ ಗಾದೆಯಿದೆ ನಮ್ಮೂರಲ್ಲಿ. ಈ ಚಳಿಗೆ ನಾವು ಬಟ್ಟೆ ಹೊದ್ದರೂ ಅಷ್ಟೇ, ಬಿಟ್ಟರೂ ಅಷ್ಟೆ. ನಮ್ಮೊ ದೋಣಿ ಹೋಗುತ್ತಲೇ ಇತ್ತು. ನಾವು ಆ ದಿನ ಮಾಡಿದ ಸ್ನಾನವು ಒಂದು ತಿಂಗಳಿಗೆ ಸಾಕಾಗುವಷ್ಟಾಯಿತು. ಆದರೆ ಕಂಡ ನದಿಯ ರೌದ್ರ ಸೌಂದರ್ಯವು ಅಷ್ಟೇ ಸ್ಮರಣೀಯವಾಗಿತ್ತು.

ಚಿಕ್ಕ ಮರದ ಪಾತ್ರೆಗೆ ದೋಣಿ ಎಂದು ನಾಮಕರಣ. ನಾಲಗೆ ತಿರುಗದವರು 'ಡೋಣಿ' ಎನ್ನುವುದೂ ಉಂಟು. ಆದರೆ ಈ ಪಾತ್ರೆ ದೊಡ್ಡದಾದಂತೆ ಬೇರೆ ಹೆಸರಿದೆ! ಸಣ್ಣದಾದರೆ ಬೇರೆ ಹೆಸರು. ಸಣ್ಣದು 'ಪಾತಿ' ಎನ್ನಿಸಿಕೊಳ್ಳುತ್ತದೆ—ಒಮ್ಮೆ ಭಟ್ಕಳದ ಕಡಲು ತೀರದ ಗುಡ್ಡಕ್ಕೆ ಹೋಗಿ ನಿಂತಾಗ, ಎದುರಿನ ಆಖಾತದಲ್ಲಿ, ಆ ನೀಲ ಕಡಲಿನಲ್ಲಿ ಒಬ್ಬೊಬ್ಬನೇ ಕುಳಿತಿರುವಷ್ಟು ದೊಡ್ಡ ಚಿಕ್ಕ ಪಾತಿಗಳಲ್ಲಿ ಬೆಸ್ತರು ಚಿಂತೆಯಿಲ್ಲದೆ ಕುಳಿತು ಗಾಳ ಹಾಕಿ ಮೀನು ಹಿಡಿಯುತ್ತಿದ್ದರು. ಆದರೆ ಅದರಲ್ಲಿ ಕುಳಿತು ಯಾನ ಮಾಡುವುದಕ್ಕೆ ಸಾಕಷ್ಟು ಜೀವ ವಿಮೆ ಮಾಡಲಿಲ್ಲ, ಎಂದು ನಾನಂತೂ ಸಾಹಸ ಪಡಲಿಲ್ಲ. ದೋಣಿ ದೊಡ್ಡದಾದರೂ ಕೆಲವು ಸಾರಿ ಇನ್ಶೂರೆನ್ಸ್ ಅಗತ್ಯವಾಗುವುದುಂಟು. ಬೆನ್ನು ನೋವಿಗಲ್ಲ ಎದೆಯ ಪುಕ್ಕಿಗೆ, ಸಾವಿನ ಬೆದರಿಕೆಗೆ. ಸತ್ತ ಮೇಲೆ ಸ್ವರ್ಗಕ್ಕೆ ಹೋದರೆ, ಅಲ್ಲಿಯೂ ನದಿಯಿದೆ, ದೋಣಿಗಳಿವೆ ಎಂದು ಯಾರಾದರೂ ಗ್ಯಾರಂಟಿ ಕೊಟ್ಟರೆ ಆಗ ಎಂಥ ದೋಣಿಯನ್ನೂ ಏರುವ ಮನಸಾದೀತು.

ಮಾತಿನ ಎಡೆಯಲ್ಲಿ ನಾನು ಎಲ್ಲಿಂದ ಎಲ್ಲಿಗೋ ಬಂದೆ. ಚುಕ್ಕಾಣಿ ಇಲ್ಲದ ದೋಣಿಯ ಅವಸ್ಥೆಯೇ ಹೀಗೆ. ನೀರು ಹರಿದ ಹಾಗೆ ಅದೂ ಹೋಗುತ್ತದೆ. ದೋಣಿ ದೊಡ್ಡದಾದರೆ ಓಡ ಎನ್ನುತ್ತಾರೆ. ಮತ್ತೂ ದೊಡ್ಡದಾದರೆ ಮಂಜಿ, ಪತ್ತೆಮಾರಿ, ಪಡ, ನಗ, ಮಚ್ಚೆ ಎಂದೇನೇನೊ ಹೆಸರಿನಿಂದ ಕರೆಯುತ್ತಾರೆ. ಎರಡು, ಮೂರು, ನಾಲ್ಕು ಹಾಯಿಗಳನ್ನು ಕಟ್ಟುವಂತಹ ಕಡಲು ಹಾಯುವ ದೋಣಿಗಳೂ ಇವೆ.

ಒಮ್ಮೆ ಗಂಗೊಳ್ಳಿ ಬಂದರಿನಲ್ಲಿ ಕುಳಿತು ಅಳವೆಯಿಂದ ಇಂಥ ಒಂದು ಮಚ್ಚೆಯ ಮೇಲೆ ಎರಡು ಮೈಲು ದೂರ ಕಡಲಿನೊಳಗೆ ಹೋಗಿದ್ದೆ— ಸುಮ್ಮನೆ ತಮಾಷೆ ನೋಡುವುದಕ್ಕೆ. ಬಿಸಿಲೋ ತುಂಬ! ಹೊರಟಿದ್ದೂ ನಡು ಮಧ್ಯಾಹ್ನಕ್ಕೆ, ಕಡಲಿನ ಸೌಂದರ್ಯವನ್ನು ಆದಷ್ಟು ಹೆಚ್ಚಿಗೆ ನೋಡ ಬೇಕೆಂದು. ಮಚ್ಚೆ ದಡ ಬಿಟ್ಟಿತು. ಹಾಗೆ ಕಡಲು ಸೇರುವ ಅಳವೆಯನ್ನು ಹೊಕ್ಕಿತು. ಆಗಲೇ ತಳಮಳ ಹೆಚ್ಚಿತು. ಆಳೆತ್ತರದ ಕಡಲಿನಲೆಗಳು ಉಕ್ಕು ವಾಗ ನಮ್ಮ ದೋಣಿ ಸಹ ಅಷ್ಟೇ ಮೇಲೆ ಕೆಳಗೆ ಆಗುತ್ತವೆ. ಯಾವ ಯಾವ ಕೋಣಾಕೃತಿಯಲ್ಲಿ ಬೇಕಾದರೂ ಚಲಿಸುತ್ತದೆ. ಮೊದಲಿನ ಒಂದು ಮೈಲು ಹೋಗುವುದರೊಳಗೆ ನಮ್ಮಲ್ಲಿ ಹಲವರ ಹೊಟ್ಟೆಯಲ್ಲೂ ಅಷ್ಟೇ ತಳಮಳ ವಾಗುತ್ತಿತ್ತು. ತಿಂದದ್ದನ್ನೆಲ್ಲ ಕಾರಿದವರೆಷ್ಟೋ ಮಂದಿ. ನಾನಂತೂ ನನ್ನ ಎತ್ತರದ ಪೀಠದ ಮೇಲೆ ಗಟ್ಟಿಯಾಗಿ ಕುಳಿತು, ಆಚೀಚಿನ ಮರ ಹಿಡಿದು ನೋಡುತ್ತಾ ಕುಳಿತಿದ್ದೆ. ಹಾಯಿ ಬಿಡಿಸಿದ್ದರು. ದೋಣಿ ಎಂಥ ಎತ್ತರದ ಅಲೆಗಳನ್ನೂ ಗಾಳಿಯ ಒತ್ತಡಕ್ಕೆ ಜಿಗಿದು ಹೋಗುತ್ತಿದ್ದ ನೋಟ ಅದ್ಭುತ ವಾಗಿತ್ತು. ಕಡಲಿನ ಅಲೆಗಳ ರೂಢಿಯಿಲ್ಲದವರಿಗೆ ಇದು ಕಷ್ಟವಾದೀತು. ಆದರೆ ನೋಟದ ಸುಖ ನೆನೆಸಿಕೊಂಡರೆ ಇಂಥ ಕಡಲ ಯಾನ ವಿಚಿತ್ರ ಅನು ಭವ ತಂದು ಕೊಡುತ್ತದೆ. ನಮ್ಮ ದೋಣಿಯೊಟ್ಟಿಗೆ ನೀರಲ್ಲಿ ಜಿಗಿದು ಜಿಗಿದು ಸ್ಪರ್ಧೆ ನಡೆಸುವ ಹಲವು ಜಾತಿಯ ಮೀನುಗಳನ್ನು ಕಾಣಬಹುದು. ಮೀನನ್ನು ಕಂಡೇ ಮೊದಲಿನ ಮನುಷ್ಯ ದೋಣಿ ಮಾಡಿದ್ದು ಅನ್ನುತ್ತಾರೆ.

ಕಾಶೀಯಾತ್ರೆ ಮಾಡುವವನು ದೋಣಿಯ ಸುಖ ಅನುಭವಿಸಬಹುದು. ಗಂಗೆಯ ತಡಿಯಲ್ಲಿ ಹತ್ತಾರು ಸ್ನಾನ ಘಟ್ಟಗಳಿವೆ. ಅವು ಒಂದೊಂದನ್ನೂ ನಡೆದು ಸಂಚರಿಸಿ ನೋಡುವುದು ತುಂಬಾ ಕಷ್ಟದ ಕೆಲಸ. ಕಣ್ಣಿಗೂ ಸುಖವಿಲ್ಲ. ಅದರ ಬದಲು, ದೋಣಿಯೊಂದರ ಮೇಲೆ ಒಂದು ತುದಿಯಲ್ಲಿ ಕುಳಿತು ಅಂಥ ನದಿಯಾನ ಮಾಡಿದರೆ ಆ ಪ್ರಾಚೀನ ನಗರದ ಸೊಬಗೆಲ್ಲ ಒಂದೊಂದಾಗಿ ಕಾಣಿಸುತ್ತದೆ. ನದೀ ದಂಡೆಯಲ್ಲಿನ ಸೋಪಾನಗಳು, ಉನ್ನತವಾದ ಸೌಧಗಳು, ನೀರಲ್ಲಿ ಮುಳುಗಿ ಮೀಯುವ ಸಾವಿರಾರು ಯಾತ್ರಿಕರು, ದಂಡೆಯಲ್ಲಿ ಕುಳಿತು ಆ ಗದ್ದಲದಲ್ಲೂ ಶಾಂತಿಯಿದೆ ಎಂದು ತಿಳಿದು ತಪಸ್ಸು ಮಾಡುತ್ತಿರುವ ಗಡ್ಡದ ಭಾವಾಜಿಗಳು—ಒಂದೊಂದೇ

ನೋಟ ಸಿಗುತ್ತದೆ. ಹಾಗೆಯೇ ಮುಂದೆ ಸಾಗಿ ಹೋದರೆ—ಮಣಿಕರ್ಣಿಕೆ ಯಲ್ಲಿ ನೀರಿನಲ್ಲಿ ಮುಳುಗಿ ಸಿಕ್ಕ ಚಟ್ಟಗಳನ್ನೂ, ಬೆಂಕಿ ನುಂಗುತ್ತಿರುವ ಚಿತೆ ಗಳನ್ನೂ ಕಾಣಬಹುದು. ನಾವು ಒಬ್ಬರೇ ಹೀಗೆ ಹೋಗುವವರಲ್ಲ. ಹಿಂದೆ ಮುಂದೆ ದೋಣಿಗಳು ಹೋಗುತ್ತಲೇ ಇರುತ್ತವೆ. ಅದರಲ್ಲಿ ಕುಳಿತು ತಾಳ ಹಾಕಿ ಭಜನೆ ಮಾಡುತ್ತಿರುವ ಯಾತ್ರಿಕರೂ ಇದ್ದಾರೆ. ಜಲ ಯಾನಕ್ಕೂ ಸಂಗೀತಕ್ಕೂ ಅನ್ಯೋನ್ಯವಾದ ಮೇಳವಿದೆ. ನದಿಯ ಮೇಲೆ ದೋಣಿ ಲಘು ವಾಗಿ ತೇಲಿದ ಹಾಗೆ, ನೀರ ಮೇಲೆ ಹೋಗುವ ನಮ್ಮ ಮನಸ್ಸು ಪ್ರಾಸಂಚಿಕ ಕಷ್ಟಗಳನ್ನು ಮರೆತು ಲಘುವಾಗಿ ತೇಲಿಹೋಗುತ್ತದೆ. ಇಷ್ಟೆಲ್ಲ ಹೊತ್ತು ದೋಣಿಯ ಮಾತನ್ನು ಹೇಳಿದೆ. ಮರ ಇರುವ ಊರಿನಲ್ಲಿ ನದಿಗಳಿದ್ದರೆ ದೋಣಿ ಇಲ್ಲದೆ ಹೋದರೆ—ಅಂಥವರ ಪಾಲಿಗೆ ಹರಿಗೋಲು. ಯಾಕೆ ಆ ಹೆಸರು ಬಂತೊ ನನಗೆ ಗೊತ್ತಾಗದು. ಮೂಲದಲ್ಲಿ ಅದು "ಹರಿಗೋಲು" ಅಥವಾ—ಹರಿಯೇ, ಇದನ್ನು ಸಾಗಿಸುವ ಬದಲು ಕೊಲ್ಲು ಎಂದಿದ್ದಿರ ಬಹುದೆ ? ಹತ್ತೆಂಟು ಮಂದಿ ಕುಳಿತುಕೊಳ್ಳಬಹುದಾದ ಉರುಟಾದ ಬೆತ್ತದ ಬುಟ್ಟಿಯನ್ನು ಮಾಡಿ ಅದಕ್ಕೆ ಹೊರ ಮಗ್ಗುಲಿಗೆ ಚರ್ಮ ಹೊದಿಸಿ ಇಂಥ ಹರಿಗೋಲು ಮಾಡುತ್ತಾರೆ. ಇದು ಹರಿಯುವ 'ಕೋಲು' ಅಲ್ಲ ಪ್ರಾಯಶಃ ಗೋಳು ಇರಬಹುದು. ಒಮ್ಮೆ ಹಂಪೆಗೆ ಹೋದ ನಾನು, ತುಂಬಿದ ತುಂಗ ಭದ್ರಾನದಿಯನ್ನು ದಾಟಿ ಆನೆಗುಂದಿಗೆ ಹೋಗುವುದಕ್ಕೆ ಇಂಥ ಹರಿಗೋಲಿ ನಲ್ಲಿ ಕುಳಿತೆ. ಅಪಾಯವೇನಿಲ್ಲ. ಒಳಗೆ ಹಿಡಿದಷ್ಟು ಜನ ತುಂಬಿಸುತ್ತಾರೆ. ಆ ಚರ್ಮಕ್ಕೆ ತೂತು ಬಿದ್ದರೆ ಒಳಕ್ಕೆ ನೀರು ಬಂದೀತೇ ?.....ಎಂಬ ಅನು ಮಾನ ಬರಬಹುದು. ಅದು ಜೀವನ ಪಾತ್ರೆ. ನಾವೂ ಜೀವನ ಪಾತ್ರೆಗಳೇ. ನಮಗೆ ತೂತು ಬಿದ್ದರೆ ಒಳಗಿನ ನೀರು ಹೊರಗೆ ಹರಿಯುತ್ತದೆ. ಅದಕ್ಕೆ ತೂತು ಬಿದ್ದರೆ ಹೊರಗಿನ ನೀರು ಒಳಕ್ಕೆ ಬರುತ್ತದೆ. ಅದರಲ್ಲಿ ಕುಳಿತು ಹೋಗುವಾಗ ದಿಕ್ಕಿನ ಮೇಲೆ ಹತೋಟಿ ಕಡಿಮೆ. ಆದರೂ ಒಂದು ಬಸ್ಸಿ ನಲ್ಲಿ ಕುಳಿತ ಹಾಗೆ, ಜನರು ಜಗಳ ಮಾಡಬೇಕಿಲ್ಲ. ಮುಂದಿನ ಸೀಟು ಹಿಂದಣ ಸೀಟು ಎಡ–ಬಲ ಎಂಬ ತಕರಾರೇ ಅಲ್ಲಿಲ್ಲ. ಹರಿಗೋಲು ಈ ದಂಡೆಯನ್ನು ಬಿಟ್ಟು, ಆ ದಂಡೆ ಮುಟ್ಟುವುದರೊಳಗೆ ಪ್ರತಿಯೊಂದು ಕಡೆಗೂ ತಿರುಗಿ, ಪ್ರತಿಯೊಂದು ದಿಕ್ಕೂ ಎಂಟೆಂಟು ಸಾರಿ ನೋಡಲು ಸಿಗುತ್ತದೆ. ಅಂದರೆ

ನೀರಿನ ಅಮಲು ದೋಣಿಗೂ ಬಂದು ಬಿಡುತ್ತದೆ. ದಡ ಬಿಟ್ಟರೆ ಅದಕ್ಕೆ ತಲೆತಿರುಗಲು ಆರಂಭ. ದೋಣಿಕಾರ ತೊಳೆ ಹಾಕಲು ತೊಡಗಿದಂತೆ, ಉರುಟಾದ ಆ ಬುಟ್ಟಿ ಮೆಲ್ಲಗೆ ತಿರುಗಲು ತೊಡಗುತ್ತದೆ. ನೀರನ್ನು ಸೀಳಿಕೊಂಡು ಹೋಗುವ ಆಕಾರ ಇಲ್ಲದ್ದಕ್ಕೆ, ಅದು ಪ್ರವಾಹದೊಡನೆ ತೇಲಿಹೋಗುತ್ತದೆ ಈ ಕಡೆಯಿಂದ ಆ ಕಡೆಗೆ ಲಂಬವಾಗಿ ಹೋಗಬೇಕು, ನೆಟ್ಟಗೆ ಹೋಗಬೇಕು —ಅನ್ನುವವನಿಗೆ ಹರಿಗೋಲು ಹೇಳಿದ್ದಲ್ಲ. "ಹೋದರೆ ಸಾಕು, ಈಚೆಯಿಂದ ಆಚೆಗೆ"—ಎನ್ನುವ ತಾಳ್ಮೆ ಇರಬೇಕು. ನದಿಯ ಪ್ರವಾಹ ಕಂಡು, ಗುರಿಯಿಂದ ಗುರಿಗೆ ನೆಟ್ಟಗೆ ಎದುರಾಗಿ ಹೋಗುವ ಬದಲು ದಂಡೆಯಿಂದ ಎಷ್ಟೋ ಮೇಲಕ್ಕೆ ತೆಗೆದುಕೊಂಡು ಹೋಗಿ ಹರಿಗೋಲನ್ನು ತೇಲಿಸಿಬಿಟ್ಟರೆ, ಹೆಚ್ಚು ಕಡಿಮೆ ಒಂದಲ್ಲ ಒಂದು ದಿನ ನಾವು ಗುರಿ ಮುಟ್ಟುತ್ತೇವೆ. ಹೋಗಿ ಆಚೆ ದಂಡೆಯನ್ನು ಸೇರುವಾಗ ಇಳಿದ ವ್ಯಕ್ತಿಯೊಡನೆ ಉತ್ತರ, ದಕ್ಷಿಣ ಪೂರ್ವ, ಪಶ್ಚಿಮ ತೋರಿಸೆಂದು ಯಾರಾದರೂ ಕೇಳಿದರೆ, ಆತ ಮೇಲೆ ಕೆಳಗೆ ನೋಡುವನೇ ಹೊರತು ಸರಿಯಾದ ದಿಕ್ಕನ್ನು ಹೇಳಲಾರ. ಆ ಮಾತಂತಿರಲಿ. ನೀನು ಹೊರಟ ದಂಡೆ ಯಾವುದು? ಎಂದು ಕೇಳಿದರೂ ಪ್ರಶ್ನೆ ಅಷ್ಟೇ ಕಷ್ಟದ್ದು.

ಸಂಸಾರ ಸುಖವನ್ನೆಣಿಸಿ, ನೋಡಿ, ತೂಕಮಾಡಿ ಅನುಭವಿಸಬೇಕು, ಅನ್ನುವವನಿಗೆ ಹೇಳಿಸಿದ್ದು ದೋಣಿಯ ಯಾನ. ಭವಸಾಗರದಲ್ಲಿ ಹೇಗೂ ತೇಲಿದರಾಯಿತು—ಎನ್ನುವವನಿಗೆ ಹೇಳಿಸಿದ್ದು ಹರಿಗೋಲಿನ ಯಾನ. ದೋಣಿ ಹರಿಗೋಲುಗಳ ಯಾನದ ಕಷ್ಟ ಆಯಾಸಗಳೆಷ್ಟೇ ಇರಲಿ—ಗಾಡಿಯಲ್ಲಿ ಕಚ್ಚಾ ರಸ್ತೆಯಲ್ಲಿ ಪ್ರಯಾಣ ಮಾಡುವುದು, ಬೇಗ ಮುಟ್ಟುತ್ತೇವೆಂದು ಮೋಟರಲ್ಲಿ ಕುಳಿತು, ಮೋಟರು ಕೆಟ್ಟು ಹಾದಿಯಲ್ಲಿ ಒಣಗುವುದು, ಇವೆರಡಕ್ಕಿಂತಲೂ ದೋಣಿ ಹರಿಗೋಲುಗಳು ಎಂದೆಂದೂ ವಾಸಿ.

ಪರೀಕ್ಷೆಯ ಕಾಲ

ಎಸ್. ಮಂಜನಾಥ್

ಜನವರಿ ಮುಗಿದು ಫೆಬ್ರವರಿ ತಿಂಗಳು ಆರಂಭವಾಯಿತೆಂದರೆ ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಗ್ರಹಸ್ಥಿತಿಗಳು ಕ್ರೂರವಾಗುತ್ತವೆ ಎನ್ನುವುದು ಸರ್ವಜನರಿಗೂ ತಿಳಿದ ವಿಷಯವೇ ಆಗಿದೆ. ವಿದ್ಯಾರ್ಥಿಗಳ ವಿಚಾರ ಎಲ್ಲರಿಗೂ ವೇದ್ಯವಾಗಿದೆ, ಆಗುತ್ತದೆ. ಆದರೆ ಉಪಾಧ್ಯಾಯರ ಮನಸ್ಸು ಹೇಗಿರುತ್ತದೆ ಎಂದು ತಿಳಿಯುವವರಾಗಲಿ ತಿಳಿಯಬಯಸುವವರಾಗಲಿ ಅಪೂರ್ವ. ಉಪಾಧ್ಯಾಯರಿಗೆ ಸಹಾನುಭೂತಿ ದೊರೆಯುವುದು ಮರಳುಕಾಡಿನಲ್ಲಿ ತಿಳಿನೀರಿನ ಓಯೆಸಿಸ್ಸುಗಳು ಸಿಕ್ಕುವಂತೆ; ಅನೇಕವೇಳೆ ಓಯೆಸಿಸ್ಸುಗಳು ಇರುವಂತೆ ತೋರಿಸಿ ವೃಥಾ ಆಸೆಯನ್ನು ಹುಟ್ಟಿಸಿ ಪ್ರಯಾಣಿಕನ ಹೃದಯವನ್ನು ಮುರಿಯುವಂತೆ ವೇದಿಕೆಯ ಮೇಲೆ ನಿಂತು ಉಪಾಧ್ಯಾಯರ ವೃತ್ತಿಯನ್ನೂ ಅವರ ಬಡತನವನ್ನೂ ಹೊಗಳುವವರ ಸಹಾನುಭೂತಿ ಒಣಕಲಾದದ್ದು, ನಿರ್ದಯವಾದದ್ದು. ವಿವೇಕಶಾಲಿಗಳೂ, ಬುದ್ಧಿವಂತರೂ ಆದ ವಿದ್ಯಾರ್ಥಿಗಳ ಹಿರಿಯರು ಹುಡುಗನನ್ನು ಅವನು ಹುಟ್ಟಿದ ವೇಳೆಯನ್ನು ಆಗಿದ್ದ ಗ್ರಹಸಂಪತ್ತಿಯನ್ನು ಹೊಗಳುವವರೇ ಹೊರತು ಉಪಾಧ್ಯಾಯನನ್ನು ಸ್ಮರಿಸುವುದಿಲ್ಲ. ಹಾಗೆ ಸ್ಮರಿಸಿ ನಾಣ್ ನುಡಿಯನ್ನು ಅಸತ್ಯಮಾಡುವ ಅವಿವೇಕ ನಮ್ಮ ಜನಕ್ಕಿಲ್ಲ 'ಉಪಾಧ್ಯಾಯಾಶ್ಚ ವೈದ್ಯಾಶ್ಚ ಕಾರ್ಯಾಂತೇ ಅಪ್ರಯೋಜಕಾಃ' ಎಂದು ಪೂರ್ವಿಕರು ಹೇಳಿರುವ ಮಾತನ್ನು ಅಲಕ್ಷ್ಯ ಮಾಡುವುದು ಹೇಗೆ ? ಹಾಗೆ ಮಾಡುವವರು ಪೂರ್ವಿಕರನ್ನು ಗೌರವಿಸಿದಂತಾಗುವುದೇ ? ಹಾಗೆ ಮಾಡುವುದಾದರೂ ಮನುಷ್ಯ ಸ್ವಭಾವಕ್ಕೆ ಸಹಜವಾದುದೇ ಆದರೆ ಹುಡುಗನು ಅವಿವೇಕಿಯಾದರೆ, ಪರೀಕ್ಷೆಯಲ್ಲಿ ತೇರ್ಗಡೆ ಹೊಂದದಿದ್ದರೆ, ಪರೀಕ್ಷೆಯ ಕಾಲದಲ್ಲಿ ಶ್ರದ್ಧೆಯಿಂದ ಓದದಿದ್ದರೆ ಪ್ರತಿಯೊಂದು ಮನೆಯಲ್ಲಿಯೂ ನಡೆಯುವ ಪಾರಾಯಣವೆಂದರೆ ಉಪಾಧ್ಯಾಯರ ದೂಷಣೆ. ಪರೀಕ್ಷೆಯ ಕಾಲ ಬಂದಿತೆಂದರೆ ಉಪಾಧ್ಯಾಯರು ಮನೆಯಲ್ಲಿರಲಿ, ಮಠಕ್ಕೆ

ಹೋಗಲಿ, ಪೇಟೆಗೆ ಹೋಗಲಿ, ಸಿನಿಮಾಮಂದಿರಕ್ಕೆ ಹೋಗಲಿ ಎಲ್ಲಿ ಹೋದರೂ ಯಾರನ್ನು ಕಂಡರೂ ಅವರ ಕಿವಿಗೆ ಬೀಳುವುದು ಒಂದೇ ಪ್ರಶ್ನೆ: ಏನು ಸ್ವಾಮಿ, ಈ ಕೇಡುಂಟೇ ? ಈ ಪುಸ್ತಕದಲ್ಲಿ ಇದನ್ನು ಮಾಡಿಲ್ಲವಂತೆ, ಆ ಪುಸ್ತಕದಲ್ಲಿ ಅದನ್ನು ಮಾಡಿಲ್ಲವಂತೆ, ಇತ್ಯಾದಿ, ಇತ್ಯಾದಿ. ಮನೆಯಲ್ಲಿದ್ದರೂ ಪ್ರಯತ್ನಪೂರ್ವಕವಾಗಿ ಹುಡುಕಿಕೊಂಡು ಬಂದು, ಉಪಾಧ್ಯಾಯರ ಮನೆ ಕಾಫಿಯನ್ನು ಕುಡಿದು ಅವರನ್ನೇ ದೂಷಿಸಿ ಹೋಗುವರು ಜನ. ಅಥವಾ ಇನ್ನೂ ಒಂದು ಬಗೆಯುಂಟು. ಉಪಾಧ್ಯಾಯರನ್ನೂ ಇತರ ಬಂಧುಮಿತ್ರವರ್ಗವನ್ನೂ ಮನೆಯಲ್ಲಿ ನಡೆಯುವ ಉತ್ಸವದ ಸಲುವಾಗಿ ಊಟಕ್ಕೆ ಕರೆದು ಎಲೆಯಲ್ಲಿ ಸಿಹಿಯಾದ ಭಕ್ಷ್ಯಗಳನ್ನು ಬಡಿಸುವುದು, ದೊನ್ನೆಯಲ್ಲಿ ಬಾದಾಮಿ ಹಾಲು, ಶ್ಯಾಮಿಗೆ ಪಾಯಸ, ಕೀರು ಮುಂತಾದ ರುಚಿಯಾದ ಆಹಾರ ವಸ್ತುಗಳನ್ನು ಬಡಿಸುವುದು, ಮಾತಿಂದ ಮಾತಿಗೆ ಹಾರಿ ಉಪಾಧ್ಯಾಯ ಕುಲವನ್ನೇ ಶಪಿಸುವುದು. ಈ ಘನವಾದ ಕೆಲಸದಲ್ಲಿ ಮಾನ್ಯ ಅತಿಥಿಗಳೂ ಸೇರುವರು. ಸಿಹಿ ತಿಂದ, ತಿನ್ನುತ್ತಿರುವ, ನಾಲಗೆ ಎಂಥ ಕಟುವಾದ ಮಾತುಗಳನ್ನು ಹೇಳಬಲ್ಲದು ಎನ್ನುವುದನ್ನು ಆಗ ನೋಡಬೇಕು. ಇದು ಉಪಾಧ್ಯಾಯರ ಅಪೂರ್ವಪುಣ್ಯ. ಹಾಗಾದರೆ ಉಪಾಧ್ಯಾಯರು ಏನು ಮಾಡಬೇಕು ? ಏನು ಮಾಡುತ್ತಿದ್ದಾರೆ ? ಎಂದು ನೀವು ಕೇಳಬಹುದು. ಊಟಕ್ಕೆ ಹೋದೆಡೆಯಲ್ಲಿ ಈ ಉಪಚಾರಕ್ಕೆ ಆರಂಭವಾದ ಕೂಡಲೇ ಭಕ್ಷ್ಯಭೋಜ್ಯಗಳನ್ನು ನುಂಗುವ ಬದಲು ಒಣಗಿಹೋಗುವ, ಶೂಲನೆಟ್ಟಿರುವಂತಿರುವ ಗಂಟಲಲ್ಲಿ ಹೋಗಲಾರದ ಉಗುಳನ್ನು ನುಂಗುವರು. 'ಅವಶ್ಯಮನುಭೋಕ್ತವ್ಯಂ ಉಪಾಧ್ಯಾಯಸ್ಯ ನಿರ್ಭಾಗ್ಯಂ' ಎಂದುಕೊಂಡು, ಊಟವನ್ನು ಬೇಗ ಮುಗಿಸಿ ಉತ್ಸವಗೃಹವನ್ನು ಆದಷ್ಟು ಬೇಗನೆ ತ್ಯಜಿಸುವರು. ಈ ವಿಧಿವಿಲಾಸವನ್ನು ಅವರು ಎಲ್ಲಿ ಹೋದರೂ ತಪ್ಪಿಸಿಕೊಳ್ಳುವುದಾಗುವುದಿಲ್ಲ. ಈ ಬೇಗೆ ಹೊರಗಿನಿಂದ ಬರುವಂಥಾದ್ದು. ಇದು ಪರೀಕ್ಷೆಯ ಸಮಯದ ಅನುಭಗಳಲ್ಲಿ ಒಂದು ಗುಂಪಿಗೆ ಮಾತ್ರ ಸೇರಿದ್ದು.

ಪರೀಕ್ಷೆಯ ಸಮಯದಲ್ಲಿ ಹುಡುಗರಿಗಿಂತ ಉಪಾಧ್ಯಾಯರಿಗೆ ಕೆಲಸ ಹೆಚ್ಚು, ಆಕಾಂಕ್ಷೆ ಹೆಚ್ಚು. ಹುಡುಗರು ಏನನ್ನು ಓದಲಿ ಬಿಡಲಿ ಉಪಾಧ್ಯಾಯರು ಎಲ್ಲವನ್ನೂ ಓದಬೇಕು. ಯಾವ ವಿದ್ಯಾರ್ಥಿ ಯಾವ ಹೊತ್ತಿನಲ್ಲಿ

ಎಲ್ಲಿ ಯಾವ ಭಾಗದಲ್ಲಿ ಪ್ರಶ್ನೆ ಕೇಳಿದರೂ ಉತ್ತರ ಹೇಳಬೇಕು. ಮಧ್ಯಾಹ್ನ ಹನ್ನೆರಡುವರೆ ಗಂಟೆಗೆ ಊಟಮಾಡಿ ಸ್ವಲ್ಪ ವಿಶ್ರಮಿಸಿಕೊಳ್ಳೋಣವೆಂದರೆ, ಕೈತೊಳೆದು ಕೋಣೆಗೆ ಹೋಗಿ ಬನಿಯನ್ನು ಹಾಕಿಕೊಳ್ಳಬೇಕೆಂದು ನೋಡುತ್ತಿದ್ದರೆ 'ಸಾರ್' ಎನ್ನುವ ಶಬ್ದ ಕಿವಿಗೆ ಬೀಳುವುದು. ಅಥವಾ ಕಿಟಕಿಯ ಕಂಬಿಗಳ ಹಿಂದಿನಿಂದ ನಿಮ್ಮ ಹೃದಯವನ್ನು ಚುಚ್ಚಿ ಕರುಣಾರಸವನ್ನು ಹೊರಗೆಡಹುವ ಮುಖವೊಂದು ನಗಲಾರದೆ ನಕ್ಕು ನಮಸ್ಕಾರಮಾಡುವುದು. ಅಥವಾ ಊಟಮಾಡಿ ಐದು ಹತ್ತು ನಿಮಿಷಗಳಾಗಿರಬಹುದು, ಗೋಡೆಗೆ ಬೆನ್ನೊರಗಿರಬಹುದು, ಕಣ್ಣು ರಪ್ಪೆ ಮುಚ್ಚಿ ಅರ್ಧನಿದ್ದೆಯಲ್ಲಿ ಬಾಹ್ಯ ಪ್ರಪಂಚದ ಅರಿವು ಅಳಿಸಿಹೋಗುತ್ತಿರಬಹುದು. ಆಗ 'ಸಾರ್' ಎನ್ನುವ ಧ್ವನಿ ಎಷ್ಟು ನಯವಿನಯಗಳಿಂದ ಕೂಡಿ ಕೋಗಿಲೆಯ ಇಂಚರದಷ್ಟು ಇಂಪಾಗಿದ್ದರೂ ನಿದ್ದೆಯನ್ನೊಡೆದು ನಿಮ್ಮನ್ನು ಗಾಬರಿಗೊಳಿಸಿ ವ್ಯವಹಾರ ಪ್ರಪಂಚಕ್ಕೆ ಬಲಾತ್ಕಾರದಿಂದ ಎಳೆಯುವುದು. ಇನ್ನು ರಾತ್ರಿಯ ವೇಳೆ, ಮಾರನೆಯ ದಿನ ಮೊಮ್ಮಗನ ವರ್ಷದ ಹೆಚ್ಚು ಎಂದು ಪೇಟೆಗೆ ಹೋಗಿ ಸಾಮಾನುಗಳನ್ನು ತರಕಾರಿಗಳನ್ನು ಹೊತ್ತು, ಹೊರಿಸಿಕೊಂಡು ಉಸ್ಸಪ್ಪಾ ಎಂದು ಮನೆಗೆ ಬರುವ ವೇಳೆಗೆ ಮನೆಯ ಮುಂಭಾಗದಲ್ಲಿ ಮೂರು ಜನ ವಿದ್ಯಾರ್ಥಿಗಳು ನಮಸ್ಕಾರಮಾಡುವರು. ಕೆಲವುವೇಳೆ ಇವರು ಒಂದೆಡೆಯಲ್ಲಿ ಒಟ್ಟುಗೂಡಿ ನಿಲ್ಲುವುದಿಲ್ಲ. ಮನೆ ಬೀದಿಮೂಲೆಯನ್ನು ತಿರುಗಿದ ಕೂಡಲೆ ಒಬ್ಬನಿರುವನು, ಮನೆಯ ಹೊರಬಾಗಿಲ ಬಳಿ ಒಬ್ಬ, ಕೋಣೆಯ ಹೊರಬಾಗಿಲ ಬಳಿ ಒಬ್ಬ. ಇವರಲ್ಲಿ ಯಾರಿಗೆ ಮೊದಲು ಗಮನ ಕೊಡಬೇಕೆನ್ನುವುದೇ ದೊಡ್ಡ ಸಮಸ್ಯೆಯಾಗುವುದು. 'ಮೊದಲು ಬಂದವರಿಗೆ ಮೊದಲು ಬಡಿಸುವುದು' ಎನ್ನುವ ಇಂಗ್ಲಿಷ್ ಗಾದೆಯ ಪ್ರಕಾರ ನಡೆದುಕೊಳ್ಳುವುದಕ್ಕೂ ಸಮಸ್ಯೆ ತೀರಬೇಕು. ರಸ್ತೆ ಮೂಲೆಯಲ್ಲಿದ್ದವನು ಮೊದಲು ಬಂದವನೇ ? ಕೋಣೆಬಾಗಿಲ ಬಳಿ ಕೂತವನು ಮೊದಲು ಬಂದವನೇ ? ಅವರನ್ನು ಕಳುಹಿಸಿ ಊಟಮಾಡುವುದರೊಳಗೆ ಇನ್ನೊಬ್ಬ ; ಹಾಸಿಗೆ ಹಾಸಿ ಮಲಗಲು ದೀಪ ಆರಿಸುವುದರೊಳಗೆ ಮತ್ತೊಬ್ಬ. ಉಪಾಧ್ಯಾಯರೊಬ್ಬರಿಗೆ ವಯಸ್ಸಾಗಿತ್ತು. ರಾತ್ರಿ ಹೊತ್ತು ಹತ್ತುವರೆಯಾಗಿತ್ತು. ವಿದ್ಯಾರ್ಥಿಯೊಬ್ಬ ಅವರನ್ನು ಕಠಿಣ ಪ್ರಶ್ನೆಯೊಂದಕ್ಕೆ ಉತ್ತರ ಕೇಳಿದ. ಅವರು ದೇಹಸ್ಥಿತಿ ಸರಿ ಇಲ್ಲವೆಂದರು ; ತಮ್ಮ ವಯಸ್ಸನ್ನು

ಹೇಳಿದರು. ವಿದ್ಯಾರ್ಥಿ ಹೋಗಲಿಲ್ಲ. ಅವರಂಥ ವಯಸ್ಸಾದವರೇ ತಿಳಿದವರೇ ವಿದ್ಯಾರ್ಥಿಯನ್ನು ನಿರಾಕರಿಸಿದರೆ ಪುರಸ್ಕರಿಸುವವರು ಯಾರೆಂದು ಕೇಳಿದ. ಆಗ ವಿದ್ಯಾರ್ಥಿಗೆ ಒಂದು ಹುಚ್ಚು. ಪರೀಕ್ಷೆಯಲ್ಲಿ ಯಾವ ಪ್ರಶ್ನೆ ಬರಬಹುದೆಂದು ಅವನ ಮನಸ್ಸಿಗೆ ಭಾಸವಾಗುವುದೋ; ಅವನ ಹುಚ್ಚು ಹೇಳುವುದೋ, ಅದಕ್ಕೆ ಸರಿಯಾಗಿ ಉತ್ತರವನ್ನು ತಿಳಿಯಬೇಕು. ಅದು ಯುದ್ಧಕಾಲದಂತೆ ವೈಪರೀತ್ಯದ ಕಾಲ, ಸಾಧಾರಣವಾದ ನಡೆನುಡಿ ಸೌಜನ್ಯ ಗಳಿಗೆ ಆಗ ಬೆಲೆ ಇಲ್ಲ, ಇತರರಿಗೆ ಯಾವ ತೊಂದರೆಯಾದರೂ ಆಗಲಿ!

ಉಪಾಧ್ಯಾಯರ ತಲೆಯ ಮೇಲೆ ಬೆಟ್ಟದಂಥ ಹೊರೆ. ಪ್ರಶ್ನೆ ಹೇಗೆ ಬರುವುದೋ, ಹೇಳಿಕೊಟ್ಟಿದ್ದ ಭಾಗದಲ್ಲಿ ಬರುವುದೋ, ಹೊರಗಿನಿಂದ ಬರುವುದೋ, ಹುಡುಗರು ಉತ್ತರ ಹೇಗೆ ಬರೆಯುವರೋ ಎನ್ನುವ ಯೋಚನೆ ಅವರಿಗೆ. ಪ್ರಶ್ನಪತ್ರಿಕೆಯನ್ನು ನೋಡಿದ ಕೂಡಲೆ ಉಪಾಧ್ಯಾಯ ರಿಗೆ ಶಾಪರಾಹು ತಗುಲದೆ ಹೋದರೆ ಅದು ದೊಡ್ಡ ಪುಣ್ಯ. ರಾಹು ಬಂದು ಹಾಯ್ದುಹೋಗುವ ಕಾಲ ಕಳೆಯುವವರೆಗೂ ಉಪಾಧ್ಯಾಯರಿಗೆ ರಾಹುವಿನ ಭಯವಿದ್ದೇ ಇರುವುದು. ಪ್ರಶ್ನಪತ್ರಿಕೆಯಲ್ಲಿ ಕೇಳಿದ್ದೆಲ್ಲವೂ ವಿದ್ಯಾರ್ಥಿಗೆ ತಿಳಿದಿದ್ದು ಅವನು ಉತ್ತರವನ್ನು ಚೆನ್ನಾಗಿ ಬರೆದರೆ ಪ್ರಶ್ನ ಪತ್ರಿಕೆಗೆ ಹೊಗಳಿಕೆ, ಉಪಾಧ್ಯಾಯರಿಗಲ್ಲ. ಪ್ರಶ್ನಪತ್ರಿಕೆ ಕಠಿಣವಾಗಿ ದ್ದರೆ ಉಪಾಧ್ಯಾಯರು ಇದನ್ನು ಹೇಳಿ ಕೊಡಲಿಲ್ಲ ಎಂದು ದೂರಿನ ರಾಶಿ ಅವರಿಗೆ. ಈ ಯೋಚನೆಗಳ ದೆಸೆಯಿಂದ ಉಪಾಧ್ಯಾಯರ ಮನಸ್ಸಿನಲ್ಲಿ ಸದಾ ಭಯೋತ್ಪತ್ತಿಯಾಗುತ್ತಲೇ ಇರುವುದು. ಭಯೋತ್ಪತ್ತಿ ದ್ವಿಗುಣ ವಾಗುವುದಕ್ಕೆ ಇನ್ನೊಂದು ಕಾರಣವುಂಟು. ಪರೀಕ್ಷಾಭವನದಲ್ಲಿ ನಾನಾ ಬಗೆಯ ವಿದ್ಯಾರ್ಥಿಗಳುಂಟು. ಮೂರು ವರ್ಷದಿಂದಲೂ ಅದೇ ಉಪಾ ಧ್ಯಾಯರು ಒಬ್ಬ ವಿದ್ಯಾರ್ಥಿಯನ್ನೋ, ಹಲವರನ್ನೋ, ಅಥವಾ ಎಲ್ಲ ರನ್ನೋ ನೋಡಿರಬಹುದು. ಆದರೇನು ? ಓದಿದ ಹುಡುಗರೂ ಉಂಟು, ಓದದವರೂ ಉಂಟು. ಆಟಕೂಟಗಳಲ್ಲಿ ವ್ಯರ್ಥಕಾಲಕ್ಷೇಪಮಾಡಿದವರು, ಮನೆಯಿಂದ ಉತ್ತರಗಳನ್ನು ಬರೆದುಕೊಂಡು ಬಂದು ಅದರ ಸಹಾಯದಿಂದ ಪರೀಕ್ಷೆ ಪ್ರಶ್ನೆಗಳಿಗೆ ಉತ್ತರ ಬರೆಯಲು ಪ್ರಯತ್ನಿಸಬಹುದು. ಓದಿದವರ ಲ್ಲಿಯೂ ಕೆಲವರು ಉತ್ತಮ ತರಗತಿಯಲ್ಲಿ ತೇರ್ಗಡೆಹೊಂದಬೇಕೆನ್ನುವ

ಆಸೆಯಿಂದ ಮುಖ್ಯಾಂಶಗಳನ್ನು ಬರೆದು ತಂದು ಅವುಗಳ ಸಹಾಯದಿಂದ ಉತ್ತರ ಬರೆಯಬಹುದು. ಈ ಎರಡು ಬಗೆಯವರು ಚತುರರು. ಉಪಾಧ್ಯಾಯರಿಗೆ ಕಾಣದಂತೆ ಈ ಕಳ್ಳಕೆಲಸ ಮಾಡಲು ಪ್ರಯತ್ನಿಸುವರು. ಇಂಥವರನ್ನು ಉಪಾಧ್ಯಾಯರು ಹಿಡಿಯುವುದು ಅವರ ಕರ್ತವ್ಯ. ಹಿಡಿದರೆ ಸಹೋಪಾಧ್ಯಾಯರೇ ಇವರನ್ನು ಬಯ್ಯುವವರಲ್ಲಿ ಮೊದಲು. ವಿದ್ಯಾರ್ಥಿಗಳ ಶಾಪಕ್ಕಂತೂ ಕೊನೆಯೇ ಇಲ್ಲ. ಆಗ ಎಲ್ಲರ ದೃಷ್ಟಿಯಲ್ಲಿಯೂ ಆ ಉಪಾಧ್ಯಾಯ ರಾಕ್ಷಸವ್ಯಕ್ತಿ, ಪಿಶಾಚಿ. ಬಿರುದನ್ನು ಸಂಪಾದಿಸುವ ಇಷ್ಟವಿಲ್ಲದೆ ಕಳ್ಳನನ್ನು ಬಿಟ್ಟರೆ ಅವನೇ ಉಪಾಧ್ಯಾಯರಿಗೆ ಮೃತ್ಯುಸ್ವರೂಪನಾಗುವನು. ತನ್ನ ಜಯಭೇರಿ ಹೊಡೆದು ಉಪಾಧ್ಯಾಯರ ಕರ್ತವ್ಯ ಶೂನ್ಯತೆಯನ್ನು ಹೊರಗೆಡಹಿ ಅವರು ಕೆಲಸದಿಂದ ನಿವೃತ್ತರಾಗಿ ಅವರ ಮನೆ ಮಕ್ಕಳು ಬೀದಿಯಲ್ಲಿ ನಿಲ್ಲುವಂತೆ ಮಾಡುವನು. ಈ ದುರಂತ ಕಾಲ ಎಂದಿಗೆ ಕಳೆದು ಹೋದೀತು ಎಂದು ಉಪಾಧ್ಯಾಯರು ಜಪಿಸುವರು. ಎಲ್ಲರಿಗೂ ವರ್ಷಕ್ಕೊಮ್ಮೆ ಹಬ್ಬ ಬಂದರೆ ಉಪಾಧ್ಯಾಯರಿಗೆ ವರ್ಷಕ್ಕೊಮ್ಮೆ ಮೃತ್ಯು ದರ್ಶನವೂ ನರಕವಾಸವೂ ಲಭಿಸುವುವು.

ಪರೀಕ್ಷಾಭವನದಲ್ಲಿ ಮೂರು ಗಂಟೆಗಳ ಕಾಲ ಉಪಾಧ್ಯಾಯರು ಏನು ಮಾಡಬೇಕು? ವೃತ್ತಪ್ರತಿಕೆಗಳನ್ನಾಲಿ, ಪುಸ್ತಕಗಳನ್ನಾಗಲಿ ಓದಕೂಡದೆಂದು ಕಟ್ಟಾಜ್ಞೆ. ಸ್ವಾತಂತ್ರ್ಯವನ್ನು ಕಳೆದುಕೊಂಡ, ಬೋನಿಗೆ ಕೂಡಲ್ಪಟ್ಟ ಹುಲಿಯಂತೆ ಕೋಣೆಯ ಒಂದು ಗೋಡೆಯಿಂದ ಇನ್ನೊಂದು ಗೋಡೆಯವರೆಗೆ ತಿರುಗಬೇಕು. ಪರೀಕ್ಷಾಭವನ ದೊಡ್ಡದಾಗಿರಬಹುದು, ಅಲ್ಲಿ ಇಬ್ಬರೋ ಮೂವರೋ ಉಪಾಧ್ಯಾಯರಿರಬಹುದು. ಅವರು ಎದುರುಬದುರಾಗಿ, ಸಿಪಾಯಿಗಳು ಗಸ್ತುಹೊಡೆಯುವಂತೆ ತಿರುಗಬೇಕು. ಒಂದು ಕಡೆ ನಿಂತು ಮಾತುಕಥೆ ಆಡುವಹಾಗಿಲ್ಲ. ಕಠಿಣಶಿಕ್ಷೆಯನ್ನನುಭವಿಸುವ ಕೋಣೆಯೊಂದರಲ್ಲಿ ಒಬ್ಬನೇ ಇರುವ ಖೈದಿಯ ಸ್ಥಿತಿಗಿಂತ ಈ ಸ್ಥಿತಿ ಕಷ್ಟತರ. ಅವನಾದರೂ ಒಂದು ಕಡೆ ಕೂಡಬಹುದು, ಸ್ವತಂತ್ರವಾಗಿ ಯೋಚನೆಯನ್ನಾದರೂ ಮಾಡಬಹುದು, ಭಾವನಾಪ್ರಪಂಚದಲ್ಲಿ ಮೈಮರೆಯಬಹುದು. ಉಪಾಧ್ಯಾಯ ಇದೆಲ್ಲಾ ಹಕ್ಕನ್ನೂ ಕಳೆದುಕೊಂಡ ಖೈದಿ. ಈ ಕೆಲಸಕ್ಕಾಗಿ ಅವನಿಗೆ ಕೊಡುತ್ತಿದ್ದ ಹಣವನ್ನು ಸರ್ಕಾರದವರು ನಿಲ್ಲಿಸಿ ಹಲವು ವರ್ಷಗಳಾದುವು.

ಪ್ರತಿಫಲವಿಲ್ಲದೆ ಹೋದರೆ ದೇಹಮನಸ್ಸುಗಳಿಗೆ ಬಹು ಕಷ್ಟವನ್ನೊದಗಿಸುವ ಪರೀಕ್ಷಾ ಕಾಲ ಬಂದರೆ ಉಪಾಧ್ಯಾಯರು ಭಯ ದುಃಖಾದಿಗಳಿಗೆ ಒಳಗಾಗುವುದು ಏನು ಆಶ್ಚರ್ಯ! ಇಷ್ಟೆಲ್ಲ ತೊಂದರೆಗಳಿದ್ದರೂ ಒಂದು ವಿಧವಾದ ಈ ಕಾರಾಗೃಹವಾಸವನ್ನು ರಮ್ಯವನ್ನಾಗಿ ಮಾಡಿಕೊಳ್ಳಬಹುದು.

ಬೆಂಗಳೂರು ಇಂಟರ್ ಮೀಡಿಯಟ್ ಕಾಲೇಜಿನಂಥ ದೊಡ್ಡ ಉಪನ್ಯಾಸ ಮಂದಿರದಲ್ಲಿದ್ದರೆ ಒಂದು ಅನುಕೂಲ. ಜೊತೆಗೆ ಇನ್ನಿಬ್ಬರು ಉಪಾಧ್ಯಾಯರಿರುವುದರಿಂದ ಭಾವನಾ ಪ್ರಪಂಚಕ್ಕೆ ಪ್ರವೇಶಿಸಿ ಆನಂದಪಡಲು ಸ್ವಾತಂತ್ರ್ಯವುಂಟು, ಉಪಕರಣಗಳುಂಟು, ಎಷ್ಟೇ ಬಿಸಿಲಾದರೂ ಈ ಭವನದಲ್ಲಿ ಹವಾ ಚೆನ್ನಾಗಿರುತ್ತದೆ. ಸುಮಾರು ಐವತ್ತು ಕಿಟಕಿಗಳಿವೆ, ವಿದ್ಯುಚ್ಛಕ್ತಿಯ ದೊಡ್ಡ ಬೀಸಣಿಗೆಗಳು ಮೂರಿವೆ. ಗಾಳಿ ಚೆನ್ನಾಗಿ ಬೀಸುವುದರಿಂದ ಹವಾ ತಂಪಾಗಿ ಅಥವಾ ಸುಖೋಷ್ಣವಾಗಿರುತ್ತದೆ. ಇಷ್ಟು ಗಾಳಿ, ಬೆಳಕುಗಳ ಮಧ್ಯೆ ಇದ್ದು, ಕಣ್ಣೆತ್ತಿ ನೋಡಿದಾಗ ಪ್ರಕೃತಿಯ ಚೆಲುವನ್ನು ಬೆಳಗುವ ಎಂಟು–ಹತ್ತು ವರ್ಣಚಿತ್ರಗಳು ದೃಷ್ಟಿಗೆ ಬೀಳಲು ಭಾವೋದ್ರೇಕವಾಗಲು, ಬಾಹ್ಯಪ್ರಪಂಚವನ್ನು ಮರೆಯದಿರುವುದು ಹೇಗೆ? ಆ ಚಿತ್ರವನ್ನು ನೋಡಿ. ಮುಂಭಾಗದಲ್ಲಿ ದೊಡ್ಡ ತೆಂಗಿನಮರ; ಅದರ ಪಕ್ಕದಲ್ಲಿ ಬಂದು ಸಸಿ. ಮರ ಎತ್ತರವಾಗಿ ಬೆಳೆದಿದೆ, ಹಿನ್ನೆಲೆಯಲ್ಲಿರುವ ಜಲಾಶಯಕ್ಕೆ ಒಡೆಯನಂತೆ ನಿಂತಿದೆ. ಈ ಸಮುದ್ರ ಅಥವಾ ಸರೋವರ ತೀರದಲ್ಲಿ ಒಂದೇ ಮರ. ಅಲ್ಲಿಯ ನೀರೆಲ್ಲವೂ ಒಂದೇ ಅಲೆಯಾಗಿ ಎದ್ದು ಮರಕ್ಕೆ ಅಪ್ಪಳಿಸಿದರೂ ಆ ಮರ ಬೀಳುವುದಿಲ್ಲ. ಅದರ ಎತ್ತರ ಆಕಾರದಲ್ಲಿ ಆ ಬಗೆಯ ಶಕ್ತಿ ಧೈರ್ಯಗಳು ಕಾಣಬರುವುವು. ಜತೆಗೆ ಮರದಲ್ಲಿ ಸೌಂದರ್ಯವೂ ಇದೆ. ಮರದ ದಿಂಡು ಕಲ್ಲಿನಲ್ಲಿ ಕಡೆದ ಕಂಬದಂತೆ ನೇರವಾಗಿ, ದುಂಡಾಗಿ ಬೆಳೆದಿದೆ. ಗರಿಗಳು ದೊಡ್ಡವಾಗಿ ದಟ್ಟವಾಗಿವೆ. ಸರೋವರದ ಹಿಂದೆ ಬೆಟ್ಟಸಾಲುಗಳು ಮುಂದೆ ಬಾನಂಚಿನಲ್ಲಿ ಸೂರ್ಯನು ಮುಳುಗುತ್ತಿದ್ದಾನೆ.

ನೋಡದೋ ನೋಡಲ್ಲಿ,
ಭೂಮಿ ಆಕಾಶಗಳು,
ಕೂಡುವೆಡೆಯಲ್ಲಿ,
ಬೈಗಿನಾ ಚಿಲುಮೆಯದು

ಚೆಲುವಿನಾ ಚಿಲುಮೆಯದು,
ಚಿಮ್ಮುತಿಹುದಲ್ಲಿ.

ಈ ವಾಕ್ಯಗಳು ನೆನಪಿಗೆ ಬರುವುವು. ಇನ್ನೊಂದು ಚಿತ್ರವನ್ನು ನೋಡಿ. ಇಲ್ಲಿ ಗಿಡಮರಗಳು ಮುಖ್ಯವಲ್ಲ. ಸೂರ್ಯನೂ ಇಲ್ಲ, ಚಂದ್ರನೂ ಇಲ್ಲ, ಆದರೂ ಸೌಂದರ್ಯ ಕಡಿಮೆಯಿಲ್ಲ. ದೊಡ್ಡ ಮಳೆ ಬಂದು ಆಗ ತಾನೆ ನಿಂತಿದೆ. ನದಿಯಲ್ಲಿ ಪ್ರವಾಹ ಹೆಚ್ಚಿದೆ. ಸಣ್ಣ ಕಲ್ಲುಗಳು ಉರುಳಿಕೊಂಡು ಹೋಗುತ್ತಿವೆ. ನದಿ ಆನಂದಭರಿತವಾಗಿ ಹಿಂದಿನದನೆಲ್ಲಾ ಮರೆತು ಮುಂದಿನ ಯಾವ ಯೋಚನೆಯೂ ಇಲ್ಲದೆ ಪ್ರವಹಿಸುತ್ತಿದೆ. ಸೂರ್ಯನು ಅಸ್ತನಾಗಲು ಸಿದ್ಧನಾಗುತ್ತಿರುವಂತೆ ಕಾಣುತ್ತದೆ. ಬಿಸಿಲು ಪ್ರಕಾಶಮಾನವಾಗಿದೆ. ನಸುಗೆಂಪು ಬೈಗಿನ ಚಿಲುಮೆಯಿಂದ ಹೊರಟು ಆಕಾಶವನ್ನೆಲ್ಲ ಆವರಿಸುತ್ತಿದೆ. ಆಕಾಶದ ಒಂದು ಭಾಗದಲ್ಲಿ ಕಾಮನಬಿಲ್ಲು ಪ್ರಕೃತಿಸೌಂದರ್ಯದ ಕಿರೀಟದಂತೆ ಶೋಭಿಸುತ್ತಿದೆ. ಭೂಮಿ ಆಕಾಶಗಳನ್ನು ಒಂದುಗೂಡಿಸುವ ಸೇತುವೆ ಕಾಮನ ಬಿಲ್ಲು. ಅದರ ಸೌಂದರ್ಯವನ್ನು ಕುರಿತು ಯೋಚನೆಮಾಡುತ್ತಿರುವಲ್ಲಿ ಮನಸ್ಸು ಹೃದಯಗಳು ಭೂಮಿಯಲ್ಲಿ ನಿಲ್ಲುವುವೇನು ? ಗೋಳಿನ ಗೂಡಾದ ಭೂಮಿಯನ್ನು ತೊರೆದು ಗಗನಕ್ಕೆ ಚಿಮ್ಮಿ ಸೌಂದರ್ಯ ಸೇತುವೆಯ ಮೇಲೆ ನಲಿದಾಡಿ, ಕುಣಿದಾಡಿ, ಸ್ವರ್ಗದಿಂದ ಅಲ್ಲಿಗೆ ಬರುವ ಅಪ್ಸರೆಯರೊಡನೆ ಅಮರರೊಡನೆ ಆನಂದಪರವಶವಾಗುವುವು. ಅಥವಾ ಆ ಮೂರನೇ ಚಿತ್ರವನ್ನು ನೋಡಿ ; ಎಷ್ಟು ದಟ್ಟವಾದ ವನಪ್ರದೇಶ. ವಸಂತಕಾಲವಾದುದರಿಂದ ಮರಗಳಲ್ಲಿ ಎಲೆಗಳು ದಟ್ಟವಾಗಿವೆ. ಹೂ ಗೊಂಚಲುಗಳು ತಮ್ಮ ನಾನಾಬಣ್ಣಗಳಿಂದ, ಸುವಾಸನೆಯಿಂದ ವನಪ್ರದೇಶವನ್ನು ರಮ್ಯವಾಗಿಯೂ ಮನೋಹರವಾಗಿಯೂ ಮಾಡಿವೆ. ಈ ವನದಲ್ಲಿರುವ ಮರಗಳು ಒಂದೆರಡು ಬಗೆಯವಲ್ಲ. ಹಿನ್ನೆಲೆಯಲ್ಲಿ ಎತ್ತರವಾಗಿ ಬೆಳೆದಿರುವ ಪೀತದಾರು ಜಾತಿಗೆ ಸೇರಿದ ಮರಗಳು. ಮುಂಭಾಗದಲ್ಲಿ ನಿಮಗೆ ಕಾಣುವುವು ಜಾಲಿ, ಗೊಬ್ಬಳಿ ಜಾತಿಗೆ ಸೇರಿದವು. ಒಂದು ಮೂಲೆಯಲ್ಲಿ ಬಹು ಎತ್ತರವಾಗಿ ಎಲ್ಲಕ್ಕೂ ಮೇಲೆದ್ದು ಕಾಣುವ ತೇಗದ ಮರ. ಎಡ ಅಂಚಿನಲ್ಲಿ ಗೋಲ್ಡ್ ಮೊಹರ್ ಗಿಡಗಳು, ಇವಲ್ಲದೆ ಸೊಂಪಾಗಿ ಬೆಳೆದಿರುವ ಹುಲ್ಲು, ಮಧ್ಯೆ ಮಧ್ಯೆ ಕೆಂಪು ಬಿಳಿಯ ಹೂಗಳಿಂದಲಂಕೃತವಾದ ಕೆಲವು ಸಣ್ಣ ಗಿಡಗಳು. ಮಧ್ಯೆ ಸಣ್ಣ

ಹೊಳೆಯೊಂದು; ನೀರು ಹೆಚ್ಚಾಗಿಲ್ಲ, ತಿಳಿಯಾಗಿದೆ. ನೊರಜುಗಲ್ಲಿನ ಮೇಲೆ ಹರಿಯುವ ಹೊಳೆ ಮಂಜುಳಗಾನಮಾಡಿ ಜೇನಿನ ಝೇಂಕಾರಕ್ಕಿಂತ ಹೆಚ್ಚು ಸವಿಯಾದ ಸಂಗೀತವನ್ನು ನೀಡುತ್ತಿದೆ. ಇನ್ನೊಂದು ಗೋಡೆಯ ಮೇಲಿರುವ ಈ ಚಿತ್ರ ನೋಡಿ; ಬೆಳಗ್ಗೆ ಒಂಭತ್ತು ಗಂಟೆಯೋ ಮಧ್ಯಾಹ್ನ ಐದು ಗಂಟೆಯೋ ಸರಿಯಾಗಿ ತಿಳಿಯುವುದಿಲ್ಲ. ಹಚ್ಚಗಿರುವ ಹುಲ್ಲುಗಾವಲು, ಮಧ್ಯೆ ಮಧ್ಯೆ ಬೆಳೆದಿರುವ ಕಾಡುಹೂಗಿಡಗಳು. ಸುಮಾರು ಉದ್ಯಾನವನವೊಂದರ ಅಂಚಿನಲ್ಲಿರುವ ಹುಲ್ಲುಗಾವಲಿದ್ದರೂ ಇರಬಹುದು. ಬಣ್ಣ ಬಣ್ಣದ ಚಿಟ್ಟೆಗಳು ವಿವಿಧ ಬಣ್ಣದ ಹೂಗಳ ಮೇಲೆ ಹಾರಾಡಿ ಹಗುರವಾಗಿ ಕ್ಷಣಮಾತ್ರ ಕುಳಿತಿದ್ದು ಮಧುವನ್ನು ಹೀರಿ ಹಾರಿಹೋಗುವುವು. ಮಧುಪಾನದಿಂದ ಮತ್ತವಾಗಿ ಹುಲ್ಲುಗರಿಕೆಯ ಮೇಲೆ ಕುಳಿತಿರುವ ಚಿಟ್ಟೆಗಳು ಹೂಗಳಂತೆಯೇ ಕಾಣುವುವು. ಪ್ರಪಂಚದ ಸೃಷ್ಟಿಯಲ್ಲೆಲ್ಲ ಹೂವಿನಷ್ಟು, ಚಿಟ್ಟೆಗಳಷ್ಟು ಸುಂದರವಾದ ಮನೋರಂಜಕವಾದ ವಸ್ತುಗಳು ಬೇರೆ ಯಾವುವೂ ಇಲ್ಲವೆನ್ನಬೇಕು. ಎವರೆಸ್ಟ್ ಶಿಖರವನ್ನು ಹತ್ತಲು ಪ್ರಯತ್ನ ಮಾಡಿದವರಲ್ಲಿ ಸಸ್ಯಶಾಸ್ತ್ರದ ಅಧ್ಯಾಪಕರೊಬ್ಬರಿದ್ದರು. ಹಿಮಾಲಯದ ಒಂದೆಡೆಯಲ್ಲಿ ನೆರೆದಿದ್ದ ಚಿಟ್ಟೆಗಳನ್ನು ಕಂಡು ಆತ 'The Butterflies were a wonder' ಚಿಟ್ಟೆಗಳು ಆಶ್ಚರ್ಯವನ್ನುಂಟು ಮಾಡಿದುವು ಎಂದು ಹೇಳಿದರು. ಈ ಎರಡು ನಾಯಿಗಳು ಗಾಳಿಸೇವನೆಗಾಗಿ ಉದ್ಯಾನಕ್ಕೆ ಬಂದಿರುವ ಯಜಮಾನನ ಸಂಗಡ ಬಂದಿರಬೇಕೆಂದು ಕಾಣುತ್ತದೆ. ನಮಗೆ ಕಂಡುಬರುವುವು ನಾಯಿಗಳು ಮಾತ್ರವೇ. ಯಜಮಾನರು ದೂರದಲ್ಲಿರಬೇಕು. ನಾಯಿಗಳೇ ಬಹು ರಮ್ಯವಾಗಿವೆ. ಒಳ್ಳೆಯ ಜಾತಿಗೆ ಸೇರಿವೆ. ಅವೂ ಜೀವನ ಸೌಂದರ್ಯವನ್ನರಿತಿರಬೇಕು. ವಾತಾವರಣದಲ್ಲಿ ತುಂಬಿ ತುಳುಕುತ್ತಿರುವ ಸುಖಸಂಪತ್ತನ್ನನುಭವಿಸಿ ಸಂತೋಷದಿಂದ ಕೂಡಿವೆ. ವರ್ಡ್ಸ್‌ವರ್ತ್ ಕವಿ ವಸಂತಕಾಲದಲ್ಲಿ ತನ್ನ ಸೋದರಿಯನ್ನು ಸಂಬೋಧಿಸಿ ಬರೆದಿರುವ ಕವನವೊಂದರಲ್ಲಿ

There is a blessing in the air
Which seems a sense of joy to yield
To the bare trees, and mountains bare
And grass in the green field

ಎಂದು ವರ್ಣಿಸಿರುವ ಪ್ರಕೃತಿಯ ವರಪ್ರಸಾದ ಅಂತರಿಕ್ಷದಲ್ಲಿ ತುಂಬಿದೆ. ಈ ವರಪ್ರಸಾದದಿಂದಲೇ ಮರಗಳೂ, ಪರ್ವತಗಳೂ, ಹಸುರು ಹುಲ್ಲೂ ಸಂತೋಷ ಭರಿತವಾಗಿವೆ, ಈ ಚಿತ್ರದ ಹುಲ್ಲು, ಅದರ ಮೇಲೆ ನಿಂತಿರುವ ನಾಯಿಗಳು, ನಲಿದಾಡುವ ಚಿಟ್ಟೆಗಳು ಎಲ್ಲವೂ ಪ್ರಕೃತಿಯ ಅನುಗ್ರಹದಿಂದ ಸಂತೋಷ ಭರಿತವಾಗಿವೆ. ಅಲ್ಲಿ ಮೂರ್ತೀಭವಿಸಿರುವ ಸಂತೋಷ ನಮ್ಮ ಹೃದಯಕ್ಕೆ ನುಗ್ಗಿ ಆನಂದಲಹರಿ ಅಲ್ಲಿಯೂ ಚಿಮ್ಮುವಂತೆ ನಾವೂ ಹರ್ಷಭರಿತರಾಗುವಂತೆ ಮಾಡುವುದು. ಇದರ ಪಕ್ಕದಲ್ಲಿರುವ ಇನ್ನೊಂದು ಚಿತ್ರ ಇದಕ್ಕೆ ಬಹು ವಿಧದಲ್ಲಿ ವ್ಯತ್ಯಾಸವಾಗಿದೆ. ರಾತ್ರಿಯ ಭಯಂಕರವಾದ ಕತ್ತಲೆ ಕವಿದಿದೆ ಈ ದೃಶ್ಯದ ಮೇಲೆ. ನಮ್ಮ ಮುಂದಿರುವುದು ಬೆಟ್ಟದಂಚು. ಅದರಾಚೆ ಕಣಿವೆಯಲ್ಲಿ ಒಂದೆರಡು ಹಳ್ಳಿಗಳು, ಹಲಕೆಲವು ಮನೆಗಳು. ಒಳಗೆ ಬೆಳಗುತ್ತಿರುವ ದೀಪದ ಪ್ರಭೆ ಕಿಟಕಿಗಳ ಮೂಲಕ ಹೊರಬಿದ್ದು ರಾತ್ರಿಯ ಕಗ್ಗತ್ತಲೆಯನ್ನು ದೃಢಪಡಿಸುತ್ತದೆ. ಕಗ್ಗತ್ತಲೆಯೊಡನೆ ಸೇರಿರುವ ಭೀಕರ ಮೌನ ನಮ್ಮಲ್ಲಿ ಭಯಮೂಡುವಂತೆ ಮಾಡುವುದು. ಬೆಟ್ಟದಂಚಿನಲ್ಲಿ ಡೊಂಕಾಗಿರುವ ಒಂದೇ ಮರದ ಬಳಿ ನಿಂತಿರುವುದು ರಾಕ್ಷಸಾಕೃತಿಯ ಭಯಂಕರ ನಾಯಿ. ಊರಿನ ರಕ್ಷಣೆಗಾಗಿ ಕಾವಲಾಗಿರುವ ನಾಯಂತೆ ಕಾಣುವುದು. ಈ ನಾಯಿ ನಿಂತಿರುವ ವರೆಗೂ ಊರಿನ ಮನೆಗಳಲ್ಲಿ ನಿದ್ರಿಸುತ್ತಿರುವ ಯಾರಿಗೂ ಭಯಲೇಶವೂ ಇರುವುದಿಲ್ಲ. ನಿಮಗೆ ಕಾಣದ ಚಂದ್ರನ ಪ್ರಭೆ ಮಸಕುಮಸಕಾಗಿ ಭಾಸವಾಗುತ್ತಿದೆ. ಮರದ ನೆರಳೂ ನಾಯಿಯ ನೆರಳೂ ನೆಲದ ಮೇಲೆ ಬಿದ್ದಿವೆ. ಆಗ ತಾನೆ ಉದಯಿಸುತ್ತಿರುವ, ಸುಮಾರು ಬಹುಳಷ್ಟಿಯ ಚಂದ್ರನ ಕಿರಣಗಳಿಲ್ಲದಿದ್ದರೆ ಬೆಟ್ಟದ ಮೇಲೆ ಅರಳಿರುವ ನಾಲ್ಕಾರು ಸಣ್ಣ ಗಿಡಗಳೂ ಹೂವುಗಳೂ ನಿಮಗೆ ಗೋಚರವಾಗುತ್ತಿರಲಿಲ್ಲ.

ಈ ಚಿತ್ರಗಳ ಸಹಾಯದಿಂದ ಪರೀಕ್ಷೆಯ ಕಾಲದ ಆಕಾಂಕ್ಷೆ ಭಯ ಭೀತಿಗಳನ್ನು ಹಿಂದೆ ಬಿಟ್ಟು ಭಾವನಾಪ್ರಸಂಚದಲ್ಲಲೆದು ಸುಖವನ್ನು ಸವಿಯಬಲ್ಲವರೇ ಸುಖಿಗಳೆಂದರೆ ಅತಿಶಯೋಕ್ತಿಯಾಗಲಾರದು. ಆದರೆ ಈ ಭಾವ ಸಮಾಧಿ ನಿರ್ವಿಘ್ನವಾಗಿ ನಡೆಯುವುದೆಂದು ಯಾರೂ ತಿಳಿಯಬಾರದು. ನೀವು ಕಾಮನ ಬಿಲ್ಲನ್ನೇರಿ ಯಕ್ಷ ಗಂಧರ್ವರೊಡನೆ ಸ್ವರ್ಗೀಯಗಾನಕ್ಕೆ ಹೆಜ್ಜೆ ಹಾಕುತ್ತಿದ್ದರೆ ನಿಮ್ಮನ್ನು ಪರೀಕ್ಷೆಯ ಮಂದಿರಕ್ಕೆ ಎಳೆದುಕೊಂಡುಬರುವ

ಮಾತುಗಳಲ್ಲಿ ಕೆಲವು ಇವು—'ನೀರು ಸಾರ್' 'ಪೇಪರ್ ಪ್ಲೀಸ್' 'ರಬ್ಬರ್' 'ಸ್ಕೇಲ್' ಕಡೆಗೆ ಬರಿಯ ಪೆನ್ಸಿಲ್. ಪ್ರಾಣಿ ಶಾಸ್ತ್ರದ ಭವನದಲ್ಲಿದ್ದರೆ ಇಡೀ ಸೃಷ್ಟಿಯ ಚರಿತ್ರೆಯನ್ನು ಮನನಮಾಡಬಹುದು. ಡಾರ್ವಿನ್ನಿನ ಪರಿಣಾಮ ವಾದವನ್ನು ಮನಸ್ಸಿನಲ್ಲಿಟ್ಟು ಮೀನಿನಿಂದ ಮನುಷ್ಯನ ದೇಹ ಹೇಗೆ ಬೆಳೆಯಿತು ಎಂದು ಆಲೋಚಿಸಬಹುದು. ಕೋಟ್ಯಂತರ ಸಂವತ್ಸರಗಳ ಪ್ರಾಣಿವರ್ಗದ ಇತಿಹಾಸ ನಿಮ್ಮ ಮುಂದೆ ಚಿತ್ರಿತವಾಗುವುದು. ಭೂಗರ್ಭಶಾಸ್ತ್ರದ ಭವನ ದಲ್ಲಿದ್ದರೆ ವಿವಿಧ ರತ್ನಗಳು ಖನಿಜಗಳು ಲೋಹಗಳು ಮುಂತಾದುವನ್ನು ಕುರಿತು ಯೋಚಿಸುತ್ತಾ ನಮ್ಮ ಸುತ್ತಲ ಪ್ರಪಂಚವನ್ನು ಮರೆಯಬಹುದು. ಎಲ್ಲಿದ್ದ ರೇನು? ಸುಸಂಸ್ಕೃತವಾದ ಮನಸ್ಸೊಂದಿದ್ದರೆ ಭಾವನಾತರಂಗಗಳನ್ನೆಬ್ಬಿಸು ವುದಕ್ಕೆ ಒಂದು ಸಣ್ಣ ವಸ್ತುವಾದರೂ ಸಾಕು. ಹೂವಿನ ಸೌಂದರ್ಯವನ್ನು ನೋಡಿ ಮೆಚ್ಚುವ ಮನಸ್ಸು ಸೃಷ್ಟಿಕರ್ತನ ಮಹಿಮೆಯನ್ನು ಕೊಂಡಾಡಿ ದೇವ ದೇವನ ಗುಣಗಾನ ಮಾಡಿ ಬಹು ಪವಿತ್ರ ರೀತಿಯಲ್ಲಿ ಹೊತ್ತನ್ನು ಕಳೆಯ ಲಾರದೆ! ದೇವರ ಸ್ತೋತ್ರಕ್ಕೆ ಗುಡಿಯೇ ಆಗಬೇಕೇ? ಸುಖಕ್ಕೆ ಮೂಲ ಆಧಾರ ಸುಶಿಕ್ಷಿತವಾದ ಮನಸ್ಸು ಮಾತ್ರವೇ. ಬಾಹ್ಯ ಪ್ರಪಂಚವಲ್ಲ. ಆದ್ದರಿಂದಲೇ ಮಿಲ್ಟನ್ ಹೇಳಿದ್ದು 'The mind is in its own place, it can make a hell of heaven or a heven of hell.'

ವಿದ್ಯಾರ್ಥಿಗಳಿಗೆ ಪರೀಕ್ಷೆಕಾಲವಾದಾಗ ಉಪಾಧ್ಯಾಯರ ಸ್ಥಿತಿ ಹೇಗಿರು ವುದೆಂದು ಹೇಳಿದ್ದಾಯಿತು. ಪ್ರತಿಯೊಬ್ಬ ಮನುಷ್ಯನ, ರಾಷ್ಟ್ರದ ಜನಾಂಗದ ಜೀವನದಲ್ಲಿಯೂ ಒಂದಾವರ್ತಿಯೇ ಅಲ್ಲ ಹಲವು ಸಲವಾದರೂ ಪರೀಕ್ಷೆಯ ಕಾಲ ಬರುವುದುಂಟು. ಅದು ಜನಾಂಗದ ಸತ್ವವನ್ನು ತಿರುಳನ್ನು ಬಗೆದು ನೋಡುವ ಹಿರಿದು ತೋರುವ ಕಾಲ. ಈ ಕಾಲದಲ್ಲಿ ಜನಾಂಗದ ಸಂಸ್ಕೃತಿಯ ಬಲವೆಲ್ಲ ಒಟ್ಟುಗೂಡಬೇಕು. ಭಯ ಭೀತಿ ಬರಡುತನಗಳನ್ನು ಜನ ಬಗೆ ಯಿಂದ, ಬಾಳಿಂದ, ಕಿತ್ತೊಗೆಯಬೇಕು. ಇಡೀ ಜನಾಂಗವೇ ಒಂದಾಳಿನಂತೆ ಎದ್ದು ನಿಂತು ಜನಾಂಗದ ಮತ್ತು ಅಮೋಘವಾದ ಸಂಸ್ಕೃತಿಯ ಉಳಿವಿಗಾಗಿ ಹೋರಾಡಬೇಕು. ಸ್ವಾತಂತ್ರ್ಯ ಜೀವನವೊಂದೇ ಸರಿಯಾದ ಜೀವನ. ಉಳಿದೆಲ್ಲ ಬಗೆಯ ಜೀವನವೂ ಗೋಳಬಾಳು. ಆ ಬಾಳಿಗಿಂತ ಸಾವೇ ಮೇಲು. ಅಂಥ ಸನ್ನಿವೇಶದಲ್ಲಿ ಪ್ರತಿಯೊಬ್ಬನ ಉಸಿರೂ ಹೇಳುವುದು ಒಂದೇ ಮಾತನ್ನು;

ನಮ್ಮ ದೇಶ, ನಮ್ಮ ಜನಾಂಗ ನಮ್ಮ ಸಂಸ್ಕೃತಿ ಮೊದಲು ; ಉಳಿದೆಲ್ಲವೂ ಎರಡನೆಯದು. ಈ ಹೋರಾಟವೇ ಪರಮಧರ್ಮ; ಪ್ರತಿಯೊಬ್ಬನ ಪ್ರತಿಯೊಬ್ಬ ದೇಶಿಗನ ಪರಮಕರ್ತವ್ಯ ; ಆದ್ಯಕರ್ತವ್ಯ. ಇತರೆಲ್ಲ ಕರ್ತವ್ಯಗಳನ್ನೂ ತಾತ್ಕಾಲಿಕವಾಗಿ ದೂರತಳ್ಳಿ ಜನಾಂಗ, ದೇಶ, ಸಂಸ್ಕೃತಿಗಳಿಗಾಗಿ ಸರ್ವಶಕ್ತಿಯಿಂದ ಸರ್ವವಿಧದಿಂದ ಜಯ ದೊರೆಯುವವರೆಗೂ ಹೋರಾಡಬೇಕು. ಒಂದು ವ್ಯಕ್ತಿಯ ಜೀವನದಲ್ಲಿ ಪರೀಕ್ಷೆಕಾಲ ಒದಗಿದಾಗ ಅವನು ತನ್ನ ಘನತೆ ಮರ್ಯಾದೆ ಸತ್ವಗಳಿಗಾಗಿ ಸಹಸ್ರ ಬಗೆಯ ನೋವನ್ನೂ ಸಹಿಸಿಕೊಂಡು ಸತ್ಯವನ್ನೂ ಶೀಲವನ್ನೂ ಕಾಪಾಡಿಕೊಳ್ಳಬೇಕು. ಅಪಾಯದ ಮುಂದೆ ಭೀತಿಗೊಂಡು ಐಹಿಕವಾದುದಕ್ಕೆ ಆಸೆಪಟ್ಟು ಆಧ್ಯಾತ್ಮಿಕವೂ ಅನಂತವೂ ಆದ ಸಂಪತ್ತನ್ನು ಕಳೆದುಕೊಳ್ಳಬಾರದು. ನಮ್ಮ ಪುರಾಣಗಳ ಹರಿಶ್ಚಂದ್ರ, ಬೈಬಲ್ಲಿನ ಜೋಬ್ ಇವರಿಗಿಂತ ಆದರ್ಶವ್ಯಕ್ತಿಗಳು ನಮ್ಮ ಭಾವೋದ್ರೇಕ ಮಾಡಲು, ನೀತಿ ಹೇಳಲು ಬೇಕಾಗಿಲ್ಲ. ರಾಷ್ಟ್ರನೀತಿಗೆ ಪ್ರಪಂಚದ ಇತಿಹಾಸದಲ್ಲಿ ಅನೇಕ ಉದಾಹರಣೆಗಳಿವೆ.

SRI JAGADGURU VISHWARADHYA
JNANA SIMHASAN JNANAMANDIR
LIBRARY.
Jangamwadi Math, VARANASI,
Acc. No. 885

ಮುಖಪುಟ ಚಿತ್ರ: ಕೃಷ್ಣ ಪೋತದಾರ್

ಮುದ್ರಣ: ಬೃಂದಾವನ ಪ್ರಿಂಟರ್ಸ್ ಅಂಡ್ ಪಬ್ಲಿಶರ್ಸ್ (ಪ್ರೈ.) ಲಿ, ಬೆಂಗಳೂರು – 560 004